pISSN 09759484
eISSN 23955538
Volume 28 Issue I(B)

February 2026

CARMELIGHT

Special Edition
For International Conference

ಕನ್ನಡ ಸಾಹಿತ್ಯ ಮತ್ತು ಮನೋವಿಜ್ಞಾನ

KANNADA LITERATURE AND PSYCHOLOGY
&
PSYCHOLOGY IN LITERARY GERONTOLOGY

Organized by

ಕನ್ನಡ ವಿಭಾಗ ಮತ್ತು ಮನಃಶಾಸ್ತ್ರ ವಿಭಾಗ

DEPARTMENT OF KANNADA & DEPARTMENT OF PSYCHOLOGY

Mount Carmel College, Autonomous
#58, Palace Road, Bengaluru - 560001

CARMELIGHT

pISSN-09759484
eISSN-23955538
VOLUME-28 ISSUE I(B)

FEBRUARY-2026

SPECIAL EDITION
FOR INTERNATIONAL CONFERENCE

ಕನ್ನಡ ಸಾಹಿತ್ಯ ಮತ್ತು ಮನೋವಿಜ್ಞಾನ
KANNADA LITERATURE AND PSYCHOLOGY
&
PSYCHOLOGY IN LITERARY GERONTOLOGY

Organized by
ಕನ್ನಡ ವಿಭಾಗ ಮತ್ತು ಮನಃಶಾಸ್ತ್ರ ವಿಭಾಗ
DEPARTMENT OF KANNADA & DEPARTMENT OF PSYCHOLOGY

MOUNT CARMEL COLLEGE, AUTONOMOUS
#58, PALACE ROAD, BENGALURU - 560001

CHIEF PATRONS

Sr. M. Albina
Director

Prof. George Lekha
Secretary & Principal

EDITORIAL BOARD	
Editor-in-Chief	**Dr. Cletus D'Souza** Research Advisor
Editor	**Dr. Kavitha G Singh** Dean-Research & Publications
Research Coordinators	**Dr. Pradeep N** **Dr. Aishwarya Natarajan**
SPECIAL EDITION	
Committee Members	**Dr. Ravisha H V** HOD & Associate Professor, Kannada
	Dr. Chetana Hegde Assistant Professor, Kannada
	Ms. Anitha K V Assistant Professor, Kannada

SPECIAL EDITION	
Committee Members	**Dr. Hamsa N** Dean & Associate Professor, Psychology
	Ms. Sumana U N Assistant Professor, Psychology
	Dr. Vibhasri R Gurjal Assistant Professor, Psychology
	Ms Pallavi K P Assistant Professor, Psychology
CARMELIGHT EDITORIAL BOARD	
Associate Editors	**Dr. Vijaya Priya S** Dept. of Economics
	Dr. Geetha Santhosh Dept. of Nutrition & Dietetics
Editors	**Dr. Padmashree Kulkarni,** Dept. of Life Science
	Ms. Shaila Mary J Dept. of Computer Applications
	Dr. Sivakami R. Dept. of Commerce
	Dr. Myrene Roselyn D'Souza, Dept. of Biochemistry
	Dr. Vinitha Chandra Dept. of English

ನಿರ್ದೇಶಕರ ಶುಭನುಡಿ

ಜ್ಞಾನವು ಸದಾ ಮುಕ್ತವಾಗಿ, ಸಮಗ್ರವಾಗಿ ರೂಪುಗೊಳ್ಳುತ್ತಿರಬೇಕು. ಅಧ್ಯಾಪನ, ಸಂಶೋಧನೆಗಳಲ್ಲಿ ಮೂಡಿಬಂದ ಅರಿವನ್ನು ಅಭಿವ್ಯಕ್ತಿಗೊಳಿಸಲು ಸಮ್ಮೇಳನ, ಸಮಾವೇಶ, ವಿಚಾರ ಸಂಕಿರಣ, ಕಾರ್ಯಾಗಾರಗಳಂತಹ ಬೌದ್ಧಿಕ ಚಟುವಟಿಕೆಯ ಅಗತ್ಯವಿದೆ. ಅರಿವನ್ನು ಹಂಚಿಕೊಳ್ಳುವ, ಪರಸ್ಪರ ಚರ್ಚಿಸುವ ಈ ಪ್ರಕ್ರಿಯೆ ವಿದ್ಯಾರ್ಥಿಗಳಲ್ಲಿ ಪ್ರೇರಣೆಯನ್ನು ಹುಟ್ಟುಹಾಕುತ್ತದೆ. ಪಠ್ಯಕ್ರಮಕ್ಕೆ ಹೊರತಾಗಿ ಶೈಕ್ಷಣಿಕ ಆಸಕ್ತಿ ವಿಸ್ತರಿಸುವ, ವಿದ್ಯಾರ್ಥಿಗಳ ಚಿಂತನೆಗೆ ಹೊಸ ಮಾದರಿ ಕಲ್ಪಿಸಿಕೊಡುವ ಪ್ರಯತ್ನವನ್ನು ಕನ್ನಡ ವಿಭಾಗ ಮತ್ತು ಮನಃಶಾಸ್ತ್ರ ವಿಭಾಗವು ನಿರಂತರವಾಗಿ ನಡೆಸುತ್ತಿದೆ.

'ಕನ್ನಡ ಸಾಹಿತ್ಯ ಮತ್ತು ಮನೋವಿಜ್ಞಾನ' ಎಂಬ ಅಂತಾರಾಷ್ಟ್ರೀಯ ಸಮಾವೇಶವನ್ನು ಕನ್ನಡ ವಿಭಾಗವು ಮನಃಶಾಸ್ತ್ರ ವಿಭಾಗದ ಸಹಯೋಗದೊಂದಿಗೆ ಆಯೋಜಿಸಿರುವುದು ಅರ್ಥಪೂರ್ಣವಾಗಿದೆ. ಕನ್ನಡ ಸಾಹಿತ್ಯದಲ್ಲಿ ಮನೋವೈಜ್ಞಾನಿಕ ಆಯಾಮಗಳನ್ನು ಒಟ್ಟಾರೆಯಾಗಿ ಗ್ರಹಿಸುವ ಉದ್ದೇಶದಿಂದ ಅಧ್ಯಾಪಕರಿಂದ, ಸಂಶೋಧನ ಮಿತ್ರರಿಂದ ಲೇಖನಗಳನ್ನು ಆಹ್ವಾನಿಸಲಾಗಿತ್ತು. ಮೌಲ್ಯಯುತ ಲೇಖನಗಳನ್ನು ಆಯ್ಕೆಮಾಡಿ, ಕಾರ್ಮಲೈಟ್ ಜರ್ನಲ್‌ನ ವಿಶೇಷ ಸಂಚಿಕೆಯ ರೂಪದಲ್ಲಿ ಪ್ರಕಟಿಸಲಾಗಿದೆ. ಈ ಸಮಾವೇಶವು ವಿಷಯತಜ್ಞರಿಗೆ, ಪ್ರಾಧ್ಯಾಪಕರು ಮತ್ತು ಸಂಶೋಧನಾರ್ಥಿಗಳಿಗೆ ತಮ್ಮ ವಿಚಾರಧಾರೆಯನ್ನು ಪ್ರಸುತ್ತಪಡಿಸಲು ಸೂಕ್ತ ವೇದಿಕೆಯಾಗಲಿ. ಕಾರ್ಯಕ್ರಮವನ್ನು ಆಯೋಜಿಸುತ್ತಿರುವ ಕನ್ನಡ ವಿಭಾಗ ಮತ್ತು ಮನಃಶಾಸ್ತ್ರ ವಿಭಾಗದ ಪ್ರಾಧ್ಯಾಪಕರಿಗೂ ಹಾಗೂ ಭಾಗವಹಿಸುತ್ತಿರುವ ಎಲ್ಲ ಸಾಹಿತ್ಯಾಸಕ್ತರಿಗೂ ಶುಭಕೋರುತ್ತೇನೆ.

ಸಿಸ್ಟರ್. ಎಂ. ಅಲ್ಬಿನ
ನಿರ್ದೇಶಕರು ಮತ್ತು ಕಾರ್ಯದರ್ಶಿಗಳು
ಮೌಂಟ್ ಕಾರ್ಮೆಲ್ ಕಾಲೇಜು, ಸ್ವಾಯತ್ತ

ಶುಭ ಹಾರೈಕೆಗಳು

ಕನ್ನಡ ಸಾಹಿತ್ಯ ಮತ್ತು ಮನೋವಿಜ್ಞಾನ ಎಂಬ ಶೀರ್ಷಿಕೆಯ ಅಡಿಯಲ್ಲಿ 2026 ಫೆಬ್ರವರಿ 17 ರಂದು ಅಂತಾರಾಷ್ಟ್ರೀಯ ಸಮಾವೇಶವನ್ನು ಆಯೋಜಿಸಲಾಗಿದೆ. ಈ ವಿಚಾರ ಸಂಕಿರಣಕ್ಕೆ ರಾಜ್ಯದ ವಿವಿಧ ಕಾಲೇಜುಗಳ ಅಧ್ಯಾಪಕರು, ಸಂಶೋಧಕರು, ವಿದ್ಯಾರ್ಥಿಗಳು ಹಾಗೂ ಸಾಹಿತ್ಯ ಅಧ್ಯಯನಕಾರರು ಸಂಶೋಧನ ಲೇಖನಗಳನ್ನು ರಚಿಸಿದ್ದಾರೆ. ಈ ಸಂಪಾದಿತ ಕೃತಿಯಲ್ಲಿ ಮನುಷ್ಯ ಬದುಕಿನಲ್ಲಿ ಮನೋಚಿಂತನೆಗಳ ಪ್ರಾತಿನಿಧ್ಯವನ್ನು ಕಂಡುಕೊಳ್ಳುವ, ಮನೋವಿಕಾಸಕ್ಕೆ ಅಗತ್ಯವಾದ ಹೊಸ ಮನೋವೈಜ್ಞಾನಿಕ ಚಿಂತನೆಗಳನ್ನು ಸೃಷ್ಟಿಸಿಕೊಳ್ಳುವ ಸಂಶೋಧನ ಕಾರ್ಯವಾಗಿದೆ. ಈ ಕೃತಿಯು ಮುವತ್ತಕ್ಕೂ ಹೆಚ್ಚು ಲೇಖನಗಳನ್ನು ಒಳಗೊಂಡಿದ್ದು, ವಿವಿಧ ಚಿಂತನೆಗಳ ಸಂಶೋಧನ ಲೇಖನಗಳು ಪ್ರಕಟವಾಗುತ್ತಿವೆ.

ಪ್ರತಿಷ್ಠಿತ ಮೌಂಟ್ ಕಾರ್ಮೆಲ್ ಕಾಲೇಜು 1948 ರಲ್ಲಿ ಸ್ಥಾಪನೆಗೊಂಡಿದೆ. ಮಹಿಳಾ ಸಬಲೀಕರಣಕ್ಕೆ ಆದ್ಯತೆಯನ್ನು ನೀಡಿ, ಸುಮಾರು ಎಪ್ಪತ್ತೈದು ವರ್ಷಗಳಿಂದ ಶೈಕ್ಷಣಿಕ ಕ್ಷೇತ್ರಕ್ಕೆ ಅರ್ಥಪೂರ್ಣ ಕೊಡುಗೆಯನ್ನು ನೀಡುತ್ತಾ ಬಂದಿದೆ. ನಮ್ಮ ಕಾಲೇಜು ನ್ಯಾಕ್ ವತಿಯಿಂದ 'A'+ ದರ್ಜೆಯ ಮಾನ್ಯತೆ ಪಡೆದಿದೆ. ಡಿಬಿಟಿಯು ಸ್ಟಾರ್‌ಕಾಲೇಜು ಎಂಬ ಬಿರುದು ನೀಡಿ ಪುರಸ್ಕರಿಸಿದೆ. ಮಾನವಿಕ ಶಾಸ್ತ್ರಗಳ ನಿಕಾಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ವಿಭಾಗವು ಕಲೆ, ಸಾಹಿತ್ಯ, ಸಂಶೋಧನೆಯಂತಹ ವಿವಿಧ ಕ್ಷೇತ್ರಗಳ ಕಾರ್ಯಗಳಲ್ಲಿ ಸದಾ ತೊಡಗಿಸಿಕೊಂಡು ಸೇವೆ ಸಲ್ಲಿಸುತ್ತದೆ.

ಪ್ರಸ್ತುತ ಸಮಾವೇಶವನ್ನು ಅತ್ಯಂತ ಉತ್ಸಾಹದಿಂದ ಆಯೋಜಿಸಿ, ಸಂಶೋಧನಾ ಲೇಖನಗಳನ್ನು ಪುಸ್ತಕ ರೂಪದಲ್ಲಿ ಹೊರತರುತ್ತಿರುವ ಮಾನವಿಕ ನಿಕಾಯಗಳ ಮುಖ್ಯಸ್ಥರಾದ ಡಾ. ಹಂಸ ಎನ್. ಮತ್ತು ಕನ್ನಡ ವಿಭಾಗದ ಮುಖ್ಯಸ್ಥರು ಹಾಗೂ ವಿಚಾರದ ಸಂಕಿರಣದ ಪ್ರಧಾನ ಸಂಘಟಕರಾದ ಡಾ. ರವೀಶ ಹೆಚ್.ವಿ., ಸಂಘಟಕರಾದ ಡಾ. ಚೇತನಾ ಹೆಗಡೆ, ಅನಿತ ಕೆ.ವಿ., ಸುಮನ ಯು.ಎನ್. ಈ ಎಲ್ಲರ ಕ್ರಿಯಾಶೀಲ ಕಾರ್ಯವನ್ನು ಸದಾ ಅಭಿನಂದಿಸುತ್ತೇನೆ.

ಪ್ರೊ. ಜಾರ್ಜ್ ಲೇಖಾ
ಪ್ರಾಂಶುಪಾಲರು
ಮೌಂಟ್ ಕಾರ್ಮೆಲ್ ಕಾಲೇಜು, ಸ್ವಾಯತ್ತ

Dean's Message

The Psychology of ageing in literature explores the influence of psychological theories in shaping the literary characters. Literature gives voice to the lived experience of ageing capturing the specific psychological states, challenges and achievements that shape an individual's life.

The Dept of Psychology, MCC through this conference aims to explore the rich resources in literary gerontology for interpretations of meaning of ageing in cross cultural and historical circumstances as well as modern narratives.

I take the opportunity to wish the depts of Kannada and Psychology the very best in organising this conference.

Dr. Hamsa N
Dean & Associate Professor
Department of Psychology,
Mount Carmel College, Autonomous.

ಸಂಪಾದಕೀಯ

ಮನೋವಿಜ್ಞಾನವು ಸಾಹಿತ್ಯದ ಒಂದು ಭಾಗ. ಅದು ಈಗ ಪ್ರತ್ಯೇಕ ಅಧ್ಯಯನ. ಮನುಷ್ಯ ಹೆಚ್ಚು ಬುದ್ಧಿವಂತನಾದಷ್ಟು ಮಾನಸಿಕವಾದ ಸಧೃಡತೆ ಸದಾ ಹವಣಿಸುತ್ತಿರುವುದನ್ನು ಕಾಣಬಹುದು. ಈ ಕಾರಣದಿಂದ ಸಾಹಿತ್ಯವು ಮನೋವಿಜ್ಞಾನಕ್ಕೆ ಪರಮೌಷಧವಾದ ಕಾರಣ, ನಾವು ಪ್ರತಿ ಆಲೋಚನೆ, ಬರಹ ಎಲ್ಲವನ್ನೂ ಹೊಸ ದೃಷ್ಟಿಯಿಂದ ಅಧ್ಯಯನ ಮಾಡಬೇಕಿದೆ. ಸಾಹಿತ್ಯ ಮತ್ತು ಮನೋವಿಜ್ಞಾನದ ಈ ಸಂಯೋಜನೆಯ ಸಾಹಿತ್ಯದ ಓದು ಪ್ರಸ್ತುತ ಸಂದರ್ಭಕ್ಕೆ ಅನಿವಾರ್ಯವಾದುದು. ಸಾಹಿತ್ಯವು ಮನುಷ್ಯನ ವ್ಯಕ್ತಿತ್ವದ ವಿಕಾಸಕ್ಕೆ ಪೂರಕವಾಗಿದೆ. ಮಾನವನ ವರ್ತನೆಯನ್ನು ಅರಿಯಲು ಸಾಹಿತ್ಯದೊಂದಿಗೆ ಮನೋವಿಜ್ಞಾನದ ಓದಿನ ನೆರವೂ ಅತ್ಯಗತ್ಯವಾದುದು. ಈ ನಿಟ್ಟಿನಲ್ಲಿ ನಮ್ಮ ಮೌಂಟ್ ಕಾರ್ಮೆಲ್ ಕಾಲೇಜಿನ ಕನ್ನಡ ವಿಭಾಗವು ಮನಃಶಾಸ್ತ್ರ ವಿಭಾಗದ ಸಹಯೋಗದೊಂದಿಗೆ 'ಕನ್ನಡ ಸಾಹಿತ್ಯ ಮತ್ತು ಮನೋವಿಜ್ಞಾನ' ವಿಷಯ ಕುರಿತು ಅಂತಾರಾಷ್ಟ್ರೀಯ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ.

ಮನಃಶಾಸ್ತ್ರ ಎಂಬುದು ಮನುಷ್ಯನ ಮತ್ತು ಪ್ರಾಣಿಗಳ ಮನಸನ್ನು ಅಧ್ಯಯನ ಮಾಡುವ ಅತಿ ಮುಖ್ಯವಾದ ಮತ್ತು ಅತ್ಯಂತ ಕುತೂಹಲಕರವಾದ ಶಾಸ್ತ್ರವಾಗಿದೆ. ಮನಃಶಾಸ್ತ್ರ ಮನಸಿನಿಂದ ಮನಸನ್ನು ತಿಳಿಯುವ ಒಂದು ವಿಚಿತ್ರ ಸಾಹಸದ ವೈಜ್ಞಾನಿಕರೂಪ ಈ ಶಾಸ್ತ್ರವು ಪ್ರಾಣಿಗಳಿಂದ ಹಿಡಿದು ಮನುಷ್ಯನ ಭಾವಕೋಶಗಳ ಆಳಕ್ಕಿಳಿದು ಸೂಕ್ಷ್ಮ ಪರಿಶೀಲನೆಯಿಂದ ಮನಸ್ಸಿನ ಸ್ಥಿತಿಯನ್ನು ಅಧ್ಯಯನ ಮಾಡುತ್ತದೆ. ಮನಸ್ಸು ವ್ಯಕ್ತವಾಗುವುದು ಬಹಿರಂಗ ವರ್ತನೆಗಳಲ್ಲಿ, ಮತ್ತು ಆ ಮನಸ್ಸು ಸೃಷ್ಟಿಸುವ ವಿವಿಧ ಕಲಾರೂಪದ ಅಭಿವ್ಯಕ್ತಿಗಳಲ್ಲಿ ಇಂತಹ ಕಲೆ ಸಾಹಿತ್ಯಗಳನ್ನು ಮನಃಶಾಸ್ತ್ರ ಅಧ್ಯಯನ ನಡೆಸುತ್ತಾ ಬಂದಿದೆ. ಮನಃಶಾಸ್ತ್ರದ ಕೀಲಿ ಕೈಯಿಂದ ಕವಿ – ಮನೋಮಂದಿರದ ಪ್ರಯೋಗ ಶಾಲೆಯ ಬಾಗಿಲನ್ನು ತೆರೆದು ಕವಿ ನಿರ್ಮಿತಿಯ ರಹಸ್ಯಗಳನ್ನು ತಿಳಿಯಬಹುದು ಎಂದು ಪ್ರಸಿದ್ಧ ಮನೋವಿಜ್ಞಾನ ಸಿ.ಜಿ. ಜಂಗ್ ಹೇಳುತ್ತಾನೆ. ಪಾಶ್ಚಿಮಾತ್ಯ ದೇಶಗಳಲ್ಲಿ ಮನೋಶಾಸ್ತ್ರೀಯ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ವಿಶ್ಲೇಷಿಸುವ ಕ್ರಮ 18ನೇ ಶತಮಾನದಲ್ಲೇ ಪ್ರಾರಂಭವಾಯಿತು. ಇದಕ್ಕೂ ಮೊದಲು ಇತಿಹಾಸದಲ್ಲಿ ಮನೋವಿಜ್ಞಾನ ಇತ್ತು ಆದರೆ ಮನೋವಿಜ್ಞಾನಿಗಳಿರಲಿಲ್ಲ. ವಿಲ್‌ಹೆಲ್ಮ್ ವೂಂಟ್ (1832–1920) ಜಗತ್ತಿನ ಮೊಟ್ಟಮೊದಲ ಅಧಿಕೃತ ಮನೋವಿಜ್ಞಾನಿ. ಈತ ಲೈಪ್ಜಿಗ್ (ಜರ್ಮನಿ ದೇಶ) ವಿಶ್ವವಿದ್ಯಾಲಯದಲ್ಲಿ ಮನೋವಿಜ್ಞಾನದ ಅಧಿಕೃತ ಪ್ರಯೋಗಾಲಯ ಸ್ಥಾಪಿಸಿದ ಆತ ನಿಜವಾಗಿಯೂ ಜೀವಶಾಸ್ತ್ರ ಮತ್ತು ತತ್ವಶಾಸ್ತ್ರದ ಪ್ರಾಧ್ಯಾಪಕ ಇವನ ಮಾರ್ಗದರ್ಶನದಲ್ಲಿ 186 ಮಂದಿ ಡಾಕ್ಟರೇಟ್ ಪಡೆದರು. ಅದರಲ್ಲಿ 116 ಮಂದಿ ಮನಃಶಾಸ್ತ್ರದಲ್ಲಿ. ಪ್ರಸಿದ್ಧಿ ಪಡೆದ ಮನೋವಿಜ್ಞಾನಿಗಳಲ್ಲಿ ಅನೇಕರು ಇವನ ಶಿಷ್ಯರೇ ಆಗಿದ್ದಾರೆ. ಮುಂದೆ ಸಿಗ್ಮಂಡ್ ಫ್ರಾಯ್ಡ್ ಮನೋವಿಜ್ಞಾನಕ್ಕೆ ಒಂದು ಹೊಸ ಆಯಾಮವನ್ನೇ ರೂಪಿಸಿಕೊಟ್ಟನೆಂದರೆ ತಪ್ಪಾಗಲಾರದು. ಈತ ವ್ಯಕ್ತಿತ್ವದ ಒಂದು ಪ್ರಭಾವಶಾಲಿ ಸಿದ್ಧಾಂತವನ್ನು ಪ್ರತಿಪಾದಿಸಿದ. ಫ್ರಾಯ್ಡ್ ರಚಿಸಿದ ಸ್ವಪ್ನಾರ್ಥ ವಿವರಣೆ (The Interpretation of Dreams) ಎನ್ನುವ ಗ್ರಂಥ ಇಂದಿಗೂ ಜಗತ್ತಿನ ಅತಿ ಶ್ರೇಷ್ಠ ನೂರು ಕೃತಿಗಳಲ್ಲಿ ಒಂದಾಗಿದೆ.

ಇಂದು ನೂರಾರು ಆಧುನಿಕ ಮನೋವಿಜ್ಞಾನಿಗಳು ಹೊಸ ಹೊಸ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಈ ಸಿದ್ಧಾಂತಗಳ ಮೂಲಕ ಸಾಹಿತ್ಯವನ್ನು ವಿಶ್ಲೇಷಿಸುವ ಕ್ರಮರೂಢಿಯಲ್ಲಿದೆ. ಆದರೆ ಕನ್ನಡ ಸಾಹಿತ್ಯದ ಮಟ್ಟಿಗೆ ಆ ನಿಟ್ಟಿನಲ್ಲಿ ನೋಡುವುದಾದರೆ ತೀರ ಕಡಿಮೆಯೆಂದೇ ಹೇಳಬಹುದಾಗಿದೆ. ಭಾರತೀಯ ಅಲಂಕಾರಿಕರು ಕಲೆಗೆ ಮನಸ್ಸಿನ 'ಸ್ವಾಸ್ಥ್ಯ'ವೇ ಕಾರಣ ಎಂದರೆ ಮನಸ್ಸಿನ ಅಸ್ವಾಸ್ಥ್ಯವೇ ಕಲೆಗೆ ಕಾರಣ ಎನ್ನುತ್ತಾರೆ ಪಾಶ್ಚಾತ್ಯ ಮನೋವಿಜ್ಞಾನಿಗಳು. ಈ ದೃಷ್ಟಿಯಿಂದ ಭಾರತೀಯರು ತಮ್ಮ ಕಲೆ–ಸಾಹಿತ್ಯಗಳನ್ನು ಮನಃಶಾಸ್ತ್ರೀಯವಾಗಿ ಅಧ್ಯಯನ ಮಾಡದಿರುವುದಕ್ಕೆ ಕಾರಣವಿರಬಹುದು. ಹಾಗೆಯೇ ಕನ್ನಡದಲ್ಲಿ ಕವಿಕೃತಿಗಳನ್ನು ಮನಃಶಾಸ್ತ್ರೀಯವಾದ ರೀತಿಯಲ್ಲಿ ಅಭ್ಯಸಿಸುವ ಪ್ರಯತ್ನ ಅಷ್ಟಾಗಿ ಬೆಳೆದಿಲ್ಲ ಅದಕ್ಕೆ ವಿಮರ್ಶಕನಾದವನಿಗೆ ಮನಃಶಾಸ್ತ್ರದ ಆಳವಾದ ಅಭ್ಯಾಸ ಮತ್ತು ಅದರ ಸಿದ್ಧಾಂತ ಅಥವಾ ತತ್ವಗಳನ್ನು ಸಾಹಿತ್ಯಕ್ಕೆ ಸಮರ್ಪಕವಾಗಿ ಅನ್ವಯಿಸಿ ನೋಡುವ ಸಾಮರ್ಥ್ಯಬೇಕು ಎಂದು ಜಿ. ಎಸ್. ಶಿವರುದ್ರಪ್ಪ ಅವರು ಅಭಿಪ್ರಾಯ ಪಡುತ್ತಾರೆ.

ಈ ನಿಟ್ಟಿನಲ್ಲಿ ಅಲ್ಪ ಪ್ರಮಾಣದಲ್ಲಿ ನಡೆದಿರುವ ಪ್ರಯತ್ನಗಳನ್ನು ಗಮನಿಸುವುದಾದರೆ 1946 ರಷ್ಟು ಹಿಂದೆ ಡಾ. ಬಿ. ಕುಪ್ಪುಸ್ವಾಮಿಯವರು ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯ ಪಾತ್ರಗಳನ್ನು ಕುರಿತು ವಿಶ್ಲೇಷಣೆ ಮಾಡಿದ್ದಾರೆ. ಹಾಗೆಯೇ

ಶ್ರೀ. ಎಲ್.ಆರ್. ಹೆಗಡೆಯವರು 'ಜನ್ನನ ಅಮೃತಮತಿ' ಎಂಬ ಲೇಖನವನ್ನು ಪ್ರಕಟಿಸಿದ್ದಾರೆ ಮತ್ತು ತ್ರಿವೇಣಿಯವರ ಹಲವು ಕಾದಂಬರಿಗಳನ್ನು ಮನಃಶಾಸ್ತ್ರೀಯ ಹಿನ್ನೆಲೆಯಲ್ಲಿ ನೋಡಲಾಗಿದೆ.

ಕನ್ನಡ ವಿಭಾಗ ಆಯೋಜಿಸಿರುವ 'ಕನ್ನಡ ಸಾಹಿತ್ಯ ಮತ್ತು ಮನೋವಿಜ್ಞಾನ' ಎಂಬ ಸಮಾವೇಶಕ್ಕೆ ಬಂದಿರುವ ಲೇಖನಗಳಲ್ಲಿ ಹಲವು ಅತ್ಯಂತ ಗುಣಮಟ್ಟದ ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಿರುವ ಲೇಖನಗಳಿವೆ. ಈ ಕೃತಿ ಕಾರ್ಯದಲ್ಲಿ ಕನ್ನಡ ಸಾಹಿತ್ಯದ ಗಂಭೀರ ಬರಹಗಾರರು ಕೂಡ ಸೂಕ್ತ ಸಮಯಕ್ಕೆ ಲೇಖನ ನೀಡಿ, ಕೃತಿಯ ಮೌಲ್ಯ ಹೆಚ್ಚಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಮನೋವಿಜ್ಞಾನ, ಜನಪದ, ಮಹಾಕಾವ್ಯದಲ್ಲಿ ಮನೋವಿಜ್ಞಾನ, ವಚನ, ಕೀರ್ತನೆ ಸಾಹಿತ್ಯದಲ್ಲಿ ಮನೋವೈಜ್ಞಾನಿಕ ಚಿಂತನೆಗಳು, ಕುವೆಂಪು, ಎಸ್. ಎಲ್. ಭೈರಪ್ಪ, ತ್ರಿವೇಣಿ ಅವರ ಸಾಹಿತ್ಯದಲ್ಲಿ ಮನೋ ಚಿಂತನೆಗಳು ನಡೆದಿವೆ. ಬಹುಮುಖ್ಯವಾಗಿ ಅತಿ ಹೆಚ್ಚು ಲೇಖಕರು ಅಧ್ಯಯನ ನಡೆಸಿರುವುದು ಕಾದಂಬರಿ, ಸಿನೆಮಾಗಳ ಆಧಾರದ ಮೇಲೆ. ಡಾ. ಎಸ್ ಸುರ್ಮ ಮತ್ತು ಡಾ. ಮಂಜುನಾಥ ಪಿ., ಡಾ. ರಮಾನಂದ ಕೆ.ವಿ., ಡಾ. ಎಸ್.ವಿ ಸುಜಾತ., ಅನಿತ. ಕೆ.ವಿ., ಡಾ. ರವಿಶಂಕರ್ ಎ.ಕೆ. ಮೊದಲಾದ ಲೇಖಕರ ಸಾಹಿತ್ಯದಲ್ಲಿ ಮನೋವೈಜ್ಞಾನಿಕ ಅಂಶಗಳ ವಿವಿಧ ನೆಲೆ–ಚಿಂತನೆಗಳನ್ನು ದರ್ಶನ ಸ್ವರೂಪದಲ್ಲಿ ನೀಡಿದ್ದಾರೆ. ಕನ್ನಡ ಸಾಹಿತ್ಯ ಮತ್ತು ಮನೋವಿಜ್ಞಾನದ ಹುಡುಕಾಟವನ್ನು ತಮ್ಮ ಆಸಕ್ತಿ ಕ್ಷೇತ್ರಗಳಲ್ಲಿಯೇ ಕಂಡುಕೊಂಡಿರುವುದು ನಮ್ಮ ಈ ಕೃತಿಯ ಮೌಲ್ಯವನ್ನು ವಿಸ್ತರಿಸಿದೆ. ಇನ್ನು ಕೆಲವು ಲೇಖನಗಳು ಮನೋವೈಜ್ಞಾನಿಕ ಸಿದ್ಧಾಂತಗಳನ್ನು ಅನ್ವಯಿಸಿ ವಿಶ್ಲೇಷಿಸಿದ್ದರೇ ಅತ್ಯಂತ ಸತ್ವಯುತವಾದ ಲೇಖನಗಳಾಗುತ್ತಿದ್ದವು ಎಂದರೆ ತಪ್ಪಾಗಲಾರದು.

ಇದು ಕನ್ನಡ ಸಾಹಿತ್ಯದಲ್ಲಿ ಮನೋವಿಜ್ಞಾನವನ್ನು ಅಧ್ಯಯನ ಮಾಡುವ ಮತ್ತು ಸಂಶೋಧನೆ ನಡೆಸುವ ಪ್ರತಿಯೊಬ್ಬರಿಗೂ ಒಂದು ಅರ್ಥಪೂರ್ಣ ಕೃತಿಯಾಗುತ್ತದೆ ಎಂಬುದು ನಮ್ಮ ನಂಬಿಕೆಯಾಗಿದೆ. ವೇಗದ ಆಧುನಿಕ ಯುಗದಲ್ಲಿ ಒತ್ತಡದ ಬದುಕಿನ ನಿರ್ವಹಣೆಗೆ ಮನೋವೈಜ್ಞಾನಿಕ ಅರಿವಿನ ಅಗತ್ಯತೆ ಇದೆ. ಆದ್ದರಿಂದ ಈ ಕ್ಷೇತ್ರದಲ್ಲಿ ಕನ್ನಡದ ಹೆಚ್ಚು ಸಂಶೋಧನೆಗಳು ನಡೆಯಬೇಕೆಂದು ಆಶಿಸುತ್ತೇವೆ.

ಇಂತಹ ಅರ್ಥಪೂರ್ಣ ಕಾರ್ಯಕ್ಕೆ ಬೆಂಬಲ ಹಾಗೂ ಸದಾ ಮಾರ್ಗದರ್ಶನ ನೀಡುತ್ತಿರುವ ಮೌಂಟ್ ಕಾರ್ಮೆಲ್ ಕಾಲೇಜಿನ ನಿರ್ದೇಶಕರಾದ ಸಿಸ್ಟರ್ ಎಂ. ಅಲ್ಪಿನ, ಪ್ರಾಂಶುಪಾಲರಾದ ಪ್ರೊ. ಜಾರ್ಜ್ ಲೇಖಾ ಅವರಿಗೂ ಗೌರವಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಈ ಕಾರ್ಯಕ್ಕೆ ಸಲಹೆಗಳನ್ನು ನೀಡಿ ಮತ್ತು ಮನಃಶಾಸ್ತ್ರ ವಿಭಾಗದ ಸಹಯೋಗ ನೀಡಿ ಬೆಂಬಲಿಸಿದ ಮಾನವಿಕ ನಿಕಾಯದ ಮುಖ್ಯಸ್ಥರಾದ ಡಾ. ಹಂಸ ಎನ್. ಅವರ ಸಹಕಾರವನ್ನು ಸ್ಮರಿಸುತ್ತೇನೆ.

ನಮ್ಮ ಕನ್ನಡ ವಿಭಾಗದಲ್ಲಿ ಈ ಹಿಂದೆ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಡಾ. ಸಿಸ್ಟರ್. ವಾಯಲೆಟ್ ಹಾಗೂ ಪ್ರೊ. ದಾಕ್ಷಾಯಣಿ ಕೆ.ಎನ್ ಅವರು ನಮ್ಮ ಪ್ರತಿ ಕಾರ್ಯಗಳಿಗೂ ಸೂಕ್ತ ಸಲಹೆಗಳನ್ನು ನೀಡುತ್ತಾ ಬೆಂಬಲವಾಗಿದ್ದಾರೆ, ಇವರಿಗೂ ಧನ್ಯವಾದಗಳು. ನಮ್ಮ ಕಾಲೇಜಿನ ಸಂಶೋಧನ ವಿಭಾಗದ ಮುಖಸ್ಥರಾದ ಡಾ. ಕವಿತಾ ಸಿಂಗ್, ಇವರು ಸಲಹಾ ಮಂಡಳಿಯ ಮುಖ್ಯ ಸಲಹೆಗಾರರಾಗಿ ವಿಷಯಗಳ ಆಯ್ಕೆ, ಸ್ವರೂಪ ಮೊದಲಾದಂತೆ ಆಯಾ ಸಂದರ್ಭಗಳಿಗೆ ಅನುಸಾರವಾಗಿ ಸಲಹೆಗಳನ್ನು ನೀಡಿದ್ದಾರೆ. ಇವರಿಗೆ ವಿಶೇಷವಾದ ಧನ್ಯವಾದಗಳು. ನಮ್ಮ ವಿಚಾರ ಸಂಕಿರಣದ ನೆಪದಲ್ಲಿ ಎಲ್ಲಾ ಭಾಗದ ವಿವಿಧಕ್ಷೇತ್ರದ ಲೇಖಕರು ಅಧ್ಯಯನ ನಡೆಸಿ, ಸಂಶೋಧನ ಲೇಖನಗಳನ್ನು ಸಲ್ಲಿಸಿ ಮಂಡಿಸುವ ಮೂಲಕ ಪ್ರಕಟಣೆಗೆ ಕಾರಣವಾಗುತ್ತಿರುವ ಎಲ್ಲಾ ಲೇಖಕರಿಗೂ ಅನಂತ ಧನ್ಯವಾದಗಳು.

'ಕನ್ನಡ ಸಾಹಿತ್ಯ ಮತ್ತು ಮನೋವಿಜ್ಞಾನ' ಎಂಬ ಹೆಸರಿನಲ್ಲಿ ಪ್ರತಿ ಲೇಖನವನ್ನು ಪರಿಶೀಲಿಸಿ ಸಂಪಾದಿಸಲು ಕಾರಣರಾದವರು ಡಾ. ಚೇತನಾ ಹೆಗಡೆ, ಶ್ರೀಮತಿ ಅನಿತ ಕೆ.ವಿ., ಇವರ ಸಮಶ್ರಮದ ಫಲವೇ ಈ ಕೃತಿ. ಹಾಗೂ ಈ ಕಾರ್ಯದಲ್ಲಿ ಸಹಕಾರ ನೀಡುತ್ತಿರುವ ಡಾ. ಪುನೀತ್ ಕುಮಾರ್ ಮತ್ತು ಡಾ. ಶ್ವೇತಜೆ. ಇವರೆಲ್ಲಗೂ ಮನಃಪೂರ್ವಕ ಧನ್ಯವಾದಗಳು. ಕಾರ್ಮೆಲೈಟ್ ಪತ್ರಿಕೆಯನ್ನು ಸುಂದರ ಹಾಗು ಗುಣಮಟ್ಟದಲ್ಲಿ ಮುದ್ರಿಸಿ ಪ್ರಕಟಿಸಲು ಸಹಕರಿಸಿದ ಡಾ. ಕವಿತಾ ಸಿಂಗ್ ಮತ್ತು ಕಾರ್ಮೆಲೈಟ್ ಸಲಹಾ ಸಮಿತಿ ಅವರಿಗೂ ಅನಂತ ಧನ್ಯವಾದಗಳು.

ಪರಿವಿಡಿ

•	Chief Patrons		ii
•	Special Edition		iii
•	ನಿರ್ದೇಶಕರ ಶುಭನುಡಿ		iv
•	ಸಂಪಾದಕೀಯ		vi
1	ಕುವೆಂಪು ಅವರ ಕವನಗಳಲ್ಲಿ ಮನೋವೈಜ್ಞಾನಿಕ ವಿಚಾರಧಾರೆಗಳು	ಡಾ. ಮಂಜುನಾಥ. ಪಿ.	1
2	ಸಾಹಿತ್ಯ ಮತ್ತು ಮನೋವಿಜ್ಞಾನದ ಅಂತಃಸಂಬಂಧ	ಡಾ. ರಮಾನಂದ ಕೆ.ವಿ.	8
3	ಮನೋವಿಜ್ಞಾನ ಮತ್ತು ಸಾಹಿತ್ಯ ಓದು	ಡಾ. ರವಿಶಂಕರ್ ಎ.ಕೆ.	14
4	ಸಾಹಿತ್ಯದಲ್ಲಿನ ಮನೋವೈಜ್ಞಾನಿಕ ಪರಿಕಲ್ಪನೆಗಳು	ಡಾ. ಎಸ್. ಸುರ್ಮ.	21
5	ಸೈಕಲ್ ಸವಾರಿ: ವಿವಾಹ, ಮನೋವೈಜ್ಞಾನಿಕ ಚಿಂತನೆ	ಅನಿತ ಕೆ. ವಿ.	26
6	ಮನೋವಿಜ್ಞಾನ ಮತ್ತು ಕಲೆ ಸಾಹಿತ್ಯದ ಸಂಬಂಧ	ರಾಜೇಶ್ವರಿ ವೈ. ಎಂ.	34
7	ಹಯವದನ ನಾಟಕದ ಮನೋವಿಶ್ಲೇಷಣಾತ್ಮಕ ನೆಲೆಗಳು	ಡಾ. ಮುನೀತ್ ಕುಮಾರ್	42
8	ಸಾಹಿತ್ಯ ಮತ್ತು ಮನೋವಿಜ್ಞಾನದ ಅಂತಃಸಂಬಂಧ	ಬಾಬು ನಾಯ್ಕ್	48
9	ಅನುವಾದ ಸಾಹಿತ್ಯವನ್ನು ಪ್ರಭಾವಿಸುವ ಮನೋವೈಜ್ಞಾನಿಕ ಅಂಶಗಳು	ಡಾ. ಎಸ್ ಸುರ್ಮ ಡಾ. ಮಂಜುನಾಥ. ಪಿ.	53
10	ಹಳಗನ್ನಡ ಜೈನ ಕೃತಿಗಳಲ್ಲಿ ಮನೋವಿಜ್ಞಾನ	ಡಾ. ಎಸ್. ವಿ. ಸುಜಾತ	60
11	ಎಸ್.ಎಲ್. ಭೈರಪ್ಪ ಅವರ ಜನಪ್ರಿಯ ಕಾದಂಬರಿ ಉತ್ತರಕಾಂಡ ರೂಪಿಸುವ ಸಾಮೂಹಿಕ ಮನೋವಿಜ್ಞಾನ	ಸೌಮ್ಯ ಡಿ	65
12	ಕನ್ನಡ ಸಾಹಿತ್ಯದಲ್ಲಿ ಮನಃಶಾಸ್ತ್ರ	ಕುಸುಮ ಬಿ.ಎಂ.	76
13	ದೇವನೂರರ ಕಥನದಲ್ಲಿ ಹೆಣ್ಣು ಪಾತ್ರಗಳ ವರ್ತನೆಗಳು	ಡಾ. ಶ್ವೇತ ಜೆ ವಡೇರಹಳ್ಳಿ	80
14	ತೇಜಸ್ವಿ ಸಾಹಿತ್ಯದಲ್ಲಿ ವ್ಯಕ್ತಿ ವಿಶಿಷ್ಟತೆಯ ಲಕ್ಷಣಗಳು	ಡಾ. ಕುಸುಮಾಂಜಲಿ ಎಲ್.ಸಿ. ಜಗದೀಶ್	87
15	ಯಶೋಧರ ಚರಿತೆಯಲ್ಲಿ ಮನೋವಿಜ್ಞಾನ	ಅರುಣ ಎಸ್.	97
16	ಬಸವಣ್ಣನ ವಚನಗಳು ಮತ್ತು ಮನಸ್ಸು : ಮನೋವೈಜ್ಞಾನಿಕತೆ	ಪ್ರಕಾಶ ಎಸ್.	103
17	ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ಸುಬ್ರಾಯ ಚೊಕ್ಕಾಡಿ ಅವರ 'ಸಂತೆಮನೆ' ಕಾದಂಬರಿಯ ವಿಶ್ಲೇಷಣೆ	ಸುರೇಶ್‌ಕುಮಾರ್ ಬಿ. ಸಿ.	107

18	ಮಹಾಕಾವ್ಯ, ಕಥೆ, ನಾಟಕಗಳಲ್ಲಿ ಮನೋವೈಜ್ಞಾನಿಕತೆ	ನಂಜಪ್ಪ. ಡಿ.ಎಸ್ ಡಾ. ಕೆ. ರಾಮಕೃಷ್ಣಯ್ಯ	112
19	ಟಿ. ಎಸ್. ಗೊರವರ ಅವರ ಮಲ್ಲಿಗೆ ಹೂವಿನ ಸಖಿ ಮತ್ತು ಚವರಿ ನಾಟಕಗಳಲ್ಲಿ ಮನೋವೈಜ್ಞಾನಿಕ ನೆಲೆಗಳು	ನಾಗೇಶ್ ಎನ್.	117
20	ಕಾದಂಬರಿಯಲ್ಲಿ ಮನೋವೈಜ್ಞಾನಿಕತೆ	ಶ್ರೀಮತಿ. ಶಾಂತಾ ಬ್ಯಾಡಗಿ (ಬಸನಗೌಡ್ರ)	121
21	ಮನೋವೈಜ್ಞಾನಿಕ ಕಾದಂಬರಿಗಳು ಮತ್ತು ಚಲನಚಿತ್ರ	ಡಾ. ಸುಧಾಕರ್ ಎಚ್.	124
22	ಮಹಿಳಾ ಸಾಹಿತ್ಯ ಮತ್ತು ಮನೋವೈಜ್ಞಾನಿಕತೆ	ಡಾ. ಪುಷ್ಪಲತಾ ಎಂ.ಎಸ್.	129
23	ಮನೋವಿಜ್ಞಾನ ಮತ್ತು ಕಲೆ–ಸಾಹಿತ್ಯದ ಅಂತರ್‌ಸಂಬಂಧ: ಕನ್ನಡ ಸಾಹಿತ್ಯದ ಸನ್ನಿವೇಶದಲ್ಲಿ ಒಂದು ಅಧ್ಯಯನ	ಸುಧಾಕರ್ ಆರ್. ಎನ್.	135
24	Ageing Under Depression: Silenced and Hidden Identity in Sylvia Plath's Works	Sanjana Shashidhar	144
25	The Gardener Who Forgot Her Own Name: Reviewing Identity Erosion in Women's Lifelong Caregiving Roles	Chaitanya D Kambanor Suhani N Gandhi	150
26	Creative Engagement and Cognitive Reserve in Older Adults: A Psychological Review	Anoushka Nambiar Ganesh Naveena Sera D'Souza	159
27	Gendered Ageing in Literature: Why Old Men Become Sages While Old Women Become Witches	Jyeshta S.	165
28	Narratives of Solitude: A Thematic Review of Loneliness and Isolation in Modern Gerontological Literature.	Sanjana Suresh Menon Asika Sanath Bharathan	170
29	Influence of age and gender on storytelling and listening – a comparative review of 'Mookajjiya Kanasugalu' and 'Kathegara Manjanna'	Harini M and Anagha Rao	178
30	Early Sports Participation and Mental Health in Old Age: A Gender Comparison	Nisa R Awaradi Manvitha Ravikumar Dr. Sushma Gopalan	188
31	Grief in Isolation: Loneliness in middle-aged and ageing men as depicted in literature	Chloe Richard Dhritisha Kashyap	196

ಕುವೆಂಪು ಅವರ ಕವನಗಳಲ್ಲಿ ಮನೋವೈಜ್ಞಾನಿಕ ವಿಚಾರಧಾರೆಗಳು

ಡಾ. ಮಂಜುನಾಥ. ಪಿ.

ಮುಖ್ಯಸ್ಥರು ಮತ್ತು ಸಹಪ್ರಾಧ್ಯಾಪಕರು, ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮುಕ್ತಗಂಗೋತ್ರಿ, ಮೈಸೂರು.

ಪೀಠಿಕೆ

ಕುವೆಂಪು ಅವರು ರಚಿಸಿರುವ ಸಾಹಿತ್ಯವು ಅನನ್ಯವಾಗಿದ್ದು, ವೈಚಾರಿಕ ಪ್ರಜ್ಞೆ, ವಿವೇಚನೆ, ತಾರ್ಕಿಕತೆ, ಮಾನವೀಯತೆ, ಸಂವೇದನಾಶೀಲತೆ, ಸಾಮಾಜಿಕ ಪ್ರಜ್ಞೆ, ಪರಿಸರ ಪ್ರಜ್ಞೆ, ಸೌಂದರ್ಯ ಪ್ರಜ್ಞೆ, ಆಧ್ಯಾತ್ಮಿಕ ಮತ್ತು ಮನೋವೈಜ್ಞಾನಿಕ ದೃಷ್ಟಿಕೋನಗಳನ್ನು ಒಳಗೊಂಡಿದೆ. ಕುವೆಂಪು ಅವರ ಸಾಹಿತ್ಯದಲ್ಲಿ ಮನಃಶಾಸ್ತ್ರೀಯ ಪರಿಕಲ್ಪನೆಗಳು ಇರುವುದನ್ನು ಗಮನಿಸಬಹುದಾಗಿದೆ. ಕುವೆಂಪು ಅವರು ಸ್ನಾತಕ ಪದವಿಯಲ್ಲಿ ಮನಃಶಾಸ್ತ್ರ ಮತ್ತು ತತ್ವಶಾಸ್ತ್ರಗಳನ್ನು ಐಚ್ಛಿಕ ವಿಷಯವಾಗಿ ಆಯ್ಕೆಮಾಡಿಕೊಂಡು ಅಧ್ಯಯನ ಮಾಡಿ, ಮನಃಶಾಸ್ತ್ರೀಯ ವಿಚಾರಗಳ ಬಗೆಗೆ ಅಪಾರವಾದ ಜ್ಞಾನವನ್ನು ಹೊಂದಿದ್ದರು. ಕುವೆಂಪು ಅವರು ರಚಿಸಿರುವ ಕಾವ್ಯ, ಕಾದಂಬರಿ, ನಾಟಕ, ಕವನಗಳನ್ನು ಮನೋವೈಜ್ಞಾನಿಕ ದೃಷ್ಟಿಕೋನದಲ್ಲಿ ಅವಲೋಕಿಸಿದಾಗ ಭಾವನೆಗಳು, ಕನಸುಗಳು, ಪ್ರತ್ಯಾಕ್ಷಾನುಭವ, ಚೇತನಾವಸ್ಥೆ, ಆತ್ಮಸಾಕ್ಷಾತ್ಕಾರ, ಸ್ಮರಣೆ, ಸುಪ್ತಚೇತನ, ಆಂತರಿಕ ಸ್ವಯಂ, ವಾಸ್ತವಿಕ, ಭ್ರಮೆ, ಮಾನವತಾವಾದ ಮುಂತಾದ ಮನೋವೈಜ್ಞಾನಿಕ ಪರಿಕಲ್ಪನೆಗಳನ್ನು ಕಾಣಬಹುದಾಗಿದೆ.

ಸಾಹಿತ್ಯ ಮತ್ತು ಮನೋವಿಜ್ಞಾನ ನಡುವಣ ಸಂಬಂಧ

ಕುವೆಂಪು ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಸಂದರ್ಭದಲ್ಲಿ ಮನೋವಿಜ್ಞಾನ ವಿಭಾಗದಲ್ಲಿ ಮನಃಶಾಸ್ತ್ರ ಸಂಘದ ಪ್ರಾರಂಭ ಮತ್ತು 'ಸೈಕಾಲಾಜಿಕಲ್ ಸ್ಟಡೀಸ್ ಜರ್ನಲ್' ಉದ್ಘಾಟನಾ ಭಾಷಣದಲ್ಲಿ 'ಮನೋವಿಜ್ಞಾನಿಗೆ ಜೀವವಿಜ್ಞಾನ' ಹಾಗೂ ಸಾಹಿತ್ಯದ ಪರಿಚಯ ಅತ್ಯಗತ್ಯ. ಅಂತೆಯೇ ಸಾಹಿತಿಗೆ ವಿಜ್ಞಾನ, ಮನೋವಿಜ್ಞಾನದ ಅರಿವು ಅವಶ್ಯಕ, ಸಾಹಿತ್ಯ ಮತ್ತು ಮನೋವಿಜ್ಞಾನ ಪರಸ್ಪರ ಪೂರಕವಾದ ಸಂಬಂಧವನ್ನು ಹೊಂದಿದೆ ಎಂಬುದಾಗಿ ಮನೋವಿಜ್ಞಾನ ಮತ್ತು ಸಾಹಿತ್ಯದ ನಡುವಣ ಸಂಬಂಧ ಕುರಿತು ವಿವರಿಸುತ್ತಾರೆ.[೧]

ಕುವೆಂಪು ಅವರು ಆಧುನಿಕ ವಿಜ್ಞಾನದ ತಿಳುವಳಿಕೆಯನ್ನು ತಮ್ಮ ಕಾವ್ಯದ ವಸ್ತುವನ್ನಾಗಿ ಮಾಡಿಕೊಂಡಿದ್ದಾರೆ. ಖಗೋಳವಿಜ್ಞಾನ, ಯಂತ್ರವಿಜ್ಞಾನ. ಜೀವವಿಜ್ಞಾನ, ಮನೋವಿಜ್ಞಾನ, ಯೋಗವಿಜ್ಞಾನ ಇತ್ಯಾದಿಗಳಿಂದ ಬಂದ ತಿಳುವಳಿಕೆ ಅವರ ಅನೇಕ ಕವನಗಳ ಮೂಲದ್ರವ್ಯವಾಗಿದೆ ಎಂದು ಜಿ.ಎಸ್. ಶಿವರುದ್ರಪ್ಪ ಅಭಿಪ್ರಾಯಪಟ್ಟಿದ್ದಾರೆ.[೨]

ಪ್ರಸಿದ್ಧ ಮನೋವಿಜ್ಞಾನಿಯಾದ ಕಾರ್ಲ್‌ಯೂಂಗ್ (೧೯೪೧) "ಸಾಹಿತ್ಯ ಮತ್ತು ಮನೋವಿಜ್ಞಾನ" ಕುರಿತಾಗಿ ಪ್ರಸಿದ್ಧ ಗ್ರಂಥವನ್ನು ರಚಿಸಿದ್ದಾರೆ. ಸಾಹಿತ್ಯದ ಸೃಜನಶೀಲ ಪ್ರಕ್ರಿಯೆ ಮತ್ತು ಸಾಹಿತ್ಯದಲ್ಲಿನ ಸಾಮೂಹಿಕ ಸುಪ್ತಚೇತನವನ್ನು ಅರಿಯಲು ಮನೋವೈಜ್ಞಾನಿಕ ವಿಶ್ಲೇಷಣೆ ಅಗತ್ಯವಿದೆ ಎಂದು ಅಭಿಪ್ರಾಯಪಡುತ್ತಾರೆ. ಸಾಹಿತ್ಯದಲ್ಲಿನ ಮನೋವೈಜ್ಞಾನಿಕ ಪರಿಕಲ್ಪನೆಗಳನ್ನು

ಪೂರ್ಣ ಪ್ರಮಾಣದಲ್ಲಿ ವಿಶ್ಲೇಷಿಸಿ, ಅರ್ಥೈಸಿಕೊಳ್ಳುವುದು, ಇಂದಿನ ಅಗತ್ಯವಾದ ಸಂಗತಿಯಾಗಿದೆ. ಇದು ಮನೋವೈಜ್ಞಾನಿಕ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಮಹಾಕವಿಗಳೆಲ್ಲರೂ ಮನೋವಿಚಾರಗಳನ್ನು ಕುರಿತು ಚರ್ಚಿಸುವುದಕ್ಕಿರುವ ಮುಖ್ಯಕಾರಣ, 'ಪ್ರತಿಯೊಂದು ಸಾಹಿತ್ಯದ ಪ್ರಕಾರವು ಆರಂಭವಾಗಿ, ಅಂತ್ಯಗೊಳ್ಳುವುದು ಮನಸ್ಸಿನ ಒಳಗೆ ಮಾತ್ರವೇ, ಆದ ಕಾರಣ ಸಾಹಿತ್ಯವು ಮನಸ್ಸಿಗೆ ಮುಟ್ಟಿದಾಗ ಮಾತ್ರ, ಸಾಹಿತ್ಯದ ಓದು ಅರ್ಥಪೂರ್ಣವಾಗುವುದು' ಎಂದು ಕುವೆಂಪು ಅವರು ಅಭಿಪ್ರಾಯ ಪಡುತ್ತಾರೆ.

ಓ ನನ್ನ ಚೇತನ ಕವನದಲ್ಲಿ ಮನೋವೈಜ್ಞಾನಿಕ ವಿಚಾರಧಾರೆಗಳು

'ಪ್ರಜ್ಞೆಯು' ಮನೋವಿಜ್ಞಾನದ ಸಂಕೀರ್ಣ ಪರಿಕಲ್ಪನೆಯಾಗಿದೆ. ಪ್ರಜ್ಞೆ ಎಂಬುದನ್ನು 'ಚೇತನ', 'ಅರಿವು', ಎಂಬ ಅರ್ಥದಲ್ಲೂ ಬಳಸಲಾಗುತ್ತದೆ. ಪ್ರಜ್ಞೆಯು ಆಲೋಚನೆಗಳು ಮತ್ತು ಸುತ್ತಮುತ್ತಲಿನ ಅರಿವನ್ನು ಒಳಗೊಂಡಿರುತ್ತದೆ. ಚೇತನವನ್ನು 'ಆತ್ಮ' ಎಂತಲೂ ಕರೆಯುವರು. ಇದು ಎಚ್ಚರ ಹೊಂದಿರುವ ಸ್ಥಿತಿಯಾಗಿದ್ದು ಪ್ರತಿಯೊಬ್ಬ ಮನುಷ್ಯರಲ್ಲೂ ಇರುತ್ತದೆ. ಚೇತನಶಕ್ತಿ ಮನುಷ್ಯನ ಎಲ್ಲಾ ಕ್ರಿಯೆಗಳನ್ನು ನಿರ್ದೇಶಿಸುತ್ತದೆ ಮತ್ತು ನಿಯಂತ್ರಿಸುತ್ತದೆ.

ಮನುಷ್ಯನ ಎಲ್ಲಾ ವರ್ತನೆಗಳಿಗೂ ಚೇತನ ಶಕ್ತಿಯೇ ಕಾರಣ. ಚೇತನಾವಸ್ಥೆ ರಾಗ ದ್ವೇಷ, ಮತ್ಸರ, ಭೇದಭಾವ, ಪೂರ್ವಾಗ್ರಹ, ಏಕರೂಪಕಗಳು, ಮೌಢ್ಯ, ಜಾತಿ, ಮತ ಮತ್ತು ಧರ್ಮಗಳ ಬಂಧನಕ್ಕೆ ಒಳಗಾದಾಗ ಚೇತನಾವಸ್ಥೆ ಸಂಕುಚಿತವಾಗುವುದರಿಂದ ಮನುಷ್ಯ ಅಲ್ಪ ಮಾನವನಾಗುತ್ತಾನೆ. ಮನುಷ್ಯನ ಚೇತನವು ನಕಾರಾತ್ಮಕ ಆಲೋಚನೆಗಳಿಂದ ಮುಕ್ತವಾದಾಗ ಮನುಷ್ಯನ ಚೇತನಾವಸ್ಥೆ ವಿಸ್ತಾರವಾಗಿ, ವಿಶಾಲವಾಗುವುದರಿಂದ ವ್ಯಕ್ತಿಯು ವಿಶ್ವಮಾನವನಾಗುತ್ತಾನೆ ಎಂಬುದನ್ನು ತಿಳಿಸಿಕೊಡುವ ಮಾನವತಾ ಮನೋವಿಜ್ಞಾನದ ದೃಷ್ಟಿಕೋನವನ್ನು ರಾಷ್ಟ್ರಕವಿ ಕುವೆಂಪು ಅವರು ರಚಿಸಿರುವ 'ಅನಿಕೇತನ' ಎಂಬ ಕವನದಲ್ಲಿ ಕಾಣಬಹುದು.

ಓ ನನ್ನ ಚೇತನ
ಆಗು ನೀ ಅನಿಕೇತನ!
ರೂಪ ರೂಪಗಳನುದಾಟಿ,
ನಾಮಕೋಟಿಗಳನು ಮೀಟಿ,
ಎದೆಯ ಬಿರಿಯೆ ಭಾವದೀಟಿ
ಓ ನನ್ನ ಚೇತನ.
ಆಗು ನೀ ಅನಿಕೇತನ!

ಮನೋವೈಜ್ಞಾನಿಕ ದೃಷ್ಟಿಕೋನದಲ್ಲಿ ಈ ಕವನದಲ್ಲಿ ಇರುವ 'ಚೇತನ'ಎಂಬ ಪರಿಕಲ್ಪನೆಯು ಮನುಷ್ಯನ ಪ್ರಜ್ಞೆಯ ಸ್ಥಿತಿಯನ್ನು ಸೂಚಿಸುತ್ತದೆ. 'ಅನಿಕೇತನ' ಎಂದರೆ ಅನಂತವಾದುದ್ದು. ವಿಶ್ವ ವ್ಯಾಪಿಯಾದುದ್ದು, ಯಾವುದೇ ಮಿತಿಗೂ ಒಳಪಡದೆ ಇರುವುದು ಎಂಬುದನ್ನು ಸೂಚಿಸುತ್ತದೆ. ಚೇತನವು ಮನುಷ್ಯನ ಜೀವ ಚೈತನ್ಯಶಕ್ತಿ. ಇದು ಯಾವುದೇ ಬಂಧನಗಳಿಗೆ ಅಥವಾ ಮಿತಿಗಳಿಗೆ ಒಳಗಾಗಬಾರದು. ಚೇತನವು ಮನುಷ್ಯನನ್ನು ಸಂಕುಚಿತಗೊಳಿಸುವ ಎಲ್ಲಾ ಸಂಕೋಲೆಗಳಿಂದ ಮತ್ತು ಭಾವನೆಗಳಿಂದ ಮುಕ್ತವಾಗಬೇಕು ಎಂಬ ಆಶಯದಿಂದ ಓ ನನ್ನ ಚೇತನ, ಆಗು ನೀ ಅನಿಕೇತನ ಅಂದರೆ ಓ ನನ್ನ ಪ್ರಜ್ಞೆಯೆ ನೀನು ವಿಶ್ವವ್ಯಾಪಿಯಾಗು ಎಂದು ಮನುಷ್ಯ ಪ್ರಜ್ಞೆಗೆ ಕವಿಯು ಕರೆ ನೀಡಿದ್ದಾರೆ.

ಚೇತನವೇ ನಿನಗೆ ಅಂತ್ಯವಿಲ್ಲ. ನೀನು ಎಲ್ಲಾ ಗಡಿಗಳನ್ನು ಮೀರಿ ಅನಂತವಾಗಬೇಕು. ವಿಶ್ವಮಾನವ ದಿಕ್ಕಿನೆಡೆಗೆ ವಿಸ್ತಾರವಾಗಬೇಕು ಎಂಬುದಾಗಿ ಮಾನವನ ಚೇತನಾವಸ್ಥೆಯಲ್ಲಿ ಅಡಗಿರುವ ಜಾಗೃತ ಶಕ್ತಿಯನ್ನು ಎಚ್ಚರಿಸುತ್ತಾರೆ. ಚೇತನವು ಎಲ್ಲ ಪಂಥಗಳ

ಗಡಿಯನ್ನು ಮೀರಿ ಮುಕ್ತವಾಗಬೇಕು ಎಂದು ಪ್ರೇರೆಪಿಸುತ್ತಾರೆ. ಈ ಕವಿತೆಯು ಮನುಷ್ಯನ ಪ್ರಜ್ಞೆ ಮತ್ತು ಭಾವನೆಯನ್ನು ವಿಶ್ವಮಾನವ ಪ್ರಜ್ಞೆ ಮತ್ತು ಭಾವನೆಯನ್ನಾಗಿ ರೂಪಿಸುವ ಮತ್ತು ವಿಸ್ತರಿಸುವ ಕ್ರಿಯೆಯಾಗಿದೆ ಎಂಬುದನ್ನು ಗಮನಿಸಬಹುದು. ವ್ಯಕ್ತಿಯಲ್ಲಿಯೇ ವಿಶ್ವಮಾನವ ಪ್ರಜ್ಞೆಯನ್ನು ಬೆಳೆಸಿಕೊಳ್ಳುವ ಸಾಮರ್ಥ್ಯವಿದೆ ಎಂಬ ಮಾನವತಾ ಮನೋವಿಜ್ಞಾನದ ದೃಷ್ಟಿಕೋನವನ್ನು ಈ ಕವನವು ಪ್ರತಿಪಾದಿಸುತ್ತದೆ.

೨೦ನೆಯ ಶತಮಾನದಲ್ಲಿ ರಾಷ್ಟ್ರಕವಿ ಕುವೆಂಪು ಅವರು ಸಾಹಿತ್ಯದ ಮೂಲಕ ವಿಶ್ವಮಾನವತಾವಾದವನ್ನು ಪ್ರತಿಪಾದಿಸಿದರು. ಕುವೆಂಪು ಅವರ ಪ್ರಕಾರ "ಪ್ರತಿಯೊಂದು ಮಗುವು ಹುಟ್ಟುವಾಗ ವಿಶ್ವಮಾನವನಾಗಿ ಹುಟ್ಟುತ್ತದೆ. ಆದರೆ ಬೆಳೆಯುತ್ತಾ ಬೆಳೆಯುತ್ತಾ. ಸಾಮಾಜಿಕ ಮತ್ತು ಪರಿಸರದ ಪ್ರಭಾವಗಳಿಂದಾಗಿ ಅಲ್ಪ ಮಾನವನಾಗುತ್ತದೆ" ಪ್ರತಿಯೊಬ್ಬ ವ್ಯಕ್ತಿಯನ್ನು ವಿಶ್ವಮಾನವರಾಗಿ ರೂಪಿಸಬೇಕು. ಪ್ರತಿಯೊಬ್ಬ ಮನುಷ್ಯನ ಚೇತನವನ್ನು ವಿಶ್ವಮಾನವ ಪ್ರಜ್ಞೆಯೊಂದಿಗೆ ಜಾಗೃತಗೊಳಿಸಬೇಕು ಎಂಬ ಉದ್ದೇಶದಿಂದ ಓ ನನ್ನ ಚೇತನ, ಆಗು ನೀ ಅನಿಕೇತನ ಎಂಬ ಕವನದಲ್ಲಿ ವಿಶ್ವ ಮಾನವತಾವಾದವನ್ನು ಪ್ರತಿಪಾದಿಸಿದರು.

ಇಪ್ಪತ್ತನೆಯ ಶತಮಾನದಲ್ಲಿ ಅಬ್ರಹಾಂ ಮ್ಯಾಸ್ಲೋವ್ ಮತ್ತು ಕಾರ್ಲ್ ರೋಜರ್ಸ್ ಅವರುಗಳು ಅಮೇರಿಕಾದಲ್ಲಿ ಮಾನವತಾ ಮನೋವಿಜ್ಞಾನದ ಪಂಥವನ್ನು ಪ್ರತಿಪಾದಿಸಿದರು. ಮಾನವತಾವಾದಿ ಮನೋವಿಜ್ಞಾನಿಗಳ ದೃಷ್ಟಿಕೋನದಲ್ಲಿ "ಮನುಷ್ಯ ಮೂಲಭೂತವಾಗಿ ಸ್ವಭಾವತಹ ಒಳ್ಳೆಯವನಾಗಿರುತ್ತಾನೆ. ಮನುಷ್ಯನ ಸಾಮಾಜಿಕ ಮತ್ತು ಮಾನಸಿಕ ಸಮಸ್ಯೆಗಳು ಪರಿಸರದಲ್ಲಿನ ವಿಚಲನೆಗಳ ಪರಿಣಾಮದಿಂದಾಗಿ ಉಂಟಾಗುತ್ತವೆ. ಇದರಿಂದ ಮನುಷ್ಯ ನಕಾರಾತ್ಮಕ ಆಲೋಚನೆಗಳಿಂದ ಸಂಕುಚಿತವಾಗುತ್ತಾನೆ". ಮನುಷ್ಯನಲ್ಲಿ ಹುಟ್ಟಿನಿಂದಲೇ ಸ್ವಭಾವತಹ ಒಳ್ಳೆಯ ಗುಣಗಳಿದ್ದು ಅವನು ಅದನ್ನು ಬದುಕಿನ ಉದ್ದಕ್ಕೂ ಕಾಪಾಡಿಕೊಂಡು, ಆತ್ಮಸಾಕ್ಷಾತ್ಕಾರದ ಹಂತವನ್ನು ತಲುಪಬೇಕೆಂದು ಮಾನವತಾವಾದ ಪ್ರತಿಪಾದಿಸುತ್ತದೆ. ಒಬ್ಬ ವ್ಯಕ್ತಿಯ ಜೀವನದಲ್ಲಿ ಬಹಳ ಮುಖ್ಯವಾದದ್ದು ಆತನ ಪ್ರಜ್ಞೆಯನ್ನು ಬದಲಿಸುವುದಾಗಿರುತ್ತದೆ ಎಂದು ಮಾನವತಾ ಮನೋವಿಜ್ಞಾನಿಗಳು ಪ್ರತಿಪಾದಿಸುತ್ತಾರೆ. ಕುವೆಂಪು ಅವರು ಪ್ರತಿಪಾದಿಸಿರುವ ಮಾನವತಾವಾದದ ಪರಿಕಲ್ಪನೆಗಳು ಮತ್ತು ಮಾನವತಾ ಮನೋವಿಜ್ಞಾನದ ಪರಿಕಲ್ಪನೆಗಳ ಉದ್ದೇಶ ಮನುಷ್ಯನನ್ನು ವಿಶ್ವಮಾನವನಾಗಿ ರೂಪಿಸುವುದಾಗಿದೆ.ಈ ದೃಷ್ಟಿಕೋನದಲ್ಲಿ ಅವಲೋಕಿಸಿದಾಗ ಓ ನನ್ನ ಚೇತನ ಕವನದಲ್ಲಿ ಮನುಷ್ಯನ ಪ್ರಜ್ಞೆಯನ್ನು ವಿಶ್ವಮಾನವ ಪ್ರಜ್ಞೆಯಾಗಿ ರೂಪಿಸುವ ಪ್ರಕ್ರಿಯೆಯನ್ನು ಕಾಣಬಹುದು.

ಮಾನವತಾ ಮನೋವಿಜ್ಞಾನಿ ಅಬ್ರಹಾಂ ಮ್ಯಾಸ್ಲೋವ್ (೧೯೭೦) 'ಪ್ರತಿಯೊಬ್ಬ ವ್ಯಕ್ತಿಯು ತನ್ನದೇ ಆದ ಆಯ್ಕೆ ಸ್ವಾತಂತ್ರ್ಯ, ಸೃಜನಶೀಲತೆ, ಮೌಲ್ಯಗಳನ್ನು ಹೊಂದಿರುತ್ತಾನೆ. ಜೀವನದ ಅಂತಿಮ ಗುರಿ ವೈಯಕ್ತಿಕ ಬೆಳವಣಿಗೆಯನ್ನು ಹೊಂದುವುದು ಮತ್ತು ತಿಳುವಳಿಕೆಯನ್ನು ಪಡೆಯುವುದಾಗಿರುತ್ತದೆ. ಪ್ರತಿಯೊಬ್ಬ ಮನುಷ್ಯನು ಜೀವನದಲ್ಲಿ ಅರ್ಥಪೂರ್ಣವಾಗಿ ಬದುಕಬೇಕು ಮತ್ತು ಆತ್ಮಸಾಕ್ಷಾತ್ಕಾರದ ಹಂತವನ್ನು ತಲುಪಬೇಕು'ಎಂದು ಪ್ರತಿಪಾದಿಸುತ್ತಾರೆ.

ಮಾನವತಾ ಮನೋವಿಜ್ಞಾನಿ ಕಾರ್ಲ್ ರೋಜರ್ಸ್ (೧೯೬೯) 'ಪ್ರತಿಯೊಬ್ಬ ಮನುಷ್ಯರು ಮೂಲತಃ ಒಳ್ಳೆಯವರು ಮತ್ತು ಗೌರವಕ್ಕೆ ಅರ್ಹರಾಗಿರುತ್ತಾರೆ. ಜೀವಿಸುವ ಪರಿಸರ ಮತ್ತು ಪರಿಸ್ಥಿತಿಗಳು ಉತ್ತಮವಾಗಿದ್ದರೆ ಮಾನವರ ಬೆಳವಣಿಗೆಯು ಉತ್ತಮವಾಗಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ಪ್ರತಿ ಕ್ಷಣದಲ್ಲೂ ಸೂಕ್ತವಾದ ವರ್ತನೆಯನ್ನು ಆಯ್ಕೆ ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾನೆ. ವ್ಯಕ್ತಿಯು ಜೀವನದಲ್ಲಿ ಸರಿ ಮತ್ತು ತಪ್ಪುಗಳನ್ನು ತನ್ನ ಸ್ವಂತ ಪ್ರಜ್ಞೆಯಿಂದ ನಿರ್ಧರಿಸಬಲ್ಲವನಾಗಿರುತ್ತಾನೆ' ಎಂದು ಪ್ರತಿಪಾದಿಸಿದರು.

ವ್ಯಕ್ತಿಯ ಚೇತನವು ಅನಂತವಾಗಿ ರೂಪುಗೊಂಡು ನಿತ್ಯವೂ ಸಾಗಿದಾಗ ಪ್ರತಿಯೊಬ್ಬ ವ್ಯಕ್ತಿಯು ಯೋಗಿಯ ರೀತಿಯ ಮನಃಸ್ಥಿತಿಯನ್ನು ಹೊಂದಬಹುದು ಎನ್ನುವ ಕುವೆಂಪು ಅವರ ವಿಚಾರಧಾರೆಯು ಮನೋವಿಜ್ಞಾನದ ಮಾನವತಾ ವಿಚಾರಧಾರೆಯನ್ನು ಪ್ರತಿಬಿಂಬಿಸುತ್ತದೆ.

ಮನುಷ್ಯರು ಸ್ವತಂತ್ರ ಇಚ್ಛಾಶಕ್ತಿ ಮತ್ತು ವೈಯಕ್ತಿಕ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಮನುಷ್ಯರಲ್ಲಿ ಆಂತರಿಕ ಒಳ್ಳೆಯತನವಿದ್ದು ಸಕಾರಾತ್ಮಕ ಬೆಳವಣಿಗೆಯನ್ನು ಹೊಂದಲು ಬಯಸುತ್ತಾರೆ. ಪ್ರಜ್ಞಾಪೂರ್ವಕ ಅನುಭವ ವ್ಯಕ್ತಿಯ ಜೀವನದಲ್ಲಿ ವಿಶಿಷ್ಟ ಜೀವನವಾಗಿದೆ. ಮಾನವರು ಉದ್ದೇಶಪೂರ್ವಕವಾಗಿ ಮತ್ತು ಮೌಲ್ಯಗಳಿಂದ ವರ್ತಿಸಬೇಕು. ಪ್ರಜ್ಞೆಯು ವ್ಯಕ್ತಿಯ ವರ್ತನೆಗಳು ಮತ್ತು ಆಯ್ಕೆಗಳನ್ನು ನಿರ್ಧರಿಸುತ್ತವೆ ಎಂದು ಮಾನವತಾ ಮನೋವಿಜ್ಞಾನ ಪ್ರತಿಪಾದಿಸುತ್ತದೆ. (ಅಬ್ರಹಾಂ ಮ್ಯಾಸ್ಲೋವ್–೧೯೭೦)

ರಾಷ್ಟ್ರಕವಿ ಕುವೆಂಪು ಅವರು "ಮನುಜಮತ, ವಿಶ್ವಪಥ" ಕೃತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಮನುಜಮತ ಮತ್ತು ವಿಶ್ವಪಥವನ್ನು ಆಯ್ಕೆ ಮಾಡಿಕೊಂಡು ವಿಶ್ವಮಾನವರಾಗಬೇಕು ಎಂದು ಪ್ರತಿಪಾದಿಸುತ್ತಾರೆ. "ಸಿಲುಕದಿರಿ ಮತವೆಂಬ ಮೋಹದ ಜ್ಞಾನಕ್ಕೆ, ಮತಿಯಿಂದ ದುಡಿಯಿರೈ ಲೋಕ ಹಿತಕೆ, ಆ ಮತದ, ಈ ಮತದ, ಹಳೆ ಮತದ ಸಹವಾಸ ಸಾಕಿನ್ನು, ಸೇರಿರೈ ಮನುಜ ಮತಕೆ. ಓ ಬನ್ನಿ ಸೋದರರೆ ವಿಶ್ವಪಥಕೆ ಎಂದು ವಿಶ್ವಮಾನವ ಸಂದೇಶವನ್ನು ಸಾರಿದರು.

ರಾಷ್ಟ್ರಕವಿ ಕುವೆಂಪು ಅವರ ವಿಶ್ವಮಾನವ ಸಂದೇಶ ಮತ್ತು ಅನಿಕೇತನ ಕವನದಲ್ಲಿರುವ ಪರಿಕಲ್ಪನೆಗಳು ಮತ್ತು ಮಾನವತಾ ಮನೋವಿಜ್ಞಾನದ ಪರಿಕಲ್ಪನೆಗಳ ಒಟ್ಟು ಸಾರಾಂಶ, ಮನುಷ್ಯ ಹುಟ್ಟುವಾಗ ಒಳ್ಳೆಯವನಾಗಿ, ವಿಶ್ವಮಾನವನಾಗಿ ಹುಟ್ಟುತ್ತಾನೆ. ಅನಂತರ ಸಾಮಾಜಿಕ ಮತ್ತು ಪರಿಸರದ ಪ್ರಭಾವಗಳಿಂದಾಗಿ ಮನುಷ್ಯನ ಚೇತನಾವಸ್ಥೆ ಹಲವು ಸಂಕೋಲೆಗಳಿಂದ ಬಂಧನಕ್ಕೊಳಗಾಗಿ ಅವನು ಅಲ್ಪಮಾನವನಾಗುತ್ತಾನೆ. ಆದರೆ ವಿಶ್ವಮಾನವನಾಗುವ ಆಯ್ಕೆ ಮತ್ತು ಸ್ವಾತಂತ್ರ್ಯ ವ್ಯಕ್ತಿಗೆ ಇದೆ.

ಮನುಷ್ಯ ಜಾತಿ, ಮತದ ಮೋಹಕ್ಕೆ ಒಳಗಾಗಬಾರದು, ವ್ಯಕ್ತಿಯಲ್ಲಿರುವ ಬುದ್ಧಿಶಕ್ತಿ ಮತ್ತು ಆಲೋಚನಾ ಶಕ್ತಿಯನ್ನು ಬಳಸಿಕೊಂಡು ಜೀವನದಲ್ಲಿ ಶ್ರಮಪಡಬೇಕು. ಸ್ವಯಂ ಮತ್ತು ಲೋಕದ ಹಿತದೃಷ್ಟಿಯಿಂದ ವಿಶ್ವಮಾನವ ಪ್ರಜ್ಞೆಯನ್ನು ಬೆಳಸಿಕೊಂಡು ಮನುಜ ಮತ ಮತ್ತು ವಿಶ್ವಪಥವನ್ನು ಆಯ್ಕೆಮಾಡಿಕೊಳ್ಳಬೇಕು ಎಂಬ ಕುವೆಂಪು ಅವರ ಸಂದೇಶಗಳು ಮತ್ತು ಮಾನವತಾ ಮನೋವಿಜ್ಞಾನದ ದೃಷ್ಟಿಕೋನಗಳು ವ್ಯಕ್ತಿಯ ಬೆಳವಣಿಗೆ ಮತ್ತು ವಿಶ್ವದ ಯೋಗಕ್ಷೇಮವನ್ನು ಬಯಸುತ್ತವೆ.

ಮನೋವಿಜ್ಞಾನ ಮತ್ತು ಆಪ್ತಸಲಹೆಯ ಪ್ರಮುಖ ಉದ್ದೇಶ ಮನುಷ್ಯನ ಆತ್ಮವಿಶ್ವಾಸವನ್ನು ಹೆಚ್ಚಿಸುವುದಾಗಿರುತ್ತದೆ. ಆತ್ಮವಿಶ್ವಾಸ ಕುಗ್ಗಿರುವಂತಹ ಮನುಷ್ಯರಿಗೆ ಮನೋಶಾಸ್ತ್ರಜ್ಞರು ಮಾರ್ಗದರ್ಶನ ನೀಡಿ ಅವರಲ್ಲಿ ಪ್ರೇರೇಪಣೆಯನ್ನು ಉಂಟುಮಾಡಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತಾರೆ. ಇದೇ ರೀತಿ ಕುವೆಂಪು ಅವರು ಮನುಷ್ಯನ ಆತ್ಮ ವಿಶ್ವಾಸವನ್ನು ಹೆಚ್ಚಿಸುವ ಕುರಿತಾಗಿ ಹಲವಾರು ಕವನಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದ ಕವನ 'ಬಾನೆಡೆಗೇರು, ಓ ಆತ್ಮಪಕ್ಷಿ' ಈ ಕವನದಲ್ಲಿ ಮನೋವೈಜ್ಞಾನಿಕ ವಿಚಾರಧಾರೆಗಳು ಕಂಡುಬರುತ್ತವೆ.

ಬಾನೆಡೆಗೇರು, ಓ ಆತ್ಮಪಕ್ಷಿ
ಏಳು, ಮೇಲೇಳು! ಮತ್ತೊಮ್ಮೆ ಚಿಮ್ಮಿ ಹಾರು ಬಿತ್ತರದ ಅನಂತತೆಯೆಡೆಗೆ. ಹುಳು
ಹಿಡಿದು ಹಾಳಾಗಿರುವ ಹಳೆನೆಚ್ಚುಗಳನೆಲ್ಲ ಕಳಚಿ ಕೊಚ್ಚಿಬಿಡು. ಹೊಚ್ಚ ಹೊಸನೆಚ್ಚುಗಳ
ರೆಕ್ಕೆಯನು ಬಿಚ್ಚಿ ಬಾನೆಡೆಗೇರು, ಓ ಎನ್ನ ಆತ್ಮಪಕ್ಷಿ!
ನೂರು ಸಾರಿ ಸೋತಿದ್ದರೇನಂತೆ?
ನೂರೊಂದು ಸಾರಿ ಬಿದ್ದಿದ್ದರೇನಂತೆ?
ಸೋಲು ಗೆಲುವಿಗೆ ಮೆಟ್ಟಲು!
ಬಿದ್ದರಲ್ಲವೆ ಮರಳಿ ಏಳುವುದು!
ಬೀಳದಿದ್ದವನು ಎಂದೂ ಮೇಲೆದ್ದವನಲ್ಲ!

ಕುವೆಂಪು ಅವರು ರಚಿಸಿರುವ "ಬಾನೆಡೆಗೇರು, ಓ ಆತ್ಮ ಪಕ್ಷಿ" ಕವನದಲ್ಲಿ ಮನುಷ್ಯನ ಆತ್ಮವಿಶ್ವಾಸವನ್ನು ಹೆಚ್ಚಿಸುವ ಮನೋವೈಜ್ಞಾನಿಕ ಮಾರ್ಗದರ್ಶನವನ್ನು ಕಾಣಬಹುದು. ಕವನದಲ್ಲಿರುವ ವಸ್ತು ವಿಷಯವು ಸೋಲು ಕಂಡ ಹೃದಯಕ್ಕೆ ಸಾಂತ್ವನ ಹೇಳಿ ಆತ್ಮ ವಿಶ್ವಾಸವನ್ನು ಮೂಡಿಸುವಂತಹ ಮಾರ್ಗದರ್ಶನ ಕಂಡುಬರುತ್ತದೆ. ಕುವೆಂಪು ಅವರು ಈ ಕವಿತೆಯಲ್ಲಿ ವ್ಯಕ್ತಿಯ ಆತ್ಮ ಪ್ರಜ್ಞೆಯು ಜೀವನವನ್ನು ಸಕಾರಾತ್ಮಕ ದೃಷ್ಟಿಕೋನದಲ್ಲಿ ನೋಡಬೇಕು, ಉನ್ನತ ಮಟ್ಟದಲ್ಲಿ ಆಲೋಚಿಸಬೇಕು ಎಂದು ಪ್ರತಿಪಾದಿಸುತ್ತಾರೆ. ಸೋಲನ್ನು ಕಂಡ ಮನಸ್ಸಿಗೆ ಸೋಲು ಅಂತಿಮವಲ್ಲ, ಸೋಲು ಗೆಲುವಿನ ಅವಿಭಾಜ್ಯ ಅಂಗ, ಸೋಲು ಗೆಲುವಿನ ಮೆಟ್ಟಿಲು, ಎಷ್ಟು ಬಾರಿ ಸೋತರೇನಂತೆ ಸೋಲನ್ನು ಸ್ವೀಕರಿಸಬೇಕು. ಮನಸ್ಸು ಸೋಲಬಾರದು ಎಂದು ಸೋತ ಮನಸ್ಸಿಗೆ ಸಾಂತ್ವನ ಹೇಳಿ ಮತ್ತೆ ಗುರಿಯೆಡೆಗೆ ಪ್ರಯತ್ನಿಸಲು ಮನುಷ್ಯನಿಗೆ ಪ್ರೇರೇಪಣೆ ನೀಡಲಾಗಿದೆ.

ಸೋಲು ಮತ್ತು ಹತಾಶೆಯನ್ನು ಕಾಣುವ ಮನಸ್ಸು ಹೆದರುತ್ತದೆ ಮತ್ತು ಜರ್ಝರಿತವಾಗುತ್ತದೆ, ಭಯಗೊಂಡು ತಟಸ್ಥವಾಗುತ್ತದೆ ಎಂಬ ಮನೋವೈಜ್ಞಾನಿಕ ಅಂಶವನ್ನು ಅರಿತಿರುವ ಕವಿಯು ಸೋಲು ಮನಸ್ಸಿನ ಮೇಲೆ ಹಾನಿಮಾಡದಿರಲು ಸೋಲುನ್ನು ಗೆಲುವಾಗಿಸಿಕೊಳ್ಳುವ ಧೈರ್ಯ, ಮನೋಸ್ಥೈರ್ಯವನ್ನು ರೂಢಿಸಿಕೊಳ್ಳಬೇಕು ಎಂದು ತಿಳಿಸುತ್ತಾರೆ.

'ಹೊಚ್ಚ ಹೊಸನೆಚ್ಚುಗಳ, ರೆಕ್ಕೆಯನ್ನು ಬಿಚ್ಚಿ ಬಾನಡೆಗೇರು, ಓ ಆತ್ಮ ಪಕ್ಷಿ' ಈ ಸಾಲುಗಳಲ್ಲಿ ಕವಿಯು ಸೋಲನ್ನು ಕಂಡ ಮನಸ್ಸಿಗೆ ಮತ್ತೊಮ್ಮೆ ಪ್ರಯತ್ನಿಸು ಎಂದು ಹುರಿದುಂಬಿಸುತ್ತಿದ್ದಾರೆ. ಸಂಪೂರ್ಣ ಶಕ್ತಿಯೊಂದಿಗೆ ಮತ್ತೊಮ್ಮೆ ಚಿಮ್ಮಿ ಹಾರಿ ಪ್ರಯತ್ನಿಸು ಎಂದರೆ ಎಲ್ಲಾ ಶಕ್ತಿಯನ್ನು ಕ್ರೋಢೀಕರಿಸಿಕೊಂಡು ಪ್ರಯತ್ನಿಸು ಆಗ, ಕೊನೆಯಿಲ್ಲದ ಅನಂತತೆಯ ಎಡೆಗೆ ಯಾರೂ ಊಹಿಸಲಾಗದಂತಹ ಯಶಸ್ಸನ್ನು ಕಾಣಬಹುದು ಎಂದು ಮನಸ್ಸಿಗೆ ಸಾಂತ್ವನವನ್ನು ನೀಡುತ್ತಿದ್ದಾರೆ.

ಹುಳುಹಿಡಿದು ಹಾಳಾಗಿರುವ ಹಳೆನೆಚ್ಚುಗಳನ್ನೆಲ್ಲ ಕಳಚಿ ಕೊಚ್ಚಿಬಿಡು ಎಂಬ ಸಾಲಿನಲ್ಲಿ ಪ್ರಸ್ತುತ ಪ್ರಯೋಜನವಿಲ್ಲದ ಹಳೆ ನಂಬಿಕೆಗಳನ್ನು ತೆಗೆದುಹಾಕಿ ಹೊಸ ನಂಬಿಕೆಗಳನ್ನು ರೂಢಿಸಿಕೊಂಡು, ಸಕಾರಾತ್ಮಕ ಮನೋಪ್ರವೃತ್ತಿ ಮತ್ತು ಸಕಾರಾತ್ಮಕ ಆಲೋಚನೆಯನ್ನು ಬೆಳೆಸಿಕೊ. ಈ ಸಕಾರಾತ್ಮಕ ಚಿಂತನೆಯಿಂದ ಮತ್ತೊಮ್ಮೆ ಪ್ರಯತ್ನ ಪಟ್ಟರೆ ಖಂಡಿತವಾಗಿ ಈ ಸೋಲನ್ನು ಗೆಲ್ಲಬಹುದು. ಈ ಸಕಾರಾತ್ಮಕ ದೃಷ್ಟಿಕೋನದಲ್ಲಿ ಮನಸ್ಸೇ ನೀನು ನೋಡು ಹಾಗೂ ಸೋಲನ್ನು ಗೆಲುವಾಗಿಸಿಕೊ ಎಂದು ಮನುಷ್ಯನ ಮನಸ್ಸಿಗೆ ಕರೆಯನ್ನು ನೀಡುತ್ತಿದ್ದಾರೆ. ಮುಂದುವರೆದು ನಕಾರಾತ್ಮಕ ಚಿಂತನೆಗಳನ್ನು ತೊಡೆದುಹಾಕಿ ಸಕಾರಾತ್ಮಕ ಚಿಂತನೆಗಳನ್ನು ಬೆಳೆಸಿಕೊಳ್ಳುವಂತೆ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ.

ಸೋಲು ಒಮ್ಮೆಯಲ್ಲ ಎರಡು ಬಾರಿಯಲ್ಲ ನೂರು ಬಾರಿ ಸೋತರೇನಂತೆ ನೂರೊಂದು ಬಾರಿ ಬಿದ್ದರೇನಂತೆ ಅದು ಸಾಮಾನ್ಯ.ಸೋಲು ಗೆಲುವಿಗೆ ಮೆಟ್ಟಿಲು, ಸೋಲಿಲ್ಲದೆ ಗೆಲುವು ಸಾಧ್ಯವಿಲ್ಲ, ಸೋಲು ಎಷ್ಟು ಬಾರಿ ಬಂದರೇನಂತೆ ಮತ್ತೆ ಪ್ರಯತ್ನಿಸು. ಬಿದ್ದರಲ್ಲವೇ ಮರಳಿ ಎದ್ದೇಳುವುದು. ಯಾವ ವ್ಯಕ್ತಿ ಬೀಳುವುದಿಲ್ಲ, ಯಾವ ವ್ಯಕ್ತಿ ಸೋಲನ್ನು ಕಾಣುವುದಿಲ್ಲ, ಸೋಲನ್ನು ಅಂತಿಮವೆಂದು ಭಾವಿಸಬಾರದು. ಸೋಲನ್ನು ಗೆಲುವಿನ ಮೆಟ್ಟಿಲುಗಳಾಗಿ ಮಾಡಿಕೊಳ್ಳಬೇಕು ಎಂದು ಕವಿಯು ತಿಳಿಸುತ್ತಾರೆ.

ಜೀವನದಲ್ಲಿ ಎಲ್ಲವೂ ಸುಲಭ ಸಾಧ್ಯವಿಲ್ಲ. ಜೀವನವು ಒಂದು ಸಮರವೇ ಅಂದರೆ ಜೀವನವು ನಿತ್ಯಯುದ್ಧವೇ. ಆ ಯುದ್ಧದಲ್ಲಿ ಪ್ರತಿ ನಿತ್ಯದ ಹೋರಾಟದಲ್ಲಿ ಸೋಲು ಗೆಲುವುಗಳು ಸಾಮಾನ್ಯವಾಗಿರುತ್ತದೆ. ಹೋರಾಟ ಜೀವನದ ಚಿಹ್ನೆ. ಸೋಲು ಗೆಲುವುಗಳಿಲ್ಲದೆ ಜೀವನವಿಲ್ಲ. ಸೋಲು ಗೆಲುವುಗಳಿಂದ ಕೂಡಿದ ಜೀವನ ಆದರ್ಶ ಪ್ರಾಪ್ತಿಯ ಜೀವನ. ಈ ಸೋಲು ಗೆಲುವುಗಳನ್ನು ಸಮರ್ಪಕವಾಗಿ ನಿರ್ವಹಿಸುವ ಸಾಮರ್ಥ್ಯವನ್ನು ಹೊಂದುವುದೆ ಸಾರ್ಥಕ ಮತ್ತು ಪರಿಪೂರ್ಣ ಬದುಕು ಎಂದು ಹೇಳುತ್ತಾರೆ.

ಮಣ್ಣಿನಲ್ಲಿ ಬಿದ್ದು ಹೊರಳಿ ಬದುಕುವುದಕ್ಕಿಂತಲೂ ಬಾನಿನಲ್ಲಿ ತೇಲಿ ಹಾರಿ ಸಾಯುವುದೇ ಮೇಲು ಎಂದು ಸೋಲಿನಿಂದ ಕೊರಗುವ ಮನಸ್ಸಿಗೆ ಮಾರ್ಗದರ್ಶನವನ್ನು ನೀಡುತ್ತಾರೆ. ಒಬ್ಬ ವ್ಯಕ್ತಿಯ ಮನಸ್ಸಿನಲ್ಲಿ ಉಂಟಾಗುವ ನಕಾರಾತ್ಮಕ ಆಲೋಚನೆಗಳುನಕಾರಾತ್ಮಕ ಭಾವನೆಗಳಿಗೆ ದಾರಿ ಮಾಡಿಕೊಡುತ್ತದೆ. ಆಲೋಚನೆ ಮತ್ತು ಭಾವನೆಗಳು ನಕಾರಾತ್ಮಕವಾಗಿದ್ದಾಗ ಜೀವನದಲ್ಲಿ ಅನುಭವಗಳೂ ನಕಾರಾತ್ಮಕವಾಗಿಯೇ ಉಂಟಾಗುತ್ತದೆ. ಬದುಕಿನಲ್ಲಿ ಮನುಷ್ಯ ಆಶಾವಾದಿಯಾಗಿರಬೇಕು ಎಂಬ ಆಶಯವನ್ನು ಈ ಕವನವು ತಿಳಿಸುತ್ತದೆ.

ಮನುಷ್ಯನು ಜೀವನದಲ್ಲಿ ಸೋತ ಅನುಭವಗಳಿಂದ ಕೊರಗುವ ಮೂಲಕ ಜೀವನ ಪರ್ಯಂತ ಸಾಯುವ ಮನಸ್ಥಿತಿಯನ್ನು ಹೊಂದಬಾರದು. ಇದರಿಂದಾಗಿ ಬದುಕು ಅರ್ಥಕಳೆದುಕೊಳ್ಳುತ್ತದೆ. ಆದ್ದರಿಂದ ಮನುಷ್ಯ ನಿರಂತರವಾಗಿ ಗುರಿಯೆಡೆಗೆ ಹಾರುತ್ತಿರಬೇಕು. ಅದೇ ಜೀವನದ ಅಂತಿಮ ಗುರಿಯಾಗಬೇಕು. ಈ ನಿರಂತರ ಪ್ರಯತ್ನದಿಂದ ಜೀವನದ ಅಂತ್ಯವಾದರೂ ಸಹ ಜೀವನಕ್ಕೊಂದು ಸಾರ್ಥಕತೆ ಸಿಗುತ್ತದೆ ಎಂದು ತಿಳಿಸುತ್ತಾರೆ.

ಕುವೆಂಪು ಅವರು "ತನುವು ನಿನ್ನದು" ಕವನದಲ್ಲಿ ವ್ಯಕ್ತಿ ಜೀವನದ ಮೇಲೆ ಪ್ರಭಾವ ಬೀರುವ "ಬಾಹ್ಯ ನಿಯಂತ್ರಣ ಶಕ್ತಿ" ಕುರಿತಾದ ಮನೋವೈಜ್ಞಾನಿಕ ಪರಿಕಲ್ಪನೆಯ ಬಗೆಗೆ ಮನೋಜ್ಞವಾಗಿ ತಿಳಿಸಿಕೊಟ್ಟಿದ್ದಾರೆ.

ತನುವು ನಿನ್ನದು
ತನುವು ನಿನ್ನದು, ಮನವು ನಿನ್ನದು
ಎನ್ನ ಜೀವನ ಧನವು ನಿನ್ನದು
ನಾನು ನಿನ್ನವನೆಂಬ ಹೆಮ್ಮೆಯ
ಋಣವು ಮಾತ್ರವೇ ನನ್ನದು!
ನೀನು ಹೊಳೆದರೆ ನಾನು ಹೊಳೆವೆನು;
ನೀನು ಬೆಳೆದರೆ ನಾನು ಬೆಳೆವೆನು;
ನನ್ನ ಹರಣದ ಹರಣ ನೀನು
ನನ್ನ ಮರಣದ ಮರಣವು!

ಮನೋವಿಜ್ಞಾನದ ಪ್ರಕಾರ ಮನುಷ್ಯನ ಜೀವನದ ಎಲ್ಲಾ ಕ್ರಿಯೆಗಳನ್ನು ಆಂತರಿಕ ಶಕ್ತಿ ಮತ್ತು ಬಾಹ್ಯ ಶಕ್ತಿ ಎಂಬ ಎರಡು ನಿಯಂತ್ರಣ ಶಕ್ತಿಗಳು ನಿರ್ಧರಿಸುತ್ತವೆ. ವ್ಯಕ್ತಿಯೊಬ್ಬನ ಯಶಸ್ಸಿಗೆ ಆತನಲ್ಲಿರುವ ಪರಿಶ್ರಮ. ಆತ್ಮವಿಶ್ವಾಸ – ಪ್ರಯತ್ನಗಳೇ ಮೂಲವಾದ ಕಾರಣವಾದರೆ, ಅದು ಅವನ ಆಂತರಿಕ ನಿಯಂತ್ರಕ ಶಕ್ತಿಯ ಫಲ ಎಂದರ್ಥ. ಹಾಗೆಯೇ ಮನುಷ್ಯನ ಸಾಧನೆ ಮತ್ತು ಯಶಸ್ಸು ಮುಂತಾದವುಗಳಿಗೆ ಆತನ ಹಣೆಬರಹ, ಅದೃಷ್ಟ, ನಂಬಿಕೆ, ಅನನ್ಯ ಶಕ್ತಿಗಳು, ಅಗೋಚರಶಕ್ತಿ, ದೈವಶಕ್ತಿ ಮೂಲಕಾರಣವಾದರೆ ಅದು ಮನುಷ್ಯನ ಬಾಹ್ಯನಿಯಂತ್ರಣ ಶಕ್ತಿಯ ಫಲವಾಗಿ ಜೀವನದಲ್ಲಿ ಯಶಸ್ಸನ್ನು ಸಾಧಿಸಿದ್ದಾನೆ ಎಂದು ಅರ್ಥ. ಆದಕಾರಣ ಜೀವನದಲ್ಲಿ ಪ್ರತಿಯೊಬ್ಬರು ತಮ್ಮ ಜೀವನದ ಕ್ರಿಯೆಗಳ ಯಶಸ್ಸಿಗೆ ಆಂತರಿಕ ನಿಯಂತ್ರಣ ಶಕ್ತಿ ಅಥವಾ ಬಾಹ್ಯ ನಿಯಂತ್ರಣ ಶಕ್ತಿ ಕಾರಣವೆಂದು ನಂಬಿ ಆಶಕ್ತಿಗಳಿಗೆ ಸಮರ್ಪಣಭಾವವನ್ನು ಅಭಿವ್ಯಕ್ತಪಡಿಸುತ್ತಾರೆ.

ಕುವೆಂಪು ಅವರ 'ತನುವು ನಿನ್ನದು' ಕವನದಲ್ಲಿ ಬಾಹ್ಯ ನಿಯಂತ್ರಣ ಶಕ್ತಿಗೆ ಸಮರ್ಪಣಭಾವವನ್ನು ಅಭಿವ್ಯಕ್ತಪಡಿಸಿ ಜೀವನದಲ್ಲಿ ದೈಹಿಕ, ಮಾನಸಿಕ, ಬೌದ್ಧಿಕ ಬೆಳವಣಿಗೆ ಮತ್ತು ಯಶಸ್ಸಿಗೆ ಬಾಹ್ಯ ನಿಯಂತ್ರಣ ಶಕ್ತಿಯೇ ಕಾರಣ.ಆದರೆ ಅದೆಲ್ಲವೂ ನನ್ನದು, ನಾನು ಎಂದು ಹೇಳಿಕೊಳ್ಳುವ ಋಣವು ಮಾತ್ರ ನನ್ನದು ಎಂದು ತಿಳಿಸುತ್ತಾರೆ. ಬಾಹ್ಯದ ಅನಂತ ಶಕ್ತಿ, ಬೆಳಕು ಜೀವನದ ಮೇಲೆ ಬಿದ್ದರೆ ನನ್ನ ಬದುಕು ಬೆಳಕಾಗುತ್ತದೆ. ಬಾಹ್ಯ ಚೈತನ್ಯ ಶಕ್ತಿಯೇ ನನ್ನ ಶಕ್ತಿಯ ಜೀವನದ ಚೈತನ್ಯಶಕ್ತಿ ಎಂದು

ಪ್ರತಿಪಾದಿಸುತ್ತಾರೆ. ನನ್ನ ಮನಸ್ಸಿನ ಬುದ್ಧಿಶಕ್ತಿ, ನನ್ನ ಹೃದಯದ ಭಾವದಲ್ಲಿ ಆಧ್ಯಾತ್ಮಿಕ ಶಕ್ತಿ ಮತ್ತು ನನ್ನ ಮೇಲೆ ಪ್ರಭಾವ ಬೀರುವ ನೀನೆ ಮಾಯಮೋಹ ಶಕ್ತಿಯು ಎಂದು ಅಗೋಚರ ಶಕ್ತಿಗೆ ಸಮರ್ಪಣಭಾವವನ್ನು ವ್ಯಕ್ತಪಡಿಸುತ್ತಾರೆ. ಅಮೂರ್ತ, ಅನಂತ, ಅಗೋಚರ ಶಕ್ತಿಯ ಕೃಪೆಯಿಂದಲೇ ಜೀವನಕ್ಕೆ ಮುಕ್ತಿ ಎಂದು ಪ್ರತಿಪಾದಿಸುತ್ತಾರೆ.

ಸಮಾರೋಪ

ಕುವೆಂಪು ಅವರು ಮನೋವಿಜ್ಞಾನವನ್ನು ಅಧ್ಯಯನ ಮಾಡಿ ಅಪಾರವಾದ ಜ್ಞಾನವನ್ನು ಹೊಂದಿದ್ದರು. ಭಾರತೀಯ ತತ್ವಶಾಸ್ತ್ರ ಮತ್ತು ಮನೋವಿಜ್ಞಾನ ಕುರಿತಾಗಿ ಹಲವಾರು ವಿಚಾರಧಾರೆಗಳನ್ನು ಭಾಷಣಗಳ ಮೂಲಕ ಮಂಡಿಸಿದ್ದಾರೆ.ಅವರ ಚಿಂತನೆಗಳಲ್ಲಿ ದರ್ಶನ–ತತ್ವಜ್ಞಾನದ ಜೊತೆಗೆ ಮನೋವೈಜ್ಞಾನಿಕ ದೃಷ್ಟಿಯೂ ವಿಪುಲವಾಗಿ ವಿಸ್ತರಿಸಿಕೊಂಡಿದೆ. ಅವರ ಕಥೆ, ಕಾದಂಬರಿ, ನಾಟಕ, ಮಹಾಕಾವ್ಯ ಮತ್ತು ಕವನಗಳನ್ನು ಮನೋವೈಜ್ಞಾನಿಕ ದೃಷ್ಟಿಕೋನದಲ್ಲಿ ಅವಲೋಕಿಸಿದಾಗ ಅವರ ಸಾಹಿತ್ಯದಲ್ಲಿ ಮನೋವೈಜ್ಞಾನಿಕ ವಿಚಾರಧಾರೆಗಳು ಕಂಡುಬರುತ್ತವೆ. ಪ್ರಸ್ತುತ ಲೇಖನದಲ್ಲಿ ಕುವೆಂಪು ಅವರು ರಚಿಸಿರುವ ಅನಿಕೇತನ, ತನುವು ನಿನ್ನದು ಮತ್ತು ಬಾನೆಡೆಗೇರು, ಓ ಆತ್ಮಪಕ್ಷಿಕವನಗಳಲ್ಲಿ ಕಂಡುಬರುವ ಮನೋವೈಜ್ಞಾನಿಕ ವಿಚಾರಧಾರೆಗಳನ್ನು ಪ್ರಸ್ತುತ ಪಡಿಸಲಾಗಿದೆ.

ಪರಾಮರ್ಶನ ಗ್ರಂಥಗಳು

೧. ಶ್ರೀ. ಕುವೆಂಪು (೧೯೬೩), ಅನಿಕೇತನ, ಕವನಸಂಕಲನ, ಉದಯರವಿ ಪ್ರಕಾಶನ, ಮೈಸೂರು

೨. ಶ್ರೀ. ಕುವೆಂಪು (೧೯೭೧) ಮನುಜಮತ ವಿಶ್ವಪಥ (ಪ್ರಬಂಧಗಳು), ಉದಯರವಿ ಪ್ರಕಾಶನ, ಮೈಸೂರು

೩. ದೇ.ಜವರೇಗೌಡ (೧೯೭೬) "ರಾಷ್ಟ್ರಕವಿ ಭಾಷಣಗಳು" ಸಹ್ಯಾದ್ರಿ ಪ್ರಕಾಶನ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮೈಸೂರು.

೪. ಮ್ಯಾಸ್ಲೋವ್. ಎ. ಎಚ್. (೧೯೭೦) "ಮೋಟೊವೇಷನ್ ಅಂಡ್ ಪರ್ಸನಾಲಿಟಿ" (ಎರಡನೇ ಆವೃತ್ತಿ) ಹಾರ್ಪರ್ ಅಂಡ್ ರೋ ಪ್ರಕಾಶನ ನ್ಯೂಯಾರ್ಕ್.

೫. ರೋಜರ್ಸ್ (೧೯೬೯) ಫ್ರೀಡಮ್ ಟು ಲರ್ನ್, ಕೊಲಂಬಸ್ ಒ.ಎಚ್., ಮೆರಿಲ್ ಪ್ರಕಾಶನ, ನ್ಯೂಯಾರ್ಕ್.

೬. ಕಾರ್ಲ್‌ಯೂಂಗ್ (೧೯೪೧) "ಸೈಕಾಲಜಿ ಅಂಡ್ ಲಿಟರೇಚರ್" ದ ಕ್ರಿಯೆಟಿವ್ ಪ್ರೊಸೇಸ್ 'ಎ' ಸಿಂಪೋಜಿಯಮ್, ಬ್ರಿವ್‌ಸ್ಟರ್ ಗಿಸ್ಲನ್ (ಸಂಪಾದಕರು)

೭. ಕುವೆಂಪು ಸಮಗ್ರ ಕಾವ್ಯ ಸಂಪುಟ– ೧ (೨೦೦೦) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

ಸಾಹಿತ್ಯ ಮತ್ತು ಮನೋವಿಜ್ಞಾನದ ಅಂತಃಸಂಬಂಧ : ಹರಿದಾಸ ಸಾಹಿತ್ಯದ ಮನೋವೈಜ್ಞಾನಿಕ ವಿಶ್ಲೇಷಣೆ

ಡಾ. ರಮಾನಂದ ಕೆ.ವಿ.

ಕನ್ನಡ ಸಹಪ್ರಾಧ್ಯಾಪಕರು, ಮಹಾರಾಣಿ ಲಕ್ಷ್ಮಿಅಮ್ಮಣ್ಣಿ ಮಹಿಳಾ ಕಾಲೇಜು, ಸ್ವಾಯತ್ತ ಮಲ್ಲೇಶ್ವರಂ,
ಬೆಂಗಳೂರು–೧೨, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮುಕ್ತಗಂಗೋತ್ರಿ, ಮೈಸೂರು.

ಸಾಹಿತ್ಯ ಮತ್ತು ಮನೋವಿಜ್ಞಾನದ ಸಂಬಂಧ

ಸಾಹಿತ್ಯ ಮತ್ತು ಮನೋವಿಜ್ಞಾನ ಎರಡೂ ಮನುಷ್ಯನ ಆಂತರಿಕ ಲೋಕವನ್ನು ಅಧ್ಯಯನ ಮಾಡುವ ಪರಸ್ಪರ ಪೂರಕವಾದ ಕ್ಷೇತ್ರಗಳಾಗಿವೆ. ಸಾಹಿತ್ಯವು ಮನುಷ್ಯನ ಭಾವನೆ, ಕಲ್ಪನೆ, ನೋವು–ನಲಿವು, ಸುಖ –ದುಃಖ ಮತ್ತು ಮೌಲ್ಯಗಳ ಜೀವಂತ ಪ್ರತಿಬಿಂಬವಾಗಿದ್ದರೆ, ಮನೋವಿಜ್ಞಾನವು ಈ ಭಾವನೆ, ಯೋಚನೆ ಮತ್ತು ವರ್ತನೆಗಳ ವೈಜ್ಞಾನಿಕ ವಿಶ್ಲೇಷಣೆಯಾಗಿದೆ. ಕವಿ ಮತ್ತು ಲೇಖಕನು ತಮ್ಮ ಅನುಭವಗಳನ್ನು ಅಥವಾ ಕಲ್ಪನೆಗಳನ್ನು ಪದಗಳಲ್ಲಿ ಅಭಿವ್ಯಕ್ತಿಸಿ ಸಾಹಿತ್ಯವಾದರೆ, ಓದುಗನಿಗೆ ತನ್ನೊಳಗಿನ ಒತ್ತಡದಿಂದ ಹೊರಬಂದು, ಭಾವನೆಗಳನ್ನು ಶುದ್ಧಗೊಳಿಸುವ ಮತ್ತು ಮಾನಸಿಕ ಶಾಂತಿಯನ್ನು ಅನುಭವಿಸುವ ಮನೋಚಿಕಿತ್ಸೆಯಂತೆ ಅದು ಕೆಲಸ ಮಾಡುತ್ತದೆ. ಹೀಗಾಗಿ ಸಾಹಿತ್ಯ ಮನುಷ್ಯನ ಮನಸ್ಸಿನ ಕನ್ನಡಿಯಾಗಿದ್ದರೆ, ಮನೋವಿಜ್ಞಾನ ಅದರ ಆಂತರಿಕ ರಚನೆ ಮತ್ತು ಪ್ರಕ್ರಿಯೆಗಳ ಅಧ್ಯಯನ ಶಾಖೆಯಾಗುತ್ತದೆ.

ಒಬ್ಬ ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಾಹಿತ್ಯ ಮುಖ್ಯ ಪಾತ್ರ ವಹಿಸುತ್ತದೆ. ಸಾಹಿತ್ಯವನ್ನು ಅಧ್ಯಯನ ಮಾಡುವವನು ತನಗೆ ಅರಿವಿಲ್ಲದೆ ತನ್ನೊಳಗೆ ಪರಿವರ್ತನೆಗೊಳಗಾಗುತ್ತಾನೆ. ಏಕೆಂದರೆ, ಸಾಹಿತ್ಯ ಮನುಷ್ಯನ ಭಾವನೆ, ಆಲೋಚನೆ ಮತ್ತು ಮೌಲ್ಯಗಳನ್ನು ಸ್ಪರ್ಶಿಸುವ ಸೂಕ್ಷ್ಮ ಮನೋವೈಜ್ಞಾನಿಕ ಪ್ರಕ್ರಿಯೆ. ಕಥೆ, ಕವನ, ಕೀರ್ತನೆಗಳ ಪಾತ್ರಗಳು ಮತ್ತು ಘಟನೆಗಳು ವ್ಯಕ್ತಿಯ ಸುಪ್ತ ಮನಸ್ಸಿನಲ್ಲಿ ಹೊಸ ನ್ಯೂರಲ್ ಪಾಥ್‌ವೇಸ್(Neural pathways) ನಿರ್ಮಿಸಿ, ವರ್ತನೆ, ಭಾವನೆ ಮತ್ತು ಜೀವನದ ದೃಷ್ಟಿಕೋನವನ್ನು ಬದಲಾಯಿಸುತ್ತವೆ. ಈ ಕಾರಣಕ್ಕೆ ಸಾಹಿತ್ಯವು ಕೇವಲ ಓದಿನ ಅನುಭವವಲ್ಲ; ಅದು ವ್ಯಕ್ತಿತ್ವವನ್ನು ರೂಪುಗೊಳಿಸುವ ಮತ್ತು ಮನಸ್ಸನ್ನು ಪರಿಪಕ್ವಗೊಳಿಸುವ ಮನೋವೈಜ್ಞಾನಿಕ ಶಿಕ್ಷಣವಾಗಿದೆ.

ಭಕ್ತಿ ಸಾಹಿತ್ಯದಲ್ಲಿ ಮನೋವಿಜ್ಞಾನದ ದೃಷ್ಟಿಕೋನ

ಭಕ್ತಿ ಸಾಹಿತ್ಯವು ಮನುಷ್ಯನ ಅಂತರಾಳವನ್ನು ಶುದ್ಧೀಕರಿಸುತ್ತದೆ. ಇದು ಕೇವಲ ಧಾರ್ಮಿಕ ಅಭ್ಯಾಸವಲ್ಲ –ಮನೋವೈಜ್ಞಾನಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಚಿಕಿತ್ಸೆಯೂ ಆಗಿದೆ. ಭಕ್ತಿಕಾವ್ಯವು ಸಕಾರಾತ್ಮಕ ಭಾವನೆ, ಶರಣಾಗತಿ, ಭಯನಿವಾರಣೆ, ಸಮಚಿತ್ತತೆ, ಕೃತಜ್ಞತೆ, ಕರುಣೆ, ಜೀವನ ಮೌಲ್ಯಗಳು, ಅರ್ಥಪೂರ್ಣ ಜೀವನವನ್ನು ಮನುಷ್ಯನೊಳಗೆ ಬೇರೂರಿಸುತ್ತದೆ. ವಿಶೇಷವಾಗಿ ಕೀರ್ತನೆಗಳನ್ನು ಪುನರಾವರ್ತನೆ ಮಾಡುವುದರಿಂದ ಮನಸ್ಸನ್ನು ಏಕಾಗ್ರಗೊಳಿಸಿ ಒತ್ತಡವನ್ನು ಕಡಿಮೆ ಮಾಡುವ

ಮನೋಚಿಕಿತ್ಸಾತ್ಮಕ ಶಕ್ತಿ ಹೊಂದಿದೆ. ಶ್ರವಣ, ಪಠಣ ಮತ್ತು ಚಿಂತನೆ ಈ ಮೂರರ ಮೂಲಕ ಮನಸ್ಸು ಶುದ್ಧಗೊಳ್ಳುತ್ತದೆ. ಉದಾಹರಣೆಗೆ ಕೋಪ, ದ್ವೇಷ, ಆತಂಕ ಇಂತಹ ಭಾವನೆಗಳನ್ನು ಶಾಂತಗೊಳಿಸುತ್ತದೆ.

ಹರಿದಾಸ ಸಾಹಿತ್ಯದ ಭಕ್ತಿ ಕೀರ್ತನೆಗಳ ಸಂದೇಶಗಳು ಜೀವನಕ್ಕೆ ಒಂದು ಶಕ್ತಿ, ಮನೋಬಲ ಹಾಗೂ ಮಾರ್ಗದರ್ಶನವನ್ನು ನೀಡುತ್ತದೆ. ಭಕ್ತಿ ಸಾಹಿತ್ಯ ಜೀವನದಲ್ಲಿ ಅತಿಯಾದ ಆಸೆ, ಅಪೇಕ್ಷೆಯನ್ನು (Expectation) ಕಡಿಮೆ ಮಾಡಿ, ಸ್ವೀಕಾರ ಮನೋಭಾವವನ್ನು (Acceptance) ಹೆಚ್ಚಿಸುತ್ತದೆ. ಶರಣಾಗತ ಭಾವವು ಅಹಂಕಾರ, ತಾನೇ ತಾನಾಗಿರುವ ಒತ್ತಡ, ನಿತ್ಯದ ಚಿಂತೆಗಳನ್ನು ಕಡಿಮೆ ಮಾಡುತ್ತದೆ. ಮನವ ಶೋಧಿಸಬೇಕು ನಿತ್ಯ, ಅನುದಿನ ಮಾಡುವ ಪಾಪಪುಣ್ಯದ ವೆಚ್ಚ, ಇಂತಹ ದಾಸರ ಅನೇಕ ಕೀರ್ತನೆಗಳು ಮನುಷ್ಯ ತನ್ನನ್ನು ತಾನು ಸ್ವವಿಮರ್ಶೆ ಮಾಡಿಕೊಂಡು, ತಪ್ಪುಗಳನ್ನು ತಿದ್ದಿಕೊಂಡು, ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಭಕ್ತಿ ಸಾಹಿತ್ಯವು ಮನುಷ್ಯನ ಒಳಗಿನ ದೈವತ್ವವನ್ನು ಹೊರತೆಗೆಯಲು ಸಹಾಯ ಮಾಡುತ್ತದೆ. ಮುಖ್ಯವಾಗಿದಯೆ, ಧರ್ಮ, ಶಾಂತಿ, ಕರುಣೆ ಇವೆಲ್ಲವನ್ನೂ ಜಾಗೃತಗೊಳಿಸುತ್ತದೆ.

ಹರಿದಾಸ ಸಾಹಿತ್ಯದ ಮನೋವೈಜ್ಞಾನಿಕ ಆಯಾಮ

ಕನ್ನಡ ಸಾಹಿತ್ಯದ ವೈವಿಧ್ಯಗಳಲ್ಲಿ ಒಂದಾದ ಹರಿದಾಸ ಸಾಹಿತ್ಯವು ನರಹರಿತೀರ್ಥರಿಂದ ಪ್ರಾರಂಭವಾಗಿ, ಶ್ರೀಪಾದರಾಜ ಮತ್ತು ವ್ಯಾಸರಾಜರಿಂದ ವಿಸ್ತೃತಗೊಂಡು ಪುರಂದರ, ಕನಕ, ವಿಜಯ, ಗೋಪಾಲ ಮೊದಲಾದ ಹರಿದಾಸರಿಂದ ಸಮೃದ್ಧಗೊಂಡಿದೆ. ಭಕ್ತಿ, ನೈತಿಕತೆ ಮತ್ತು ಆತ್ಮೋನ್ನತಿಯ ಸಂದೇಶಗಳನ್ನು ಜನಸಾಮಾನ್ಯರ ಮನಸ್ಸಿಗೆ ಹತ್ತಿರವಾಗುವ ಭಾಷೆಯಲ್ಲಿ ನೀಡಿದರು. ವಿಶೇಷವಾಗಿ ಹರಿದಾಸರು ಬಳಸುವ ಸರಳ ಕನ್ನಡಭಾಷೆ, ಜೀವಂತ ರೂಪಕಗಳು ಮತ್ತು ಮನಸ್ಸಿನ ತುಮುಲಗಳು, ದುಃಖಗಳನ್ನು ಸಾಂತ್ವನಗೊಳಿಸುವ ಮೂಲಕ ದಾಸ ಸಾಹಿತ್ಯವು ದಾಸ ಸಾಹಿತ್ಯ ಮನೋವೈಜ್ಞಾನಿಕ ಎಂದೇ ಪರಿಗಣಿಸಲ್ಪಟ್ಟಿದೆ. ಅಹಂಕಾರ, ಲೋಭ, ಭಯ, ದುಃಖ ಮುಂತಾದ ಮಾನಸಿಕ–ಸಾಮಾಜಿಕ ಸಮಸ್ಯೆಗಳಿಗೆ ಭಕ್ತಿ, ಶರಣಾಗತಿ ಹಾಗೂ ಸಮಚಿತ್ತತೆಯ ಮೂಲಕ ಪರಿಹಾರಗಳನ್ನು ಸೂಚಿಸಿದೆ. ಹರಿದಾಸರ ಕೀರ್ತನೆಗಳು ಮನಃಶಾಂತಿ, ಅಂತರಿಕ ಬದಲಾವಣೆ ಮತ್ತು ಅರ್ಥಪೂರ್ಣ ಜೀವನದತ್ತ ದಾರಿ ತೋರಿಸುತ್ತವೆ. ದಾಸಸಾಹಿತ್ಯವು ಕಲೆ ಮತ್ತು ವಿಜ್ಞಾನದ ಸಮನ್ವಯವಾಗಿದ್ದು, ಮನುಷ್ಯನ ಮನಸ್ಸಿನ ಭಾವನೆ, ನೈತಿಕತೆ, ಆತ್ಮಪರಿಶೀಲನೆ ಮತ್ತು ಆಧ್ಯಾತ್ಮಿಕ ಶಾಂತಿಯ ಅನನ್ಯ ಮನೋವೈಜ್ಞಾನಿಕ ಆಯಾಮಗಳನ್ನು ಅನಾವರಣಗೊಳಿಸುವ ವಿಶಿಷ್ಟ ಪರಂಪರೆಯಾಗಿದೆ.

ಮನೋವಿಜ್ಞಾನ

ಮನೋವಿಜ್ಞಾನದ ದೃಷ್ಟಿಯಲ್ಲಿ ಮಾತುಗಳು ಕೇವಲ ಶಬ್ದಗಳಲ್ಲ; ಅವು ನೆನಪು, ನಂಬಿಕೆ ಮತ್ತು ನ್ಯೂರೋ–ಪಾತ್‌ವೇಗಳನ್ನು ರೂಪಿಸುವ ಶಕ್ತಿಶಾಲಿ ಸಾಧನಗಳು. ಒಂದು ಮಾತು ಅಥವಾ ವಾಕ್ಯವನ್ನು ನಾವು ಮತ್ತೆ ಮತ್ತೆ ಬಳಸಿದಾಗ ವ್ಯಕ್ತಿಯ ನ್ಯೂರಲ್ ಪಾತ್‌ವೇಗಳು ದೃಢವಾಗುತ್ತವೆ. ಇದೇ ಕಾರಣಕ್ಕೆ, ಸಕಾರಾತ್ಮಕ ದೃಢವಾಕ್ಯಗಳನ್ನು (Positive affirmations) ನಿರಂತರವಾಗಿ ಪುನರಾವರ್ತನೆ ಮಾಡಿದರೆ, ಮನಸ್ಸಿನ ಸಕಾರಾತ್ಮಕ ಬದಲಾವಣೆಯಾಗುತ್ತದೆ. ಇದು ಆಧುನಿಕ ವಿಜ್ಞಾನದಲ್ಲಿ ನ್ಯೂರೋ–ಪ್ಲಾಸ್ಟಿಸಿಟಿ ಎಂದು ಕರೆಯಲ್ಪಡುವ ಮನಸ್ಸಿನ ಪುನರ್‌ರಚನೆಯ ಶಕ್ತಿ. ಮನಸ್ಸು ತನ್ನನ್ನು ತಾನೇ ಹೊಸದಾಗಿ ಕಟ್ಟಿಕೊಳ್ಳುವ ಸಾಮರ್ಥ್ಯ ಇದಾಗಿದೆ.

"ಆಚಾರವಿಲ್ಲದ ನಾಲಿಗೆ ನಿನ್ನ
ನೀಚ ಬುದ್ದಿಯ ಬಿಡು ನಾಲಿಗೆ ॥
ವಿಚಾರವಿಲ್ಲದೆ ಪರರದೂಷಿಸುವುದಕ್ಕೆ
ಚಾಚಿಕೊಂಡಿರುವಂತ ನಾಲಿಗೆ**"**.

ಇಂತಹ ಕೀರ್ತನೆಯನ್ನು ಮತ್ತೆ ಮತ್ತೆ ಕೇಳುವುದರ, ಹಾಡುವುದರ ಹಾಗೂ ಮನನ ಮಾಡುವುದರ ಮೂಲಕ ಹೊಸ ನ್ಯೂರೋ–ಪಾತ್‌ವೇಗಳನ್ನು ರೂಪಿಸಲು ಸಹಾಯ ಮಾಡುತ್ತದೆ. ಏಕೆಂದರೆ ಹಾಡಿನ ಪದಗಳು ಮನಸ್ಸಿನಲ್ಲಿ ಆಳವಾಗಿ ನಾಟಿಕೊಳ್ಳುತ್ತವೆ. ಹಾಗೂ ಅಗತ್ಯವಾದ ಸಂದರ್ಭದಲ್ಲಿ ನಮ್ಮ ವರ್ತನೆಯನ್ನು ನಿಯಂತ್ರಿಸುವ "ಒಳಗಿನ ಮಾತು (Inner voice) ಆಗಿ ಕೆಲಸ ಮಾಡುತ್ತವೆ. ನಾವು ತಪ್ಪು ಮಾಡಲು ಹೊರಟಾಗ ಅದು ನಮ್ಮನ್ನು ಜಾಗೃತಗೊಳಿಸುತ್ತದೆ.

ಈ ಆಂತರಿಕ ಪ್ರಶ್ನೆಗಳು (Impulsive reaction) ತಡೆದು, ಮನಸ್ಸಿನಲ್ಲಿ ಜಾಗೃತಿಯನ್ನು (Self-regulation) ಉಂಟು ಮಾಡುತ್ತದೆ. ಇದರಿಂದ ಮಾತಿನಲ್ಲಿ ಸಂಯಮ ಬರುತ್ತದೆ ಮತ್ತು ವರ್ತನೆಯಲ್ಲಿ ಸಕಾರಾತ್ಮಕ ಬದಲಾವಣೆ ಪ್ರಾರಂಭವಾಗುತ್ತದೆ.

ಭಯ–ಆತಂಕ ನಿವಾರಣೆ :

"ಸಕಲ ಗ್ರಹಬಲ ನೀನೆ ಸರಸಿಜಾಕ್ಷ"
"ನಂಬಿ ಕೆಟ್ಟವರಿಲ್ಲವೋ ರಂಗಯ್ಯನ ನಂಬದೆ ಕೆಟ್ಟರೆ ಕೆಡಲಿ"
"ಕೃಷ್ಣ ಕೃಷ್ಣ ಕೃಷ್ಣಎಂದು ಮೂರು ಬಾರಿ ನೆನೆಯಿರೋ
ಸಂತುಷ್ಟನಾಗಿ ಮಿಕ್ಕ ಭಾರ ಹೊರುವನು"
"ರಾಮ ರಾಮ ಎಂಬೆರಡಕ್ಷರ
ಪ್ರೇಮದಿ ಸಲಹಿತು ಸುಜನರನು"

ಇಂತಹ ಹರಿದಾಸರ ನೂರಾರು ಕೀರ್ತನೆಗಳಲ್ಲಿ ದೇವರ ಮೇಲಿನ ಅಚಲವಾದ ನಂಬಿಕೆಯನ್ನು ಹೆಚ್ಚಿಸಿ, ಭಯ ಮತ್ತು ಆತಂಕವನ್ನು ದೂರಮಾಡುತ್ತದೆ. ದೈವಭಕ್ತಿಯಿಂದ ಮನಸ್ಸಿಗೆ ಬರುವ ಭದ್ರತೆಯ ಭಾವವನ್ನು ಸ್ಪಷ್ಟಪಡಿಸುತ್ತದೆ. ಮನೋವಿಜ್ಞಾನದಲ್ಲಿ 'ಸುರಕ್ಷತೆ' (Security need) ಒಂದು ಮೂಲಭೂತ ಅಗತ್ಯ. ಭಕ್ತಿ ಎಂಬುದು ಈ ಅಗತ್ಯವನ್ನು ಪೂರೈಸುವ ಮೂಲಕ ಅಸ್ಥಿರತೆ, ಚಿಂತೆ, ಅನಿಶ್ಚಿತತೆಯಿಂದ ಮನಸ್ಸಿಗೆ ಮುಕ್ತತೆಯನ್ನು ನೀಡುತ್ತದೆ. ಜೀವನದಲ್ಲಿ ಭರವಸೆ ಭಾವನಾತ್ಮಕ ಸಮತೋಲನಕ್ಕೆ ಕಾರಣವಾಗುತ್ತದೆ.

ಆತ್ಮ ಪರಿಶೀಲನೆ (Self-reflection)

"ಕರುಣಿಸೊ ರಂಗ ಕರುಣಿಸೋ
ಹಗಲು ಇರುಳು ನಿನ್ನ ಸ್ಮರಣೆ ಮರೆಯದಂತೆ"

ಇನ್ನೂ ಮೊದಲಾದ ಹರಿದಾಸ ಕೀರ್ತನೆಗಳಲ್ಲಿ ಮನುಷ್ಯನು ತನ್ನ ದೌರ್ಬಲ್ಯಗಳು, ತಪ್ಪುಗಳು, ಅಹಂಕಾರಗಳನ್ನು ಎದುರಿಸಲು ಪ್ರೇರೇಪಿಸುತ್ತದೆ. ಸ್ವಯಂಜಾಗೃತಿ (Self-awareness) ಅನ್ನು ಹೆಚ್ಚಿಸಿ ವ್ಯಕ್ತಿತ್ವ ಪರಿಷ್ಕಾರಕ್ಕೆ ಅಗತ್ಯವಾದ ಜಾಗೃತಿಯನ್ನು ಸೃಷ್ಟಿಸುತ್ತದೆ. ಮನುಷ್ಯನು ತನ್ನ ಮನಸ್ಸಿನ ಕತ್ತಲೆಯನ್ನು ಒಪ್ಪಿಕೊಳ್ಳುವಾಗಲೇ ಬೆಳಕು ಕಾಣಲು ಸಾಧ್ಯ. ಈ ಪರಿವರ್ತನೆಯನ್ನು ದಾಸಸಾಹಿತ್ಯ ನಿಸ್ಸಂದೇಹವಾಗಿ ಉತ್ತೇಜಿಸುತ್ತದೆ.

ನೈತಿಕ–ಧಾರ್ಮಿಕ ಮೌಲ್ಯಗಳ ಮನೋವಿಜ್ಞಾನ :

"ಸತ್ಯವಂತರ ಸಂಗವಿರಲುತೀರ್ಥವ್ಯಾತಕೆ
ನಿತ್ಯಜ್ಞಾನಿಯಾದ ಮೇಲೆ ಚಿಂತೆಯೇತಕೆ."
"ಹೆತ್ತತಂದೆ ತಾಯಿಗಳ ಚಿತ್ತವ ನೋಯಿಸಿ
ಜಪ ಹತ್ತು ಸಾವಿರ ಮಾಡಲು ಫಲವೇನು.

ಇಂತಹ ಹರಿದಾಸ ಕೀರ್ತನೆಗಳಲ್ಲಿ ಸತ್ಯ, ಅಹಿಂಸೆ, ವಿನಯ, ದಯೆ, ಕರ್ತವ್ಯ ಇವುಗಳು ವ್ಯಕ್ತಿತ್ವದ ಗಟ್ಟಿತನವನ್ನು ರೂಪಿಸುವ ಆಧ್ಯಾತ್ಮಿಕ ಮನೋವಿಜ್ಞಾನಾತ್ಮಕ ಮೌಲ್ಯಗಳು. ಸ್ವೀಕಾರದ ಮನೋವಿಜ್ಞಾನ (Acceptance) ಮಾನಸಿಕ ಆರೋಗ್ಯವನ್ನು ಸುಧಾರಿಸುವ ತೀವ್ರ ಪರಿಣಾಮಕಾರಿ ತತ್ವ. ಇದನ್ನು ದಾಸಸಾಹಿತ್ಯ ಸರಳವಾಗಿ, ಹೃದಯಕ್ಕೆ ತಟ್ಟುವಂತೆ ಬೋಧಿಸುತ್ತದೆ.

ಭಾವನಾ ಶುದ್ಧೀಕರಣ (Emotional Catharsis)

ಕೀರ್ತನೆಗಳನ್ನು ಹಾಡುವುದು, ಜಪಿಸುವುದು, ಪುನರಾವರ್ತನೆ ಮಾಡುವುದು–ಇವು ಭಾವನೆಗಳನ್ನು ಬಿಡುಗಡೆಗೊಳಿಸುವ ಶುದ್ಧೀಕರಣ ಪ್ರಕ್ರಿಯೆಯಂತೆ ಕಾರ್ಯನಿರ್ವಹಿಸುತ್ತವೆ. ಒತ್ತಡ, ವಿಷಾದ, ಅಸಹನೆ ಮುಂತಾದ ಭಾವನೆಗಳು ಹಾಡಿನ ಮೂಲಕ ಹೊರ ಹೊಮ್ಮುವುದರಿಂದ ಮೂಲಕ ಸಮತೋಲನ ಹೆಚ್ಚುತ್ತದೆ. ನಾದ, ಲಯ ಮತ್ತು ಭಕ್ತಿ ಸೇರಿದಾಗ ಅದು ಮನಸ್ಸನ್ನು ಹಗುರಗೊಳಿಸಿ, ಆಂತರಿಕ ಶಾಂತಿಯನ್ನು ನೀಡುತ್ತದೆ.

ಸಾಮಾಜಿಕ ಮನೋವಿಜ್ಞಾನ (Social Psychology)

"ಕುಲ ಕುಲ ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯೇನಾದರೂ ಬಲ್ಲಿರಾ".

ಹರಿದಾಸ ಸಾಹಿತ್ಯದ ಇಂತಹ ಕೀರ್ತನೆಗಳು ಸಮಾಜವನ್ನು ಮಾನವೀಯತೆಯ ದೃಷ್ಟಿಯಿಂದ ನೋಡಲು ಕಲಿಸುತ್ತದೆ. ಸಮಾನತೆ, ಅಹಂಕಾರ ನಿವಾರಣೆ, ಪರಸ್ಪರ ಸಹಾನುಭೂತಿ, ಎಲ್ಲರೂ ಒಂದೇ ಎಂಬ ಭಾವ ಸಮಾಜದಲ್ಲಿ ಹೊಂದಾಣಿಕೆಯನ್ನು ಹೆಚ್ಚಿಸುತ್ತವೆ. ಸಮಾಜದಲ್ಲಿ ಒಗ್ಗಟ್ಟು ಮತ್ತು ಸಂಬಂಧಗಳನ್ನು ಬಲಪಡಿಸುತ್ತವೆ. ಇದರಿಂದ ವ್ಯಕ್ತಿ ಹೊಸ ದೃಷ್ಟಿಕೋನವನ್ನು ಪಡೆದು ಬದುಕಿನಲ್ಲಿ ಶಾಂತಿಯನ್ನು ಅನುಭವಿಸುತ್ತಾನೆ.

ದಾಸ ಸಾಹಿತ್ಯ ಮತ್ತು ಸಕಾರಾತ್ಮಕ ಮನೋವಿಜ್ಞಾನ:
ಕೃತಜ್ಞತೆ (Gratitude)

"ನಿನ್ನಒಲುಮೆಯಿಂದ ನಿಖಿಳ ಜನರು ಬಂದು
ಮನ್ನಿಸುವರೋ ಮಹರಾಯ
ಎನ್ನ ಪುಣ್ಯಗಳಿಂದ ಈ ಪರಿವುಂಟೆನೋ
ನಿನ್ನದೇ ಸಕಲ ಸಂಪತ್ತುದೇವಾ, ನಿನ್ನದೇ ಸಕಲ ಸಂಪತ್ತುದೇವಾ"

ಹರಿದಾಸರ ಇಂತಹ ಕೀರ್ತನೆಗಳಲ್ಲಿ ಬದುಕಿನ ಸಣ್ಣ–ದೊಡ್ಡ ಅನುಗ್ರಹಗಳನ್ನು ಗುರುತಿಸಿ ಕೃತಜ್ಞತೆಯ ಮನಸ್ಸನ್ನು ಬೆಳೆಯಲು ಸಹಾಯ ಮಾಡುತ್ತವೆ. ಸಕಾರಾತ್ಮಕ ಮನೋವಿಜ್ಞಾನದಲ್ಲಿ ಕೃತಜ್ಞತಾ ಮನೋಭಾವ ಮನಸ್ಸಿನ ಆರೋಗ್ಯ, ಸಂತೋಷ, ಆತ್ಮಸಂತೃಪ್ತಿ ಹೆಚ್ಚಿಸುವ ಪ್ರಮುಖ ಅಂಶಗಳು. ದಾಸಸಾಹಿತ್ಯ ಕೃತಜ್ಞತೆಯ ಜೀವನಶೈಲಿಯನ್ನೇ ರೂಪಿಸುವ ಮೂಲಕ ವ್ಯಕ್ತಿಯ ಭಾವನೆಗಳನ್ನು ಧನಾತ್ಮಕವಾಗಿ ರೂಪಿಸುತ್ತದೆ.

ಮನಸ್ಸಿನ ಜಾಗೃತಿ (Mindfullnes)

ದಾಸಸಾಹಿತ್ಯವು "ಈ ಕ್ಷಣ"ದಲ್ಲಿ ಸನ್ಮಾರ್ಗದಲ್ಲಿ ನಡೆಯುವ ಜೀವನಕಲೆಯನ್ನು ಹಾಗೂ ಬದುಕಿನ ಮಹತ್ವವನ್ನು ಒತ್ತಿ ಹೇಳುತ್ತದೆ. ಜೀವನವನ್ನು ನಾಳೆಗೆ ಮುಂದೂಡದೆ, ಈಗಲೇ ಸರಿಯಾದ ದಾರಿಯಲ್ಲಿ ನಡೆಯಬೇಕು ಎಂದು ಬೋಧಿಸುತ್ತದೆ. ಪುರಂದರದಾಸರ "ಅಂತಕನ ದೂತರಿಗೆ ಕಿಂಚಿತ್ತೂ ದಯವಿಲ್ಲ" ಎಂಬ ಕೀರ್ತನೆ ಕೂಡ ಇದೇ ಸಂದೇಶವನ್ನು ನೀಡುತ್ತದೆ. ಸಾವಿನ ಅಧಿಪತಿಯಾದ ಯಮನ ಭಟರಿಗೆ ಸ್ವಲ್ಪವೂ ದಯೆ ದಾಕ್ಷಿಣ್ಯವಿಲ್ಲ. ಸಾವು ಯಾವ ಕ್ಷಣದಲ್ಲಿ ಯಾರಿಗಾದರೂ

ಬರಬಹುದು. ಹಾಗಾಗಿ ಜೀವನದಲ್ಲಿ ತಡಮಾಡದೆ, ತಪ್ಪುದಾರಿಯನ್ನು ಬಿಟ್ಟು ಸತ್ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು ಅತ್ಯವಶ್ಯಕ. ಈ ಕೀರ್ತನೆ ನಮ್ಮನ್ನು ಪ್ರತಿಕ್ಷಣವೂ ಜಾಗೃತಿಯಿಂದ, ಶುದ್ಧಚಿತ್ತದಿಂದ ಮತ್ತು ಜವಾಬ್ದಾರಿಯಿಂದ ಬದುಕುವಂತೆ ತಿಳಿಸುತ್ತದೆ.

ಜೀವನದ ಗುರಿ – ಧರ್ಮ (Purpose of Life) & ಅರ್ಥಪೂರ್ಣ ಜೀವನ (Meaningful Life)

"ಒಳ ಲಕ್ಷ ಜೀವಕೋಟಿಯನ್ನು ದಾಟಿ ಬಂದ ಈ ಶರೀರ
ತಾನಲ್ಲ ತನ್ನದಲ್ಲ ದಾಸನಾಗು ವಿಶೇಷನಾಗು."

ಇವೇ ಮೊದಲಾದ ಹರಿದಾಸ ಸಾಹಿತ್ಯದಲ್ಲಿ ಜೀವನದ ಗುರಿ ಮತ್ತು ಅರ್ಥಪೂರ್ಣ ಜೀವನ ಎಂಬ ಆಳವಾದ ತತ್ವಗಳನ್ನು ಅತ್ಯಂತ ಸರಳವಾಗಿ ಮತ್ತು ಪ್ರಭಾವಶಾಲಿಯಾಗಿ ಹೇಳಲಾಗಿದೆ."ಮಾನವಜನ್ಮದೊಡ್ಡದು, ಇದ ಹಾಳು ಮಾಡಲುಬೇಡಿ ಹುಚ್ಚಪ್ಪಗಳಿರಾ" ಎಂಬ ಕೀರ್ತನೆಯಲ್ಲಿ ಸಮಸ್ತ ಜೀವರಾಶಿಗಳಲ್ಲಿ ಮಾನವಜನ್ಮದ ಶ್ರೇಷ್ಠತೆಯನ್ನು ಸಾರುತ್ತ, ಅದನ್ನು ಹೇಗೆ ಸಾರ್ಥಕ್ಯ ಗೊಳಿಸಿಕೊಳ್ಳಬೇಕೆಂದು ಎಚ್ಚರಿಸುತ್ತಾರೆ. ದಾಸರ ದೃಷ್ಟಿಯಲ್ಲಿ ಜೀವನದಗುರಿ (ಧರ್ಮ) ಎಂದರೆ ಸತ್ಕಾರ್ಯ, ನೈತಿಕತೆ, ಭಕ್ತಿ, ಕರುಣೆ ಮತ್ತು ಆತ್ಮಜ್ಞಾನವನ್ನು ಅಳವಡಿಸಿಕೊಂಡು ಬದುಕುವುದು. ಈ ಮೌಲ್ಯಗಳನ್ನೇ ಅನುಸರಿಸಿದಾಗ ಜೀವನ ಅರ್ಥಪೂರ್ಣವಾಗಿ, ಮನಸ್ಸಿಗೆ ಶಾಂತಿ ಸಿಗುತ್ತದೆ. ಸಮಾಜಕ್ಕೆ ಒಳ್ಳೆಯದಾಗುತ್ತದೆ ಮತ್ತು ಮನುಷ್ಯನು ತನ್ನ ನಿಜವಾದ ಗುರಿಯನ್ನು ತಲುಪಲು ಸಾಧ್ಯವಾಗುತ್ತದೆ.

ಸಕಾರಾತ್ಮಕ ತೊಡಗಿಕೊಳ್ಳುವಿಕೆ (Positive Engagement)

"ಚಿಂತ್ಯಾಕೆ ಮಾಡುತಿದ್ದಿ ಚಿನ್ಮಯನಿದ್ದಾನೆ, ಲಕ್ಷ್ಮೀಕಾಂತನಿದ್ದಾನೆ, ಅನಂತ ರಂಗನಿದ್ದಾನೆ".
"ನಾ ನಿನ್ನ ಧ್ಯಾನದೊಳಿರಲು ಮಿಕ್ಕ ಹೀನ ಮಾನವರೇನು ಮಾಡಬಲ್ಲರೊ ರಂಗ".

ಇಂತಹ ಕೀರ್ತನೆಗಳಲ್ಲಿ ಕಂಡುಬರುವ ಸಕಾರಾತ್ಮಕ ತೊಡಗಿಕೊಳ್ಳುವಿಕೆ (Positive Engagement) ಎಂಬುದು ಮನಸ್ಸನ್ನು ಒಳ್ಳೆಯ, ಅರ್ಥಪೂರ್ಣ, ಬೆಳವಣಿಗೆಗೆ ಸಹಾಯಕ ಕ್ರಿಯೆಗಳಲ್ಲಿ ತೊಡಗಿಸುವ ಶಕ್ತಿ. ಮನುಷ್ಯನು ಯಾವ ವಿಷಯದಲ್ಲಿ ತೊಡಗಿಕೊಳ್ಳುತ್ತಾನೋ, ಅದರಂತೆ ಅವನ ಮನೋಭಾವ ರೂಪಗೊಳ್ಳುತ್ತದೆ. "ಯದ್ಭಾವಂತದ್ಭವತಿ" ಎಂಬ ಮಾತಿನಂತೆ ಉತ್ತಮ ಚಿಂತನೆ, ಸೇವೆ, ಭಜನೆ, ಅಧ್ಯಾತ್ಮ ಅಥವಾ ಸೃಜನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಂಡಾಗ, ಮನಸ್ಸಿನ ಸ್ವಯಂ ಚಿಂತೆಗಳು, ದುಃಖ, ಆತಂಕ ಮತ್ತು ನಕಾರಾತ್ಮಕತೆಯಿಂದ ದೂರವಾಗುತ್ತದೆ. ದಾಸಸಾಹಿತ್ಯವು ಇದೇ ತತ್ತ್ವವನ್ನು ಬಲವಾಗಿ ಹೇಳುತ್ತದೆ. ಭಗವಂತನ ಭಕ್ತಿ, ಭಜನೆ ಮತ್ತು ಸೇವೆಯಲ್ಲಿ ಮನಸ್ಸನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಾಗ ನಕಾರಾತ್ಮಕತೆ ಕರಗಿಹೋಗಿ ಮನಸ್ಸು ಶಾಂತಿ ಮತ್ತು ಸಮತೋಲನವನ್ನು ಹೊಂದುತ್ತದೆ.

ಸಕರಾತ್ಮಕ ಸಂಬಂಧಗಳು (Positive relationship)

ಹರಿದಾಸ ಸಾಹಿತ್ಯವು ಸಕಾರಾತ್ಮಕ ಸಂಬಂಧಗಳು ಜೀವನದ ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯ ಮೂಲವೆಂದು ಹೇಳುತ್ತದೆ. "ಉತ್ತಮರ ಸಂಗವನು ಎನಗಿತ್ತು ಸಲಹಯ್ಯ" ಎಂದು ಬೇಡುವ ಹರಿದಾಸರು "ಇರಬೇಕು ಹರಿದಾಸರ ಸಂಗ" ಎನ್ನುವುದರ ಮೂಲಕ, ಮನುಷ್ಯನ ವರ್ತನೆ, ಭಾವನೆ ಮತ್ತು ಚಿಂತನೆಗಳ ಗುಣಮಟ್ಟವು ಅವನು ಯಾರ ಜೊತೆ ಸಮಯ ಕಳೆಯುತ್ತಾನೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ ಎಂದು ಸೂಚಿಸುತ್ತಾರೆ. ಇದು ಆಧುನಿಕ ಮನೋವಿಜ್ಞಾನದ 'ಮಿರರ್ ನ್ಯೂರೋನ್ಸ್' ತತ್ವಕ್ಕೂ ಹೊಂದುತ್ತದೆ ಅಂದರೆ, ನಾವು ಯಾರ ಜೊತೆ ಇರುತ್ತೇವೋ ಅವರ ಭಾವನೆ, ವರ್ತನೆ, ಶಕ್ತಿಯನ್ನು ನಮ್ಮ ಮೆದುಳು ಸ್ವಯಂ ಪ್ರತಿಬಿಂಬಿಸುತ್ತದೆ. ಆದ್ದರಿಂದ ಸತ್ಸಂಗ, ಜ್ಞಾನಿಗಳ ಜೊತೆಗಿನ ಸಂಭಾಷಣೆ ಮತ್ತು ಸತ್ಕಾರ್ಯಗಳಲ್ಲಿ ತೊಡಗುವುದು ಬಹಳ ಮುಖ್ಯ ಎಂದು ಹೇಳುತ್ತದೆ. ದಾಸರ ಸಾಹಿತ್ಯದ ಸಾರ – ಒಳ್ಳೆಯ ಸಂಗ ಇದ್ದರೆ ಮನಸ್ಸು ಶುದ್ಧವಾಗುತ್ತದೆ; ಮನಸ್ಸು ಶುದ್ಧವಾಗಿದ್ದರೆ, ಜೀವನವೇ ಶ್ರೇಷ್ಠವಾಗುತ್ತದೆ.

ನಾದ ಚಿಕಿತ್ಸೆ ಮತ್ತು ದಾಸ ಸಾಹಿತ್ಯ

ಇಂದು ನಾದಚಿಕಿತ್ಸೆಯಲ್ಲಿ (Music Therapy) ದಾಸಸಾಹಿತ್ಯದ ಕೀರ್ತನೆಗಳು ಮಹತ್ವದ ಸ್ಥಾನ ಪಡೆದಿವೆ. ದಾಸರ ಪದಗಳು ನಿರ್ದಿಷ್ಟರಾಗ–ಲಯ–ಭಾವಗಳೊಂದಿಗೆ ಹಾಡಲ್ಪಡುವುದರಿಂದ, ಅವು ಮನಸ್ಸಿನ ನರಮಂಡಲವನ್ನು ಶಾಂತಗೊಳಿಸಿ, ಒತ್ತಡವನ್ನು ಕಡಿಮೆ ಮಾಡುವ ಶಕ್ತಿಯನ್ನು ಹೊಂದಿವೆ. ಕೀರ್ತನೆಗಳನ್ನು ಕೇಳುವಾಗ ಮನಸ್ಸು ನಾದದ ಕಂಪನಕ್ಕೆ ಹೊಂದಿಕೆಯಾಗುತ್ತದೆ, ಉಸಿರಾಟ ಸಮತೋಲನಗೊಳ್ಳುತ್ತದೆ, ಇದರಿಂದ ಆಳವಾದ ವಿಶ್ರಾಂತಿ(Relaxation response) ಉಂಟಾಗುತ್ತದೆ. ಇನ್ನೂ ಮುಖ್ಯವಾಗಿ, ದಾಸರ ಪದಗಳ ಅರ್ಥ ನೈತಿಕತೆ, ಭಕ್ತಿ, ಶರಣಾಗತಿ, ಕೃತಜ್ಞತೆ–ಮನಸ್ಸಿನ ನಕಾರಾತ್ಮಕ ಚಿಂತನೆಯನ್ನು ಕರಗಿಸಿ, ಸಕಾರಾತ್ಮಕ ನಂಬಿಕೆಗಳನ್ನು (Positive beliefpatterns) ನಿರ್ಮಿಸಲು ಸಹಾಯ ಮಾಡುತ್ತದೆ. ಹೀಗಾಗಿ ದಾಸಸಾಹಿತ್ಯವು ಕೇವಲ ಭಕ್ತಿಕಾವ್ಯವಲ್ಲ; ಇಂದಿನ ನಾದಚಿಕಿತ್ಸೆಯಲ್ಲಿ ಮನಸ್ಸನ್ನು ಶಾಂತಗೊಳಿಸಿ, ಪುನರ್‌ಕ್ರಮೀಕರಿಸುವ (Reprogramming) ಸಕಾರಾತ್ಮಕ ಮನೋಚಿಕಿತ್ಸೆಯ ಸಾಧನವಾಗಿಯೂ ಬಳಕೆಯಾಗುತ್ತಿದೆ.

ಸಮಾರೋಪ

ಹರಿದಾಸ ಸಾಹಿತ್ಯವು ಸಾಹಿತ್ಯ ಮತ್ತು ಮನೋವಿಜ್ಞಾನದ ನಡುವೆ ಅಪೂರ್ವ ಸೇತುವೆಯಂತೆ ಕಾರ್ಯನಿರ್ವಹಿಸುತ್ತದೆ. ಮನುಷ್ಯನ ಮನಸ್ಸನ್ನು ಅರ್ಥಮಾಡಿಕೊಳ್ಳಲು, ಅದನ್ನು ಶುದ್ಧಗೊಳಿಸಲು, ಬೆಳವಣಿಗೆಯ ದಿಕ್ಕಿನಲ್ಲಿ ಸಾಗಿಸಲು ಮತ್ತು ಜೀವನದ ಮೌಲ್ಯಗಳನ್ನು ಸ್ಥಾಪಿಸಲು ಇದು ಆಧಾರಶಕ್ತಿಯಂತೆ ಪರಿಣಾಮ ಬೀರುತ್ತದೆ. ಭಾವನೆಗಳ ಸಂಸ್ಕಾರ, ನೈತಿಕ ಮೌಲ್ಯಗಳ ಬೆಳವಣಿಗೆ, ಸಕಾರಾತ್ಮಕಚಿಂತನೆ, ಆಂತರಿಕ ಶಾಂತಿ ಮತ್ತು ಮಾನಸಿಕ ಸಮತೋಲನ ಇವೆಲ್ಲವನ್ನೂ ದಾಸಸಾಹಿತ್ಯ ಸಮನ್ವಯಿಸಿ ಪೋಷಿಸುತ್ತದೆ. ದಾಸ ಸಾಹಿತ್ಯವು ಮನುಷ್ಯನ ಮನಸ್ಸಿನ ಕಾರ್ಯವಿಧಾನ, ಭಾವನೆಗಳ ನಿರ್ವಹಣೆ ಹಾಗೂ ವ್ಯಕ್ತಿತ್ವ ರೂಪಿಸುವ ವೈಜ್ಞಾನಿಕ ತತ್ತ್ವಗಳನ್ನೂ ಒಳಗೊಂಡಿದೆ. ಈ ಮೂಲಕ ದಾಸಸಾಹಿತ್ಯವು ಕೇವಲ ಧಾರ್ಮಿಕಕಾವ್ಯ ಮಾತ್ರವಲ್ಲ, ಅಧ್ಯಾತ್ಮ ಮತ್ತು ಮನೋವಿಜ್ಞಾನದ ಸುಂದರ ಸಂಯೋಜನೆಯಾದ ಸಮಗ್ರ ಮಾನಸಿಕ–ಆಧ್ಯಾತ್ಮಿಕ ಪರಂಪರೆಯಾಗಿ ಇಂದಿಗೂ ಮನುಷ್ಯನ ಜೀವನಕ್ಕೆ ಮಾರ್ಗದರ್ಶನ ನೀಡುತ್ತಿದೆ.

ಪರಾಮರ್ಶನ ಗ್ರಂಥಗಳು

೧. ಸಮಗ್ರದಾಸ ಸಾಹಿತ್ಯ ಸಂಪುಟಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ೨೦೦೩.

ಮನೋವಿಜ್ಞಾನ ಮತ್ತು ಸಾಹಿತ್ಯ ಓದು

ಡಾ. ರವಿಶಂಕರ್ ಎ.ಕೆ.

ಸಹಾಯಕ ಪ್ರಾಧ್ಯಾಪಕರು

ಕ್ರಿಸ್ತು ಜಯಂತಿ ಡಿಮ್ಡ್ ಟು ಬಿ ವಿಶ್ವವಿದ್ಯಾಲಯ ಬೆಂಗಳೂರು ಬೆಂಗಳೂರು–೧೨, ಕರ್ನಾಟಕ ರಾಜ್ಯ

ಸಾರಲೇಖ

ಸಾಹಿತ್ಯದ ಓದು ಮನೋವಿಜ್ಞಾನದಿಂದಲೇ ಸಾಗುವ ಒಂದು ಪ್ರಕ್ರಿಯೆ. ಮನಸ್ಸಿನ ಅದ್ಭುತ ಕ್ರಿಯೆ. ಮನೋವಿಜ್ಞಾನ ಮತ್ತು ಸಾಹಿತ್ಯದ ನಡುವಿನ ಸಂಬಂಧವು ಅತ್ಯಂತ ಗಾಢವಾದುದು ಹಾಗೂ ಸಂಕೀರ್ಣವಾದುದು. ಈ ಎರಡೂ ಕ್ಷೇತ್ರಗಳು ಮೂಲಭೂತವಾಗಿ ಮಾನವನ ಅನುಭವ, ಸಂವೇದನೆ ಮತ್ತು ವರ್ತನೆಗಳನ್ನೇ ಕೇಂದ್ರವಾಗಿರಿಸಿಕೊಂಡಿವೆ. ಸಾಹಿತ್ಯವು ಮನುಷ್ಯನ ಅಂತರಂಗದ ಅಭಿವ್ಯಕ್ತಿಯಾದರೆ, ಮನೋವಿಜ್ಞಾನವು ಆ ಅಭಿವ್ಯಕ್ತಿಯ ಹಿಂದಿರುವ ಪ್ರೇರಣೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುತ್ತದೆ. ಸಾಹಿತ್ಯವು ಜೀವನದ ಪ್ರತಿಬಿಂಬ ಮಾತ್ರವಲ್ಲ, ಅದು ಮಾನವ ಮನಸ್ಸಿನ ನಿಗೂಢ ಪದರಗಳನ್ನು ಬಿಡಿಸಿ ತೋರುವ ಒಂದು ಕನ್ನಡಿಯೂ ಹೌದು. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯದ ಪರಂಪರೆಯನ್ನು ಗಮನಿಸಿದಾಗ, ಇಲ್ಲಿನ ಲೇಖಕರು ಕೇವಲ ಕಥೆಗಾರರಾಗಿ ಅಥವಾ ಕವಿಗಳಾಗಿ ಉಳಿಯದೆ, ಮಾನವನ ಮನಸ್ಸಿನ ಆಳವನ್ನು ಶೋಧಿಸುವ ಮನೋವಿಜ್ಞಾನಿಗಳಂತೆಯೂ ಕಾರ್ಯನಿರ್ವಹಿಸಿರುವುದು ಗೋಚರಿಸುತ್ತದೆ.

ಪ್ರಮುಖ ಪದಗಳು :ಸಾಹಿತ್ಯ, ಮನೋವಿಜ್ಞಾನ, ಭಾವವಿರೇಚನ, ಅಸ್ಮಿತೆ,ಸಂಬಂಧ

ಸಾಹಿತ್ಯವನ್ನು ಓದುವ ಕ್ರಮವೂ ಸಹ ಕಾಲಕಾಲಕ್ಕೆ ಬದಲಾಗುತ್ತಾ ಬಂದಿದೆ. ಓದುಗನ ಮನಸ್ಥಿತಿಯು ಕೃತಿಯ ಅರ್ಥೈಸುವಿಕೆಯ ಮೇಲೆ ತೀವ್ರವಾದ ಪ್ರಭಾವ ಬೀರುತ್ತದೆ. ಇದನ್ನು 'Reader-Response Theory' ಎನ್ನಲಾಗುತ್ತದೆ. ಕನ್ನಡ ವಿಮರ್ಶಕ ಜಿ. ಎಸ್. ಶಿವರುದ್ರಪ್ಪ ಅವರು 'ವಿಮರ್ಶೆಯ ಪೂರ್ವ ಪಶ್ಚಿಮ' ಎಂಬ ಕೃತಿಯಲ್ಲಿ ಸಾಹಿತ್ಯ ಮತ್ತು ಮನೋಧರ್ಮದ ಕುರಿತು ಚರ್ಚಿಸುತ್ತಾ, ಕವಿಯ ಪ್ರತಿಭೆ ಮತ್ತು ಓದುಗನ ರಸಗ್ರಹಣ ಸಾಮರ್ಥ್ಯದ ನಡುವಿನ ಕೊಂಡಿಯೇ ಮನೋವಿಜ್ಞಾನ ಎಂದು ಗುರುತಿಸುತ್ತಾರೆ. ಕವಿಯು ತನ್ನ ಭಾವನೆಗಳನ್ನು ಶಬ್ದಗಳಲ್ಲಿ ರೂಪಾಂತರಿಸುವಾಗ ಅನುಭವಿಸುವ ಮಾನಸಿಕ ಏರಿಳಿತಗಳು ಕಾವ್ಯದ ಲಯದಲ್ಲಿ ಅಡಗಿರುತ್ತವೆ. ಉದಾಹರಣೆಗೆ, ದ.ರಾ. ಬೇಂದ್ರೆಯವರ ಕವಿತೆಗಳಲ್ಲಿನ ನಾದವು ಓದುಗನ ಮನಸ್ಸಿನಲ್ಲಿ ಒಂದು ರೀತಿಯ ಅಧ್ಯಾತ್ಮಿಕ ಅಥವಾ ಅತೀಂದ್ರಿಯ ಭಾವವನ್ನು ಮೂಡಿಸುತ್ತದೆ. ಇದು ಮನುಷ್ಯನ ಮೆದುಳು ಶಬ್ದ ಮತ್ತು ಲಯಕ್ಕೆ ಹೇಗೆ ಸ್ಪಂದಿಸುತ್ತದೆ ಎಂಬ ಮನೋವೈಜ್ಞಾನಿಕ ಸತ್ಯವನ್ನು ಎತ್ತಿ ತೋರಿಸುತ್ತದೆ. ಭಾವಗೀತೆಗಳ ಓದು ಅಥವಾ ಶ್ರವಣವು ಮನುಷ್ಯನ ಒತ್ತಡವನ್ನು ಕಡಿಮೆ ಮಾಡಿ ಮನಸ್ಸನ್ನು ತಿಳಿಗೊಳಿಸುವ ಕಾರ್ಯವನ್ನು ಮಾಡುತ್ತದೆ, ಇದನ್ನು ಇಂದಿನ ಮನೋವೈದ್ಯಕೀಯ ಕ್ಷೇತ್ರದಲ್ಲಿ 'ಬಿಬ್ಲಿಯೋಥೆರಪಿ' ಅಥವಾ ಸಾಹಿತ್ಯ ಚಿಕಿತ್ಸೆ ಎಂದು ಕರೆಯಲಾಗುತ್ತದೆ.

ಸಾಹಿತ್ಯ ಕೃತಿಯೊಂದರ ಓದು ಎನ್ನುವುದು ಕೇವಲ ಅಕ್ಷರಗಳ ಗ್ರಹಿಕೆಯಲ್ಲ, ಬದಲಾಗಿ ಅದೊಂದು ಮನೋವೈಜ್ಞಾನಿಕ ಪ್ರಕ್ರಿಯೆ. ಓದುಗನು ಕೃತಿಯ ಪಾತ್ರಗಳೊಂದಿಗೆ ತನ್ನನ್ನು ತಾನು ಗುರುತಿಸಿಕೊಂಡಾಗ ಅಲ್ಲಿ ಭಾವವಿರೇಚನ(ಕ್ಯಾಥಾರ್ಸಿಸ್) ಉಂಟಾಗುತ್ತದೆ. ಕನ್ನಡದ ಸಂದರ್ಭದಲ್ಲಿ ನವೋದಯ ಕಾಲದಿಂದ ಹಿಡಿದು ಇಂದಿನವರೆಗಿನ ಸಾಹಿತ್ಯವು ಈ ಪ್ರಕ್ರಿಯೆಯನ್ನು ವಿಭಿನ್ನವಾಗಿ ಪೋಷಿಸುತ್ತಾ ಬಂದಿದೆ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಓದುವಾಗ ಅಲ್ಲಿನ ಪಾತ್ರಗಳಾದ ಐತ, ಪೀಂಚಲು ಅಥವಾ ಸಂಸ್ಕಾರ ಕಾದಂಬರಿಯ ನಾಯಕರಾದ ಪ್ರಾಣೇಶಾಚಾರ್ಯರ ಅಂತರಂಗದ ಸಂಘರ್ಷಗಳು ಓದುಗನ ಮನಸ್ಸಿನ ಗುಪ್ತ ಸಂವೇದನೆಗಳನ್ನು ಬಡಿದೆಬ್ಬಿಸುತ್ತವೆ. ಇಲ್ಲಿ ಸಾಹಿತ್ಯವು ಮನೋವಿಜ್ಞಾನದ 'ಪ್ರಯೋಗಶಾಲೆ'ಯಾಗಿ ಬದಲಾಗುತ್ತದೆ. ಸಾಹಿತ್ಯ ವಿಮರ್ಶೆಯಲ್ಲಿ ಮನೋವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿಕೊಂಡಾಗ, ಕೃತಿಯ ರಚನಾತ್ಮಕ ಸೌಂದರ್ಯಕ್ಕಿಂತಲೂ ಅದರ ಹಿಂದಿರುವ ಲೇಖಕನ ಸುಪ್ತ ಮನಸ್ಸು ಮತ್ತು ಪಾತ್ರಗಳ ಮಾನಸಿಕ ಸ್ಥಿತ್ಯಂತರಗಳು ಮುಖ್ಯವಾಗುತ್ತವೆ. ಎಲ್. ಎಸ್. ಶೇಷಗಿರಿ ರಾವ್ ಅವರು ತಮ್ಮ 'ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ' ಕೃತಿಯಲ್ಲಿ ವಿವರಿಸುವಂತೆ, "ಫ್ರಾಯ್ಡ್‌ನ ಅಹಂ (Ego), ಅಧೋಹಂ (Id) ಮತ್ತು ಪರಾಹಂ (Super-Ego) ಪರಿಕಲ್ಪನೆಗಳು ಸಾಹಿತ್ಯದ ಪಾತ್ರ ವಿಶ್ಲೇಷಣೆಗೆ ಹೊಸ ಆಯಾಮವನ್ನು ನೀಡಿವೆ. ಈ ಪರಿಕಲ್ಪನೆಗಳನ್ನು ಕನ್ನಡದ ನವ್ಯ ಸಾಹಿತ್ಯದ ಹಿನ್ನೆಲೆಯಲ್ಲಿ ಗಮನಿಸಿದಾಗ, ಗೋಪಾಲಕೃಷ್ಣ ಅಡಿಗರ ಕವಿತೆಗಳಲ್ಲಿ ಕಾಣುವ ವೈಯಕ್ತಿಕ ತೊಳಲಾಟಗಳು ಮನುಷ್ಯನ ಅಸ್ತಿತ್ವವಾದಿ ನೆಲೆಯ ಮನೋಸ್ಥಿತಿಯನ್ನು ಪ್ರತಿಬಿಂಬಿಸುತ್ತವೆ."

ಮನೋವಿಜ್ಞಾನ ಮತ್ತು ಸಾಹಿತ್ಯದ ಅನುಸಂಧಾನದಲ್ಲಿ ಪಾತ್ರಗಳ ಮನೋವಿಶ್ಲೇಷಣೆ ಅತ್ಯಂತ ಆಕರ್ಷಕವಾದದು. ಶಿವರಾಮ ಕಾರಂತರ 'ಚೋಮನ ದುಡಿ' ಕಾದಂಬರಿಯ ಚೋಮನ ಪಾತ್ರವು ಕೇವಲ ಒಬ್ಬ ದಲಿತ ಕಾರ್ಮಿಕನ ಸಂಕಟವನ್ನು ಮಾತ್ರವಲ್ಲದೆ, ಹತಾಶೆ ಮತ್ತು ಅಸಹಾಯಕತೆಯಿಂದ ಉಂಟಾಗುವ ಮಾನಸಿಕ ಕುಸಿತವನ್ನು ಅದ್ಭುತವಾಗಿ ಚಿತ್ರಿಸುತ್ತದೆ. ಆಸೆಗಳು ಭಗ್ನಗೊಂಡಾಗ ಮನುಷ್ಯನು ಹೇಗೆ ಕ್ರೂರವಾಗಿ ವರ್ತಿಸಬಹುದು ಅಥವಾ ಹೇಗೆ ತನ್ನಲ್ಲೇ ಮುದುಡಿಕೊಳ್ಳಬಹುದು ಎಂಬುದಕ್ಕೆ ಚೋಮ ದೊಡ್ಡ ಉದಾಹರಣೆ. ಕಾರಂತರು ತಮ್ಮ ಕೃತಿಗಳಲ್ಲಿ ಮನುಷ್ಯನ ವರ್ತನೆಯನ್ನು ವಿವರಿಸುವಾಗ ಯಾವುದೇ ಪಡಿಯಚ್ಚುಗಳನ್ನು ಬಳಸದೆ, ಅತ್ಯಂತ ವಾಸ್ತವಿಕವಾದ ಮನೋವೈಜ್ಞಾನಿಕ ನೆಲೆಗಳನ್ನು ಕಂಡುಕೊಳ್ಳುತ್ತಾರೆ. ಅದೇ ರೀತಿ ಯು. ಆರ್. ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯಲ್ಲಿ ಪ್ರಾಣೇಶಾಚಾರ್ಯರು ಎದುರಿಸುವ ಸಂಘರ್ಷವು ಕೇವಲ ಧಾರ್ಮಿಕವಾದುದಲ್ಲ, ಅದು ಅವರ ಸುಪ್ತ ಮನಸ್ಸಿನ ಬಯಕೆಗಳು ಮತ್ತು ಸಮಾಜ ಹೇರಿದ ನೈತಿಕತೆಯ ನಡುವಿನ ಯುದ್ಧ. ಈ ಯುದ್ಧದ ಮೂಲಕ ವ್ಯಕ್ತಿಯ ವ್ಯಕ್ತಿತ್ವವು ಹೇಗೆ ವಿಘಟನೆಗೊಳ್ಳುತ್ತದೆ ಮತ್ತು ಮರುರೂಪುಗೊಳ್ಳುತ್ತದೆ ಎಂಬುದನ್ನು ಲೇಖಕರು ತೋರಿಸಿಕೊಡುತ್ತಾರೆ. ಇದು ಮನೋವಿಜ್ಞಾನದ ದೃಷ್ಟಿಯಿಂದ 'Identity Crisis' ಅಥವಾ ಅಸ್ಮಿತೆಯ ಬಿಕ್ಕಟ್ಟಿನ ಅಧ್ಯಯನಕ್ಕೆ ಉತ್ತಮ ಆಕರವಾಗಿದೆ.

ಕನ್ನಡ ಕಾವ್ಯದ ವಿಷಯಕ್ಕೆ ಬಂದರೆ, ಅಧ್ಯಾತ್ಮ ಮತ್ತು ಮನೋವಿಜ್ಞಾನಗಳು ಕೈಜೋಡಿಸಿರುವುದನ್ನು ಕಾಣಬಹುದು. ಡಿ.ವಿ. ಗುಂಡಪ್ಪನವರ 'ಮಂಕುತಿಮ್ಮನ ಕಗ್ಗ'ವು ಮನುಷ್ಯನ ಜೀವನ ದರ್ಶನ ಮತ್ತು ಮಾನಸಿಕ ನೆಮ್ಮದಿಗೆ ಬೇಕಾದ ಸೂತ್ರಗಳನ್ನು ನೀಡುತ್ತದೆ. ಜೀವನದ ಏರಿಳಿತಗಳನ್ನು ಸಮಚಿತ್ತದಿಂದ ಎದುರಿಸುವುದು ಹೇಗೆ ಎಂಬ ಬಗ್ಗೆ ಕಗ್ಗವು ನೀಡುವ ಮಾರ್ಗದರ್ಶನವು ಇಂದಿನ 'ಕಾಗ್ನಿಟಿವ್ ಬಿಹೇವಿಯರಲ್ ಥೆರಪಿ' (CBT) ಅಥವಾ ಆಲೋಚನಾ ಕ್ರಮದ ಬದಲಾವಣೆಯ ಮೂಲಕ ವರ್ತನೆಯನ್ನು ತಿದ್ದುವ ಪದ್ಧತಿಗೆ ಸಂವಾದಿಯಾಗಿದೆ. ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಎಂದರೆ ಭಾವನೆಗಳನ್ನು ದಮನ ಮಾಡುವುದಲ್ಲ, ಬದಲಾಗಿ ಅವುಗಳನ್ನು ಸರಿಯಾಗಿ ಅರ್ಥೈಸಿಕೊಳ್ಳುವುದು ಎಂಬುದನ್ನು ಡಿವಿಜಿಯವರು ತಿಳಿಸಿಕೊಡುತ್ತಾರೆ. ಓದುಗನಿಗೆ ಈ ಕೃತಿಯು ಒಂದು ಮಾನಸಿಕ ರಕ್ಷಣಾ ಕವಚದಂತೆ ಕೆಲಸ ಮಾಡುತ್ತದೆ.

ಎಸ್. ಎಲ್. ಭೈರಪ್ಪನವರ ಕಾದಂಬರಿಗಳು ಮನೋವಿಜ್ಞಾನದ ಅಧ್ಯಯನಕ್ಕೆ ಒಂದು ಬೃಹತ್ ಆಕರಗಳಂತೆ ಕಾಣುತ್ತವೆ. 'ವಂಶವೃಕ್ಷ'ದಲ್ಲಿ ಬರುವ ವಂಶವಾಹಿನಿ ಮತ್ತು ಸಂಸ್ಕಾರದ ಕುರಿತಾದ ಜಿಜ್ಞಾಸೆಗಳು ಅಥವಾ 'ಗೃಹಭಂಗ'ದಲ್ಲಿನ ಪಾತ್ರಗಳ

ವಿನ್ಯಾಸವು ಮನುಷ್ಯನ ವ್ಯಕ್ತಿತ್ವದ ವಿಕಸನದಲ್ಲಿ ಪರಿಸರ ಮತ್ತು ವಂಶಪಾರಂಪರ್ಯದ ಪಾತ್ರವೇನು ಎಂಬುದನ್ನು ಚರ್ಚಿಸುತ್ತವೆ. ಕಾಮ, ಕ್ರೋಧ, ಲೋಭಗಳಂತಹ ಮೂಲಭೂತ ಪ್ರವೃತ್ತಿಗಳು ನಾಗರಿಕ ಸಮಾಜದ ಮುಖವಾಡದ ಅಡಿಯಲ್ಲಿ ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಭೈರಪ್ಪನವರು ವಿವರಿಸುವ ರೀತಿ ಮನೋವಿಜ್ಞಾನದ 'Psycho-pathology' ವಿಭಾಗಕ್ಕೆ ಹತ್ತಿರವಾಗಿದೆ. ಲೇಖಕನು ತನ್ನ ಪಾತ್ರಗಳನ್ನು ಸೃಷ್ಟಿಸುವಾಗ ತಾನೇ ಆ ಪಾತ್ರವಾಗಿ ಪರಕಾಯ ಪ್ರವೇಶ ಮಾಡುತ್ತಾನೆ. ಈ ಪ್ರಕ್ರಿಯೆಯಲ್ಲಿ ಲೇಖಕನ ಸ್ವಂತದ ದಮನಿತ ಆಸೆಗಳು ಪಾತ್ರಗಳ ಮೂಲಕ ಬಿಡುಗಡೆ ಹೊಂದುತ್ತವೆ ಎಂಬುದು ಫ್ರಾಯ್ಡ್‌ನ ವಾದ. ಆದರೆ ಕನ್ನಡದ ಸಂದರ್ಭದಲ್ಲಿ ಕುವೆಂಪು ಅವರಂತಹ ಮಹಾನ್ ಲೇಖಕರು ವ್ಯಷ್ಟಿ ಮನಸ್ಸಿನಿಂದ ಸಮಷ್ಟಿ ಮನಸ್ಸಿನೆಡೆಗೆ ಸಾಗುವ ದಾರಿಯನ್ನು ಸಾಹಿತ್ಯದಲ್ಲಿ ಕಂಡುಕೊಂಡರು. ಅವರ 'ಶ್ರೀ ರಾಮಾಯಣ ದರ್ಶನಂ' ಕೃತಿಯಲ್ಲಿ ಪಾತ್ರಗಳು ಕೇವಲ ವ್ಯಕ್ತಿಗಳಾಗಿ ಉಳಿಯದೆ ವಿಶ್ವವ್ಯಾಪಿ ಮನೋಧರ್ಮದ ಸಂಕೇತಗಳಾಗಿ ರೂಪಾಂತರಗೊಳ್ಳುತ್ತವೆ.

ಸಾಹಿತ್ಯದ ಓದು ನಮ್ಮಲ್ಲಿ ಪರಕಾಯ ಪ್ರವೇಶದ ಸಾಮರ್ಥ್ಯವನ್ನು ಬೆಳೆಸುತ್ತದೆ. ಇನ್ನೊಬ್ಬರ ನೋವನ್ನು ತನ್ನದೇ ನೋವೆಂದು ಭಾವಿಸುವ ಮನೋಸ್ಥಿತಿಯು ಸಮಾಜದ ಆರೋಗ್ಯಕ್ಕೆ ಅತ್ಯಗತ್ಯ. ದಲಿತ ಮತ್ತು ಬಂಡಾಯ ಸಾಹಿತ್ಯವು ಈ ನಿಟ್ಟಿನಲ್ಲಿ ಮಹತ್ವದ ಪಾತ್ರ ವಹಿಸಿದೆ. ದೇವನೂರು ಮಹಾದೇವ ಅವರ 'ಕುಸುಮಬಾಲೆ'ಯಂತಹ ಕೃತಿಗಳನ್ನು ಓದುವಾಗ ಓದುಗನು ತನಗಿಂತ ಭಿನ್ನವಾದ ಸಮಾಜದ, ಭಿನ್ನವಾದ ಮನೋಸ್ಥಿತಿಯ ಜನರ ಬದುಕನ್ನು ಆಳವಾಗಿ ಸ್ಪರ್ಶಿಸುತ್ತಾನೆ. ಇಲ್ಲಿ ಸಾಹಿತ್ಯವು ಕೇವಲ ಮನರಂಜನೆಯಾಗದೆ, ಸಮಾಜದ ಸಾಮೂಹಿಕ ಮನಸ್ಸನ್ನು ಶುದ್ಧೀಕರಿಸುವ ಕೆಲಸ ಮಾಡುತ್ತದೆ.ಮನೋವಿಜ್ಞಾನಿ ಕಾರ್ಲ್ ಜುಂಗ್ ಹೇಳುವ 'Archetypes' ಅಥವಾ ಆದಿಮಾದರಿಗಳು ಕನ್ನಡದ ಜಾನಪದ ಸಾಹಿತ್ಯ ಮತ್ತು ಪುರಾಣ ಆಧಾರಿತ ಸಾಹಿತ್ಯದಲ್ಲಿ ಹೇರಳವಾಗಿ ಸಿಗುತ್ತವೆ. ನಮ್ಮ ಜನಪದ ಕಥೆಗಳಲ್ಲಿ ಬರುವ ರಾಕ್ಷಸರು, ದೇವತೆಗಳು, ಮಾಯಾವಿ ಪ್ರಾಣಿಗಳು ಮನುಷ್ಯನ ಭಯ ಮತ್ತು ಆಶೋತ್ತರಗಳ ಪ್ರತಿರೂಪಗಳೇ ಆಗಿವೆ. ಇವುಗಳನ್ನು ಓದುವ ಮೂಲಕ ನಾವು ನಮ್ಮ ಸಂಸ್ಕೃತಿಯ ಅಂತರಾಳದಲ್ಲಿರುವ ಮಾನಸಿಕ ನೆಲೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಓದುಗನ ಮೇಲೆ ಸಾಹಿತ್ಯದ ಪ್ರಭಾವವನ್ನು ಅಭ್ಯಸಿಸುವಾಗ 'ಕಥಾ ಚಿಕಿತ್ಸೆ' (Narrative Therapy) ಎಂಬ ಪರಿಕಲ್ಪನೆಯನ್ನು ಗಮನಿಸಬೇಕು. ಮನುಷ್ಯನು ತನ್ನ ಜೀವನದ ಘಟನೆಗಳನ್ನು ಒಂದು ಕಥೆಯ ರೂಪದಲ್ಲಿ ನೋಡಲು ಬಯಸುತ್ತಾನೆ. ಸಾಹಿತ್ಯ ಕೃತಿಗಳನ್ನು ಓದುವಾಗ ಓದುಗನು ತನ್ನ ಜೀವನದ ಕಷ್ಟಗಳನ್ನು ಪಾತ್ರಗಳ ಕಷ್ಟಗಳೊಂದಿಗೆ ಹೋಲಿಸಿ ನೋಡುತ್ತಾನೆ. ಈ ಪ್ರಕ್ರಿಯೆಯಲ್ಲಿ ಅವನಿಗೆ ತನ್ನ ಸಮಸ್ಯೆಗಳಿಗೆ ಹೊಸ ಪರಿಹಾರಗಳು ಅಥವಾ ಹೊಸ ದೃಷ್ಟಿಕೋನಗಳು ದೊರೆಯುತ್ತವೆ. ಉದಾಹರಣೆಗೆ, ಪೂರ್ಣಚಂದ್ರ ತೇಜಸ್ವಿಯವರ 'ಕರ್ವಾಲೋ' ಅಥವಾ 'ಜುಗಾರಿ ಕ್ರಾಸ್' ಕಾದಂಬರಿಗಳನ್ನು ಓದುವಾಗ ಪರಿಸರ ಮತ್ತು ಮನುಷ್ಯನ ನಡುವಿನ ಸಂಬಂಧದ ಹೊಸ ಅರಿವು ಮೂಡುತ್ತದೆ. ತೇಜಸ್ವಿಯವರ ಪಾತ್ರಗಳು ನಿಸರ್ಗದೊಂದಿಗೆ ನಡೆಸುವ ಸಂವಾದವು ಮನುಷ್ಯನ ಮೂಲಭೂತ ಪ್ರವೃತ್ತಿಗಳನ್ನು ಕೆರಳಿಸುತ್ತದೆ. ಇದು ಅತಿ ನಾಗರಿಕತೆಯಿಂದ ಮನುಷ್ಯನಿಗೆ ಉಂಟಾಗಿರುವ ಮಾನಸಿಕ ಜಡತ್ವವನ್ನು ಹೋಗಲಾಡಿಸುವಲ್ಲಿ ಸಹಕಾರಿಯಾಗುತ್ತದೆ.

ಮನೋವಿಜ್ಞಾನ ಮತ್ತು ಸಾಹಿತ್ಯದ ನಡುವಿನ ಸಂಬಂಧವು ಸೃಜನಶೀಲತೆಯ ರಹಸ್ಯವನ್ನು ಭೇದಿಸುವಲ್ಲಿಯೂ ನೆರವಾಗುತ್ತದೆ. ಒಬ್ಬ ಲೇಖಕನಿಗೆ ಕಲ್ಪನೆಗಳು ಎಲ್ಲಿಂದ ಬರುತ್ತವೆ? ಸುಪ್ತ ಮನಸ್ಸಿನ ನೆನಪುಗಳು ಹೇಗೆ ಸಾಹಿತ್ಯವಾಗಿ ರೂಪಾಂತರಗೊಳ್ಳುತ್ತವೆ? ಈ ಪ್ರಶ್ನೆಗಳಿಗೆ ಉತ್ತರವನ್ನು ನಾವು ಡಿ. ಆರ್. ಬೆಂದ್ರೆಯವರ 'ಸಾಹಿತ್ಯದ ವಿರಾಟ್ ಸ್ವರೂಪ' ಅಥವಾ ಕುವೆಂಪು ಅವರ 'ತಪೋನಂದನ' ಅಂತಹ ಲೇಖನ ಸಂಗ್ರಹಗಳಲ್ಲಿ ಕಾಣಬಹುದು. ಪ್ರತಿಭೆಯು ಕೇವಲ ತಾಂತ್ರಿಕ ನೈಪುಣ್ಯವಲ್ಲ, ಅದು ಮನಸ್ಸಿನ ಒಂದು ಉನ್ನತ ಸ್ಥಿತಿ. ಈ ಸ್ಥಿತಿಯಲ್ಲಿ ಲೇಖಕನು ತನ್ನ 'ಅಹಂ' ಅನ್ನು ಮೀರಿ ವಿಶ್ವಮಾನವ ಪ್ರಜ್ಞೆಯನ್ನು ಹೊಂದುತ್ತಾನೆ. ಇದು ಅಬ್ರಹಾಂ ಮಾಸ್ಲೋ ಅವರ 'Self-Actualization' ಸಿದ್ಧಾಂತಕ್ಕೆ ಸಂವಾದಿಯಾಗಿದೆ. ಸಾಹಿತ್ಯ ಓದು ಮನುಷ್ಯನನ್ನು

ಕಿರಿದಾದ ಗಡಿಗಳಿಂದ ಬಿಡುಗಡೆಗೊಳಿಸಿ, ವಿಶಾಲವಾದ ಚಿಂತನೆಯೆಡೆಗೆ ಕರೆದೊಯ್ಯುತ್ತದೆ. ಇದು ಮಾನಸಿಕ ಆರೋಗ್ಯದ ಅತ್ಯುನ್ನತ ಸ್ಥಿತಿಯಾಗಿದೆ.

ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಮನೋವಿಜ್ಞಾನದ ಬಳಕೆಯು ಒಂದು ಶಿಸ್ತಿನ ರೂಪದಲ್ಲಿ ಬೆಳೆದುಬಂದಿದೆ. ಡಿ. ಆರ್. ನಾಗರಾಜ್ ಅವರು 'ಶಕ್ತಿ ಶಾರದೆ ಮೇಳ' ಕೃತಿಯಲ್ಲಿ ಸಾಹಿತ್ಯದ ಸಂವೇದನೆಗಳನ್ನು ವಿಶ್ಲೇಷಿಸುವಾಗ ಸಂಸ್ಕೃತಿ ಮತ್ತು ಮನಸ್ಸಿನ ಸಂಬಂಧವನ್ನು ಚರ್ಚಿಸುತ್ತಾರೆ. ಒಂದು ನಿರ್ದಿಷ್ಟ ಕಾಲಘಟ್ಟದ ಜನರ ಮನಸ್ಥಿತಿ ಆ ಕಾಲದ ಸಾಹಿತ್ಯದ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಅವರು ವಿವರಿಸುತ್ತಾರೆ. ಉದಾಹರಣೆಗೆ, ಜಾಗತೀಕರಣದ ನಂತರದ ಕನ್ನಡ ಸಾಹಿತ್ಯದಲ್ಲಿ ವ್ಯಕ್ತಿಯ ಒಂಟಿತನ, ಖಿನ್ನತೆ ಮತ್ತು ಅನಿಶ್ಚಿತತೆಯ ಭಾವನೆಗಳು ಹೆಚ್ಚಾಗಿ ಕಾಣಸಿಗುತ್ತವೆ. ಇದು ಇಂದಿನ ಸಮಾಜದ ಮಾನಸಿಕ ಸ್ಥಿತಿಗೆ ಸಾಕ್ಷಿಯಾಗಿದೆ. ವಿವೇಕ ಶಾನಭಾಗ್ ಅಥವಾ ಜಯಂತ ಕಾಯ್ಕಿಣಿ ಅವರ ಕಥೆಗಳಲ್ಲಿನ ಪಾತ್ರಗಳು ನಗರ ಜೀವನದ ಸಂಕೀರ್ಣತೆಗಳ ನಡುವೆ ತಮ್ಮ ಅಸ್ಮಿತೆಯನ್ನು ಹುಡುಕುವ ಪ್ರಯತ್ನ ಮಾಡುತ್ತವೆ. ಇಲ್ಲಿ ಮನೋವಿಜ್ಞಾನವು ಕೇವಲ ವೈಯಕ್ತಿಕವಲ್ಲ, ಅದು ಸಾಮಾಜಿಕ ಮನೋವಿಜ್ಞಾನದ ಭಾಗವಾಗಿ ಸಾಹಿತ್ಯದಲ್ಲಿ ಅಭಿವ್ಯಕ್ತಗೊಳ್ಳುತ್ತಿದೆ.

ಮನೋವಿಜ್ಞಾನ ಮತ್ತು ಸಾಹಿತ್ಯದ ಈ ಅನ್ವೇಷಣೆಯ ಹಾದಿಯಲ್ಲಿ ನಾವು ಗಿರೀಶ್ ಕಾರ್ನಾಡರ ನಾಟಕಗಳನ್ನು ಗಮನಿಸಿದಾಗ, ಅಲ್ಲಿ ಮಾನವನ ವ್ಯಕ್ತಿತ್ವದ ವಿಘಟನೆ ಮತ್ತು ಪೂರ್ಣತೆಯ ಹುಡುಕಾಟದ ಮನೋವೈಜ್ಞಾನಿಕ ನೆಲೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಕಾರ್ನಾಡರ 'ಹಯವದನ' ನಾಟಕವು ಮನುಷ್ಯನ ದೈಹಿಕ ಮತ್ತು ಮಾನಸಿಕ ಅಸ್ಮಿತೆಯ ನಡುವಿನ ಸಂಘರ್ಷವನ್ನು ಚಿತ್ರಿಸುತ್ತದೆ. ತಲೆ ಮತ್ತು ಒಡಲು ಅದಲುಬದಲಾದಾಗ ಉಂಟಾಗುವ ಗೊಂದಲವು, ಮನುಷ್ಯನ ಬುದ್ಧಿಶಕ್ತಿ ಮತ್ತು ಲೈಂಗಿಕ ಪ್ರವೃತ್ತಿಗಳ ನಡುವಿನ ಎಳೆತವನ್ನು ಸಂಕೇತಿಸುತ್ತದೆ. ಇದು ಫ್ರಾಯ್ಡ್ ಮತ್ತು ಜುಂಗ್ ಅವರ ಸಿದ್ಧಾಂತಗಳ ಆಳವಾದ ಪ್ರಭಾವವನ್ನು ಹೊಂದಿರುವಂತೆ ತೋರುತ್ತದೆ. ಈ ನಾಟಕವನ್ನು ಓದುವಾಗ ಓದುಗನು ತನ್ನೊಳಗಿನ ದ್ವಂದ್ವಗಳನ್ನು ಪಾತ್ರಗಳ ಮೂಲಕ ವಿಶ್ಲೇಷಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಾಹಿತ್ಯವು ಇಲ್ಲಿ ಮನುಷ್ಯನ ಅಪೂರ್ಣತೆಯ ಅರಿವನ್ನು ಮೂಡಿಸುವ ಮೂಲಕ ಮಾನಸಿಕ ಪರಿಪಕ್ವತೆಗೆ ದಾರಿ ಮಾಡಿಕೊಡುತ್ತದೆ. ಕಾರ್ನಾಡರ 'ಯಯಾತಿ' ನಾಟಕವೂ ಸಹ ಮುಪ್ಪು ಮತ್ತು ಯೌವನದ ನಡುವಿನ ಮಾನಸಿಕ ಹಂಬಲವನ್ನು ವಿವರಿಸುತ್ತದೆ, ಇದು ವಯಸ್ಸಾಗುವಿಕೆಯ ಬಗ್ಗೆ ಮನುಷ್ಯನಿಗಿರುವ ಆತಂಕವನ್ನು ಪ್ರತಿಬಿಂಬಿಸುತ್ತದೆ.

ನವ್ಯ ಸಾಹಿತ್ಯದ ಪ್ರಮುಖ ಲೇಖಕರಾದ ಶಾಂತಿನಾಥ ದೇಸಾಯಿ ಅವರ 'ಮುಕ್ತಿ' ಕಾದಂಬರಿಯನ್ನು ಪರಿಶೀಲಿಸಿದರೆ, ಅಲ್ಲಿ ಕಾಮ ಮತ್ತು ಅಸ್ತಿತ್ವದ ಪ್ರಶ್ನೆಗಳು ಮನೋವೈಜ್ಞಾನಿಕ ನೆಲೆಯಲ್ಲಿ ಚರ್ಚಿತವಾಗಿವೆ. ಮನುಷ್ಯನ ಲೈಂಗಿಕ ಆಸೆಗಳು ಸಮಾಜದ ಕಟ್ಟುಪಾಡುಗಳೊಂದಿಗೆ ಘರ್ಷಿಸಿದಾಗ ಉಂಟಾಗುವ ವಿಕೃತಿಗಳನ್ನು ದೇಸಾಯಿಯವರು ಅತ್ಯಂತ ನಿಕಟವಾಗಿ ಚಿತ್ರಿಸಿದ್ದಾರೆ. ಇದು ಮನೋವಿಶ್ಲೇಷಣೆಯ ಒಂದು ಪ್ರಮುಖ ಭಾಗವಾದ 'ದಮನಿತ ಆಸೆಗಳ ವಿಶ್ಲೇಷಣೆ'ಯನ್ನು ನೆನಪಿಸುತ್ತದೆ. ಸಾಹಿತ್ಯವು ಇಂತಹ ಕಠಿಣ ಸತ್ಯಗಳನ್ನು ಮುಚ್ಚುಮರೆಯಿಲ್ಲದೆ ಹೇಳುವ ಮೂಲಕ ಸಮಾಜದ ಕಪಟತನವನ್ನು ಎತ್ತಿ ತೋರಿಸುತ್ತದೆ. ಯಶವಂತ ಚಿತ್ತಾಲರ 'ಶಿಕಾರಿ' ಕಾದಂಬರಿಯ ನಾಯಕ ನಾಗಪ್ಪ ಎದುರಿಸುವ ಮಾನಸಿಕ ಒತ್ತಡವು ಆಧುನಿಕ ಕಾರ್ಪೊರೇಟ್ ಜಗತ್ತಿನ ಕ್ರೌರ್ಯವನ್ನು ಮತ್ತು ಒಬ್ಬ ವ್ಯಕ್ತಿಯನ್ನು ಮಾನಸಿಕವಾಗಿ ಹೇಗೆ ಕುಸಿಯುವಂತೆ ಮಾಡಬಹುದು ಎಂಬುದನ್ನು ವಿವರಿಸುತ್ತದೆ. ಚಿತ್ತಾಲರ ಬರಹಗಳಲ್ಲಿ ಕಂಡುಬರುವ 'ಪರಕೀಯತೆ'ಯ ಭಾವವು ಆಧುನಿಕ ಮನೋವಿಜ್ಞಾನದ ಪ್ರಮುಖ ಅಧ್ಯಯನ ವಿಷಯವಾಗಿದೆ. ವ್ಯಕ್ತಿಯು ತನ್ನ ಸುತ್ತಲ ಪರಿಸರದಿಂದ ಮತ್ತು ಕೊನೆಗೆ ತನ್ನಿಂದಲೇ ತಾನು ಹೇಗೆ ದೂರವಾಗುತ್ತಾನೆ ಎಂಬುದು ಇಲ್ಲಿನ ಮುಖ್ಯ ವಸ್ತು.

ಕನ್ನಡದ ಸ್ತ್ರೀವಾದಿ ಸಾಹಿತ್ಯವು ಹೆಣ್ಣಿನ ಮನಸ್ಸಿನ ನಿಗೂಢತೆಗಳನ್ನು ಬಿಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಸಾರಾ ಅಬೂಬಕ್ಕರ್ ಅವರ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯು ಧಾರ್ಮಿಕ ಮತ್ತು ಸಾಮಾಜಿಕ ಕಟ್ಟುಪಾಡುಗಳ ನಡುವೆ

ಹೆಣ್ಣಿನ ಮಾನಸಿಕ ಸ್ಥಿತಿ ಹೇಗೆ ಹರಿದು ಹಂಚಿಹೋಗುತ್ತದೆ ಎಂಬುದನ್ನು ಮನಕಲಕುವಂತೆ ಚಿತ್ರಿಸುತ್ತದೆ. ಇಲ್ಲಿನ ನಾಯಕಿಯ ಮಾನಸಿಕ ಯಾತನೆಯು ಕೇವಲ ವೈಯಕ್ತಿಕವಲ್ಲ, ಅದು ವ್ಯವಸ್ಥೆಯ ವಿರುದ್ಧದ ಪ್ರತಿರೋಧವೂ ಆಗಿದೆ. ಹೆಣ್ಣಿನ ಸುಪ್ತ ಮನಸ್ಸಿನ ಆಶೋತ್ತರಗಳನ್ನು ಲೇಖಕಿಯರು ಸಾಹಿತ್ಯದ ಮೂಲಕ ಹೊರಹಾಕಿದಾಗ, ಅದು ಸಮಾಜಕ್ಕೆ ಒಂದು ಹೊಸ ದೃಷ್ಟಿಕೋನವನ್ನು ನೀಡುತ್ತದೆ. ವಿಮರ್ಶಕ ಕೆ. ವಿ. ನಾರಾಯಣ ಅವರು ತಮ್ಮ ಲೇಖನಗಳಲ್ಲಿ ಭಾಷೆ ಮತ್ತು ಮನಸ್ಸಿನ ಸಂಬಂಧವನ್ನು ವಿವರಿಸುತ್ತಾ, ನಾವು ಬಳಸುವ ಭಾಷೆಯು ನಮ್ಮ ಆಲೋಚನಾ ಕ್ರಮವನ್ನು ಹೇಗೆ ರೂಪಿಸುತ್ತದೆ ಎಂಬುದನ್ನು ತಿಳಿಸುತ್ತಾರೆ. ಸಾಹಿತ್ಯದ ಭಾಷೆಯು ಸಾಮಾನ್ಯ ಭಾಷೆಗಿಂತ ಭಿನ್ನವಾಗಿದ್ದು, ಅದು ಓದುಗನ ಮನಸ್ಸಿನ ಆಳದ ಸಂವೇದನೆಗಳನ್ನು ಜಾಗೃತಗೊಳಿಸುವ ಶಕ್ತಿಯನ್ನು ಹೊಂದಿದೆ.

ದಲಿತ ಸಾಹಿತ್ಯವು ಮನುಷ್ಯನ ಸ್ವಾಭಿಮಾನ ಮತ್ತು ಅವಮಾನದ ಮನೋವಿಜ್ಞಾನವನ್ನು ಚರ್ಚಿಸುತ್ತದೆ. ಸಿದ್ಧಲಿಂಗಯ್ಯನವರ 'ಊರು ಕೇರಿ' ಆತ್ಮಕಥೆಯಲ್ಲಿ ಬರುವ ಬಾಲ್ಯದ ನೆನಪುಗಳು ಮತ್ತು ಅವಮಾನದ ಪ್ರಸಂಗಗಳು ಒಬ್ಬ ವ್ಯಕ್ತಿಯ ಮನಸ್ಸಿನ ಮೇಲೆ ಎಂತಹ ಶಾಶ್ವತ ಪರಿಣಾಮ ಬೀರುತ್ತವೆ ಎಂಬುದನ್ನು ತೋರಿಸುತ್ತವೆ. ಸಾಮಾಜಿಕ ಶೋಷಣೆಯು ಮನುಷ್ಯನ ಆತ್ಮವಿಶ್ವಾಸವನ್ನು ಹೇಗೆ ಕುಗ್ಗಿಸುತ್ತದೆ ಮತ್ತು ನಂತರದ ದಿನಗಳಲ್ಲಿ ಅದು ಹೇಗೆ ಪ್ರತಿರೋಧದ ಜ್ವಾಲೆಯಾಗಿ ಮಾರ್ಪಡುತ್ತದೆ ಎಂಬುದು ಇಲ್ಲಿನ ಸಂಶೋಧನಾತ್ಮಕ ಅಂಶ. ಮನೋವಿಜ್ಞಾನದ ದೃಷ್ಟಿಯಿಂದ, ಶೋಷಿತ ಸಮುದಾಯಗಳ ಸಾಹಿತ್ಯವು ಒಂದು ರೀತಿಯ 'ಸಾಮೂಹಿಕ ಚಿಕಿತ್ಸೆ'ಯಾಗಿ ಕಾರ್ಯನಿರ್ವಹಿಸುತ್ತದೆ. ನೋವನ್ನು ಹಂಚಿಕೊಳ್ಳುವ ಮೂಲಕ ಮತ್ತು ಅದನ್ನು ಅಕ್ಷರ ರೂಪಕ್ಕಿಳಿಸುವ ಮೂಲಕ ಆ ಸಮುದಾಯವು ತನ್ನ ಮಾನಸಿಕ ಬಲವನ್ನು ವೃದ್ಧಿಸಿಕೊಳ್ಳುತ್ತದೆ. ಬರಗೂರು ರಾಮಚಂದ್ರಪ್ಪನವರ ಕೃತಿಗಳಲ್ಲಿ ಕಾಣುವ ಬಂಡಾಯ ಮನೋಭಾವವು ಸಾಮಾಜಿಕ ಅಸಮಾನತೆಯ ವಿರುದ್ಧದ ಮಾನಸಿಕ ಸ್ಫೋಟವಾಗಿದೆ.

ಕನ್ನಡ ವಿಮರ್ಶೆಯಲ್ಲಿ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು ಕಾವ್ಯದ ಮಾನಸಿಕ ನೆಲೆಗಳ ಬಗ್ಗೆ ಆಳವಾಗಿ ಅಭ್ಯಸಿಸಿದ್ದಾರೆ. ಕವಿಯ ಭಾವಪ್ರಪಂಚವು ಪದಗಳಲ್ಲಿ ಹೇಗೆ ಮರುಸೃಷ್ಟಿಯಾಗುತ್ತದೆ ಎಂಬುದನ್ನು ಅವರು ತಮ್ಮ ವಿಮರ್ಶಾ ಲೇಖನಗಳಲ್ಲಿ ವಿವರಿಸಿದ್ದಾರೆ. ಸಾಹಿತ್ಯವು ಕೇವಲ ಬೌದ್ಧಿಕ ಕಸರತ್ತಲ್ಲ, ಅದು ಭಾವನೆಗಳ ಸಂವಹನ. ಈ ಸಂವಹನ ಪ್ರಕ್ರಿಯೆಯಲ್ಲಿ ಲೇಖಕ ಮತ್ತು ಓದುಗನ ನಡುವೆ ಒಂದು 'ಅಗೋಚರ ಸೇತುವೆ' ನಿರ್ಮಾಣವಾಗುತ್ತದೆ. ಈ ಸೇತುವೆಯೇ ಮನೋವಿಜ್ಞಾನ. ಪಾತ್ರಗಳ ನಡವಳಿಕೆಯನ್ನು ವಿಶ್ಲೇಷಿಸುವಾಗ ನಾವು ಲೇಖಕನ ಜೀವನಚರಿತ್ರೆಯನ್ನು ಆಧರಿಸುವುದುಂಟು. ಆದರೆ, ಮನೋವೈಜ್ಞಾನಿಕ ವಿಮರ್ಶೆಯು ಕೃತಿಯನ್ನು ಸ್ವತಂತ್ರ ಘಟಕವಾಗಿ ನೋಡಿ, ಅದರೊಳಗಿನ ಸಂಕೇತಗಳನ್ನು ಮತ್ತು ಪ್ರತಿಮೆಗಳನ್ನು ವಿಶ್ಲೇಷಿಸುತ್ತದೆ. ದ.ರಾ. ಬೇಂದ್ರೆಯವರ ಕವಿತೆಗಳಲ್ಲಿ ಬರುವ 'ತಾಯಿ' 'ಸಖಿ'ಯ ಪ್ರತಿಮೆಯು, ಜುಂಗ್ ಹೇಳುವ 'Great Mother' ಆರ್ಕಿಟೈಪ್‌ಗೆ ಹತ್ತಿರವಾಗಿದೆ. ಇದು ಮನುಷ್ಯನ ಮನಸ್ಸಿನಲ್ಲಿರುವ ಮಮತೆ ಮತ್ತು ರಕ್ಷಣೆಯ ಆದಿಮ ಹಂಬಲವನ್ನು ಪ್ರತಿನಿಧಿಸುತ್ತದೆ.

ಆಧುನಿಕ ಕನ್ನಡ ಕಥೆಗಳಲ್ಲಿ, ವಿಶೇಷವಾಗಿ ವಿವೇಕ ಶಾನಭಾಗರ 'ಘಾಚರ್ ಘೋಚರ್' ಅಂತಹ ಕೃತಿಗಳಲ್ಲಿ, ಮಧ್ಯಮ ವರ್ಗದ ಕುಟುಂಬದ ಮಾನಸಿಕ ವಿಘಟನೆಯನ್ನು ಅತ್ಯಂತ ಸೂಕ್ಷ್ಮವಾಗಿ ಹಿಡಿಯಲಾಗಿದೆ. ಹಣ ಮತ್ತು ಅಂತಸ್ತು ಹೆಚ್ಚಾದಂತೆ ಮನುಷ್ಯನ ಸಂಬಂಧಗಳಲ್ಲಿ ಹೇಗೆ ಕಹಿ ಬೆರೆಯುತ್ತದೆ ಮತ್ತು ಅದು ಆಂತರಿಕ ನೆಮ್ಮದಿಯನ್ನು ಹೇಗೆ ಕೆಡಿಸುತ್ತದೆ ಎಂಬುದು ಇಲ್ಲಿನ ವಸ್ತು. ಇದು 'ಸಂಸಾರಿಕ ಮನೋವಿಜ್ಞಾನ'ಕ್ಕೆ (Family Psychology) ಒಂದು ಅತ್ಯುತ್ತಮ ಉದಾಹರಣೆ. ಇಂತಹ ಓದು ನಮ್ಮನ್ನು ಆತ್ಮಾವಲೋಕನಕ್ಕೆ ಪ್ರೇರೇಪಿಸುತ್ತದೆ. ನಾವು ಯಾರು? ನಮ್ಮ ಆಸೆಗಳ ಮೂಲ ಯಾವುದು? ಸಮಾಜದ ನಿರೀಕ್ಷೆಗಳಿಗೆ ತಕ್ಕಂತೆ ಬದುಕುವ ಒತ್ತಡದಲ್ಲಿ ನಾವು ನಮ್ಮ ನೈಜತೆಯನ್ನು ಕಳೆದುಕೊಳ್ಳುತ್ತಿದ್ದೇವೆಯೇ? ಇಂತಹ ಪ್ರಶ್ನೆಗಳನ್ನು ಸಾಹಿತ್ಯವು ನಮ್ಮ ಮುಂದೆ ಇಡುತ್ತದೆ. ಮನೋವಿಜ್ಞಾನವು ಈ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಲು ಬೇಕಾದ ಸಾಧನಗಳನ್ನು ಒದಗಿಸುತ್ತದೆ.

ಜಯಂತ ಕಾಯ್ಕಿಣಿ ಅವರ ಕಥೆಗಳಲ್ಲಿ ಮುಂಬೈನಂತಹ ಮಹಾನಗರಗಳ ಗಿಜಿಗುಟ್ಟುವ ಜೀವನದ ನಡುವೆಯೂ ವ್ಯಕ್ತಿಯೊಬ್ಬ ಅನುಭವಿಸುವ ಒಂಟಿತನ ಮತ್ತು ಆ ಒಂಟಿತನದ ನಡುವೆ ಹರಿಯುವ ಪ್ರೀತಿಯ ಸೆಲೆಗಳನ್ನು ಮನೋವೈಜ್ಞಾನಿಕವಾಗಿ ಸೆರೆಹಿಡಿಯಲಾಗಿದೆ. ಮನುಷ್ಯನು ಯಾಂತ್ರಿಕ ಜಗತ್ತಿನಲ್ಲಿ ತನ್ನನ್ನು ತಾನು ಹೇಗೆ ಕಳೆದುಕೊಳ್ಳುತ್ತಾನೆ ಮತ್ತು ಸಣ್ಣಪುಟ್ಟ ಸಂವೇದನೆಗಳ ಮೂಲಕ ಹೇಗೆ ಮತ್ತೆ ತನ್ನನ್ನು ತಾನು ಕಂಡುಕೊಳ್ಳುತ್ತಾನೆ ಎಂಬುದು ಇವರ ಕಥೆಗಳ ವಸ್ತು. ಇದನ್ನು ಮನೋವಿಜ್ಞಾನದಲ್ಲಿ 'ಅಸ್ತಿತ್ವವಾದಿ ಸಂಕಟ' (Existential Anxiety) ಎಂದು ಕರೆಯಬಹುದು. ಕಾಯ್ಕಿಣಿಯವರ ಕಥೆಗಳನ್ನು ಓದುವಾಗ ಓದುಗನಿಗೆ ತನ್ನದೇ ಆದ ದೈನಂದಿನ ಜೀವನದ ಸಣ್ಣ ಪುಟ್ಟ ಕ್ಷಣಗಳಲ್ಲಿಯೂ ದೈವತ್ವ ಅಥವಾ ಜೀವನದ ಸಾರ್ಥಕತೆ ಕಾಣಲು ಸಾಧ್ಯವಾಗುತ್ತದೆ. ಇದು ಓದುಗನ ಮಾನಸಿಕ ಒತ್ತಡವನ್ನು ತಗ್ಗಿಸಿ, ಬದುಕಿನ ಬಗೆಗಿನ ಭರವಸೆಯನ್ನು ಹೆಚ್ಚಿಸುವ 'ಆಶಾವಾದಿ ಮನೋವಿಜ್ಞಾನದ' (Positive Psychology) ಭಾಗವಾಗಿದೆ.

ಓದುವಿಕೆ ಎಂಬುದು ಮೆದುಳಿನ ಒಂದು ಸಂಕೀರ್ಣ ಕ್ರಿಯೆ. ನಾವು ಒಂದು ಕಾದಂಬರಿಯನ್ನು ಓದುತ್ತಿರುವಾಗ ನಮ್ಮ ಮೆದುಳಿನ ವಿವಿಧ ಭಾಗಗಳು ಸಕ್ರಿಯವಾಗುತ್ತವೆ. ಪಾತ್ರಗಳು ಅನುಭವಿಸುವ ಸಂವೇದನೆಗಳನ್ನು ನಮ್ಮ ಮೆದುಳು ಅಕ್ಷರಶಃ ಅನುಭವಿಸುತ್ತದೆ. ಇದನ್ನು 'Mirror Neurons' ಗಳ ಕಾರ್ಯಕ್ಷಮತೆ ಎಂದು ವಿಜ್ಞಾನ ಹೇಳುತ್ತದೆ. ಸಾಹಿತ್ಯವು ಮನುಷ್ಯನ ಸೃಜನಶೀಲತೆಯನ್ನು ಉದ್ದೀಪಿಸುವುದರ ಜೊತೆಗೆ ಆತನ ಭಾವನಾತ್ಮಕ ಬುದ್ಧಿವಂತಿಕೆಯನ್ನು ಹೆಚ್ಚಿಸುತ್ತದೆ. ಕನ್ನಡದ ಪ್ರಸಿದ್ಧ ಮನೋವೈದ್ಯರು ಮತ್ತು ಲೇಖಕರೂ ಆಗಿರುವ ಸಿ. ಆರ್. ಚಂದ್ರಶೇಖರ್ ಅವರು ಸಾಹಿತ್ಯದ ಮೂಲಕ ಮನಸ್ಸಿನ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬಹುದು ಎಂಬುದರ ಬಗ್ಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಅವರ ಪ್ರಕಾರ, 'ಸಾಹಿತ್ಯವು ಮನುಷ್ಯನಿಗೆ ಜೀವನದ ಅರ್ಥವನ್ನು ಹುಡುಕಿಕೊಡುವಲ್ಲಿ ಮತ್ತು ಒತ್ತಡದ ಸಂದರ್ಭಗಳಲ್ಲಿ ಸಾಂತ್ವನ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.' ಲೇಖಕನು ತನ್ನ ಅನುಭವಗಳನ್ನು ಅಕ್ಷರ ರೂಪಕ್ಕಿಳಿಸಿದಾಗ ಅವನ ಮನಸ್ಸು ಹೇಗೆ ಹಗುರವಾಗುತ್ತದೆಯೋ, ಹಾಗೆಯೇ ಅದನ್ನು ಓದುವ ಓದುಗನಿಗೂ ಒಂದು ರೀತಿಯ ಮಾನಸಿಕ ಬಿಡುಗಡೆ ಸಿಗುತ್ತದೆ.

ಸಂಶೋಧನೆಯ ದೃಷ್ಟಿಯಿಂದ ನೋಡಿದಾಗ, ಸಾಹಿತ್ಯ ಮತ್ತು ಮನೋವಿಜ್ಞಾನದ ನಡುವಿನ ಈ ಅಂತರ್ ಸಂಬಂಧವು ಇನ್ನೂ ಹೆಚ್ಚಿನ ಆಳವಾದ ಅಧ್ಯಯನವನ್ನು ಬಯಸುತ್ತದೆ. ಪಾತ್ರಗಳ ಮನೋವಿಶ್ಲೇಷಣೆ ಮಾಡುವುದು ಎಂದರೆ ಕೇವಲ ಅವುಗಳಿಗೆ ವೈದ್ಯಕೀಯ ಪಟ್ಟಿಯನ್ನು ಹಚ್ಚುವುದಲ್ಲ, ಬದಲಾಗಿ ಮಾನವ ಸ್ವಭಾವದ ವೈವಿಧ್ಯತೆಯನ್ನು ಗೌರವಿಸುವುದು. ಕನ್ನಡದ ಸ್ತ್ರೀವಾದಿ ಸಾಹಿತ್ಯವು ಹೆಣ್ಣಿನ ಅಂತರಂಗದ ಲೋಕವನ್ನು ಶೋಧಿಸುವಲ್ಲಿ ಯಶಸ್ವಿಯಾಗಿದೆ. ವೈದೇಹಿ ಅವರ ಕಥೆಗಳಲ್ಲಿನ ಹೆಣ್ಣು ಪಾತ್ರಗಳು ಸಮಾಜದ ಕಟ್ಟುಪಾಡುಗಳ ನಡುವೆ ತಮ್ಮ ಸ್ವಂತಿಕೆಯನ್ನು ಉಳಿಸಿಕೊಳ್ಳಲು ಪಡುವ ಮಾನಸಿಕ ಹೆಣಗಾಟವು ಅತ್ಯಂತ ಸೂಕ್ಷ್ಮವಾದುದು. ಇದು ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಮನೋಸ್ಥಿತಿ ಹೇಗಿರುತ್ತದೆ ಎಂಬುದಕ್ಕೆ ಕನ್ನಡಿ ಹಿಡಿಯುತ್ತದೆ. ಹೀಗೆ ಸಾಹಿತ್ಯವು ಮನೋವಿಜ್ಞಾನಕ್ಕೆ ಕಚ್ಚಾ ವಸ್ತುವನ್ನು ಒದಗಿಸಿದರೆ, ಮನೋವಿಜ್ಞಾನವು ಸಾಹಿತ್ಯಕ್ಕೆ ವೈಜ್ಞಾನಿಕ ದೃಷ್ಟಿಕೋನವನ್ನು ನೀಡುತ್ತದೆ. ಈ ಎರಡರ ಸಮಾಗಮದಿಂದ ಹುಟ್ಟುವ ತಿಳುವಳಿಕೆಯು ಮನುಷ್ಯನನ್ನು ಹೆಚ್ಚು ಸಹನಾಶೀಲನನ್ನಾಗಿ ಮತ್ತು ಪ್ರಬುದ್ಧನನ್ನಾಗಿ ಮಾಡುತ್ತದೆ.

ಸಾಹಿತ್ಯ ಮತ್ತು ಮನೋವಿಜ್ಞಾನದ ಈ ಸಂಯೋಜನೆಯು ಶಿಕ್ಷಣ ಕ್ಷೇತ್ರದಲ್ಲಿಯೂ ಅತ್ಯಂತ ಪ್ರಸ್ತುತವಾಗಿದೆ. ವಿದ್ಯಾರ್ಥಿಗಳಲ್ಲಿ ಸಹಾನುಭೂತಿ ಮತ್ತು ವಿಮರ್ಶಾತ್ಮಕ ಆಲೋಚನೆಯನ್ನು ಬೆಳೆಸಲು ಸಾಹಿತ್ಯದ ಓದು ಅನಿವಾರ್ಯ. ಸಾಹಿತ್ಯವು ಮನುಷ್ಯನ ವ್ಯಕ್ತಿತ್ವದ ಸಮಗ್ರ ವಿಕಸನಕ್ಕೆ ಪೂರಕವಾಗಿದೆ. ನಾವು ಸಾಹಿತ್ಯವನ್ನು ಕೇವಲ ಕಲೆಯಾಗಿ ನೋಡದೆ, ಅದನ್ನು ಮನುಷ್ಯನ ಮಾನಸಿಕ ಆರೋಗ್ಯದ ಸಂಜೀವಿನಿಯಾಗಿ ನೋಡಬೇಕಿದೆ. ಕನ್ನಡ ಸಾಹಿತ್ಯದ ಶ್ರೀಮಂತ ಪರಂಪರೆಯು ನಮಗೆ ಅಸಂಖ್ಯಾತ ಮನೋವೈಜ್ಞಾನಿಕ ಒಳನೋಟಗಳನ್ನು ನೀಡಿದೆ. ಇವುಗಳನ್ನು ಆಧರಿಸಿ ಸಂಶೋಧನೆಗಳು ನಡೆದರೆ, ಅದು ಕನ್ನಡ ಸಾಹಿತ್ಯ

ಲೋಕಕ್ಕೆ ಮಾತ್ರವಲ್ಲದೆ ಮಾನವನ ವರ್ತನೆಯನ್ನು ಅರ್ಥಮಾಡಿಕೊಳ್ಳುವ ವಿಜ್ಞಾನಕ್ಕೂ ದೊಡ್ಡ ಕೊಡುಗೆಯಾಗುತ್ತದೆ. ಅಂತರಂಗದ ಅರಿವೇ ಪರಮ ಸುಖ ಎಂಬ ತತ್ವವನ್ನು ಸಾಹಿತ್ಯವು ಮನೋವಿಜ್ಞಾನದ ನೆರವಿನೊಂದಿಗೆ ನಮಗೆ ಸಾಬೀತುಪಡಿಸುತ್ತದೆ.

ಮನೋವಿಜ್ಞಾನ ಮತ್ತು ಸಾಹಿತ್ಯ ಓದು ಎಂಬುದು ಅವಿನಾಭಾವ ಸಂಬಂಧದ ಕ್ರಿಯೆ. ನಾವು ಓದುವ ಪ್ರತಿ ಪುಸ್ತಕವೂ ನಮ್ಮ ಮನಸ್ಸಿನ ಒಂದು ಹೊಸ ಬಾಗಿಲನ್ನು ತೆರೆಯುತ್ತದೆ. ಸಾಹಿತ್ಯವು ನಮ್ಮನ್ನು ಪ್ರಶ್ನಿಸುವಂತೆ ಮಾಡುತ್ತದೆ, ನಮ್ಮ ನಂಬಿಕೆಗಳನ್ನು ಮರುಪರಿಶೀಲಿಸುವಂತೆ ಪ್ರೇರೇಪಿಸುತ್ತದೆ. ಕನ್ನಡದ ಸಾಹಿತ್ಯ ಸಂಪತ್ತು ಅಕ್ಷಯವಾದುದು. ಪಂಪನಿಂದ ಹಿಡಿದು ಇಂದಿನ ಯುವ ಬರಹಗಾರರವರೆಗೆ ಎಲ್ಲರೂ ಮನುಷ್ಯನ ಮನಸ್ಸನ್ನೇ ಕೇಂದ್ರವಾಗಿಟ್ಟುಕೊಂಡು ಸಾಹಿತ್ಯ ಸೃಷ್ಟಿ ಮಾಡಿದ್ದಾರೆ. ಈ ಸಾಹಿತ್ಯವನ್ನು ಮನೋವೈಜ್ಞಾನಿಕ ನೆಲೆಯಲ್ಲಿ ಅಭ್ಯಸಿಸುವುದು ಎಂದರೆ ನಮ್ಮನ್ನು ನಾವು ಅರಿತುಕೊಳ್ಳುವುದು ಎಂದರ್ಥ. ಸಂಶೋಧನೆಯು ಕೇವಲ ಅಂಕಿಅಂಶಗಳಿಗೆ ಸೀಮಿತವಾಗದೆ, ಮಾನವ ಸಂವೇದನೆಗಳ ಆಳವನ್ನು ಮುಟ್ಟಿದಾಗ ಮಾತ್ರ ಅದು ಸಾರ್ಥಕವಾಗುತ್ತದೆ. ಸಾಹಿತ್ಯ ಮತ್ತು ಮನೋವಿಜ್ಞಾನದ ಈ ಅವಿನಾಭಾವ ಸಂಬಂಧವು ಭವಿಷ್ಯದಲ್ಲಿ ಮಾನವ ಸಂಬಂಧಗಳನ್ನು ಸುಧಾರಿಸುವಲ್ಲಿ ಮತ್ತು ಸಮಾಜದ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ದಾರಿದೀಪವಾಗಲಿದೆ.

ಅಧ್ಯಯನ ಕೃತಿಗಳು

೧. ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ – ಎಲ್. ಎಸ್. ಶೇಷಗಿರಿ ರಾವ್

೨. ವಿಮರ್ಶೆಯ ಪೂರ್ವ ಪಶ್ಚಿಮ – ಜಿ. ಎಸ್. ಶಿವರುದ್ರಪ್ಪ

೩. ಮನಸ್ಸು ಮತ್ತು ಸಾಹಿತ್ಯ – ಸಿ. ಆರ್. ಚಂದ್ರಶೇಖರ್

ಸಾಹಿತ್ಯದಲ್ಲಿನ ಮನೋವೈಜ್ಞಾನಿಕ ಪರಿಕಲ್ಪನೆಗಳು

ಡಾ. ಎಸ್. ಸುರ್ಮ
ಸಹ ಪ್ರಾಧ್ಯಾಪಕರು, ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮುಕ್ತಗಂಗೋತ್ರಿ, ಮೈಸೂರು.

ಪೀಠಿಕೆ

ಸಾಹಿತ್ಯ ಮತ್ತು ಮನೋವಿಜ್ಞಾನದ ನಡುವೆ ಅವಿನಾಭಾವ ಸಂಬಂಧವಿದೆ. ಪ್ರತಿಯೊಬ್ಬ ಮನೋವಿಜ್ಞಾನಿಯೂ ಸಾಹಿತ್ಯಾಸಕ್ತರಾಗಿರುತ್ತಾರೆ ಹಾಗೂ ಪ್ರತಿ ಸಾಹಿತಿಯೂ ಒಂದು ರೀತಿಯಲ್ಲಿ ಮನೋವಿಜ್ಞಾನಿಯಾಗಿರುತ್ತಾರೆ. ಇವರಲ್ಲಿ ಕಂಡು ಬರುವ ಮುಖ್ಯ ವ್ಯತ್ಯಾಸವೆಂದರೆ, ಮನೋವಿಜ್ಞಾನಿಯು ವಸ್ತುನಿಷ್ಟವಾಗಿ ವ್ಯಕ್ತಿಗಳ ಭಾವನೆ, ಆಲೋಚನೆ, ಸ್ಫೂರ್ತಿ, ಅಭಿಪ್ರೇರಣೆ, ಮಾನಸಿಕ ಚಟುವಟಿಕೆಗಳು ಮತ್ತು ಅನುಭವಗಳನ್ನು ವಿಶ್ಲೇಷಿಸುತ್ತ ವ್ಯಕ್ತಿಯ ವ್ಯಕ್ತಿತ್ವವನ್ನು ಅರ್ಥೈಸಿಕೊಳ್ಳುತ್ತಾರೆ. ಸಾಹಿತಿಗಳು ಕಾಲ್ಪನಿಕವಾಗಿ ಭಾವನೆಗಳು, ಆಲೋಚನೆಗಳು, ಪ್ರೇರಣೆ, ಅಭಿಪ್ರೇರಣೆ, ಮಾನಸಿಕ ಚಟುವಟಿಕೆಗಳು ಮತ್ತು ಅನುಭವಗಳನ್ನು ಅಲೋಚಿಸಿ ಪಾತ್ರಗಳನ್ನು ಸೃಷ್ಟಿಸಿ ಅವುಗಳ ಮುಖಾಂತರ ಮಾನವ ವರ್ತನೆಗಳ ಸಾಧ್ಯತೆಗಳನ್ನು ವ್ಯಕ್ತಿತ್ವಗಳಾಗಿ ರೂಪಿಸಿ ವ್ಯಕ್ತಿ ನಿಷ್ಠವಾಗಿ ಸಾಹಿತ್ಯರೂಪದಲ್ಲಿ ಅಭಿವ್ಯಕ್ತಪಡಿಸುತ್ತಾರೆ.

ಸಾಹಿತ್ಯದ ವಿವಿಧ ಪ್ರಕಾರಗಳಾದ ಕಥೆ, ಕಾದಂಬರಿ, ಕಾವ್ಯ, ಪದ್ಯ, ಕವನ, ವಿಮರ್ಶೆ ಮುಂತಾದ ರೂಪಗಳಲ್ಲಿ ಮನೋವಿಜ್ಞಾನದ ಹಲವಾರು ಪರಿಕಲ್ಪನೆಗಳನ್ನು ಬಳಸಲಾಗುತ್ತದೆ. ಸಾಹಿತಿಗಳು ಸಾಹಿತ್ಯವನ್ನು ರಚಿಸಲು ಬೇಕಾಗುವ ಜ್ಞಾನವನ್ನು ಮಾತ್ರ ಹೊಂದಿರದೆ ಮಾನವನ ವರ್ತನೆಯ ಬಗ್ಗೆ ಗಾಢವಾದ ಆಲೋಚನೆಗಳು ಮತ್ತು ಅವಲೋಕಿಸುವಿಕೆಯನ್ನು ಹೊಂದಿರುತ್ತಾರೆ ಎಂಬುದಾಗಿ ಮನೋವಿಜ್ಞಾನಿಗಳು ವಿಶ್ಲೇಷಿಸುತ್ತಾರೆ.

ಸಾಹಿತ್ಯ ರಚನೆಯನ್ನು ಪ್ರಭಾವಿಸುವ ಮನೋವೈಜ್ಞಾನಿಕ ಪರಿಕಲ್ಪನೆಗಳು:

ಕಥೆ, ಕಾವ್ಯ, ನಾಟಕ, ಕಾದಂಬರಿ, ಕವನ ಹೀಗೆ ಯಾವುದೇ ಪ್ರಕಾರದ ಸಾಹಿತ್ಯವನ್ನು ರಚಿಸುವಾಗ ಸಾಹಿತಿಯ ಮನಸ್ಸಿನ ಮೇಲೆ ಹಲವಾರು ಅಂಶಗಳು ಪ್ರಭಾವ ಬೀರುತ್ತವೆ ಅಥವಾ ಸ್ಫೂರ್ತಿಯಾಗುತ್ತವೆ. ಅವುಗಳಲ್ಲಿ ಪ್ರಕೃತಿ ಸೌಂದರ್ಯ, ಬದುಕಿನ ಯಾತನೆಗಳು, ನಿತ್ಯಜೀವನದ ಅನುಭವಗಳು, ಸಂಘರ್ಷಗಳು, ಪೌರಾಣಿಕ ಮತ್ತು ಐತಿಹಾಸಿಕ ವಸ್ತುವಿಷಯಗಳು, ಜೀವನಪ್ರೀತಿ, ಸಮಾಜದಲ್ಲಿ ಸಂಭವಿಸುತ್ತಿರುವ ಘಟನೆಗಳು, ಬದಲಾವಣೆಗಳು, ವಿಜ್ಞಾನ, ತಂತ್ರಜ್ಞಾನದ ಬೆಳವಣಿಗೆಗಳು, ಮಾನವೀಯ ಸಂಬಂಧಗಳು ಮುಂತಾದವು.

ಇವುಗಳಲ್ಲದೆ ಸಾಹಿತ್ಯವನ್ನು ರಚಿಸುವಾಗ ಸಾಹಿತಿಯ ಮೇಲೆ ಹಲವಾರು ಮನೋವೈಜ್ಞಾನಿಕ ಅಂಶಗಳು ಪ್ರಭಾವ ಬೀರುತ್ತವೆ. ಅವುಗಳಲ್ಲಿ ಸಾಹಿತಿಯ ಸುಪ್ತಮನಸ್ಸಿನಲ್ಲಿ ಹುದುಗಿರುವ ಹಲವಾರು ಬಯಕೆಗಳು, ಭಾವನೆಗಳು, ದುಃಖ ದುಮ್ಮಾನಗಳು, ಕನಸುಗಳು, ಭಾವವಿರೇಚನೆ ಹೆಚ್ಚಿನ ಪ್ರಭಾವ ಬೀರುತ್ತವೆ ಹಾಗೆಯೇ ಚೇತನಾವಸ್ಥೆ ಹರಿವು, ಸ್ವಯಂರಕ್ಷಣಾ ತಂತ್ರಗಳು,

ಮನೋವೈಜ್ಞಾನಿಕ ವಾಸ್ತವಿಕತೆ ಮತ್ತು ಕಲ್ಪನೆ ಮುಂತಾದವುಗಳು ಸಾಹಿತ್ಯ ರಚನೆಯ ಮೇಲೆ ಅಗಾಧವಾದ ಪ್ರಭಾವವನ್ನು ಬೀರುತ್ತವೆ. ಸಾಹಿತ್ಯದಲ್ಲಿ ಕಂಡುಬರುವ ಮನೋವೈಜ್ಞಾನಿಕ ಪರಿಕಲ್ಪನೆಗಳನ್ನು ಮನೋವಿಜ್ಞಾನಿಗಳ ಅಭಿಪ್ರಾಯಗಳೊಂದಿಗೆ ಈ ಲೇಖನದಲ್ಲಿ ಪ್ರಸ್ತುತಪಡಿಸಲಾಗಿದೆ.

ಚೇತನಾವಸ್ಥೆಯ ಹರಿವು(Stream of Consciousness): 'ಚೇತನಾವಸ್ಥೆಯ ಹರಿವು'

ಸಾಹಿತಿಗಳಲ್ಲಿ ಬಹು ಮುಖ್ಯವಾಗಿರುತ್ತದೆ. ಇದು ಮಾನಸಿಕವಾಗಿ ನಡೆಯುವ ಆಲೋಚನೆಗಳು, ಭಾವನೆಗಳು, ಸ್ಮರಣೆಗಳು ಮತ್ತು ಅವಲೋಕಿಸುವಿಕೆ ಇವುಗಳೆಲ್ಲವನ್ನೂ ದಾಖಲಿಸುವ ಒಂದು ಅನುಭವಾತ್ಮಕವಾದ ಪ್ರಕ್ರಿಯೆಯಾಗಿದೆ. ಸಾಹಿತ್ಯದಲ್ಲಿ ಈ ಚೇತನಾವಸ್ಥೆಯ ಹರಿವು ಬಹಳ ಮುಖ್ಯವಾಗಿರುತ್ತದೆ. ಪ್ರತಿಯೊಂದು ಸಾಹಿತ್ಯದ ಪ್ರಕಾರದಲ್ಲೂ ಚೇತನಾವಸ್ಥೆಯ ಹರಿವು ಇದ್ದರಷ್ಟೇ ಆ ಚೇತನಾವಸ್ಥೆಯ ಹರಿವಿನ ಪ್ರಭಾವದಿಂದಾಗಿ ಕಾವ್ಯಗಳು, ಕಾದಂಬರಿಗಳು, ಸೃಷ್ಟಿಯಾಗುವುದು ಎಂದು ಮನೋವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ.

ಸಾಹಿತಿಗಳು ತಮ್ಮ ಮನಸ್ಸಿನ ಆಳದಿಂದ ಬರುವ ಆಲೋಚನೆಗಳು, ಭಾವನೆಗಳು ಮತ್ತು ಪ್ರತ್ಯಕ್ಷಾನುಭವಗಳನ್ನು ನಿರಂತವಾಗಿಯಾವುದೇ ಅಡೆತಡೆಗಳಿಲ್ಲದೆ ತಾನು ಸೃಷ್ಟಿಸುತ್ತಿರುವ ಪಾತ್ರಗಳ ಮುಖಾಂತರ ವ್ಯಕ್ತಪಡಿಸುವುದನ್ನು ಸಾಹಿತ್ಯದಲ್ಲಿ "ಚೇತನಾವಸ್ಥೆಯ ಹರಿವಿನ ಕ್ರಿಯೆ"ಎನ್ನಬಹುದಾಗಿದೆ. ಮಾನವರ ಮನಸ್ಸಿನಲ್ಲಿ ನಡೆಯುವಂತಹ ಅನೇಕ ಸಂವೇಗಗಳು, ಘರ್ಷಣೆಗಳು, ಆಲೋಚನೆಗಳು ಮತ್ತು ಅನುಭವಗಳನ್ನು ವ್ಯಕ್ತಪಡಿಸಲು ಸಾಹಿತಿಗಳು ಪಾತ್ರಗಳನ್ನು ಸೃಷ್ಟಿಸುತ್ತಾರೆ. ಈ ರೀತಿ ಸೃಷ್ಟಿಸುವ ಸಂದರ್ಭದಲ್ಲಿ ವಿವಿಧ ಪಾತ್ರಗಳ ದೃಷ್ಟಿಕೋನಗಳನ್ನು ಅರ್ಥೈಸಿಕೊಳ್ಳಲು ಮತ್ತು ಓದುಗನು ಆ ಪಾತ್ರಗಳನ್ನು ಅನುಭವಿಸಲು ಚೇತನಾವಸ್ಥೆಯ ಹರಿವಿನ ಪ್ರಕ್ರಿಯೆಯು ತುಂಬಾ ಅಗತ್ಯವಾದುದು. (ಹು.ಜೆ 2016)

ಸುಪ್ತಚೇತನ (Unconscious): ಸಿಗ್ಮಂಡ್ ಫ್ರಾಯ್ಡ್ ಪ್ರಕಾರ ಸಾಹಿತಿ ಅಥವಾ ಬರಹಗಾರನು ಮೂಲಭೂತವಾಗಿ "ಹಗಲು ಬೆಳಕಿನಲ್ಲಿ ಕನಸುಗಾರ" ಲೇಖಕರು ಸುಪ್ತಮನಸ್ಸಿನಲ್ಲಿರುವ ಬಾಲ್ಯದ ಆಸೆಗಳು, ದಮನಿತವಾದ ಬಯಕೆಗಳನ್ನು ಕಾವ್ಯ, ನಾಟಕ, ಕವಿತೆ, ಕಾದಂಬರಿ ಬರೆಯುವ ಸೃಜನಶೀಲತೆ ಕ್ರಿಯೆಯ ಮೂಲಕ ಅಭಿವ್ಯಕ್ತಪಡಿಸುತ್ತಾರೆ. ಆದ ಕಾರಣ ಸಾಹಿತ್ಯ ರಚನೆಯಲ್ಲಿ ಸಾಹಿತಿಯ ಸುಪ್ತಚೇತನವು ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. (ಸಿ.ಪಿ.ಕೆ –2010).

ಮುಕ್ತ ಸಹಚರ್ಯೆ(Free Association): ವ್ಯಕ್ತಿಯು ತನ್ನ ಮನಸ್ಸಿಗೆ ಬರುವ ಆಲೋಚನೆಗಳು, ಭಾವನೆಗಳು ಮತ್ತು ಸ್ಮರಣೆಗಳನ್ನು ಯಾವುದೇ ರೀತಿಯ ಅಡೆತಡೆ ಇಲ್ಲದೆ, ತರ್ಕಬದ್ಧವಲ್ಲದಿದ್ದರೂ, ನಿರಂತರವಾಗಿ ವ್ಯಕ್ತಪಡಿಸುವ ಪ್ರಕ್ರಿಯೆಯನ್ನು 'ಮುಕ್ತ ಸಹಚರ್ಯೆ' ಎನ್ನುವರು. ಸಾಹಿತ್ಯದಲ್ಲಿ ಆಲೋಚನೆಗಳು, ಭಾವನೆಗಳು ಮತ್ತು ಸ್ಮರಣೆಗಳು ಹೇಗೆ ಉಂಟಾಗುತ್ತವೋ ಹಾಗೆಯೇ ಅವುಗಳನ್ನು ಆಕ್ಷೇಪಾರ್ಹವೆಂದು ಪರಿಗಣಿಸದೆ ಪಾತ್ರಗಳ ಮುಖಾಂತರ ಸಾಹಿತ್ಯದಲ್ಲಿ ಅಭಿವ್ಯಕ್ತಗೊಳಿಸಲಾಗುತ್ತದೆ. ಸಾಹಿತ್ಯದಲ್ಲಿ ಬಳಸಲ್ಪಡುವ ಈ ಮುಕ್ತ ಸಹಚರ್ಯೆಯನ್ನು ಮನೋವೈಜ್ಞಾನಿಕವಾಗಿ ವಿಶ್ಲೇಷಿಸುವುದರ ಮುಖಾಂತರ ಸಾಹಿತಿಯ ಮನಸ್ಸಿನಲ್ಲಿ ಉಂಟಾಗಿರಬಹುದಾದ ಆತಂಕ, ಘರ್ಷಣೆಗಳನ್ನು ಸಹ ಅರ್ಥೈಸಿಕೊಳ್ಳಬಹುದಾಗಿರುತ್ತದೆ ಎಂದು ಮನೋವಿಶ್ಲೇಷಣಾ ಸಿದ್ಧಾಂತವು ಪ್ರತಿಪಾದಿಸುತ್ತದೆ. (ಪಿಲಿಫ್ ಲ್ಯಾರೆನ್ಸ್ ಹ್ಯಾರಿಮನ್ 1946)

ಭಾವ ವಿರೇಚನೆ (Catharsis): 'ಭಾವವಿರೇಚನೆ'ಯೆಂದರೆ ವ್ಯಕ್ತಿಯ ಮನಸ್ಸಿನಲ್ಲಿ ಹುದುಗಿರುವ ತೀವ್ರತರವಾದ ಭಾವನೆಗಳು ಮತ್ತು ಭಾವನಾತ್ಮಕ ಸಂವೇದನೆಗಳನ್ನು ಅನಿರ್ಬಂಧಿತವಾಗಿ, ವ್ಯಕ್ತಪಡಿಸುವ ಪ್ರಕ್ರಿಯೆಯಾಗಿರುತ್ತದೆ. ಪ್ರತಿಯೊಂದು ಕಾವ್ಯ, ಕವನ, ಪದ್ಯ, ಕವಿತೆಗಳು ಸೃಷ್ಟಿಗೊಳ್ಳುವುದು ಈ ಗಾಢವಾದ, ತೀವ್ರವಾದ ಭಾವನೆಗಳ ಅಭಿವ್ಯಕ್ತತೆಯಿಂದ. ವಿಲಿಯಂ ವರ್ಡ್ಸ್‌ವರ್ತ್‌ರವರು ತಿಳಿಸುವಂತೆ "ನಿಜವಾದ ಕಾವ್ಯ ಅಥವಾ ಪದ್ಯವು ಸಮರ್ಪಕವಾದ ಭಾವಸ್ಥಿತಿ ಮತ್ತು ಮನೋಧರ್ಮವಿಲ್ಲದೆ ಉಗಮವಾಗಲಾರದು.

ಹೃದಯದ ಅಂತರಾಳದಿಂದ ಉಕ್ಕಿ ಬರುವ ಭಾವನೆಗಳ ಪ್ರಭಾವದಿಂದಾಗಿ ಪದ್ಯವು ಸೃಷ್ಟಿಗೊಳ್ಳುತ್ತದೆ". ಕಾವ್ಯ, ಪದ್ಯ, ಕವಿತೆಗಳು ಭಾವವಿರೇಚನೆಯ ಒಂದು ಪ್ರತಿರೂಪವಾಗಿ ಸಾಹಿತ್ಯದಲ್ಲಿ ಸೃಜನಶೀಲವಾಗಿ ಸೃಷ್ಟಿಗೊಳ್ಳುತ್ತವೆ. (ಗುಹಿನಾಗ್ 1987)

ಕಲ್ಪನೆ (Imagination): ಕಲ್ಪನೆಯೆಂಬುದು ಒಂದು ಸೃಜನಶೀಲ ಮನೋವೈಜ್ಞಾನಿಕ ಚಟುವಟಿಕೆಯಾಗಿರುತ್ತದೆ. ಸಾಹಿತಿಯ ಕಲ್ಪನೆಗೆ ನಿಲುಕದ ವಸ್ತುವಿಷಯವಿಲ್ಲ, ಕಲ್ಪನಾ ಲೋಕವು ಅನನ್ಯವಾದುದು, ವಿಸ್ಮಯಕಾರಿಯಾದದ್ದು ಹಾಗೂ ಆಗಾಧ ರೋಮಾಂಚನವನ್ನುಂಟು ಮಾಡುವಂತಹ ಕುತೂಹಲಕಾರಿ, ವಿಸ್ಮಯಕಾರಿ, ಹಾಗೂ ಮನೋಹರವಾದ ವಿಹಾರವಾಗಿರುತ್ತದೆ. ಕವಿಯು ಕವಿತೆಗಳನ್ನು ಬರೆಯುವ ಸಂದರ್ಭದಲ್ಲಿ ಕಲ್ಪನಾ ಲೋಕದಲ್ಲಿ ವಿಹರಿಸುತ್ತಾರೆ ಹಾಗೂ ಎಚ್ಚರವಿದ್ದು ಕನಸುಗಳನ್ನು ಕಾಣುತ್ತಾರೆ ಎಂದು ಚಾರ್ಲ್ಸ್ ಲ್ಯಾಂಬ್ ಅವರು ತಿಳಿಸುತ್ತಾರೆ. ಕವಿಯ ಕಲ್ಪನೆಯು ಯಾವ ದಿಕ್ಕಿನಲ್ಲಿ ಸಾಗಬೇಕೆಂಬ ಅರಿವನ್ನು ಹೊಂದಿದ್ದು ಅದನ್ನು ಸಾಹಿತ್ಯ ಸೃಷ್ಟಿಗೆ ಬಳಸುತ್ತಾರೆ. ಇಲ್ಲಿ ಸೃಷ್ಟಿಗೊಳ್ಳುವ ಕಲ್ಪನೆಗಳು ಕಲೆಯ ರೂಪ ತಳೆದು ವಾಸ್ತವಿಕತೆಯೊಂದಿಗೆ ನೈಜವಾದ ಮತ್ತು ಹತ್ತಿರದ ಸಂಬಂಧವನ್ನು ಸೃಷ್ಟಿಸುವ ಉದ್ದೇಶವನ್ನು ಪೂರೈಸುತ್ತದೆ. ಸಾಹಿತ್ಯದ ಪ್ರತಿರೂಪವು ವೈಜ್ಞಾನಿಕ ಮತ್ತು ತರ್ಕಬದ್ಧವಾದ ಆವಿಷ್ಕಾರದ ಕಲ್ಪನೆಯಿಂದ ಪ್ರಾರಂಭವಾಗಿ ವಾಸ್ತವದ ನೆಲೆಗಟ್ಟಿನಲ್ಲಿ ಮುಕ್ತಾಯಗೊಳ್ಳುತ್ತದೆ ಎಂದು ಟ್ರಿಲಿಂಗ್ ಎಂಬ ಸಾಹಿತಿಯು ತಿಳಿಸುತ್ತಾರೆ. (ಟ್ರಿಲಿಂಗ್ 1950)

ಕನಸುಗಳು (Dreams): ವ್ಯಕ್ತಿಯ ಸುಪ್ತಚೇತನದಲ್ಲಿ ಅಡಗಿರುವ ಆಸೆಗಳು, ಬಯಕೆಗಳು, ಘರ್ಷಣೆಗಳು ಮತ್ತು ಬಗೆಹರಿಯದ ಸಮಸ್ಯೆಗಳು ಕನಸುಗಳ ಮುಖಾಂತರ ವ್ಯಕ್ತಗೊಳ್ಳುತ್ತವೆ. ಮನೋವಿಶ್ಲೇಷಣಾತ್ಮಕ ಮನೋವಿಜ್ಞಾನದಲ್ಲಿ ಸಿಗ್ಮಂಡ್ ಫ್ರಾಯ್ಡ್ ಅವರು ಕನಸುಗಳನ್ನು ವಿಶ್ಲೇಷಿಸುವುದರ ಮುಖಾಂತರ ವ್ಯಕ್ತಿಯ ಜೀವನದಲ್ಲಿ ಎದುರಾಗುತ್ತಿರುವ ಸಮಸ್ಯೆಗಳು, ಘರ್ಷಣೆಗಳು ಮತ್ತು ಅಪರಿಪೂರ್ಣ ಬಯಕೆಗಳನ್ನು ಅರ್ಥೈಸಿಕೊಳ್ಳಬಹುದು ಎಂದು ತಿಳಿಸುತ್ತಾರೆ. ಸಾಹಿತ್ಯದ ವಿವಿಧ ರೂಪಗಳಾದ ಕಥೆ, ಕಾದಂಬರಿ, ನಾಟಕ, ಸಿನಿಮಾ ಸಾಹಿತ್ಯ ಮುಂತಾದ ಪ್ರಕಾರಗಳಲ್ಲಿ ಕನಸುಗಳ ಪರಿಕಲ್ಪನೆಯನ್ನು ಸಾಹಿತ್ಯದ ಸೃಷ್ಟಿಗೆ ಬಳಸಲಾಗುತ್ತದೆ. (ಸಿಗ್ಮಂಡ್ ಫ್ರಾಯ್ಡ್ 1900)

ಪ್ರಕ್ಷೇಪಣಾ (Projection): ವ್ಯಕ್ತಿ ತನ್ನಲ್ಲಿರುವಂತಹ ಅಪಸಮಾಯೋಜಿತ ಹಠಾತ್ ಪ್ರವೃತ್ತಿಗಳನ್ನು ಇತರರಲ್ಲಿ ಇರುವುದು ಎಂಬಂತೆ ಆರೋಪಣೆ ಮಾಡುವಂತಹ ಪ್ರಕ್ರಿಯೆಯನ್ನು ಮನೋವಿಜ್ಞಾನದಲ್ಲಿ ಪ್ರಕ್ಷೇಪಣಾ ತಂತ್ರವೆನ್ನಲಾಗುತ್ತದೆ. ಸಾಹಿತಿಗಳು ಸಂಕೀರ್ಣವಾದ ಪಾತ್ರಗಳನ್ನು ಸೃಷ್ಟಿಸಲು ಕಥಾವಸ್ತುಗಳನ್ನು ಅಭಿವೃದ್ಧಿಪಡಿಸಲು ಮತ್ತು ಆಂತರಿಕ ಘರ್ಷಣೆಗಳು ಹೇಗೆ ವಾಸ್ತವಿಕತೆಯ ಪ್ರತ್ಯಕ್ಷಾನುಭವದಲ್ಲಿ ತೊಂದರೆಯನ್ನುಂಟುಮಾಡುತ್ತದೆ ಎಂಬುದನ್ನು ಪಾತ್ರಗಳ ಸೃಷ್ಟಿಯ ಮುಖಾಂತರ ವ್ಯಕ್ತಪಡಿಸುತ್ತಾರೆ.

ಪ್ರತಿಕ್ರಿಯೆ ರೂಪಿಸುವಿಕೆ (Reaction Formation): ವ್ಯಕ್ತಿಯು ತನ್ನಲ್ಲಿ ಅರಿವಿಲ್ಲದೆಯೇ ತಾನು ಒಪ್ಪಿಕೊಳ್ಳಲಾಗದ ಆಲೋಚನೆಗಳು ಮತ್ತು ಭಾವನೆಗಳನ್ನು ಅದರ ವಿರುದ್ಧದ ವರ್ತನೆಯಿಂದ ಮರೆಮಾಡುವ ರಕ್ಷಣಾತ್ಮಕ ತಂತ್ರವನ್ನು 'ಪ್ರತಿಕ್ರಿಯೆ ರೂಪಿಸುವಿಕೆ' ಎನ್ನುವರು. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರತಿಕ್ರಿಯೆ ರೂಪಿಸುವಿಕೆ ಭಾವನೆಗಳು ಮತ್ತು ವರ್ತನೆಗಳನ್ನು ಕಾಣಬಹುದಾಗಿದೆ.

ನಿರಾಕರಿಸುವಿಕೆ (Denial): ಯಾವುದೇ ಒಂದು ಅನಿರೀಕ್ಷಿತ ಘಟನೆ, ಸೋಲು ಹತಾಶೆಯಂತಹ ಭಾವನೆಗಳು ಮತ್ತು ಸಂದರ್ಭಗಳು ಉಂಟಾದಾಗ ವ್ಯಕ್ತಿ ಅದನ್ನು ತಕ್ಷಣ ಸ್ವೀಕರಿಸುವುದಿಲ್ಲ. ಈ ಒಂದು ಪ್ರಕ್ರಿಯೆಯನ್ನು 'ನಿರಾಕರಿಸುವಿಕೆ'ಎಂದು ಮನೋವಿಜ್ಞಾನದಲ್ಲಿ ಕರೆಯುತ್ತಾರೆ. ಈ ನಿರಾಕರಿಸುವಿಕೆಯ ಪರಿಕಲ್ಪನೆಯನ್ನು ಪಾತ್ರಗಳ ಮುಖಾಂತರ ಸೃಷ್ಟಿಸಿ ಸಾಹಿತ್ಯವನ್ನು ರಚಿಸುತ್ತಾರೆ.

ಅಹಂ ರಕ್ಷಣಾ ತಂತ್ರಗಳು(Defense Mechanisms): ಯಾವುದೇ ವ್ಯಕ್ತಿಯು ಜೀವನದಲ್ಲಿ ಎದುರಾಗುವಂತಹ ಘರ್ಷಣೆಗಳು, ಆತಂಕ, ಖಿನ್ನತೆ ಅಭಿಪ್ರೇರಣೆಯ ಕೊರತೆ ಅಥವಾ ಸಂಕೀರ್ಣವಾದಂತಹ ಸನ್ನಿವೇಶಗಳನ್ನು ಎದುರಿಸಲು ಅಸಮರ್ಥನಾದಂತಹ ಸಂದರ್ಭದಲ್ಲಿ ತನ್ನ ಆತ್ಮಗೌರವವನ್ನು ಸಂರಕ್ಷಿಸಿಕೊಳ್ಳಲು ರಕ್ಷಣಾ ತಂತ್ರಗಳನ್ನು ಬಳಸುತ್ತಾನೆ. ಇದನ್ನು ಮನೋವಿಜ್ಞಾನದಲ್ಲಿ

'ಅಹಂ ರಕ್ಷಣ ತಂತ್ರಗಳು'ಎಂದು ಕರೆಯುತ್ತಾರೆ. ಈ ಅಹಂರಕ್ಷಣಾ ತಂತ್ರಗಳು ವ್ಯಕ್ತಿಯ ಆತ್ಮವಿಶ್ವಾಸವನ್ನು ಕುಂದಿಸದೆ ಜೀವನವನ್ನು ಎದುರಿಸಲು ತಾತ್ಕಾಲಿಕವಾಗಿ ಸಹಾಯ ಮಾಡುತ್ತವೆ. ಸಾಹಿತಿಗಳು ಅಹಂ ರಕ್ಷಣಾ ತಂತ್ರಗಳನ್ನು ವಸ್ತುವಿಷಯಗಳಾಗಿ ಮಾಡಿಕೊಂಡು ಕಥೆಗಳು, ಕಾದಂಬರಿಗಳು, ನಾಟಕಗಳು ಮತ್ತು ಕಾವ್ಯಗಳನ್ನು ರಚಿಸುತ್ತಾರೆ. (ಅನ್ನಾ ಪ್ರಾಯ್ಡ್ 1937)

ಮನೋವೈಜ್ಞಾನಿಕ ವಾಸ್ತವಿಕತೆ (Psychological Realism): ಮಾನವನ ವರ್ತನೆಗಳನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗುವಂತಹ ಸಾಹಿತಿಗಳು ಮಾತ್ರ ಹಲವಾರು ವಿಭಿನ್ನ ವ್ಯಕ್ತಿತ್ವವುಳ್ಳ ಪಾತ್ರಗಳನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ. ವ್ಯಕ್ತಿಯ ವರ್ತನೆಗಳು, ವ್ಯಕ್ತಿತ್ವ, ಪ್ರೇರಣೆಗಳು ಜೀವನ ಶೈಲಿ ಮತ್ತು ಸಂವೇದನೆಗಳನ್ನು ಸಾಹಿತ್ಯಕಾರನು ಅರ್ಥೈಸಿಕೊಂಡು ಪಾತ್ರಗಳಾಗಿ ಸೃಷ್ಟಿಸಲು ಚೇತನಾವಸ್ಥೆಯ ನಿರಂತರ ಹರಿವು ಬಹಳ ಮುಖ್ಯವಾದುದು. ಇದರಿಂದಾಗಿ ಸಾಹಿತಿ ಮನಸ್ಸಿನಲ್ಲಿ ಕಂಡ ದೃಶ್ಯವನ್ನು ಕಂಡ ಹಾಗೆ ಸಾಹಿತ್ಯದಲ್ಲಿ ಹೊರತರಲು ಸಾಧ್ಯ. ಆದ್ದರಿಂದ ಒಬ್ಬ ಸಾಹಿತ್ಯಕಾರ ಮೂಲತಃ ಮನೋವಿಜ್ಞಾನಿಯಾಗಿ ಕಾರ್ಯ ನಿರ್ವಹಿಸುತ್ತಿರುತ್ತಾನೆ. ಸಾಹಿತ್ಯದಲ್ಲಿ ಮನೋವಿಜ್ಞಾನದ ಗಾಢವಾದ ಸಂಬಂಧವನ್ನು ಮನೋವೈಜ್ಞಾನಿಕ ವಾಸ್ತವಿಕತೆ ಎಂಬ ಮತ್ತೊಂದು ಪರಿಕಲ್ಪನೆಯಲ್ಲಿ ತಿಳಿದುಕೊಳ್ಳಬಹುದು. 'ಮನೋವೈಜ್ಞಾನಿಕ ವಾಸ್ತವಿಕತೆ'ಯನ್ನು ಮನೋವೈಜ್ಞಾನಿಕ ಕಾದಂಬರಿಎಂದು ಸಹ ಕರೆಯಲಾಗುತ್ತದೆ.(ವೇ.ಎಕ್ಸ್.ಜೆ. 2010)

ಆಂತರಿಕ ಸ್ವಗತ (Internal Monologue): ಆಧುನಿಕ ಸಾಹಿತ್ಯದಲ್ಲಿ ಸಾಹಿತ್ಯಕಾರರು'ಆಂತರಿಕ ಸ್ವಗತ' ಪ್ರಕಾರವನ್ನು ಒಂದು ಪಾತ್ರದ ಮೂಲಕ ಹೇಳಿಕೊಳ್ಳುತ್ತಾ ಹೋಗುತ್ತಾರೆ. ಈ ಪ್ರಕಾರದಲ್ಲಿ ವಿವಿಧ ರೀತಿಯ ಆಲೋಚನೆಗಳನ್ನು ನೇರವಾಗಿ ಒಂದು ಪಾತ್ರವು ನಿರೂಪಿಸುವ ಮಾದರಿಯಲ್ಲಿ ಬರಹಗಾರರು ಪ್ರಸ್ತುತಪಡಿಸುತ್ತಾರೆ. (ಅಬ್ರಾಮ್ಸ್ ಮತ್ತು ಗೋಪೆರಿ 2015)

ಛಾಯೆ (Shadow): ಮನೋವಿಜ್ಞಾನದಲ್ಲಿ ಕಾರ್ಲ್‌ಯೂಂಗ್‌ರವರು ಪ್ರತಿಪಾದಿಸಿದಂತಹ 'ಛಾಯೆ' ಎಂಬ ಪರಿಕಲ್ಪನೆಯನ್ನು ಸಾಹಿತ್ಯದಲ್ಲಿ ಅನೇಕ ಪ್ರಕಾರಗಳಲ್ಲಿ ಬಳಸಲಾಗುತ್ತದೆ. ವ್ಯಕ್ತಿಗೆ ತಾನೆ ಸ್ವೀಕರಿಸಲಾಗದಂತಹ ಮನಸ್ಸಿನಲ್ಲಿ ಅವಿತಿಟ್ಟಂತಹ ಅಂಶಗಳಾದ ಕೋಪ, ಅಸೂಯೆ, ದ್ವೇಷ, ಇವುಗಳನ್ನು ಒಳಗೊಂಡಿರುತ್ತದೆ. ಕೆಲವೊಮ್ಮೆ ಸಕಾರಾತ್ಮಕವಾದ ಸೃಜನಶೀಲತೆ ಮತ್ತು ಹಠಾತ್ ಪ್ರವೃತ್ತಿಗಳನ್ನೂ ಇವುಗಳು ಒಳಗೊಂಡಿರಬಹುದು. ಸಾಹಿತ್ಯದಲ್ಲಿ ಸಾಮಾನ್ಯವಾಗಿ ಪಾತ್ರಗಳನ್ನು ಸೃಷ್ಟಿಸುವಾಗ ದಮನಿತ ಭಯಗಳು, ಹೆದರಿಕೆ, ಆತಂಕ, ಬಯಕೆಗಳು ಅಥವಾ ಸ್ವೀಕರಿಸಲಾಗದಂತಹ ಗುಣಗಳನ್ನು ಇದು ಪ್ರತಿನಿಧಿಸುತ್ತದೆ. ಛಾಯೆಯ ಪರಿಕಲ್ಪನೆಯನ್ನು ಸಾಹಿತ್ಯದಲ್ಲಿ ವಿವಿಧ ಪಾತ್ರಗಳ ಸೃಷ್ಟಿಯಲ್ಲಿ ಬಳಸಲಾಗುತ್ತದೆ.

ಸಮಾರೋಪ

ಸಾಹಿತ್ಯ ರಚನೆಯಲ್ಲಿ ಮನೋವಿಜ್ಞಾನದ ಹಲವಾರು ಪರಿಕಲ್ಪನೆಗಳು, ವಸ್ತುವಿಷಯಗಳು ಕಂಡುಬರುತ್ತವೆ. ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುವ ಪಾತ್ರಗಳು, ವಸ್ತುವಿಷಯಗಳು, ಭಾವರ್ಥಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಮನೋವಿಜ್ಞಾನದ ವಿಚಾರಧಾರೆಗಳನ್ನು ಗಮನಿಸಬಹುದು ಹಾಗೆಯೇ ಮನೋವಿಜ್ಞಾನದ ಹಲವಾರು ಪರಿಕಲ್ಪನೆಗಳನ್ನು ಸಾಹಿತ್ಯದಲ್ಲಿ ಗುರುತಿಸಬಹುದು. ಹೀಗೆ ಸಾಹಿತ್ಯ ಮತ್ತು ಮನೋವಿಜ್ಞಾನ ಪರಸ್ಪರ ಪೂರಕವಾದ ಸಂಬಂಧವನ್ನು ಹೊಂದಿದೆ ಎನ್ನುವುದನ್ನು ಕುರಿತಾದ ಪ್ರಸ್ತುತ ಲೇಖನವು ಸಾಹಿತ್ಯದಲ್ಲಿ ಕಂಡುಬರುವ ಹಲವಾರು ಮನೋವೈಜ್ಞಾನಿಕ ಪರಿಕಲ್ಪನೆಗಳ ಕುರಿತು ಬೆಳಕು ಚೆಲ್ಲಿದೆ.

ಪರಾಮರ್ಶನ ಗ್ರಂಥಗಳು

1. ವೇ. ಎಕ್ಸ್. ಜೆ. (2010) "ಹೆನ್ರಿ ಜೇಮ್ಸ್ ಸೈಕಾಲಾಜಿಕಲ್ ರಿಯಲಿಸಮ್ ನಾವೆಲ್ಸ್" ಜರ್ನಲಿಸಮ್ ಲವರ್Vol. 25, no. 10, pp. 165-166, 2010.
2. ಎಮ್. ಎಚ್, ಅಬ್ರಾಮ್ಸ್ ಮತ್ತುಗೊಪೆರಿ ಹಾರ್‌ಪೆಮ್ (2015) "ಎ. ಗ್ಲಾಸೆರಿ ಆಫ್ ಲಿಟರರಿಟರ್ಮ್ಸ್", 11ನೇ ಎಡಿಶನ್, ಬಾಸ್ಟನ್, ಸಿನ್‌ಗೇಜ್.

3. ಹು.ಜೆ (2016) "ಸ್ಟ್ರೀಮ್ ಆಫ್ ಕಾನ್ಶಿಯಸ್‌ನೆಸ್", ರಾಟ್‌ಲೆಡ್ಜ್ ಎನ್‌ಸೈಕ್ಲೋಪೀಡಿಯಾ ಆಫ್ ಮಾರ್ಡನಿಸಮ್, ಟೇಲರ್ ಅಂಡ್ ಫ್ರಾನ್ಸಿಸ್.

4. ಸಿ.ಪಿ.ಕೆ (2010) "ಸಾಹಿತ್ಯತತ್ವ" (ಭಾಷಾಂತರ) ತನುಮನ ಪ್ರಕಾಶನ, ಮೈಸೂರು

5. ಫಿಲಿಪ್ ಲಾರೆನ್ಸ್ ಹ್ಯಾರಿಮನ್(1946) ಸಂಪಾದಕರು "ಎನ್‌ಸೈಕ್ಲೋಪೀಡಿಯಾ ಆಫ್ ಸೈಕಾಲಜಿ", ದ ಫಿಲಾಸಫಿಕಲ್ ಲೈಬ್ರರಿ, ನ್ಯಾಯಾರ್ಕ್.

6. ಅನ್ನಾ ಫ್ರಾಯ್ಡ್ (1937) "ದಿ ಈಗೋ ಅಂಡ್‌ದ ಮೆಕಾನಿಸಮ್ಸ್ ಆಫ್ ಡಿಫೆನ್ಸ್" ಲಂಡನ್ ಹೊಗಾರ್ಥ್ ಪ್ರೆಸ್ ಅಂಡ್ ಇನ್‌ಸ್ಟಿಟ್ಯೂಟ್ ಆಫ ಸೈಕೋ ಅನಾಲಿಸಿಸ್.

7. ಗುಹಿನಾಗ್ ಬಿ (1987) "ಸಿಗ್ಮಂಡ್ ಫ್ರಾಯ್ಡ್‌ಸ್ ಹ್ಯೂಸ್ ಆಫ್ ಕೆಥಾರ್‌ಸಿಸ್ ಅಂಡ್‌ಕಾಗ್‌ನಿಶನ್", ಕೆಥಾರ್‌ಸಿಸ್ ಅಂಡ್ ಕಾಗ್‌ನಿಶನ್ ಇನ್ ಸೈಕೋಥೆರಪಿ, ನ್ಯೂಯಾರ್ಕ್.

8. ಸಿಗ್ಮಂಡ್ ಫ್ರಾಯ್ಡ್ (1900) "ದ ಇಂಟರ್‌ಪ್ರಿಟೇಶನ್ ಆಫ್ ಡ್ರೀಮ್ಸ್" 3ನೇಎಡಿಶನ್, ಎ.ಎ. ಬ್ರಿಲ್ (ಅನುವಾದಿತ 1913) ದ ಮ್ಯಾಕ್‌ಮಿಲನ್ ಕಂಪನಿ, ನ್ಯೂಯಾರ್ಕ್.

9. ಲಿಯೋನಲ್‌ಟ್ರಿಲಿಂಗ್ (1950) "ಲೆಟರ್‌ಟು ಪಾಸ್ಕಲ್ ಕಾವಿಕಿ" ರೇರ್ ಬುಕ್‌ಅಂಡ್ ಮ್ಯಾನು ಸ್ಕ್ರಿಪ್ಟ್ ಲೈಬ್ರರಿ, ಕೊಲಂಬಿಯ ಯುನಿವರ್ಸಿಟಿ ನ್ಯೂಯಾರ್ಕ್.

10. ಸಿಗ್ಮಂಡ್ ಫ್ರಾಯ್ಡ್, "ಇಂಟ್ರೋಡಕ್ಟರಿ ಲೆಕ್ಚರ್ಸ್‌ಆನ್ ಸೈಕೋಅನಾಲಿಸಿಸ್",ಎಸ್.ಇ. 22:1–182

ಸೈಕಲ್ ಸವಾರಿ: ವಿವಾಹ, ಮನೋವೈಜ್ಞಾನಿಕ ಚಿಂತನೆ

ಅನಿತ ಕೆ. ವಿ.
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ, ಮೌಂಟ್ ಕಾರ್ಮೆಲ್ ಕಾಲೇಜು, ಸ್ವಾಯತ್ತ

ವಿಜ್ಞಾನ ಎಂಬುದು ಒಂದು ಚಿಂತನಾಕ್ರಮ. ಜಗತ್ತಿನ ಚರಾಚರ ವಸ್ತುಗಳು ಹೇಗೆ ಸೃಷ್ಟಿಗೊಂಡವು ಮತ್ತು ಅವುಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ ಮತ್ತು ಒಂದಕ್ಕೊಂದರ ಸಂಬಂಧವೇನು ಎಂಬುದನ್ನು ಅರಿಯುವ ಜ್ಞಾನ ವಿಜ್ಞಾನ. 'ವೈಜ್ಞಾನಿಕ ಚಿಂತನೆ ಮತ್ತು ಸಾಹಿತ್ಯ' ಎಂಬ ಲೇಖನದಲ್ಲಿ ಎಸ್.ಆರ್.ವಿಜಯಶಂಕರ ಅವರು ಪ್ರಸ್ತಾಪಿಸಿರುವ ಫ್ರಾನ್ಸಿಸ್ ಬೇಕನ್ (Francis Bacon) ಮಾತಿನಂತೆ, "ವಿಜ್ಞಾನ ಎಂದರೆ ನಮ್ಮ ಇಂದ್ರಿಯಗಳಿಂದ ಗಳಿಸಿದ ಅನುಭವಗಳನ್ನು ಪ್ರಯೋಗಗಳ ಮೂಲಕ ಜ್ಞಾನವಾಗಿ ಪರಿವರ್ತಿಸುವ ಕ್ರಮದ ಅರಿವು. (Scietific knowledge is obtained through empiricism or observation through using the senses and then through inductive reasoning regarding those observation - Francis Bacon)". ಮನುಷ್ಯನ ಮನೋ ವ್ಯಾಪಾರಳಿಗೆ ಕಾರಣಗಳನ್ನು ವೈಜ್ಞಾನಿಕ ಚಿಂತನೆಗಳಿಂದ ಉತ್ತರ ಕಂಡುಕೊಳ್ಳುವ ಪ್ರಯತ್ನ ನಡೆಸಲಾಗಿದೆ. ವೈಜ್ಞಾನಿಕ ದೃಷ್ಟಿಕೋನದಿಂದ ವಿವಾಹ ಮತ್ತು ಮನುಷ್ಯ ಸಂಬಂಧಗಳನ್ನು ಅರಿಯುವ ನಿಟ್ಟಿನಲ್ಲಿ ಅನೇಕ ಜ್ಞಾನ ಕ್ಷೇತ್ರಗಳು ಬೆಳೆದಿವೆ.

"ವಿವಾಹ: ಅದರ ಹುಟ್ಟು ಮತ್ತು ಪೂರ್ವೋತ್ತರ ಕೃತಿಯಲ್ಲಿ ಪ್ರಸ್ತಾಪಿಸಿರುವಂತೆ "ಸೃಷ್ಟಿಗಾಗಲೀ, ಪ್ರಕೃತಿಗಾಗಲೀ, ಈ ಜಾತಿ ಸಂರಕ್ಷಣೆಯೇ ಪ್ರಧಾನ ಕಾರ್ಯ. ಇದಕ್ಕಾಗಿಯೇ ಇಡೀ ಬದುಕು. ಆಹಾರ ತಿನ್ನುವುದು ನಿದ್ರಿಸುವುದು ಮುಂತಾದ ಕೆಲಸಗಳೆಲ್ಲಾ ಈ ಜಾತಿಯನ್ನುಳಿಸಿಕೊಳ್ಳುವುದಕ್ಕಾಗಿಯೇ ಇರುವ ಸಾಧನಗಳು, ಗಿಡ ಬೆಳೆಯುವುದೂ ಹೂ ಬಿಡುವುದಕ್ಕಾಗಿ, ಹೂವು ಮೂಡುವುದೆಲ್ಲಾ ಹಣ್ಣು ಬಿಡಲಿಕ್ಕಾಗಿಯೇ. ಹಣ್ಣು ಬೀಜವಾಗುವುದು ಮತ್ತೆ ಗಿಡ ಹುಟ್ಟಿಸುವುದಕ್ಕೆಂದೇ. ಇದು ಪ್ರಕೃತಿಯ ಜಾಗರೂಕತೆ. ಈ ಕೆಲಸವನ್ನು ಪ್ರಕೃತಿ ದಯಾದಾಕ್ಷಿಣ್ಯವಿಲ್ಲದೆ ಸಾಗಿಸುತ್ತದೆ. ಹೆಚ್ಚು ಹೆಚ್ಚಾಗಿ ಸಾಗಿಸುತ್ತದೆ. ಇಷ್ಟೆಲ್ಲಾ ಮಾತೇಕೆ? ಹುಟ್ಟಿಸುವುದೇ ಪ್ರಕೃತಿಯ ಕೆಲಸ." (ಪು.ಸಂ: 14) ವಿಶ್ವದ ಜೀವಸೃಷ್ಟಿಗಳನ್ನು ವೈಜ್ಞಾನಿಕವಾಗಿ ಗಮನಿಸಿದ ಹಲವು ಅಧ್ಯಯನಗಳ ಪ್ರಕಾರ ಸೃಷ್ಟಿಕಾರ್ಯದ ಕುರಿತ ಈ ನಿಲುವು ಸ್ಪಷ್ಟವಾಗಿದೆ ಎನ್ನಬಹುದು.

ಪ್ರೀತಿ ಮತ್ತು ವಿವಾಹಗಳು ವೈಜ್ಞಾನಿಕವಾಗಿ ಹೇಗೆ ಮನುಷ್ಯನ ಮಾನಸಿಕ ಹಾಗೂ ದೈಹಿಕ ಮಟ್ಟದಲ್ಲಿ ಪ್ರಭಾವಿಸುತ್ತವೆ ಮತ್ತು ಹೇಗೆ ವಿಭಿನ್ನ ಆಲೋಚನೆಗಳು ತಳೆಯುತ್ತವೆ ಎಂಬುದನ್ನು ಗಮನಿಸಿದರೆ, ಮನುಷ್ಯ ದೇಹದ ನರಕೋಶಗಳ ಹಾಗೂ ಕೆಲವು ರಾಸಾಯನಿಕಗಳ ಚಟುವಟಿಕೆಗಳು ಕಾರಣವಾಗಿವೆ. ಸಾಂಗತ್ಯದಲ್ಲಿ ಟೆಸ್ಟೋಸ್ಟೆರಾನ್ (testosterone) ಮತ್ತು ಈಸ್ಟ್ರೋಜನ್(estrogen) ಹಾರ್ಮೋನುಗಳು ಕೆಲಸ ಮಾಡುತ್ತವೆ. ಪ್ರೀತಿ, ಆಕರ್ಷಣೆ ಭಾವನೆಗಳನ್ನು ಉಂಟುಮಾಡುತ್ತವೆ. ಮದುವೆ, ಮಕ್ಕಳು ಮತ್ತು ಗಂಡು ಹೆಣ್ಣಿನಲ್ಲಿರುವ ಸಮಾನ ಆಸಕ್ತಿಗಳನ್ನು ಕಾಯ್ದಿಡುತ್ತವೆ. ಈ ಬಗೆಯ ಅವಲಂಬನೆಗೆ ರಾಸಾಯನಿಕಗಳು ಸಹಕರಿಸುತ್ತವೆ. ನಮ್ಮವರು ಎಂಬ ಭಾವನೆಗಳ ಅನುಭವಕ್ಕೆ ಕಾರಣವಾಗಿವೆ. ವಿಜ್ಞಾನಿಗಳು ಈ ಕಾರಣಗಳಿಂದ

ದೀರ್ಘಕಾಲ ಸಂಬಂಧಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ ಎನ್ನುತ್ತಾರೆ. 'ಹೆಲೆನ್ ಫಿಶರ್' ಎಂಬ ವಿಜ್ಞಾನಿ ನಡೆಸಿರುವ ಅಧ್ಯಯನದ ಪ್ರಕಾರ ಶೇಕಡಾ ಐದರಷ್ಟು ಸ್ತನಿಜೀವಿಗಳು ತಮ್ಮ ಜೀವನ ಪರ್ಯಂತ ತಮ್ಮ ಸಂಗಾತಿಗಳಿಗೆ ನಿಷ್ಠರಾಗಿ ಜೀವನ ನಡೆಸುತ್ತವೆ. ಪ್ರಾಚೀನ ಕಾಲದಿಂದಲೂ ಈ ರೀತಿಯ ಸಾಂಗತ್ಯ ಜೀವನವನ್ನು ಗಮನಿಸಬಹುದು.

ಮನೋವೈಜ್ಞಾನಿಕ ನೆಲೆಯಲ್ಲಿ ವಿವಾಹ ಚಿಂತನೆ

ಮನೋವಿಜ್ಞಾನ ಎಂಬುದು ಮನುಷ್ಯನ ಮನಸ್ಸಿನ ಅಧ್ಯಯನವಾಗಿದೆ. ಅಂದರೆ ಮನುಷ್ಯನ ಭಾವನೆ, ಅವನ ವರ್ತನೆಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುತ್ತದೆ. ಮನುಷ್ಯನ ಭಾವನೆಗಳ ಮೂಲ ಮನಸ್ಸು, ಆ ಮನಸ್ಸಿನ ಭಾವನೆಗಳನ್ನು ಬರೆವಣಿಗೆಯ ಮೂಲಕ ಅಭಿವ್ಯಕ್ತ ಪಡಿಸುವುದೇ ಸಾಹಿತ್ಯ. ಮನಸ್ಸಿನ ಸೃಜನಾತ್ಮಕ ಪ್ರಕ್ರಿಯೆ ಸಾಹಿತ್ಯ. ಮಾನವರ ಬೌದ್ಧಿಕ, ಭಾವನಾತ್ಮಕ, ಧಾರ್ಮಿಕ, ಸಾಮಾಜಿಕ ಚಿಂತನೆಗಳ ಶಾಬ್ದಿಕ ಅಭಿವ್ಯಕ್ತಿ. ಇಂದು ಮನೋವಿಜ್ಞಾನ ಎಂಬುದು ಒಂದು ಜ್ಞಾನ ಶಾಖೆಯಾಗಿ ಉಳಿದಿಲ್ಲ. ಅದು ವೈದ್ಯಕೀಯ, ಶಿಕ್ಷಣ, ಸಾಹಿತ್ಯ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತನ್ನ ಚಹರೆಗಳನ್ನು ಮೂಡಿಸಿದೆ.

ಹತ್ತೊಂಬತ್ತು, ಇಪ್ಪತ್ತನೆ ಶತಮಾನದಲ್ಲಿ ಸಿಗ್ಮಂಡ್ ಫ್ರಾಯ್ಡ್, ಕಾರ್ಲ್ ಯೂಂಗ್ ಮೊದಲಾದವರು ಮನುಷ್ಯ ವರ್ತನೆ ಕುರಿತು ತಮ್ಮದೇ ಆದ ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಅವರ ಸುಪ್ತ ಮನಸ್ಸು, ಈಡಿಪಸ್ ಸಂಕೀರ್ಣ, ಲೈಂಗಿಕ ಇಚ್ಛೆಗಳು, ಈದ್, ಇಗೋ, ಸೂಪರ್ ಇಗೋ ಸಿದ್ಧಾಂತಗಳು ಕನ್ನಡ ಸಾಹಿತ್ಯದಲ್ಲಿ ಹಲವು ರೀತಿಯಲ್ಲಿ ಅನ್ವಯಿಸಲ್ಪಟ್ಟಿವೆ. ಅವು ಕಾವ್ಯ, ಕಥನಗಳಲ್ಲಿ ಪಾತ್ರಗಳ ಒಳಗಿನ ಅಂತರಂಗದ ಸಂಘರ್ಷ, ಗುಪ್ತ ಆಲೋಚನೆಗಳು, ಸಾಮಾಜಿಕ ಒತ್ತಡಗಳು, ಸ್ವಗತ, ಭಯ, ಕನಸು ಮತ್ತು ನಡವಳಿಕೆಗಳನ್ನು ಕುರಿತು ಅಧ್ಯಯನ ಮಾಡಲು ಸಾಕಷ್ಟು ಸಹಕಾರಿಯಾಗಿವೆ. ಕನ್ನಡ ಸಾಹಿತ್ಯದಲ್ಲಿ ಮನೋವಿಜ್ಞಾನ ಎಂಬುದು ತನ್ನದೇ ಆದ ಛಾಪನ್ನು ಮೂಡಿಸಿದೆ. ಕನ್ನಡ ಸಾಹಿತಿಗಳಾದ ತ್ರಿವೇಣಿ, ಕುವೆಂಪು, ಗೌರಮ್ಮ, ಶಿವರಾಮ ಕಾರಂತ, ದ.ರಾ. ಬೇಂದ್ರೆ, ಗಿರೀಶ್ ಕಾರ್ನಾಡ್, ಭೈರಪ್ಪ ಮುಂತಾದವರ ಸಾಹಿತ್ಯಿಕ ಬರೆಹಗಳಲ್ಲಿ ವೈಚಾರಿಕ ಮತ್ತು ಮನೋವೈಜ್ಞಾನಿಕ ದೃಷ್ಟಿಕೋನಗಳು ಹೇರಳವಾಗಿ ಕಂಡುಬರುತ್ತವೆ.

ಮನೋವಿಶ್ಲೇಷಣಾತ್ಮಕ ವಿಮರ್ಶೆಯ ಧೋರಣೆಗಳನ್ನು ಹೀಗೆ ಗುರುತಿಸಬಹುದು: ಕನಸುಗಳು ಮತ್ತು ನ್ಯುರಾಟಿಕ್ ಲಕ್ಷಣಗಳನ್ನು ವಿವರಿಸುವಂತೆಯೇ ಸಾಹಿತ್ಯ ಮತ್ತು ಇತರ ಕಲೆಗಳನ್ನೂ ವಿವರಿಸಬಹುದು. ಕನಸು ಮತ್ತು ನ್ಯುರಾಸಿಸ್ ಅದುಮಿಟ್ಟ ಆಸೆಗಳನ್ನು ಕಾಲ್ಪನಿಕವಾಗಿ/ಭ್ರಮಾತ್ಮಕವಾಗಿ ಪೂರೈಸುತ್ತವೆ. ಸಾಹಿತ್ಯ ಮತ್ತು ಇತರ ಕಲೆಗಳೂ ಅಷ್ಟೆ. ವಾಸ್ತವ ಪರಿಸ್ಥಿತಿ, ಸಮಾಜ ಒಪ್ಪಿಕೊಂಡ ನೀತಿ ಸಂಹಿತೆ, ಅಥವ ಔಚಿತ್ಯ ಪ್ರಜ್ಞೆ ಇವು ವ್ಯಕ್ತಿಯ ಒಳಮನಸ್ಸಿನ ಆಸೆಗಳ ಪೂರೈಕೆಗೆ ಅಡ್ಡಿಯಾಗುತ್ತವೆ, ಇಚ್ಛೆಗಳು ದಮನಕ್ಕೆ ಒಳಗಾಗುತ್ತವೆ. ಹೀಗೆ ದಮನಕ್ಕೆ ಒಳಗಾಗುವ ಆಸೆಗಳು ಪ್ರಮುಖವಾಗಿ ಲೈಂಗಿಕ ಆಸೆಗಳೇ ಆಗಿರುತ್ತವೆ. ಈ ಲೈಂಗಿಕ ಆಸೆಗಳನ್ನು ಫ್ರಾಯ್ಡ್ 'ಲಿಬಿಡೋ'ಎಂದು ಕರೆಯುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯ ಮನಸ್ಸಿನಲ್ಲೂ ಇರುವ ಸೆನ್ಸಾರ್, ಅಥವಾ ಭಾವನೆ, ಇಂಥ ಆಸೆ ಮತ್ತು ಭಾವನೆಗಳನ್ನು ಮನಸ್ಸಿನ ಮೇಲ್ಪದರಕ್ಕೆ ಬಾರದಂತೆ ತಡೆದು ಮನಸ್ಸಿನ ಆಳಕ್ಕೆ, ಸುಪ್ತ ಮನಸ್ಸಿಗೆ, ತಳ್ಳಿಬಿಡುತ್ತದೆ. ಆದರೆ ಹೀಗೆ ಅದುಮಿಟ್ಟ ಇಚ್ಛೆಗಳು ವೇಷಮರೆಸಿ ಕೊಂಡು, ವಿಕೃತವಾಗಿ ಕನಸಿನ ರೂಪದಲ್ಲೋ ಜಾಗ್ರತ ಮನಸ್ಸನ್ನು ಪ್ರವೇಶಿಸುತ್ತವೆ. ಹೀಗೆ ಅವು ವ್ಯಕ್ತವಾಗುವುದರಿಂದ ಮನಸ್ಸಿಗೆ ಒಂದು ಬಗೆಯ ಸ್ಥಿರತೆ ಮತ್ತೆ ದೊರೆಯುತ್ತದೆ. ಸುಪ್ತ ಮನಸ್ಸಿನ ಆಸೆಗಳು ಹೀಗೆ ವೇಷಮರೆಸಿಕೊಳ್ಳುವಲ್ಲಿ ಸಾಮಾನ್ಯ ವಾಗಿ ಕೆಲವು ದಾರಿಗಳನ್ನು, ಉಪಾಯಗಳನ್ನು ಅನುಸರಿಸುತ್ತವೆ. ಅವುಗಳೆಂದರೆ (1) ಸಂಗ್ರಾಹಕತೆ (ಕಂಡೆನ್ಸೇಶನ್) (2) ಪಲ್ಲಟ (ಡಿಸ್‌ಪ್ಲೇಸ್‌ಮೆಂಟ್) (3) ಸಾಂಕೇತಿಕತೆ (ಸಿಂಬಲಿಸಂ). ಸುಪ್ತವಾದ ಆಸೆಯ ಕೆಲವು ಅಂಶಗಳು ನೇರವಾಗಿ ವ್ಯಕ್ತವಾಗದೆ ಇನ್ನಿತರ ಅಂಶಗಳೊಡನೆ ಬೆರೆತು ಒಂದು ಬಿಂಬದ ರೂಪವನ್ನು ತಾಳುವುದು ಸಂಗ್ರಾಹಕತೆ ಅದುಮಿಟ್ಟ ಆಸೆಯು ಇಚ್ಛಿತ ವ್ಯಕ್ತಿ, ಭಾವ ಅಥವ ವಸ್ತುವಿನ ಬದಲಾಗಿ ಎಚ್ಚರದ ಮನಸ್ಸು ಒಪ್ಪಿಕೊಳ್ಳುವಂಥ ಇನ್ನೊಂದು ರೂಪವನ್ನು ಧರಿಸುವುದು ಪಲ್ಲಟ. ಲೈಂಗಿಕ ಆಸೆಗಳು ಲೈಂಗಿಕತೆಗೆ ಸಂಬಂಧಪಡದ ವಸ್ತುಗಳ ರೂಪವನ್ನು ತಾಳುವುದು ಸಾಂಕೇತಿಕತೆ. (ವಿಮರ್ಶೆಯ ಪರಿಭಾಷೆ ಪು.ಸಂ: 341)

ಜೀವ ವಿಕಾಸಕ್ಕೆ ಸಂಗಾತಿಗಳ ನಡುವೆ ಭಾವುಕ ಸಾಂಗತ್ಯ ಬೆಸೆದು ಮಾನವ ಸಂತತಿ ವರ್ಧನೆಗೆ ಸಹಾಯವಾಗುವಂತೆ ಪ್ರಕೃತಿ ವಿನ್ಯಾಸಗೊಳಿಸಿಕೊಂಡಿದೆ. ಅದರಂತೆ ಈ ಜೀವ ಜಗತ್ತು ಸೃಷ್ಟಿ ಕಾರ್ಯದಲ್ಲಿ ತೊಡಗಿದೆ. ಈ ಕಾರ್ಯವನ್ನು ವಿವಾಹದ ಚೌಕಟ್ಟಿನಲ್ಲಿ ನಡೆಸುವುದು ಮನೋವೈಜ್ಞಾನಿಕ ಮತ್ತು ಸಾಮಾಜಿಕ ಆರೋಗ್ಯ ದೃಷ್ಟಿಯಿಂದ ಉತ್ತಮವಾದುದು ಎನ್ನಬಹುದು.

ಜೀವವಿಕಾಸದ ದೃಷ್ಟಿಯಿಂದ ಪ್ರಕೃತಿಯಲ್ಲಿ ಸಲಿಂಗಪ್ರೇವದಿಂದ ಯಾವುದೇ ಪ್ರಯೋಜನಗಳಿಲ್ಲವಾದರೂ ಇತ್ತೀಚೆಗೆ ಸಂಲಿಂಗ ಪ್ರೇಮ ಹೆಚ್ಚುತ್ತಿರುವುದು ಕಾಣಬಹುದು.ಸಲಿಂಗ ಸೃಷ್ಟಿಗೆ ಕಾರಣಗಳನ್ನು ಹುಡುಕುವ ಪ್ರಯತ್ನ ವೈಜ್ಞಾನಿಕ ಜಗತ್ತಿಗೆ ಸವಾಲಾಗಿದೆ. ಇಂತಹ ಸಂಶಯಗಳಿಗೆ ಉತ್ತರ ಹುಡುಕಲು ಪ್ರಯತ್ನಿಸಿದವರು ಸ್ವತಃ ಸಲಿಂಗಕಾಮಿಯಾದ ಬರಹಗಾರರಾದ ವಸುಧೇಂದ್ರ ಅವರು. ವಸುಧೇಂದ್ರ ಅವರ 'ಸೈಕಲ್ ಸವಾರಿ' ಕಥೆಯಲ್ಲಿ ಮೋಹನ ಸ್ವಾಮಿ ಎನ್ನುವ 'ಗೇ' ಹುಡುಗನಿಗೆ ತನ್ನ 21 ನೇ ವಯಸ್ಸಿನಲ್ಲಿ ಪರಮ ಸತ್ಯ ಒಂದು ಸಾಕ್ಷಾತ್ಕಾರವಾಗುತ್ತದೆ. ಅದೇನೆಂದರೆ ಸೈಕಲ್ ಹೊಡೆಯುವುದನ್ನು ಕಲಿತರೆ ಸ್ಟ್ರೇಟ್ ಆಗುವೆ ಎಂಬುದು 'ಗೇ' ಎನ್ನುವ ಪದ ಅವನಿಗೆ ಪರಿಚಯವಾದದ್ದು ಆತ ಯೌವ್ವನಕ್ಕೆ ಬಂದಮೇಲೆ. ತನ್ನ ವ್ಯಕ್ತಿತ್ವದಿಂದಲೇ ಆತ ತನ್ನನ್ನು ತಾನು 'ಗೇ' ಎಂದು ಗುರುತಿಸಿಕೊಂಡಿರುತ್ತಾನೆ. ಇನ್ನುಳಿದ ಜೀವಗಳನ್ನು ಸ್ಟ್ರೇಟ್ ಎಂದು ಅರ್ಥ ಮಾಡಿಕೊಂಡಿದ್ದಾನೆ. 'ಗೇ' ಪದ ಸಾಕಷ್ಟು ನೋವು ಹೇಸಿಗೆ ಅವಮಾನಗಳನ್ನು ಅನುಭವಿಸಿದ ಮೋಹನ ಸ್ವಾಮಿಗೆ ಸರಿಯಾದ ಮಾಹಿತಿ ತಿಳಿದಿರುವುದಿಲ್ಲ. ಕನ್ನಡ ಸಾಹಿತ್ಯದಲ್ಲೂ ಆ ಪದಕ್ಕೆ ಪರ್ಯಾಯ ಪದಗಳಿಲ್ಲ ಎಂಬುದು ತಿಳಿಯುತ್ತದೆ. ಅವನಿಗೆ 7 ತರಗತಿಯಲ್ಲಿ ಓದುತ್ತಿದ್ದಾಗ ಒಮ್ಮೆ ಅಪ್ಪ–ಅಮ್ಮ ಮಠಕ್ಕೆ ಊಟಕ್ಕೆ ಹೋಗಿದ್ದಾಗ ಇವರನ್ನು ಮಧ್ಯಾಹ್ನ ಊಟಕ್ಕೆ ಬರಲು ತಿಳಿಸಿರುತ್ತಾರೆ. ಮೋಹನ ಸ್ವಾಮಿ ತನ್ನ ಊರಿನವರ ಜೊತೆ ಗಿಲ್ಲಿ ದಾಂಡು, ಗೋಲಿ, ಬುಗುರಿ ಆಡದೆ ತನ್ನ ಅಕ್ಕ, ಮತ್ತವಳ ಗೆಳತಿಯ ಜೊತೆಯಲ್ಲಿ ರಂಗೋಲಿ ಹಾಕುವುದು, ಗೊಂಬೆ ಮದುವೆ ಆಟ ಆಟವಾಡುತ್ತಿರುತ್ತಾನೆ. ಆಟವಾಡುತ್ತಾ ಮಠಕ್ಕೆ ಊಟಕ್ಕೆ ಹೋಗಬೇಕಾದಾಗ ಕಾಲುವೆ ದಾಟಿ ಹೋಗಬೇಕಾಗಿತ್ತು. ಆಗ ಉತ್ಸಾಹದಿಂದ ದೂರದಿಂದ ಓಡಿ ಬಂದು ಎಗರಿ ಕಾಲುವೆ ದಾಟುತ್ತಾನೆ. ತನ್ನ ಅಕ್ಕನಿಗೂ ದಾಟಲು ಹೇಳುತ್ತಾನೆ. ಅವರೆಲ್ಲ ಲಂಗ ಚೋಲಿ ಹಾಕಿದ್ದರಿಂದ ದಾಟಲು ಹೆದರುತ್ತಾರೆ. ಆಗ ಮೋಹನ ಸ್ವಾಮಿ ಅವರನ್ನು ಕಂಡು ನಗುತ್ತಾನೆ. ಆತನ ಅಕ್ಕನಿಗೆ ಕೋಪ ಬಂದು ನೀನೊಬ್ಬ ಗಂಡು ಸೂಳೇ ತರ ನಗುತ್ತೀಯ ಎನ್ನುತ್ತಾಳೆ. ಆತನಿಗೆ ಹೇಗೆ ಪ್ರತಿಕ್ರಿಯೆಸಬೇಕು ತಿಳಿಯದೆ ಸಿಟ್ಟಿನಿಂದ ಹೊಡೆಯಬೇಕು ಅನಿಸಿದರೂ, ನಾಳೆಯಿಂದ ಅವರು ಆಟಕ್ಕೆ ಸೇರಿಸಿಕೊಳ್ಳದಿದ್ದರೆ ಎಂಬ ಭಯವಾಗಿ ಸುಮ್ಮನಾಗುತ್ತಾನೆ.

ಈ ಘಟನೆಯ ನಂತರ ಅವನಿಗೆ ಬದುಕಿನಲ್ಲಿ ಎರಡು ಬದಲಾವಣೆಗಳಾಗುತ್ತವೆ. ಒಂದು ಗಂಡು ಸೂಳೇ ಎಂಬ ಉಪನಾಮ ಬಾಯಿಂದ ಬಾಯಿಗೆ ಹರಡಿ, ಹಿರಿಕಿರಿಯನ್ನದೆ ಎಲ್ಲರಿಗೂ ತಿಳಿದು ಹೋದದ್ದು, ಎರಡನೆಯದು ಮತ್ತೆಂದು ಮಠದ ಹತ್ತಿರ ಕಾಲುವೆಯನ್ನು ಎಗರಿ ದಾಟಲು ಸಾಧ್ಯವಾಗದೆ ಹೋದದ್ದು. 'ಗಂ ಸೂ' ಎಂದು ಯಾರಾದರೂ ಕರೆದರೆ ಮುಜುಗರವಾಗುತ್ತಿತ್ತು. 10 ನೇ ತರಗತಿಯಲ್ಲಿ ಗಣಿತದಲ್ಲಿ ಕಡಿಮೆ ಹಂಕಗಳು ಬಂದಾಗ ಮೋಹನ ಸ್ವಾಮಿ ತಾಯಿ ಆತನನ್ನು **"ಗಂಡು ಸೂಳೆ ತರ ಕುಣಿಯೋದಕ್ಕೆ ಬರುತ್ತದೆ. ಗಣಿತ ಪರೀಕ್ಷೆಯ ಸರಿಯಾಗಿ ಮಾಡೋಕೆ ಬರದಿಲ್ಲಲ್ಲೋ! ಎಂಥಾ ಮಗನಾಗಿ ನಂಗೆ ಹುಟ್ಟಿದೆ ರಂಡೆ ಗಂಡ"** ಎಂದು ಬೈದಳು. ಹೆತ್ತ ತಾಯಿಯೇ ಹಾಗೆ ಮಾತನಾಡಿದ್ದಕ್ಕೆ ಆತನಿಗೆ ಹೆಚ್ಚು ನೋವಾಗಿ ಅಳುತ್ತಿದ್ದಾಗ, ತಾಯಿಯೂ ಕಣ್ಣೀರು ಹಾಕುತ್ತಾ ಆತನನ್ನು ನೋಯಿಸಿದ್ದಕ್ಕೆ ಸಮಾಧಾನ ಮಾಡಿ ಉಣಬಡಿಸುತ್ತಾಳೆ. ಮೋಹನ ಸ್ವಾಮಿಗೆ ತಾಯಿಯನ್ನು ಕಂಡು **"ಗಂಡು ಸೂಳೆ ಅಂದ್ರೆ ಏನಮ್ಮಾ? ಯಾಕೆ ನನ್ನ ಹಾಗೆ ಕರೀತಾರೆ?"** ಎಂದು ಪ್ರಶ್ನಿಸುತ್ತಾನೆ. **"ಏನೋ ಸುಡುಗಾಡು ಮಾತು ಬಿಡು ರಾಜ ಅದು ನಿನಗ್ಯಾಕೆ ಗಂಡು ಸೂಳೇ ಆಗ್ತಿ"** ನೂರು ಜನ ಸೂಳೇರನ್ನ ಆಳ್ವಂತಿ" ಎಂದು ನುಡಿಯುತ್ತಾಳೆ. ನೀನು ಹುಡುಗರ ಹಾಗೆ ವರ್ತಿಸಬೇಕು ಎಂದು ತಿಳಿ ಹೇಳುತ್ತಾಳೆ. **"ಅವರಿಗೆ ಅದೆಲ್ಲ ಯಾರು ಕಳಿಸಿ ಕೊಡ್ತಾರಮ್ಮಾ? ನನಗೆ ಯಾಕೆ ಯಾರು ಅದನ್ನ ಹೇಳ್ಕೊಡ್ತಾ ಇಲ್ಲ ಎನ್ನುತ್ತಾನೆ?"** ಹೀಗೆ ಆತನ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಎಲ್ಲಾ ತಪ್ಪು ಮಾಡಿದ್ದು ನಾನು ಮತ್ತು ನಿಮ್ಮಪ್ಪ ಎಂದು ಅಳುತ್ತಾಳೆ. ನೀನು ಹುಟ್ಟಿದ್ದು ನಿಮ್ಮಪ್ಪನಿಗೆ 57 ವರ್ಷ ನನಗೆ 40 ವರ್ಷ

ಮುಪ್ಪಿಗೆ ಹುಟ್ಟಿದ ಮಕ್ಕಳು ತಿಪ್ಪೇ ಪಾಲು ಅಂತ ಹಿರಿಯರು ಹೇಳ್ತಾರೆ. ನನಗೆ ಗೊತ್ತಾಗಲಿಲ್ಲಪ್ಪ ಎನ್ನುತ್ತಾಳೆ. ಮಕ್ಕಳನ್ನು ಪಡೆಯುವಲ್ಲಿ ವಯಸ್ಸು ಕೂಡ ಮುಖ್ಯವಾಗುತ್ತದೆ. ವಯಸ್ಸಾದವರಲ್ಲಿ ಆರೋಗ್ಯಕರವಾದ ಅಂಡಾಣು ಮತ್ತು ವೀರ್ಯಾಣುಗಳು ಬಿಡುಗಡೆಯಾಗದಿದ್ದರೂ ಮಕ್ಕಳು ಸಲಿಂಗಿಗಳಾಗಿ ಹುಟ್ಟುತ್ತಾರೆ ಎಂಬುದನ್ನು ವಿಜ್ಞಾನಿಗಳು ಸಂಶೋಧಿಸಿದ್ದಾರೆ.

ಡಾ.ಜೆ. ಬಾಲಕೃಷ್ಣ ಅವರ 'ಪ್ರೇಮ ಕಾಮ ಮತ್ತು ವಿಜ್ಞಾನ' ಲೇಖನದಲ್ಲಿ ಪ್ರಸ್ತಾಪಿಸಿರುವಂತೆ ಡಿಎನ್ಎ(ಆಓಂ) ಆವಿಷ್ಕಾರ ಮಾಡಿರುವ 'ಫ್ರಾನ್ಸಿಸ್ ಕ್ರಿಕ್' ಅವರ ಅಧ್ಯಯನದ ಪ್ರಕಾರ ಮಾನವರ ಭಾವನೆಗಳು, ಆಸೆ ಆಕಾಂಕ್ಷೆಗಳು, ಸುಖ ದುಃಖಗಳು ರಾಸಾಯನಿಕಗಳ ಚಟುವಟಿಕೆಯ ಪ್ರತಿಫಲದಿಂದ ಉಂಟಾಗುತ್ತದೆ ಎಂದಿದ್ದಾರೆ. ನಮ್ಮ ದೈಹಿಕ ಹಾಗೂ ಮಾನಸಿಕ ಚಟುವಟಿಕೆಗಳನ್ನು ನಿಯಂತ್ರಿಸುವುದು, ಸಮತೋಲನದಲ್ಲಿಡುವುದು ದೇಹದಲ್ಲಿ ಉತ್ಪತ್ತಿಯಾಗುವ ರಾಸಾಯನಿಕಗಳ ಕಾರ್ಯವಾಗಿದೆ ಎಂಬುದನ್ನು ಸಂಶೋಧಿಸಿದ್ದಾರೆ.

ಡಾ. ಮಾಲಿನಿ ಎಸ್ ಸುತ್ತೂರು ಅವರ ಸಲಿಂಗ ಕಾಮದ ಕುರಿತ ಚರ್ಚೆಯಲ್ಲಿ ಮಂಡಿತವಾದ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಅವರ ಅಧ್ಯಯನದ ಪ್ರಕಾರ ಎಲ್ಲಾ ಕಾಲದಲ್ಲೂ ಸಲಿಂಗ ಕಾಮಿಗಳು ಇದ್ದರು. ಈ ಜಗತ್ತಿನ ಮಾನವರ ಗುಂಪಿನಲ್ಲಿ ವೈರುಧ್ಯ ಮತ್ತು ವೈವಿಧ್ಯಗಳಿವೆ. ಮನುಷ್ಯರಲ್ಲಿ ವೈವಿಧ್ಯತೆ ಸಹಜ ಎನ್ನುತ್ತಾರೆ ವಿಜ್ಞಾನಿಗಳು. ಜನ ಹಿಂದೆ ಸಲಿಂಗದವರೊಂದಿಗೆ ಆಕರ್ಷಣೆ ಆಗುವುದು ಗೊತ್ತಿದ್ದರೂ ಮುಚ್ಚಿಟ್ಟುಕೊಂಡು ಇರುತ್ತಿದ್ದರು. ಜಗತ್ತಿನ ಎಲ್ಲಾ ಕಡೆ ಗಂಡು–ಹೆಣ್ಣಿನ ನಡುವೆ ಲೈಂಗಿಕ ಕ್ರಿಯೆ ನಡೆಯುತ್ತದೆ, ಆ ಕಾರಣದಿಂದ ಸಂತಾನವಾಗುತ್ತದೆ. ಪ್ರೀತಿಯಿಂದ ನಡೆಯುವುದು ಮತ್ತು ಒಟ್ಟಿಗೆ ಜೀವಿಸುವುದು ಮಾನವರ ಜೀವನಕ್ರಮ. ಮಾನವರಲ್ಲಿ ಉಂಟಾಗುವ ಲೈಂಗಿಕ ಗುಣಗಳ ಹೊಂದಾಣಿಕೆಯನ್ನು ಈ ರೀತಿ ಅರ್ಥೈಸಿದ್ದಾರೆ.

ಲೈಂಗಿಕ ಹೊಂದಾಣಿಕೆ (Sexual Orientation)

Sex – ಗಂಡು ಅಥವಾ ಹೆಣ್ಣು

Gender – ಗಂಡು ಗಂಡಾಗಿ, ಹೆಣ್ಣು ಹೆಣ್ಣಾಗಿ ಆರಾಮದಾಯಕವಾಗಿರುವುದು (comfortable)

Orientation - ಗಂಡಾಗಿ ಹುಟ್ಟಿ ಹೆಣ್ಣಾಗಿ ವರ್ತಿಸುವುದು. ಗಂಡಾಗಿ ಹುಟ್ಟಿ ಆರಾಮದಾಯಕವಾಗಿರಲು ಸಾಧ್ಯವಾಗದವರು ಹೀಗೆ ವರ್ತಿಸುತ್ತಾರೆ.

ಲೈಂಗಿಕ ಸಂಸರ್ಗ ಮೂರು ವಿಧದಲ್ಲಿ ನಡೆಯುತ್ತದೆ.

1. ಭಿನ್ನಲಿಂಗೀಯ ಅಂದರೆ ಹೆಣ್ಣು–ಗಂಡು (Hetirosexual) – ಜನಸಾಮಾನ್ಯರಲ್ಲಿ ನೋಡಬಹುದಾದ ಹೆಣ್ಣು ಗಂಡಿನ ನಡುವೆ ನಡೆಯುವ ಸಹಜ ಲೈಂಗಿಕತೆ.
2. ಸಲಿಂಗಕಾಮಿಗಳು (Homosexual – ಗಂಡು ಮತ್ತು ಗಂಡಿನ ನಡುವೆ ಲೈಂಗಿಕತೆ (Gay) ಅಥವಾ ಹೆಣ್ಣು ಮತ್ತು ಹೆಣ್ಣಿನ ನಡುವೆ ನಡೆಯುವ ಲೈಂಗಿಕತೆ (Lesbian).
3. ಹೆಣ್ಣು– ಗಂಡು ಮತ್ತು ಹೆಣ್ಣು ಹಾಗೂ ಗಂಡು– ಹೆಣ್ಣು ಮತ್ತು ಗಂಡಿನ ನಡುವೆ ಲೈಂಗಿಕತೆ (bisexual)

ಮನುಷ್ಯರು ವಿಭಿನ್ನವಾಗಿ ವರ್ತಿಸಲು ಅನೇಕ ವೈಜ್ಞಾನಿಕ ಕಾರಣಗಳಿರುವುದನ್ನು ವಿಜ್ಞಾನಿಗಳು ಸಂಶೋಧಿಸಿ ದಾಖಲಿಸಿದ್ದಾರೆ. ಬಹಳ ಗಂಭೀರವಾದ ಈ ವಿಚಾರನ್ನು ಸಂಶೋಧಿಸಿರುವುದನ್ನು ಗಮನಿಸಬಹುದು. ಜೆನೆಟಿಕ್ (genetic)– ವಿಚಾರದಲ್ಲಿ ಬಹಳ ಅಧ್ಯಯನಗಳು ನಡೆದಿದೆ.ಗೇ ಅಥವಾ ಲೆಸ್ಬಿಯನ್‌ಗೆ ಒಂದು ಜೀನ್ ಎಂಬುದಿರುವುದಿಲ್ಲ. ಮನುಷ್ಯರ ದೇಹದಲ್ಲಿ ಒಂದು ಜೀನ್ ಎಂಬುವುದಿಲ್ಲ ಅನೇಕ ಜೀನ್ಸ್‌ಗಳು ಇವೆ. (ಪಿಂಡದಲ್ಲಿ ಬ್ರಹ್ಮಾಂಡದಂತೆ)ಇದನ್ನು ಪಾಲಿಜೆನಿಕ್ ಎನ್ನುತ್ತಾರೆ. ಇದನ್ನು ಸರಿಪಡಿಸಲಾಗದು. ಟ್ರಿಲಿಯನ್ಸ್ ಜೀವಕೋಶಗಳ (cells) ಒಳಗೆ ಬರುವ ವರ್ಣತಂತು (chromosome) ಒಳಗೆ,ಹೆಣ್ಣು

ಗಂಡಿನ ಸಂಸರ್ಗವಾದಾಗ ಬಹಳವೇ ಎಕ್ಸ್ ಕ್ರೋಮೋಸೋಮ್‌ನಲ್ಲಿ ಡಿಎನ್‌ಎಯಲ್ಲಿ ಇಂತಹ ಸಮಸ್ಯೆ ಆದಾಗ ಅದನ್ನು ಸರಿಪಡಿಸಲಾಗದು ಎಂದಿದ್ದಾರೆ. ಹೆಣ್ಣಿನಲ್ಲಿ XX chromosome ಹಾಗೂ XY chromosome ಇರುತ್ತದೆ. ಇವುಗಳನ್ನು ಸೆಕ್ಸ್ ಕ್ರೋಮೊಸೋಮ್ ಎನ್ನುತ್ತಾರೆ. ಹುಡುಗ ಅಥವಾ ಹುಡುಗಿಯಲ್ಲಿ ಎಕ್ಸ್ ಕ್ರೊಮೊಸೋಮ್‌ನಲ್ಲಿ (X chromosome) ಕಿ28ಎನ್ನುವ ಜಾಗವಿರುತ್ತದೆ. ಇದನ್ನು ದ್ವಿಜನ್ ಎನ್ನುತ್ತಾರೆ. ಅದರಲ್ಲಿ ಏನಾದರೂ ರೂಪಾಂತರ (Mutation) ವಾದರೆ ಸೆಕ್ಸ್ ಓರಿಯಂಟೇಶನ್ (sex orientation) ಲಿಂಗದಲ್ಲಿ ಬದಲಾವಣೆ ಆಗುತ್ತದೆ ಎಂದು ವಿಜ್ಞಾನಿಗಳು ಸ್ಪಷ್ಟಪಡಿಸಿದ್ದಾರೆ.

ಮಗು 12ನೇ ವಾರದ ವರೆಗೆ ಬೈಪೊಟೆನ್ಷಿಯಲ್ ಗೊನಾಡ್ (Bipotentioal gonad) ಸ್ಥಿತಿಯಲ್ಲಿರುತ್ತದೆ. ತಂದೆ ತಾಯಿಂದ ಬಂದ ಕ್ರೊಮೊಸೋಮ್ ನಲ್ಲಿ ತಾಯಿಯಿಂದ ಎಕ್ಸ್ ಕ್ರೊಮೊಸೋಮ್ ಮತ್ತು ತಂದೆಯಿಂದ ವೈ ಕ್ರೊಮೊಸೋಮ್ ಬಂದಾಗ ವೈ ಕ್ರೊಮೊಸೋಮ್‌ಲ್ಲಿ SRY ಎಂಬ ಒಂದು ಜೀನ್ (gene) ಇರಬೇಕು. ಆ ಜೀನ್ ಇದ್ದರೆ ಬೈಪೊಟೆನ್ಷಿಯಲ್ ಗೊನಾಡ್ ಹೆಣ್ಣು ಅಥವಾ ಗಂಡು ಆಗುವ ಸಾಧ್ಯತೆ ಇರುತ್ತದೆ, ಅದು ಆಗ ಗಂಡಾಗುತ್ತದೆ. SRY ಜೀನ್ ಇಲ್ಲವಾದರೆ ಹೆಣ್ಣಾಗುತ್ತದೆ. ಇದು ರೂಪಾಂತರವಾಗುವ ಪ್ರಕ್ರಿಯೆ. ಗಂಡು ಹೆಣ್ಣಾಗಲು ಇದು ಒಂದು ಕಾರಣ ಎಂಬುದನ್ನು ಅಧ್ಯಯನ ಮಾಡಲಾಗಿದೆ.

Twins studies-ಅವಳಿಗಳ ಕುರಿತ ಸಂಶೋಧನೆಯನ್ನು ಮಾಡಲಾಗಿದೆ. ಇದರಲ್ಲಿ Identical Twins ಮತ್ತು NonidenticalTwins ಎಂದು ಗುರುತಿಸಲಾಗಿದೆ. IdenticalTwins ಎಂದರೆ ಎರಡೂ ಒಂದೇ ಲಿಂಗ ಆಗಿರುವುದು. ಎರಡೂ ಹೆಣ್ಣು ಅಥವಾ ಎರಡೂ ಗಂಡಾಗಿರುವುದು. Nonidentical Twins ಎಂದರೆ ಒಂದು ಹೆಣ್ಣು ಮತ್ತು ಗಂಡು ಆಗಿ ಹುಟ್ಟಿರುತ್ತವೆ. IdenticalTwins ಹುಟ್ಟಿದಾಗ (Homosexual) ಸಲಿಂಗಿಗಳಾಗುವ ಸಾಧ್ಯತೆ ಇರುತ್ತದೆ ಎಂಬುದನ್ನು ವಿಜ್ಞಾನಿಗಳು ತಿಳಿಸಿದ್ದಾರೆ. ಏಕೆಂದರೆ ತಾಯಿ ಗರ್ಭದಲ್ಲಿ ಜೊತೆಯಲ್ಲಿಯೇ ಬೆಳೆಯುವುದರಿಂದ ಸಂವಹನ ಉಂಟಾಗುತ್ತದೆ. ಸಲಿಂಗಿಗಳನ್ನು ಇಷ್ಟಪಡಬಹುದು. ಆದ್ದರಿಂದ ಅವರು ಸಲಿಂಗಿಗಳಾಗಲು ಇದೂ ಕಾರಣವಿರಬಹುದೆಂದು ಊಹಿಸಲಾಗಿದೆ. ಇಂತಹ ಕಾರಣಗಳಿಂದ ಅಸಹಜವಾಗಿ ಸಲಿಂಗ ಕಾಮಗಳು ನಡೆಯುತ್ತವೆ.

GWAS studies – ಜೀನೊಮ್ ವೈಡ್ ಅಸೋಸಿಯೇಷನ್ ಸ್ಟಡೀಸ್ (Genome – wide association Studies) ಎಂಬ ಅಧ್ಯಯನವನ್ನು ಗಮನಿಸುವುದಾದರೆ, ಮನುಷ್ಯ ದೇಹದಲ್ಲಿ ಅನೇಕ ಜೀನ್‌ಗಳಿವೆ.ಇವುಗಳ ಬಗ್ಗೆ ಆಳವಾದ ಅಧ್ಯಯನವಾಗಿದೆ. ರೂಪಾಂತರ (Mutation) ಕುರಿತು ಸಂಶೋಧಿಸಿ ತಿಳಿಸಿದ್ದಾರೆ. ಮಗು ಭ್ರೂಣ (fetus)ದ ಹಂತದಲ್ಲಿ ನಡೆಯುವ ಒಂದು ಪ್ರಕ್ರಿಯೆ. epigenetic finamin ಎಂಬುದೊಂದಿದೆ. ಇದರಲ್ಲಿ ಡಿಎನ್‌ಎ (DNA) ಯಾವುದೇ ಬದಲಾವಣೆ ಆಗಿರುವುದಿಲ್ಲ. ಮಗು ಗರ್ಭದಲ್ಲಿದೆ. ಡಿಎನ್‌ಎ (DNA) ಚೆನ್ನಾಗಿದೆ. ಆದರೆ ಡಿಎನ್‌ಎಯಲ್ಲಿ ಜೊತೆ ಸೇರಿರುವ ಪ್ರೋಟೀನ್‌ಗಳಲ್ಲಿ ಬದಲಾವಣೆಗಳಾಗಿವೆ. ಅದಕ್ಕೆ ಕಾರಣ ನಾವು ಸೇವಿಸುವ ಆಹಾರ, ಹವ್ಯಾಸ, ಜೀವನಶೈಲಿ. ನಾವು ಇಂದು ರಾಸಾಯಕಗಳ ಜಗತ್ತಿನಲ್ಲಿದ್ದೇವೆ. ಮಗು ಗರ್ಭಾವಸ್ಥೆಯಲ್ಲಿ ತೊಂದರೆಗಳಾಗಿರುವುದರಿಂದ (Hormonal disorders) ಸಲಿಂಗಮಕಾಮಿಯಾಗಿ ಹುಟ್ಟಲು ತಂದೆ ತಾಯಿಗಳು ಕಾರಣಕರ್ತರಾಗಿದ್ದಾರೆ. ಅಥವಾ ಜೀವಿಸುವ ಆಹಾರದ ಕಾರಣ ಬೆಳವಣಿಗೆ ಸರಿಯಾಗಿ ಆಗುವುದಿಲ್ಲ ಎಂಬ ಹಲವು ಸಂಶೋಧನೆಗಳು ಆಗಿವೆ. ಕೆಲವು ಸಲ ತಂದೆಯ ವೀರ್ಯಾಣು (sperm) ಮತ್ತು ತಾಯಿಯ ಅಂಡಾಣು (egg) ಆರೋಗ್ಯಕರವಾಗಿಲ್ಲದಿರುವುದು ಕೂಡ ಮುಖ್ಯ ಕಾರಣವಾಗುತ್ತದೆ. ಅಥವಾ ಬೆಳವಣಿಗೆಯ ಹಂತದಲ್ಲಿ ತೊಂದರೆಗಳಾಗಿರುತ್ತವೆ.

ಅನುವಂಶಿಕ (ಎಪಿಜನಿಟಿಕಲ್ epigenetical) ವಂಶವಾಹಿಯಲ್ಲಿ ಮೀಥೈಲ್(methyl) ಗುಂಪು, ಅಸಿಟೈಲ್(Acetyl) ಗುಂಪು, ಪಾಸ್ಪೇಟ್ (Phosphate) ಗುಂಪುಗಳೆಂಬ ರಾಸಾಯನಿಕಗಳಿರುತ್ತವೆ. ಇವು ಒಮ್ಮೆ ಒಗ್ಗೂಡುವುದು (bind) ದೂರ ಸರಿಯುವುದು ನಡೆಯುತ್ತದೆ. ಈ ಪ್ರಕ್ರಿಯೆಯಲ್ಲಿ ಕೆಲವೊಂದು ವಂಶವಾಹಿಯ(gene)ನ್ನು ಕ್ರಿಯಾಶೀಲಗೊಳಿಸುವುದು, ನಿಷ್ಕ್ರಿಯಗೊಳಿಸುವುದು ಮಾಡುತ್ತವೆ. ಅದು ಮುಖ್ಯವಾಗಿ ಮೆದುಳಿನ ಸಂವಹನದ ವಂಶವಾಹಿನಿಗಳು (brain networking

genes), ಹಾರ್ಮೋನ್ ನಿಯಂತ್ರಿಸುವ ವಂಶವಾಹಿಗಳು (Hormonne regulating genes), ಲಿಂಗ ಹೊಂದಾನಿಕೆಯ ವಂಶವಾಹಿಗಳು (sex orientation genes) ಇವುಗಳಲ್ಲಿ ವ್ಯತಾಸವಾದರೆ ಆ ಮಗು ಗೇ ಅಥವಾ ಲೆಸ್ಬಿಯನ್ ಆಗುವ ಸಾಧ್ಯತೆ ಹೆಚ್ಚಾಗಿರುತ್ತದೆ.

ವರ್ಣತಂತು (ಹಾರ್ಮೋನ್ Hormonne) – ಗಳನ್ನು ಗಮನಿಸುವುದಾದರೆ androgen sensitivity ಎಂದು ಕರೆಯುವ ಹಂತದಲ್ಲಿ ತಾಯಿ ಗರ್ಭಾವಸ್ಥೆಯಲ್ಲಿ ಭ್ರೂಣ ಹೆಣ್ಣು ಇರುತ್ತದೆ. ಅಕಸ್ಮಾತ್ ಆ ತಾಯಿಯಲ್ಲಿ ಟೆಸ್ಟೋಸ್ಟೆರಾನ್ (testosterone) ಹೆಚ್ಚಾಗಿ ಎಕ್ಸಪೋಸ್ ಆದರೆ (synthetic estrogen ಅಥವಾ synthetic androgen ಇರಬಹುದು) ಆದರೆ ಮಗು ಗಂಡು ಎಂದುಕೊಳ್ಳುತ್ತದೆ. ತಾಯಿ ತೆಗೆದುಕೊಳ್ಳುವ ಆಹಾರದಲ್ಲಿ ಇರುವ ಟೆಸ್ಟೋಸ್ಟೆರಾನ್ ಪ್ರಮಾಣ ಹಾರ್ಮೋನ್ ಪ್ರಮಾಣ ಜಾಸ್ತಿಯಾದರೆ ಆ ಮಕ್ಕಳು ಗಂಡು ಎಂದುಕೊಳ್ಳುತ್ತವೆ. ಇವರು ಬೆಳೆಯುತ್ತಾ ಲೆಸ್ಬಿಯನ್ ಆಗುವ ಸಾಧ್ಯತೆಗಳಿರುತ್ತವೆ. ಅದೇ ತರಹ ಹಾಗೆ ಗಂಡು ಭ್ರೂಣವೇ ಗರ್ಭದಲ್ಲಿದ್ದಾಗ ಟೆಸ್ಟೋಸ್ಟೆರಾನ್ ಪ್ರಮಾಣ ಕಡಿಮೆ ಆದರೆ ಆ ಮಗು ಹೆಣ್ಣು ಅಂದುಕೊಳ್ಳುತ್ತದೆ. ತಾಯಿ ಬಹಳ ಸಲ ಗರ್ಭಿಣಿಯಾದಾಗ ಆಕೆಯ ದೇಹದ ರಕ್ತದಲ್ಲಿ ಆಂಟಿ ಬಾಡಿಸ್ antibodies ರಿಲೀಸ್ ಆಗುತ್ತದೆ. ಅವು ಮೇಲ್ ಸ್ಪೆಸಿಫಿಕ್ ಓರಿಯೆಂಟೇಶನ್ male specific orientation ಪ್ರೋಟಿನನ್ನು ನಾಶಗೊಳಿಸುತ್ತವೆ. ಇದಕ್ಕೆ Immune ರೆಸ್ಪಾನ್ಸ್ ಕೂಡ ಕಾರಣ ಎಂದಿದ್ದಾರೆ. ಹಾಗಾಗಿ ಇವೆಲ್ಲವೂ ಸೇರಿ ಒಟ್ಟಾರೆ ಹಾರ್ಮೋನ್‌ನಲ್ಲಿ ವ್ಯತ್ಯಾಸವಾದರೆ ಮುಂದಿನ ದಿನಗಳಲ್ಲಿ ಸಲಿಂಗಕಾಮಿಯಾಗಲು ಕಾರಣಗಳಾಗಿವೆ. ಈ ಎಲ್ಲಾ ಕಾರಣಗಳಿಂದ ಒಬ್ಬಬ್ಬ ಸಲಿಂಗಕಾಮಿಗಳ ಜನನ ಆಗಿರಬಹುದು. ಒಂದೇ ಕಾರಣವಲ್ಲ ಎಂದಿದ್ದಾರೆ ವಿಜ್ಞಾನಿಗಳು.

ಹಾಗೂ ಸಾಂಸ್ಕೃತಿಕವಾಗಿ ಮಾನವರ ಮೇಲೆ ಪರಿಣಾಮ ಬೀರುತ್ತವೆ. ತಂದೆ ತಾಯಿಗೆ ಗಂಡು ಬೇಕಿದ್ದಾಗ ಹೆಣ್ಣು ಹುಟ್ಟಿರುತ್ತದೆ. ಆ ಆಸೆಯನ್ನು ಪೂರೈಸಿಕೊಳ್ಳಲು ಹೆಣ್ಣು ಮಗುವಿಗೆ ಗಂಡು ಮಗುವಿನ ಬಟ್ಟೆ ಹಾಕುವುದು, ಕೂದಲು ಕತ್ತರಿಸುವುದು, ಈ ರೀತಿಯಲ್ಲೇ ಮಕ್ಕಳನ್ನು ಬೆಳೆಸುತ್ತಾರೆ. ಹಾಗಾಗಿ ಸಾಂಸ್ಕೃತಿ ಮತ್ತು ಸಾಮಾಜಿಕ ಸಂಗತಿಗಳು ಕೂಡ ಸಲಿಂಗಿಗಳಾಗಲು ಕಾರಣಗಳಾಗಿವೆ.

ಇಂತಹ ಸ್ವಭಾವದವರಲ್ಲಿ ಮನೋವೈಜ್ಞಾನಿಕವಾಗಿ ಬದಲಾವಣೆ ತರಬಹುದು. ಆದರೆ ಹುಟ್ಟುವುದನ್ನು ತಡೆಯಲು ಸಾಧ್ಯವಿಲ್ಲ ಎಂದಿದ್ದಾರೆ. ಜೀವವಿಕಾಸ ಹಂತದಲ್ಲಿ ಇಂತಹ ವೈರುಧ್ಯ ಜೀವಗಳನ್ನು ಪ್ರಕೃತಿ ಉಳಿಸಿಕೊಂಡು ಬಂದಿದೆ ಎಂಬ ಊಹೆಗಳು ಇವೆ. ಬಹಳ ಹಿಂದಿನ ಜನಾಂಗ ಆಹಾರದ ಕೊರತೆಗಳು ಉಂಟಾದಾಗ ಗುಂಪುಗಳು ಉಳಿಯಬೇಕಾದರೆ ಜನ ಸಲಿಂಗಗಳಾಗಿ ವರ್ತಿಸಿ ಸೃಷ್ಟಿಕ್ರಿಯೆಯನ್ನು ಸ್ವಲ್ಪ ಕಾಲ ತಡೆದಿರಬಹುದು. ಈ ರೀತಿಯಲ್ಲೂ ಜೀವನವನ್ನು ಉಳಿಸಿಕೊಂಡಿದ್ದಾರೆ ಎಂದು ವಿಜ್ಞಾನಿಗಳು ಊಹಿಸಿದ್ದಾರೆ. ಪ್ರಕೃತಿಯಲ್ಲಿ ಜೀವಿಗಳ ಅಳಿವು ಉಳಿವಿನ ಸಂದರ್ಭಗಳಲ್ಲಿ ಎದುರಾಗುವ ಸಮಸ್ಯೆಗೆ ಮಾನವರು ಪ್ರತಿಕ್ರಯಿಸಿದ ರೀತಿ ಇಂದೂ ಕೂಡ ನಾವು ಸಲಿಂಗಿಗಳನ್ನು ಕಾಣುತ್ತಿರುವುದಾಗಿರಬಹುದು.

ಈ ಎಲ್ಲಾ ಘಟನೆಗಳಿಂದ ಮೋಹನ ಸ್ವಾಮಿ ತನ್ನನ್ನು ತಾನು ಹತೋಟಿಗೆ ತಂದುಕೊಳ್ಳಲು ಪ್ರಯತ್ನಿಸುತ್ತಾನೆ. ಗಂಭೀರವಾಗಿ ಇರುವುದು, ಕಡಿಮೆ ಮಾತನಾಡುವುದು ರೂಡಿಸಿಕೊಳ್ಳುತ್ತಾನೆ, ತನ್ನ ವರ್ತನೆಯಲ್ಲಿ ಬದಲಾವಣೆ ತಂದುಕೊಳ್ಳುತ್ತಾನೆ. ಶಿಸ್ತಿನಿಂದ ಓದಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡು ಉತ್ತೀರ್ಣನಾಗುತ್ತಾನೆ. ಪಿಯುಸಿ ಓದಲು ಸಮುದ್ರದಂಡೆಯಲ್ಲಿರುವ ಕಾಲೇಜಿನಲ್ಲಿ ಸೀಟ್ ಪಡೆದುಕೊಂಡಿದ್ದ. ಅಲ್ಲಿ ಪರಿಚಯವಾದ ಹುಡುಗ ಸುಮಿತ್ ಗೋಯಲ್. ಇಬ್ಬರೂ ಒಂದೇ ಬ್ರಾಂಚಿನವರಾಗಿದ್ದರಿಂದ ಗೆಳೆಯರಾಗುತ್ತಾರೆ. ಸಂಜೆಯಾದ ತಕ್ಷಣ ಸಮುದ್ರದ ಕಿನಾರೆಯಲ್ಲಿ ಓಡಾಡುತ್ತಿದ್ದರು. ಅಲ್ಲಿ ಒಬ್ಬ 'ಗೇ' ಹುಡುಗನ ಕುರಿತು ಸುಮಿತ್ ಮಾತನಾಡಿದ "ಅವರು ಗಂಡಸರ ಜೊತೆ ಸೆಕ್ಸ್ ಮಾಡುತ್ತಾರೆ" ಎಂದು. ಮೋಹನ್‌ಸ್ವಾಮಿಯಲ್ಲಿದ್ದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾನೆ. ಅವರು ಹಾಗೆ ವರ್ತಿಸುವುದೇಕೆ ಎಂದಾಗ, "ಅವರು ಮಹಾ ಕಾಮುಕರು ಹೆಣ್ಣಿನ ಜೊತೆ ಅವರಿಗೆ ಸೆಕ್ಸ್ ಸಾಕಾಗಲ್ಲ. ಅದಕ್ಕೆ ಗಂಡಸರನ್ನು ಬಳಸಿಕೊಳ್ಳುತ್ತಾರೆ ಎಂದ. 'ಅವರು ಯಾಕೆ ಹಾಗೆ ಹುಟ್ಟಾರೆ?'

ಎಂಬುದು ಮೋಹನ ಸ್ವಾಮಿಯ ಮತ್ತೊಂದು ಪ್ರಶ್ನೆ. ಸಮಾಗಮದಲ್ಲಿಯೇ ರಹಸ್ಯವಿದೆ ಎಂದು ತಿಳಿಸಿ ಅದಕ್ಕಾಗಿ ನಾನು ಯಾವತ್ತೂ ಹುಡುಗಿಯರನ್ನು ಮೇಲತ್ತಲು ಬಿಡೋಲ್ಲ ಎಂದು ಹೇಳಿದ. ತನ್ನ ತಾಯಿ ಯಾಕೆ ಇಂತ ತಪ್ಪು ಮಾಡಿದಳು ಎಂದುಕೊಂಡ ಮೋಹನ್ ಸ್ವಾಮಿ.

ಹೆಣ್ಣು– ಗಂಡು ಮತ್ತು ಹೆಣ್ಣು ಹಾಗೂ ಗಂಡು– ಹೆಣ್ಣು ಮತ್ತು ಗಂಡಿನ ನಡುವೆ ಲೈಂಗಿಕತೆ (bisexual) ನಡೆಯುತ್ತಿರುವುದನ್ನು ಆಧುನಿಕ ಸಮಾಜದಲ್ಲಿ ಕಾಣಬಹುದಾಗಿದೆ. ಭೂಮಿಯಲ್ಲಿನ ಬಹುಪಾಲು ಜೀವ ರಾಶಿಯಲ್ಲೂ ಲೈಂಗಿಕತೆ ಎನ್ನುವುದು ಸಂತಾನಾಭಿವೃದ್ಧಿಗಾಗಿ ನಡೆಯುತ್ತದೆ. ಅದರಲ್ಲೂ ಪ್ರಾಣಿಗಳಲ್ಲಿ ಪ್ರಾಕೃತಿಕವಾಗಿ ಸಂತಾನಕ್ಕೆ ಹದಗೊಂಡ ಕಾಲದಲ್ಲಿ ಮಾತ್ರ ಲೈಂಗಿಕತೆ ನಡೆಯುತ್ತದೆ. ಅಂದರೆ ವರ್ಷಪೂರ್ತಿ ಲೈಂಗಿಕ ಕ್ರಿಯೆ ನಡೆಯುವುದಿಲ್ಲ. ಆದರೆ ಮಾನವರಲ್ಲಿ ಇದು ವಿರುದ್ಧವಾದದ್ದು. ಮನುಷ್ಯರು ವರ್ಷಪೂರ್ತಿ ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತಾರೆ. ಮಾನವರು ಹೆಣ್ಣು ಗಂಡಿನ ನಡುವೆ ಲೈಂಗಿಕತೆ ನಡೆಸುವುದಲ್ಲದೆ ಪ್ರಾಣಿಗಳೊಂದಿಗೂ ನಡೆಸುತ್ತಾರೆಂಬುದು ಕೆಲವು ಅಧ್ಯಯನಗಳಲ್ಲಿ ದಾಖಲಿಸಲಾಗಿದೆ. ಮೋಹನಸ್ವಾಮಿ ಸುಮಿತ್ ಗೋಯಲ್‌ನೊಂದಿಗೆ ಹೆಚ್ಚಿನ ಆಪ್ತತೆಯನ್ನು ಹೊಂದುತ್ತಾನೆ. ಆತನ ದೇಹದ ಆಕರ್ಷಣೆ ಮೋಹನ ಸ್ವಾಮಿಯಲ್ಲಿ ಉದ್ರೇಕವನ್ನು ಉದ್ದೇಪಿಸುತ್ತಿತ್ತು. ಆ ಸಂದರ್ಭದಲ್ಲಿ ಗ್ರಂಥಾಲಯಗಳಲ್ಲಿ ಇಂಜಿನಿಯರಿಂಗ್ ಸಂಬಂಧಿಸಿದ ಪುಸ್ತಕಗಳು ಹೊರತುಪಡಿಸಿದರೆ ಮತ್ತೊಂದು ಸಿಗುತ್ತಿರಲಿಲ್ಲ. ಗಂಡು ಹೆಣ್ಣಿನ ಸಮಾಗಮದ ಬಗ್ಗೆ ಪತ್ತೆದಾರಿ ಪುಸ್ತಕಗಳೋ, ಕೀಳು ದರ್ಜೆಯ ನಿಯತಕಾಲಿಕಗಳಲ್ಲಿ ಹೆಣ್ಣಿನ ನಗ್ನ ಚಿತ್ರಗಳನ್ನು ಹಾಸ್ಟೆಲಿನ ಹುಡುಗರು ಸಂಪಾದಿಸುತ್ತಿದ್ದರು. ಮೋಹನ ಸ್ವಾಮಿ ತನ್ನ ದೈಹಿಕ ಬಯಕೆಗಳನ್ನು ನೀಗಿಸುವ ಸಂಗತಿಗಳಿವೆಯಾ ಎಂದು ಇನ್ನಿಲ್ಲದಂತೆ ಹುಡುಕುತ್ತಿದ್ದ. ಎಲ್ಲಿಯೂ ಮಾಹಿತಿ ಸಿಕ್ಕುತ್ತಿರಲಿಲ್ಲ. ಒಮ್ಮೆ ಯಾರೋ ಓದುಗರಬ್ಬರು ತಮಗೆ ಗಂಡಿನ ಮೇಲೆ ಆಸಕ್ತಿ ಮೂಡುತ್ತಿದೆಯೆಂದೂ, ಆದರೇನು ಮಾಡಬೇಕೆಂದು ತಿಳಿಸಲು ಬೇಡಿಕೊಂಡು ಪತ್ರಿಕೆಯೊಂದಕ್ಕೆ ಪತ್ರ ಬರೆದಿದ್ದರು. ಅದಕ್ಕೆ ತಜ್ಞರು ಸಾಮಾನ್ಯವಾಗಿ ಇಂತಹ ಬಯಕೆ ನಾಗದೋಷದಿಂದ ಗಂಡಿಸಿನಲ್ಲಿ ಮೂಡುತ್ತದೆ. ಪ್ರತಿನಿತ್ಯ ನಾಗಪೂಜೆ ಮಾಡುವುದರಿಂದ ವಿಮುಕ್ತಿ ಹೊಂದಬಹುದೆಂದು ತಿಳಿಸಿದರು. ವಿವರಣೆಯ ನಂಬಿದ ಮೋಹನ ಸ್ವಾಮಿ ನಿತ್ಯವೂ ಗುಡಿಗೆ ಹೋಗಿ ಕೈ ಮುಗಿದು ಬೇಡಿಕೊಂಡು ಬರುತ್ತಿದ್ದ. "ಹಿರಿಯರು ಮಾಡಿದ ತಪ್ಪಿಗೆ ನನಗೇಕೆ ಶಿಕ್ಷೆ ಮಾಡುತ್ತಿರುವೆ" ಎಂದು. ಆದರೆ ಆತನ ಬಯಕೆಗಳಲ್ಲಿ ಯಾವುದೇ ಬದಲಾವಣೆ ಕಾಣಿಸಲಿಲ್ಲ. ಉತ್ತಮ ಮೈಕಟ್ಟಿನ ಹುಡುಗರನ್ನು ನೋಡಿದ ಕ್ಷಣ ಉದ್ರೇಕಗೊಳ್ಳುತ್ತಿದ್ದು ಎಲ್ಲಿಯಾದರೂ ಸ್ನೇಹಿತರೊಂದಿಗೆ ಮಾತನಾಡುವಾಗ ನಾನೊಬ್ಬ 'ಗೇ' ಎಂದು ಅನುಮಾನ ಬರುತ್ತದೆಯೇನೋ ಎಂದು ಭಯಪಡುತ್ತಿದ್ದ.ದೈಹಿಕವಾದ ವ್ಯತ್ಯಾಸಗಳಿಗೂ ದೈವ ಕಾರಣವೆಂದು ನಂಬಿಕೆ ಭಾರತೀಯ ಚಿಂತನಾಕ್ರಮದಲ್ಲಿದೆ. ಮೋಹನನಂತಹ ಅನೇಕರು ಇಂತಹ ವೈರುಧ್ಯ ಭಾವನೆಗಳನ್ನು ಅನುಭವಿಸುತ್ತಾ ಪರಿಹಾರ ಮಾರ್ಗೋಪಯಗಳಿಲ್ಲದೆ ತೊಳಲಾಡುತ್ತಿರಬಹುದು. ನಮ್ಮ ಸಮಾಜ ಇಂತಹವರ ಮನೋಧರ್ಮವನ್ನು ಅರಿತು ಅವರಿಗೂ ಜೀವನತೃಪ್ತಿಯನ್ನು ಕಂಡುಕೊಳ್ಳಲು ಸಹಕರಿಸಬೇಕಾಗಿದೆ ಎಂಬ ಆಶಯವಿದೆ.

ವಿಜ್ಞಾನದ ಬೆಳವಣಿಗೆ ಮನುಷ್ಯನ ಹುಟ್ಟಿಗೆ ಅದೇ ಮನುಷ್ಯರ ದೇಹದಲ್ಲಿ ನಡೆಯುವ ಸೂಕ್ಷ್ಮ ಕ್ರಿಯೆಗಳನ್ನು ಕಂಡುಹಿಡಿಯಲಾಗಿದೆ. ಸಲಿಂಗಿಗಳ ಹುಟ್ಟಿಗೆ ವಂಶವಾಹಿಗಳ ಪ್ರಭಾವವೂ ಇರುತ್ತದೆ ಎಂಬುದನ್ನು ಹಲವು ಸಂಶೋಧನೆಗಳ ಮೂಲಕ ಕಂಡುಕೊಳ್ಳಲಾಗಿದೆ. ಸಲಿಂಗಿಗಳ ಹುಟ್ಟಿಗೆ ಮೆದುಳಿನ ಕಾರ್ಯವೂ ಮುಖ್ಯವಾದುದು. ಅದರ ಕಾರ್ಯವನ್ನು ಮಾಲಿನಿ ಎಸ್ ಸುತ್ತೂರು ಅವರ ಸಂವಾದದ ಮಾತುಗಳಲ್ಲಿ ಈ ಅಂಶಗಳು ಕಂಡುಬರುತ್ತವೆ. ಮೆದುಳಿನ ಜಾಲಬಂಧ (Brain networking) – ಹೈಪೋ ತಲಾಮಸ್ ಪಿಟ್ಯುಟರಿ ಆಕ್ಸಿಸ್ (genetic Hypothalamus pituitary axis) ಹೈಪೋ ತಲಾಮಸ್ ಜಾಗದಲ್ಲಿ ಖಓಂಖಿ3ಎಂಬ ಒಂದು ಜಾಗವಿರುತ್ತದೆ. ಇದುಸೆಕ್ಸ್ ಓರಿಯೆಂಟೇಶನ್ ಮಾಡುವ ವಂಶವಾಹಿಯಾಗಿದೆ. ಇದು ಬಿಡುಗಡೆ ಮಾಡುವ ಪ್ರೋಟೀನ್ (protein) ಹೆಣ್ಣಿನ ಮನಸ್ಸಿನಲ್ಲಿ ಆಕರ್ಷಣೆ ಉಂಟುಮಾಡುತ್ತದೆ. ಭಿನ್ನಲಿಂಗೀಯ (ಹೆಟಿರೊಸೆಕ್ಸ್ Hetirosex) ಜೀನ್ ಸರಿಯಾಗಿ ಆಕ್ಟಿವ್ ಆಗಿರುತ್ತದೆ.ಹೆಟಿರೋ ಸೆಕ್ಸ್‌ಲ್ಲಿ ಈ ವಂಶವಾಹಿನಿಯ ಎಕ್ಸ್‌ಪ್ರೆಷನ್ ಅಂಶ ಕಡಿಮೆ ಇದ್ದು, ಸಲಿಂಗಿಗಳಲ್ಲಿ

(Homosexual) ಈ ವಂಶವಾಹಿನಿಯ ಎಕ್ಸ್‌ಪ್ರೆಷನ್ ಅಂಶಹೆಚ್ಚಾಗಿರುವುದನ್ನು ಗುರುತಿಸಲಾಗಿದೆ. ಇಂತಹ ಕಾರಣಗಳಿಂದಲೂ ಸಲಿಂಗಿ ಹೀಗಿರುವಾಗ ಮೋಹನ ಸ್ವಾಮಿಗೆ ಸ್ನೇಹಿತ ಒಂದು ವಿಚಿತ್ರ ವಿವರಣೆ ಕೊಟ್ಟಿದ್ದ "ನಮ್ಮ ದೇಹವನ್ನು ನಿಯಂತ್ರಿಸುವುದು ವಂಶವಾಹಿನಿಗಳು. ಅವುಗಳಿಗೆ ವಿಪರೀತ ಜಾಣತನವಿರುತ್ತದೆ. ಕೆಲವೊಂದು ಜೀವಿಗಳು ಈ ಭೂಮಿಗೆ ಅವಶ್ಯಕತೆ ಇಲ್ಲ ಎಂದು ಅವುಗಳು ಅರ್ಥ ಮಾಡಿಕೊಳ್ಳುತ್ತೇವೆ. ಅಂಥವರ ಸಂತತಿ ಮುಂದುವರೆಯಬಾರದು ಎಂದು ಅವುಗಳು ನಿರ್ಧರಿಸುತ್ತವೆ. ಸಂತತಿ ಮುಂದುವರೆದಂತೆ ಮಾಡುವುದಕ್ಕಾಗಿ ಅಂತಹವರನ್ನು 'ಗೇ' ಗಳಾಗಿ ಮಾಡಿಬಿಡುತ್ತವೆ. ಅವರಿಗೆ ಕೇವಲ ಗಂಡಿನ ಮೇಲೆ ಆಸೆ ಮೂಡುವಂತೆ ಮಾಡುಬಿಡುತ್ತವೆ ಹಾಗೂ ಹೇಗೂ ಅವರಿಗೆ ಮಕ್ಕಳಾಗುವುದಿಲ್ಲ. ಆದ್ದರಿಂದ ಅಂತಹ ಕೆಲಸಕ್ಕೆ ಬಾರದ ಜೀವಿಯ ಸಂತತಿ ಅವನಿಂದಲೇ ಕೊನೆಗಾಣುತ್ತದೆ. ನಮಗೆ ಮಕ್ಕಳು ಹುಟ್ಟಿಸಲು ಸಾಧ್ಯ ಅಂದರೆ ನಮ್ಮ ಸಂತತಿ ಬಹುಮುಖ್ಯ ಎಂದು ವಂಶವಾಹಿನಿಗಳು ನಿರ್ಧರಿಸಿವೆ ಎಂದರ್ಥ" ಎಂದು ಅತ್ಯಂತ ಖಚಿತವಾಗಿ ಹೇಳಿದ್ದ. ನನ್ನಂತಹ ಸಭ್ಯ ವ್ಯಕ್ತಿಯ ವಂಶವನ್ನು ನಿರ್ನಾಮ ಮಾಡಲು ವಂಶವಾಹಿನಿಗಳು ಯಾಕೆ ಸಂಚು ಹೂಡಿವೆ. ಮೋಸಗಾರ ಜನರಿಗೂ ಮಕ್ಕಳು ಹುಟ್ಟುತ್ತವೆ. ಅವರಿಗಿಂತಲೂ ನಾನು ಕೀಳೆ? ಎಂದು ಮೋಹನ ಸ್ವಾಮಿ ಯೋಚಿಸಿದ ಉತ್ತರ ಕಂಡುಕೊಳ್ಳುವುದು ಅಸಾಧ್ಯವಾಯಿತು. ಸಲಿಂಗಿಗಳಾಗಿ ಹುಟ್ಟುವುದು ಮತ್ತು ವರ್ತಿಸುವುದು ಪ್ರಕೃತಿದತ್ತವಾದದ್ದು. ಯಾವ ಹೆಣ್ಣಿಗೂ ಅಥವಾ ಗಂಡಿಗೂ ಅಸಹಜವಾಗಿ ವರ್ತಿಸಬೇಕೆಂಬ ಭಾವನೆಗಳಿರುವುದಿಲ್ಲ. ಈ ರೀತಿ ವರ್ತಿಸುವುದು ಇಷ್ಟವೂ ಆಗಿರುವುದಿಲ್ಲ. ಈ ಸಹಜವಲ್ಲದ ಇವರನ್ನು ಕೂಡ ಸಾಮಾಜಿಕವಾಗಿ ಒಪ್ಪಿಕೊಂಡು ಜೀವಿಸಲು ಅನುವುಮಾಡಿಕೊಡಬೇಕಾಗಿದೆ.

ಇಂದಿನ ಮಾನವರ ಬದುಕನ್ನು ಭಾವನೆಗಳು ಆವರಿಸಿವೆ. ಒಂದು ಹೆಣ್ಣು ಅಥವಾ ಗಂಡು ಹುಟ್ಟಿದಾಗಿನಿಂದ ಎಲ್ಲಾ ಸಂಬಂಧಗಳೊಂದಿಗೆ ಭಾವನಾತ್ಮಕ ನಂಟನ್ನು ಹೊಂದಿರುವುದು ಕಾಣಬಹುದು. ಒಂದು ಕುಟುಂಬವೆಂದರೆ ತಂದೆ–ತಾಯಿ, ಮಕ್ಕಳು, ಅಕ್ಕ–ತಂಗಿ, ಅಣ್ಣ–ತಮ್ಮ, ಗಂಡ–ಹೆಂಡತಿ ಹೀಗೆ ಹಲವು ಸಂಬಂಧಗಳ ಒಡನಾಟ ಬೆಳೆಯುತ್ತದೆ. ಕುಟುಂಬದಾಚೆ ಗುರುಗಳು, ಸ್ನೇಹಿತರು, ಪ್ರೇಮಿಗಳು ಹೀಗೆ ಎಲ್ಲರೊಂದಿಗೆ ಭಾವನೆಗಳನ್ನು ಹೊಂದಿರುತ್ತೇವೆ. ಮತ್ತು ಅವರೊಂದಿಗೆ ನಮ್ಮ ಮನಸ್ಸಿನ ಭಾವನೆಗಳನ್ನು ಹಂಚಿಕೊಳ್ಳುತ್ತೇವೆ. ಈ ಭಾವನೆಗಳು ಹುಟ್ಟುವುದು ಕೂಡ ಪ್ರೀತಿಯಿಂದ ಮಾತ್ರವಾಗಿದೆ. ಪ್ರೀತಿ ಎಂಬುದು ಯಾರೊಂದಿಗೆ ಇರುತ್ತದೋ ಅವರನ್ನು ಹೆಚ್ಚು ಆಪ್ತತೆಯಿಂದ ಕಾಣುತ್ತೇವೆ. ಹೀಗೆ ಮಾನವರು ತಮ್ಮ ಸಂಬಂಧಗಳಲ್ಲಿ ಭಾವನಾತ್ಮಕತೆಯನ್ನು ಒಂದೇ ರೀತಿಯಲ್ಲಿ ಕಾಯ್ದಿಟ್ಟುಕೊಳ್ಳುವುದೂ ಕೂಡ ಭಿನ್ನವಾಗಿದೆ. ಮಗು ಬೆಳೆಯುತ್ತಾ ತಂದೆ ತಾಯಿಯರೊಂದಿಗೆ ಭಾವನಾತ್ಮಕವಾಗಿರುತ್ತದೆ. ಬೆಳೆಯುತ್ತಾ ತಮ್ಮ ಸಂಗಾತಿಗಳು ಹತ್ತಿರವಾದಾಗ ತಂದೆ ತಾಯಿಯ ನಡುವಿನ ಪ್ರೀತಿಯ ಭಾವನೆಗಳು, ಒಡನಾಟ ಕಡಿಮೆ ಆಗುತ್ತದೆ. ಮನುಷ್ಯರು ಒಂದೇ ತರಹ ವರ್ತಿಸುತ್ತಾ ಜೀವಿಸಲಾರರು ಮೊದಲ ಪ್ರೀತಿಭಾವನೆಗಳು ಕಡಿಮೆಯಾಗುತ್ತಾ ಹೋಗುತ್ತವೆ. ಇಂತಹ ವರ್ತನೆಗಳನ್ನು ಕೆಲವು ಕಥೆಗಳಲ್ಲಿ ಕಥೆಗಾರರು ವ್ಯಕ್ತಪಡಿಸಿದ್ದಾರೆ.

ಪರಾಮರ್ಶನ ಕೃತಿಗಳು

1. ಕನ್ನಡ ಸಾಹಿತ್ಯ ಮತ್ತು ವಿಜ್ಞಾನ, 2025, (ಸಂ) ಡಾ.ರವೀಶ ಹೆ.ವಿ., ಡಾ. ಚೇತನಾ ಹೆಗಡೆ, ಅನಿತ ಕೆ.ವಿ., ಅರುಣ.ಎಸ್. ಅವ್ಯಕ್ತ ಪ್ರಕಾಶನ, ಬೆಂಗಳೂರು.
2. ವಿಮರ್ಶೆಯ ಪರಿಭಾಷೆ, 2014, ಓ.ಎಲ್. ನಾಗಭೂಷಣಸ್ವಾಮಿ, ಅಭಿನವ ಪ್ರಕಾಶನ, ಬೆಂಗಳೂರು.
3. ವಿಷಮ ಭಿನ್ನರಾಶಿ, 2020, ವಸುಧೇಂದ್ರ, ಛಂದ ಪುಸ್ತಕ, ಬೆಂಗಳೂರು.
4. ವಿವಾಹ ಅದರ ಹುಟ್ಟು ಮತ್ತು ಪೂರ್ವೋತ್ತರ, 2024, ರವಿಬೆಳಗೆರೆ (ತೆಲುಗು–ತಾಪಿಧರ್ಮರಾವ್), ನವಕರ್ನಾಟಕ, ಬೆಂಗಳೂರು.

ಮನೋವಿಜ್ಞಾನ ಮತ್ತು ಕಲೆ ಸಾಹಿತ್ಯದ ಸಂಬಂಧ

ರಾಜೇಶ್ವರಿ ವೈ. ಎಂ.
ಸಂಯೋಜಕರು ಮತ್ತು ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ, ಜೈನ್ ಡೀಮ್ಡ್ ಟು–ಬಿವಿಶ್ವವಿದ್ಯಾಲಯ

ಮಾನವನ ಜೀವನದ ಸಮಗ್ರ ಅನುಭವಗಳನ್ನು ತಿಳಿಯುವ, ತಿಳಿದಿರುವುದನ್ನು ಪ್ರಕಟಿಸುವ ಪ್ರಮುಖ ಅವಕಾಶಗಳಲ್ಲಿ ಮನೋವಿಜ್ಞಾನ ಮುಖ್ಯ ಪಾತ್ರ ವಹಿಸಿದರೆ ಮನಸ್ಸಿನ ಅಭಿವ್ಯಕ್ತಿಗಳಾದ ಕಲೆ ಮತ್ತು ಸಾಹಿತ್ಯ ಅದನ್ನು ಸುಂದರವಾಗಿ ಭಿನ್ನ ಭಿನ್ನ ಸ್ವರೂಪಗಳಲ್ಲಿ ಪ್ರದರ್ಶಿಸುವ ಅಭಿವ್ಯಕ್ತಿಸುವ ಮಾಧ್ಯಮವಾಗಿದೆ. ಮನೋವಿಜ್ಞಾನ ಮತ್ತು ಸೃಜನಶೀಲ ಗುಣವಾದ ಕಲೆ ಮತ್ತು ಸಾಹಿತ್ಯ ಇವೆರಡೂ ಮಾನವನ ಅಂತರಂಗದ ಜಗತ್ತನ್ನು ಅನಾವರಣಗೊಳಿಸುವ ಬೇರೆ ಬೇರೆ ದಾರಿಗಳಾಗಿ ಹೊರ ನೋಟಕ್ಕೆ ಕಂಡರೂ ಅವುಗಳ ಅಂತಿಮ ಗುರಿಯು ಒಂದೇ, ಮನಸ್ಸಿನ ಆಳವನ್ನು ಅದರೊಳಗಿರುವ ರಹಸ್ಯಗಳನ್ನೂ ತೆರೆಯುತ್ತಾ ಹೋಗುವುದು. ಮನೋವಿಜ್ಞಾನ ಒಂದು ಸ್ತರದಲ್ಲಿ ಕೆಲಸ ಮಾಡಿದರೆ, ಕಲೆ ಸಾಹಿತ್ಯ ಬೇರೆಯೇ ಆದ ಆಯಾಮವನ್ನು ಪ್ರಕಟಿಸುತ್ತಾ ಹೋಗುತ್ತದೆ.

ಮನೋವಿಜ್ಞಾನವು ವಿಜ್ಞಾನದ ತತ್ತ್ವಗಳನ್ನು ಅವಲಂಬಿಸಿ ಮನುಷ್ಯನ ಮಾತು, ವರ್ತನೆ, ಪ್ರತಿಕ್ರಿಯೆಗಳನ್ನು ಗಮನಿಸುವ ಒಟ್ಟಾರೆಯಾಗಿ ಸಮಗ್ರ ವ್ಯಕ್ತಿತ್ವವನ್ನು ಅಧ್ಯಯನಕ್ಕೆ ಒಳಪಡಿಸುವ ವೈಜ್ಞಾನಿಕ ಶಾಖೆಯಾದರೆ ಕಲೆ ಮತ್ತು ಅದರ ಪ್ರಮುಖ ಅಭಿವ್ಯಕ್ತಿಯಾದ ಸಾಹಿತ್ಯ ಮನುಷ್ಯನ ಅದೇ ಭಾವನೆ, ವರ್ತನೆ ಮತ್ತು ಅನುಭವ ಹಾಗೂ ಅದರಿಂದ ಉಂಟಾದ ಕಲ್ಪನೆಯಿಂದ ಅಂತರಂಗದ ವಿವಿಧ ಮಜಲುಗಳನ್ನು ಕಲಾತ್ಮಕವಾಗಿ ಪ್ರತಿಬಿಂಬಿಸುವ ಕ್ಷೇತ್ರವಾಗಿದೆ. ಮನಸ್ಸು, ಇವೆಲ್ಲದರ ಮೂಲ ಭೂಮಿಕೆ. ಹೀಗಾಗಿ ಈ ಎರಡನ್ನೂ ಭಿನ್ನ ಕೋನಗಳಿಂದ ನೋಡಲೂ ಆಗದೇ ಇವೆರಡನ್ನೂ ಪೂರಕ ದಾರಿಗಳು ಎಂದೇ ಪರಿಗಣಿಸಿ ಅವುಗಳ ಒಳ ಸಂಬಂಧಗಳನ್ನು ಚರ್ಚೆ ಮಾಡಬಹುದಾಗಿದೆ.

ಮನೋವಿಜ್ಞಾನ, ಮಾನವನ ವರ್ತನೆಯನ್ನು ಸಂವೇದನೆ, ಚೇತನ, ಅಚೇತನ, ಸ್ಮೃತಿ, ಕಲಿಕೆ, ಭಾವ ಹೀಗೆ ಅನೇಕ ಅಂಶಗಳನ್ನು ಪರಿಶೀಲಿಸುತ್ತಾ ಸಾಗುತ್ತದೆ. ಕಲೆ ಅದನ್ನು ಭಿನ್ನ ಸ್ವರೂಪಗಳಲ್ಲಿ ಪ್ರತಿಫಲಿಸುತ್ತದೆ ಎನ್ನುವುದನ್ನು ಮನೋವಿಜ್ಞಾನಿಗಳಾದ ಫ್ರಾಯ್ಡ್ ಮೊದಲಾದವರು ಅರಿತಿದ್ದರೂ ಕಲೆಯೆನ್ನುವುದು ಕೇವಲ ಹೊರಗಿನ ಅಭಿವ್ಯಕ್ತಿಯಷ್ಟೇ ಅಲ್ಲ, ಅದು ಅಂತರಂಗದ ಭಾವದೀಪ್ತಿಯನ್ನು ಹೊರಗೆ ಪ್ರತಿಫಲಿಸುವ ಮಾಧ್ಯಮ. ಹಿರಿಯ ವಿದ್ವಾಂಸ ದಿ. ಶ್ರೀಕಂಠಶಾಸ್ತ್ರಿಯವರ ಮಾತೊಂದು ಸ್ಮರಣೆಗೆ ತರುತ್ತಾ "ಕಲೆಯು ಕೇವಲ ಭೌತಿಕ ಜೀವನವಲ್ಲ. ಪ್ರತಿಭಾ ಪ್ರಚೋದಿತವಾದ ಜೀವನದ ಪ್ರತೀಕ. ಕಲೆಯ ಚರಿತ್ರೆಯೆಂದರೆ ಸ್ವಾನುಭವಕ್ಕೆ ಬಂದ ಕಲಾಚರಿತ್ರೆಯೇ ವಿನಾ ಸೌಂದರ್ಯ ವಿಷಯಕವಾದ ಪ್ರಶ್ನೆಗಳಿಗೆ ಸಂಬಂಧಪಟ್ಟಿಲ್ಲವೆಂದು ಪ್ರಕೃತಿಯಲ್ಲಿ ಉಂಟಾಗುವ ಪ್ರತಿಯೊಂದೂ ಪರಿಣಾಮವನ್ನೂ ಇಂದ್ರೀಯ ಸನ್ನಿಕರ್ಷಣದಿಂದ ಗೋಚರವಾಗುವ ಬೆಲೆಯಿಂದಲೇ ನಿರ್ಧರಿಸಬೇಕೆಂದು ಆದುದರಿಂದ ಕಲೆ, ಜೀವನ ಮತ್ತು ಚರಿತ್ರೆಗಳಲ್ಲಿ ಯಾವ ಪುರುಷಾರ್ಥಗಳನ್ನೂ ಅನ್ವೇಷಿಸಕೂಡದೆಂದು ಕೆಲವರು ಅಭಿಪ್ರಾಯ ಪಟ್ಟಿರುವರು"[1] ಎಂದಿರುವುದನ್ನು ಗಮನಿಸಬಹುದು.

ಕಲೆ ಎಂದರೆ ಕಣ್ಣಿಗೆ ಕಾಣುವ ರೂಪವಷ್ಟೇ ಅಲ್ಲದೇ, ಅದು ಮನಸ್ಸಿನ ಆಂತರ್ಯವನ್ನು ತೋರಿಸುವ ಬಾಹ್ಯರೂಪವಾಗಿದೆ. ಸಂಗೀತ, ನೃತ್ಯ, ಚಿತ್ರಕಲೆ, ಕವಿತೆ, ಕಾದಂಬರಿ, ನಾಟಕ ಶಿಲ್ಪಕಲೆ ಹೀಗೆ ಭಿನ್ನ ರೂಪದಲ್ಲಿ ಪ್ರಕಟವಾಗುವ ಅಂತರಂಗದ ಭಾವಗಳನ್ನು ಸಮಗ್ರವಾಗಿ ಕಲೆ ಎನ್ನುವ ಪ್ರಕಾರದಡಿಯಲ್ಲಿ ಗಮನಿಸುವಾಗ ಅಲ್ಲಿ ಮಹತ್ವದ ಅಂಶವೇ ಮಾನವನ ಮನಸ್ಸು ಮತ್ತು ಅದರ ಸ್ವಭಾವಗಳು. ಈ ವಿಷಯದ ಮೇಲೆ ಬೆಳಕು ಚೆಲ್ಲುವ ಉದ್ದೇಶದಿಂದ ಈ ಕೆಳಗಿನ ಅಧ್ಯಾಯಗಳಲ್ಲಿ ಪ್ರಬಂಧವನ್ನು ನಿರೂಪಿಸಲಾಗುವುದು.

1. ಮಾನವ ಮನಸ್ಸಿನ ಸ್ವಭಾವ ಮತ್ತು ಮನೋವಿಜ್ಞಾನದ ಪರಿಚಯ

2. ಕಲೆ ಮತ್ತು ಸಾಹಿತ್ಯ–ಭಾವನೆಗಳ ಅಭಿವ್ಯಕ್ತಿಯ ಮನೋವೈಜ್ಞಾನಿಕ ಮಾರ್ಗ

3. ಕಲೆ ಮತ್ತು ಸಾಹಿತ್ಯದ ಸೃಜನಶೀಲತೆ

4. ಕಲೆ, ಸಾಹಿತ್ಯ ಮತ್ತು ಮನೋವಿಜ್ಞಾನದ ಸಾಮಾಜಿಕ ಪರಿಣಾಮ

1. ಮಾನವ ಮನಸ್ಸಿನ ಸ್ವಭಾವ ಮತ್ತು ಮನೋವಿಜ್ಞಾನದ ಪರಿಚಯ:

ಮಾನವನ ಮನಸ್ಸು ನೂರಾರು ಸಾವಿರಾರು ಅನುಭವಗಳು, ಆಸಕ್ತಿಗಳು, ಕುತೂಹಲಗಳು, ನೋವು ನಲಿವುಗಳು ಒಟ್ಟಾರೆಯಾಗಿ ಭಾವನೆಗಳ ಸಾಗರವಾಗಿದೆ. ಇದನ್ನು ಶೋಧಿಸಲು ಅಸಾಧ್ಯವೇನೊ ಎನ್ನುವಂತೇ ಅದು ಆಳವಾಗಿ ಬೇರೂರಿದೆ. ಪ್ರತಿಯೊಬ್ಬ ವ್ಯಕ್ತಿಯ ವರ್ತನೆ, ಭಾವನೆ, ಅವನು ತೆಗೆದುಕೊಳ್ಳುವ ನಿರ್ಧಾರಗಳು ಅವನು ಸಂಬಂಧಗಳನ್ನು ಕಾಯ್ದುಕೊಳ್ಳುವ ರೀತಿ ಇವುಗಳನ್ನೆಲ್ಲ ಅರ್ಥ ಮಾಡಿಕೊಳ್ಳುವುದು ಅತೀ ದೊಡ್ಡ ಸವಾಲಾಗಿ ಕಾಣುತ್ತದೆ. ಏಕೆಂದರೆ ವ್ಯಕ್ತಿಯಿಂದ ವ್ಯಕ್ತಿಗಿರುವ ಭಿನ್ನತೆಗಳು. ಇದನ್ನು ಕೊಂಚಮಟ್ಟಿಗೆ ಅರ್ಥ ಮಾಡಿಕೊಳ್ಳಲು ಸಹಾಯಕವಾಗಿ ಒದಗಿ ಬರುವುದು ಮನೋವಿಜ್ಞಾನ.

ಈ ಮನೋವಿಜ್ಞಾನ ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದುಕೊಳ್ಳಲು ಜಗತ್ತು ಆಧುನಿಕತೆಗೆ ತೆರೆದುಕೊಂಡಿರುವುದೂ ಕಾರಣವಾಗಿದೆ. ಯುಗಯುಗಗಳಿಂದಲೂ ಮಾನವ ತನ್ನ ಜೊತೆಗೇ ಬದುಕು ಮನುಷ್ಯನ ಅಂತರಾಳದ ಅಧ್ಯಯನವನ್ನು ಮಾಡುವಂತೇ ಧ್ಯಾನ, ತಪಗಳಿಂದ ತನ್ನ ವೈಯಕ್ತಿಕ ಮನಸ್ಸನ್ನೂ ಅರಿಯುವ ಪ್ರಯತ್ನ ಮಾಡಿಕೊಂಡೇ ಬಂದಿದ್ದಾನೆ. ಅಷ್ಟು ವಿಶಾಲವಾದ ಜಗತ್ತು ಈ ಮನಸ್ಸು. ಪ್ರಾಯಶಃ ಇದೇ ಕಾರಣಕ್ಕಾಗಿ ತತ್ವಶಾಸ್ತ್ರಜ್ಞ, ಮನಶಾಸ್ತ್ರಜ್ಞ ಆಲ್ಡಸ್ ಹಕ್ಸ್ಲೀ, "ಮನಸ್ಸು ಎಷ್ಟೇ ಅನ್ವೇಷಿಸಿದರೂ ಮುಗಿಸಲಾಗದಂಥ ವಿಶಾಲ ಕ್ಷೇತ್ರ, ಮಾನವರೂಪಿ ಖಂಡ'[2] ಎಂದಿರುವುದು. ಇದರ ವಿಶಾಲತೆ ಎಷ್ಟೆಂದರೆ ಅದು ಸಾಮಾನ್ಯನಿಂದ ಮೇಧಾವಿಯವರೆಗೆ, ಕಳ್ಳನಿಂದ ಸಾಧುವಿನವರೆಗೆ, ಕ್ರೂರಿಯಿಂದ ಕರುಣಾಳುವರೆಗೆ ಅನಂತವಾದ ವೈವಿಧ್ಯತೆಯನ್ನು ತೋರಿಸುತ್ತದೆ. ಅಷ್ಟು ವಿಶಾಲವಾದ ಅನಂತವಾದ ಕ್ಷೇತ್ರವಿದು.

ಮೂಲತಃ ಮನಃಶಾಸ್ತ್ರವು ತನ್ನ ಅಧ್ಯಯನವನ್ನು ಮಾನವನ ಮಾನಸಿಕ ರಚನೆಯ ಅಧ್ಯಯನಕ್ಕೆ ಮಾತ್ರವೇ ಸೀಮಿತಗೊಳಿಸುತ್ತದೆ. ಅವನ ಪರಿಸರ, ಅವನ ನೈತಿಕ, ಧಾರ್ಮಿಕ ಮೊದಲಾದ ಆಯ್ಕೆಗಳನ್ನು ಅವನ ಸಂವೇದನೆ ಮತ್ತು ಬುದ್ಧಿಯ ಎರಡು ನೆಲೆಗಳಲ್ಲಿ ಭಿನ್ನ ಭಿನ್ನ ದೃಷ್ಟಿಕೋನಗಳಿಂದ ವಿವೇಚಿಸುತ್ತಾ ಹೋಗುತ್ತದೆ. ನಾವಿಲ್ಲಿ ಭಾರತೀಯ ದೃಷ್ಟಿಯಲ್ಲಿ ಮನಃಶಾಸ್ತ್ರದ ಬಗ್ಗೆ ಮಾತ್ರವೇ ವಿವೇಚಿಸುವ ಮಿತಿಯನ್ನು ಹಾಕಿಕೊಂಡು ಗಮನಿಸುವುದಾದರೆ ಭಾರತೀಯ ತತ್ತ್ವಶಾಸ್ತ್ರದ ಸಣ್ಣ ಪ್ರವೇಶವನ್ನೂ ಬಯಸುತ್ತದೆ ಎಂದೆನ್ನಬಹುದು.

ತತ್ತ್ವಶಾಸ್ತ್ರದ ಪ್ರಕಾರ ಮಾನಸಿಕ ಕ್ರಿಯೆಗಳೆಂದು ಯಾವುದನ್ನು ನಾವು ಪರಿಗಣಿಸುತ್ತೆವೆಯೋ ಅದನ್ನು ನಡೆಸುವುದು ಮನಸ್ಸು. ಹಾಗೂ ಸತ್ಯವೆಂದು ಹೇಳಲಾಗುವ ಎಲ್ಲಾ ಮಾನಸಿಕ ಕ್ರಿಯೆಗಳ ಅನುಭವದ ಮೊತ್ತ ಏನಿದೆ ಅದನ್ನು ಪಡೆಯುವುದು ಆತ್ಮ ಎಂದು ಭಾರತೀಯ ಸಿದ್ಧಾಂತಗಳು ಹೇಳಿಕೊಂಡು ಬಂದಿವೆ. ಇದನ್ನು ಇನ್ನೂ ಸರಳವಾಗಿ ಹೇಳುವುದಾದರೆ "ಮನೋಘಟನೆಯ

ಅಧ್ಯಯನಕ್ಕೆ ಉಪಯೋಗಿಸಿರುವ ವಿಧಾನ ಯಾವುದು? ಅದು ನಾವು ಅಂತರವಲೋಕನ ಎಂದು ಕರೆಯಬಹುದಾದ ನೇರ ಸಂಜ್ಞಾನ. ಅನುಭವದ ವಸ್ತುವು ತನ್ನ ಪೂರ್ಣ ಪ್ರಜ್ಞೆಯನ್ನು ಶೇಷರಹಿತವಾಗಿ ತಾನೇ ಪಡೆಯುವಂತೇ ಅಂತರವಲೋಕನ ವಿಧಾನವನ್ನು ಪರಿಪೂರ್ಣಗೊಳಿಸಲು ಸಾಧ್ಯ ಎಂದು ಭಾರತೀಯ ಮನಃಶಾಸ್ತ್ರವು ಸಾರುತ್ತದೆ ಎಂಬುದೇ ಅದರ ವಿಶಿಷ್ಟ ಲಕ್ಷಣ".3

ಮನೋವಿಜ್ಞಾನದ ಮೂಲತತ್ತ್ವಗಳಾದ ಗ್ರಹಿಕೆ, ಸ್ಮರಣೆ, ಭಾವನೆ ಮತ್ತು ಪ್ರೇರಣೆ ಹಾಗೂ ಒಟ್ಟು ವ್ಯಕ್ತಿತ್ವ ಇವು ಮನುಷ್ಯನ ಕಲಾತ್ಮಕ ಅಭಿವ್ಯಕ್ತಿಯಲ್ಲಿಯೂ ಸಮಾನವಾಗಿ ಪ್ರಮುಖ ಅಂಶಗಳಾಗಿ ಕಾಣುತ್ತವೆ. ಏಕೆಂದರೆ ಕಲೆಯೂ ಮನಸ್ಸಿನ ಅಭಿವ್ಯಕ್ತಿಯೇ ಅಲ್ಲವೇ. ಮನುಷ್ಯನ ಮನಸ್ಸಿನ ಒಳಲೋಕದಲ್ಲಿ ಓಡಾಡುವ ಅಮೂರ್ತ ಭಾವಗಳು ಅಕ್ಷರರೂಪದಲ್ಲಿ ಬಂದಾಗ ಸಾಹಿತ್ಯ ಸೃಷ್ಟಿಯಾದಂತೇ ಅಭಿನಯದಲ್ಲಿ ಮೂರ್ತಗೊಂಡಾಗ ನೃತ್ಯವಾಗುತ್ತದೆ. ಸ್ವರಗಳಲ್ಲಿ ಹಾಡಿದಾಗ ಸಂಗೀತವಾಗುತ್ತದೆ. ಹೀಗೆ ಭಿನ್ನ ಭಿನ್ನ ರೂಪಗಳನ್ನು ತಾಳುತ್ತಾ ಮನುಷ್ಯನ ಮನಸ್ಸಿನ ನೂರು ನೋಟಗಳನ್ನು ತೋರುತ್ತದೆ.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನೋಡುವುದಾದರೆ ಮನಸ್ಸಿನ ಆಂತರಿಕ ಏರುಪೇರುಗಳನ್ನು ಕೆಲವೊಮ್ಮೆ ಮಾತಿನಲ್ಲಿ ಹೇಳಲಾಗದ ಅನುಭವವಾಗಿ ಒಳಗೊಳಗೇ ಕೊರೆದು ಘಾಸಿ ಮಾಡುತ್ತಿದ್ದರೆ ಅಂತಹ ಹೊತ್ತಿನಲ್ಲಿ ಅದು ಸಾಹಿತ್ಯದ ರೂಪದಲ್ಲಿಯೋ ಕವನದ ರೂಪದಲ್ಲಿಯೋ ಪ್ರಕಟಗೊಂಡು ಅದಕ್ಕೊಂದು ಪರಿಹಾರ ಒದಗಿಸುತ್ತದೆ. ಪ್ರಾಯಶಃ ಇದಕ್ಕಾಗಿಯೇ ಸಾಹಿತ್ಯವನ್ನು ಅಂತರಂಗದ ದನಿಯಾಗಿ ಕಾಣುತ್ತೇವೆ. ಹೀಗೆ ಅಂತರಂಗದ ದನಿಯನ್ನು ವೈಜ್ಞಾನಿಕವಾಗಿ ಹಂತಹಂತಗಳಲ್ಲಿ ಕೆಲವು ಸಂಶೋಧನೆಗಳ ಮೂಲಕ ಅರಿಯುವ ಪ್ರಯತ್ನವೇ ಮನೋವಿಜ್ಞಾನವಾಗಿದೆ.

ಮನಸ್ಸಿನ ಒಂದು ಅಂಗವಾಗಿ ನಾವು ಪ್ರಜ್ಞೆಯನ್ನು ವಿವೇಕವನ್ನು ನೋಡುತ್ತೇವೆ. ಅಂದರೆ ಸುತ್ತಲಿನ ಪರಿಸರಕ್ಕೆ ಹೊಂದಿಕೊಂಡು ನಡೆಯುವ ನುಡಿಯುವ ವಿಧಾನವೇ ವಿವೇಕ ಮತ್ತು ಪ್ರಜ್ಞೆಯಾಗುತ್ತದೆ ಎಂದು ಮೇಲ್ನೋಟಕ್ಕೆ ಅನ್ನಬಹುದು. ಇದನ್ನು ಇನ್ನೂ ಸರಳವಾಗಿ ನಿರೂಪಿಸುವುದಾದರೆ "ಮನಸ್ಸು ಎಂಬುದರ ಲಕ್ಷಣವೆಂದು ಜನಜನಿತವಾದ ಒಂದು ಅಂಶವೆಂದರೆ ಪ್ರಜ್ಞೆ ಎಂಬುದು. ನಾವು ನೋಡುವ ಅಥವಾ ಕೇಳುವ ವಿಷಯದ ಬಗ್ಗೆ ನಮಗೆ ನೆನಪಿರುವ ವಿಷಯದ ಬಗ್ಗೆ ಹಾಗೂ ನಮ್ಮ ಆಲೋಚನೆಗಳು ಮತ್ತು ಅನಿಸಿಕೆಗಳ ಬಗ್ಗೆ ಪ್ರಜ್ಞಾಪೂರ್ವಕವಾಗಿದ್ದೇವೆ ಎಂದು ನಾವು ಹೇಳುತ್ತೇವೆ. ಕುರ್ಚಿಗಳಿಗೆ ಮೇಜುಗಳಿಗೆ ಪ್ರಜ್ಞೆ ಇರುವುದಿಲ್ಲ ಎಂದು ನಾವು ಬಹುತೇಕ ಮಂದಿ ನಂಬಿದ್ದೇವೆ"4. ಎನ್ನುವುದನ್ನು ಅರಿಯುವಾಗ ಪ್ರಜ್ಞೆಯ ವ್ಯತ್ಯಾಸ ಮತ್ತು ಅಗತ್ಯವನ್ನು ಗಮನಿಸಬಹುದು.

ಮನುಷ್ಯನ ಮನಸ್ಸಿನ ಶಕ್ತಿಯನ್ನೂ ತಿಳಿಯಬಹುದಾಗಿದೆ. ಕನ್ನಡ ಸಾಹಿತ್ಯ ಲೋಕದಲ್ಲಿ ವಿವೇಕ, ಪ್ರಜ್ಞೆಗೆ ಹೆಸರಾದ ಅನೇಕ ಕವಿಗಳಲ್ಲಿ ಕುವೆಂಪು ಅಗ್ರಗಣ್ಯರು. ಮನಸ್ಸು, ಆತ್ಮದ ಅಸ್ತಿತ್ವವನ್ನು ಕಾವ್ಯದಲ್ಲಿ ಮೂಡಿಸಿದವರಲ್ಲಿ ಮಹತ್ವದ ಹೆಸರು ಕುವೆಂಪು ಅವರದು. ಅವರ ಅನೇಕ ಕವನಗಳಲ್ಲಿ 'ಪ್ರಜ್ಞೆ' ಎನ್ನುವ ಶಬ್ದ ಬಲಕೆಯಾಗಿರುವುದನ್ನು ಗಮನಿಸಬಹುದು. ಕುವೆಂಪು ಕವನಗಳಲ್ಲಿ ಪ್ರಜ್ಞೆ ಎಚ್ಚರವಾಗಿ ಬಳಕೆಯಾಗಿದೆ. ಜಗತ್ತಿನ ಆತ್ಯಂತಿಕ ಶಕ್ತಿಯಾದ ಭಗವಂತನೇ ಕವಿ, ಮತ್ತು ಭಗವಂತನ ಕಾವ್ಯವನ್ನು ಇಷ್ಟ ಪಡುವ ಸಹೃದಯ ತಾನೆಂದು ಈ ಕವನದಲ್ಲಿ ಹೇಳಿದ್ದಾರೆ

ರಸಪ್ರಯೋಜನ ಭುವನಂ ಕವನಂ
ಭಗವಂತನೆ ಕವಿ ಸಹೃದಯನಾಂ!
ಅಲ್ಪವೊ ಭೂಮವೊ ಹಿರಿದೊ ಕಿರಿದೊ
ಸಿಹಿಯೊ ಕಹಿಯೊ ಬಿಳಿದೊ ಕರಿದೊ
ಬಂಜರು ಮಳಲೊ ಹುಲುಸಿನ ಹೊಳಲೊ
ಬರವೊ ಸಾವೊ ಕದನದ ನೋವೊ

ನೆಲೆಗೆಟ್ಟಲೆವಾ ಜನತೆಯ ಬೇವೊ
ಲೀಲಾಪ್ರಜ್ಞೆಗೆ ಸರ್ವಂ ಓವೋ![5]

2. ಕಲೆ ಮತ್ತು ಸಾಹಿತ್ಯ–ಭಾವನೆಗಳ ಅಭಿವ್ಯಕ್ತಿಯ ಮನೋವೈಜ್ಞಾನಿಕ ಮಾರ್ಗ

ಕಲೆ ಮತು ಸಾಹಿತ್ಯ ಎರಡೂ ಮಾನವನ ಮನಸ್ಸಿನ ಭಾವನೆಗಳನ್ನು ಅತ್ಯಂತ ಸಶಕ್ತವಾಗಿ ಹೊರಹಾಕುವ ಸಾಧನಗಳು. ಏಕೆಂದರೆ ಮನುಷ್ಯ ಸಹಜ ಭಾವಗಳಾದ ನೋವು, ಒತ್ತಡ, ಸಂತೋಷ ಅಥವಾ ಗೊಂದಲ,ಅಚ್ಚರಿಯನ್ನು ಪ್ರತೀ ಹಂತದಲ್ಲೂ ಅವನಿಗೆ ನೇರವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಇಂತಹ ಹೊತ್ತಿನಲ್ಲಿಯೇ ಕಲೆ ಅವನ ಬದುಕಿನಲ್ಲಿ ನಿರ್ಣಾಯಕವಾಗಿ ಕಂಡು ಬರುತ್ತದೆ. ವಿವೇಕಾನಂದರ ಅತ್ಯಂತ ಪ್ರಸಿದ್ಧ ಮಾತೊಂದು ಸ್ಮರಣೆಗೆ ಬರುತ್ತಿದೆ. 'ಕಲೆ ವಿಲಾಸಕ್ಕೆ ಅಲ್ಲ, ಅದು ಆತ್ಮವಿಕಾಸಕ್ಕೆ' ಎಂದು. ಕಲೆ ಮತ್ತದರ ಸೃಜನಶೀಲವಾದ ಅನೇಕ ಮಜಲುಗಳು ಕೇವಲ ಮನರಂಜನೆ ಒದಗಿಸುವ ಮಾಧ್ಯಮಗಳಲ್ಲ. ಅವು ಅವನ ಆಂತರಿಕ ಚಲನೆಯನ್ನು, ಏರುಪೇರನ್ನು ಸಮರ್ಥವಾಗಿ ಹಿಡಿದಿಡಲು ಮತ್ತು ಅಭಿವ್ಯಕ್ತಿಸಲು ನೆರವಾಗುವ ರೂಪಗಳು. ಮಾನವನ ಮನಸ್ಸು ಭಾವ, ಹೊಸ ಹೊಸ ಆಲೋಚನೆಗಳ ಮತ್ತು ನಿತ್ಯದ ಬದುಕಿನಲ್ಲಿ ಸಿಗುವ ಸಮೃದ್ಧ ಅನುಭವಗಳಿಂದ ಒಂದು ಸಂಕೀರ್ಣ ಜಾಲವಾಗಿರುತ್ತದೆ.

ಈ ಎಲ್ಲ ಭಾವಗಳ ಸರಿಯಾದ ಪ್ರಕಟ ಆಗುವುದೂ ಅವನ ಮಾನಸಿಕ ಆರೋಗ್ಯಕ್ಕೆ ಅತ್ಯಂತ ಅಗತ್ಯವಾಗಿದೆ. ಇದನ್ನು ಕಲೆ ಸಾಹಿತ್ಯ ಮಾಡಿಕೊಂಡು ಬರುತ್ತೆ ಸಾಹಿತ್ಯವು ಮನುಷ್ಯನ ಭಾವನೆಗಳಿಗೆ ಒಂದು ಸುರಕ್ಷಿತವಾದ ಮತ್ತು ರಚನಾತ್ಮಕವಾದ ಸ್ವರೂಪ ನೀಡುತ್ತದೆ. ಸುರಕ್ಷಿತ ಏಕೆಂದರೆ ಮನುಷ್ಯನ ಭಾವನೆಗಳು ಸೃಜನಶೀಲ ರೂಪ ಪಡೆದಾಗ ಅವುಗಳೆಲ್ಲವೂ ಸಾಮಾಜಿಕವಾದ ಗುಣವನ್ನು ಪ್ರಕಟ ಮಾಡುತ್ತವೆ. ಆಗ ಅವು ಸಾಹಿತಿಯ ಅಥವಾ ಬರೆದವನ ವೈಯಕ್ತಿಯ ವಿವರವಾಗಿ ಉಳಿಯುವುದಿಲ್ಲ. ಅವು ಜಗತ್ತಿನ ಗುಣಗಳಾಗಿ ಬರಹದ ಮೂಲಕ ಹೊರಹೊಮ್ಮುತ್ತವೆ.

ಹೀಗೆ ವೈಯಕ್ತಿಕ ಅನ್ನುವುದು ವೈಶ್ವಿಕವಾಗುವ ಅವಕಾಶವಿರುವ ಅತ್ಯಂತ ಪ್ರಬಲವಾದ ಮಾಧ್ಯಮವೇ ಸಾಹಿತ್ಯ ಎನ್ನಬೇಕು. ಇದಕ್ಕೆ ಕನ್ನಡದ ಅತ್ಯಂತ ಪ್ರಸಿದ್ಧ ಕಾದಂಬರಿಕಾರ ಎಸ್. ಎಲ್. ಭೈರಪ್ಪನವರ 'ಅಂಚು' ಕಾದಂಬರಿಯನ್ನಾಗಲಿ ಬಹು ಜನಪ್ರಿಯ 'ಪರ್ವ' ಕಾದಂಬರಿಯನ್ನಾಗಲಿ ಗಮನಿಸಿದರೆ, ಅಲ್ಲಿ ಕಾದಂಬರಿಕಾರ ಮಾನವ ಸ್ವಭಾವಗಳನ್ನು ವಿಮರ್ಶಿಸಿದ ಅವನ ಗುಣ ಸ್ವಭಾವಗಳನ್ನು ಅಕ್ಷರಗಳ ಮೂಲಕ ನಿರೂಪಿಸಿದ ರೀತಿಯಿಂದ ಅರ್ಥ ಮಾಡಿಕೊಳ್ಳಬಹುದು.

ಪರ್ವ ಮುಖ್ಯವಾಗಿ ಮಾನವ ಶಾಸ್ತ್ರದ ಅತ್ಯಂತ ಸೊಗಸಾದ ಭಾಗದಂತಿದೆ. ಅಂದರೆ ಒಬ್ಬ ಬರಹಗಾರ ತನ್ನ ಮನಸ್ಸಿನ ಅಭಿಪ್ರಾಯಗಳನ್ನು ಪಾತ್ರಗಳ ಘಟನಾವಳಿಗಳ ಮೂಲಕ ಕತೆ ಕಾದಂಬರಿಗಳಲ್ಲಿ ಹೊರ ಹಾಕುವಾಗ ಅವನ ಮನಸ್ಸಿನ ಆಳದ ಭಾವನೆಗಳು ಸದ್ದಿಲ್ಲದೇ ಬೆಳಕಿಗೆ ಬರುತ್ತವೆ. ಇದರಿಂದ ಬರಹಗಾರನಿಗೂ ಓದುಗರಿಗೂ ಮಾತಿಗೆ ಸಿಗದ ಭಾವನೆಗಳನ್ನು ಅರಿತುಕೊಳ್ಳಲು ಅವಕಾಶವಾಗಿರುತ್ತದೆ. ಇದನ್ನು ಮನೋವಿಜ್ಞಾನದಲ್ಲಿ 'ಕೆಥಾರ್ಸಿಸ್' ಎನ್ನುತ್ತಾರೆ. ಭಾವ ವಿರೇಚನ ಅಥವಾ ಭಾವನಾತ್ಮಕ ವಿಮೋಚನೆ ಎಂತಲೂ ಹೇಳಬಹುದು. ಇದು ಅವನ ಒಟ್ಟು ನೆಮ್ಮದಿಗೆ ಸಹಾಯಕವಾಗಿ ಕೆಲಸ ಮಾಡುತ್ತದೆ.

3. ಕಲೆ ಮತ್ತು ಸಾಹಿತ್ಯದ ಸೃಜನಶೀಲತೆ

ಸೃಜನಶೀಲತೆ ಮನಸ್ಸಿನ ಅತ್ಯಂತ ಕ್ರಿಯಾಶೀಲವಾದ ಬಾಹ್ಯ ಸ್ವರೂಪ. ಇದು ಕಲೆಯ ಅತ್ಯಂತ ಅಗತ್ಯವಾದ ಮುಖ್ಯವಾದ ಪರಿಕರವಾಗಿದೆ. ಸೃಜನಶೀಲತೆ ಎಂದರೆ ಹೊಸ ಆಲೋಚನೆಗಳನ್ನು ಹುಟ್ಟಿಸುವ, ವಿಶಿಷ್ಟವಾಗಿ ನೋಡುವ ಸಾಮಾನ್ಯದಲ್ಲೂ ಅಸಾಮಾನ್ಯತೆಯನ್ನು ಕಂಡುಕೊಳ್ಳುವ ಮನುಷ್ಯನ ಮನಸ್ಸಿನ ವಿಶೇಷ ಸಾಮರ್ಥ್ಯ. ಇಲ್ಲಿ ಮನಸ್ಸೇ ಕೇಂದ್ರ. ಅದೇ ಈ ಸೃಷ್ಟಿಶೀಲತೆಯ ಸೃಜನಶೀಲತೆಯ ಬೀಜಕೇಂದ್ರವಾಗಿದೆ. ಇದರ ಬಗ್ಗೆ ಇನ್ನೂ ಗಮನಿಸುವುದಾದರೆ ಈ ಮಾತು ಸಮಂಜಸವೆನಿಸುತ್ತದೆ.

"ಮಾನವ ಸ್ವಭಾವಕ್ಕೆ ಎರಡು ಮುಖಗಳಿವೆಯೆಂಬುದು ಕಂಡು ಬರುತ್ತದೆ. ಇವುಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಒಂದು ಮಾನವನ ಅಸದೃಶತೆ ಇದು ಪ್ರತಿ ಮನುಷ್ಯನಿಗೂ ಒಂದು ಬಗೆಯ ತನ್ನತನವನ್ನು ಕೊಡುತ್ತದೆ. ತನ್ಮೂಲಕ ಅವನು ಬೇರೊಬ್ಬ ವ್ಯಕ್ತಿಯಾಗಲಾರದಂತೆ ಮಾಡುತ್ತದೆ. ಇನ್ನೊಂದು ಮಾನವನಸಾಮಾನ್ಯತೆ ಮತ್ತು ಸಹಭಾಗಿತನ. ಎಲ್ಲ ವಿಜ್ಞಾನಿಗಳಿಗೂ ವರ್ಗೀಕರಣಕ್ಕೆ ಅಗತ್ಯವಾದ ಆಧಾರವನ್ನೊದಗಿಸುವುದು ಇದೇ"[6].

ಮನಸ್ಸಿನ ಈ ಪ್ರಕ್ರಿಯೆಯನ್ನು ಪ್ರತಿಭೆ ಎಂತಲೂ ಶಕ್ತಿ ಎಂತಲೂ ಕಾವ್ಯ ಮೀಮಾಂಸಕರು ಕರೆಯುತ್ತಾರೆ. ಏಕೆಂದರೆ ಜಗತ್ತಿನ ಎಲ್ಲರಿಗೂ ಕಾಣಬಹುದಾದ ಆದರೆ ಕಾಣದೇ ಹೋಗುವ ವಿಶೇಷತೆಯನ್ನು ಕವಿಗಳು ಸಾಹಿತಿಗಳು ಕಲಾಕಾರರು ಕಂಡು ಹಿಡಿದು ಅದನ್ನು ತಮ್ಮ ಕಲೆಯ ಮಾರ್ಗದ ಮೂಲಕ ಸಾದರ ಪಡಿಸುತ್ತಾರೆ. ಅಂದರೆ ನಾವು ದಿನವೂ ಕಂಡು, ಕೇಳಿದ ಸಾಮಾನ್ಯ ವಿಷಯಗಳು, ಅರ್ಥಗಳು ಕವಿಯ ಕಲಾವಿದನ ಪ್ರತಿಭೆಯ ಬೆಳಕಿನಲ್ಲಿ ಸೃಜನಶೀಲತೆ ಬೆಳಕಿನಲ್ಲಿ ಹಾದು ಹೋಗಿ ಹೊಳೆಯುವಾಗ ಅದು ಹೊಸದೇ ಆದ ಅದ್ಭುತವೊಂದನ್ನು ನಿರ್ಮಾಣ ಮಾಡಿರುತ್ತದೆ.

ಅತ್ಯಂತ ಸರಳವಾದ ಮತ್ತು ಶಕ್ತಿಶಾಲಿಯಾದ ಉದಾಹರಣೆಯೆಂದರೆ ಸೂರ್ಯೋದಯ. ದಿನನಿತ್ಯವೂ ಸೂರ್ಯ ಉದಯಿಸುತ್ತಾನೆ. ನಾವೂ ಅದನ್ನೂ ನೋಡಿಯೇ ಇರುತ್ತೇವೆ. ಆದರೆ ಕವಿ ಪ್ರತಿಭೆಯ ಕಣ್ಣಿಗೆ ಬಿದ್ದು ಅದು ದೇವರ ದಯವಾಗಿ ಕಾಣುತ್ತದೆ ಎಂದು ಕುವೆಂಪು ಅವರ ಕವನವೊಂದರಲ್ಲಿ ಗಮನಿಸಬಹುದಾಗಿದೆ. 'ಆನಂದಮಯ ಈ ಜಗಹೃದಯ/ಏತಕೆ ಭಯ ಮಾಣೋ/ ಸೂರ್ಯೋದಯ ಚಂದ್ರೋದಯ/ ದೇವರ ದಯ ಕಾಣೊ/ ಎನ್ನುತ್ತಾ ಮನುಷ್ಯ ಸಮಾಜ ಸಂಸಾರದಲ್ಲಿ ಲೌಕಿಕ ಜೀವನದಲ್ಲಿ ದಿನನಿತ್ಯ ತಲೆದೋರುವ ಚಿಂತೆ, ಭಯ, ಸಂಕಷ್ಟದಲ್ಲಿ ಕೊಚ್ಚಿ ಹೋಗದೇ ಅದನ್ನು ಮೀರಿದ ಸತ್ಯದೆಡೆಗೆ ಕಣ್ಣನ್ನು ಹಾಯಿಸುತ್ತಾ ಇವೆಲ್ಲವನ್ನು ಮೀರಿದ ಶಕ್ತಿಯೊಂದು ಬದುಕನ್ನು ನಡೆಸುತ್ತಿದೆ ಎನ್ನುವುದನ್ನು ಅರಿತು ಬಾಳಬೇಕು ಎನ್ನುತ್ತಾರೆ.

ಈ ರೀತಿಯ ಯೋಚನೆ ಮೂಡಲು ಕವಿಗಷ್ಟೇ ಸಾಧ್ಯ. ಏಕೆಂದರೆ ಅವನಲ್ಲಿ ಸೃಜನಶೀಲ ಮನಸ್ಸು ಹೊಸತನವನ್ನು ಹುಟ್ಟಿಸಿಕೊಂಡು ಬದುಕಿನೆಡೆಗೆ ಪೂರ್ಣತ್ವದ ದೃಷ್ಟಿಯಿರಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ. ಕವಿಯ ಪ್ರಕಾರ 'ಸೂರ್ಯನು ಬರಿಯ ರವಿಯಲ್ಲವೋ, ರವಿವದನವೇ ಶಿವಸದನ' ಎನ್ನುತ್ತಾ ನಾವು ಬರಿಯ ಕಣ್ಣಿಗೆ ಕಾಣುವ ಸೂರ್ಯನ ಬೆಳಕು ಕೇವಲ ಬೆಳಕಲ್ಲ ಅದು ಶಿವನ ಮೂರ್ತರೂಪವೆನ್ನುತ್ತಾರೆ. ನಾವು ನೋಡುವ ನೋಟ, ಕೇಳುವ ಸಂಗೀತ, ಇದೆಲ್ಲವೂ ಪ್ರತಿಭೆಯ ರೂಪಗಳು. ಈ ದರ್ಶನವನ್ನು ಗಮನಿಸಲು ವಿಶಾಲವಾದ ಹೃದಯವಂತಿಕೆಯೂ ಬೇಕು. ಇವೆಲ್ಲವೂ ಘಟಿಸುವುದು ಮಾನವನ ಮನಸ್ಸಿನಲ್ಲಿಯೇ ಹಾಗಾಗಿ ಮನಸ್ಸು ಅತ್ಯಂತ ದೊಡ್ಡ ಶಕ್ತಿ ಕೇಂದ್ರವಾಗಿಯೇ ಅಸ್ತಿತ್ವವನ್ನು ಪಡೆಯುತ್ತದೆ.

ಸುಪ್ರಭಾತದ ಹೊತ್ತಿನಲ್ಲಿ ಜಗದ ಕತ್ತಲನ್ನು ಅಳಿಸುತ್ತಾ ಮೂಡುವ ಸೂರ್ಯನ ಬೆಳಕಿನಲ್ಲಿಯೇ ವಿಶ್ವದ ಸೌಂದರ್ಯವನ್ನು ನೋಡಿದಾಗ ಸತ್ಯದ ದರ್ಶನವಾಗುತ್ತದೆ. ಅಲ್ಲೇ ಶಿವನೂ ಸಾನ್ನಿಧ್ಯದಲ್ಲಿರುತ್ತಾನೆ ಎನ್ನುವ ದೃಢವಾದ ನಂಬಿಕೆ ಕವಿಯದು. ಇದು ಸೃಜನಶೀಲತೆಯ ಸ್ವರೂಪವನ್ನು ತೋರಿಸುತ್ತದೆ. ಕಲೆ ಸಾಹಿತ್ಯ ಈ ಕಾರಣಕ್ಕೆ ಜಗತ್ತಿನ ಗೌರವಕ್ಕೆ ಪಾತ್ರವಾಗಿರುವುದನ್ನು ಗಮನಿಸಬಹುದು. ಅದು ಅಂತರಂಗದ ಬೆಳಕನ್ನು ಹೊರಗೂ ಪ್ರತಿಫಲಿಸುತ್ತದೆ ಹಾಗೂ ಇತರರಿಗೂ ಕೈ ಹಿಡಿದು ನಡೆಸುವ ಕೈಂಕರ್ಯವನ್ನೂ ಮಾಡುತ್ತದೆ.

4. ಕಲೆ, ಸಾಹಿತ್ಯ ಮತ್ತು ಮನೋವಿಜ್ಞಾನದ ಸಾಮಾಜಿಕ ಪರಿಣಾಮ:

ಮನೋವಿಜ್ಞಾನ ಮತ್ತು ಕಲೆ ಸಾಹಿತ್ಯಗಳು ಮಾನವನ ಸೃಜನಶೀಲ ಮಮಸ್ಸಿನ ಪ್ರತಿಬಿಂಬಗಳು ಎಂಬುದನ್ನು ಈಗಾಗಲೇ ವಿವರವಾಗಿ ನೋಡಿದ್ದೇವೆ. ಹಾಗಿದ್ದಲ್ಲಿ ಇವುಗಳ ಸಾಮಾಜಿಕ ಪರಿಣಾಮಗಳ ಗಮನಿಸುವುದಾದರೆ, ಇವುಗಳ ಸಾಮಾಜಿಕ ಪರಿಣಾಮವೆಂದರೆ ಬದುಕಿನ ಸಮೃದ್ಧತೆ ಎನ್ನಬೇಕು. ಏಕೆಂದರೆ ಕಲೆ ಸಾಹಿತ್ಯವು ಮನುಷ್ಯನನ್ನು ಒಳಗಿನಿಂದ ವಿಕಾಸಗೊಳಿಸುವ, ಬೆಳಗಿಸುವ ಕೆಲಸ ಮಾಡುವ ಸಾಮರ್ಥ್ಯವಿರುವಂತಹ ಮಾಧ್ಯಮಗಳು. ಹಾಗೆಂದ ತಕ್ಷಣ ಕಲಾವಿದರು, ಸಾಹಿತಿಗಳು ಶ್ರೇಷ್ಠವಾದ ವ್ಯಕ್ತಿಗಳು ಎಂದರ್ಥವಲ್ಲ. ಶ್ರೇಷ್ಠವಾಗುವ ಅವಕಾಶವಿರುವ ಮಾನವರು ಎಂದರ್ಥ.

ಪುರಂದರದಾಸರು 'ಮಾನವ ಜನ್ಮ ದೊಡ್ಡದು ಅದ ಹಾನಿ ಮಾಡಲುಬೇಡಿ ಹುಚ್ಚಪ್ಪಗಳಿರಾ' ಎಂದಿದ್ದಾರೆ. ಮನುಷ್ಯನಿಗೆ ಬದುಕಿನಲ್ಲಿ ಸಾಧಿಸಲು ಅಗಾಧ ಸಾಧ್ಯತೆಗಳಿರುವುದನ್ನು ದಾಸರು ಚೆನ್ನಾಗಿ ಅರಿತು, ಬದುಕಿದ್ದರು. ಒಬ್ಬ ಮಾನಸಿಕವಾಗಿ ವಿಕಾಸಗೊಂಡ ವ್ಯಕ್ತಿ ತನ್ನ ಸುತ್ತಮುತ್ತಲ ಸಮಾಜವನ್ನು ಒಳಿತಿನ ಕಡೆಗೆ ಕೊಂಡೊಯ್ಯುವಂತೆ ಪರಿವರ್ತಿಸುವ ಸಮೃದ್ಧ ಅವಕಾಶಗಳನ್ನು ಪಡೆಯುವ ಸಾಮರ್ಥ್ಯವನ್ನೂ ಹೊಂದಿರುತ್ತಾನೆ. ಇದಕ್ಕೊಂದು ಬಹುದೊಡ್ಡ ಉದಾಹರಣೆಯೆಂದರೆ ಈ ನೆಲದಲ್ಲಿ ಆಗಿ ಹೋದ ಸಂತರು, ಅನುಭಾವಿಗಳು, ವಚನಕಾರರು ದಾಸರು. ಇವರೆಲ್ಲರೂ ಮನಸ್ಸಿನ ಅತ್ಯುನ್ನತ ಮಟ್ಟವನ್ನು ಸಾಧಿಸಿದವರು. ಇವರೆಲ್ಲರೂ ಬೌದ್ಧಿಕ, ಸಾಂಸ್ಕೃತಿಕವಾಗಿ ಮಾನವ ಸಾಧಿಸಬಹುದಾದ ಪ್ರಗತಿಗೆ ಸಾಕ್ಷಿಯಾಗಿ ಇಂದಿಗೂ ಜೀವಂತವಾಗಿದ್ದಾರೆ.

ಕಲೆ, ಸಾಹಿತ್ಯ ನಮ್ಮ ಸಮಾಜದ ಕನ್ನಡಿಯಂತೆ ಕಾರ್ಯ ನಿರ್ವಹಿಸಿಕೊಂಡು ಬಂದಿದೆ. ಪಂಪನ ಕಾಲದಿಂದಲೂ ಆಯಾ ಕಾಲದ ಸಮಾಜದ ಆಗುಹೋಗುಗಳನ್ನು ಸಾಹಿತ್ಯ ದಾಖಲಿಸಿಕೊಂಡು ಬಂದಿರುವ ಉದಾಹರಣೆಗಳನ್ನು ನೋಡಿದ್ದೇವೆ. ಶಿಲ್ಪಕಲೆ, ಚಿತ್ರಕಲೆ, ನೃತ್ಯ, ನಾಟಕ ಮೊದಲಾದ ಎಲ್ಲಾ ಕಲೆಯ ಪ್ರಕಾರಗಳು ಸಮಾಜದ ಸಮಗ್ರ ಭಾವನೆಗಳನ್ನು ಒಟ್ಟಾರೆಯಾಗಿ ಪ್ರತಿಬಿಂಬಿಸಿದೆ. ಕಲಾವಿದನಾಗಲಿ, ಸಾಹಿತಿಯಾಗಲಿ ತನ್ನ ಸುತ್ತಮುತ್ತಲಿನ ಸಮಾಜದಲ್ಲಿ ನಡೆಯುವ ಅನ್ಯಾಯಗಳನ್ನು ಅಸಮಾನತೆಯನ್ನು ತನ್ನ ಅಭಿವ್ಯಕ್ತಿಯಿಂದ ಮುಂದಿಟ್ಟು ಅದನ್ನು ಬಲವಾಗಿ ಸಾಧಿಸುವುದನ್ನು ನೋಡಬಹುದು. ಏಕೆಂದರೆ ಕಲೆಗೆ ಮತ್ತು ಸಾಹಿತ್ಯಕ್ಕೆ ಸಾಮಾಜಿಕ ಜಾಗೃತಿ ಮೂಡಿಸುವ ಶಕ್ತಿಯಿದೆ. ಜನಸಾಮಾನ್ಯರಲ್ಲಿ ಪ್ರಶ್ನಿಸುವ ಮನೋಭಾವವನ್ನು ಮೂಡಿಸಿ ಸಹಜೀವನಕ್ಕೆ ಅಗತ್ಯವಾಗಿ ಬೇಕಾಗಿರುವ ಸಂವೇದನೆಗಳನ್ನು ಮೂಡಿಸುವಲ್ಲಿ ಕಲೆ ಮತ್ತು ಸಾಹಿತ್ಯವು ಸಹಕಾರಿಯಾಗುತ್ತದೆ. ಅಗತ್ಯವಾಗಿ ನಡೆಯಬೇಕಾದ ಬದಲಾವಣೆಗೆ ಹೊಸ ದಿಕ್ಕನ್ನು ತೋರಿಸುವ ಅವಕಾಶವೂ ಕಲೆ ಮತ್ತು ಸಾಹಿತ್ಯಕ್ಕಿದೆ ಎಂಬುದನ್ನು ಅರಿಯಬಹುದು.

ಸೂಕ್ಷ್ಮವಾಗಿ ಗಮನಿಸಿದರೆ, ಕಲೆಗಿಂತಲೂ ಸಾಹಿತ್ಯವೂ ಮನೋವೈಜ್ಞಾನಿಕ ಸಂಗತಿಗಳನ್ನು ಪ್ರತಿಬಿಂಬಿಸುವ ಸಾಮರ್ಥ್ಯ ಹೊಂದಿದೆ ಎಂಬುದಕ್ಕೆ ಕಳೆದ ನೂರು ವರ್ಷದ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ದಾಖಲಾಗಿದೆ. ಮೊದಲ ವಿಧವಾ ವಿವಾಹದ ವಿಷಯವನ್ನು ಪ್ರಸ್ತಾಪಿಸಿದ ಕಾದಂಬರಿ ಇಂದಿರಾಬಾಯಿಯಿಂದ ಹಿಡಿದು ಇತ್ತೀಚೆಗಿನ ಮೋಹನಸ್ವಾಮಿ ಕಾದಂಬರಿಯವರೆಗೂ ಸಮಾಜದ ಮನಸ್ಥಿತಿಯ ಬದಲಾವಣೆಗಳನ್ನು ಸಾಹಿತ್ಯ ಸಮರ್ಥವಾಗಿ ಹಿಡಿದಿಟ್ಟಿದೆ. ಬಡತನ, ಲಿಂಗ ಅಸಮಾನತೆ, ರಾಜಕೀಯ ಶೋಷಣೆ, ಕುಟುಂಬ ಮೌಲ್ಯಗಳ ಕುಸಿತ ಹೀಗೆ ಮನುಷ್ಯನ ಮನಸ್ಥಿತಿಯಲ್ಲಾದ ಎಲ್ಲ ಬದಲಾವಣೆಗಳನ್ನು ಸಾಹಿತ್ಯ ಸಮಂಜಸವಾಗಿಯೇ ಮೂಡಿಸಿದೆ.

ವ್ಯಕ್ತಿಗಾಗುವ ಒತ್ತಡಗಳು, ಭಯ, ಆವೇಶ, ಸಂಬಂಧಗಳಲ್ಲಿ ಮೂಡುವ ಗೊಂದಲ ಇಂತಹ ಮನೋವಿಜ್ಞಾನದ ಆಯಾಮಗಳನ್ನು ಸಾಹಿತ್ಯದ ಮೂಲಕ ಸಶಕ್ತವಾಗಿ ಹೊರ ಪ್ರಪಂಚಕ್ಕೆ ತಿಳಿಯಪಡಿಸಿದ ಹೆಮ್ಮೆ ಈ ಕಾಲದ ಬದಲಾವಣೆಯಾಗಿದೆ. ಈ ಮೂಲಕ ಮನುಷ್ಯನ ವರ್ತನೆ ಅರಿತು ಅವನಿಗೆ ಬೇಕಾದ ಮಾನಸಿಕ ಆಲಂಬನೆಯನ್ನು ನೀಡುತ್ತಾ ಸಾಗಿದಾಗ ಸಮಾಜದಲ್ಲಿ ಸ್ವಲ್ಪ ಮಟ್ಟಿಗೆ ಸಮತೋಲನ, ಸಹಕಾರ ಮೂಡಿ ಶಾಂತಿ ಹೆಚ್ಚಬಹುದು ಎನ್ನುವ ಆಶಯ ಮೂಡುತ್ತದೆ.

ಸಮಾರೋಪ

ನೆಮ್ಮದಿ ಅಥವಾ ಮಾನಸಿಕ ಶಾಂತಿ ಪ್ರತಿಯೊಬ್ಬ ಮನುಷ್ಯನಿಗೆ ಅತಿ ಅಗತ್ಯ. ಈ ನೆಮ್ಮದಿಯನ್ನು ಸಾಧಿಸಲು ಅಥವಾ ಹುಡುಕುವ ಪ್ರಯತ್ನಕ್ಕೆ ದಾರಿಯಾಗಿ ಸಾಹಿತ್ಯ, ಕಲೆ ಮತ್ತು ಮನೋವಿಜ್ಞಾನವೂ ಒದಗುತ್ತದೆ. ಇವು ಮೂರು ಕ್ಷೇತ್ರಗಳು ಮನುಷ್ಯನ ಆಂತರಿಕ ಜೀವನವನ್ನು ಸಮತೋಲಗೊಳಿಸಲು, ಶಾಂತಗೊಳಿಸಲು ಬಹು ದೊಡ್ಡ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತವೆ.

ಕಲೆ, ವಿಶೇಷವಾಗಿ ಸಂಗೀತ ನೃತ್ಯ, ಚಿತ್ರಕಲೆ ಇವು ಮನಸ್ಸಿನ ಆಳದಲ್ಲಿ ಸುಪ್ತವಾಗಿ ಮಲಗಿರುವ ಭಾವನೆಗಳನ್ನು ಜಾಗೃತಗೊಳಿಸಿ ಅಷ್ಟೇ ಸಮರ್ಥವಾಗಿ ಹೊರಗೆ ಪ್ರಕಟ ಮಾಡಲು ಸಹಕಾರಿಯಾಗುವ ಮಾರ್ಗಗಳು. ಮುಖ್ಯವಾಗಿ ಚಿತ್ರಕಲೆಯಲ್ಲಿ ಬಣ್ಣಗಳ ಜೊತೆಗಿನ ನಂಟು ಮನುಷ್ಯನ ಮನಸ್ಸನ್ನು ಶಾಂತಗೊಳಿಸುತ್ತದೆ ಎನ್ನುತ್ತದೆ ಮನೋವಿಜ್ಞಾನ. ಅಂತೆಯೇ ಈ ಹೊತ್ತಿನ ಜನಪ್ರಿಯ ಪ್ರಯೋಗಗಳಾದ ಆರ್ಟ್ ಥೆರಪಿ ಮತ್ತು ಮೂಸಿಕ್ ಥೆರಪಿಗಳು ಇದಕ್ಕೆ ವಿಜ್ಞಾನಾಧಾರಿತ ಉದಾಹರಣೆಗಳಾಗಿವೆ. ಕಲಾತ್ಮಕವಾದ ಅಭಿವ್ಯಕ್ತಿಯ ಮೂಲಕ ವ್ಯಕ್ತಿ ತನ್ನೊಳಗೇ ಹುದುಗಿರುವ ನಿರಾಸೆ, ದುಃಖ, ಒತ್ತಡಗಳನ್ನು ಹೊರಹಾಕಿ ಆ ಅಶಾಂತಿಯ ಸುಳಿಯಿಂದ ಮುಕ್ತನಾಗುತ್ತಾನೆ. ಆ ಕಾರಣದಿಂದ ಮನುಷ್ಯ ನೆಮ್ಮದಿಯಿಂದ ಮುಂದೆ ನಡೆಯಲು ಶಕ್ತನಾಗುತ್ತಾನೆ ಎನ್ನುತ್ತದೆ ಮನೋವಿಜ್ಞಾನದ ಅನೇಕ ಪ್ರಯೋಗಗಳು.

ಸಾಹಿತ್ಯದ ಬರವಣಿಗೆಯಷ್ಟೇ ಅಲ್ಲದೇ ಸಾಹಿತ್ಯದ ಓದೂ ಕೂಡಾ ಒತ್ತಡದ ನಿವಾರಣಗೆ ಸಹಕರಿಸುತ್ತದೆ. ಒಂದು ಒಳ್ಳೆಯ ಕವನ, ಕಾದಂಬರಿಯ ಓದು ಮನುಷ್ಯನ ಮನಃಸ್ಥಿತಿಯನ್ನು ಬದಲಾಯಿಸಬಹುದು. ಆಯಾ ಕಾದಂಬರಿಗಳ ಪಾತ್ರಗಳ ನಿರೂಪಣೆಯನ್ನು ಓದುತ್ತಾ ವ್ಯಕ್ತಿಯೊಬ್ಬ ತನ್ನ ಬದುಕನ್ನೂ ಅದರೊಂದಿಗೆ ಹೋಲಿಕೆ ಮಾಡಿಕೊಂಡು ಆ ಪಾತ್ರವೊಂದು ಸಾಧಿಸಿದ ಔನ್ನತ್ಯವನ್ನು ತಾನೂ ಸಾಧಿಸಲು ಪ್ರಯತ್ನಿಸಬಹುದು.

ಹಾಗೆಯೇ ಮನೋವಿಜ್ಞಾನವೂ ಧ್ಯಾನ, ಥೆರಪಿಗಳ ಮೂಲಕ ಅನೇಕ ಸಮಸ್ಯೆಗಳಿಗೆ ತಾರ್ಕಿಕ ಪರಿಹಾರಗಳನ್ನೂ ಸೂಚಿಸುತ್ತದೆ. ಮನೋವಿಜ್ಞಾನವು ನಮ್ಮನ್ನು ಅರಿಯಲು, ಭಾವನೆಗಳನ್ನು ನಿಯಂತ್ರಿಸುವಲ್ಲಿ ಹಾಗೂ ಜೀವನದ ಸಂಕಷ್ಟಗಳನ್ನು ಸಮತೋಲನ ಭಾವದಿಂದ ಎದುರಿಸಿ ಮುನ್ನಡೆಯಲು ಮಾರ್ಗದರ್ಶನ ನೀಡುತ್ತದೆ.

ಹೀಗೆ ಈ ಮೂರು ಕ್ಷೇತ್ರಗಳು ಒಟ್ಟಿಗೆ ಕೆಲಸ ಮಾಡಿದಾಗ ವ್ಯಕ್ತಿಯೊಬ್ಬ ಸಮಗ್ರವಾಗಿ ಏಳಿಗೆಯಾಗುತ್ತಾ ಮಾನಸಿಕ ವಿಕಾಸದ ದಾರಿಯಲ್ಲಿ ನಡೆಯಲು ಶಕ್ತನಾಗುತ್ತಾನೆ. ಕಲೆ ಮನಸ್ಸನ್ನು ಮನುಷ್ಯನನ್ನು ಮೃದುಗೊಳಿಸುತ್ತದೆ, ಸಜ್ಜನನಾಗಿಸುತ್ತದೆ, ಸಂಸ್ಕಾರಪೂರ್ಣ ನಡವಳಿಕೆಯನ್ನು ಕಲಿಸುತ್ತದೆ. ಸಾಹಿತ್ಯವೂ ಅವನೊಳಗಿನ ಭಾವನೆಗಳಿಗೆ ರೂಪ ಕೊಟ್ಟು ಅವನನ್ನು ಮುಕ್ತಗೊಳಿಸಿದರೆ ಮನೋವಿಜ್ಞಾನ ಅವೆಲ್ಲವನ್ನೂ ಸಮತೋಲದಿಂದ ಸುಧಾರಿಸಲು ವಿಧಾನಗಳನ್ನು ಕಲಿಸುತ್ತದೆ ಎನ್ನುಬಹುದು. ಒಟ್ಟಿನಲ್ಲಿ ಕಲೆ ಸಾಹಿತ್ಯ ಮತ್ತು ಮನೋವಿಜ್ಞಾನ ಈ ಮೂರರ ಕೂಡುವಿಕೆಯು ಮನುಷ್ಯನಿಗೆ ಬದುಕಿನುದ್ದಕ್ಕೂ ಅತ್ಯಂತ ಗಟ್ಟಿಯಾದ ಮಾನಸಿಕ ತಳಹದಿಯನ್ನು ನೀಡಿ ಬದುಕನ್ನು ಜೀವನಕಲೆಯಾಗಿಸಿಕೊಂಡು ಜೀವಿಸಲು ಸಾಮರ್ಥ್ಯ ನೀಡುವ ಶಕ್ತಿಮಾರ್ಗವೇ ಆಗಿದೆ.

ಕೊನೆ ಟಿಪ್ಪಣಿಗಳು

1. ಸಂಶೋಧನ ಲೇಖನಗಳು–ಎಸ್ ಶ್ರೀಕಂಠ ಶಾಸ್ತ್ರೀ–ಕಾಮಧೇನು ಪುಸ್ತಕ ಭವನ ಬೆಂಗಳೂರು–1975–ಪುಟ 355.
2. ಯುಗಯಾತ್ರಿ ಭಾರತೀಯ ಸಂಸ್ಕೃತಿ, ಸಂಪುಟ 3–ಸಂ: ಹರಿದಾಸ ಭಟ್ಟಾಚಾರ್ಯ–ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ–1975–ಪುಟ 431.
3. ಯುಗಯಾತ್ರಿ ಭಾರತೀಯ ಸಂಸ್ಕೃತಿ, ಸಂಪುಟ 3–ಸಂ: ಹರಿದಾಸ ಭಟ್ಟಾಚಾರ್ಯ–ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ–1975–ಪುಟ 412.
4. ಮನಸ್ಸು ಎಂದರೇನು?–ಮೂಲ: ಬರ್ಟ್ರಂಡ್ ರಸಲ್ ಕನ್ನಡಕ್ಕೆ ಪಿ.ವಿ. ನಾರಾಯಣ–ವಸಂತ ಪ್ರಕಾಶನ, ಬೆಂಗಳೂರು–2009–ಪುಟ 3.
5. ಕುವೆಂಪು ಸಮಗ್ರಕಾವ್ಯ ಸಂಪುಟ, 2– ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ–2000–ಪುಟ 181.
6. ಯುಗಯಾತ್ರಿ ಭಾರತೀಯ ಸಂಸ್ಕೃತಿ, ಸಂಪುಟ 3– ಸಂ: ಹರಿದಾಸ ಭಟ್ಟಾಚಾರ್ಯ– ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ–1975–ಪುಟ 432.

ಪರಾಮರ್ಶನ ಗ್ರಂಥಗಳು

1. ಯುಗಯಾತ್ರಿ ಭಾರತೀಯ ಸಂಸ್ಕೃತಿ, ಸಂಪುಟ 3– ಸಂ: ಹರಿದಾಸ ಭಟ್ಟಾಚಾರ್ಯ–ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ–1975

2. ಸಂಶೋಧನ ಲೇಖನಗಳು–ಎಸ್ ಶ್ರೀಕಂಠ ಶಾಸ್ತ್ರೀ–ಕಾಮಧೇನು ಪುಸ್ತಕ ಭವನ ಬೆಂಗಳೂರು–1975

3. ಮನಸ್ಸು ಎಂದರೇನು?–ಮೂಲ: ಬರ್ಟ್ರಂಡ್ ರಸಲ್ ಕನ್ನಡಕ್ಕೆ ಪಿ.ವಿ. ನಾರಾಯಣ–ವಸಂತ ಪ್ರಕಾಶನ, ಬೆಂಗಳೂರು–2009

4. ಕುವೆಂಪು ಸಮಗ್ರಕಾವ್ಯ ಸಂಪುಟ,2– ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ–2000

5. ಭಾರತೀಯ ಕಾವ್ಯ ಮೀಮಾಂಸೆ–ತೀ.ನಂ. ಶ್ರೀ–ಕನ್ನಡ ಗ್ರಂಥಮಾಲೆ, ಮೈಸೂರು ವಿಶ್ವವಿದ್ಯಾನಿಲಯ–1953

ಹಯವದನ ನಾಟಕದ ಮನೋವಿಶ್ಲೇಷಣಾತ್ಮಕ ನೆಲೆಗಳು

ಡಾ. ಪುನೀತ್ ಕುಮಾರ್
ಉಪನ್ಯಾಸಕರು
ಮೌಂಟ್ ಕಾರ್ಮೆಲ್ ಕಾಲೇಜು, ಸ್ವಾಯತ್ತ.

ಗಿರೀಶ್ ಕಾರ್ನಾಡ್‌ರ 'ಹಯವದನ' ನಾಟಕವು ಕೇವಲ ಒಂದು ಜಾನಪದ ಕಥೆಯಲ್ಲ. ಅದು ಮನುಷ್ಯರ ಅಂತರಂಗದ ಜಟಿಲತೆಗಳನ್ನು ಬಿಡಿಸಿಡುವ ಮನೋವೈಜ್ಞಾನಿಕ ಪ್ರಯೋಗಾಲಯ. ಈ ನಾಟಕದ ಮೂಲ ಆಶಯ 'ಪೂರ್ಣತೆಯ ಹಂಬಲ'. ಈ ಪೂರ್ಣತೆಯ ಹಂಬಲವು ಮನೋವಿಶ್ಲೇಷಣೆಯ ದೃಷ್ಟಿಯಿಂದ ಅತ್ಯಂತ ಕುತೂಹಲಕಾರಿ ವಿಷಯವಾಗಿದೆ. ಮನೋವಿಶ್ಲೇಷಣೆಯ ಪಿತಾಮಹ ಸಿಗ್ಮಂಡ್ ಫ್ರಾಯ್ಡ್‌ನಿಂದ ಹಿಡಿದು ಆಧುನಿಕ ನರವಿಜ್ಞಾನಿ ಆಂಟೋನಿಯೊ ಡಮಾಸಿಯೊವರೆಗಿನ ಸಿದ್ಧಾಂತಗಳು ಈ ನಾಟಕದ ಪಾತ್ರಗಳ ವರ್ತನೆಯನ್ನು ವಿಶ್ಲೇಷಿಸಲು ನಮಗೆ ಹೊಸ ದಾರಿಯನ್ನು ತೋರಿಸಿಕೊಡುತ್ತವೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ

1. ಬಯಕೆಯ ಸ್ವರೂಪ ಮತ್ತು 'ಇದಂ'ನ ಪ್ರಭಾವ (The Nature of Desire and Id)

ಮನುಷ್ಯರ ಮನಸ್ಸು ಒಂದು ಅಗಾಧವಾದ ಸಾಗರದಂತೆ. ಆ ಸಾಗರದ ಮೇಲ್ಭಾಗದಲ್ಲಿ ನಮಗೆ ಕಾಣುವುದು ಕೇವಲ ಅಲೆಗಳು ಮಾತ್ರ, ಆದರೆ ಅದರ ಆಳದಲ್ಲಿ ಅಡಗಿರುವ ಮುತ್ತು–ರತ್ನಗಳು ಅಥವಾ ಸುಳಿಗಳು ನಮಗೆ ಸುಲಭವಾಗಿ ಗೋಚರಿಸುವುದಿಲ್ಲ. ಈ ಆಳವನ್ನೇ ಮನೋವಿಜ್ಞಾನದಲ್ಲಿ 'ಸುಪ್ತ ಮನಸ್ಸು' ಎಂದು ಕರೆಯಲಾಗುತ್ತದೆ. ಈ ಸುಪ್ತ ಮನಸ್ಸಿನ ಚಾಲಕ ಶಕ್ತಿಯೇ 'ಬಯಕೆ'. ಬಯಕೆ ಎನ್ನುವುದು ಕೇವಲ ಒಂದು ಆಸೆಯಲ್ಲ. ಅದು ನಮ್ಮ ಬದುಕನ್ನು ಮುನ್ನಡೆಸುವ ಇಂಧನ. ಆದರೆ ಈ ಬಯಕೆಗಳು ಯಾವಾಗಲೂ ತರ್ಕಬದ್ಧವಾಗಿರುವುದಿಲ್ಲ. ಮನೋವಿಜ್ಞಾನದಲ್ಲಿ ಸಿಗ್ಮಂಡ್ ಫ್ರಾಯ್ಡ್ ಇದನ್ನು ವಿವರಿಸಲು 'ಇದಂ' ಎಂಬ ಪರಿಕಲ್ಪನೆಯನ್ನು ನೀಡಿದ್ದಾನೆ.

ನಮ್ಮ ಮನಸ್ಸಿನ ಒಂದು ಮಗುವಿನಂತಹ ಭಾಗವನ್ನೇ 'ಇದಂ' ಎನ್ನಬಹುದು. ಒಂದು ಸಣ್ಣ ಮಗುವಿಗೆ ತನಗೆ ಬೇಕಾದ ಆಟಿಕೆ ಅಥವಾ ಚಾಕಲೇಟ್ ತಕ್ಷಣವೇ ಸಿಗಬೇಕು. ಅದು ಸಿಗದಿದ್ದರೆ ಆಗ ಮಗು ಹಠ ಮಾಡುತ್ತದೆ. ಅಲ್ಲಿ ಯಾವುದೇ ಸಾಮಾಜಿಕ ನಿಯಮಗಳು ಅಥವಾ ನೈತಿಕತೆಯ ಅರಿವಿರುವುದಿಲ್ಲ. ಇದೇ ರೀತಿ ನಮ್ಮ ಮನಸ್ಸಿನ ಒಳಗೂ ಒಂದು 'ಇದಂ' ಅಡಗಿದೆ. ಅದು ಯಾವುದೇ ಕಟ್ಟುಪಾಡುಗಳನ್ನು ಒಪ್ಪದೇ ಕೇವಲ ಸುಖ ಮತ್ತು ಸಂತೋಷವನ್ನು ಮಾತ್ರ ಬಯಸುತ್ತದೆ.

ಈ ಬಯಕೆ ಮತ್ತು ಇದಂ ನಡುವಿನ ಸಂಬಂಧವನ್ನು ನೋಡುವುದಾದರೆ, ಬಯಕೆಯು 'ಇದಂ'ನಿಂದ ಹುಟ್ಟುತ್ತದೆ. ಸಮಾಜವು ಯಾವುದನ್ನು 'ತಪ್ಪು' ಎಂದು ಕರೆಯುತ್ತದೆಯೋ ಅದನ್ನು ಕೂಡ ನಮ್ಮ ಒಳಗಿನ ಈ 'ಇದಂ' ಬಯಸಬಹುದು. ಈ ಹಿನ್ನೆಲೆಯಲ್ಲಿ ಹಯವದನ ನಾಟಕದ 'ಪದ್ಮಿನಿ'ಯ ಪಾತ್ರವನ್ನು ಗಮನಿಸಿದರೆ ಅವಳು ದೇವದತ್ತನ ಪತ್ನಿಯಾಗಿದ್ದರೂ, ಅವಳ ಒಳಗಿನ 'ಇದಂ' ಕಪಿಲನ ದೈಹಿಕ ಶಕ್ತಿಯನ್ನು ಬಯಸುತ್ತದೆ. "ಕಪಿಲ, ನಿನ್ನ ಈ ಮೈಕಟ್ಟು ಕಲ್ಲು ಕೆತ್ತಿದ ಶಿಲ್ಪದಂತಿದೆ.

ದೇವದತ್ತನಿಗೆ ಇಂತಹ ಚೈತನ್ಯ ಎಲ್ಲಿಂದ ಬರಬೇಕು?".[1] ಇಲ್ಲಿ ಅವಳ ಜಾಗೃತ ಮನಸ್ಸು ಸಮಾಜದ ಬಗ್ಗೆ ಯೋಚಿಸಿದರೆ, ಅವಳ ಸುಪ್ತ ಮನಸ್ಸಿನಲ್ಲಿ 'ಇದಂ' ಮಾತ್ರ ತನ್ನ ತೃಪ್ತಿಯನ್ನು ಹುಡುಕುತ್ತಿರುತ್ತದೆ. ಇದನ್ನೇ ಸಿಗ್ಮಂಡ್ ಫ್ರಾಯ್ಡ್'The dream is the (disguised) fulfilment of a (suppressed, repressed) wish'.[2] (ಕನಸು ಎಂಬುದು ದಮನಿತ ಬಯಕೆಯ ಒಂದು ಮರೆಮಾಚಿದ ಪೂರೈಕೆಯಾಗಿದೆ.). ಪದ್ಮಿನಿಯ ಬದುಕಿನಲ್ಲಿ ದೇವದತ್ತ ಮತ್ತು ಕಪಿಲ ಈ ಇಬ್ಬರೂ ಅವಳ ಅಪೂರ್ಣ ಬಯಕೆಗಳ ಪ್ರತಿರೂಪಗಳಾಗಿದ್ದಾರೆ. ಇಲ್ಲಿ ಪದ್ಮಿನಿ ದೇವದತ್ತನ ಬೌದ್ಧಿಕತೆಯನ್ನು ಗೌರವಿಸುತ್ತಾಳೆ, ಆದರೆ ಅವಳ 'ಇದಂ' ಕಪಿಲನ ಕಟ್ಟುಮಸ್ತಾದ ದೇಹವನ್ನು ಬಯಸುತ್ತದೆ. ಇಲ್ಲಿ ಫ್ರಾಯ್ಡ್‌ನ 'ಲಿಬಿಡೋ' ಸಿದ್ಧಾಂತವು (ಜೀವನದ ಮೂಲ ಬಯಕೆ) ಕೆಲಸ ಮಾಡುತ್ತದೆ. ಹಾಗೆಯೇ ಅವಳ ಬಯಕೆಯು ಕೇವಲ ಒಬ್ಬ ವ್ಯಕ್ತಿಗೆ ಸೀಮಿತವಾಗಿಲ್ಲ; ಅದು ಲಕಾನ್ ಹೇಳುವ 'Desire as Lack' (ಕೊರತೆಯ ಬಯಕೆ) ಎಂಬ ತತ್ವಕ್ಕೆ ಹತ್ತಿರವಾಗಿದೆ. ತನ್ನ ಪತಿಯಲ್ಲಿ ಇಲ್ಲದ ಶಕ್ತಿಯನ್ನು ಪದ್ಮಿನಿ ಕಪಿಲನಲ್ಲಿ ಹುಡುಕುತ್ತಾಳೆ.

ಹೀಗೆ, ಮನುಷ್ಯನ ಅಂತರಂಗದಲ್ಲಿ ಸುಪ್ತವಾಗಿ ಅಡಗಿರುವ ಈ ಬಯಕೆಗಳು ಮತ್ತು ಅವುಗಳನ್ನು ಪ್ರತಿನಿಧಿಸುವ 'ಇದಂ', ನಾಗರೀಕ ಸಮಾಜದ ನಿಯಮಗಳ ಜತೆ ಹೇಗೆ ಸಂಘರ್ಷಕ್ಕೆ ಇಳಿಯುತ್ತವೆ ಎಂಬುದನ್ನು ತಿಳಿಸುತ್ತವೆ. ಈ ಸಂಘರ್ಷವೇ ಮನುಷ್ಯನ ಬದುಕನ್ನು ಸಂಕೀರ್ಣಗೊಳಿಸುತ್ತದೆ ಮತ್ತು ಹಯವದನದಂತಹ ಪಾತ್ರಗಳ ಹುಟ್ಟಿಗೆ ಕಾರಣವಾಗುತ್ತದೆ.

2. ಬುದ್ಧಿ ಮತ್ತು ಶಕ್ತಿಯ ನಡುವಿನ ದ್ವಂದ್ವ (Intellect vs Strength)

ಮನುಷ್ಯ ಎನ್ನುವ ಪ್ರಾಣಿ ಕೇವಲ ಮಾಂಸಖಂಡಗಳಿಂದ ಮಾಡಲ್ಪಟ್ಟಿಲ್ಲ, ಹಾಗೆಯೇ ಕೇವಲ ಆಲೋಚನೆಗಳಿಂದಲೂ ಮಾಡಲ್ಪಟ್ಟಿಲ್ಲ. ನಮ್ಮ ಅಸ್ತಿತ್ವದ ಎರಡು ಚಕ್ರಗಳೆಂದರೆ ಅವು 'ಬುದ್ಧಿ' ಮತ್ತು 'ಶಕ್ತಿ'. ಈ ಎರಡರ ನಡುವಿನ ಸಮತೋಲನವೇ ಒಂದು ಯಶಸ್ವಿ ಬದುಕು. ಆದರೆ, ಇತಿಹಾಸದಾದ್ಯಂತ ಮತ್ತು ಪ್ರತಿಯೊಬ್ಬ ವ್ಯಕ್ತಿಯ ಅಂತರಂಗದಲ್ಲಿ ಈ ಎರಡರ ನಡುವೆ ಒಂದು ನಿರಂತರ ಯುದ್ಧ ನಡೆಯುತ್ತಲೇ ಇರುತ್ತದೆ. ಇದನ್ನೆ ನಾವು 'ಬುದ್ಧಿ ಮತ್ತು ಶಕ್ತಿಯ ದ್ವಂದ್ವ' ಎಂದು ಕರೆಯುತ್ತೇವೆ.

ಬುದ್ಧಿ ಮತ್ತು ಶಕ್ತಿ ಎಂದರೆ

- **ಬುದ್ಧಿ (Intellect) :** ಇದು ನಮ್ಮ ತಲೆಗೆ ಅಥವಾ ಮಿದುಳಿಗೆ ಸಂಬಂಧಿಸಿದ್ದು. ಇದು ಯೋಚನೆ, ತರ್ಕ, ಸಂಸ್ಕಾರ, ಕವಿತೆ ಮತ್ತು ನಾಗರೀಕತೆಯನ್ನು ಪ್ರತಿನಿಧಿಸುತ್ತದೆ. 'ಹಯವದನ' ನಾಟಕದಲ್ಲಿ 'ದೇವದತ್ತ' ಈ ಬೌದ್ಧಿಕತೆಯರೂಪ.
- **ಶಕ್ತಿ (Stength/Drive) :** ಇದು ನಮ್ಮ ದೇಹಕ್ಕೆ ಅಥವಾ ರಕ್ತಕ್ಕೆ ಸಂಬಂಧಿಸಿದ್ದು. ಇದು ವೇಗ, ಕಸುವು, ಲವಲವಿಕೆ ಮತ್ತು ನಿಸರ್ಗದತ್ತವಾದ ದೈಹಿಕ ಆಕರ್ಷಣೆಯನ್ನು ಪ್ರತಿನಿಧಿಸುತ್ತದೆ. 'ಕಪಿಲ' ಈ ಅದಮ್ಯ ಶಕ್ತಿಯ ರೂಪ.

ದ್ವಂದ್ವ ಎಲ್ಲಿ ಶುರುವಾಗುತ್ತದೆ ಎಂದರೆ ಸಾಮಾನ್ಯವಾಗಿ ನಾವು ಬುದ್ಧಿಯೇ ಶ್ರೇಷ್ಠ ಎಂದು ನಂಬುತ್ತೇವೆ. ತರ್ಕದಿಂದ ಏನನ್ನಾದರೂ ಸಾಧಿಸಬಹುದು ಎಂದುಕೊಳ್ಳುತ್ತೇವೆ. ಆದರೆ ನಮ್ಮ ದೇಹದ ಆಸೆಗಳು ಅಥವಾ ಶಕ್ತಿಯ ಸೆಳೆತವು ಬುದ್ಧಿಯ ಮಾತನ್ನು ಮೀರಿದಾಗ ದ್ವಂದ್ವ ಸೃಷ್ಟಿಯಾಗುತ್ತದೆ. ನಾವು ಏನನ್ನು ಮಾಡಬೇಕು ಎಂದು 'ಬುದ್ಧಿ' ಹೇಳುತ್ತದೆಯೋ, ಅದನ್ನು ಮಾಡಲು 'ದೇಹ' ಸಹಕರಿಸದಿದ್ದಾಗ ಅಥವಾ ದೇಹವು ಯಾವುದೋ ಹೊಸ ಹಾದಿಯನ್ನು ಬಯಸಿದಾಗ ಮನುಷ್ಯರು ಅತೃಪ್ತರಾಗುತ್ತಾರೆ.

'ಹಯವದನ' ನಾಟಕದಲ್ಲಿ ಕಾರ್ನಾಡರು ಇದೇ ದ್ವಂದ್ವವನ್ನು ಅತ್ಯಂತ ವಿಭಿನ್ನವಾಗಿ ಚಿತ್ರಿಸಿದ್ದಾರೆ. ದೇವದತ್ತ 'ಬುದ್ಧಿ'ಯನ್ನು ಪ್ರತಿನಿಧಿಸಿದರೆ, ಕಪಿಲ 'ಶಕ್ತಿ'ಯನ್ನು ಪ್ರತಿನಿಧಿಸುತ್ತಾನೆ. ಇವರ ತಲೆಗಳು ಅದಲು ಬದಲಾದಾಗ ನಾಟಕದಲ್ಲಿ ಭಾಗವತರು 'ಯಾರು ಯಾರಿಗೆ ಸೇರಿದವರು? ತಲೆ ಮನುಷ್ಯನದ್ದೋ ಅಥವಾ ದೇಹ ಮನುಷ್ಯನದ್ದೋ?'[3] ಸಂಭಾಷಣೆಯಿಂದ ಹುಟ್ಟಿಕೊಳ್ಳುವ

ಸಂಘರ್ಷವು ಮನೋವಿಜ್ಞಾನದ ಅತ್ಯಂತ ದೊಡ್ಡ ಚರ್ಚೆಯಾದ'Mind-Body Problem' ಅನ್ನು ಮುನ್ನೆಲೆಗೆ ತರುತ್ತದೆ. ಸಿಗ್ಮಂಡ್ ಫ್ರಾಯ್ಡ್ ಬುದ್ಧಿ ಮತ್ತು ಶಕ್ತಿಯ ಸಂಬಂಧವನ್ನು ವಿವರಿಸುತ್ತಾ 'The ego's relation to the id might be compared with that of a rider to his horse; the horse supplies the locomotive energy, while the rider has the privilege of deciding on the goal,"[4] ('ಅಹಂ ಮತ್ತು ಇದಂ ನಡುವಿನ ಸಂಬಂಧವನ್ನು ಒಬ್ಬ ಸವಾರ ಮತ್ತು ಅವನ ಕುದುರೆಯ ನಡುವಿನ ಸಂಬಂಧಕ್ಕೆ ಹೋಲಿಸಬಹುದು; ಕುದುರೆಯು ಚಲಿಸಲು ಬೇಕಾದ ಶಕ್ತಿಯನ್ನು ಒದಗಿಸಿದರೆ, ಸವಾರನು ಆ ಶಕ್ತಿಯನ್ನು ನಿಯಂತ್ರಿಸಿ ಗುರಿಯನ್ನು ನಿರ್ಧರಿಸುವ ಹಕ್ಕನ್ನು ಹೊಂದಿರುತ್ತಾನೆ.) ಎನ್ನುತ್ತಾನೆ. ನಾಟಕದಲ್ಲಿ ದೇವದತ್ತನ ತಲೆ (ಸವಾರ) ಕಪಿಲನ ದೇಹವನ್ನು (ಕುದುರೆ) ನಿಯಂತ್ರಿಸಲು ಪ್ರಯತ್ನಿಸುತ್ತದೆ. ಆದರೆ, ಕಾಲಕ್ರಮೇಣ ಕುದುರೆಯ ಶಕ್ತಿಯೇ ಸವಾರನ ದಾರಿಯನ್ನು ನಿರ್ಧರಿಸುತ್ತದೆ. ಅಂದರೆ ದೈಹಿಕ ಶಕ್ತಿಯು ಬೌದ್ಧಿಕತೆಯನ್ನು ಸೋಲಿಸುತ್ತದೆ.

3. ದೇಹದ ಸ್ಮೃತಿ ಮತ್ತು ಜೈವಿಕ ನಿರ್ಧಾರವಾದ(Body Memory)

ಸಾಮಾನ್ಯವಾಗಿ ನಾವು 'ನೆನಪು' ಅಥವಾ 'ಸ್ಮೃತಿ' ಎಂದರೆ ಅದು ಕೇವಲ ನಮ್ಮ ಮೆದುಳಿಗೆ ಸಂಬಂಧಿಸಿದ್ದು ಎಂದು ಭಾವಿಸುತ್ತೇವೆ. ನಾವು ಓದಿದ್ದು, ನೋಡಿದ್ದು ಅಥವಾ ಕೇಳಿದ್ದು ಮಾತ್ರ ನೆನಪಿರುತ್ತದೆ ಅಂದುಕೊಳ್ಳುತ್ತೇವೆ. ಆದರೆ, ಮನೋವಿಜ್ಞಾನ ಮತ್ತು ಜೀವವಿಜ್ಞಾನದ ಪ್ರಕಾರ ನಮ್ಮ ದೇಹದ ಪ್ರತಿಯೊಂದು ಸ್ನಾಯು ಮತ್ತು ಜೀವಕೋಶಕ್ಕೂ ತನ್ನದೇ ಆದ 'ಸ್ಮೃತಿ' ಇರುತ್ತದೆ. ಇದನ್ನೇ ನಾವು 'ದೇಹದ ಸ್ಮೃತಿ'(Body Memory) ಎಂದು ಕರೆಯುತ್ತೇವೆ. ಅಂದರೆ ಒಬ್ಬ ಈಜುಗಾರ ಅಥವಾ ಸೈಕಲ್ ಸವಾರ ಎಷ್ಟೇ ವರ್ಷಗಳ ನಂತರ ಮತ್ತೆ ನೀರಿಗಿಳಿದರೂ ಅಥವಾ ಸೈಕಲ್ ಏರಿದರೂ ಅವನ ದೇಹಕ್ಕೆ ಅದು ಹೇಗೆ ಮಾಡಬೇಕೆಂದು ನೆನಪಿರುತ್ತದೆ. ಮೆದುಳು ಯೋಜಿಸುವ ಮೊದಲೇ ಕೈ ಕಾಲುಗಳು ಕೆಲಸ ಮಾಡಲು ಶುರುಮಾಡುತ್ತವೆ. ಅಂದರೆ ನಮ್ಮ ಅಭ್ಯಾಸಗಳು, ಕೌಶಲಗಳು ಮತ್ತು ಗುಣಲಕ್ಷಣಗಳು ನಮ್ಮ ದೇಹದ ಒಳಗೇ ಅಚ್ಚೊತ್ತಿರುತ್ತವೆ.

ಜೈವಿಕ ನಿರ್ಧಾರವಾದ ಎಂದರೆ ಇದು ಸ್ವಲ್ಪ ಗಂಭೀರವಾದ ವಿಷಯ. ಇದರ ಸರಳ ಅರ್ಥವೆಂದರೆ ನಮ್ಮ ಬದುಕು. ನಮ್ಮ ವರ್ತನೆ ಮತ್ತು ಬದುಕಿನ ವಿಧಿಯನ್ನು ನಮ್ಮಲ್ಲಿರುವ ಜೈವಿಕ ಅಂಶಗಳು (ರಕ್ತ, ಸ್ನಾಯು, ವಂಶವಾಹಿ) ನಿರ್ಧರಿಸುತ್ತವೆ ಎಂಬುದು ಅಂದರೆ, ನಮ್ಮ ಬುದ್ಧಿ ಅಥವಾ ಆಲೋಚನೆಗಿಂತಲೂ ನಮ್ಮ ದೇಹದ ಗುಣಗಳೇ ನಮ್ಮನ್ನು ಆಳುತ್ತವೆ ಎಂಬ ವಾದವಿದು.

ಗಿರೀಶ್ ಕಾರ್ನಾಡರು ಈ ಸಿದ್ಧಾಂತವನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ. ದೇವದತ್ತ ಮತ್ತು ಕಪಿಲ ತಮ್ಮ ತಲೆಗಳು ಅದಲು ಬದಲಾದಾಗ 'ಈ ದೇಹ ನನ್ನದು, ಆದರೆ ಈ ಕೈಗಳು ಬರೆಯಲು ಒಲವು ತೋರುತ್ತಿವೆ. ಈ ತಲೆ ನನ್ನದು, ಆದರೆ ಈ ಕಾಲುಗಳು ಕಾಡಿನ ಹಾದಿಯನ್ನು ಹುಡುಕುತ್ತಿವೆ'.[5] ಈ ಮೂಲಕ ದೇಹಸ್ಮೃತಿ ಮತ್ತು ಮೆದುಳಿನ ಸ್ಮೃತಿಯ ನಡುವಿನ ಸಂಘರ್ಷವನ್ನು ತೆರೆದಿಡುತ್ತಾರೆ. ತಲೆಗಳು ಬದಲಾದ ನಂತರವೂ ಕಪಿಲನ ದೇಹವು ಮತ್ತೆತನ್ನ ಹಳೆಯ ಕಸುವು ಮತ್ತು ಒರುಟುತನಕ್ಕೆ ಮರಳುತ್ತದೆ. ಇದನ್ನು ವಿಲ್ಹೆಲ್ಮ್ ರೀಚ್ ಹೇಳುವಂತೆ 'Every muscular rigidity contains the history and the meaning of its origin'.[6] (ಪ್ರತಿಯೊಂದು ಸ್ನಾಯುವಿನ ಬಿಗಿತ ಅಥವಾ ಜಡತ್ವವು ಕೂಡ ತನ್ನ ಉಗಮದ ಇತಿಹಾಸವನ್ನು ಮತ್ತು ಅರ್ಥವನ್ನು ತನ್ನಲೇ ಒಳಗೊಂಡಿರುತ್ತದೆ.) ಕಪಿಲನ ಸ್ನಾಯುಗಳಲ್ಲಿ ಅವನ ಕಾಡಿನ ಬದುಕು, ಅವನ ಶ್ರಮ ಮತ್ತು ಅವನ ಶಕ್ತಿ ಅಡಗಿದೆ. ದೇವದತ್ತನತಲೆ ಎಷ್ಟೇ ಸಂಸ್ಕಾರಯುತವಾಗಿದ್ದರೂ, ಆ ದೇಹವು ತನ್ನ 'ಜೈವಿಕ ಸ್ಮೃತಿ'ಯನ್ನು ಬಿಟ್ಟುಕೊಡುವುದಿಲ್ಲ. ಇದು ಆಧುನಿಕ ಮನೋವಿಜ್ಞಾನಿ ಆಂಟೋನಿಯೊ ಡಮಾಸಿಯೊ ಹೇಳುವ 'The body… provides a ground for the very representations that constitute the mind'.[7] (ನಮ್ಮ ಮನಸ್ಸನ್ನು ರೂಪಿಸುವ ಪ್ರತಿಯೊಂದು ಆಲೋಚನೆ ಮತ್ತು ಪ್ರತಿನಿಧೀಕರಣಗಳಿಗೆ ಈ ದೇಹವೇ ಮೂಲಭೂತವಾದ ಅಡಿಪಾಯವನ್ನು ಒದಗಿಸುತ್ತದೆ.) ಅಂದರೆ ಮನಸ್ಸು ದೇಹದಿಂದ

ಬೇರೆಯಲ್ಲ, ದೇಹವೇ ಮನಸ್ಸಿನ ಅಡಿಪಾಯ ಎಂಬುದನ್ನು ಸ್ಪಷ್ಟಗೊಳಿಸುತ್ತವೆ. ಇದು ನಾಟಕದಲ್ಲಿ ದೇವದತ್ತನ ಬುದ್ಧಿವಂತಿಕೆ ತಲೆಗೆ ಕಪಿಲನ ಕಟ್ಟುಮಸ್ತಾದ ದೇಹ ಸಿಕ್ಕಾಗ, ಆರಂಭದಲ್ಲಿ ದೇವದತ್ತನ ತರ್ಕವು ಆ ದೇಹವನ್ನು ನಿಯಂತ್ರಿಸುತ್ತದೆ. ಆದರೆ ಕಾಲಕ್ರಮೇಣ, ಕಪಿಲನ ದೇಹವು ತನ್ನ ಸ್ಮೃತಿಯನ್ನು ಮರೆಯುವುದಿಲ್ಲ. ಆ ದೇಹಕ್ಕೆ ಕಾಡಿನದಾರಿ, ಮರ ಏರುವ ಕಸುವು ಮತ್ತು ಒರಟುತನ ರಕ್ತದಲ್ಲೇ ಬಂದಿರುತ್ತದೆ. ದೇವದತ್ತನ ತಲೆ ಎಷ್ಟೇ ನಾಗರೀಕವಾಗಿ ಯೋಚಿಸಿದರೂ, ದೇಹವು ತನ್ನ ಹಳೆಯ ಜೈವಿಕ ಗುಣಕ್ಕೆ ಮರಳುತ್ತದೆ.

4. ಪೂರ್ಣತೆಯ ಹಂಬಲ ಮತ್ತು ಅಬ್ರಹಾಂ ಮಾಸ್ಲೋ ಸಿದ್ಧಾಂತ

ಮನುಷ್ಯರಿಗೆ ತಾವು ಎಷ್ಟೇ ಸುಖವಾಗಿದ್ದರೂ ಎಲ್ಲೋ ಒಂದು ಕಡೆ 'ನಾನು ಅಪೂರ್ಣ' ಎಂಬ ಭಾವನೆ ಕಾಡುತ್ತಲೇ ಇರುತ್ತದೆ. ನಮಗೆ ಏನಿದೆಯೋ ಅದರ ಬಗ್ಗೆ ತೃಪ್ತಿ ಪಟ್ಟುಕೊಳ್ಳುವ ಬದಲು, ನಮ್ಮಲ್ಲಿ ಇಲ್ಲದಿರುವುದರ ಬಗ್ಗೆ ನಾವು ಹೆಚ್ಚು ಚಿಂತಿಸುತ್ತೇವೆ. ಮನುಷ್ಯರ ಈ ಹಂಬಲವನ್ನೇ ನಾವು 'ಪೂರ್ಣತೆಯ ಹುಡುಕಾಟ' ಎನ್ನಬಹುದು. ಮನಃಶಾಸ್ತ್ರಜ್ಞ ಅಬ್ರಹಾಂ ಮಾಸ್ಲೋ ಅವರು ಮನುಷ್ಯರ ಈ ಬಯಕೆಗಳನ್ನೇ ಆಧಾರವಾಗಿಟ್ಟುಕೊಂಡು ಒಂದು ಸುಂದರವಾದ ಸಿದ್ಧಾಂತವನ್ನು ಮಂಡಿಸಿದ್ದಾರೆ.

ಮಾಸ್ಲೋ ಅವರ ಪ್ರಕಾರ, ಮನುಷ್ಯರ ಬಯಕೆಗಳು ಒಂದು ಏಣಿಯಂತೆ ಇರುತ್ತವೆ. ಮೊದಲಿಗೆ ನಮಗೆ ಹಸಿವು, ನಿದ್ರೆಯಂತಹ ದೈಹಿಕ ಅಗತ್ಯಗಳು ಬೇಕು. ಅದು ಸಿಕ್ಕ ಮೇಲೆ ನಮಗೆ ಭದ್ರತೆ ಬೇಕು. ನಂತರ ಪ್ರೀತಿ–ಗೌರವ ಬೇಕು. ಕೊನೆಯಲ್ಲಿ ನಾವು ನಮ್ಮಜೀವನದ ಪರಮ ಉದ್ದೇಶವನ್ನು ಅಥವಾ 'ಆತ್ಮ ಸಾಕ್ಷಾತ್ಕಾರ'ವನ್ನು(Self-actualization) ಹುಡುಕುತ್ತೇವೆ. ಮನುಷ್ಯ ಎಂಬ ಬಯಕೆಗಳ ಪ್ರಾಣಿಗೆ ಒಂದು ಬಯಕೆ ತೀರುತ್ತಿದ್ದಂತೆ ಮತ್ತೊಂದು ಹೊಸ ಬಯಕೆ ಹುಟ್ಟಿಕೊಳ್ಳುತ್ತದೆ.

ಪೂರ್ಣತೆ ಎಂದರೆ ನಮಗೆ ಬೇಕಾದ ಎಲ್ಲವೂ ಒಂದೇ ಕಡೆ ಇರುವುದು. ಆದರೆ ಜಗತ್ತಿನಲ್ಲಿ ಯಾವುದೂ ಸಂಪೂರ್ಣವಾಗಿಲ್ಲ. ಕಾರ್ನಾಡರ 'ಹಯವದನ' ನಾಟಕದಲ್ಲಿ ಪ್ರತಿಯೊಂದು ಪಾತ್ರವೂ ಈ ಪೂರ್ಣತೆಗಾಗಿ ಹಾತೊರೆಯುತ್ತವೆ. ದೇವದತ್ತನ ಬುದ್ಧಿವಂತ ತಲೆಗೆ ಕಪಿಲನ ಕಟ್ಟುಮಸ್ತಾದ ದೇಹ ಸಿಕ್ಕಾಗ, ಆರಂಭದಲ್ಲಿ ಅದು 'ಪೂರ್ಣತೆ' ಎಂದು ಕಂಡರೂ, ಕಾಲಕ್ರಮೇಣ ಅವೆರಡರ ನಡುವೆ ಸಂಘರ್ಷ ಏರ್ಪಡುತ್ತದೆ, ಬುದ್ಧಿಯು ದೇಹವನ್ನು ಆಳಲು ಪ್ರಯತ್ನಿಸಿದರೆ, ದೇಹವು ತನ್ನ ಹಳೆಯ ಗುಣಗಳನ್ನು ಮರೆಯಲು ಒಪ್ಪುವುದಿಲ್ಲ. ಇದು ನಾಟಕದ ಆರಂಭದಲ್ಲಿ ಹಯವದನನು ತನ್ನ ಸ್ಥಿತಿಯ ಬಗ್ಗೆ ಹೇಳುವ ಮಾತುಗಳು ಇಡೀ ಮಾನವ ಕುಲದ ಅತೃಪ್ತಿಯನ್ನು ಸೂಚಿಸುತ್ತವೆ. "ನನಗೆ ಈ ಕುದುರೆಯ ಮುಖ ಬೇಡ, ಸಂಪೂರ್ಣ ಮನುಷ್ಯನಾಗಬೇಕು ಅಥವಾ ಸಂಪೂರ್ಣ ಕುದುರೆಯಾಗಬೇಕು, ಈ ಅರ್ಧಚಂದ್ರಾಕೃತಿಯ ಬದುಕು ಬೇಡ".[8] ಇದು 'ಪೂರ್ಣತೆ'ಯನ್ನು ಅರಸುವ ಮನಸ್ಸಿನ ಹಂಬಲ. ಮನುಷ್ಯ ಯಾವಾಗಲೂ ತನ್ನಲ್ಲಿಲ್ಲದ ಒಂದರ ಬಗ್ಗೆ ಹಂಬಲಿಸುತ್ತಾ, ತನ್ನಲ್ಲಿ ಇರುವುದನ್ನು ಕಡೆಗಣಿಸುವ ಮನೋವೈಜ್ಞಾನಿಕ ಪ್ರವೃತ್ತಿಯನ್ನು ಇದು ಬಿಂಬಿಸುತ್ತದೆ. ಆದರೆ ಪದ್ಮಿನಿಗೆ ಬುದ್ಧಿವಂತ ಪತಿ ಮತ್ತು ಬಲಿಷ್ಠ ಗೆಳೆಯ ಇಬ್ಬರ ಗುಣಗಳೂ ಒಬ್ಬನೇ ವ್ಯಕ್ತಿಯಲ್ಲಿ ಬೇಕು. ಅವಳ ದೃಷ್ಟಿಯಲ್ಲಿ ಅದೇ 'ಪೂರ್ಣತೆ'.

ಮನುಷ್ಯರ ದುರಂತವೇನೆಂದರೆ ನಾವು ಪೂರ್ಣತೆಯನ್ನು ಹುಡುಕುತ್ತಾ ಹೋದಂತೆಲ್ಲಾ ನೆಮ್ಮದಿಯನ್ನು ಕಳೆದುಕೊಳ್ಳುತ್ತೇವೆ. ಹಯವದನನು ಕೊನೆಗೆ ಸಂಪೂರ್ಣ ಮನುಷ್ಯನಾಗುವ ಬದಲು ಸಂಪೂರ್ಣ ಕುದುರೆಯಾಗುತ್ತಾನೆ. ಪದ್ಮಿನಿ ಇಬ್ಬರ ಗುಣವಿರುವ ವ್ಯಕ್ತಿಯನ್ನು ಪಡೆದರೂ ಅವಳು ನೆಮ್ಮದಿಯಿಂದ ಇದ್ದುದರಲ್ಲಿ ತೃಪ್ತಿ ಪಡೆಯುವುದಿಲ್ಲ. ಅದು ಯಾವಾಗಲೂ 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ...' ಎನ್ನುವಂತೆ ಓಡುತ್ತಿರುತ್ತದೆ ಎಂದು ಮಾಸ್ಲೋ ಅವರ ಸಿದ್ಧಾಂತ ಮತ್ತು ಹಯವದನ ನಾಟಕ ನಮಗೆ ನೆನಪಿಸುತ್ತದೆ.

5. ಸೂಪರ್ ಇಗೋ ಮತ್ತು ಸಮಾಜದ ನೈತಿಕತೆಯ ಸಂಘರ್ಷ (Superego vs Society)

ಮನುಷ್ಯ ಕೇವಲ ತನ್ನ ಬಯಕೆಗಳಿಗಾಗಿ ಬದುಕುವ ಪ್ರಾಣಿಯಲ್ಲ ಮನುಷ್ಯ ಸಮಾಜದ ಒಂದು ಭಾಗ. ನಮ್ಮ ಮನಸ್ಸಿನ ಒಳಗಡೆ ನಾವು ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂದು ನಿರ್ದೇಶಿಸುವ ಒಂದು 'ಅಂತರಾತ್ಮ' ಇರುತ್ತದೆ.

ಇದನ್ನು ಮನೋವಿಜ್ಞಾನದಲ್ಲಿ ಸಿಗ್ಮಂಡ್ ಫ್ರಾಯ್ಡ್ 'ಸೂಪರ್ ಇಗೋ' (Superego) ಅಥವಾ 'ಪರಮಹಂ' ಎಂದು ಕರೆದಿದ್ದಾರೆ. ಇದು ನಮ್ಮ ಮನಸ್ಸಿನೊಳಗಿನ ಒಬ್ಬ ಕಟ್ಟುನಿಟ್ಟಾದ ನ್ಯಾಯಾಧೀಶನಿದ್ದಂತೆ. ಈ 'ಸೂಪರ್ ಇಗೋ' ಎಂದರೆ ನಮ್ಮ ಬಾಲ್ಯದಿಂದಲೂ ತಂದೆ–ತಾಯಿ, ಗುರುಗಳು ಮತ್ತು ಸಮಾಜ ನಮಗೆ ಕಲಿಸಿದ ನೀತಿ–ಪಾಠಗಳು, ನಿಯಮಗಳು ಮತ್ತು ಸಂಪ್ರದಾಯಗಳೇ ನಮ್ಮಲ್ಲಿ 'ಸೂಪರ್ ಇಗೋ' ಆಗಿ ರೂಪಿತವಾಗುತ್ತವೆ. ಇದು ನಮಗೆ ಸರಿ–ತಪ್ಪುಗಳ ಅರಿವು ಮೂಡಿಸುತ್ತದೆ. ನಮ್ಮ ಒಳಗಿನ ಬಯಕೆಗಳು (ಇದಂ) ಯಾವುದೋ ಒಂದು ತಪ್ಪು ಹಾದಿಯನ್ನು ತುಳಿಯಲು ಬಯಸಿದಾಗ, ಈ ಸೂಪರ್ ಇಗೋ ಅದನ್ನು ತಡೆದು ನಿಲ್ಲಿಸುತ್ತದೆ ಮತ್ತು ಒಂದು ವೇಳೆ ನಾವು ತಪ್ಪು ಮಾಡಿದರೆ ನಮ್ಮಲ್ಲಿ 'ಅಪರಾಧೀ ಮನೋಭಾವ' (Guilt) ಮೂಡಿಸುತ್ತದೆ.

ಹಾಗೆಯೇ ಸಮಾಜ ಮತ್ತು ನೈತಿಕತೆಯ ಸಂಘರ್ಷವನ್ನು ನೋಡುವುದಾದರೆ. ಸಮಾಜವು ಯಾವಾಗಲೂ ಕೆಲವು ಕಟ್ಟುಪಾಡುಗಳನ್ನು ವಿಧಿಸಿರುತ್ತದೆ. ಉದಾಹರಣೆಗೆ, ಒಬ್ಬ ಹೆಣ್ಣು ಮದುವೆಯ ನಂತರ ತನ್ನ ಪತಿಯನ್ನೇ ಪ್ರೀತಿಸಬೇಕು ಎಂಬುದು ಸಾಮಾಜಿಕ ನೈತಿಕತೆ. ಆದರೆ ಮನುಷ್ಯರ ಸಹಜ ಬಯಕೆಗಳು ಈ ನಿಯಮಗಳನ್ನು ಮೀರಿ ನಿಲ್ಲಲು ಪ್ರಯತ್ನಿಸಿದಾಗ ದೊಡ್ಡ ಸಂಘರ್ಷ ಶುರುವಾಗುತ್ತದೆ. ಈ ಸಂಘರ್ಷವು ವ್ಯಕ್ತಿಯ ಒಳಮನಸ್ಸಿನಲ್ಲೂ ನಡೆಯುತ್ತದೆ ಮತ್ತು ಹೊರಗಿನ ಸಮಾಜದೊಂದಿಗೂ ನಡೆಯುತ್ತದೆ.

ಹಯವದನ ನಾಟಕದಲ್ಲಿ ಗಿರೀಶ್ ಕಾರ್ನಾಡರು ಈ ಸಂಘರ್ಷವನ್ನು ಪದ್ಮಿನಿಯ ಪಾತ್ರದ ಮೂಲಕ ಅಚ್ಚುಕಟ್ಟಾಗಿ ತೋರಿಸಿದ್ದಾರೆ. ಪದ್ಮಿನಿಯು ದೇವದತ್ತ ಮತ್ತು ಕಪಿಲ ಇಬ್ಬರನ್ನೂ ಇಷ್ಟಪಡುತ್ತಾಳೆ. ಅವಳ ಒಳಗಿನ 'ಇದಂ' ಅಥವಾ ಬಯಕೆಯು ಇಬ್ಬರನ್ನೂ ಬಯಸುತ್ತದೆ. ಆದರೆ ಅವಳ 'ಸೂಪರ್ ಇಗೋ' ಅಥವಾ ಸಮಾಜದ ನೈತಿಕತೆಯು ಅವಳನ್ನು ತಡೆಯುತ್ತದೆ. ತಲೆಗಳು ಬದಲಾದ ನಂತರ ಪದ್ಮಿನಿ ಪಡೆಯುವ ಸುಖವು ಸಮಾಜದ ದೃಷ್ಟಿಯಲ್ಲಿ ವಿಚಿತ್ರವಾದುದು. ಕೊನೆಯಲ್ಲಿ ದೇವದತ್ತ ಮತ್ತು ಕಪಿಲ ಇಬ್ಬರೂ ಕಾಳಿ ದೇವಿಯ ಮುಂದೆ ತಮ್ಮ ತಲೆಗಳನ್ನು ಅರ್ಪಿಸಿಕೊಳ್ಳುವುದರ ಮೂಲಕ ಆತ್ಮಹತ್ಯೆ ಮಾಡಿಕೊಳ್ಳುವುದು ಮತ್ತು ಪದ್ಮಿನಿ 'ಸತಿ' ಹೋಗುವುದು ಅವರ ಒಳಗಿನ ಸೂಪರ್ ಇಗೋ ನೀಡಿದ 'ಶಿಕ್ಷೆ'ಯಂತಿದೆ. ಇದನ್ನು ಸಿಗ್ಮಂಡ್ ಫ್ರಾಯ್ಡ್ ಸಮಾಜವು ಮನುಷ್ಯರ ಸಹಜ ಬಯಕೆಗಳನ್ನು ಹತ್ತಿಕ್ಕುತ್ತದೆ ಎಂದಿದ್ದಾನೆ. ಅಂದರೆ ಸಮಾಜದ ನೈತಿಕ ಕಟ್ಟಳೆಗಳನ್ನು ಮೀರಿದಾಗ ಮನುಷ್ಯ ಅನುಭವಿಸುವ ಮಾನಸಿಕ ಹಿಂಸೆ ಮತ್ತು ಅದರ ಅಂತಿಮ ದುರಂತವೇ ಈ ಸಂಘರ್ಷದ ಸಾರ. ಹೀಗೆ ಮನುಷ್ಯರ ವೈಯಕ್ತಿಕ ಬಯಕೆಗಳು ಮತ್ತು ಸಮಾಜದ ನೈತಿಕತೆಯ ನಡುವಿನ ಈ ಜಟಾಪಟಿಯು ಬದುಕನ್ನು ಹೇಗೆ ಅಸ್ತವ್ಯಸ್ತಗೊಳಿಸುತ್ತದೆ ಎಂಬುದನ್ನು ಹಯವದನ ನಾಟಕವು ಮನೋವಿಜ್ಞಾನವಾಗಿ ತೆರೆದಿಡುತ್ತದೆ.

ಒಟ್ಟಾರೆಯಾಗಿ ನಾಟಕದ ಅಂತ್ಯದಲ್ಲಿ ಹಯವದನನು ಸಂಪೂರ್ಣ ಕುದುರೆಯಾಗುತ್ತಾನೆ ಮತ್ತು ಪದ್ಮಿನಿಯ ಮಗು ಮೌನವನ್ನು ಮುರಿದು ನಗುತ್ತದೆ. ಮನೋವಿಶ್ಲೇಷಣೆಯ ದೃಷ್ಟಿಯಲ್ಲಿ 'ನಗು' ಎಂಬುದು ದಮನಿತ ಭಾವನೆಗಳ ಬಿಡುಗಡೆ(Catharsis). ಮತ್ತು ವಿಕ್ಟರ್ ಫ್ರಾಕಲ್ ಅವರು ಹೇಳುವಂತೆ ಬದುಕಿನ ಅರ್ಥವು ಕೇವಲ ದೈಹಿಕ ಬೌದ್ಧಿಕ ಪೂರ್ಣತೆಯಲ್ಲಿದೆ ಎಂಬುದಕ್ಕಿಂತ, ನಾವು ಇರುವ ಸ್ಥಿತಿಯಲ್ಲಿ 'ಸಹಜತೆ'ಯನ್ನು ಕಂಡುಕೊಳ್ಳುವುದರಲ್ಲಿದೆ.

ಕೊನೆ ಟಿಪ್ಪಣಿ,

1. ಹಯವದನ–ಗಿರೀಶ್ ಕಾರ್ನಡ್; ಮನೋಹರ ಗ್ರಂಥಮಾಲಾ, 1971 ಧಾರವಾಡ, ಪು.24–25
2. Freud, S. (1900). The Interpretation of Dreams. Franz Deuticke. p160
3. ಹಯವದನ–ಗಿರೀಶ್ ಕಾರ್ನಡ್; ಮನೋಹರ ಗ್ರಂಥಮಾಲಾ, 1971 ಧಾರವಾಡ, ಪು.22
4. Freud, S. (1933). New Introductory Lectures on Psycho-analysis. W. W. Norton & Company. p.77

5. ಹಯವದನ, ಗಿರೀಶ್ ಕಾರ್ನಡ್; ಮನೋಹರ ಗ್ರಂಥಮಾಲಾ, 1971 ಧಾರವಾಡ, ಪು.38–39

6. Reich, W. (1933). Character Analysis. Orgone Institute Press. p.158

7. Damasio, A. (1994). Descartes' Error. G.P. Putnam's Sons. p.245

8. ಹಯವದನ–ಗಿರೀಶ್ ಕಾರ್ನಡ್; ಮನೋಹರ ಗ್ರಂಥಮಾಲಾ, 1971 ಧಾರವಾಡ, ಪು.4–5

ಗ್ರಂಥಋಣ (References)

1. ಹಯವದನ–ಗಿರೀಶ್ ಕಾರ್ನಡ್; ಮನೋಹರ ಗ್ರಂಥಮಾಲಾ, 1971 ಧಾರವಾಡ.

2. Freud, S. (1900). The Interpretation of Dreams. Franz Deuticke.

3. Freud, S. (1933). New Introductory Lectures on Psycho-analysis. W. W. Norton & Company.

4. Reich, W. (1933). Character Analysis. Orgone Institute Press.

5. Damasio, A. (1994). Descartes' Error. G.P. Putnam's Sons.

6. Maslow, A. (1954). Motivation and Personality. Harper & Row.

7. Goleman, D. (1995). Emotional Intelligence.Bantam Books.

ಸಾಹಿತ್ಯ ಮತ್ತು ಮನೋವಿಜ್ಞಾನದ ಅಂತಃಸಂಬಂಧ

ಬಾಬು ನಾಯ್ಕ್
ಸಹಾಯಕ ಪ್ರಾಧ್ಯಾಪಕರು
ಎನ್.ಐ.ಇ. ಪ್ರಥಮ ದರ್ಜೆ ಕಾಲೇಜು, ಮೈಸೂರು.

ಮನುಷ್ಯನ ಭಾವ ವಲಯವನ್ನು ಸಮೃದ್ಧ ಹಾಗೂ ಸೂಕ್ಷ್ಮವಾಗಿ ಅಭಿವ್ಯಕ್ತಿಸಬಲ್ಲ ಸಶಕ್ತ ಮಾಧ್ಯಮ ಎಂದರೆ ಸಾಹಿತ್ಯ, ಒಂದು ಸಾಹಿತ್ಯ ಕೃತಿಯು ಸಾಹಿತ್ಯ ಕೃತಿ ಹೌದೋ ಅಲ್ಲವೋ ಎಂಬುದನ್ನು ನಿರ್ಧರಿಸಲು ಸಾಹಿತಿಕ ಮಾನದಂಡಗಳು ಸಾಕಾಗುತ್ತದೆ ಆದರೆ ಅದು ಶ್ರೇಷ್ಠ ಸಾಹಿತ್ಯ ಕೃತಿ ಹೌದೋ ಅಲ್ಲವೋ ಎಂಬುದನ್ನು ನಿರ್ಧರಿಸಲು ಸಾಹಿತ್ಯತೇರ ಮಾನದಂಡಗಳು ಬೇಕಾಗುತ್ತದೆ ಎಂಬ ಟಿ.ಎಸ್. ಎಲಿಯಟ್‌ನ ಹೇಳಿಕೆಯಂತೆ ಸಾಹಿತ್ಯವು ಅನ್ಯಜ್ಞಾನ ಶಿಸ್ತುಗಳಾದ ತತ್ವಶಾಸ್ತ್ರ, ವಿಜ್ಞಾನ, ಕಲೆ, ಸಮಾಜಶಾಸ್ತ್ರ, ತಂತ್ರಜ್ಞಾನ ಸೇರಿದಂತೆ ಅನೇಕ ಜ್ಞಾನಶಿಸ್ತುಗಳೊಂದಿಗೆ ಅಂತಃಸಂಬಂಧವನ್ನು ಹೊಂದಿರಬೇಕಾಗುತ್ತದೆ. ಅದರಲ್ಲಿಯು ಸಾಹಿತ್ಯ ಮತ್ತು ಮನೋವಿಜ್ಞಾನ ಪರಸ್ಪರ ಪ್ರಭಾವ ಮತ್ತು ಪ್ರೇರಣೆಯ ದೃಷ್ಟಿಯಿಂದ ಘನಿಷ್ಠವಾದ ಸಂಪರ್ಕವನ್ನು ಹೊಂದಿವೆ ಎನ್ನಬಹುದು. ಮನುಷ್ಯ ಮತ್ತು ಆತನ ಮನಸ್ಸಿನ ವರ್ತನೆಯನ್ನು ಅಭ್ಯಾಸಿಸುವುದೇ ಮನೋವಿಜ್ಞಾನ ಮತ್ತು ಸಾಹಿತ್ಯದ ಅಧ್ಯಯನ ಸಾಮಾಗ್ರಿಯಾಗಿದೆ, ಮನುಷ್ಯನು ಇಂದು ಆಧುನಿಕತೆ ಮತ್ತು ಒತ್ತಡದ ಬದುಕಿನಲ್ಲಿ ತೊಳಲಾಡುತ್ತಿರುವ ಮನಸ್ಸಿನ ಒಳಗಿನ ಭಾವನೆಗಳ ರೂಪಾಂತರವನ್ನು ಸಾಹಿತ್ಯವು ಮನೋವಿಜ್ಞಾನದ ನೆಲೆಯಲ್ಲಿ ನೋಡುವ ವಿಶ್ಲೇಷಿಸುವ ರೀತಿ ಪರಿಣಾಮಕಾರಿಯಾಗಿದ್ದು ಹಾಗೂ ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕೆ ಈ ಎರಡು ಜ್ಞಾನ ಶಾಖೆಗಳ ಕೊಡುಗೆ ಅಪಾರ, ಇವು ಮನುಷ್ಯನ ಸುಪ್ತಪ್ರಜ್ಞೆಯ ಆಳದಲ್ಲಿ ಹುದುಗಿರುವ ರೂಪಾಂತರಗಳ ಕುರಿತು ಹೊಸ ಬೆಳಕನ್ನು ಚೆಲ್ಲುವ ಮೂಲಕ ಮನುಷ್ಯನ ಮನೋ ವ್ಯಾಪಾರಗಳ ಅಧ್ಯಯನವಾದ್ದರಿಂದ ಈ ಎರಡೂ ಕ್ಷೇತ್ರಗಳಿಗೂ ಮನಸ್ಸು ಮತ್ತು ಸಮಾಜವೆ ಅಧ್ಯಯನ ವಸ್ತು ಆಗಿವೆ, ಮಾನವನ ಮನಸ್ಸು ಎಲ್ಲ ವಿಜ್ಞಾನ ಮತ್ತು ಕಲೆಗಳ ಮೂಲ ಸ್ಥಾನವಾಗಿದ್ದು, ವರ್ತಮಾನದ ಬದುಕಿನಲ್ಲಿ ಪರಸ್ಪರ ಸ್ಪಂದನೆ, ಅಭಿವ್ಯಕ್ತಿ, ಬಾಂಧವ್ಯ, ಕರುಣೆ, ಮಾನವೀಯತೆಗಳಂತಹ ಮೂಲ ಗುಣಗಳನ್ನು ಮರೆಯುತ್ತಿರುವ ಸಂದರ್ಭದಲ್ಲಿ, ಮಾನವನ ಆಚಾರ–ವಿಚಾರ ನಡವಳಿಕೆ ಅವನ ಅವ್ಯಕ್ತ ಮನಸ್ಸಿನ ಸಿಕ್ಕು ಗಂಟುಗಳನ್ನು ಪದರು ಪದರಾಗಿ ಅಭಿವ್ಯಕ್ತಿಸುವುದಕ್ಕೆ ಮನೋವಿಜ್ಞಾನದ ಸಹಾಯದೊಂದಿಗೆ ಸಾಹಿತ್ಯವನ್ನು ರಚಿಸುವ, ಚರ್ಚಿಸುವ, ತೌಲನಿಕ ಅಧ್ಯಯನ ಮಾಡುವ ಅಗತ್ಯತೆ ಮತ್ತು ಅವಶ್ಯಕತೆ ಇದೆ.

ಸಾಹಿತ್ಯ ಮತ್ತು ಮನೋವಿಜ್ಞಾನದ ಎಂಬ ವಿಚಾರ ಕುರಿತು ನಡೆಯುತ್ತಿರುವ ಚರ್ಚೆಗಳು ಜಿಜ್ಞಾಸೆಗಳು ಇಂದು–ನೆನ್ನೆಯದಲ್ಲ, ಜನಪದ ಸಾಹಿತ್ಯ ಆದಿಯಾಗಿ ಜನಪದರು ರಚಿಸಿದ ಕಥೆ, ಲಾವಣಿ, ತ್ರಿಪದಿ ಮತ್ತು ಗೀತೆಗಳಿಂದ ಮನುಷ್ಯನ ಮನಸ್ಸಿನ ಭಾವನೆಗಳ ಅಭಿವ್ಯಕ್ತಿಯ ಸೂಕ್ಷ್ಮತೆಗಳನ್ನು ಗಮನಿಸುತ್ತಾ ಸಾಗಿದಾಗ ಪ್ರಾಚೀನ ಕವಿಗಳ ಅನೇಕ ಕಾವ್ಯಗಳು ಸೇರಿದಂತೆ ನಡುಗನ್ನಡ ಸಾಹಿತ್ಯದ ವಚನ ಕೀರ್ತನೆ, ರಗಳೆ ಈ ಪ್ರಕಾರದ ಕೃತಿಗಳಲ್ಲಿ ಕಾವ್ಯದ ವಸ್ತು ಮನುಷ್ಯನ ಮತ್ತು ಆತನ ಮನಸ್ಸೇ ಆಗಿದ್ದು ಪಂಚತಂತ್ರ ಕಥೆಗಳು ಸಹ ಮನಸ್ಸಿನ ವಿಕಾಸಕ್ಕೆ ಸಾಹಿತ್ಯ ಪೂರಕ ಎಂಬುದನ್ನು ನಿರೂಪಿಸುತ್ತದೆ. ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಸಾಹಿತ್ಯದಲ್ಲಿ ಮನೋವಿಜ್ಞಾನ ಎಂಬ ವಿಚಾರ ಕುರಿತು ಮನೋವಿಜ್ಞಾನ ಮತ್ತು ಸಾಹಿತ್ಯ ಕುರಿತ

ಅಧ್ಯಯನಗಳು ಮತ್ತು ಸಂಶೋಧನೆಗಳಿಗೆ ಪಾಶ್ಚಾತ್ಯರ ಕೊಡುಗೆ ಅಪಾರ, ಮನೋವಿಜ್ಞಾನ ಮೂಲತಃ ತತ್ತ್ವಶಾಸ್ತ್ರದ ಒಂದು ಭಾಗವಾಗಿದೆ. ಮೊದಲು ಮನೋವಿಜ್ಞಾನವನ್ನು ಆತ್ಮಾನುಸಂಧಾನ ಎಂದು ವ್ಯಾಖ್ಯಾನಿಸಿದ್ದರು. 'ಸೈಕಿ' ಎಂದರೆ ಆತ್ಮ, 'ಆಲಜಿ' ಎಂದರೆ ಅಧ್ಯಯನ; ಹೀಗೆ ಸೈಕಾಲಜಿ ರೂಪ ತಾಳಿತು. ನಂತರದಲ್ಲಿ ಆತ್ಮದ ಬದಲಿಗೆ ಮನಸ್ಸಿನ ಅಧ್ಯಯನ ಎಂದಾಗಿ, ನಂತರದಲ್ಲಿ ಪ್ರಜ್ಞೆಯ ಅಧ್ಯಯನವಾಗಿ ಈಗ ಮನುಷ್ಯನ ವರ್ತನೆಯ ಅಧ್ಯಯನ ಎಂಬಂತೆ ವ್ಯಾಖ್ಯಾನಿಸಲಾಗುತ್ತಿದೆ. ಹಾಗೆ ನೋಡಿದರೆ ಇದು ಒಂದು ವೈಜ್ಞಾನಿಕ ಅಧ್ಯಯನವಾಗಿ ರೂಪುಗೊಂಡದ್ದು ಇತ್ತೀಚೆಗೆ 1879ರಲ್ಲಿ ಜರ್ಮನಿಕ ಲೈಪ್‌ಜಿಗ್ ಎಂಬ ನಗರದಲ್ಲಿ ವಿಲ್‌ಹೆಲ್ಮ್ ವೂಂಟ್ ಎನ್ನುವ ದಾರ್ಶನಿಕ ಮನೋವಿಜ್ಞಾನದ ಮೊಟ್ಟಮೊದಲ ಪ್ರಯೋಗಶಾಲೆ ಆರಂಭಿಸಿ ವೈಜ್ಞಾನಿಕ ಅಧ್ಯಯನಕ್ಕೆ ನಾಂದಿ ಹಾಡಿದ. ಅಂದಿನಿಂದ ಮನೋವಿಜ್ಞಾನ ವೇಗವಾಗಿ ಬೆಳೆಯುತ್ತಿರುವ ಒಂದು ಜ್ಞಾನಶಿಸ್ತಾಗಿದೆ. ಮನೋವಿಜ್ಞಾನ ಹುಟ್ಟಿದ್ದು ಜರ್ಮನಿಯಲ್ಲಾದರೂ ಬೆಳೆದಿರುವುದು ಅಮೆರಿಕಾ, ಇಂಗ್ಲೆಂಡ್‌ಗಳಲ್ಲಿ ಮನೋವಿಜ್ಞಾನದ ತಳಹದಿಯಲ್ಲಿ ಸಂಶೋಧನಾತ್ಮಕವಾಗಿ ಶೋಧಿಸಿದವರಲ್ಲಿ ಅರಿಸ್ಟಾಟಲ್‌ನ 'ಕೆಥರ್ಾಸಿಸಸ್' ಸಿದ್ಧಾಂತ ಮನೋವಿಜ್ಞಾನದ ಅಧ್ಯಯನ ಪ್ರಾರಂಭದ ದಾಖಲೆಯಾದರೂ ನಂತರದಲ್ಲಿ ಡಾಂಟೆ ಟಿ.ಎಸ್.ಎಲಿಯೆಟ್ ಫ್ಯಾನಿನ, ಸೊಫೋಕ್ಲಿಸ್ ಈಡಿಪಸ್, ಮಾಡಂ ಬೊವೇರಿ ಸೇರಿದಂತೆ ಅನೇಕ ವಿದ್ವಾಂಸರು ಈ ಬಗ್ಗೆ ಅನೇಕ ಸಿದ್ಧಾಂತಗಳನ್ನು ಸಂಶೋಧನಾ ಲೇಖನಗಳನ್ನು ಮಂಡಿಸಿದ್ದಾರೆ. ಈ ಪರಂಪರೆಯಲ್ಲಿ ಸಿಗ್ಮಂಡ್ ಫ್ರಾಯ್ಡ್ ಪ್ರಮುಖನಾದವನು, ಅವನ ಒಡನಾಡಿಯಾಗಿ ಶಿಷ್ಯನಾಗಿ ತನ್ನದೇ ಆದ ವಿಭಿನ್ನ ರೀತಿಯ ಚಾಪು ಮೂಡಿಸಿದ ಪ್ರತಿಭಾವಂತ ಮನೋವಿಜ್ಞಾನಿ ಸಿ.ಜೆ. ಯೂಂಗ್, ಈತನು "Psychology and literature" ಎಂಬ ದೀರ್ಘವಾದ ಲೇಖನದಲ್ಲಿ ಸಾಹಿತ್ಯ ಮತ್ತು ಮನೋವಿಜ್ಞಾನವನ್ನು

1. ಮನೋವೈಜ್ಞಾನಿಕ ಸಾಹಿತ್ಯ

2. ದಾರ್ಶನಿಕ ಸಾಹಿತ್ಯ ಎಂದು ಎರಡು ವಿಭಾಗಗಳಾಗಿ ವಿಭಾಗಿಸಿದ್ದಾನೆ.

1. ಮನೋವೈಜ್ಞಾನಿಕ ಸಾಹಿತ್ಯ : ಮನೋವೈಜ್ಞಾನಿಕ ಸಾಹಿತ್ಯ ಎಂದರೆ ಕೃತಿಯಲ್ಲಿನ ಪಾತ್ರದ ಮನಸ್ಸನ್ನು ಕುರಿತು ಬರಹಗಾರ ಬರೆದಿರುವ ಚಿತ್ರಣ, ಇದನ್ನು ಅರ್ಥೈಸುವುದು, ಓದುವುದು ಸುಲಭ, ಉದಾಹರಣೆಗೆ ಮನೋವೈಜ್ಞಾನಿಕ ಸಮಸ್ಯೆಗಳನ್ನು ತಮ್ಮ ಕಾದಂಬರಿಯ ವಸ್ತುವನ್ನಾಗಿ ಆಯ್ದುಕೊಂಡ ತ್ರಿವೇಣಿಯವರ ಅನೇಕ ಕಥೆ–ಕಾದಂಬರಿಗಳಲ್ಲಿ ದೈಹಿಕ ಸ್ವಾಸ್ಥ್ಯದೊಂದಿಗೆ ಮಾನಸಿಕ ಸ್ವಾಸ್ಥವೂ ಸೇರಿದಾಗ ವ್ಯಕ್ತಿಯ ಬಾಳು ಸಹನೀಯ ಎಂದು ತಮ್ಮ ಮನೋವೈಜ್ಞಾನಿಕ ಕಾದಂಬರಿಗಳ ಮೂಲಕ ತೋರಿಸಿಕೊಟ್ಟರು. ತ್ರಿವೇಣಿ ಅವರು 'ಬೆಕ್ಕಿನ ಕಣ್ಣು', 'ದೂರದ ಬೆಟ್ಟ', 'ಮುಚ್ಚಿದ ಬಾಗಿಲು' ಮತ್ತು 'ಶರಪಂಜರ' ಮೊದಲಾದ ಕಾದಂಬರಿಗಳಲ್ಲಿ ಮನೋವೈಪರೀತ್ಯಗಳನ್ನು ಚಿಕಿತ್ಸಕ ದೃಷ್ಟಿಯಲ್ಲಿ ಚರ್ಚಿಸಿದ್ದಾರೆ ಸ್ತ್ರೀಯರು ಸ್ವತಂತ್ರವಾಗಿ ಮಾತನಾಡಲು ಹೆದರುವ ಕಾಲಘಟ್ಟದಲ್ಲಿ ಮಹಿಳೆಯರ ಅನೇಕ ಒಳ ತುಮುಲಗಳನ್ನು ಸಮಸ್ಯೆಗಳನ್ನು ಅವರ ಮನೋ ಅಭಿಲಾಷೆಗಳನ್ನು ಸಾಹಿತ್ಯದ ಮುಖೇನ ಅಭಿವ್ಯಕ್ತಿಸಿದ್ದಾರೆ. ದೇವುಡು ನರಸಿಂಹಶಾಸ್ತ್ರಿಗಳ 'ಅಂತರಂಗ' ಕನ್ನಡದ ಮೊಟ್ಟಮೊದಲ ಮನೋವೈಜ್ಞಾನಿಕ ಕಾದಂಬರಿಯಾಗಿದೆ. ಆನಂದರ 'ನಾ ಕೊಂದು ಹುಡುಗಿ' ಹೆಂಡತಿಯ ಕಾಗದ ಕಥೆ ಸೇರಿದಂತೆ ಅನಂತಮೂರ್ತಿ ಅವರ ಪ್ರಶ್ನೆ, ಘಟ್ಟಶ್ರಾದ್ಧಾ ಎಂಬ ಕೃತಿಗಳನ್ನು ಗಮನಿಸಿದಾಗ ಸಿ.ಪಿ.ಕೆ. ಅವರು ಹೇಳಿದಂತೆ "ಒಬ್ಬ ಕವಿಯು ಸಾವಿರ ಸಾವಿರ ಮಂದಿಯ ವಾಣಿಯಿಂದ ಮಾತನಾಡುತ್ತಾನೆ ತನ್ನ ಕಾಲದ ಜಾಗೃತ ದೃಷ್ಟಿಯಲ್ಲಿನ ಬದಲಾವಣೆಯನ್ನು ಮುನ್ನುಡಿಯುತ್ತಾನೆ"[1] ಎಂಬ ಮಾತು ನೆನಪಿಗೆ ಬರುತ್ತದೆ, ಮನುಷ್ಯನ ವಾಸ್ತವ ವರ್ತನೆಯನ್ನು ಊಹೆಗೆ ಒಡ್ಡುವ ಕೆಲಸವನ್ನು ಮನೋವೈಜ್ಞಾನಿಕ ಸಾಹಿತ್ಯ ಮಾಡುತ್ತದೆ ಎಂಬುದನ್ನು ನಾಗೇಶ ಹೆಗ್ಡೆ ಅವರ 'ನರಮಂಡಲ ಬ್ರಹ್ಮಾಂಡ' ಎಂಬ ಕೃತಿಯು ಬೆಳಕು ಚೆಲ್ಲುತ್ತದೆ. ಹೀಗೆ ಕೆಲವು ಕೃತಿಗಳನ್ನು ಪ್ರಾಸ್ತಾವಿಕವಾಗಿ ಇಲ್ಲಿ ದಾಖಲಿಸಲಾಗಿದೆ.

2. ದಾರ್ಶನಿಕ ಸಾಹಿತ್ಯ : ದಾರ್ಶನಿಕ ಸಾಹಿತ್ಯ ಎಂಬುದು ಕೆಲವೊಮ್ಮೆ ಈ ಸಾಹಿತ್ಯವನ್ನು ರಚಿಸುವ ಬರಹಗಾರರಿಗೂ ಸಾಹಿತ್ಯದಲ್ಲಿ ವ್ಯಕ್ತವಾಗುವ ವಿಚಾರಗಳ ಬಗ್ಗೆ ತಿಳಿದಿರುವುದಿಲ್ಲ. ಬರಹಗಾರನ ಸೂಪ್ತಪ್ರಜ್ಞೆಯಲ್ಲಿ ಹುದುಗಿರುವ ವಿಚಾರಗಳಿಗೆ

ಸಾಹಿತ್ಯ ಮಾಧ್ಯಮವಾಗುತ್ತದೆ, ಬುದ್ಧಿ, ತರ್ಕ, ಚಿಂತನ ಓದು, ಕಲಿಕೆ ಮುಂತಾದ ಯಾವ ಉಪಾಧಿಗಳು ಇಲ್ಲದೆ ನೇರವಾಗಿ ಗ್ರಹಿಸುವ ದರ್ಶನ ಶಕ್ತಿ ಕಾವ್ಯ ದರ್ಶನ ಪ್ರಕಾಶದ ಒಂದು ಪ್ರತಿಮೆ. ಕವಿಯ ದರ್ಶನದ ಶಕ್ತಿ–ದೌರ್ಬಲ್ಯಗಳು ಹಿತಾಹಿತಗಳು ಆ ಪ್ರತಿಮೆಯಲ್ಲಿ ಪ್ರತಿಫಲಿತವಾಗಿರುತ್ತವೆ. ಉದಾಹರಣೆಗೆ ಶಿವರಾಮ ಕಾರಂತರ ಮೂಕಜ್ಜಿಯ ಕನಸುಗಳು, ಅಳಿದ ಮೇಲೆ, ಬೆಟ್ಟದ ಜೀವ ಹೀಗೆ ಅನೇಕ ಕಾದಂಬರಿಗಳಲ್ಲಿ ದಾರ್ಶನಿಕ ಸಾಹಿತ್ಯದ ವಿಚಾರಗಳನ್ನು ನೋಡಬಹುದು. ಯೂಂಗ್ ತನ್ನ ಕೃತಿಯಲ್ಲಿ ಸಾಹಿತ್ಯ ಮತ್ತು ಮನೋವಿಜ್ಞಾನದ ಚರ್ಚೆಯನ್ನು ಮಾಡುತ್ತ ಕಲಾಕೃತಿ ಮತ್ತು ಕವಿ, ಇವೆರಡು ಸಾಹಿತ್ಯ ಮನೋವಿಜ್ಞಾನ ವಿಶ್ಲೇಷಣೆಯ ಬಹುದೊಡ್ಡ ಮಾಧ್ಯಮ ಎಂದು ತಿಳಿಸಿದ್ದಾನೆ ಜೊತೆಗೆ ಅನಿಮ ಮತ್ತು ಅನಿಮಾಸ್, ಅಂತರ್ಮುಖಿತೆ–ಬಹಿರ್ಮುಖಿತೆ, ಸಾಮೂಹಿಕ ಸುಪ್ತ ಪ್ರಜ್ಞೆ ಸೇರಿದಂತೆ ಹಲವಾರು ಸಿದ್ಧಾಂತಗಳನ್ನು ಸಾಹಿತ್ಯ ಮತ್ತು ಮನೋವಿಜ್ಞಾನ ವಲಯಕ್ಕೆ ಕೊಡುಗೆಯಾಗಿ ನೀಡಿದ್ದಾನೆ. ಈ ಪರಂಪರೆ, ಕನ್ನಡದ ಅನೇಕ ಕಾದಂಬರಿಕಾರರು ಬರಹಗಾರರ ಮೇಲೆ ಬೀರಿದ ಪ್ರಭಾವ ಮತ್ತು ಪ್ರೇರಣೆ ಅಪಾರ "ಸಾಹಿತ್ಯ ಮನಃಶಾಸ್ತ್ರಜ್ಞನಿಗೆ ವಿಫಲವಾದ ಸಾಮಾಗ್ರಿಯನ್ನು ಒದಗಿಸುತ್ತದೆ. ಏಕೆಂದರೆ ಮಾನವ ಮನಸ್ಸು ಸಮಸ್ತ ವಿಜ್ಞಾನ ಹಾಗೂ ಕಲೆಗಳ ಮಾತೃಗರ್ಭ. ಒಂದು ಕಡೆ ನಾವು ಕಲಾಕೃತಿ ನಿರ್ಮಾಣದ ವಿಷಯವಾಗಿ ಮತ್ತೊಂದು ಕಡೆ ಯಾವ ಯಾವ ಶಕ್ತಿ ವಿಶೇಷಗಳಿಂದ ವ್ಯಕ್ತಿಯೊಬ್ಬ ಕಲಾವಿದನಾಗುತ್ತಾನೆ ಎನ್ನುವ ವಿಷಯವಾಗಿ ಮನೋವಿಜ್ಞಾನದ ದೃಷ್ಟಿಯಿಂದ ಸಂಶೋಧನೆ ನಡೆಸಬಹುದು"[2] ಎಂದು ಸಿ.ಜೆ. ಜುಂಗ್ ಹೇಳುವಂತೆ ಕನ್ನಡ ಸಾಹಿತ್ಯದಲ್ಲಿ ಮನೋವಿಜ್ಞಾನದ ಚರ್ಚೆ ಬಂದಾಕ್ಷಣ ನಮಗೆ ನೆನಪಿಗೆ ಬರುವುದು ಜನ್ನನ 'ಯಶೋಧರ ಚರಿತೆ' ಅದೆಂತಹ ಅಮರ ಮನೋವೈಜ್ಞಾನಿಕ ಕೃತಿ! "ಅಮೃತಮತಿಯ ನಿಶ್ಶ ನಿಕೃಷ್ಟ ನೀಚ ಜನಕಾಮಿಯಾದ ಪ್ರಣಯ ಒಂದು ಮನೋವೈಜ್ಞಾನಿಕ ಮಹತ್ವದ ಕಟುಸತ್ಯ, ವಾಸ್ತವತೆಯನ್ನು ಲಾಕ್ಷಣಿಕರು ಜಿಗುಪ್ಸೆಯನ್ನು ಸ್ಥಾಯಿಯಾಗಿಟ್ಟುಕೊಂಡು ಬೀಭತ್ಸವನ್ನು ಒಂದು ರಸವಾಗಿ ಒಪ್ಪಿಕೊಳ್ಳುವುದರಲ್ಲಿ ಅದರ ಹಿಂದಿನ ಆಳವಾದ ಅಷ್ಟೇ ಬಲವಾದ ಮನೋವೈಜ್ಞಾನಿಕ ಸೆಳೆತವನ್ನು ಗ್ರಹಿಸಿದ್ದರು"[3] ಎಂಬ ಗೌರೀಶ್ ಕಾಯ್ಕಿಣಿಯವರ ಮಾತಿನಂತೆ ಜೊತೆಗೆ ಭಾಸ ಮಹಾಕವಿಯ 'ವೇಣೀಸಂಹಾರ' ಸುಯೋಧನ ಹಾಗೂ ಭಾನುಮತಿಯರ ಶೃಂಗಾರ ಸನ್ನಿವೇಶ, ಕಾಳಿದಾಸನ 'ಶಾಕುಂತಲಾ' ನಾಟಕದಲ್ಲಿ ಶಾಕುಂತಲೇ ಮತ್ತು ದುಶ್ಯಂತನ ಪಾತ್ರಗಳು ಹೊಸ ಆಲೋಚನೆಯನ್ನು ಮೂಡಿಸುತ್ತವೆ. ಆಧುನಿಕ ಕನ್ನಡ ಕಾಲಘಟ್ಟದ ನವ್ಯ ಸಾಹಿತ್ಯದಲ್ಲಿ ಹೆಚ್ಚಾಗಿ ಮನೋವೈಜ್ಞಾನಿಕ ನೆಲೆಯ ಕಾದಂಬರಿಗಳನ್ನು ರಚಿಸಿದ ಬಿ.ಸಿ. ರಾಮಚಂದ್ರ ಶರ್ಮರಿಂದ ಹಿಡಿದು ಎ.ಕೆ. ರಾಮಾನುಜನ್, ಚಂದ್ರಶೇಖರ ಕಂಬಾರ, ಅರವಿಂದ ನಾಡಕರ್ಣಿ, ಜಯಂತ್ ಕಾಯ್ಕಿಣಿ ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ ಇವರ ಬಹುಪಾಲು ಕಥೆ ಕಾದಂಬರಿಗಳನ್ನು ಗಮನಿಸಿದಂತೆ ಅವುಗಳಲ್ಲಿ ಮನುಷ್ಯನ ಮನಸ್ಸು ಮತ್ತು ಅವರ ವರ್ತನೆ, ಕಾಮ ಪ್ರೇಮ, ಪಾಶ್ಚಾತ್ಯ ಸಂಸ್ಕೃತಿಗಳ ಪ್ರಭಾವ, ಒಂಟಿತನ, ವ್ಯಕ್ತಿ ವಿಶಿಷ್ಟತೆ ವಿಚಾರಗಳು ಸಾಹಿತ್ಯವನ್ನು ಹೊಸ ದಿಕ್ಕಿನಡೆಗೆ ಕೊಂಡೊಯ್ಯುವಲ್ಲಿ ಸಹಾಯಕವಾಗಿವೆ. ತೇಜಸ್ವಿಯವರ 'ಚಕ್ರವ್ಯೂಹ' ಸೇರಿದಂತೆ ಯು.ಆರ್. ಅನಂತಮೂರ್ತಿಯವರ ಸಂಸ್ಕಾರ, ನವಿಲುಗಳು, ಭವ, ಭಾರತೀಪುರ ಸೇರಿದಂತೆ ಇತರೆ ಕೃತಿಗಳಲ್ಲಿ ಕಾಮ ವಾಸನೆಯ ಶಕ್ತಿ ವಿಳಾಸನ ವ್ಯಕ್ತಿಯ ಚಾರಿತ್ರದಲ್ಲಿ ಹೇಗೆ ಎಷ್ಟು ಕಾಣಿಸಿಕೊಳ್ಳುವುದೆಂಬುದನ್ನು ನಮ್ಮ ಸಾಹಿತಿಗಳು ದಿಟ್ಟತನದಿಂದ ಚಿತ್ರಿಸುತ್ತಲೇ ಬಂದಿದ್ದಾರೆ. ಸುದರ್ಶನ್ ದೇಸಾಯಿ ಅವರ ತಿರುವು, ಅಗ್ನಿಪರ್ವತ ಹಾಗೂ ಶ್ರೀನಿವಾಸ ಹಾವನೂರು ಅವರ 'ಅವರು ಮತ್ತು ದೇವಕ್ಕ' ಎಂಬ ಕಥೆಯಲ್ಲಿ ಮನೋವೈಜ್ಞಾನಿಕತೆಯ ದೃಷ್ಟಿ ಮತ್ತು ಸೃಷ್ಟಿಗಳು ಪ್ರಜ್ಞಾಪೂರ್ವಕವಾಗಿ ಪ್ರವೇಶ ಪಡೆದಿರುವುದನ್ನು ಗುರುತಿಸಬಹುದು. ಮನೋವೈಜ್ಞಾನಿಕ ಕಾದಂಬರಿಗಳು ಎಂದರೆ ಕೇವಲ ಮನುಷ್ಯನಲ್ಲಿ ಇರುವಂತಹ ಕಾಮ, ಬಿಭತ್ಸತೆ ಕ್ರೌರ್ಯ ಹಾಗೂ ನಕಾರಾತ್ಮಕ ಮನೋಭಾವಗಳನ್ನೇ ವಿಜೃಂಭಿಸುವ ವಿಚಾರಗಳಾಗದೆ, ಅಲ್ಲಿ ಸಮಾಜವನ್ನು ಆಶಾವಾದ ಮತ್ತು ಸಕಾರಾತ್ಮಕ ಮೌಲ್ಯಗಳ ಅಭಿವ್ಯಕ್ತಿಗೆ ಸಾಹಿತ್ಯ ಮತ್ತು ಮನೋವಿಜ್ಞಾನ ಪ್ರಸ್ತುತಕ್ಕೆ ಅಗತ್ಯ ಎಂಬುದನ್ನು ಕೆಲವು ಆಲೋಚನೆಗಳ ಮೂಲಕ ಈ ಕೆಳಕಂಡಂತೆ ದಾಖಲಿಸಲಾಗಿದೆ.

1. **ಮಾನವನ ಒಳಪದರಗಳ ಅನಾವರಣ:** ಮನುಷ್ಯನ ಮನಸ್ಸು ಬಹುಬೇಗ ಅರ್ಥವಾಗದ ಸಂಕೀರ್ಣ ಮತ್ತು ಸೂಕ್ಷ್ಮವಾದ ವಸ್ತು. ನಾವು ಸಮಾಜಕ್ಕೆ ಕಾಣುವಷ್ಟು ಸತ್ಯ ಮತ್ತು ವಾಸ್ತವವಾಂಶಗಳನ್ನು ನಮ್ಮ ನಡೆ–ನುಡಿಗಳಲ್ಲಿ ತೋರುವುದಿಲ್ಲ ಮುಖವಾಡಗಳಾಚೆಗೆ ಬದುಕನ್ನು ನಿರ್ಮಿಸಿಕೊಳ್ಳಲು ಈ ಎರಡು ಜ್ಞಾನಶಾಖೆಗಳ ಓದು ಸಹಾಯಕ.

2. **ವ್ಯಕ್ತಿ ವಿಶಿಷ್ಟತೆಯ ದರ್ಶನ:** ಹಲವಾರು ಸಾಹಿತ್ಯ ಕೃತಿಗಳ ಓದಿನ ಮೂಲಕ ವ್ಯಕ್ತಿಯಲ್ಲಿನ ವೈಶಿಷ್ಟ್ಯ ಮನೋಭಾವ, ಆಲೋಚನೆ, ಹವ್ಯಾಸ ಜೀವನ ಕ್ರಮ ಹಾಗೂ ತನ್ನ ಅಸ್ತಿತ್ವದ (ಐಡೆಂಟಿಟಿ) ಉಳಿವಿಗೆ ಸಾಹಿತ್ಯ ಮತ್ತು ಮನೋವಿಜ್ಞಾನ ಓದುಗರಿಗೆ ಮಾರ್ಗದರ್ಶಿ ಇದ್ದಂತೆ.

3. **ಹೊಸ ದೃಷ್ಟಿ ಮತ್ತು ಸೃಷ್ಟಿ:** ಮನೋವಿಜ್ಞಾನ ಮತ್ತು ಸಾಹಿತ್ಯದ ಅಧ್ಯಯನ ಓದುಗನಲ್ಲಿ ಒಂದು ಸಮಸ್ಯೆಯನ್ನು ಅರ್ಥೈಸಿಕೊಳ್ಳುವ ಮತ್ತು ಆ ಸಮಸ್ಯೆಯನ್ನು ವಿಶ್ಲೇಷಿಸುವ ಕ್ರಮ ವಿಶಿಷ್ಟತೆಯಿಂದ ನೋಡುವ ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳಲು ಸಾಹಿತ್ಯ ಮತ್ತು ಮನೋವಿಜ್ಞಾನ ಅತ್ಯಗತ್ಯ.

4. **ವಿಚಾರಗಳ ವಿಶಾಲತೆ ಮತ್ತು ವೈವಿಧ್ಯತೆ:** ಪ್ರತಿಯೊಬ್ಬ ವ್ಯಕ್ತಿಗೂ ಕೂಡ ತನ್ನದೇ ಆದಂತಹ ವೈಯಕ್ತಿಕ ಬದುಕು ಹಾಗೂ ಸಮಾಜದಲ್ಲಿ ಸ್ವತಂತ್ರವಾಗಿ ಬದುಕುವ ಹಕ್ಕಿದೆ, ಅದನ್ನು ವೈವಿಧ್ಯತೆಯ ನೆಲೆಯಲ್ಲಿ ವಿಶ್ವಮಾನತ್ವದ ಮಾದರಿಯಲ್ಲಿ ಕಟ್ಟಿಕೊಳ್ಳಲು ಮಾನವ ಸಂಬಂಧಗಳಲ್ಲಿ ಸಾಮರಸ್ಯತೆಯನ್ನು ಬೆಳೆಸಲು ಸಾಹಿತ್ಯ ಮತ್ತು ಮನೋವಿಜ್ಞಾನ ಸಹಾಯಕ.

5. **ವಾಸ್ತವ ಮತ್ತು ಕಲ್ಪನೆಯ ವಿರೋಧಾಭಾಸ:** ಸಾಹಿತ್ಯ ಕೃತಿಗಳಲ್ಲಿ ಕಾಲ್ಪನಿಕ ಸಾಹಿತ್ಯ ಮತ್ತು ವಾಸ್ತವಿಕ ಸಾಹಿತ್ಯ ಎಂದು ವಿಭಾಗಿಸಿದಾಗ ತಾನು ಭ್ರಮಿಸಿರುವ ಭ್ರಮಲೋಕವೇ ಸತ್ಯ ಶ್ರೇಷ್ಠವಾದದ್ದು ಎಂದು ಭಾವಿಸಿರುವ ಮನುಷ್ಯನ ಭ್ರಮೆ ಸುಳ್ಳು ಎಂದು ತಿಳಿದಾಗ ಆತನಲ್ಲಾಗುವ ಗೊಂದಲ, ಅದಕ್ಕೆ ಮನುಷ್ಯ ಪ್ರತಿಕ್ರಿಯಿಸುವ ರೀತಿ ತನ್ನ ಕಲ್ಪನೆಯ ಭ್ರಮಾಲೋಕದಿಂದ ಹೊರಬಂದು ವಾಸ್ತವವಾಗಿ ಜೀವಿಸಲು ಮನೋವಿಜ್ಞಾನ ಆಧಾರಿತ ಸಾಹಿತ್ಯದ ಅಗತ್ಯತೆ ಇಂದಿನ ಮನುಷ್ಯನಿಗೆ ಅವಶ್ಯಕವಾಗಿ ಬೇಕಾಗಿದೆ.

6. **ಮನೋವಿಜ್ಞಾನದ ಅಗತ್ಯತೆ ಮತ್ತು ಅವಶ್ಯಕತೆ:** ಮನುಷ್ಯನ ಮನಸ್ಸು ಅನೇಕ ಗೊಂದಲದ ಗೂಡಾಗಿದೆ ಅನೇಕ ವಿಚಾರಗಳ ಬಗ್ಗೆ ಆತನಿಗೆ ನಿಖರತೆ ಬೇಕಾಗಿರುತ್ತದೆ ಮತ್ತು ಸತ್ಯದ ಅರಿವಾಗಬೇಕಾಗಿರುತ್ತದೆ. ಹೀಗೆ ಈ ಎರಡು ವಿಚಾರಗಳ ಬಗ್ಗೆ ಅಧ್ಯಯನ ನಡೆಸುತ್ತಾ ಹೋದಂತೆ ವಿಷಯದ ಆಳ ಮತ್ತು ವಿಸ್ತಾರ ವಿಶಾಲವಾದದ್ದು, 'ಸ್ವಭಾವವೇ ಆಧ್ಯಾತ್ಮ' ಎಂಬ ಗೀತೆಯ ವಚನದಂತೆ ಮಾನವ ಸ್ವಭಾವದ ಒಳಕಟ್ಟು ಮತ್ತು ಗುಟ್ಟುಗಳನ್ನು ಸಾಹಿತ್ಯ ಮತ್ತು ಮನೋವಿಜ್ಞಾನ ಪರಿಷ್ಕರಿಸುವ ಮತ್ತು ಆವಿಷ್ಕರಿಸುವ ಕೆಲಸವನ್ನು ಮಾಡುತ್ತವೆ.

ಸಾಹಿತ್ಯ ಮತ್ತು ಮನೋವಿಜ್ಞಾನದ ಅಂತಃಸಂಬಂಧ ಚರ್ಚೆಯು ಅನಂತವಾದದ್ದು ಮಾನವ ಮತ್ತು ಸಮಾಜ ಇರುವವರೆಗೂ ಇವುಗಳ ಅಧ್ಯಯನ ಸಾಗುತ್ತದೆ, ಮನುಷ್ಯನ ಬದುಕು ವೈಚಾರಿಕ ಹಾಗೂ ವೈಜ್ಞಾನಿಕವಾಗಿ ಸಾಗಲು ಜೊತೆಗೆ ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳನ್ನು ಬೌದ್ಧಿಕವಾಗಿ ಬೆಳೆಸುವಲ್ಲಿ ಸಾಹಿತ್ಯ ಮತ್ತು ಮನೋವಿಜ್ಞಾನ ಚಿಕಿತ್ಸಕನಾಗಿ ಕಾರ್ಯನಿರ್ವಹಿಸುತ್ತದೆ. ಹಾಗೂ ಇಂದಿನ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಬೋಧನೆಯ ಮೂಲಕ ವಿದ್ಯಾರ್ಥಿಗಳನ್ನು ಬೌದ್ಧಿಕ ಮತ್ತು ಭೌತಿಕವಾಗಿ ಬೆಳೆಸಲು ಮನೋವಿಜ್ಞಾನದ ನೆಲೆಯಲ್ಲಿ ವರ್ತಮಾನದ ವಾಸ್ತವವನ್ನು ತಿಳಿಸಲು ಈ ಎರಡು ಜ್ಞಾನಶಾಖೆಗಳ ಜ್ಞಾನ ಅವಶ್ಯಕವಾಗಿದ್ದು, ಬದಲಾವಣೆಯೊಂದಿಗಿನ ಬದುಕಿಗೆ ಹೊಂದಿಕೊಳ್ಳುವ ಗುಣ ಹಾಗೂ ಸಾಮರ್ಥ್ಯವನ್ನು ಕಲಿಸುತ್ತದೆ.

ಕೊನೆ ಟಿಪ್ಪಣಿಗಳು

1. ಪಾಶ್ಚಾತ್ಯ ವಿಮರ್ಶೆ: ಪಂಚಮುಖಿ, ಅನು: ಸಿ.ಪಿ. ಕೃಷ್ಣಕುಮಾರ್, ಪುಟ.ಸಂ.101.
2. ವಿಮರ್ಶೆಯ ಪೂರ್ವ–ಪಶ್ಚಿಮ (ಮನಶ್ಶಾಸ್ತ್ರದ ಕೀಲಿಕೈ), ಜಿ.ಎಸ್. ಶಿವರುದ್ರಪ್ಪ, ಪುಟ.ಸಂ.81. C.J. Jung the modern man in church of a soul P.175.
3. ಗೌರೀಶ ಕಾಯ್ಕಿಣಿ ಅವರ ಆಯ್ದ ಲೇಖನಗಳು, (ಸಂ) ವಿಷ್ಣು ನಾಯ್ಕ, ಪುಟ.ಸಂ.122.

ಆಕರ ಗ್ರಂಥಗಳು

1. ಗೌರೀಶ್ ಕಾಯ್ಕಿಣಿ ಅವರ ಆಯ್ದ ಲೇಖನಗಳು ಲೇಖನಗಳು, (ಸಂ) ವಿಷ್ಣು ನಾಯ್ಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

2. ವಿಮರ್ಶೆಯ ಪೂರ್ವ–ಪಶ್ಚಿಮ, ಜಿ.ಎಸ್. ಶಿವರುದ್ರಪ್ಪ, ಸ್ವಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

3. ಪಾಶ್ಚಾತ್ಯ ವಿಮರ್ಶೆ: ಪಂಚಮುಖ, ಅನು: ಸಿ.ಪಿ. ಕೃಷ್ಣಕುಮಾರ್, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ ಮೂರನೇ ಹಂತ, ಮೈಸೂರು.

4. ಸಿ.ಜಿ.ಯೂಂಗ್, ಡಾ. ಕೆ.ಎಸ್. ಪವಿತ್ರ, ವಿಸ್ಮಯ ಪ್ರಕಾಶನ, ಮೈಸೂರು.

ಅನುವಾದ ಸಾಹಿತ್ಯವನ್ನು ಪ್ರಭಾವಿಸುವ ಮನೋವೈಜ್ಞಾನಿಕ ಅಂಶಗಳು

ಡಾ. ಎಸ್ ಸುಮ. ಸಹಪ್ರಾಧ್ಯಾಪಕರು ಮತ್ತು ಡಾ. ಮಂಜುನಾಥ. ಪಿ.
ಮುಖ್ಯಸ್ಥರು ಮತ್ತು ಸಹಪ್ರಾಧ್ಯಾಪಕರು, ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮುಕ್ತಗಂಗೋತ್ರಿ, , ಮೈಸೂರು.

ಪೀಠಿಕೆ:

ಒಂದು ಭಾಷೆಯಲ್ಲಿ ಇರುವಂತಹ ವಿಚಾರವನ್ನು ಮತ್ತೊಂದು ಭಾಷೆಗೆ ಅದರ ಅರ್ಥ, ಸ್ವರೂಪ ಹಾಗೂ ಉದ್ದೇಶವನ್ನು ಯಥಾ ಸ್ವರೂಪವಾಗಿ ಮತ್ತು ನಿಖರವಾಗಿ ಪ್ರಸ್ತುತ ಪಡಿಸುವಂತಹ ಪ್ರಕ್ರಿಯೆಯನ್ನು 'ಅನುವಾದ' ಎಂದು ಕರೆಯುವರು. ಅನುವಾದವು ಒಂದು ತಾಂತ್ರಿಕ ಪ್ರಕ್ರಿಯೆಗೆ ಮಾತ್ರ ಸೀಮಿತವಾಗಿರುವುದಿಲ್ಲ. ಅನುವಾದವು ಎರಡು ಭಾಷೆಗಳು ಸಂಸ್ಕೃತಿ ಜನರ ಆಚಾರ, ವಿಚಾರ ಹಾಗೂ ನಡೆನುಡಿಗಳ ಅರ್ಥೈಸಿಕೊಳ್ಳುವಿಕೆಯನ್ನು ಒಳಗೊಂಡಿರುವ ಸಂವೇದನಾ ಹಾಗೂ ಸೃಜನಶೀಲ ಪ್ರಕ್ರಿಯೆ ಆಗಿರುತ್ತದೆ. ಇದಕ್ಕೆ ಅತ್ಯುತ್ತಮವಾದ ಬೌದ್ಧಿಕ ಸಾಮರ್ಥ್ಯದ ಅಗತ್ಯವಿರುತ್ತದೆ.

ಅನುವಾದವನ್ನು ಮಾಡುವಂತಹ ಅನುವಾದವಾದಕರು ಸಾಹಿತ್ಯದ ವಸ್ತು ವಿಚಾರದ ಬಗ್ಗೆ ಆಸಕ್ತಿ ಮತ್ತು ಅವುಗಳನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳುವ ಸಂಜ್ಞಾನಾತ್ಮಕ ಸಾಮರ್ಥ್ಯಗಳನ್ನು ಹೊಂದಿರಬೇಕಾಗಿರುತ್ತದೆ. ಅನುವಾದವು ಅನುವಾದಕರ ವ್ಯಕ್ತಿತ್ವ, ಬೌದ್ಧಿಕ ಸಾಮರ್ಥ್ಯ, ಶಬ್ದ ಭಂಡಾರ, ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಅವಲಂಬಿಸಿರುತ್ತದೆ. ಪ್ರಸ್ತುತ ಲೇಖನದಲ್ಲಿ ಸಾಹಿತ್ಯದ ಅನುವಾದದಲ್ಲಿ ಮನೋವೈಜ್ಞಾನಿಕ ಅಂಶಗಳಾದ ಸಂಜ್ಞಾನಾತ್ಮಕ, ಸಂವೇಗಾತ್ಮಕ, ಭಾಷಾ ಪಾಂಡಿತ್ಯ, ಮತ್ತು ಮನೋಭಾಷಾಶಾಸ್ತ್ರದ ಅಂಶಗಳು ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಸಂಶೋಧನಾ ಅಧ್ಯಯನದ ಫಲಿತಾಂಶಗಳು ಮತ್ತು ಮನೋವೈಜ್ಞಾನಿಕ ಸಿದ್ಧಾಂತಗಳ ನಿರೂಪಣೆಯೊಂದಿಗೆ ವಿಶ್ಲೇಷಿಸಲಾಗಿದೆ.

ಅನುವಾದಕನು ಕಥೆ, ಕಾದಂಬರಿ, ಪದ್ಯ ಅಥವಾ ನಾಟಕ ಮುಂತಾದ ಸಾಹಿತ್ಯ ಕೃತಿಗಳನ್ನು ಅನುವಾದ ಮಾಡುವಂತಹ ಸಂದರ್ಭದಲ್ಲಿ ಮೂಲ ಸಾಹಿತ್ಯದ ಪ್ರಸ್ತುತತೆಯ ಶೈಲಿ, ಉದ್ದೇಶ, ಸಾಹಿತ್ಯದ ಸಾಂಪ್ರದಾಯಿಕ ನೆಲೆಗಟ್ಟು ಎಲ್ಲವನ್ನೂ ಅರ್ಥೈಸಿಕೊಂಡು ಅದನ್ನು ಯಥಾವತ್ತಾಗಿ ಮತ್ತೊಂದು ಭಾಷೆಯಲ್ಲಿ ಪ್ರಸ್ತುತಪಡಿಸಬೇಕಾಗುತ್ತದೆ. ಪ್ರಸ್ತುತಪಡಿಸುವಂತಹ ಸಂದರ್ಭದಲ್ಲಿ ಅನುವಾದಕನು ಮೂಲ ಸಾಹಿತ್ಯದ ಸ್ವರೂಪ, ವಿನ್ಯಾಸ, ಲೇಖಕರ ಶೈಲಿ, ಇವುಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಇದರೊಂದಿಗೆ ಅನುವಾದಕನಿಗೆ ಮೂಲ ಸಾಹಿತ್ಯ ಸೃಷ್ಟಿಗೊಂಡಂತಹ ಸಾಮಾಜಿಕ, ಐತಿಹಾಸಿಕ, ರಾಜಕೀಯ ಹಿನ್ನೆಲೆ ಎಲ್ಲವುಗಳ ಬಗೆಗಿನ ಅರಿವು ಬಹಳ ಮುಖ್ಯವಾಗಿರುತ್ತದೆ.

ಪ್ರತಿಯೊಬ್ಬ ಲೇಖಕನು ತನ್ನದೇ ಆದ ನಿರೂಪಣಾ ಶೈಲಿಯನ್ನು ಹೊಂದಿರುತ್ತಾನೆ. ಅದು ಪದ್ಯದಲ್ಲಿ, ಗದ್ಯದಲ್ಲಿ ಮತ್ತು ನಾಟಕದಲ್ಲಿ ಇರಬಹುದು. ಅನುವಾದವನ್ನು ಮಾಡುವಂತಹ ಸಂದರ್ಭದಲ್ಲಿ ಆ ಅನುವಾದಕರು ಮೂಲ ಲೇಖಕರ ಸಾಹಿತ್ಯದ ಶೈಲಿ ಹಾಗೂ ಅದರಲ್ಲಿರುವಂತಹ ಅನನ್ಯತೆಯನ್ನು ಕಾಪಾಡಿಕೊಂಡು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಪ್ರಸ್ತುತ

ಪಡಿಸಬೇಕಾಗುತ್ತದೆ. ಅನುವಾದದ ಸಂದರ್ಭದಲ್ಲಿ ಹಲವಾರು ಅಂಶಗಳು ಅನುವಾದದ ಮೇಲೆ ಪ್ರಭಾವ ಬೀರುತ್ತವೆ. ಪ್ರಮುಖವಾಗಿ ಅನುವಾದಕನಿಗೆ ಬಹಳ ಆಳವಾದ ವಸ್ತು ವಿಚಾರದ ಬಗ್ಗೆ ಜ್ಞಾನವಿರಬೇಕು.

ಎರಡೂ ಭಾಷೆಗಳ ಮೇಲೆ ಹಿಡಿತವಿರಬೇಕು, ಎರಡು ಭಾಷೆಗಳ ವ್ಯಾಕರಣ ಹಾಗೂ ಎರಡೂ ಭಾಷೆಗಳನ್ನು ಮಾತನಾಡುವ ಮತ್ತು ಓದುಗರ ಜನರ ಜೀವನ ಶೈಲಿಗಳ ಬಗ್ಗೆ ಅರಿವಿರಬೇಕಾಗುತ್ತದೆ. ಸಾಹಿತ್ಯದ ಅನುವಾದವೆಂದರೆ ಕೇವಲ ಭಾಷೆಯಿಂದ ಭಾಷೆಗೆ ವಿಚಾರವನ್ನು ಪ್ರಸ್ತುತಪಡಿಸುವುದಲ್ಲ. ಒಂದು ಭಾಷೆಯಲ್ಲಿರುವಂತಹ ಸಾಂಪ್ರಾದಾಯಿಕ ಮತ್ತು ಸಾಮಾಜಿಕ ಪ್ರಭಾವಗಳು, ಒಗಟುಗಳು, ನಾಣ್ಣುಡಿಗಳು ಅಥವಾ ಹೇಳಿಕೆಗಳನ್ನು ಯಾವ ಸಂದರ್ಭ ಸನ್ನಿವೇಶದಲ್ಲಿ ಬಳಸಲಾಗಿದೆ, ಇವುಗಳ ಪ್ರಾಮುಖ್ಯತೆ ಮತ್ತು ಅದರ ಪ್ರಸ್ತುತತೆ, ಮುಂತಾದ ವಿಷಯಗಳು ಸಂಪೂರ್ಣವಾಗಿ ಅರಿತ ನಂತರವಷ್ಟೇ ಅದನ್ನು ಅದೇ ರೀತಿಯಲ್ಲಿ ಮತ್ತೊಂದು ಭಾಷೆಗೆ ಸಮರ್ಪಕವಾಗಿ ಅರ್ಥವಾಗುವ ರೀತಿಯಲ್ಲಿ ಅನುವಾದ ಮಾಡಬಹುದು.

ಅನುವಾದದಲ್ಲಿ ಎರಡು ರೀತಿಯ ದೋಷಗಳನ್ನು ಸಾಮಾನ್ಯವಾಗಿ ಕಾಣಬಹುದಾಗಿರುತ್ತದೆ. ಮೊದಲನೆಯದಾಗಿ "ಅತಿಯಾದ ಅನುವಾದ" (Over translation) ಅತಿಯಾದ ಅನುವಾದವೆಂದರೆ ಅನುವಾದವನ್ನು ಮಿತಿಮೀರಿ ಮಾಡುವುದು ಇದರಲ್ಲಿ ಅನುವಾದಿತ ಕೃತಿಯು ಮೂಲ ಸಾಹಿತ್ಯಕ್ಕಿಂತ ಹೆಚ್ಚಿನ ಅಂಶಗಳು, ಪದಗಳು, ವಾಕ್ಯಗಳು ಕಂಡುಬರುತ್ತವೆ. ಅನುವಾದವು ಮೂಲಕೃತಿಯ ಸಾರಾಂಶವನ್ನು ಕಳೆದುಕೊಂಡು ಹೆಚ್ಚುವರಿಯಾಗಿ ಅಥವಾ ವ್ಯಾಖ್ಯಾನದ ಸ್ವಂತ ಶೈಲಿಯನ್ನು ಅಳವಡಿಸಿಕೊಳ್ಳುವುದರಿಂದಾಗಿ ಉಂಟಾಗುತ್ತದೆ. ಅತಿಯಾದ ಅನುವಾದದ ಮೇಲೆ ಪ್ರಭಾವ ಬೀರುವ ಅಂಶವೆಂದರೆ ಅನುವಾದಕರು ಮೂಲ ಸಾಹಿತ್ಯವನ್ನು ಸರಿಯಾಗಿ ಅರ್ಥೈಸಿಕೊಳ್ಳದೆ ತನ್ನದೇ ಆಲೋಚನೆಗಳನ್ನು ಸೇರಿಸುವುದು, ಮೂಲ ಸಾಹಿತ್ಯದಲ್ಲಿ ಕೆಲವೊಂದು ಅಂಶಗಳನ್ನು ಬಿಡಲಾಗಿದೆ ಅದನ್ನು ಅನುವಾದದಲ್ಲಿ ಸರಿಪಡಿಸಿ ಪ್ರಸ್ತುತ ಪಡಿಸುತ್ತೇನೆ ಎಂಬ ಸ್ವಯಂ ಪರಿಕಲ್ಪನೆ, ಸ್ವಯಂ ನಿರ್ಧಾರಗಳನ್ನು ತೆಗೆದುಕೊಂಡು ತನ್ನ ಸ್ವಂತ ಅನುಭವಗಳನ್ನು ಸೇರಿಸಿದಾಗ ಅತಿಯಾದ ಅನುವಾದಕ್ಕೆ ಕಾರಣವಾಗುತ್ತದೆ.

ಅನುವಾದದಲ್ಲಿ ಕಂಡುಬರುವ ಮತ್ತೊಂದು ದೋಷವೆಂದರೆ ಅನುವಾದದಲ್ಲಿ ಕೊರತೆ (Under translation) ಇದನ್ನು 'ಅಪೂರ್ಣ ಅನುವಾದ' ವೆಂತಲೂ ಕರೆಯಬಹುದು. ಈ ಪ್ರಕ್ರಿಯೆಯಲ್ಲಿ ಮೂಲ ಸಾಹಿತ್ಯವನ್ನು ಸಂಪೂರ್ಣವಾಗಿ ವ್ಯಕ್ತಪಡಿಸಲು ಅಸಮರ್ಥವಾದಂತಹ ಸಂದರ್ಭದಲ್ಲಿ ಇದನ್ನು ಅನುವಾದದಲ್ಲಿನ ಕೊರತೆ ಎಂದು ಪರಿಗಣಿಸಲಾಗುತ್ತದೆ. ಅಪೂರ್ಣ ಅನುವಾದದಲ್ಲಿ ಮೂಲಕೃತಿಯಲ್ಲಿರುವಂತಹ ಆಳವಾದಂತ ಮಾಹಿತಿ, ಭಾವನೆ ಅಥವಾ ಆಲೋಚನೆಯು ವ್ಯಕ್ತಗೊಂಡಿರುವುದಿಲ್ಲ.

ಅನುವಾದದ ಬಗೆಗಿನ ಮನೋವೈಜ್ಞಾನಿಕ ವ್ಯಾಖ್ಯಾನಗಳು

"ಒಬ್ಬ ಓದುಗನು ಅನುವಾದಿತ ಕೃತಿಯನ್ನು ಓದಿದಾಗ ಮೂಲ ಕೃತಿಯಲ್ಲಿ ಹೇಗೆ ಭಾವನಾತ್ಮಕವಾಗಿ ಹಾಗೂ ಸಂಜ್ಞಾನಾತ್ಮಕವಾಗಿ ಲೇಖಕನ ವಿಚಾರಧಾರೆಯೊಂದಿಗೆ ಸಂಪರ್ಕವನ್ನು ಹೊಂದಲು ಸಾಧ್ಯವಾಗುತ್ತದೆಯೋ ಅದೇ ರೀತಿಯಲ್ಲಿ ಅನುವಾದಿತ ಕೃತಿಯಲ್ಲೂ ಸಹ ಮೂಲ ಕೃತಿಯ ಹಾಗೆಯೇ ಓದುಗನು ಲೇಖಕನ ಆಲೋಚನೆಗಳೊಂದಿಗೆ ಸ್ಪಂದಿಸಲು ಅವಕಾಶವನ್ನು ಮಾಡಿಕೊಡುವ ರೀತಿಯಲ್ಲಿ ಅನುವಾದಿತ ಕೃತಿಯು ಇರಬೇಕು" ಎಂದು ನಿಡಾ (1991) ಅವರು ಅನುವಾದದ ಪರಿಪೂರ್ಣತೆಯ ಬಗೆಗೆ ತಿಳಿಸುತ್ತಾರೆ.

ಹೋಮ್ಸ್ (1988) ಪ್ರಕಾರ "ಅನುವಾದ ಮನೋವಿಜ್ಞಾನವು ಅನುವಾದದ ಪ್ರಕ್ರಿಯೆ ಒಳಗೊಂಡಿರುವಂತಹ ಸಂಜ್ಞಾನಾತ್ಮಕ ಕಾರ್ಯಚಟುವಟಿಕೆಗಳು, ಅನುವಾದಕನ ಮನಸ್ಸಿನಲ್ಲಿರುವ ವಿಚಾರಗಳು, ಅನುವಾದಕನ ಭಾಷೆಯ ಅರಿವು, ಭಾಷೆಗಳ ಮೇಲಿನ ಹಿಡಿತ, ಅನುವಾದಕನ ವ್ಯಕ್ತಿತ್ವ ಮುಂತಾದ ಅಂಶಗಳನ್ನು ಅಧ್ಯಯನ ಮಾಡುವಂತಹ ಪ್ರತ್ಯೇಕವಾದ ಮನೋವಿಜ್ಞಾನ ಶಾಖೆಯಾಗಿದೆ.

ಅನುವಾದ ಮತ್ತು ಮನೋಭಾಷಾಶಾಸ್ತ್ರ

ಅನುವಾದದಲ್ಲಿ ಮನೋಭಾಷಾಶಾಸ್ತ್ರದ ಪಾತ್ರವು ಪ್ರಮುಖವಾಗಿದೆ. ಮನೋಭಾಷಾಶಾಸ್ತ್ರವು ಮನುಷ್ಯನ ಮೆದುಳಿನಲ್ಲಿ ನಡೆಯುವಂತಹ ಸಂಜ್ಞಾನಾತ್ಮಕ ಪ್ರಕ್ರಿಯೆಗಳಾದ ಭಾಷೆ ಕಲಿಯುವ ಪ್ರಕ್ರಿಯೆ, ಪ್ರತ್ಯಾಕ್ಷಾನುಭವ, ಅವಧಾನ, ಏಕಾಗ್ರತೆ, ಪದಗಳ

ಗುರುತಿಸುವಿಕೆ, ವ್ಯಾಕ್ಯಗಳು, ಭಾಷೆಯ ಅರ್ಥೈಸಿಕೊಳ್ಳುವಿಕೆ. ಸ್ಮರಣೆ ಮುಂತಾದವುಗಳನ್ನು ಸಮಗ್ರವಾಗಿ ಅಧ್ಯಯನ ಮಾಡುತ್ತದೆ. ಮನೋಭಾಷಾಶಾಸ್ತ್ರ ಮತ್ತು ಅನುವಾದ ಪರಸ್ಪರ ಪೂರಕವಾದ ಸಂಬಂಧವನ್ನು ಹೊಂದಿದೆ ಎಂಬುದಾಗಿ ಜೆ.(2000) ಅವರು ಅಭಿಪ್ರಾಯ ಪಡುತ್ತಾರೆ.

ಮನೋಭಾಷಾಶಾಸ್ತ್ರವು ಭಾಷಾ ಉತ್ಪಾದಕತೆ, ಭಾಷೆಯ ಅರ್ಥೈಸಿಕೊಳ್ಳುವಿಕೆ, ಭಾಷಾ ಬೆಳವಣಿಗೆ, ಭಾಷೆಯಲ್ಲಿನ ದೋಷಗಳು ಮತ್ತು ಭಾಷಾ ಕಲಿಕೆಯಲ್ಲಿ ಉಂಟಾಗುವಂತಹ ತೊಂದರೆಗಳನ್ನು ಅಧ್ಯಯನ ಮಾಡುವುದರೊಂದಿಗೆ ಅನುವಾದದ ವಿವಿಧ ಆಯಾಮಗಳು, ಏಕ ಭಾಷಾ ಕಲಿಕೆ, ದ್ವಿಭಾಷಾ ಕಲಿಕೆ, ಬಹುಭಾಷಾ ಕಲಿಕೆ ಪ್ರಕ್ರಿಯೆಗಳನ್ನು ಹಾಗೂ ಈ ಪ್ರಕ್ರಿಯೆಗಳಲ್ಲಿ ಮೆದುಳಿನ ಕ್ರಿಯಾ ಚಟುವಟಿಕೆಗಳು ಹೇಗೆ ಇರುತ್ತವೆ ಎಂಬುದನ್ನು ಮನೋಭಾಷಾಶಾಸ್ತ್ರವು ಅಧ್ಯಯನ ಮಾಡುತ್ತದೆ.

ಬೆಲ್ (1991) ಅವರು "ಅನುವಾದ ಪ್ರಕ್ರಿಯೆ ಸಂಯೋಜಿತ ಮಾದರಿ"ಯನ್ನು ಪ್ರತಿಪಾದಿಸುತ್ತಾರೆ. ಈ ಮಾದರಿಯು ಅನುವಾದಕರ ಜ್ಞಾನ, ಕೌಶಲಗಳು, ಅನುವಾದಕರ ಸಾಮರ್ಥ್ಯಗಳನ್ನು ಕೇಂದ್ರೀಕರಿಸುತ್ತದೆ. ಅನುವಾದಕನು ಮುಖ್ಯವಾಗಿ ಐದು ಅಂಶಗಳ ಜ್ಞಾನ ಹೊಂದಿರಬೇಕು. ಅವುಗಳೆಂದರೆ ಅನುವಾದ ಭಾಷೆಯ ಜ್ಞಾನ, ಮೂಲ ಸಾಹಿತ್ಯ ಭಾಷೆಯ ಜ್ಞಾನ, ವಸ್ತುವಿಷಯದ ವಾಸ್ತವಿಕ ಜ್ಞಾನ, ವಿಭಿನ್ನ ಸಂಸ್ಕೃತಿಗಳ ಜ್ಞಾನ ಪಠ್ಯವಸ್ತು ವಿಷಯ ಜ್ಞಾನ ಈ ಐದು ಅಂಶಗಳಲ್ಲಿ ಯಾವುದಾದರೂ ಒಂದು ಬಗೆಯ ಜ್ಞಾನದ ಕೊರತೆ ಕಂಡು ಬಂದಲ್ಲಿ ಅನುವಾದಕನು ಅನುವಾದವನ್ನು ಪರಿಪೂರ್ಣವಾಗಿ ಮಾಡಲು ಸಾಧ್ಯವಾಗುವುದಿಲ್ಲ ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಮುಂದುವರೆದು ಅನುವಾದದಲ್ಲಿ ಮನೋವೈಜ್ಞಾನಿಕ ಅಂಶಗಳಾದ ಭಾವಕಲ್ಪನೆ, ಪದವಿಶ್ಲೇಷಣೆ, ಅಭಿವ್ಯಕ್ತಪಡಿಸುವಿಕೆ, ವಾಕ್ಯಗಳ ಬೆಳವಣಿಗೆ ಮತ್ತು ಯೋಜನೆ ಪ್ರಮುಖವಾಗಿವೆ ಎಂದು ಈ ಮಾದರಿಯು ಪ್ರತಿಪಾದಿಸುತ್ತದೆ.

ಅನುವಾದದಲ್ಲಿ ಸಂಜ್ಞಾನಾತ್ಮಕ ಪ್ರಕ್ರಿಯೆಗಳು ಮಹತ್ವವಾದವು. ಸಂಜ್ಞಾನಾತ್ಮಕ ಪ್ರಕ್ರಿಯೆಗಳಾದ ಅವಧಾನ, ಏಕಾಗ್ರತೆ, ಪ್ರತ್ಯಕ್ಷಾನುಭವ, ಆಲೋಚನೆ, ವಿವೇಚನೆ ಇವುಗಳೊಂದಿಗೆ ಉನ್ನತ ಮಟ್ಟದ ಸಂಜ್ಞಾನಾತ್ಮಕ ಚಟುವಟಿಕೆಗಳಾದ ತಾರ್ಕಿಕ, ಆಲೋಚನೆ, ತಾರ್ಕಿಕ ವಿವೇಚನೆ, ಅಮೂರ್ತ ಪರಿಕಲ್ಪನೆ, ನಿರ್ಣಯ ತೆಗೆದುಕೊಳ್ಳುವಿಕೆ, ಪರಿಕಲ್ಪನಾ ರೂಪಿಸುವಿಕೆಯಂತಹ ಸಂಜ್ಞಾನಾತ್ಮಕ ಚಟುವಟಿಕೆಗಳು ಸಮಗ್ರವಾಗಿ ಕಾರ್ಯನಿರ್ವಹಿಸಿದರಷ್ಟೇ ಅನುವಾದವು ಸಂಪೂರ್ಣಗೊಳ್ಳಲು ಸಾಧ್ಯವಾಗುವುದು.

ಅನುವಾದದ ಮೇಲೆ ಪ್ರಭಾವ ಬೀರುವ ಮನೋವೈಜ್ಞಾನಿಕ ಅಂಶಗಳು

ಅನುವಾದದಲ್ಲಿ ಪ್ರಭಾವ ಬೀರುವ ಮನೋವೈಜ್ಞಾನಿಕ ಅಂಶಗಳನ್ನು ಕುರಿತಾಗಿ ಪ್ರಸ್ತುತ ಲೇಖನವು ಕೇಂದ್ರೀಕರಿಸುತ್ತದೆ. ಇದು ಮುಖ್ಯವಾಗಿ ಅನುವಾದದ ಪ್ರಕ್ರಿಯೆಯಲ್ಲಿ ಪ್ರಭಾವ ಬೀರುವ ಮನೋವೈಜ್ಞಾನಿಕ ಅಂಶಗಳಾದ ಅಂತಃಪ್ರಜ್ಞೆ, ಸಂವೇಗಾತ್ಮಕ ಬುದ್ಧಿಶಕ್ತಿ, ಭಾವನೆಗಳು, ಸ್ವಯಂಚಾಲಿತ ಕೌಶಲ, ಪರ್ಯಾಲೋಚನೆ ಮತ್ತು ಅನುವಾದಕರ ವ್ಯಕ್ತಿತ್ವ ಕಾರಕಾಂಶಗಳು, ಆತಂಕ, ಒತ್ತಡ, ಅಭಿಪ್ರೇರಣೆ ವೈಯುಕ್ತಿಕ ಮೌಲ್ಯಗಳು ಮತ್ತು ಮನೋಭಾವಗಳು ಮುಂತಾದವುಗಳನ್ನು ಒಳಗೊಂಡಿದೆ.

ಅನುವಾದದಲ್ಲಿ ಅಂತಃಪ್ರಜ್ಞೆ

ಮನೋವಿಜ್ಞಾನದಲ್ಲಿ ಅಂತಃಪ್ರಜ್ಞೆಯು ಪ್ರಮುಖವಾದ ಪರಿಕಲ್ಪನೆಯಾಗಿದೆ. ಕಾರ್ಲ್‌ಯೂಂಗ್ (1971) ಪ್ರಕಾರ ಅಂತಃಪ್ರಜ್ಞೆ ಎಂಬುದು ಸುಪ್ತಚೇತನದಿಂದ ಕಾರ್ಯನಿರ್ವಹಿಸುವಂತಹ ಪ್ರಾಥಮಿಕ ಪ್ರತ್ಯಾಕ್ಷಾನುಭವ ರೂಪವಾಗಿರುತ್ತದೆ. ಅನುವಾದಕರಲ್ಲಿ ಅಂತಃಪ್ರಜ್ಞೆಯು ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಅಂತಃಪ್ರಜ್ಞೆಯು ಅನುವಾದಕರ ಸಮಗ್ರ ಸಂಗ್ರಹಿತ ಜ್ಞಾನ ಮತ್ತು ವ್ಯಕ್ತಿನಿಷ್ಠವಾದ ಪ್ರಕ್ರಿಯೆಯಾಗಿದೆ. ಅನುವಾದಕರು ಮೂಲ ಸಾಹಿತ್ಯವನ್ನು ಅರ್ಥಮಾಡಿಕೊಂಡು ಅನುವಾದಮಾಡುವಾಗ

ಯಾವ ಪದ, ಶಬ್ದಸೂಕ್ತವೆಂದು ನಿರ್ಧಾರ ಮಾಡಿ ಶಾಬ್ದಿಕವಾಗಿ ಪ್ರಸ್ತುತಪಡಿಸುವಂತಹ ಸಂಕೀರ್ಣವಾದ ಪ್ರಕ್ರಿಯೆಯಲ್ಲಿ ಅಂತಃಪ್ರಜ್ಞೆಯು ಪರಿಣಾಮ ಪಾತ್ರವಹಿಸುತ್ತದೆ. ಅಂತಃಪ್ರಜ್ಞೆಯು ಅನುವಾದಕರು ವೇಗವಾಗಿ, ನಿರ್ಗಳವಾಗಿ, ಯಾವುದೇ ರೀತಿಯ ದ್ವಂದ್ವವಿಲ್ಲದೆ ಮೂಲಭಾಷೆ ಮತ್ತು ಅನುವಾದ ಭಾಷೆ ಎರಡರಲ್ಲೂ ಸಾಹಿತ್ಯವನ್ನು ಅರ್ಥೈಸಿಕೊಳ್ಳುತ್ತಾರೆ. ಅನಂತರ ಅರಿವಿನ ಸ್ಥಿತಿಯಲ್ಲಿ ವಿಶ್ಲೇಷಣಾತ್ಮಕವಾಗಿ, ವಿವರ್ಶಾತ್ಮಕ ಆಲೋಚನೆಯೊಂದಿಗೆ ಅರ್ಥಪೂರ್ಣವಾಗಿ ಮತ್ತು ಸಮತೋಲಿತವಾಗಿ ಅನುವಾದವನ್ನು ಮಾಡುತ್ತಾರೆ.

ಅನುವಾದದಲ್ಲಿ ಸಂವೇಗಾತ್ಮಕ (ಭಾವನಾತ್ಮಕ) ಬುದ್ಧಿಶಕ್ತಿಯ ಪಾತ್ರ

ಯಾವುದೇ ಸಾಹಿತ್ಯದ ಅನುವಾದದಲ್ಲಿ ಮೂಲ ಸಾಹಿತ್ಯದಲ್ಲಿರುವಂತಹ ವಿಚಾರಗಳು, ಭಾವನಾತ್ಮಕ ಧ್ವನಿ ಮತ್ತು ಹೇಳಿಕೆಗಳನ್ನು ಕೇವಲ ಶಾಬ್ದಿಕವಾಗಿ ಅನುವಾದ ಮಾಡದೆ ಅದನ್ನು ಮೂಲ ಸಾಹಿತಿಯ ಪರಿಕಲ್ಪನೆಯ ಹಾಗೆಯೇ ಅದೇ ಸಂವೇಗಗಳೊಂದಿಗೆ ಪ್ರಸ್ತುತಪಡಿಸಬೇಕಾದರೆ ಅನುವಾದಕರಿಗೆ ಸಂವೇಗಾತ್ಮಕ(ಭಾವನಾತ್ಮಕ) ಬುದ್ಧಿಶಕ್ತಿಯು ಬಹಳ ಮುಖ್ಯವಾದುದ್ದು. ಅನುವಾದ ಪ್ರಕ್ರಿಯೆಯು ಮಾನಸಿಕವಾಗಿ ಕೆಲವೊಮ್ಮೆ ಒತ್ತಡವನ್ನುಂಟು ಮಾಡುವಂತಹ ಪ್ರಕ್ರಿಯೆಯಾಗಿರಬಹುದು.

ಅಂತಹ ಸಂದರ್ಭದಲ್ಲಿ ಅನುವಾದಕರು ತಮ್ಮ ಅನುವಾದ ಕ್ರಿಯೆಯಲ್ಲಿ ತಮ್ಮ ಮನಸ್ಸನ್ನು ಕೇಂದ್ರೀಕರಿಸಲು, ಏಕಾಗ್ರತೆಯಿಂದ ಕಾರ್ಯನಿರ್ವಹಿಸಲು, ನಿರ್ಧಾರಗಳನ್ನು ನಿಖರವಾಗಿ ತೆಗೆದುಕೊಳ್ಳಲು ಮತ್ತು ಒತ್ತಡವನ್ನು ನಿರ್ವಹಿಸಲು ಸಂವೇಗಾತ್ಮಕ ಬುದ್ಧಿಶಕ್ತಿಯು ಸಹಾಯ ಮಾಡುತ್ತದೆ. ಅನುವಾದದಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿ ಉತ್ತಮವಾಗಿದ್ದಲ್ಲಿ ಭಾಷಾ ಸಂಬಂಧಿತ ವಿವರಣೆಗಳ ಕಡೆಗೆ ಹೆಚ್ಚು ಪ್ರಾಮುಖ್ಯತೆ ನೀಡಲು ಮತ್ತು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ ಎಂಬುದಾಗಿ ಗುಹನ್ ಗಾಹು ಕ್ವಿ (2023) ಅವರು ಅಭಿಪ್ರಾಯಪಡುತ್ತಾರೆ.

ಅನುವಾದದ ಪ್ರಕ್ರಿಯೆಯಲ್ಲಿ ಭಾವನೆಗಳ ಪಾತ್ರ

ಅನುವಾದದ ಪ್ರಕ್ರಿಯೆಯಲ್ಲಿ ಅನುವಾದಕರ ಭಾವನೆಗಳು ಪ್ರಮುಖ ಪಾತ್ರ ವಹಿಸುತ್ತದೆ. ಅನುವಾದ ಮಾಡಬೇಕಾದಂತಹ ವಸ್ತು ವಿಚಾರಗಳನ್ನು ಅನುವಾದಕರು ಹೇಗೆ ಪ್ರತ್ಯಕ್ಷ ಅನುಭವಿಸುತ್ತಾರೆ. ಅದನ್ನು ಹೇಗೆ ಪ್ರಕ್ರಿಯೆಗೊಳಿಸುತ್ತಾರೆ. ಮತ್ತು ಹೇಗೆ ಮತ್ತೊಂದು ಭಾಷೆಯಲ್ಲಿ ಪುನರುತ್ಪತ್ತಿಪಡಿಸುತ್ತಾರೆ ಎಂಬ ಅಂಶಗಳ ಮೇಲೆ ಅನುವಾದಕರ ಭಾವನೆಗಳು ಪ್ರಭಾವ ಬೀರುತ್ತವೆ.

ಉದಾಹರಣೆಗೆ ಅನುವಾದಕನು ಅನುವಾದ ಪ್ರಕ್ರಿಯೆಯಲ್ಲಿ ತೊಡಗಿದಾಗ ಅತಿಯಾದ ಒತ್ತಡ ಅಥವಾ ಆತಂಕವನ್ನು ಎದುರಿಸುತ್ತಿದ್ದರೆ ಅಂತಹ ಸಂದರ್ಭದಲ್ಲಿ ಅನುವಾದಿತ ಪ್ರಕ್ರಿಯೆ ವಸ್ತು ವಿಚಾರದಲ್ಲಿ ಹೆಚ್ಚಿನ ಮಟ್ಟದ ದೋಷಗಳು ಕಂಡುಬರುತ್ತವೆ. ಹಾಗೆಯೇ ಅನುವಾದಕರು ಸಕಾರಾತ್ಮಕ ಭಾವನೆಗಳಾದ ಕುತೂಹಲ ಸಹಾನುಭೂತಿ, ಸೃಜನಾಶೀಲತೆ, ಇವುಗಳನ್ನು ಅನುಭವಿಸುತ್ತಿದ್ದರೆ ಅದು ಅನುವಾದಿತ ಕೃತಿಯಲ್ಲಿ ಕಡಿಮೆ ದೋಷಗಳು ಕಂಡುಬರುತ್ತವೆ ಎಂದು ಫೆರಿಡ್ ಇಬ್ರಾಹಿಮೋವ್ (2025) ಅವರು ತಿಳಿಸುತ್ತಾರೆ. ಅನುವಾದಕರುಗಳ ಭಾವನೆಗಳ ಸ್ಥಿತಿಯು ಅವರ ಕಾರ್ಯಕ್ಷಮತೆ ಹಾಗೂ ಅನುವಾದ ಪ್ರಕ್ರಿಯೆಯ ಗುಣಮಟ್ಟದ ಮೇಲೆ ಮುಖ್ಯವಾದ ಪ್ರಭಾವ ಬೀರುತ್ತದೆ.

ಅನುವಾದಕರ ಮನಸ್ಸು ಪ್ರಶಾಂತತೆಯಿಂದ ಮತ್ತು ಆತ್ಮವಿಶ್ವಾಸದಿಂದ ಕೂಡಿದಲ್ಲಿ ಅನುವಾದಕನು ವಸ್ತು ವಿಚಾರದ ಮೇಲೆ ಬಹಳ ಕೇಂದ್ರೀಕೃತವಾದ ಮನಸ್ಥಿತಿಯನ್ನು ಹೊಂದಿದ್ದು, ಸೃಜನಶೀಲತೆಯಿಂದ ನಿರ್ಧರಿಸುವಂತಹ ಆಯ್ಕೆಗಳನ್ನು ಮಾಡಿಕೊಂಡು ಪದಗಳ ಆಯ್ಕೆ, ವಾಕ್ಯ ರಚನೆ ಮತ್ತು ವಾಕ್ಯದಲ್ಲಿರುವ ಭಾವಗಳ ಅರ್ಥೈಸಿಕೊಳ್ಳುವಿಕೆಯನ್ನು ಪರಿಪೂರ್ಣತೆಯಿಂದ ಮಾಡುತ್ತಾರೆ ಮತ್ತು ಉತ್ತಮ ಗುಣಮಟ್ಟದ ಅನುವಾದ ಕೃತಿಯನ್ನು ರಚಿಸುತ್ತಾರೆ.

ಅನುವಾದಕರ ಸ್ವಯಂ ಚಾಲಿತತೆ ಕೌಶಲ

ಮೂಲ ಸಾಹಿತ್ಯವನ್ನು ಸಂಪೂರ್ಣ ಮತ್ತು ವೇಗವಾಗಿ ಗ್ರಹಿಸಿ ಮತ್ತೊಂದು ಭಾಷೆಗೆ ಸುಲಭವಾಗಿ ಅನುವಾದ ಮಾಡುವುದನ್ನು 'ಸ್ವಯಂಚಾಲಿತತೆ ಕೌಶಲ' ಎನ್ನುವರು.ಅನುವಾದದ ಪ್ರಕ್ರಿಯು ಸರಳವಾಗಿ ಮತ್ತು ಅರ್ಥಪೂರ್ಣವಾಗಿ ನಡೆಯಲು ಅನುವಾದಕರಲ್ಲಿ "ಸ್ವಯಂ ಚಾಲಿತತೆ" ಕೌಶಲ ಬಹಳ ಮುಖ್ಯವಾಗಿರುತ್ತದೆ. ವ್ಯಂಗ್‌ಯೂ ಮತ್ತು ಜೇಂಗ್, ಬಿಂಗ್‌ಹನ್ (2025) ಅವರುಗಳು "ಅನುವಾದದಲ್ಲಿ ಸ್ವಯಂ ಚಾಲಿತತೆ ಸಮಯದ ಒತ್ತಡ ಮತ್ತು ಅನುವಾದ ಅನುಭವದ ಪರಿಣಾಮ" ಕುರಿತು ಸಂಶೋಧನೆ ಕೈಗೊಂಡಿದ್ದಾರೆ.ಈ ಸಂಶೋಧನೆಯ ಪ್ರಕಾರ 'ಅನುವಾದಕರಿಗೆ ಸಮಯದ ಗಡುವನ್ನು ನಿಗದಿಪಡಿಸಿದಾಗ ಸ್ವಯಂಚಾಲಿತತೆ ಹೆಚ್ಚಾಗಿ ಅನುವಾದದ ಪ್ರಕ್ರಿಯೆಯ ವೇಗವು ಹೆಚ್ಚಾಗಿ ಉತ್ತಮವಾಗಿ ಅನುವಾದಕಾರ್ಯ ಮಾಡುತ್ತಾರೆ.ಅನುಭವಿ ಅನುವಾದಕರ ಸ್ವಯಂಚಾಲಿತತೆ ಸಾಮರ್ಥ್ಯವು ಅನುಭವವಿಲ್ಲದ ಅನುವಾದಕರ ಸ್ವಯಂಚಾಲಿತ ಸಾಮರ್ಥ್ಯಕ್ಕಿಂತ ಹೆಚ್ಚಾಗಿರುತ್ತದೆ'.

ಪರ್ಯಾಲೋಚನೆ (Deverbalization): ಪರ್ಯಾಲೋಚನೆ ಎಂಬುದು ಅನುವಾದದಲ್ಲಿ ಮತ್ತು ಅರ್ಥೈಸಿಕೊಳ್ಳುವಿಕೆಯಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಇದು ಮೂಲ ಭಾಷೆಯಲ್ಲಿರುವಂತಹ ಪರಿಕಲ್ಪನೆಗಳನ್ನು ಅನುವಾದಕನು ಅರ್ಥೈಸಿಕೊಳ್ಳುವಂತಹ ಸಾಮರ್ಥ್ಯ ಹಾಗೂ ಮತ್ತೊಂದು ಭಾಷೆಯಲ್ಲಿ ಮೂಲ ಸಾಹಿತ್ಯದ ವಸ್ತು ವಿಷಯವನ್ನು ಸಂವೇಗಾತ್ಮಕ ಪ್ರಾಮುಖ್ಯತೆಯೊಂದಿಗೆ ಪುನರ್ ಆಯೋಜಿಸಿ, ಪರಿಣಾಮಕಾರಿಯಾಗಿ ಉತ್ತಮವಾದ ಪದ ಪ್ರಯೋಗದೊಂದಿಗೆ ವಾಕ್ಯ ರಚನೆಯನ್ನು ಮಾಡುವಂತಹ ಒಂದು ಪ್ರಕ್ರಿಯೆಯಾಗಿರುತ್ತದೆ.

ಅನುವಾದದ ಪ್ರಕ್ರಿಯೆಯಲ್ಲಿ ಅನುವಾದಕನು ಮೂಲ ಸಾಹಿತ್ಯದಲ್ಲಿ ಸಾಹಿತ್ಯಕಾರನು ವ್ಯಕ್ತಪಡಿಸಿರುವಂತಹ ಅಂಶಗಳು, ಉದ್ದೇಶಗಳು ಹಾಗೂ ಆ ಭಾವನೆಯ ಹಿನ್ನೆಲೆಯನ್ನು ಸಂಪೂರ್ಣವಾಗಿ ಅರ್ಥೈಸಿಕೊಂಡರಷ್ಟೇ ಈ ಪರ್ಯಾಲೋಚನೆಯ ಸಂಜ್ಞಾನಾತ್ಮಕ ಪ್ರಕ್ರಿಯೆಯು ಸಂಪೂರ್ಣವಾಗಲು ಸಾಧ್ಯವಾಗುತ್ತದೆ. ಈ ಹಂತದಲ್ಲಿ ಅನುವಾದಕನ ಮುಖ್ಯ ಉದ್ದೇಶ ಉಪವಸ್ತು ವಿಷಯಗಳು, ಆಲೋಚನೆಗಳು, ಮಾಹಿತಿಗಳು, ಸಂದೇಶಗಳು, ಪ್ರಕ್ರಿಯೆಗಳು, ಪರಿಕಲ್ಪನೆಗಳು, ಎಲ್ಲವನ್ನೂ ಮೂಲ ಸಾಹಿತ್ಯಕಾರನು ಸೃಷ್ಟಿಸುವ ರೀತಿಯಲ್ಲಿ ಅರ್ಥೈಸಿಕೊಂಡಾಗ ಮಾತ್ರ ಅನುವಾದದ ಪ್ರಕ್ರಿಯೆಯು ಪರಿಪೂರ್ಣತೆಯಿಂದ ಕೂಡಿರಲು ಸಾಧ್ಯವಾಗುತ್ತದೆ.

ಅನುವಾದಕರ ವ್ಯಕ್ತಿತ್ವ ಗುಣವಿಶೇಷಗಳು

ಅನುವಾದಕರು ಕಲಾತ್ಮಕತೆಯನ್ನು ಮತ್ತು ಸೃಜನಶೀಲತೆಯನ್ನು ಹೊಂದಿರಬೇಕು. ಸಾಮೂಹಿಕ ಜವಾಬ್ದಾರಿ, ಮುಕ್ತ ಮನಸ್ಸು, ಹೊಸ ವಿಚಾರಗಳನ್ನು ಒಪ್ಪಿಕೊಳ್ಳುವಂತಹ ಮನೋಭಾವ, ಭಾಷಾ ಪ್ರಾವಿಣ್ಯತೆ, ಭಾಷಾಂತರಿಸುವ ಭಾಷೆಗಳಲ್ಲಿ ಹೆಚ್ಚಿನ ಶಬ್ದಭಂಡಾರ, ಸುಲಲಿತವಾಗಿ, ವಿಷಯವನ್ನು ಪ್ರಸ್ತುತಪಡಿಸುವ ಸಾಮರ್ಥ್ಯ, ಪ್ರಾದೇಶಿಕ ಭಾಷೆಗಳಲ್ಲಿ ಇರುವಂತಹ ವಿಭಿನ್ನತೆ, ಭಾಷಾ ಶೈಲಿಯನ್ನು ಉತ್ತಮವಾಗಿ ಅರಿತುಕೊಂಡಿರಬೇಕು, ವಿಮರ್ಶೆಗಳು, ಟೀಕೆ ಟಿಪ್ಪಣಿಗಳು ಅನುವಾದಕರಿಗೆ ಅನುವಾದದಲ್ಲಿ ನಡೆದಿರುವಂತಹ ಲೋಪ ದೋಷಗಳನ್ನು ಗುರುತಿಸಿಕೊಳ್ಳಲು ಸಹಾಯ ಮಾಡುತ್ತದೆ.ಆದ ಕಾರಣ ವಿಮರ್ಶೆ ಟೀಕೆ ಟಿಪ್ಪಣಿಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸುವಂತಹ ಮನೋಭಾವವಿರಬೇಕು. ಇದರಿಂದಾಗಿ ಯಶಸ್ವಿ ಅನುವಾದಕರಾಗಲು ಸಹಾಯ ಮಾಡುತ್ತದೆ.

ಸಮಯ ನಿರ್ವಹಣೆಯ ಕೌಶಲ

ಅನುವಾದಕರು ಅನುವಾದ ಕಾರ್ಯವನ್ನು ಕೈಗೊಂಡಾಗ ಸಮಯ ನಿರ್ವಹಣೆಗೆ ಆದ್ಯತೆಯನ್ನು ನೀಡಬೇಕಾಗುತ್ತದೆ. ಅನುವಾದದಲ್ಲಿ ಸ್ಪಷ್ಟತೆ ಎಷ್ಟು ಪ್ರಮುಖವಾದದ್ದೊಅದೇ ರೀತಿ ಸಮಯ ನಿರ್ವಹಣೆ ಮತ್ತು ನಿಗಧಿತ ಸಮಯದೊಳಗೆ ಅನುವಾದ ಕಾರ್ಯವನ್ನು ಪೂರ್ಣಗೊಳಿಸುವುದು ಅಷ್ಟೇ ಮುಖ್ಯವಾದದ್ದು ಎಂಬುದನ್ನು ಅನುವಾದಕರು ಅರ್ಥಮಾಡಿಕೊಳ್ಳಬೇಕು.

ಆತಂಕ ಮತ್ತು ಒತ್ತಡ

ಒಂದು ಕೃತಿಯನ್ನು ಅನುವಾದ ಮಾಡುವಂತಹ ಸಂದರ್ಭದಲ್ಲಿ ಅನುವಾದಕರು ಅನೇಕ ರೀತಿಯ ಆತಂಕ ಮತ್ತು ಒತ್ತಡಗಳನ್ನು ಅನುಭವಿಸುತ್ತಾರೆ. ಅನುವಾದ ಮಾಡುತ್ತಿರುವಂತಹ ಕೃತಿಗೆ ತಾವು ನ್ಯಾಯ ಒದಗಿಸಬೇಕು, ಮೂಲಕೃತಿಯು

ಪರಿಪೂರ್ಣತೆಯಿಂದ ಅನುವಾದಗೊಳ್ಳಲು ಸಾಧ್ಯವಾಗಬೇಕು, ಮೂಲಕೃತಿಗೆ ಧಕ್ಕೆಯಾಗಬಾರದು ಹೀಗೆ ಹಲವಾರು ರೀತಿಯ ಆತಂಕ, ಭಯ ಹಾಗೂ ಒತ್ತಡಗಳು ಅನುವಾದಕರ ಮನಸ್ಸನ್ನು ಕಾಡುತ್ತಿರುತ್ತದೆ. ಅತಿಯಾದ ಆತಂಕವು ಅನುವಾದದ ಪ್ರಕ್ರಿಯೆಯ ಮೇಲೆ ನಕಾರಾತ್ಮಕವಾದ ಪ್ರಭಾವವನ್ನು ಬೀರುತ್ತದೆ.ಆದ್ದರಿಂದ ಅನುವಾದಕರು ಆತಂಕ ಮತ್ತು ಒತ್ತಡವನ್ನು ನಿರ್ವಹಿಸಿ ಉತ್ತಮವಾದ ಗುಣಮಟ್ಟದ ಅನುವಾದದ ಕಡೆಗೆ ಗಮನವನ್ನು ಕೇಂದ್ರೀಕರಿಸುವಂತಹ ಸಾಮರ್ಥ್ಯವನ್ನು ಹೊಂದಿರಬೇಕಾಗುತ್ತದೆ.

ಅಭಿಪ್ರೇರಣೆ

ಅನುವಾದಕರು ಸಾಹಿತ್ಯವನ್ನು ಅನುವಾದಿಸಲು ಅಭಿಪ್ರೇರಣೆ ಮಹತ್ವದ್ದಾಗಿರುತ್ತದೆ. ಸಾಹಿತ್ಯವನ್ನು ಅನುವಾದ ಮಾಡುತ್ತಿರುವಂತಹ ಸಂದರ್ಭದಲ್ಲಿ ಅನುವಾದ ಮಾಡಲು ಸಾಹಿತ್ಯ ಕೃತಿಯ ವಸ್ತುವಿಷಯ, ಸಮಾಜಕ್ಕೆ ಕೃತಿಯ ಅಗತ್ಯತೆ, ಮೂಲ ಲೇಖಕರು ಮತ್ತು ಕೃತಿಯ ಜನಪ್ರಿಯತೆ ಮುಂತಾದ ವಿಷಯಗಳು ಅಭಿಪ್ರೇರಣೆಗಳಾಗಿರುತ್ತವೆ.

ವೈಯಕ್ತಿಕ ಮೌಲ್ಯಗಳು ಮತ್ತು ಮನೋಭಾವಗಳು

ಅನುವಾದಕರ ವೈಯಕ್ತಿಕ ಮೌಲ್ಯಗಳು ಮತ್ತು ಮನೋಭಾವಗಳು ಅನುವಾದ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುತ್ತದೆ. ಅನುವಾದಕರು ಸಾಹಿತ್ಯದ ಪ್ರಕಾರವನ್ನು ಅರ್ಥಮಾಡಿಕೊಂಡು ಅನುವಾದಿಸುವಂತಹ ಸಂದರ್ಭದಲ್ಲಿ ಸಾಂಪ್ರದಾಯಿಕ ಪರಿಕಲ್ಪನೆಗಳು, ಸಾಂಸ್ಕೃತಿಕ ಅಂಶಗಳು, ವೈಯಕ್ತಿಕ ಮೌಲ್ಯಗಳು ಹಾಗೂ ಮನೋಭಾವಗಳು ವಸ್ತು ವಿಷಯದ ಅನುವಾದದ ಮೇಲೆ ಪ್ರಭಾವ ಬೀರುತ್ತವೆ.

ಸಮಾರೋಪ

ಸಾಹಿತ್ಯದ ಪ್ರಕಾರಗಳಲ್ಲಿ ಅನುವಾದ ಪ್ರಕಾರವು ಒಂದು ವಿಧವಾಗಿದೆ. ಅನುವಾದವು ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡುತ್ತದೆ.ಅನುವಾದಕರು ವಿವಿಧ ಭಾಷೆಗಳು, ಸಂಸ್ಕೃತಿ, ಮೌಲ್ಯಗಳು, ಆಚಾರ, ವಿಚಾರಗಳ ಬಗೆಗೆ ಜ್ಞಾನವನ್ನು ಹೊಂದಿರಬೇಕಾಗುತ್ತದೆ.ಅನುವಾದ ಪ್ರಕ್ರಿಯೆಯ ಮೇಲೆ ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕ ಅಂಶಗಳು ಪ್ರಭಾವ ಬೀರುವಂತೆ ಮನೋವೈಜ್ಞಾನಿಕ ಅಂಶಗಳೂ ಸಹ ಪರಿಣಾಮಕಾರಿಯಾದ ಪ್ರಭಾವವನ್ನು ಬೀರುತ್ತವೆ ಎಂಬುದನ್ನು ಮನೋಭಾಷಾಶಾಸ್ತ್ರದ ಸಿದ್ಧಾಂತಗಳು, ಮಾದರಿಗಳು ಹಾಗೂ ಮನೋವಿಜ್ಞಾನದ ಹಿನ್ನೆಲೆಯಲ್ಲಿ ತಿಳಿದುಕೊಳ್ಳಬಹುದಾಗಿದೆ.

ಪರಾಮರ್ಶನ ಗ್ರಂಥಗಳು

1. Nida, Eugene A.(1991) “Theories of Translation” Traduction, Terminologic, Reduction. Volume.4 No.1, p 19-32.
2. Holmes, J. (1988). The name and nature of translation studies. In J. S. Holmes (Ed.), Translated!: Papers on literary translation and translation studies (pp. 67–80). Rodopi.
3. Jay, T. B. (2004). The psychology of language. Peking University Press.
4. Bell, R. T. (1991). Translation and translating: Theory and practice. London and New York: Longman Group UK Limited.
5. Jung(1971) Psychological Types, Princetion University Press.

6. Guanghua Qiu (2023) Towards the effects of translators' emotional intelligence and anxiety on their translation quality, Heliyon, Volume 9, Issue 9, 2023, e19276,ISSN 2405-8440,

7. Ferid Ibrahimov (2025) The Role of Emotional Intelligence in Enhancing Translation Quality Originalus mokslinis straipsnis Vol. 1 No. 9 (2025): Lapkritis https://doi.org/10.69760/portuni.0109006

8. Weng, Yu & Zheng, Binghan. (2025). Automaticity in translation: Effects of time pressure and work experience. Meta. 69. 355-379. 10.7202/1118382ar.

ಹಳಗನ್ನಡ ಜೈನ ಕೃತಿಗಳಲ್ಲಿ ಮನೋವಿಜ್ಞಾನ

ಡಾ. ಎಸ್. ವಿ. ಸುಜಾತ

312, ಹೊಂಗಿರಣ, 9ನೇ ತಿರುವು, ಶಾಸ್ತ್ರೀನಗರ, ಬನಶಂಕರಿ 2ನೇ ಹಂತ, ಬೆಂಗಳೂರು

ಮನೋವಿಜ್ಞಾನ, ಮನಃಶಾಸ್ತ್ರ, ಮನೋದೈಹಿಕ ಬೇನೆ, ಮಾನಸಿಕ ಚಿಕಿತ್ಸೆ ಇಂಥ ಪದಗಳು ಇತ್ತೀಚೆಗೆ ಹೆಚ್ಚುತ್ತಿವೆ. ಪಾಶ್ಚಿಮಾತ್ಯ ಸಾಹಿತ್ಯ, ವಿಜ್ಞಾನದ ಪ್ರಭಾವದಿಂದ ಇವುಗಳ ಬಗ್ಗೆ ಅಧ್ಯಯನ, ಪ್ರಯೋಗ, ಬರಹಗಳು ಇಂದು ಜನಸಾಮಾನ್ಯರಿಗೂ ತಲುಪುತ್ತಿವೆ. ಆದರೆ ಈ ಅಂಶಗಳು ಹಿಂದೆಯೂ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಹುದುಗಿದ್ದವು. ಅದನ್ನು ಪ್ರತ್ಯೇಕಿಸಿ ವಿಶ್ಲೇಷಣೆ ಮಾಡುವ ವಿಧಾನ ಇಂದು ಹೊಸದಾಗಿದೆ ಅಷ್ಟೆ. ಕಾವ್ಯದ ಉದ್ದೇಶ ರಸಾನಂದವೇ ಆದರೂ ಅದರ ಮೂಲ ಜನಜೀವನದಲ್ಲಿ ಅಡಗಿದೆ. ಹೀಗಾಗಿ ಕಾವ್ಯದ ಪಾತ್ರಗಳ ಮಾನಸಿಕ ಅನುಭವ, ಸಂವೇದನೆ, ಚಿಂತನೆ ಇವುಗಳಲ್ಲಿ ಮನುಷ್ಯನ ಮೂಲಭೂತ ಅನುಭವಗಳೊಡನೆ ಸಾಮುದಾಯಿಕ ಅನುಭವಗಳ ನೆನಪೂ ಹಾಸುಹೊಕ್ಕಾಗಿರುತ್ತವೆ. ಕವಿಯಾದವನು ಅವುಗಳನ್ನೂ ತನ್ನ ಕಾವ್ಯಗಳಲ್ಲಿ ಚಿತ್ರಿಸಿರುತ್ತಾನೆ, ಜೈನ ಕಾವ್ಯಗಳಲ್ಲಿ ಕೂಡ ಇದನ್ನು ಅನೇಕ ಸ್ತರಗಳಲ್ಲಿ, ವಿಭಾಗಗಳಲ್ಲಿ ನಾವು ಗುರುತಿಸಬಹುದು.

ಮನುಷ್ಯರ ಮನಸ್ಸು ಸ್ವಸ್ಥವಾಗಿದ್ದಾಗ ಮಾತ್ರ ಸಮಾಜಪರ ಚಿಂತನೆ, ಪರಿಸರದ ಬಗ್ಗೆ ಕಾಳಜಿ, ಪ್ರಕೃತಿಯ ಎಲ್ಲ ಜೀವಿಗಳೊಡನೆ ಸಹಾನುಭೂತಿ ಉಂಟಾಗುತ್ತದೆ. ಆದರೆ ಎಲ್ಲ ಮನಸ್ಸುಗಳೂ ಹೀಗಿರಲಾರದು. ಮನುಷ್ಯನ ಕೆಲವು ದೌರ್ಬಲ್ಯಗಳು, ಕಷಾಯಗಳು, ಅವನನ್ನು ಹಿಂಡಿ, ವಿಕೃತ ನಡವಳಿಕೆಗಳನ್ನು ಪ್ರದರ್ಶಿಸುತ್ತದೆ. ಇವುಗಳನ್ನು ಜೈನ ಕವಿಗಳು ವಿವಿಧ ಪಾತ್ರಗಳ ಮೂಲಕ ಓದುಗರಿಗೆ, ಕೇಳುಗರಿಗೆ ತಲುಪಿಸಿದ್ದಾರೆ. ಇವೆರಡೂ ದೃಷ್ಟಿಕೋನಗಳನ್ನು ಕೆಲವು ಉದಾಹರಣೆಗಳ ಮೂಲಕ ಇಲ್ಲಿ ಗಮನಿಸಲಾಗಿದೆ.

ತಾರುಣ್ಯದ ಉನ್ಮಾದ, ವಿವೇಕರಹಿತ ನಡವಳಿಕೆ

10ನೇ ಶತಮಾನದ ಪಂಪನ ಆದಿಪುರಾಣದಲ್ಲಿನ ಒಂದು ಪ್ರಸಂಗ. ಆದಿನಾಥರೊಂದಿಗೆ ಅನೇಕ ರಾಜರು. ರಾಜಕುಮಾರರು ದೀಕ್ಷೆ ಸ್ವೀಕರಿಸಿ ತಪಸ್ಸಿಗೆ ತೆರಳುತ್ತಾರೆ. ಅವರೊಂದಿಗೆ ಆದಿನಾಥರ ಹಿರಿಯ ಪುತ್ರ ಭರತನ ಮಗ ಮರೀಚಿಯೂ ಹೋಗುತ್ತಾನೆ. ಆದಿನಾಥನು ಆರು ತಿಂಗಳ ಕಾಲ ಅಚಲನಾಗಿತಪದಲ್ಲಿ ನಿರತನಾಗಿ ಉಪವಾಸ ವ್ರತ ಹಿಡಿಯುತ್ತಾನೆ. ಆದರೆ ಒಂದೆರಡು ತಿಂಗಳು ಕಳೆಯುವಷ್ಟರಲ್ಲಿ ಮರೀಚಿ ಹಾಗೂ ಅವನ ಕೆಲವು ಸಹಚರರಿಗೆ ಈ ತಪಸ್ಸಿನ ಆಚರಣೆ ಕಠಿಣವೆನಿಸುತ್ತದೆ. ಅವರು 'ನಾವು ಈ ಪರೀಷಹ ಸಹಿಸಲಾರೆವು. ಇನ್ನು ಊರಿಗೆ ಹಿಂದಿರುಗೋಣ ಎಂದರೆ ಭರತ ಕೋಪಗೊಳ್ಳುತ್ತಾನೆ, ಆದ್ದರಿಂದ ಈ ಕಾಡಿನಲ್ಲೇ ಕಂದಮೂಲ ತಿಂದು ಜೀವ ಹಿಡಿದುಕೊಳ್ಳೋಣ' ಎಂದು ನಿರ್ಧರಿಸುತ್ತಾರೆ. ಕ್ರಮೇಣ ಕೌಪೀನ ಧರಿಸಿ, ಭಸ್ಮಲೇಪಿಸಿಕೊಂಡು ಸರೋವರದ ನೀರು ಕುಡಿದು ವ್ರತಭಂಗ ಮಾಡುತ್ತಾರೆ. ಮರೀಚಿ ಮಿಥ್ಯಾತತ್ವವನ್ನು ಬೆಳೆಸತೊಡಗುತ್ತಾನೆ. ಇಲ್ಲಿ ಯುವಮನಸ್ಸಿನ ಚಂಚಲತೆ, ವಿವೇಕಶೂನ್ಯತೆಗಳೊಂದಿಗೆ, ತನಗೆ ಸಾಧಿಸಲು ಸಾಧ್ಯವಾಗದ ಆಚರಣೆಯನ್ನೇ ವಿರೋಧಿಸುವ ಹುಂಬತನ ಮತ್ತು ಧಾರ್ಷ್ಟ್ಯಗಳನ್ನು ಗುರುತಿಸಬಹುದು.

ಇದಕ್ಕೆ ವಿರೋಧವೆನ್ನಬಹುದಾದ ಒಂದು ಪ್ರಸಂಗ 9ನೇ ಶತಮಾನದ ವಡ್ಡಾರಾಧನೆಯ ಲಲಿತಘಟೆಯ ಕಥೆಯಲ್ಲಿ ಕಾಣುತ್ತದೆ. ಹಿಂದೆ ಭರತಕ್ಷೇತ್ರದ ವತ್ಸೆ ಎಂಬ ನಾಡಿನಲ್ಲಿ ಕೌಶಾಂಬಿ ಎಂಬ ಪಟ್ಟಣವನ್ನು ಆಳುತ್ತಿದ್ದ ರಾಜ ಹರಿಧ್ವಜ ಮತ್ತು

ರಾಣಿ ವಾರುಣಿಗೆ ಶ್ರೀವರ್ಧನ ಮುಂತಾದ 32 ಜನ ಮಕ್ಕಳಿದ್ದರು. ಅವರ ಗೆಳೆಯರ ಗುಂಪಿನಲ್ಲಿ ಸಾಮಂತರ ಮಕ್ಕಳು, ಅಧಿಕಾರಿಗಳ ಮಕ್ಕಳು ಸೇರಿ 500 ಜನರಿದ್ದರು. ಅವರನ್ನು ಲಲಿತಘಟೆ (ಮನೋಹರವಾದ ಗುಂಪು) ಎಂದು ಕರೆಯುತ್ತಿದ್ದರು. ಅವರೆಲ್ಲ ಉತ್ಸಾಹದಿಂದ ಒಮ್ಮೆ ಬೇಟೆಗೆಂದು ಕಾಡಿಗೆ ಹೋದರು. ಅಲ್ಲಿ ಅಭಯಘೋಷರೆಂಬ ಮುನಿಗಳು ತಪಸ್ಸು ಮಾಡುತ್ತಿದ್ದರು. ಅವರ ತಪಸ್ಸಿನ ಪ್ರಭಾವದಿಂದ ಲಲಿತಘಟೆಯ ಗುಂಪಿಗೆ ಬೇಟೆಯಾಡಲು ಒಂದೂ ಪ್ರಾಣಿ ಸಿಗಲಿಲ್ಲ. ಅವರು ಬೇಸರದಿಂದ ಹಿಂದಿರುಗಿದರು. ಹೀಗೆ ಏಳು ದಿನಗಳು ನಡೆದನಂತರ ಎಂಟನೆಯ ದಿನ ಅವರು ಕಾಡಿನಲ್ಲಿ ದೂರದಿಂದ ಒಂದು ಮರದ ಕೆಳಗೆ ಧ್ಯಾನದಲ್ಲಿ ಲೀನರಾಗಿದ್ದ ಮುನಿಗಳನ್ನು ನೋಡಿ ಇದೊಂದು ಅಪೂರ್ವವಾದ ಪ್ರಾಣಿ ಎಂದು ಭಾವಿಸಿ ಬಾಣ ಬಿಟ್ಟರು. ಆದರೆ ಎಲ್ಲ ಬಾಣಗಳೂ ಮುರಿದುಹೋದವು. ಅಚ್ಚರಿಯಿಂದ ಅವರು ಹತ್ತಿರ ಬಂದು ನೋಡಿ ಅವರೊಬ್ಬ ಮುನಿ ಎಂದು ಅರಿತು ಅವರಿಗೆ ವಂದಿಸಿದರು. 'ನಮಗೆ ಧರ್ಮಹೇಳಿರಿ' ಎಂದು ಬೇಡಿಕೊಂಡರು. ಮುನಿಗಳು 'ದಯೆಯೇ ಧರ್ಮದ ಮೂಲ, ಹಿಂಸೆ, ಸುಳ್ಳು,ಕಳ್ಳತನ, ಪರಿಗ್ರಹ, ಪರಸತಿ/ಪುರುಷರಬಯಕೆ ಈ ಪಂಚ ಪಾಪಗಳ ಪರಿಣಾಮವಾಗಿ ನರಕ, ತಿರ್ಯಂಚ ಗತಿಗಳು ದೊರೆಯುತ್ತವೆ. ತ್ಯಾಗ, ಸಹನೆ, ಮಾಧ್ಯಸ್ಥ ಭಾವ, ಇಂದ್ರಿಯ ವಿಜಯ, ಮುಂತಾದ ಶುಭಸ್ವಭಾವಗಳನ್ನು ಅಳವಡಿಸಿಕೊಂಡು, ಹಸಿವು, ನಿದ್ರೆ ಮುಂತಾದ ಪರೀಷಹಗಳನನು ಜಯಿಸಿದ, ಕ್ರೋಧ, ಮಾನ, ಮಾಯಾ, ಲೋಭಗಳೆಂಬ ಕಷಾಯಗಳನ್ನು ಗೆದ್ದವನೇ ಹಾಗೂ ವೀತರಾಗಿ, ಸರ್ವಜ್ಞ, ಹಿತೋದೇಶಿಯಾದವನೇ ಪರಮಾತ್ಮ' ಎಂದು ಧರ್ಮದ ತತ್ವಗಳನ್ನು ಬೋಧಿಸಿದರು. ಅದನ್ನು ಕೇಳಿ ಅವರು ತಾವು ಇದುವರೆಗೆ ತಪ್ಪುಹಾದಿಯಲ್ಲಿ ನಡೆದಿದ್ದೇವೆ, ಇದನ್ನು ಪರಿಹರಿಸಿಕೊಳ್ಳಲು ತಮಗೂ ದೀಕ್ಷೆ ಕೊಡಿ ಎಂದರು. ಮುನಿಗಳು ಅವರಿಗೆ ಇನ್ನು 21 ದಿನಗಳಷ್ಟೇ ಆಯುಸ್ಸು ಎನ್ನಲು ಅವರಲ್ಲಿ ಕಿರಿಯವನಾದ ನಂದಿಮಿತ್ರನು 'ನಾವಿನ್ನೂ ತರುಣರು. ನೀವು ಹೇಳುವುದನ್ನು ನಂಬಲಾರೆವು' ಎಂದನು. ಮುನಿಗಳು ಅದಕ್ಕೆ ನಾಲ್ಕು ಕುರುಹುಗಳನ್ನು ಹೇಳಿದರು. ಯುವಕರೆಲ್ಲರೂ ಹಿಂದಿರುಗುವಾಗ ಮುನಿಗಳು ಹೇಳಿದ್ದ ಕುರುಹುಗಳೆಲ್ಲವೂ ಸತ್ಯವೆಂಬುದು ಅನುಭವಕ್ಕೆ ಬಂದಿತು. ಅವರು ಉದ್ವಿಗ್ನರಾದರು. ಅದೇ ಸಮಯಕ್ಕೆ ವರ್ಧಮಾನ ತೀರ್ಥಂಕರರು ಅಲ್ಲಿಗೆ ಬಂದರು. ಯುವಕರೆಲ್ಲರೂ ಅವರ ದರ್ಶನ ಮಾಡಿ, ತಮಗೆ ಇನ್ನೆಷ್ಟು ಕಾಲ ಆಯುಷ್ಯ ಎಂದು ಪ್ರಶ್ನಿಸಿದರು. ಭಟಾರರು 'ಇನ್ನು ಕೆಲವೇ ದಿನಗಳು' ಎಂದಾಗ ಅವರೆಲ್ಲರು ಅವರ ಬಳಿ ದೀಕ್ಷೆ ಸ್ವೀಕರಿಸಿದರು. ಸಲ್ಲೇಖನ ವಿಧಿಯಿಂದ ಸಮಾಧಿಮರಣ ಪಡೆದು ಸದ್ಗತಿ ಹೊಂದಿದರು.

ಈ ಕಥೆಯಲ್ಲಿ ತರುಣ ಮನಸ್ಸಿನ ಆಲೋಚನೆ, ಅವರ ತೀವ್ರ ಹಾಗೂ ತಕ್ಷಣದ ಪ್ರತಿಕ್ರಿಯೆಗಳನ್ನು ಕಾಣಬಹುದು. ಆ ವಯಸ್ಸಿನಲ್ಲಿ ಮನುಷ್ಯನು ಅತಿ ಶೀಘ್ರವಾಗಿ ಇತರರ ಪ್ರಭಾವಕ್ಕೊಳಗಾಗುವುದನ್ನು ಮನಃಶಾಸ್ತ್ರ ಗುರುತಿಸುತ್ತದೆ. ಅದರ ಪರಿಣಾಮವಾಗಿ ಅವರ ಆದ್ಯತೆಗಳು, ಆಯ್ಕೆಗಳು ಬಹುಬೇಗ ಬದಲಾಗಿಬಿಡುತ್ತವೆ, ಇಂದೂ ವಿದ್ಯಾರ್ಥಿಗಳಲ್ಲಿ ಈ ಮನೋಭಾವವನ್ನು ಗುರುತಿಸಬಹುದು. ಅವರ ಮೇಲೆ ಪ್ರಭಾವ ಬೀರುವುದು ಉತ್ತೇಜನಕಾರಿ ಮಾತುಗಳು, ಹೊಸ ಆಲೋಚನೆಗಳು ಮುಂತಾದವು. ಅದಕ್ಕೆ ತಕ್ಕಂತೆ ಪೂರಕವಾಗಿ ಅವರ ದೈಹಿಕ ಸಾಮರ್ಥ್ಯವೂ ಸಹಾಯಕವಾಗಿರುತ್ತದೆ. ಇದರಿಂದಾಗುವ ಎರಡು ಬಗೆಯ ಪರಿಣಾಮಗಳನ್ನು ಮೇಲಿನ ಎರಡೂ ಸಂದರ್ಭಗಳಲ್ಲಿ ಗುರುತಿಸಬಹುದಾಗಿದೆ. ಮರೀಚಿ ಒಂದು ಸುವ್ಯವಸ್ಥೆಯ ವಿರುದ್ಧ ಸಿಡಿದೆದ್ದು, ಬೇರೆಯದೇ ಆದ ಹಾದಿ ಹಿಡಿದು ಒಂದು ಪ್ರತ್ಯೇಕ ಚಿಂತನಾಧಾರೆಯನ್ನೇ ಹುಟ್ಟುಹಾಕುತ್ತಾನೆ. ಲಲಿತಘಟೆಯ ತರುಣರು ಸನ್ಮಾರ್ಗ ಅನುಸರಿಸಿ ಆತ್ಮಕಲ್ಯಾಣ ಮಾಡಿಕೊಂಡು ಇತರರಿಗೆ ಮಾದರಿಯಾಗುತ್ತಾರೆ.

ನಿದಾನ

ಮನುಷ್ಯನ ಮನಸ್ಸಿನ ಆಸೆ, ಬಲವತ್ತರವಾಗಿದ್ದು ಮರಣದ ಸಮಯದಲ್ಲಿ ಅದನ್ನೇ ತೀವ್ರವಾಗಿ ಭಾವಿಸಿದರೆ ಅದು ಮುಂದಿನ ಜನ್ಮದಲ್ಲಿ ನೆರವೇರುತ್ತದೆ ಎಂಬ ಚಿತ್ರಣ ಹಲವು ಕಥೆ, ಕಾವ್ಯಗಳಲ್ಲಿ ನಿರೂಪಿತವಾಗಿದೆ. ಇದಕ್ಕೆ ನಿದಾನ ಎನ್ನುತ್ತಾರೆ. ಇಚ್ಛಾಶಕ್ತಿಯ ಸಾಮರ್ಥ್ಯವನ್ನು ಮನೋವಿಜ್ಞಾನವೂ ಸಮರ್ಥಿಸುತ್ತದೆ. ಆದಿಪುರಾಣದಲ್ಲಿ ಗಂಧಿಲ ದೇಶದ ರಾಜನಾದ ಶ್ರೀಷೇಣನಿಗೆ ಜಯವರ್ಮ ಮತ್ತು ಶ್ರೀವರ್ಮ ಎಂಬ ಇಬ್ಬರು ಮಕ್ಕಳು. ಆದರೆ ಅವನು ತಪಸ್ಸಿಗೆ ಹೋಗುವಾಗ ಹಿರಿಯನಾದ ಜಯವರ್ಮನು

ಅಸಮರ್ಥನೆಂದು ಅವನನ್ನು ಬಿಟ್ಟು ಕಿರಿಯ ಮಗನಿಗೆ ಪಟ್ಟಗಟ್ಟಿದನು. ಇದರಿಂದ ನೊಂದ ಜಯವರ್ಮ ದಿಗಂಬರ ಮುನಿಗಳ ಬಳಿ ದೀಕ್ಷೆ ಸ್ವೀಕರಿಸಿ ತಪಸ್ಸು ಮಾಡಿದನು. ಅವನು ಒಮ್ಮೆ ಮುನಿಗಳ ನಿಯಮದಂತೆ ಕೇಶಲೋಚ ಮಾಡಿಕೊಂಡು ಕಿತ್ತ ತಲೆಗೂದಲನ್ನು ಹುತ್ತದೊಳಕ್ಕೆ ಹಾಕುವಾಗ ಹಾವು ಕಚ್ಚಿತು. ಅದೇ ಕ್ಷಣದಲ್ಲಿ ಮೇಲೆ ಆಕಾಶದಲ್ಲಿ ವಿದ್ಯಾಧರನ ವಿಮಾನವೊಂದು ಹೋಗುತ್ತಿತ್ತು. ಅದರ ವೈಭವವನ್ನು ಕಂಡು ಜಯವರ್ಮನು 'ನಾನು ಇದುವರೆಗೆ ತಪಸ್ಸುಮಾಡಿದ್ದರ ಫಲವೇನಾದರೂ ಇದ್ದಲ್ಲಿ ಮುಂದಿನ ಜನ್ಮದಲ್ಲಿ ವಿದ್ಯಾಧರನಾಗಿ ಹುಟ್ಟುವಂತಾಗಲಿ' ಎಂದು ನಿದಾನ ಮಾಡಿಕೊಂಡನು. ಮರುಭವದಲ್ಲಿ ಅವನು ಮಹಾಬಲನೆಂಬ ವಿದ್ಯಾಧರನಾಗಿ ಹುಟ್ಟಿ ರಾಜ್ಯಭಾರದ ಹೊಣೆಯನ್ನು ಮಂತ್ರಿಗಳ ಹೆಗಲಿಗೇರಿಸಿ ದೀರ್ಘ ಕಾಲ. ಸುಖಭೋಗಗಳಲ್ಲಿ ಮೈಮರೆತನು.

ವಡ್ಡಾರಾಧನೆಯ ಸುಕುಮಾರಸ್ವಾಮಿಯ ಕಥೆಯಲ್ಲಿ ತ್ರಿವೇದಿಗೆ ನಾಗಶ್ರೀ ಮಗಳಾಗಿದ್ದಳು. ಇಬ್ಬರೂ ವ್ರತಾಚರಣೆಯಿಂದ ಸ್ವರ್ಗದಲ್ಲಿ ದೇವನಾಗಿ ಜನಿಸಿದಾಗಲೂ ನಾಗಶ್ರೀಯೇ ತನಗೆ ಜನ್ಮಾಂತರಗಳಲ್ಲೂ ಮಗಳಾಗಬೇಕೆಂದು ನಿದಾನ ಮಾಡಿಕೊಂಡುದರ ಫಲವಾಗಿ ಮುಂದೆ ಯಶೋಭದ್ರೆಯಾಗಿ ಜನಿಸಿ ಸುಕುಮಾರನನ್ನು ಮಗನಾಗಿ ಪಡೆದಳು.

ಬಸಿರಿಯರ ಬಯಕೆ

ಬಸಿರಿ ಹೆಣ್ಣಿನ ಬಯಕೆಗಳ ಚಿತ್ರಣದಲ್ಲೂ ಮನೋವಿಜ್ಞಾನದ ನೆಲೆಗಳನ್ನು ಗುರುತಿಸಬಹುದು. ಅದರಲ್ಲಿ ಎರಡು ಬಗೆ. ಒಂದು ತಾಯಿಯ ಭಾವನೆಗಳು, ಚಿಂತನೆಗಳು ಮಗುವಿನ ಮೇಲೆ ಪ್ರಭಾವ ಬೀರುತ್ತವೆ ಎನ್ನುವುದಾದರೆ ಮತ್ತೊಂದು ಮಗುವಿನ ಸ್ವಭಾವಕ್ಕನುಗುಣವಾಗಿ ತಾಯಿಯಲ್ಲಿ ಬಯಕೆಗಳು ಕಂಡುಬರುತ್ತವೆ ಎನ್ನುವುದು. ಆದಿನಾಥರ ಪತ್ನಿಯರಾದ ಯಶಸ್ವತಿ, ಸುನಂದೆಯರು ಗರ್ಭಿಣಿಯರಾಗಿದ್ದಾಗ ಯಶಸ್ವತಿಗೆ ವಿಜಯಾರ್ಧ ಮತ್ತು ಹಿಮವತ್ಪರ್ವತಗಳ ಶಿಖರಗಳಲ್ಲಿ ವಿಹರಿಸುವ. ಮಲಯಾಚಲದ ಚಂದನವನಗಳಲ್ಲಿ ರಮಿಸುವ, ಷಟ್ಖಂಡಕ್ಷೇತ್ರದ ಮಣ್ಣಿನ ರುಚಿ ನೋಡುವ ಬಯಕೆಯಾಗುತ್ತದೆ. ಜತೆಗೆ ಸಿಂಹದ ಮರಿಗಳನ್ನು ನೋಡುವ, ವೀರಕಥೆಗಳನ್ನು ಕೇಳುವ ಆಸೆಯೂ ಉಂಟಾಗುತ್ತದೆ. ಮುಂದೆ ಅವಳ ಮಗ ಭರತನು ದಿಗ್ವಿಜಯ ಸಾಧಿಸಿ ಚಕ್ರವರ್ತಿಯಾಗುತ್ತಾನೆ. ಸುನಂದೆಗೆ ಜಟ್ಟಿಗಳ ಕಾಳಗವನ್ನು ನೋಡುವ, ಮದ್ದಾನೆಗಳ ಯುದ್ಧವನ್ನು ನೋಡುವ ಬಯಕೆಯಾಗುತ್ತದೆ. ಅವಳ ಮಗ ಬಾಹುಬಲಿ ಭರತನ್ನು ಸೋಲಿಸಿದ ವೀರನಾಗುತ್ತಾನೆ. ಲಲಿತಘಟೆಯ ಕಥೆಯಲ್ಲಿ ಬರುವ ಅಭಯಘೊಷ ಮುನಿಗಳ ತಾಯಿಗೆ ಅವರು ಗರ್ಭದಲ್ಲಿದ್ದಾಗ ಅಭಯಘೋಷಣೆ ಹೊರಡಿಸುವ ಆಸೆಯಾದುದರಿಂದ ಹುಟ್ಟಿದ ಮಗುವಿಗೆ ಅಭಯಘೋಷ ಎಂದು ಹೆಸರಿಟ್ಟರೆಂದಿದೆ. ಇದೇ ನಿರೂಪಣೆಯನ್ನು ಅಭಯಕುಮಾರನ ಪ್ರಸಂಗದಲ್ಲೂ ಕಾಣಬಹುದು. ಇಬ್ಬರೂ ಮುನಿಗಳಾಗಿ ಅಹಿಂಸೆ, ಅಭಯ, ತ್ಯಾಗಗಳ ಪ್ರತೀಕವಾಗಿ ಬಾಳಿದವರು. ಬಸಿರಿಯರಿಗೆ ಕೆಲವೊಮ್ಮೆ ವಿಚಿತ್ರ ವೆನಿಸುವ ಬಯಕೆಗಳೂ ಉಂಟಾಗಿರುವುದು ಕುತೂಹಲಕರ. ನಾಗರಾಜ ಕವಿಯ ಪುಣ್ಯಾಸ್ರವದಲ್ಲಿರುವ 'ಕರಕಂಡುವಿನ ಕಥೆ'ಯಲ್ಲಿ ಅವನ ತಾಯಿ ಪದ್ಮಾವತಿಗೆ ಮಳೆಗಾಲದ ಕಗ್ಗತ್ತಲ ರಾತ್ರಿಯಲ್ಲಿ ಗುಡುಗುಮಿಂಚುಗಳ ಆರ್ಭಟದನಡುವೆ ತಾನುಪುರುಷವೇಷ ಧರಿಸಿ ಮದ್ದಾನೆಯ ಮೇಲೆ ಕುಳಿತು ಕೈಯಲ್ಲಿ ಅಂಕುಶ ಹಿಡಿದುಕೊಂಡು ತನ್ನ ಪತಿ ದಂತಿವಾಹನನನ್ನು ಹಿಂದೆ ಕೂರಿಸಿಕೊಂಡು ಪಟ್ಟಣದ ಹೊರವಲಯದಲ್ಲಿ ವಿಹರಿಸಬೇಕೆಂಬ ಬಯಕೆ ಮೂಡುತ್ತದೆ. 'ರಾಜಾಶ್ರೇಣಿಕನ ಕಥೆ'ಯಲ್ಲಿ ಅವನ ಪ್ರಿಯ ಪತ್ನಿ ಚೇಳಿನಿಗೆ ಗರ್ಭಾವಸ್ಥೆಯಲಿ ಶ್ರೇಣಿಕನ ಎದೆಬಗಿದು ರಕ್ತ ಕುಡಿಯಬೇಕೆಂಬ ಬಯಕೆ ಮೂಡುತ್ತದೆ. ಮುಂದೆ ಅಜಾತಶತ್ರು ತಂದೆಯನ್ನು ಸೆರೆಯಲ್ಲಿಟ್ಟು ಅವನ ಸಾವಿಗೆ ಕಾರಣನಾಗುತ್ತಾನೆ. ಈ ಸಂದರ್ಭಗಳಲ್ಲಿ ಗರ್ಭಿಣಿಯರ ಇಂಥ ಬಯಕೆಗಳನ್ನೂ ಗಂಡಂದಿರು ಈಡೇರಿಸುತ್ತಿದ್ದರೆನ್ನುವುದು ಗಮನಾರ್ಹ ಸಂಗತಿ.

ಶುಭ ಭಾವನೆಗಳ ಪ್ರಭಾವ

ವ್ಯಕ್ತಿಯ ಶುಭಭಾವನೆಗಳ ಪ್ರಭಾವ ಇತರರ ಮೇಲೂ ಸಾಕಷ್ಟು ಆಗುವುದೆನ್ನುವುದಕ್ಕೆ ಹಲವಾರು ನಿದರ್ಶನಗಳು ಕಂಡುಬರುತ್ತವೆ. ಲಲಿತಘಟೆಯ ಕಥೆಯಲ್ಲಿ ಮುನಿಗಳ ಪ್ರಭಾವದಿಂದ ಆ ತರುಣರಿಗೆ ಬೇಟೆಯಾಡಲು ಯಾವ ಪ್ರಾಣಿಯೂ ಸಿಗುವುದಿಲ್ಲ. ಅವರ ಪ್ರಭಾವದಿಂದ ತರುಣರ ಮನಸ್ಸು ಪಶ್ಚಾತ್ತಾಪದಿಂದ ಶುದ್ಧವಾಯಿತು. ಆದಿನಾಥರ ತಪಃ ಪ್ರಭಾವದಿಂದ ಕಾಡಿನಲ್ಲಿ ಶಾಂತರಸ

ಪಸರಿಸಿತು. ಆನೆಗಳು ತಮ್ಮ ಸೊಂಡಿಲಿನಲ್ಲಿ ನೀರು ತಂದು ಸಿಂಹಗಳಿಗೆ ಕುಡಿಸಿದವು. ಹುಲಿಗಳು ಜಿಂಕೆಯ ಗುಂಪಿನಲ್ಲಿ ಸಂತೋಷವಾಗಿದ್ದವು.

ಅಶುಭ ಭಾವನೆಗಳ ಪರಿಣಾಮ:

ಇನ್ನು ಅಸೂಯೆ, ಕ್ರೌರ್ಯ, ದ್ವೇಷ ಇತ್ಯಾದಿ ಅಶುಭ ಭಾವನೆಗಳೂ ಪ್ರವೃತ್ತಿಗಳೂ ಮನುಷ್ಯರಲ್ಲಿ ಸಾಕಷ್ಟು ಇರುತ್ತವೆ. ಕೆಲವರಲ್ಲಿ ಸುಪ್ತವಾಗಿರುತ್ತವೆ, ಕೆಲವರು ಅದನ್ನು ನಿಗ್ರಹಿಸಿಕೊಳ್ಳುತ್ತಾರೆ, ಕೆಲವರು ಅದನ್ನೇ ಪೋಷಿಸಿಕಂಡು ಜನ್ಮಾಂತರಗಳವರೆಗೂ ಸಾಧಿಸುತ್ತಾರೆ. ಇದರ ನಿರೂಪಣೆಯೂ ಈ ಕಾವ್ಯಗಳಲ್ಲಿ ಚಿತ್ರಿತವಾಗಿವೆ.

16ನೇ ಶತಮಾನದ ಬಾಹುಬಲಿ ಕವಿಯ ಸಾಂಗತ್ಯ ಕೃತಿ 'ನಾಗಕುಮಾರ ಚರಿತಂ' ಕಾವ್ಯದಲ್ಲಿ ಜಯಂಧರನಿಗೆ ಇಬ್ಬರುಪತ್ನಿಯರು. ಹಿರಿಯವಳಾದ ವಿಶಾಲ ನೇತ್ರೆಗೆ ಕಿರಿಯ ರಾಣಿ ಪೃಥ್ವೀದೇವಿಯ ಬಗ್ಗೆ ಅಸೂಯೆ. ಅವಳ ಮಗ ನಾಗಕುಮಾರನ ಬಗ್ಗೆ ತನ್ನ ಮಗ ಶ್ರೀಧರನಲ್ಲಿ ಮತ್ಸರ ಬೆಳೆಸಿ ಅವನನ್ನು ಕೊಲ್ಲುವಂತೆ ಪ್ರೇರೇಪಿಸುತ್ತಾಳೆ. ನಾಗಕುಮಾರ ತನ್ನ ಚಾತುರ್ಯ, ಪರಾಕ್ರಮಗಳನ್ನು ಪ್ರದರ್ಶಿಸಿ ಜನರ ಪ್ರೀತಿ ಗಳಿಸಿದ ವಿಷಯ ತಿಳಿದ ವಿಶಾಲನೇತ್ರೆ ಮಗನಲ್ಲಿ ಅಸೂಯೆ ಬೆಳೆಸಲು ಉಪಾಯವಾಗಿ ಮಾತನಾಡುತ್ತಾಳೆ. ಮಗನಿಗೆ ರಾಜನೀತಿಯ ಕೆಲವು ಮಾತುಗಳನ್ನು ಹೇಳಿ ಬಳಿಕ ನಾಗಕುಮಾರನ ಖ್ಯಾತಿಯನ್ನು ಪ್ರಸ್ತಾಪಿಸಿ

ಅವನೆ ಕೃತಾರ್ಥ ಮತ್ತವನ ಪಡೆದ ತಾಯಿ ಭುವನದೊಳತಿವಿಖ್ಯಾತೆ,
ಪಡೆದೊಡೆ ತನಯನ ಪೃಥ್ವೀದೇವಿಯೆ ಮಱು ಪಡೆದಳು ಕಂದ ನಾ ನಿನ್ನ
ಪಡೆದೆನು ಕೇಳೆನ್ನ ಯೌವನವನಕೆ ನೀ ಕೊಡಲಿಯಲ್ಲದೆ ಸುತನಲ್ಲ॥
ಬೆಳೆಯ ಸಿರಿ ಮೊಳೆಯಲಿ ಕಾಣಬಹುದಿನ್ನಿಳೆಯೊಡೆತನವಿಲ್ಲ ನಿನಗೆ
ಬಲಿದನು ಸವತಿಯ ಮಗ ಬಲು ಹುರುಡಿನಿಂ ಫಲವಾವುದು?।

ಎಂದು ಅವನನ್ನು ಉದ್ರೇಕಗೊಳಿಸುತ್ತಾಳೆ. ಪರಿಣಾಮವಾಗಿ ಶ್ರೀಧರ "ಟಿಟ್ಟಿಭಸಾಹಸಿಯಾದೊಡೆ ಖಗರಾಜ ಪಟ್ಟಕೆಡರೆ ಗರುತ್ಮನಿಗೆಮೆಟ್ಟಿ ಕೀಳೆನೆಬೇರ್ವೆರಸಿಶಿರವನೀನುಬಿಟ್ಟಿರು ತಾಯೆ ಚಿಂತೆಯನು" ಎಂದು ನಾಗಕುಮಾರನನ್ನು ಕೊಲ್ಲಲು ಪ್ರಯತಿಸುತ್ತಾನೆ. ಆಚಣ್ಣನ 'ವರ್ಧಮಾನ ಚರಿತೆ'ಯಲ್ಲಿ ಮಹಾವೀರರ ತಾಯಿ ತ್ರಿಶಲೆಯ ತಂಗಿ ಚಂದನೆಯನ್ನು ಖೇಚರನು ಅಪಹರಿಸಿ ಕೊನೆಗೆ ಅವಳು ವರ್ತಕನೊಬ್ಬನ ಮನೆಯ ದಾಸಿಯಾಗುತ್ತಾಳೆ. ಅವಳ ರೂಪ ಕಂಡು ಅವನ ಪತ್ನಿ ಅಸೂಯೆಯಿಂದ ಅವಳ ತಲೆಗೂದಲು ಕತ್ತರಿಸಿ ಚಿಂದಿ ಬಟ್ಟೆ ಕೊಟ್ಟು ಸರಪಳಿಯಿಂದ ಕಟ್ಟಿ ಕೋಣೆಯಲ್ಲಿ ಕೂಡಿಹಾಕುತ್ತಾಳೆ.

ಪಾರ್ಶ್ವಪಂಡಿತನ 'ಪಾರ್ಶ್ವನಾಥ ಪುರಾಣಂ' ಕಾವ್ಯದಲ್ಲಿ ಕಮಠನು ತಮ್ಮನಾದ ಮರುಭೂತಿಯು ಊರಿನಲ್ಲಿಲ್ಲದಾಗ ಅವನಪತ್ನಿಯನ್ನು ತಾನು ಒಲಿಸಿಕೊಂಡು ಅವಳನ್ನು ತನ್ನ ಅರಮನೆಯಲ್ಲಿ ಇರಿಸಿಕೊಂಡಿದ್ದನು. ಅಣ್ಣನ ಮೇಲಿನ ಪ್ರೇಮದಿಂದ ಅದನ್ನು ಅದನ್ನು ಸಹಿಸಿಕೊಂಡಿದ್ದ ಮರುಭೂತಿಯು ತಪಸ್ಸಿಗೆ ತೆರಳಿದರೂ ಕಮಠನು ಅವನ ಮೇಲಿನ ದ್ವೇಷವನ್ನು ಮರೆಯಲಿಲ್ಲ. ಅವನ ಮೇಲೆ ಕಲ್ಲನ್ನು ಎತ್ತಿಹಾಕಿ ಅವನನ್ನು ಕೊಂದನು. ಅಷ್ಟೇ ಅಲ್ಲ ಮುಂದಿನ ಭವಗಳಲ್ಲೂ ಅವನ ಈ ದ್ವೇಷ ಕೊನೆಗೊಳ್ಳುವುದಿಲ್ಲ. ಕುಕ್ಕುಟಸರ್ಪ– ಆನೆ, ರಶ್ಮಿವೇಗ–ಹೆಬ್ಬಾವು, ಕುರಂಗಬೇಡ–ವಜ್ರನಾಭಿ, ಸಿಂಹ–ಆನಂದರಾಜನ ಭವಗಳಲ್ಲಿ ಉಪಸರ್ಗ ನೀಡಿ ಅಥವಾ ಕೊಂದು ತನ್ನ ದ್ವೇಷವನ್ನು ತೀರಿಸಿಕೊಂಡನು. ಕೊನೆಗೆ ಪಾರ್ಶ್ವನಾಥ ಭವದಲ್ಲಿ ಅವರು ತಪಸ್ಸು ಮಾಡುವಾಗ ಶಂಬರದೇವನಾಗಿ ಜನಿಸಿದ್ದ ಕಮಠನು ಅವರ ಮೇಲೆ ನಿರಂತರವಾಗಿ ಬೆಂಕಿ ಹಾಗೂ ಮಳೆ ಸುರಿಸಿ ಉಪಸರ್ಗವನ್ನುಂಟು ಮಾಡಿದನು. ಆದರೆ ಹಿಂದೆ ಪಾರ್ಶ್ವನಾಥರಿಂದ ಧರ್ಮೋಪದೇಶ ಕೇಳಿ ಸಮಾಧಿಮರಣ ಪಡೆದು ದೇವಗತಿ ಪಡೆದಿದ್ದ ಧರಣೇಂದ್ರ, ಪದ್ಮಾವತಿಯರು ಆ ಉಪಸರ್ಗವನ್ನು ನಿವಾರಿಸಿದರು.

ವಡ್ಡಾರಾಧನೆಯ ಕಥೆಗಳಲ್ಲಿ ಕ್ರೌರ್ಯದ ವಿವಿಧ ಮುಖಗಳನ್ನು ಚಿತ್ರಿಸಲಾಗಿದೆ. ಸುಕುಮಾರ ಸ್ವಾಮಿಯ ಕಥೆಯಲ್ಲಿ ನರಿಯು ಸುಕುಮಾರಸ್ವಾಮಿಯ ದೇಹವನ್ನು ನಿರಂತರ ಮೂರು ದಿನಗಳವರೆಗೆ ತಿನ್ನುವುದು, ಚಿಲಾತಪುತ್ರನ ಕಥೆಯಲ್ಲಿ ಕಟ್ಟಿರುವೆಗಳು ಮುನಿಯ ದೇಹವನ್ನೆಲ್ಲ ತೋಡಿ ತಿನ್ನುವುದು, ದಂಡಕರಿಸಿಯ ಕಥೆಯಲ್ಲಿ ಕೋತಿ ಮರದ ಕೊಂಬೆಯಿಂದ ಮುನಿಯ ತೊಡೆಯನ್ನು ಭೆದಿಸಿ ಹಿಂಸಿಸುವುದು ಇತ್ಯಾದಿ ಪ್ರಸಂಗಗಳು ದ್ವೇಷ ಹಾಗೂ ಹಿಂಸೆಯ ತೀವ್ರತೆಯನ್ನು ಚಿತ್ರಿಸುತ್ತವೆ.

ಇದಕ್ಕೆ ಪ್ರತಿಯಾಗಿ ಮುನಿಗಳ ಸಹನೆ, ಕ್ಷಮಾಗುಣ, ಆತ್ಮನಲ್ಲಿ ಲೀನವಾಗುವ ಮನೋಸ್ಥೈರ್ಯ ಇವುಗಳು ಕೂಡ ಮನಃಶಾಸ್ತ್ರದ ವ್ಯಾಪ್ತಿಗೇ ಒಳಪಡುತ್ತವೆ. ಇಂದಿನ ಅಧ್ಯಯನಗಳಿಗೆ ಇವೂ ವಸ್ತುಗಳಾಗುತ್ತವೆ. ಮನುಷ್ಯನ ಮನಸ್ಸಿನ ಆಳ, ಅಗಲಗಳನ್ನು, ಶುದ್ಧತೆ–ವಿಕೃತಿ ಇವುಗಳ ವಿರೋಧಾಭಾಸವನ್ನೂ ಕನ್ನಡದ ಪ್ರಾಚೀನ ಕೃತಿಗಳು ಸಮರ್ಥವಾಗಿ ಕಟ್ಟಿಕೊಟ್ಟಿವೆ. ಅವುಗಳಲ್ಲಿ ಕೆಲವು ಅಂಶಗಳನ್ನು ಸ್ಥೂಲವಾಗಿ ವಿಶ್ಲೇಷಿಸುವ ಪ್ರಯತ್ನ ಈ ಲೇಖನದಲ್ಲಿ ಮಾಡಲಾಗಿದೆ.

ಆಧಾರ ಗ್ರಂಥಗಳು

1. ವಡ್ಡಾರಾಧನೆಯ ಕಥೆಗಳು: ಜಿ. ಬ್ರಹ್ಮಪ್ಪ, ರತ್ನತ್ರಯ ಪ್ರಕಾಶನ, 2010. (ಮರುಮುದ್ರಣ).
2. ಕನ್ನಡ ನಾಗಕುಮಾರ ಕಥಾಕಾವ್ಯಗಳು– ತೌಲನಿಕ ಅಧ್ಯಯನ: ಡಾ॥ ಎಸ್.ವಿ. ಸುಜಾತ, ಸುಮೇರು ಜೈನ್ ಫೌಂಡೇಶನ್, 2014.
3. ಕನ್ನಡ ಜೈನಪುರಾಣಗಳ ಒಳನೋಟ: ಡಾ॥ ಎಸ್.ವಿ. ಸುಜಾತ, ಸುಮೇರು ಜೈನ್ ಪೌಂಡೇಶನ್, 2013.
4. ಪಂಪಕವಿ ವಿರಚಿತ ಆದಿಪುರಾಣಂ ಸಂ: ಡಾ. ಪಿ.ವಿ. ನಾರಾಯಣ, ಕನ್ನಡ ಪುಸ್ತಕ ಪ್ರಾಧಿಕಾರ, 2018.
5. ಲೇಖನ: ಲಲಿತಘಟೆಯ ಕಥೆ–ಒಂದು ವಿಶ್ಲೇಷಣೆ: ಪ್ರೊ.ಸಿ.ಪಿ. ಉಷಾರಾಣಿ.
6. ಜಯಮೇರು: ಡಾ. ಎಂ.ಎ. ಜಯಚಂದ್ರ ಮತ್ತು ಜಿ.ಎಸ್. ವಸಂತಮಾಲ ಅಭಿನಂದನಾ ಗ್ರಂಥ, ಸುಮೇರು ಜೈನ್ ಫೌಂಡೇಶನ್, 2025.

ಎಸ್.ಎಲ್.ಭೈರಪ್ಪ ಅವರ ಜನಪ್ರಿಯ ಕಾದಂಬರಿ ಉತ್ತರಕಾಂಡ ರೂಪಿಸುವ ಸಾಮೂಹಿಕ ಮನೋವಿಜ್ಞಾನ

ಸೌಮ್ಯ ಡಿ.

ಸಂಶೋಧನಾ ವಿದ್ಯಾರ್ಥಿನಿ, ಸ್ನಾತಕೋತ್ತರ ಹಾಗೂ ಸಂಶೋಧನಾ ಕೇಂದ್ರ,
ಸರ್ಕಾರಿ ಕಲಾ ಕಾಲೇಜು, ಅಂಬೇಡ್ಕರ್ ವೀದಿ ಬೆಂಗಳೂರು–01

ಸಾಹಿತ್ಯ ಮತ್ತು ಮನೋವಿಜ್ಞಾನ ಎರಡೂ ಮಾನವನ ಅಂತರಂಗದ ಅಧ್ಯಯನಕ್ಕೆ ಸಂಬಂಧಿಸಿದ ಶಾಸ್ತ್ರಗಳು. ಸಾಹಿತ್ಯವು ಮಾನವನ ಮನಸ್ಸಿನ ಭಾವನೆ, ಆಲೋಚನೆ, ಸಂಘರ್ಷ, ಆಸೆ–ಆಕಾಂಕ್ಷೆಗಳನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸುವ ಸಾಧನವಾಗಿದ್ದರೆ, ಮನೋವಿಜ್ಞಾನವು ಅವುಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಶಾಸ್ತ್ರವಾಗಿದೆ. ಸಾಹಿತ್ಯ ಕೃತಿಗಳಲ್ಲಿನ ಪಾತ್ರಗಳು ವಿವಿಧ ಮಾನಸಿಕ ಸ್ಥಿತಿಗಳನ್ನು ಪ್ರತಿಬಿಂಬಿಸುತ್ತವೆ. ಉದಾಹರಣೆಗೆ – ಪ್ರೀತಿ, ದ್ವೇಷ, ಭಯ, ಅಸೂಯೆ, ಅಪರಾಧಭಾವ, ಆತ್ಮಸಂಘರ್ಷ ಇತ್ಯಾದಿ ಭಾವನೆಗಳು ಕಥೆ, ಕಾದಂಬರಿ, ನಾಟಕಗಳಲ್ಲಿ ಸ್ಪಷ್ಟವಾಗಿ ಮೂಡಿಬರುತ್ತವೆ. ಇವುಗಳನ್ನು ಮನೋವಿಜ್ಞಾನವು ವ್ಯಕ್ತಿಯ ವ್ಯಕ್ತಿತ್ವ ವಿಕಾಸ, ಸುಪ್ತ ಚೇತನ ಮನಸ್ಸು, ಮನೋವ್ಯಾಧಿಗಳು ಎಂಬ ದೃಷ್ಟಿಯಿಂದ ವಿವೇಚಿಸುತ್ತದೆ.

ಫ್ರಾಯ್ಡ್‌ನ ಸುಪ್ತಚೇತನ ಸಿದ್ಧಾಂತ, ಯೂಂಗ್‌ನ 'ವಿಶ್ಲೇಷಣಾತ್ಮಕ ಮನೋವಿಜ್ಞಾನ' ತತ್ವಗಳು ಸಾಹಿತ್ಯ ವಿಮರ್ಶೆಗೆ ಹೊಸ ಆಯಾಮ ನೀಡಿವೆ. ಸಾಹಿತ್ಯವು ಮನೋವಿಜ್ಞಾನಕ್ಕೆ ಉದಾಹರಣೆಗಳನ್ನೂ, ಮನೋವಿಜ್ಞಾನವು ಸಾಹಿತ್ಯಕ್ಕೆ ವಿಶ್ಲೇಷಣೆಯ ಉಪಕರಣಗಳನ್ನೂ ನೀಡುತ್ತವೆ. ಈ ರೀತಿಯಾಗಿ ಎರಡೂ ಪರಸ್ಪರ ಪೂರಕವಾಗಿವೆ. ಸಾಹಿತ್ಯ ಮಾನವ ಮನಸ್ಸಿನ ಕಲಾತ್ಮಕ ಪ್ರತಿಬಿಂಬವಾಗಿದ್ದರೆ, ಮನೋವಿಜ್ಞಾನ ಅದಕ್ಕೆ ವೈಜ್ಞಾನಿಕ ವಿವರಣೆ ನೀಡುವ ಶಾಸ್ತ್ರವಾಗಿದೆ. ಆದ್ದರಿಂದ ಸಾಹಿತ್ಯ ಮತ್ತು ಮನೋವಿಜ್ಞಾನದ ನಡುವೆ ಆಳವಾದ ಮತ್ತು ಅಂತರಂಗದ ಸಂಬಂಧವಿದೆ. ನೀವೇ ಸೂಚಿಸಿರುವಂತೆ (ಸೆಮಿನಾರ್ ಬ್ರೋಷರ್) – 'ಸಾಹಿತಿಗಳು ಅನಧಿಕೃತ ಮನೋವಿಜ್ಞಾನಿಗಳು'. ಸಾಹಿತ್ಯವು ವ್ಯಕ್ತಿಯ ಮತ್ತು ಸಮಾಜದ ಮಾನಸಿಕ ಆರೋಗ್ಯವನ್ನು ಸಮಾಜದ ಸಾಸ್ಥ್ಯವನ್ನು ಸಮತೋಲನವಾಗಿಡುವಲ್ಲಿ ಅಂತೆಯೇ ಹದಗೆಡಿಸುವಲ್ಲಿ ಕೂಡ ಮಹತ್ವದ ಪಾತ್ರ ವಹಿಸುತ್ತದೆ. ಸಾಹಿತಿಗಳು ಸೂಕ್ಷ್ಮಮತಿಗಳೂ ಆಗಿರುವುದರಿಂದ ಮತ್ತು ಆಗಿರಲೇಬೇಕಿರುವುದರಿಂದ ಅವರ ಕೃಷಿಯ ಕುರಿತು ಅವರು ಅತ್ಯಂತ ಪ್ರಜ್ಞಾಪೂರ್ವಕವಾಗಿರಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಆಧುನಿಕ ಕನ್ನಡ ಸಾಹಿತ್ಯವನ್ನು ತಮ್ಮ ಕೃತಿಗಳಿಂದ ಶ್ರೀಮಂತಗೊಳಿಸಿದವರು ಎಸ್.ಎಲ್.ಭೈರಪ್ಪನವರು. ಕನ್ನಡ ಕಾದಂಬರಿ ಲೋಕದ ಓದುಗ ವಲಯವನ್ನು ಅಗಾಧವಾಗಿ ವಿಸ್ತರಿಸಿದ ಕೆಲವೇ ಕಾದಂಬರಿಕಾರರಲ್ಲಿ ಇವರೂ ಒಬ್ಬರು. ಕನ್ನಡದಲ್ಲಿ ಪ್ರಕಟಗೊಂಡ ಇವರ ಕೃತಿಗಳು ಭಾರತದ ಹಲವು ಭಾಷೆಗಳಿಗೆ ಅನುವಾದಗೊಂಡು ಹಲವು ಮುದ್ರಣಗಳನ್ನು ಕಂಡಿರುವುದೇ ಇದಕ್ಕೆ ಸಾಕ್ಷಿ.

ಹಾಗಾದರೆ ಸಾಹಿತಿಯೊಬ್ಬರು ಈ ಮಟ್ಟಿಗೆ ಜನಪ್ರಿಯತೆ ಗಳಿಸಲು ಕಾರಣವಾಗುವ ಅಂಶಗಳಾವುವು ಎಂಬುದು ಸಂಶೋಧನಾಯೋಗ್ಯ ವಿಷಯ. ಅಪಾರ ಓದುಗ ವಲಯವನ್ನು ಗಳಿಸಿಕೊಳ್ಳಲು ಕಾರಣವಾಗುವ ಅಂಶಗಳು ಯಾವುವು

ಎನ್ನುವುದನ್ನು ಅರಿತುಕೊಳ್ಳುವುದರ ಮೂಲಕ ಲೇಖಕ ಹಾಗೂ ಓದುಗರ ಸಮಾನ ಅಭಿರುಚಿಯನ್ನೂ ಆ ಮೂಲಕ ಅವರಿಬ್ಬರ ಮನೋಚಿಂತನೆಯನ್ನು ಅರ್ಥೈಸಿಕೊಳ್ಳಬಹುದು. ಈ ಸಮಾನಮನೋಧರ್ಮವೇ ವ್ಯಕ್ತಿಯ, ಕುಟುಂಬದ ಹಾಗೂ ಸಮಾಜದ ಸಾಮೂಹಿಕ ಮನೋವಿಜ್ಞಾನವನ್ನು ರೂಪಿಸುವುದರಲ್ಲಿ ಸೂಕ್ಷ್ಮವಾಗಿ ಕೆಲಸ ಮಾಡುತ್ತಿರುತ್ತದೆ.

ತತ್ವಶಾಸ್ತ್ರದ ವಿದ್ಯಾರ್ಥಿ ಹಾಗೂ ಸ್ವತಃ ತತ್ವಶಾಸ್ತ್ರದ ಬೋಧಕರಾಗಿದ್ದ ಭೈರಪ್ಪನವರ ಸಾಹಿತ್ಯದಲ್ಲಿ ತತ್ವಶಾಸ್ತ್ರದ ಅದರಲ್ಲೂ ವಿಶೇಷವಾಗಿ ಭಾರತೀಯ ತತ್ವಶಾಸ್ತ್ರದ ಹಲವು ನೆಲೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಅದರಲ್ಲೂ 'ಹಿಂದೂ' ಎಂದು ಕರೆಯಲ್ಪಡುವ ಧರ್ಮದ ವಿಚಾರಧಾರೆಗಳು ಅವರ ಕೃತಿಗಳ ಮ್ರಮುಖ ಆಕರ್ಷಣೆಯಾಗಿರುತ್ತದೆ. ಭಾರತೀಯ ಸಂಸ್ಕೃತಿ, ಧರ್ಮದ ಹೆಸರಿನಲ್ಲಿ ಬಂದ ಅವರ ಹಲವು ಕಾದಂಬರಿಗಳು ಸಮಾಜದಲ್ಲಿ ಸಾಮೂಹಿಕ ಮನೋವಿಜ್ಞಾನವನ್ನು ರೂಪಿಸುವಲ್ಲಿ ಪ್ರಭಾವ ಬೀರಿವೆ.

ಈ ಹಿನ್ನೆಲೆಯಲ್ಲಿ 2017ರಲ್ಲಿ ಪ್ರಕಟಗೊಂಡ ಅವರ ಉತ್ತರಕಾಂಡ ಕಾದಂಬರಿಯು ವಿಶಿಷ್ಟವಾದುದು. ಕೃತಿಯ ಕೃತಜ್ಞತಾ ಭಾಗದಲ್ಲಿ "ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ. ಬೇರೆ ಬೇರೆ ಭಾಷೆಗಳಲ್ಲಿ ರಾಮಾಯಣದ ಎಷ್ಟೋ ರೂಪಗಳು ಹುಟ್ಟಿವೆ, ಸೃಷ್ಟಿಯಾಗಿವೆ. ನಾನು ಅವುಗಳಲ್ಲಿ ಕೆಲವುಗಳ ಬಗೆಗೆ ಸ್ಥೂಲವಾಗಿ ತಿಳಿದಿದ್ದೇನೆಯೇ ಹೊರತು ಯಾವುದನ್ನೂ ಅಭ್ಯಾಸ ಮಾಡಿಲ್ಲ. ಇದು ವಾಲ್ಮೀಕಿ ರಾಮಾಯಣವನ್ನವಲಂಬಿಸಿದ ನನ್ನ ನೇರ ಸೃಜನಶೀಲ ಪ್ರತಿಕ್ರಿಯೆ"[1] ಎಂದು ಅವರೇ ಹೇಳಿಕೊಂಡಿದ್ದಾರೆ. 2020ರ ಹೊತ್ತಿಗೆ ಈ ಕಾದಂಬರಿ 20 ಮುದ್ರಣ ಕಂಡಿರುವುದು ಈ ಕೃತಿಯ ಜನಪ್ರಿಯತೆಗೆ ಒಂದು ಅಳತೆಗೋಲು.

ಈ ಸೃಜನಶೀಲ ಪ್ರತಿಕ್ರಿಯೆಯ ಹಿಂದಿನ ಅವರ ಮನೋಧೋರಣೆಗಳು ಕಾದಂಬರಿಯ ಜನಪ್ರಿಯತೆಯ ಒಂದು ಪ್ರಮುಖ ಅಂಶವಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಮನೋವಿಜ್ಞಾನದ ಹಲವು ಪರಿಕಲ್ಪನೆಗಳ ಸುತ್ತ ಕಾದಂಬರಿಯ ಕೆಲವು ಪಾತ್ರಗಳನ್ನು ನೋಡುತ್ತಲೇ ಸಮುದಾಯದ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಪಿತೃಪ್ರಧಾನ ಸಂಸ್ಕೃತಿಯು ಹುಟ್ಟುಹಾಕಿರುವ ಮೂಲಭೂತವಾದಿತನದ ಮನೋವಿಜ್ಞಾನವೇ ಕಾದಂಬರಿಯಲ್ಲಿಯೂ ಅಭಿವ್ಯಕ್ತಗೊಂಡಿರುವ ವಿಧಾನವನ್ನು ನೋಡುವ ಪ್ರಯತ್ನವನ್ನು ಮಾಡಲಾಗಿದೆ. ಇಡೀ ಕಾದಂಬರಿಯು ಮೇಲ್ನೋಟಕ್ಕೆ ಹೆಣ್ಣಿನ ಮುಕ್ತ ಅಭಿವ್ಯಕ್ತಿ ಹಾಗೂ ಹೆಣ್ಣಿನ ಸ್ವಾಭಿಮಾನದ ಪ್ರತೀಕ ಎಂಬಂತೆ ಕಂಡರೂ ಸಹ ಅದರ ಒಳವಿವರಗಳಲ್ಲಿ ಹೆಣೆದುಕೊಂಡಿರುವ ವೈದಿಕ ಪಿತೃಪ್ರಧಾನ ಸಂಸ್ಕೃತಿಯ ಚಹರೆಗಳನ್ನು ಉಳಿಸಿಕೊಂಡಿದೆ.

ಉತ್ತರಕಾಂಡ ಕಾದಂಬರಿಯು ವಾಲ್ಮೀಕಿ ರಾಮಾಯಣವನ್ನು ಆಧಾರವಾಗಿರಿಸಿಕೊಂಡು ಸೀತೆಯ ದೃಷ್ಟಿಕೋನದಿಂದ ಮರುಸೃಷ್ಟಿಸಿದ ಕಥನವಾಗಿದೆ. ಸಂಪೂರ್ಣ ಕಾದಂಬರಿಯ ತಳಹದಿಯೇ ಮನೋವೈಜ್ಞಾನಿಕ ವಿಶ್ಲೇಷಣೆ. ಭೈರಪ್ಪನವರು ತಮ್ಮ ಕಾದಂಬರಿಗಳಲ್ಲಿ ಪಾತ್ರಗಳು–ಅವುಗಳ ಒಳಜಗತ್ತು, ಭಾವನೆಗಳು, ಮನಸ್ಸಿನ ಗಹನತೆ, ಸಾಮಾಜಿಕ ಒತ್ತಡಗಳು ಮತ್ತು ಮೌಲ್ಯಗಳು ಹೇಗೆ ವ್ಯಕ್ತಿಯ ನಿರ್ಧಾರಗಳನ್ನು ರೂಪಿಸುತ್ತವೆ ಎಂಬುದನ್ನು ಗಂಭೀರವಾಗಿ ತೆರೆದಿಡುತ್ತಾರೆ. ಹೀಗೆ ಅವರು ಕಾದಂಬರಿಯಲ್ಲಿ 'ಸೃಷ್ಟಿಸುವ' 'ಸಾಮಾಜಿಕ ಒತ್ತಡಗಳು' ಮತ್ತು 'ಮೌಲ್ಯಗಳ' ಹಿಂದೆ ವೈದಿಕ ಪಿತೃಪ್ರಧಾನತೆಯ ಮೂಲಭೂತವಾದಿತನದ ಮನೋಧೋರಣೆಗಳು ಸೂಕ್ಷ್ಮವಾಗಿ ಕೆಲಸ ಮಾಡುತ್ತಿರುತ್ತವೆ ಎಂಬುದು ಇಲ್ಲಿ ಗಮನಿಸಲೇಬೇಕಾದ ಅಂಶ. ಈ ಬಗೆಯ ಸೃಜನಶೀಲ ಮಾದರಿಯೇ ಇಡೀ ಸಮುದಾಯದ ಮನೋವಿಜ್ಞಾನವನ್ನು ಸೃಷ್ಟಿಸುವಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿರುತ್ತದೆ. ಇಂತಹ ಮಾದರಿ ಈಗಾಗಲೇ ಸಮುದಾಯದಲ್ಲಿ ಬೇರೂರಿರುವ ಅಸಮಾನತೆಯ ಹಲವು ಅಂಶಗಳಿಗೆ ಪುಷ್ಟಿಯನ್ನೂ ನೀಡುತ್ತದೆ.

ಕಾದಂಬರಿಯಲ್ಲಿ ಕಂಡುಬರುವ ಹಲವು ಮುಖ್ಯ ಮನೋವೈಜ್ಞಾನಿಕ ಅಂಶಗಳು ಮತ್ತು ಅವುಗಳು ರೂಪಿಸುವ ಸಾಮೂಹಿಕ ಮನೋವಿಜ್ಞಾನದ ಅಂಶಗಳು:

ಕಾದಂಬರಿಯ ಮನೋವೈಜ್ಞಾನಿಕ ವಲಯವು ಸೀತೆ, ರಾಮ, ಲಕ್ಷ್ಮಣ, ಗೌತಮ, ಅಹಲ್ಯೆ, ರಾವಣ, ಶೂರ್ಪನಖಿ, ಲವ–ಕುಶ–ಮೊದಲಾದ ಪಾತ್ರಗಳ ಜೀವನಾನುಭವಗಳ ಮೂಲಕ ವ್ಯಕ್ತವಾಗುತ್ತವೆ. ವಿಶೇಷವಾಗಿ ಮಾನವನ ಮನಸ್ಸಿನ ನೋವು,

ಒಂಟಿತನ, ವಿಶ್ವಾಸ, ನಂಬಿಕೆ–ಅಪನಂಬಿಕೆ, ಸಮರ್ಥನೆ, ಆಭದ್ರತೆ, ಆಘಾತ (Trauma) ಹಾಗೂ ಆತ್ಮನಿರೀಕ್ಷಣೆ ಈ ಕೃತಿಯಲ್ಲಿ ಚರ್ಚಿಸಬಹುದಾದ ಮನೋವಿಜ್ಞಾನದ ಮುಖ್ಯ ಅಂಶಗಳು.

1. ಸೀತೆ – ಅಂತರಂಗದ ಮನೋವೈಜ್ಞಾನಿಕ ಪ್ರಯಾಣ – ಆಘಾತ ಮತ್ತು ಪುನರ್ ನಿರ್ಮಾಣ: ಸೀತೆಯ ಮನೋವೈಜ್ಞಾನಿಕ ಚಿತ್ರಣವು ಕಾದಂಬರಿಯ ಕೇಂದ್ರ. ಆಕೆಯ ಜನ್ಮ ರಹಸ್ಯದ ತಳಮಳ[2] ಅರಣ್ಯವಾಸ, ರಾವಣನಿಂದ ಅಪಹರಣ, ಅಗ್ನಿಪರೀಕ್ಷೆ, ಪುನಃ ಪರಿತ್ಯಕ್ತಳಾದದ್ದು, ಮಕ್ಕಳ ಪೋಷಣೆ – ಈ ಎಲ್ಲಾ ಹಂತಗಳು ಅವಳಲ್ಲಿ ವಿವಿಧ ರೀತಿಯ ಮನೋವೈಜ್ಞಾನಿಕ ಪ್ರಕ್ರಿಯೆಗಳನ್ನು ರೂಪಿಸುತ್ತವೆ. ಸೀತೆಯ ಜೀವನ ಒಂದು Post traumatic growth[3] ಪರಿಕಲ್ಪನೆಗೆ ಉದಾಹರಣೆಯಂತಿದೆ. ನಿರಂತರ ಆಘಾತಗಳ ನಡುವೆಯೂ ಅವಳು ತಾನೇ ತನ್ನ ಜೀವನದ ಅರ್ಥವನ್ನು ಹುಡುಕಿಕೊಳ್ಳಲು ಪ್ರಯತ್ನಿಸುತ್ತಾಳೆ. ವಿಶೇಷವಾಗಿ, ಅಗ್ನಿಪರೀಕ್ಷೆಯ ನಂತರ ಉಂಟಾದ ಆಳವಾದ ನೋವು ತನ್ನ ಅಸ್ತಿತ್ವವನ್ನು ಪುನಃ ನಿರ್ಮಿಸಲು ಅವಳ ಮನಸ್ಸನ್ನು ಒತ್ತಾಯಿಸುತ್ತದೆ. ರಾವಣನ ಸಾವಿನ ನಂತರ ರಾಮನನ್ನು ಎದುರಾದ ಸೀತೆಗೆ ರಾಮನ ಅನಿರೀಕ್ಷಿತ ಮಾತುಗಳಿಂದ ಆಕೆಗಾದ ಅನಿರೀಕ್ಷಿತ ಆಘಾತವನ್ನು ಗುರುತಿಸಬಹುದು. ಅಲ್ಲಿಯವರೆಗೂ ಪ್ರೀತಿಯಿಂದ ಸೀತೆ ಎಂದು ಕರೆಯುತ್ತಿದ್ದ ರಾಮ ಆ ಕ್ಷಣದಲ್ಲಿ 'ಜನಕಪುತ್ರೀ' ಎಂದು ಕರೆದಾಗ ಆಕೆಗೆ ಆಶ್ಚರ್ಯವಾಗುತ್ತದೆ. ರಾಮ ಮುಂದುವರಿದು – "ನಿನ್ನನ್ನು ಹೊತ್ತೊಯ್ದ ರಾವಣನನ್ನು ಕೊಂದು ಇಕ್ಷ್ವಾಕು ವಂಶದ ಗೌರವವನ್ನು ಕಾಪಾಡಿಕೊಂಡಿದ್ದೇನೆ. ನಾನು ನಿನಗಾಗಿ ಯುದ್ಧ ಮಾಡಲಿಲ್ಲ. ನನ್ನ ವಂಶದ ಕೀರ್ತಿಯನ್ನುಳಿಸಿಕೊಳ್ಳಲು ಯುದ್ಧ ಮಾಡಿದೆ. ನಿನ್ನನ್ನು ಹುಡುಕಲು, ರಾವಣನ ಮೇಲೆ ಯುದ್ಧ ಹೂಡಲು ಅವನ ಸೈನ್ಯವನ್ನು, ಸೇನಾಮುಖ್ಯರನ್ನು ಕೊಲ್ಲಲು ಕಿಷ್ಕಿಂದೆಯ ಈ ವೀರರು ಸಹಾಯ ಮಾಡಿದ್ದಾರೆ. ನನ್ನ ಕೆಲಸ ಮುಗಿದಿದೆ. ಇಷ್ಟು ದೀರ್ಘಕಾಲ ಪರಪುರುಷನ ಅದರಲ್ಲೂ ರಾವಣನಂಥ ಅಪಕೀರ್ತಿಯ ಕಾಮಿಯ ಅಧೀನದಲ್ಲಿದ್ದ ನಿನ್ನ ಮೇಲೆ ನನಗೆ ನಂಬಿಕೆ ಇಲ್ಲ. ನೀನು ಸ್ವತಂತ್ರಳಾಗಿದ್ದೀಯೆ. ನೀನು ಎಲ್ಲಿ ಬೇಕಾದರೂ ಹೇಗೆ ಬೇಕಾದರೂ ಇರಬಹುದು. ವಿಭೀಷಣನ ಆಶ್ರಯ ಬೇಡಬಹುದು. ಭರತನ ಆಶ್ರಯ ಕೇಳಬಹುದು. ಬೇರೆ ಯಾರ ಸಹಾಯದಿಂದಲಾದರೂ ಬದುಕಬಹುದು. ನಿನ್ನಿಷ್ಟ" ಎಂದು ರಾಮ ಮಾತು ನಿಲ್ಲಿಸಿದಾಗ–ಸೀತೆಯ ಮನದಲ್ಲಿ ಮೂಡುವ ಭಾವನೆಗಳನ್ನು ಇಲ್ಲಿ ಗಮನಿಸಬೇಕು. "ಇವನು ಏನು ಹೇಳುತ್ತಿದ್ದಾನೆ? ಈ ಮಾತನ್ನಾಡುತ್ತಿರುವವನು ನನ್ನ ರಾಮನೇ? ನಂಬಿಕೆ ಬರುತ್ತಿಲ್ಲ. ತಲೆ ಸುತ್ತಿ ಬಂತು. ಕಣ್ಣು ಕತ್ತಲೆ, ಕುಸಿದು ಬಿಟ್ಟೆ. ಹತ್ತಿರದಲ್ಲಿದ್ದ ಸರಮೆ ಓಡಿ ಬಂದು ಹಿಡಿದುಕೊಳ್ಳದಿದ್ದರೆ ತಲೆಯು ಹತ್ತಿರದಲ್ಲಿದ್ದ ಚೂಪು ಕಲ್ಲಿಗೆ ಬಡಿದು ಸೀಳಿ ಹೋಗುತ್ತಿತ್ತು. ಯಾರೂ ಮಾತನಾಡಲಿಲ್ಲ. ಅವರಿಗೆಲ್ಲ ರಾಮನ ಮಾತಿನಲ್ಲಿ ಸಮ್ಮತಿ ಇತ್ತೋ? ಅಥವಾ ಮಾತನಾಡಲು ಅಂಜಿಕೆಯೋ? ಅಥವಾ ತಟಸ್ಥ ಭಾವನೆಯೋ? ಚೇತರಿಸಿಕೊಳ್ಳಲು ಸಮಯ ಬೇಕಾಯಿತು. ಯುದ್ಧದಲ್ಲಿ ಸಹಾಯ ಮಾಡಿದವರಿಗೆಲ್ಲ ಇವನ ಇಕ್ಷ್ವಾಕು ವಂಶದ ಕೀರ್ತಿಯನ್ನು ಉಳಿಸಿಕೊಡುವ ಉದ್ದೇಶವಿತ್ತೋ? ಅಥವಾ ಒಬ್ಬ ಹತಭಾಗಿನಿಯ ಮುಕ್ತಿ ಬೇಕಿತ್ತೋ? ಚೇತರಿಸಿಕೊಂಡ ನಂತರ ಮತ್ತೆ ಎದ್ದು ನಿಂತೆ: 'ರಾಮ ನೀನೊಬ್ಬ ಸುಸಸ್ಕೃತ ರಾಜಕುಮಾರನೆಂದು ನಮ್ಮಪ್ಪ ನಿನಗೆ ಧಾರೆ ಎರೆದು ಕೊಟ್ಟ. ಇಂಥ ಅಸಂಸ್ಕೃತ ಮಾತು ಬರಲು ನಿನ್ನ ನಾಲಗೆಯ ಮೇಲೆ ರಾವಣನ ಪ್ರೇತ ಕೂತಿದೆಯೋ? ನನ್ನ ಪಾತಿವ್ರತ್ಯಕ್ಕೆ ಸಾಕ್ಷಿ ಬೇಕಾದರೆ ನಿನ್ನೆದುರಿಗೆ ನಿಂತಿರುವ ವಿಭೀಷಣನ ಧರ್ಮಪತ್ನಿ ಸರಮೆಯನ್ನು ಕೇಳು. ನೀನು ಹೇಳುವ ಯಾವ ದೇವರ ಮೇಲಾದರೂ ನಾನು ಪ್ರಮಾಣ ಮಾಡುತೀನಿ. ನನ್ನ ತಂದೆ ಜನಕಮಹಾರಾಜನ ಮೇಲೆ, ನನ್ನ ಪತಿಯಾದ ನಿನ್ನ ಮೇಲೆ ಆಣೆ ಇಡುತೀನಿ,' ಎಂದೆ. ಅವನು ಉತ್ತರಿಸಲಿಲ್ಲ. 'ಮಾತನಾಡು. ಯಾಕೆ, ನಾಲಗೆ ಕಟ್ಟಿ ಹೋಯಿತೆ?' ಎಂದು ಧ್ವನಿ ಎತ್ತರಿಸಿ ಕೇಳಿದೆ. 'ವಿಭೀಷಣ, ಅವನ ಹೆಂಡತಿ ರಾವಣನಿಂದ ನೊಂದವರು. ನಿನ್ನ ಸಲುವಾಗಿ ನಾನು ಯುದ್ಧಕ್ಕೆ ಬಂದದ್ದರಿಂದ ಅವರು ನಿನ್ನಿಂದ ಉಪಕೃತರು. ಅವರ ಸಾಕ್ಷಿಗೆ ಬೆಲೆ ಇಲ್ಲ. ಸಂದರ್ಭವೇ ಸಾಕ್ಷಿ. ಅವನು ಕೈಗೆ ಸಿಕ್ಕಿದ ಹೆಣ್ಣನ್ನು ಒಂದು ನಿಮಿಷವೂ ಬಿಡುವವನಲ್ಲ ಎಂಬುದು ಲೋಕಕ್ಕೆಲ್ಲಾ ತಿಳಿದಿದೆ. ಹೆಚ್ಚು ಮಾತಿನಿಂದ ಪ್ರಯೋಜನವಿಲ್ಲ.' ನನಗೆ ಮುಂದೆ ಮಾತು ತಿಳಿಯಲಿಲ್ಲ. ಕೋಪ ಉರಿಯತೊಡಗಿತು. ಯಾರ ಮೇಲೆ? ಬಯಸಿ ಬಯಸಿ ಶಿವ ಧನಸ್ಸನ್ನು ಅವನು ಮುರಿಯಲೆಂದು ದೈವವನ್ನು ಪ್ರಾರ್ಥಿಸಿ ಅಗ್ನಿ ಸಾಕ್ಷಿಯಾಗಿ ಕೈ ಹಿಡಿದು ಅವನೇ ನನ್ನ ತಾಯಿ ಎಂದು ಪ್ರೀತಿಸಿ ಅವನ ಹಿಂದೆಯೇ ಕಾಡಿಗೆ

ಬಂದು ಪಡಬಾರದ ಕಷ್ಟ ಅನುಭವಿಸಿ, ರಾಕ್ಷಸನ ಸೆರೆಯನ್ನು ಅವನ ಧ್ಯಾನದಲ್ಲೇ ಕಳೆದು, ಎಂಥೆಂಥ ಆಮಿಷಗಳನ್ನು ಕಾಲಕಸದಂತೆ ಒದೆದು ನಿಷ್ಠೆಯನ್ನುಳಿಸಿಕೊಂಡ ನನ್ನ ಮೇಲೋ? ಅದನ್ನು ಶಂಕಿಸುವ ಈ ರಾಕ್ಷಸನ ಮೇಲೋ? ಗಟ್ಟಿಯಾಗಿ ಹೇಳಿದೆ: 'ರಾಮಾ, ನೀನು ಕ್ರೂರಿ, ರಾಕ್ಷಸ ರಾವಣನಿಗಿಂತ ಕ್ರೂರಿ. ಅಗ್ನಿಸಾಕ್ಷಿಯೇ ನನ್ನ ಶುದ್ಧಿಯನ್ನು ತೋರಿಸುತೀನಿ' ಎಂದೆ."[4]– ಈ ಮಾತುಗಳ ನಂತರ ಸೀತೆ ಅಗ್ನಿಪ್ರವೇಶಕ್ಕೆ ಸಿದ್ಧಳಾಗುತ್ತಾಳೆ. ಈ ಸಂದರ್ಭದಲ್ಲಿ ಅವಳಿಗಾದ ಆಘಾತ ಮುಂದಿನ ಬದುಕಿನ ಹಲವು ಸಂದರ್ಭಗಳಲ್ಲಿ ಮತ್ತೆ ಮತ್ತೆ ಆಕೆಗೆ ನೆನಪಾಗುತ್ತದೆ. ಈ ಘಟನೆಯೇ ಅವಳಿಗೆ ರಾಮನಿಂದ ಒಂದು ಮಾನಸಿಕ ಅಂತರವನ್ನು ನಿರ್ಮಿಸಿ ಬಿಡುತ್ತದೆ. ಆದಾಗ್ಯೂ ಅಯೋಧ್ಯೆಗೆ ಮರಳಿದ ನಂತರ ತಾಯಿಯ ಸಾವಿನ ವಿಷಯ ತಿಳಿದ ರಾಮನಿಗೆ ಮಾತೃಹೃದಯದಿಂದ ಸಂತೈಸುತ್ತಾಳೆ. ಮತ್ತೆಲ್ಲವೂ ಸಹಜವಾಯಿತು ಎನ್ನುವ ಹೊತ್ತಿಗೆ ಗರ್ಭಿಣಿಯಾದ ಸೀತೆಯನ್ನು ಕಾಡಿಗಟ್ಟುವ ನಿರ್ಧಾರವನ್ನು ರಾಮ ತೆಗೆದುಕೊಂಡಾಗ ಆಕೆಗೆ ಮತ್ತೆ ಆದ ಆಘಾತ ತನ್ನಿಡೀ ಅಸ್ತಿತ್ವವನ್ನೇ ಅಲುಗಾಡುವಂತೆ ಮಾಡುತ್ತದೆ.

ತಿರಸ್ಕಾರದಿಂದ ಉಂಟಾಗುವ ಅವಮಾನದ ಮನಃಸ್ಥಿತಿ: ರಾಮನಿಂದ ಗರ್ಭಿಣಿಯಾಗಿದ್ದಾಗ – ರಾಮ ಸೀತೆಯನ್ನು ತ್ಯಜಿಸುವುದು ಆಕೆಯ ಮನಸ್ಸಿನ ಮೇಲಾದ ಅತ್ಯಂತ ದೊಡ್ಡ ಗಾಯ. ಈ ಘಟನೆಯು ತಿರಸ್ಕೃತ ವ್ಯಕ್ತಿಯ ಮನೋವೈಜ್ಞಾನಿಕ ಸ್ಥಿತಿಯನ್ನು ಬಹಳ ನಿಖರವಾಗಿ ಚಿತ್ರಿಸುತ್ತದೆ. ಆತ್ಮವಿಶ್ವಾಸ ಭಗ್ನವಾದುದು, ಅಸ್ತಿತ್ವದ ಪ್ರಶ್ನೆ, ನಿಷ್ಪ್ರಯೋಜಕತೆಯ ಭಾವ, ವಿಶ್ವಾಸದ ನಾಶ, ಒಂಟಿತನದ ಭಾವ – ಇವುಗಳ ಮೂಲಕ ಭೈರಪ್ಪನವರು ಮನುಷ್ಯರ ಮನಸ್ಸಿನ ಸೂಕ್ಷ್ಮತೆಯನ್ನು ಹಿಡಿದಿಡುತ್ತಾರೆ. ಇಡೀ ಕಾದಂಬರಿಯಲ್ಲಿ ಈ ಭಾವ ಮತ್ತೆ ಮತ್ತೆ ಕಾಣುತ್ತದೆ. ಅದನ್ನು ಪ್ರಜ್ಞಾಪೂರ್ವಕವಾಗಿ ಆಕೆ ಹಿಮ್ಮೆಟ್ಟಿಸಿ ಬದುಕುವ ಚೈತನ್ಯವನ್ನು ತುಂಬಿಕೊಳ್ಳುತ್ತ ಸಾಗುತ್ತಾಳೆ.

ಮಾತೃತ್ವದ ಮನೋವಿಜ್ಞಾನ: ಲವ–ಕುಶರನ್ನು ಪೋಷಿಸುವಲ್ಲಿ ಸೀತೆ ಅನುಭವಿಸುವ ರಕ್ಷಣಾ ಮನೋಧರ್ಮದ ಭಾವಗಳು – ಸಮಾಜದಲ್ಲಿ ಇದುವರೆಗೆ ಇರುವ ಪುರುಷಕೇಂದ್ರಿತ ಆಲೋಚನೆಯ ನೆಲೆಗಳದ್ದಾಗಿದೆ. ಸೀತೆ ತನಗಾದ ತನು ಮನದ ಗಾಯಗಳನ್ನು ಮಕ್ಕಳ ಮೇಲೆ ಹೇರಬಾರದು ಎಂಬ ಜಾಗರೂಕ ಮನಃಸ್ಥಿತಿಯನ್ನು ತಾಳುವುದು ಇಲ್ಲಿ ಕಾಣುತ್ತದೆ. ಅವಳ ಮಾತೃತ್ವವು ಸ್ವ ಸ್ವೀಕಾರದ ಚಿಕಿತ್ಸೆಯಾಗುತ್ತದೆ. ಹೆರಿಗೆಯಾದ ಒಂದೇ ದಿನದಲ್ಲಿ ಆಕೆಗೆ ತನ್ನೊಳಗಿನ ಮಾತೃತ್ವದ ಕರ್ತವ್ಯ ಜಾಗೃತವಾಗುತ್ತದೆ. "ಗಂಡನಿಂದ ಅನ್ಯಾಯವಾಗಿದೆ ಅಂತ ನಾನು ಮಕ್ಕಳಿಗೆ ಅನ್ಯಾಯ ಮಾಡುವುದು ಯಾವ ನ್ಯಾಯ? ಎಂಬುದು ಒಂದು ದಿನದಲ್ಲಿ ಅರ್ಥವಾಯಿತು."[5]– ಎನ್ನುವ ಆಕೆಯ ಮಾತುಗಳಲ್ಲಿ ಮಕ್ಕಳನ್ನು ರಕ್ಷಿಸುವ ಕರ್ತವ್ಯಪ್ರಜ್ಞೆಯನ್ನು ಕಾಣಬಹುದು.

2. ರಾಮ: ಕರ್ತವ್ಯಧರ್ಮ ಮತ್ತು ಭಾವಧರ್ಮದ ಸಂಘರ್ಷ: ಈ ಕಾದಂಬರಿಯಲ್ಲಿ ಚಿತ್ರಿತವಾಗಿರುವ ರಾಮನು ವೈಯಕ್ತಿಕ ಭಾವನೆಗಳನ್ನು ನಿಗ್ರಹಿಸಿದ, ರಾಜಧರ್ಮಕ್ಕೆ ಸರ್ವಸ್ವವನ್ನೂ ಅರ್ಪಿಸಿಕೊಂಡಿರುವ ಅಂತರಂಗದಲ್ಲಿ ದ್ವಂದ್ವಕ್ಕೆ ಒಳಗಾಗಿರುವ ಮನಃಸ್ಥಿತಿಯ ವ್ಯಕ್ತಿ.

ಕರ್ತವ್ಯಬದ್ಧತೆಯ ಗಡಿಗಳು: ರಾಮನ ಮನಸ್ಸಿನಲ್ಲಿ ತನ್ನ ವೈಯಕ್ತಿಕ ಬದುಕನ್ನು ಬಲಿ ಕೊಟ್ಟಾದರೂ ಸರಿ ರಾಜನಾದವನು ತನ್ನ ರಾಜಧರ್ಮವನ್ನು ನಿಭಾಯಿಸಬೇಕು ಎಂಬ ನಂಬಿಕೆ ಬಲವಾಗಿ ಬೇರು ಬಿಟ್ಟಿದೆ. ಆದರೆ ಈ ನಂಬಿಕೆಯೇ ಅವನ ಭಾವಸಂಪರ್ಕವನ್ನು ಹಾಳು ಮಾಡುತ್ತದೆ. ಮನೋವಿಜ್ಞಾನದಲ್ಲಿ ಇದನ್ನು Role Conflict ಎಂದು ಕರೆಯುತ್ತಾರೆ. ರಾಮನು ಪತಿ ಮತ್ತು ರಾಜ ಎನ್ನುವ ಎರಡು ಪಾತ್ರಗಳ ನಡುವೆ ಹರಿದು ಹೋಗುತ್ತಾನೆ. ಕಾದಂಬರಿಯ ಪುಟ 295 ರಲ್ಲಿ ಸೀತೆಯ ಮಾತುಗಳ ಮೂಲಕ ಮನದಟ್ಟು ಮಾಡಿಕೊಳ್ಳಬಹುದು.[6] ಜೊತೆಗೆ ವಾಲ್ಮೀಕಿ ಮಹರ್ಷಿಗಳು ಸೀತೆಯೊಂದಿಗೆ ತನ್ನ ಆಶ್ರಮಕ್ಕೆ ಬಂದ ಹೊಸದರಲ್ಲಿ ಆಕೆಯನ್ನುದ್ದೇಶಿಸಿ ಮಾತನಾಡುವಾಗ –"ಮಗು, ರಾಮಚಂದ್ರ ಅಧರ್ಮದಿಂದ ನಡೆಯುವವನಲ್ಲ. ಅಗ್ನಿಸಾಕ್ಷಿಯಾಗಿ ಕೈ ಹಿಡಿದ ಪತ್ನಿಗೆ ಅನ್ಯಾಯ ಮಾಡುತ್ತಾನೆಯೆ? ಇಡೀ ರಾಜ್ಯದ ಜನತೆಗೆ ನ್ಯಾಯ ಧರ್ಮಗಳನ್ನು, ಅನ್ನ ವಸತಿಗಳನ್ನು ಸ್ಥಾಪಿಸುವ

ಹೊಣೆ ಹೊತ್ತವನಿಗೆ ತಾನೂ ತ್ಯಾಗ ಮಾಡಬೇಕು, ತನ್ನ ಕೈ ಹಿಡಿದವರೂ ತ್ಯಾಗ ಮಾಡಬೇಕು ಎಂಬ ಕರ್ತವ್ಯವಿರುತ್ತೆ. ನಿನ್ನನ್ನು ಪರಿತ್ಯಜಿಸಿರುವುದನ್ನು ಈ ದೃಷ್ಟಿಯಿಂದ ನೋಡಬೇಕು".[7] ಎಂಬ ಈ ಮಾತುಗಳಲ್ಲಿ ಮೇಲಿನ ಅಂಶವನ್ನು ಸಮರ್ಥಿಸಬಹುದು.

ಅಪರಾಧೀ ಮನೋಭಾವ ಮತ್ತು ಸ್ವ – ಸಮರ್ಥನೆ: ಸೀತೆಯನ್ನು ತ್ಯಜಿಸಿದ ನಂತರ ರಾಮನ ಮನಸ್ಸನ್ನು ಕಾಡುವ Guilt Feeling ಕಾದಂಬರಿಯಲ್ಲಿ ಸ್ಪಷ್ಟವಾಗಿ ಮೂಡಿ ಬಂದಿದೆ. ಆದರೂ ರಾಮ ತನ್ನ ನಿರ್ಧಾರಗಳನ್ನು ದೋಷರಹಿತ ಎಂದು ತೋರಿಸಬೇಕು ಎಂದುಕೊಳ್ಳುತ್ತಾನೆ. ಇದು Self Justification ಎನ್ನುವ ಮನೋವಿಜ್ಞಾನದ ಪರಿಕಲ್ಪನೆಗೆ ಸ್ಪಷ್ಟ ಉದಾಹರಣೆಯಾಗಿದೆ. ಕಾದಂಬರಿಯ ಪುಟ 308 ಹಾಗೂ 309ರಲ್ಲಿ ಇವಕ್ಕೆ ಪುರಾವೆಗಳು ಸಿಕ್ಕುತ್ತವೆ.[8]

ಇದರ ಜೊತೆಗೆ ರಾಮನ ಮೌನ, ಅವನ ಅಂತರಂಗದ ಮಾತುಗಳು, ಭಾವನೆಗಳನ್ನು ಹೊರಹಾಕಲಾಗದ ಪುರುಷನ ಮನೋವಿಜ್ಞಾನವನ್ನು ಸಹ ಇಲ್ಲಿ ಗುರುತಿಸಬಹುದು. ಈ ಬಗೆಯ ಧೋರಣೆಗಳು ಗಂಡಾಳಿಕೆಯ ಮನಃಸ್ಥಿತಿಯನ್ನು ಬಲ ಪಡಿಸುವ ಹುನ್ನಾರಕ್ಕೆ ಉದಾಹರಣೆಗಳಾಗುತ್ತವೆ. ಪುರುಷ ಕೇಂದ್ರಿತ ಸಮಾಜ ಹೆಣ್ಣನ್ನು ಮಾತ್ರ ಭಾವನಾತ್ಮಕವಾಗಿ ನಿಯಂತ್ರಿಸುತ್ತಿಲ್ಲ, ಗಂಡಸನ್ನೂ ಕೂಡ ಭಾವನಾತ್ಮಕವಾಗಿ ನಿಯಂತ್ರಿಸುತ್ತಾ ಹಿಂಸೆಗೆ ಗುರಿ ಮಾಡಿದೆ. "ಅಳುವ ಗಂಡಸನ್ನು ನಂಬಬಾರದು" ಎನ್ನುವಂತಹ ನಮ್ಮ ಗಾದೆಗಳ ಹುಟ್ಟಿನ ಹಿಂದೆ ಇರುವುದೂ ಕೂಡ ಇಂತಹ ಮನೋಧರ್ಮಗಳೇ. ಇಲ್ಲಿನ ರಾಮ ಇದಕ್ಕೆ ಸರಿಯಾದ ರೂಪಕವಾಗುತ್ತಾನೆ.

3. ಲಕ್ಷ್ಮಣನ ನಿಷ್ಠೆ ಸಂಯಮ ಹಾಗೂ ಗಂಡು ಎನ್ನುವ ಪುರುಷಾಧಿಕಾರದ ಮನೋವೈಜ್ಞಾನಿಕ ಆಯಾಮ: ಲಕ್ಷ್ಮಣನ ಪಾತ್ರವು ಸ್ವಯಂ ನಿಗ್ರಹ, ನಿಷ್ಠೆ, ಧರ್ಮದ ಒತ್ತಡ, ಅಪರಾಧ ಭಾವನೆ ಮುಂತಾದ ಮನೋವಿಜ್ಞಾನಗಳ ಸಂಗ್ರವಾಗಿದೆ. ಸೀತೆಯ ರಕ್ಷಣೆಯಲ್ಲಿ ವಿಫಲವಾದುದು, ರಾಮನ ತ್ಯಾಗದ ನಿರ್ಧಾರದಲ್ಲಿ ತನ್ನ ಜವಾಬ್ದಾರಿ, ಪತ್ನಿ ಊರ್ಮಿಳೆಯಿಂದ ದೂರವಾದುದು – ಈ ಅಂಶಗಳು ಅವನ ಮನಸ್ಸನ್ನು ನಿರಂತರವಾಗಿ ಕಾಡುತ್ತವೆ. ಅವನ ಮೌನ ಮತ್ತು ನಿಗ್ರಹಿತ ಭಾವನೆಗಳು Suppression (ಸಪ್ರೆಷನ್) ಎಂಬ ಮನೋವಿಜ್ಞಾನದ ಪರಿಕಲ್ಪನೆಗೆ ಉದಾಹರಣೆ. ರಾಮನ ಮೇಲಿರುವ ಪ್ರೀತಿಯ ಕಾರಣಕ್ಕೆ ಅವನೊಂದಿಗೆ ವನವಾಸಕ್ಕೆ ಹೊರಟು ನಿಂತ ಸಂದರ್ಭದಲ್ಲಿ ಪತ್ನಿ ಊರ್ಮಿಳೆ ಕುಟುಂಬ ಮತ್ತು ವಿವಾಹ ಧರ್ಮವನ್ನು ಪಾಲಿಸದೆ ಹೊರಟ ಆತನನ್ನು ಪ್ರಶ್ನಿಸಿದಾಗ ಲಕ್ಷ್ಮಣ ನೀಡುವ ಉತ್ತರದಲ್ಲಿ ಪುರುಷಾಧಿಕಾರದ ಮನಃಸ್ಥಿತಿ ಎದ್ದು ಕಾಣುತ್ತದೆ. "ಪತಿಯ ಮನಸ್ಸನ್ನರಿತು ನಡೆಯೂದನ್ನ ನಿನ್ನ ಅಕ್ಕನನ್ನು ನೋಡಿ ಕಲಿತುಕೊ. ಒಂದೇ ಮನೆಯಲ್ಲಿ ಹುಟ್ಟಿ ಬೆಳೆದ ಅಕ್ಕ ತಂಗಿಯರು. ಅಕ್ಕನ ಕಾಲಬೆರಳಿನಷ್ಟೂ ಸದ್ಗುಣವಿಲ್ಲ."[9] ಎನ್ನುವ ಮಾತುಗಳು ಹಾಗೂ "ಆದದ್ದು ಆಗಿಹೋಯಿತು. ನಾನು ನಾರುಮಡಿ ಉಟ್ಟು ಆಗಿದೆ. ನಾನೇ ಹಟ ಮಾಡಿ ಅಣ್ಣನನ್ನು ಒಪ್ಪಿಸಿದೆ. ದೊಡ್ಡಮ್ಮ, ಮಹಾರಾಜ ಸಮಾಧಾನ ಪಟ್ಟುಕೊಂಡಿದ್ದಾರೆ. ನನ್ನಮ್ಮ ಅನುಮತಿ ಕೊಟ್ಟಿದಾಳೆ. ಇಡೀ ಅಯೋಧ್ಯೆಯ ಜನತೆಗೆ ಗೊತ್ತಾಗಿದೆ. ಈಗ ಹೆಂಡತಿಯ ಹಟಕ್ಕೆ ಬಗ್ಗಿ ಲಕ್ಷ್ಮಣ ಆಡಿದ ಮಾತನ್ನು ಹಿಂತೆಗೆದುಕೊಂಡ ಅಂತ ಜನತೆ ಅನ್ನುವಂತಾದರೆ ನನ್ನ ಮರ್ಯಾದೆ ಏನಾಗುತ್ತೆ? ಇಂಥವನ ಮಗಳು ಅಂದರೆ ನಿಮ್ಮಪ್ಪನ ಬೆಲೆ ಏನಾಗುತ್ತೆ?"[10]– ಈ ಮಾತುಗಳಲ್ಲಿ ಊರ್ಮಿಳೆಯ ಪ್ರಶ್ನಿಸುವ ಹಕ್ಕೇ ನೈತಿಕವಾಗಿ ತಪ್ಪು ಎನ್ನುವ ಮನಃಸ್ಥಿತಿ ಸಮುದಾಯದ ಮೂಲಭೂತವಾದಿತನದ ಮನೋವಿಜ್ಞಾನವನ್ನು ಬಲಪಡಿಸುವ ಅಂಶಗಳಾಗುತ್ತವೆ.

4. ರಾವಣ: ಪ್ರತಿಷ್ಠೆ, ಕಾಮ ಮತ್ತು ಅಸ್ತಿತ್ವ ಹುಡುಕಾಟ: ರಾವಣನೆಂದರೆ ಪ್ರಜ್ಞೆ, ಪ್ರತಿಭೆ, ಶೌರ್ಯ – ಇದರ ಜೊತೆಗೆ ಅಪಾರ ಅಹಂಕಾರ. ಅವನ ಪ್ರಕಾರ – ನನಗೋಸ್ಕರ ಎಲ್ಲರೂ ಬದಲಾಗಬೇಕು ಎಂಬ ಮನಃಸ್ಥಿತಿ. ಇದು ನಾರ್ಸಿಸ್ಟಿಕ್ ಪರ್ಸನಾಲಿಟಿಯನ್ನು ಸೂಚಿಸುತ್ತದೆ. ಸೀತೆಯ ಮೇಲೆ ಅವನ ಆಸಕ್ತಿ ಪರಂಪರೆಯ ಪಠ್ಯಗಳಲ್ಲಿ ಕಾಮವೆಂದು ಬಿಂಬಿತವಾಗಿದೆ. ಇಲ್ಲಿ ಕೇವಲ ಕಾಮವಾಗಿರದೆ ತನ್ನ ಅಸ್ತಿತ್ವದ ಖಾಲಿತನವನ್ನು ಪೂರೈಸುವ ಸೋಜಿಗವಾದ ಹಂಬಲ ಎಂಬಂತೆ ಚಿತ್ರಿಸಲಾಗಿದೆ. ರಾವಣ ತನ್ನ ಬಳಿ ಬಂದಾಗೆಲ್ಲಾ ಸೀತೆ ಎದುರಿಗೆ ಬಿದ್ದಿರುತ್ತಿದ್ದ ಯವುದಾದರೂ ಒಂದು ಕಡ್ಡಿಯನ್ನು ನೆಲಕ್ಕೆ ನೆಟ್ಟು ಅದನ್ನೇ ನೋಡುತ್ತಾ ಅದಕ್ಕೆ ಉತ್ತರಿಸುತ್ತಿರುಂತೆ ಮಾತನಾಡುತ್ತಿರುತ್ತಾಳೆ. ಅದಕ್ಕೆ ರಾವಣನು – "ಯಾಕಿಂಥ ತಿರಸ್ಕಾರ? ನಾನು ಕಸದ ಕಡ್ಡಿಗಿಂತ

ಕೀಳೆ?"[11] ಎಂದು ಪ್ರಶ್ನಿಸಿದಾಗ ಸೀತೆ ಉತ್ತರಿಸುವುದಿಲ್ಲ. ಆಗ ರಾವಣನು "ನಾನು ನಿನ್ನನ್ನು ಗೆದ್ದಿದ್ದೀನಿ, ಆದ್ದರಿಂದ ನಿನ್ನ ಪತಿ, ಒಡೆಯ. ಆದರೂ ಕೃಪೆ ಇಟ್ಟು ಕೇಳಿಕೊತ್ತಿದೀನಿ. ಈ ಔದಾರ್ಯವನ್ನಾದರೂ ಅರ್ಥಮಾಡಿಕೊ"[12]– ಎನ್ನುವ ಮಾತುಗಳು ಮನೋವಿಜ್ಞಾನದ Attachment Disorder ಹೋಲುತ್ತದೆ.

5. ಶೂರ್ಪನಖಿ – ಮುಕ್ತ ಲೈಂಗಿಕತೆ: ರಾಮನನ್ನು ಸಂಧಿಸುವ ಶೂರ್ಪನಖಿಯ ಮಾತುಗಳಲ್ಲಿರುವ ಲೈಂಗಿಕಾಸಕ್ತಿಯ ಮುಕ್ತ ಅಭಿವ್ಯಕ್ತಿಯು ಕಾದಂಬರಿಯಲ್ಲಿ ಗಮನಿಸಲೇಬೇಕಾದ ಪ್ರಮುಖ ಅಂಶ. ಶೂರ್ಪನಖಿಯ ಮಾತುಗಳು ಆಕೆಯ ಸಮುದಾಯದಲ್ಲಿ ಹೆಣ್ಣಿಗಿರುವ ಮುಕ್ತ ಲೈಂಗಿಕತೆಯನ್ನು ಸೂಚಿಸುವಂತಹವು. "ಸುಂದರಾಂಗ, ಚೆಲುವ, ನಿನ್ನಂಥ ಸ್ಪುರದ್ರೂಪಿಯನ್ನು ನಾನು ಇದುವರೆಗೆ ಭೋಗಿಸಿಲ್ಲ. ಬಾ ತಡಮಾಡಬೇಡ."[13] "–––– ಬಳ್ಳಿಯಂತೆ ನಿನಗೆ ಸುತ್ತಿ ಕೂರುವ ಇವಳಿಂದ ನಿನಗೆಂಥ ಸುಖ ಸಿಕ್ಕೀತು? ಮಲ್ಲಯುದ್ಧಕ್ಕೂ ಮದನಯುದ್ಧಕ್ಕೂ ಸಮಗೈ ಬೇಕು. ನನ್ನ ತೋಳು, ಭುಜ, ತೊಡೆಗಳ ಶಕ್ತಿಯನ್ನು ಒಮ್ಮೆ ಅನುಭವಿಸು; ನೀನೇ ಈ ಒಣಕಲು ಕಡ್ಡಿಯನ್ನು ಮುರಿದು ಬಿಸಾಕುತೀಯ"[14] "ಕಲಿಯೂದೇನು? ಆಕ್ರಮಿಸೂದು ಗಂಡುಪ್ರಾಣಿಯ ಗುಣ, ಪ್ರಚೋದಿಸೂದು ಹೆಣ್ಣುಪ್ರಾಣಿಯ ಪ್ರವೃತ್ತಿ. ಪ್ರಚೋದನೆಗೆ ಗಂಡು ಸ್ಪಂದಿಸದಿದ್ದರೆ ಹೆಣ್ಣೇ ಮೇಲೆ ಎಗರೂದನ್ನ ನೀನು ನೋಡಿಲ್ಲವೆ? ಕಾಡಿನಲ್ಲಿ ಎಷ್ಟು ವರ್ಷದಿಂದ ಇದೀಯ? ಮಾತಿನಲ್ಲಿ ಕಾಲ ಕಳೆಸಬೇಡ. ನೀನು ಗಂಡಾಗುತೀಯೋ, ಹೆಣ್ಣಾಗಿ ಒಪ್ಪಿಸಿಕೊತ್ತೀಯೋ?"[15] ಆಕೆಯಾಡಿದ್ದ ಇಂತಹ ಮಾತುಗಳನ್ನು ನೆನಪಿಸಿಕೊಳ್ಳುವ ಸೀತೆಗೆ "ಹೆಣ್ಣೆಂದರೆ ಹೀಗಿರಬೇಕೆ?" ಎನ್ನುವ ಅಸಹ್ಯ ತರಿಸುತ್ತದೆ. ಶೂರ್ಪನಖಿಯನ್ನು ಕುರಿತು ರಾಮ – "ನೀನು ದೇಹದಲ್ಲಿ ಮಾತ್ರವಲ್ಲ, ಬುದ್ಧಿಯಲ್ಲೂ ಮಹಾಬಲಶಾಲಿ. ಹೀಗೆ ಹೆಂಗಸು ಮೇಲೆ ನುಗ್ಗಿ ಆಕ್ರಮಿಸುವುದನ್ನು ನಾನು ಕಂಡಿಲ್ಲ, ಕೇಳಿಲ್ಲ. ಈ ಗುಣವು ಹೆಂಗಸಿಗೆ ಶೋಭೆಯಲ್ಲ ಅಂತ ನಮ್ಮ ಕಡೆಯ ಗಂಡು ಹೆಣ್ಣುಗಳಿಬ್ಬರೂ ನಂಬಿ ನಡೀತಾರೆ, ನೀನು ಎಲ್ಲಿ ಕಲಿತೆ?"[16] ಎನ್ನುವ ಮಾತುಗಳು ಪ್ರಸ್ತುತ ಪ್ರಬಂಧದ ಮುಖ್ಯ ಅಂಶವಾದ ಪುರುಷಕೇಂದ್ರಿತ ಧೋರಣೆಗಳು ಅದರಲ್ಲೂ ವೈದಿಕಶಾಹಿ ಗಂಡಾಳ್ವಿಕೆಯ ಧೋರಣೆಗಳು ಹೇಗೆ ಹೆಣ್ಣಿನ ಲೈಂಗಿಕತೆಯನ್ನು ನಿಯಂತ್ರಿಸುತ್ತವೆ ಎನ್ನುವುದಕ್ಕೆ ಬಲವಾದ ಆಧಾರವಾಗುತ್ತವೆ.

'ಪಾವಿತ್ರ್ಯತೆ' ಹೆಣ್ಣಿನ ಆತ್ಯಂತಿಕ ಮೌಲ್ಯ ಎನ್ನುವ ಅಂಶವನ್ನು ಸೀತೆಯ ಆಲೋಚನೆಯ ಮೂಲಕ ಭೈರಪ್ಪನವರು ಓದುಗರಿಗೆ ತಲುಪಿಸುತ್ತಾರೆ. ಆ ಮೂಲಕ ಹೆಣ್ಣಿನ ಲೈಂಗಿಕ ಸ್ವಾತಂತ್ರ್ಯವನ್ನು ಅಸಹಜ ಎನ್ನುವಂತೆ ನಿರೂಪಿಸಲಾಗಿದೆ. ಇದು ಭೈರಪ್ಪನವರ ಇತರ ಕಾದಂಬರಿಗಳಲ್ಲೂ ಕಾಣಬರುವ ಅಂಶ. ಉದಾಹರಣೆಗೆ ಅವರ ಕವಲು, ವಂಶವೃಕ್ಷದಲ್ಲಿ ಬಂದಿರುವ ಕೆಲವು ಮುಖ್ಯ ಸ್ತ್ರೀ ಪಾತ್ರಗಳನ್ನು ಗಮನಿಸಬಹುದು.

6. ಲವ – ಕುಶ: ಸ್ವ – ಪರಿಚಯದ ಹುಡುಕಾಟ: ಸೀತೆಯೊಂದಿಗೆ ಬೆಳೆಯುವ ಲವ–ಕುಶರು ತಮ್ಮ ತಂದೆ ಯಾರು ಎಂಬ ಪ್ರಶ್ನೆಯೊಂದಿಗೇ ಬೆಳೆಯುತ್ತಾರೆ. 'ತಂದೆ' ಎನ್ನುವ ಗುರುತು ಕಾಣದಾದಾಗ ಮಕ್ಕಳಲ್ಲಿ ಉಂಟಾಗುವ Identity Crisis ಇಲ್ಲಿ ಕಾಣಬಹುದು. ವಿದ್ಯಾಭ್ಯಾಸದ ಸಮಯದಲ್ಲಿ ಒಮ್ಮೆ ಲವ–ಕುಶರು ಆಶ್ರಮದಲ್ಲಿ ಹೊಡೆದಾಡಿಕೊಂಡು ಬೇಗನೆ ಮನೆಗೆ ಬಂದಾಗ ಕಾರಣವನ್ನು ಕೇಳಿದ ಸೀತೆಗೆ ಕುಶ ನೀಡಿದ ಉತ್ತರದಿಂದ ಆಘಾತವಾಗುತ್ತದೆ. "ಆ ಭಂಡ, ಕಾರಕ ಹೇಳುವ ಯೋಗ್ಯತೆ ಇಲ್ಲದ ಅಗ್ನಿಹೋತ್ರಿ ನೀನು ಅಪ್ಪ ಇಲ್ಲದೆ ಹುಟ್ಟಿದೆಯಾ? ನಿಮ್ಮಪ್ಪನ ಹೆಸರು ಹೇಳು ಅಂದ"[17] "ಅಂದರೆ ನೀವು ಹುಟ್ಟುವ ಮೊದಲೇ ಸತ್ತುಹೋಗಿದ್ದನಾ? ಇಲ್ಲದೆ ಇದ್ದರೆ ನಿಮ್ಮಮ್ಮನ್ನ ಓಡಿಸಿಬಿಟ್ಟಿದಾನಾ? ಅಥವಾ ಅವನು ಯಾರು ಅಂತ ನಿಮ್ಮಮ್ಮನಿಗೇ ಗೊತ್ತಿಲ್ಲವಾ?"[18]– ಮಕ್ಕಳು ಇಂಥಹ ಸಂದರ್ಭಗಳಿಗೆ ಎದುರಾಗುವಾಗ ನಮ್ಮ ತಂದೆ ಯಾರು? ಏಕೆ ನಮ್ಮಿಂದ ದೂರಾದ? ನಾವು ಯಾವ ವರ್ಗಕ್ಕೆ ಸೇರಿದ್ದೇವೆ? ಎಂಬ ಪ್ರಶ್ನೆಗಳು ಅವರ ಮನಸ್ಸಿನಲ್ಲಿ ಕುಟುಂಬ ಪರಿಚಯದ ಮನೋವಿಜ್ಞಾನ Family Identity Pschyology – ಯನ್ನು ತೋರಿಸುತ್ತದೆ. ಇದಕ್ಕೆ ತಕ್ಕ ಉತ್ತರ ದೊರೆಯದಾದಾಗ ಆಗುವ ವ್ಯಕ್ತಿತ್ವದ ಬದಲಾವಣೆ ಅವರಲ್ಲಿ ಕೀಳರಿಮೆಯನ್ನು, ಆಕ್ರಮಣಕಾರೀ, ಸಮಾಜಘಾತುಕ ಗುಣಗಳನ್ನು ಬೆಳೆಸಿಕೊಳ್ಳುವಲ್ಲಿ ಪ್ರೋತ್ಸಾಹ ನೀಡುವ ಸಾಧ್ಯತೆಗಳಿರುತ್ತವೆ.

7. ಜನರ ಮಾತುಗಳ ಹಿಂದಿರುವ ಮನೋವಿಜ್ಞಾನ: ರಾಮನ ನಿರ್ಧಾರಗಳಲ್ಲಿ ಪ್ರಜೆಗಳ ಮಾತು ದೊಡ್ಡ ಪಾತ್ರ ವಹಿಸುತ್ತದೆ. ಸಾಮೂಹಿಕ ಅಭಿಪ್ರಾಯವು ನಾಯಕನ ಮನಸ್ಸನ್ನು ಹೇಗೆ ಪ್ರಭಾವಿಸುತ್ತದೆ ಎಂಬುದನ್ನು ಇಲ್ಲಿ ನೋಡಬಹುದು. "ಕಳೆದ

ಒಂದೆರೆಡು ತಿಂಗಳಿನಿಂದ ರಾಮನ ಆಡಳಿತದ ವಿರುದ್ಧವಾಗಿ ಗುಸುಗುಸು ನಡೆಯುತ್ತಿದೆ. ಆಡಳಿತವು ಪ್ರಜಾಪ್ರಿಯವಾಗಿಲ್ಲ. ಕಾಡಿನಲ್ಲಿದ್ದು ರಾಕ್ಷಸರನ್ನು ಕೊಂದದ್ದು ಮಾತ್ರವೇ ರಾಜಧರ್ಮವಾಗುಲ್ಲ. ಹಾದರಬಡುಕ ರಾಕ್ಷಸನು ಹೊತ್ತುಕೊಂಡು ಹೋಗಿ ಒಂದು ವರ್ಷ ಇಟ್ಟುಕೊಂಡಿದ್ದ ಹೆಂಡತಿ ಶುದ್ಧವಾಗಿರುತ್ತಾಳೆಯೇ? ರಾಜನೇ ಅಂಥ ಹೆಂಡತಿಯನ್ನು ಒಪ್ಪಿಕೊಂಡು ಸಿಂಹಾಸನದ ಮೇಲೆ ಪಕ್ಕದಲ್ಲಿ ಕೂರಿಸಿಕೊಂಡರೆ ಸಿಂಹಾಸನದ ಪಾವಿತ್ರ್ಯ ಉಳಿಯುತ್ತೆಯೆ? ರಾಜ್ಯಕ್ಕೆ ಒಳ್ಳೆಯದಾಗುತ್ತೆಯೆ? ಮಳೆ ಬೆಳೆ ಇಲ್ಲದೆ ಎಲ್ಲೆಲ್ಲೂ ಬರ ಬಂದಿರುವುದಕ್ಕೆ ರಾಜನ ಈ ಅಧರ್ಮವು ಕಾರಣವಲ್ಲವೆ? ಎಂಬಂಥ ಗುಸುಗುಸು"[19] ಎನ್ನುವ ಮಾತುಗಳು ಮೇಲಿನ ಅಂಶಕ್ಕೆ ಪುಷ್ಠಿಯನ್ನು ನೀಡುತ್ತವೆ. ಗರ್ಭಿಣಿ ಸೀತೆಯನ್ನು ಹೊರಹಾಕಿದ್ದನ್ನು ಸೀತೆಯ ಆಪ್ತ ಸೇವಕಿ ಸುಕೇಶಿ ತನ್ನ ಗಂಡನೆದುರು ವಿರೋಧಿಸಿ ತಾನು ಆಕೆಯ ಬಾಣಂತನಕ್ಕೆ ಸೀತೆ ಇರುವಲ್ಲಿ ಹೋಗಬೇಕೆಂದು ಹಠ ಹಿಡಿಯುತ್ತಾಳೆ. ಅದಕ್ಕೆ ಆಕೆಯ ಗಂಡ ಕುಂಭ ಒಪ್ಪದೇ ಇದ್ದಾಗ ಸುಕೇಶಿ – "ನಿನ್ನ ರಾಜ ಮಾಡಿದ್ದು ನ್ಯಾಯವಾ? ಜನಕ ಮಹಾರಾಜರು ಅವರ ಮಗಳನ್ನು ರಾಜಕುಮಾರ ರಾಮನಿಗೆ ಕೊಟ್ಟರು. ಈಗ ಗಂಡನಿಗೆ ಅವಳು ಬ್ಯಾಡ. ಅವಳನ್ನ ಅವರಪ್ಪನ ಮನೆಗೆ ಕ್ಷೇಮವಾಗಿ ಕಳಿಸೂದಬಿಟ್ಟು ಕಾಡಿಗೆ ನೂಕೂದು ಯಾವ ನ್ಯಾಯ? ಎಂದೆ. ಕೊಟ್ಟ ಎಣ್ಣು ಕುಲಕ್ಕೆ ಹೊರಗು. ಅಪ್ಪನ ಮನೆಯಿಂದ ಬಂದ ಮ್ಯಾಲೆ ಮಗಳು ಹಿಂತಿರುಗಿ ಹೋಗಬೌದಾ? ಅಂತ ಕೇಳಿದ."[20]– ಕುಂಭನ ಇಂತಹ ಮಾತುಗಳ ಹಿಂದೆ ಹೆಣ್ಣಿನ ಪಾವಿತ್ರ್ಯತೆಯನ್ನು, ಭವಿಷ್ಯವನ್ನು ನಿರ್ಧರಿಸುವ ಸಮುದಾಯದ ಮನೋವಿಜ್ಞಾನದ ಗಂಡಾಳ್ವಿಕೆಯ ಮನಃಸ್ಥಿತಿಯ ಪ್ರಾಬಲ್ಯವನ್ನು ಕಾಣಬಹುದು.

8. ಸಾಮಾಜಿಕ – ಸಾಂಸ್ಕೃತಿಕ ಮನೋವಿಜ್ಞಾನ: ಉತ್ತರಕಾಂಡವನ್ನು ಅವರೇ ಹೇಳಿಕೊಳ್ಳುವಂತೆ ಕೇವಲ ಸೃಜನಶೀಲ ಪ್ರತಿಕ್ರಿಯೆಯನ್ನಾಗಿ[21] ನೋಡಲಾಗದು. ಸೃಜನಶೀಲತೆಯೊಳಗೆ ಕುಶಲತೆಯಿಂದ ಹೆಣೆದ ಸಾಮಾಜಿಕ ಸಾಂಸ್ಕೃತಿಕ ಪುರುಷಕೇಂದ್ರಿತ ಧೋರಣೆಗಳ ಸುತ್ತ ಕೂಡ ನೋಡಬೇಕಾಗುತ್ತದೆ. ಇಡೀ ಕಾದಂಬರಿ ಪ್ರತಿಪಾದಿಸುತ್ತಿರುವ ಒಟ್ಟು ತಾತ್ವಿಕತೆಯನ್ನು ಗುರುತಿಸಲು ಈ ಅಂಶ ಬಹಳ ಮುಖ್ಯವಾಗುತ್ತದೆ. ಕಾದಂಬರಿಯಲ್ಲಿ ಸೀತೆಯ ಪಾತ್ರ ಸ್ವಾಭಿಮಾನಿ ಎಂಬಂತೆ ಮೇಲ್ನೋಟಕ್ಕೆ ಕಂಡರೂ ಅದರ ಒಳವಿವರಗಳು ಹೇಗೆ ವೈದಿಕ ವ್ಯವಸ್ಥೆಯ ಮನೋಧೋರಣೆಗಳ ಎಳೆಗಳಲ್ಲೇ ಹೆಣೆಯಲ್ಪಟ್ಟಿದೆ ಎನ್ನುವುದನ್ನು ತೋರಿಸುತ್ತದೆ. ಆ ಮೂಲಕ 'ಭಾರತೀಯ ನಾರಿತ್ವ'ದ ಪರಿಕಲ್ಪನೆ ಎಂದರೆ ಅದು ಕೇವಲ ವೈದಿಕ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ಮಹಿಳೆಯನ್ನಾಗಿ ಮಾತ್ರ ನೋಡಬಯಸುತ್ತದೆ.

"ಕಾರ್ಯೇಷು ದಾಸಿ, ಕರಣೇಷು ಮಂತ್ರಿ, ಭೋಜ್ಯೇಷು ಮಾತಾ, ರೂಪೇಶು ಲಕ್ಷ್ಮಿ, ಕ್ಷಮಾಯಾ ಧರಿತ್ರಿ, ಶಯನೇಷು ರಂಭಾ" – ಎನ್ನುವ ವೈದಿಕ ಪುರೋಹಿತಶಾಹಿ ಮನಃಸ್ಥಿತಿಯನ್ನೇ ಪುನರ್ ಸ್ಥಾಪಿಸುವ ತಂತ್ರವನ್ನು ಇಲ್ಲಿ ಸೀತೆಯ ಪಾತ್ರದ ಮೂಲಕ ಬಿಂಬಸಲಾಗಿದೆ ಎನ್ನಬಹುದು.

ರಾಮ ಪರಿತ್ಯಜಿಸಿದ್ದಾನೆಂದು ವಾಲ್ಮೀಕಿಗಳ ಎದುರು ಸೀತೆ ಹೇಳುವುದೇ ಇಲ್ಲ. ಆದರೆ ಒಂದು ವಾರದ ನಂತರ ಮಹರ್ಷಿಗಳು ತಾವೇ ಸೀತೆಯ ಕುಟೀರಕ್ಕೆ ಬಂದು ಸೀತೆಯನ್ನು ಕುರಿತು ಹೀಗೆ ಹೇಳುತ್ತಾರೆ. – "ಮಗು, ರಾಮಚಂದ್ರ ಅಧರ್ಮದಿಂದ ನಡೆಯುವವನಲ್ಲ. ಅಗ್ನಿಸಾಕ್ಷಿಯಾಗಿ ಕೈ ಹಿಡಿದ ಪತ್ನಿಗೆ ಅನ್ಯಾಯ ಮಾಡುತ್ತಾನೆಯೆ? ಇಡೀ ರಾಜ್ಯದ ಜನತೆಗೆ ನ್ಯಾಯ ಧರ್ಮಗಳನ್ನು, ಅನ್ನ ವಸತಿಗಳನ್ನು ಸ್ಥಾಪಿಸುವ ಹೊಣೆ ಹೊತ್ತವನಿಗೆ ತಾನೂ ತ್ಯಾಗ ಮಾಡಬೇಕು, ತನ್ನ ಕೈ ಹಿಡಿದವರೂ ತ್ಯಾಗ ಮಾಡಬೇಕು ಎಂಬ ಕರ್ತವ್ಯವಿರುತ್ತೆ. ನಿನ್ನನ್ನು ಪರಿತ್ಯಜಿಸಿರುವುದನ್ನು ಈ ದೃಷ್ಟಿಯಿಂದ ನೋಡಬೇಕು."[22]– ಎನ್ನುವ ವಾಲ್ಮೀಕಿಯ ಮಾತುಗಳಲ್ಲಿ ಹೆಂಡತಿಯಾದವಳು ಹೇಗಿರಬೇಕೆಂಬ ನೀತಿಬೋದೆಯ ಮಾತುಗಳಿವೆ. ಅಲ್ಲದೇ ಸೀತೆಗೆ ಹೆರಿಗೆಯಾಗಿ ಸುಮಾರು ಎರಡೂವರೆ ವರ್ಷಗಳು ಕಳೆದರೂ ಆಕೆಯನ್ನು ಪುನಃ ಕರೆಸಿಕೊಳ್ಳದ ರಾಮನ ನಿಲುವನ್ನು ಆಶ್ರಮವಾಸಿಗಳು ಸಮರ್ಥಿಸುವ ಮುಂದಿನ ಮಾತುಗಳಿವು. – "ರಾಮನಂಥ ಧರ್ಮನಿಷ್ಠ ರಾಜನು ಪರಿತ್ಯಜಿಸಿ ಎರಡೂವರೆ ವರ್ಷ ಕಳೆದರೂ ಹಿಂತಿರುಗಿ ಕರೆಸಿಕೊಳ್ಳದಿರುವುದನ್ನು ನೋಡಿದರೆ ಈ ಹೆಂಡತಿಯ ಶುದ್ಧಿಯಲ್ಲೇ ಏನೋ ಅನುಮಾನವಿರಬೇಕು; ಸತ್ಯಾಸತ್ಯವನ್ನು ಪರಿಶೋಧಿಸದೆ ಆ ಸತ್ಯಸಂಧನು ಯಾರಿಗೂ ಅನ್ಯಾಯ ಮಾಡೋನಲ್ಲ. ತನ್ನ ಮಕ್ಕಳನ್ನಾದರೂ ನೋಡಲು ಬಾರದಿರುವಷ್ಟು

ಕಠಿಣನಾಗಿದಾನೆ ಅಂದರೆ ಏನರ್ಥ? ಆಶ್ರಮದಲ್ಲಿ ಅದರಲ್ಲೂ ಋಷಿಗಳ ವಸತಿ ವಿಭಾಗದಲ್ಲಿ ಇಂಥವಳಿಗೆ ಆಶ್ರಯ ಕೊಟ್ಟಿರುವ ವಾಲ್ಮೀಕಿ ಮಹರ್ಷಿಗಳ ಬುದ್ಧಿ ಮಂಕಾಗಿದೆಯೇ?"[23] ಎನ್ನುವಂತಹ ಈ ಮಾತುಗಳು ಸ್ಪಷ್ಟವಾಗಿ ರಾಮನನ್ನು ಹಾಗೂ ಗಂಡಾಳಿಕೆಯ ಸಮಾಜದ ಮನೋಧರ್ಮವನ್ನು ಸಮರ್ಥಿಸುತ್ತವೆ.

ಫಲಿತಗಳು

ಭಾರತೀಯರ ಮನಃಪಟಲದೊಳಗೆ ರಾಮಾಯಣದ ಕತೆ 'ಭಾರತೀಯತೆಯ ಮನೋವಿಜ್ಞಾನವನ್ನು' ರೂಪಿಸುವಷ್ಟು ಬಲವಾದ ಪ್ರಭಾವ ಬೀರಿರುವುದು ಅಕ್ಷರಶಃ ಸತ್ಯ ಎನ್ನುವುದಕ್ಕೆ ರಾಮಾಯಣದ ದಂತಕತೆಗಳು ಈ ದೇಶದ ಮೂಲೆ ಮೂಲೆಯಲ್ಲಿ ಪ್ರಚಲಿತದಲ್ಲಿರುವುದೇ ಸಾಕ್ಷಿ. ಪಿತೃಕೇಂದ್ರಿತ ಸಾಮಾಜಿಕ ವ್ಯವಸ್ಥೆ ಹೆಣ್ಣಿನ ಬದುಕಿನ ಸುತ್ತ ಹೆಣೆದಿರುವ ಹೆಣಿಗೆಗಳು ಆಕೆಯ ಸ್ವತಂತ್ರ್ಯ ಆಲೋಚನೆಯ ಸಾಧ್ಯತೆಯನ್ನೇ ಇಲ್ಲವಾಗಿಸಿಬಿಡುವ ಸಂದರ್ಭವನ್ನು ನೋಡಬಹುದು. ಒಂದು ವೇಳೆ ಆಕೆ ಬಂಡಾಯವೆದ್ದರೂ ಕೂಡ ಅಂತಿಮವಾಗಿ ಈಗಾಗಲೇ ಸ್ಥಾಪಿತವಾಗಿರುವ ವ್ಯವಸ್ಥೆಯ ಸ್ವರೂಪದೊಳಗೆ ಮತ್ತೆ ಬದುಕಬೇಕಾದ ಸ್ಥಿತಿಯನ್ನು ಇಲ್ಲಿ ಸೀತೆಯ ಪಾತ್ರದ ಮೂಲಕ ಅರಿವಿಗೆ ಬರುತ್ತದೆ.

ಜನಪ್ರಿಯ ಪುರಾಣದ ಕಥೆಯೊಂದರ ಪ್ರಸಿದ್ಧ ಪಾತ್ರದ ಮೂಲಕ 'ಭಾರತೀಯ ನಾರಿತ್ವದ' ಮೌಲ್ಯಗಳನ್ನು ಹೇಗೆ ಪುನರ್ ಪ್ರತಿಷ್ಠಾಪಿಸಬಹುದು ಎನ್ನುವುದಕ್ಕೆ 'ಉತ್ತರಕಾಂಡ' ಕಾದಂಬರಿ ಅತ್ಯುತ್ತಮ ನಿದರ್ಶನವಾಗುತ್ತದೆ. ಆಕೆಯ ಬಂಡಾಯದ ಗುಣ ಓದುಗರಲ್ಲಿ ಅನಗತ್ಯ ಅಹಂಕಾರವಾಗಿ ಕಂಡರೆ ಆಶ್ಚರ್ಯವಾಗಬೇಕಿಲ್ಲ. ಪುರಾಣಗಳೂ ಸಹ ಸೀತೆಯ ಬಂಡಾಯವನ್ನು ದೈವೀಕರಿಸಿಬಿಟ್ಟದ್ದು ಪುರುಷ ಕೇಂದ್ರಿತ ಪುರಾಣಗಳ ಹುನ್ನಾರವಾಗಿಯೇ ಕಾಣುತ್ತದೆ.

ಸೀತೆಯ ಹುಟ್ಟು, ಬೆಳವಣಿಗೆ, ತನ್ನ ಗುರುಪತ್ನಿಯಿಂದ ಕೇಳಿ ತಿಳಿದ ಅಹಲ್ಯೆಯ ಬದುಕಿನ ದುರಂತಮಯ ಕತೆ, ರಾಮನ ನಿರೀಕ್ಷೆ, ವಿವಾಹ, ವನವಾಸ, ಅಗ್ನಿಪರೀಕ್ಷೆ, ಮತ್ತೆ ಪರಿತ್ಯಕ್ತಳಾದದ್ದು – ಈ ಎಲ್ಲಾ ಘಟನೆಗಳು ಆಕೆಯ ಬದುಕನ್ನು ನಿರ್ಧರಿಸಿದ ಅಂಶಗಳು. ರಾವಣನ ವಶದಲ್ಲಿದ್ದ ಸೀತೆಗೆ ಒಮ್ಮೆ ಶೂರ್ಪನಖಿಯ ಕಾರಣಕ್ಕೆ ದೇಹ ಶುದ್ಧಿಯ ಕುರಿತ ಹಲವು ಪ್ರಶ್ನೆಗಳು ಕಾಡಲಾರಂಬಿಸುತ್ತವೆ. ಆಗ ಹೆಣ್ಣು ವ್ಯಭಿಚಾರ ಮಾಡುವ ಕುರಿತು ಯೋಚಿಸುತ್ತಿರುವಾಗ ಆಕೆಗೆ ಅಹಲ್ಯೆಯ ನೆನಪಾಗುತ್ತದೆ. ಗೌತಮ ಮಹರ್ಷಿಗಳನ್ನು ಒಪ್ಪಿಸಿ ಅಹಲ್ಯೆಯನ್ನು ಒಂದು ಮಾಡಿದ ಮೇಲೆ ಅವರಿಬ್ಬರ ನಡುವೆ ಮೊದಲಿನ ಸಾಂಗತ್ಯ ಸಾಧ್ಯವಾಯಿತೆ? ಎನ್ನುವ ಪ್ರಶ್ನೆಗಳು ಸೀತೆಯಲ್ಲಿ ಏಳುತ್ತವೆ. "ತಪಸ್ಸಿಗೆ ಬೇಕಾದ ಏಕಾಗ್ರತೆಯನ್ನು ಸಾಧಿಸಲು ಅವಳನ್ನು ಕ್ಷಮಿಸುವುದು ಅಗತ್ಯವೆಂದು ರಾಮನು ಗೌತಮರನ್ನು ಒಪ್ಪಿಸಿದ. ಅವರು ಅದರಂತೆ ನಡೆದರೂ ಕೂಡ. ಕ್ಷಮಿಸಿದ ಕುರುಹಾಗಿ ಅವಳ ಜೊತೆ ಇದ್ದು ಅವಳು ಬೇಯಿಸಿದ ಅನ್ನವನ್ನು ತಿಂದಿದ್ದಾರೆ. ಆದರೆ ಅವಳ ಬಗೆಗೆ ಅವರಲ್ಲಿ ಮೊದಲಿದ್ದ ಗುಣದ ಪ್ರೀತಿ ಸಾಧ್ಯವಾಯಿತೆ? ಅವಳಿಗಾದರೂ ದೋಷಪ್ರಜ್ಞೆಯ ನೆನಪೂ ಇಲ್ಲದ ಪ್ರೀತಿಯನ್ನು ಕೊಡಲು, ಪಡೆಯಲು ಸಾಧ್ಯವಾಯಿತೆ? ಇಲ್ಲವೆಂದೇ ಮನಸ್ಸು ನುಡಿದಿದೆ"[24]; "------ಪ್ರೀತಿಯ ಮೇಲೆ ಸವಾಲು ಹಾಕಿದ ನನ್ನ ಹಟಮಾರಿತನಕ್ಕೆ ತಕ್ಕ ಶಿಕ್ಷೆಯಾಯಿತು. ತಾಳ್ಮೆಯಿಂದ ಬಿಡಿಸಿ ಹೇಳಿದ ಲಕ್ಷ್ಮಣನನ್ನು ಆಡಬಾರದ ಮಾತಿನಿಂದ ಚುಚ್ಚಿ ಕಳಿಸಿದ ಪಾಪಿಗೆ ಮತ್ತೆ ಗಂಡನನ್ನು ಸೇರುವ ಸಾಧ್ಯತೆ ಹೇಗೆ ಬಂದೀತು? ಮನಸ್ಸಿನ ಕುಸಿತ ಒಳ ಒಳ ಒಳ ಕತ್ತಲೆಯ ಗಹ್ವರಕ್ಕೆ ಇಳಿದು ಮುಳುಗುತ್ತಿದೆ. ಸೀತೆ, ನಿನಗಾಗಿರುವ ಶಿಕ್ಷೆಗೆ ನೀನೇ ಕಾರಣಳು. ಪಾಪದ ಪರಿಣಾಮ ತಕ್ಷಣವೇ ಕಂಡಿದೆ. ಮುಂದಿನ ಜನ್ಮದ ತನಕ ಕಾಯಲಿಲ್ಲ. ನೀನು ಎಂದೆದಿಗೂ ಮೇಲೇಳುವುದಿಲ್ಲ ಎಂದು ಮನಸ್ಸು ಘಾತಿಸುತ್ತಿದೆ"[25]; "ಪಾತಿವ್ರತ್ಯವೆನ್ನುವುದು ಪತಿಗೆ ಮೀಸಲು ಮಾತ್ರವಲ್ಲ. ತನ್ನ ಸ್ವಾತಂತ್ರ್ಯವನ್ನು ಕಾಪಿಟ್ಟುಕೊಳ್ಳುವ ಶಕ್ತಿ ಎಂಬ ಅರ್ಥ ಹೊಳೆಯುತ್ತಿದೆ. ಈ ಸೀತೆಯ ಭಯ ನಿರ್ಮೂಲವಾಗಿದೆ"[26] – ಸೀತೆಯ ಇಂತಹ ಮಾತುಗಳಲ್ಲಿ ಹಾಗೂ "ತಂದೆಯಾಗಲಿ, ಸೋದರನಾಗಲಿ, ಹತ್ತಿರದ ಬಂಧುವಾಗಲಿ ಹೆಂಗಸು ಏಕಾಂತದಲ್ಲಿರಬಾರದು ಅಂತ ಶಾಸ್ತ್ರಕಾರರು ಯಾಕೆ ಬರೆದಿದಾರೆ?"[27]– ಎನ್ನುವ ಊರ್ಮಿಳೆಯ ಮಾತುಗಳಲ್ಲಾಗಲೀ ಹೆಣ್ಣಿನ ಪಾವಿತ್ರ್ಯತೆ ನಿರ್ಧಾರವಾಗುವುದು

ಆಕೆಯ ಲೈಂಗಿಕ ಬಯಕೆಗಳ ನಿಯಂತ್ರಣದ ಮೂಲಕ ಮಾತ್ರ ಎನ್ನುವ ಇಂತಹ ನಿರೂಪಣೆಗಳ ಒಳವಿವರಗಳ ಹಿಂದಿರುವ ಮನೋವಿಜ್ಞಾನ – ಪಿತೃಕೇಂದ್ರಿತ ಸಾಮಾಜಿಕ ವ್ಯವಸ್ಥೆಯ ಸೂಕ್ಷ್ಮ ಹೆಣಿಗೆಗಳು. ಇಂತಹ ಹೇಳಿಕೆಗಳನ್ನು ಕಾದಂಬರಿಕಾರರು ಸ್ತ್ರೀ ಪಾತ್ರಗಳ ಮೂಲಕವೇ ಅಭಿವ್ಯಕ್ತಿಸುವುದು ಸಹ ಮೂಲಭೂತವಾದಿತನದ ಪಿತೃಕೇಂದ್ರಿತ ಸಾಮೂಹಿಕ ಮನೋವಿಜ್ಞಾನವನ್ನು ಗಟ್ಟಿಗೊಳಿಸುವ ಒಂದು ತಂತ್ರವಾಗಿ ಕಾಣುತ್ತದೆ.

ಪರಿತ್ಯಕ್ತೆಯಾದ ನಂತರ ಹೊಸ ಬದುಕನ್ನು ಸ್ವಾಭಿಮಾನದಿಂದ ಕಟ್ಟಿಕೊಂಡ ಸೀತೆ ಕೊನೆಗೂ ಮಕ್ಕಳನ್ನು ಬೆಳೆಸುವ ಹಂತದಲ್ಲಿ ಮಕ್ಕಳಿಗಿರುವ Identity Crisis ಸಲುವಾಗಿ ರಾಮನ ಬಳಿ ಇರುವುದೇ ಉತ್ತಮ ಎಂಬ ನಿರ್ಧಾರಕ್ಕೆ ಬಂದು ಬಿಡುತ್ತಾಳೆ. ಇದು ಸಂತಾನದ ಮೇಲೆ ಇರುವ ಪಿತೃಕೇಂದ್ರಿತ ವ್ಯವಸ್ಥೆಯ ಬಿಗಿ ಧೋರಣೆಗೆ ಮುದ್ರೆ ಒತ್ತಿದಂತಿದೆ. "ತಾಯಿ ಸತ್ಯ – ತಂದೆ ನಂಬಿಕೆ" ಎನ್ನುವ ತಾತ್ವಿಕ ಸತ್ಯಗಳು ಪಿತೃಕೇಂದ್ರಿತ ವ್ಯವಸ್ಥೆಯೊಳಗೆ ಮಾನ್ಯಗೊಳ್ಳುವುದಿಲ್ಲ. ಮಗುವಿನ ಅಸ್ತಿತ್ವ ನಿರ್ಧಾರವಾಗುವುದು ಅದರ ತಂದೆ ಯಾರು ಎನ್ನುವುದರಿಂದಲೇ. ಇಂದಿಗೂ ಆಸ್ಥಿ ಸಂಬಂಧಿತ ಹಲವು ಕಾನೂನುಗಳು ಪಿತೃಕೇಂದ್ರಿತಾವಾಗೇ ಇರುವುದು ಭಾರತದ ಜಡ ಸಾಮಾಜಿಕ ಸ್ಥಿತಿಗೆ ಸಾಕ್ಷಿಯಾಗಿದೆ.

ಸೀತೆಯ ಬದುಕಿನ ಮೂಲಕ ಗೌರವ, ಪಾವಿತ್ರ್ಯತೆ, ಕೀರ್ತಿ, ಪತ್ನಿತ್ವ – ಇವನ್ನೆಲ್ಲಾ ಮಹಿಳೆಗೆ ಬಲವಂತಗೊಳಿಸಿದ ಪಿತೃತ್ವದ ಮನೋವಿಜ್ಞಾನವನ್ನು ಭೈರಪ್ಪ ಇಲ್ಲಿ ಕಾಣಿಸುತ್ತಾರೆ. ಮತ್ತದನ್ನು ಸಹಜ, ನೈತಿಕವಾಗಿದು ಸರಿ ಎನ್ನುವಂತಹ ನಿರೂಪಣಾ ಕ್ರಮವೊಂದನ್ನು ಆಕರ್ಷಕವಾಗಿ ಕಟ್ಟಿದ್ದಾರೆ. ಇಂತಹ ನಿರೂಪಣಾ ಕ್ರಮಗಳು ಸಮಾಜದಲ್ಲಿ ಗಂಡಾಳ್ವಿಕೆಯ ಮೂಲಭೂತವಾದಿತನದ ಮನೋವಿಜ್ಞಾನವನ್ನು ಸೂಕ್ಷ್ಮವಾಗಿ ರೂಪಿಸುತ್ತಿರುತ್ತವೆ ಎನ್ನುವ ಅಂಶವನ್ನು ಈ ಪ್ರಬಂಧದಲ್ಲಿ ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

ಅಡಿ ಟಿಪ್ಪಣಿಗಳು

1. ಕೃತಜ್ಞತಾ ಭಾಗ – ಉತ್ತರಕಾಂಡ ಕಾದಂಬರಿ – 2020
2. ಪುಟ–295, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
3. ಪುಟ 65, ಡಾ. ಕೆ.ಎಸ್. ಪವಿತ್ರ, ಆತಂಕ ಮತ್ತು ಭಯಕ್ಕೆ ಸಂಬಂಧಿಸಿದ ಕಾಯಿಲೆಗಳು, 2019
4. ಪುಟ–272, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
5. ಪುಟ–14, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
6. ಪುಟ–295, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
7. ಪುಟ–20, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
8. ಪುಟ–308, 309, 310, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
9. ಪುಟ–111, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
10. ಪುಟ–111, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
11. ಪುಟ–227, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
12. ಪುಟ–228, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
13. ಪುಟ–212, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020

14. ಪುಟ–212, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
15. ಪುಟ–213, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
16. ಪುಟ–213, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
17. ಪುಟ–188, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
18. ಪುಟ–189, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
19. ಪುಟ–19 ಎಸ್.ಎಲ್.ಭೈರಪ್ಪ, ಉತ್ತರಕಾಂಡ, 2020
20. ಪುಟ–25, 26, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
21. ಕೃತಜ್ಞತಾ ಭಾಗ, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
22. ಪುಟ–20, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
23. ಪುಟ–115, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
24. ಪುಟ–233, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
25. ಪುಟ–233, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
26. ಪುಟ–229, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 2020
27. ಪುಟ–313, ಎಸ್.ಎಲ್. ಭೈರಪ್ಪ, ಉತ್ತರಕಾಂಡ, 202

ಆಧಾರ ಗ್ರಂಥ

1. ಉತ್ತರಕಾಂಡ: ಎಸ್.ಎಲ್. ಭೈರಪ್ಪ, ಸಾಹಿತ್ಯ ಭಂಡಾರ ಬಳೇಪೇಟೆ, ಬೆಂಗಳೂರು, 53.

ಪರಾಮರ್ಶನ ಕೃತಿಗಳು

1. ಬಹುನೆಲೆಗಳ ಬೆರಗು, ಡಾ. ಉಮಾ ರಾಮರಾವ್, ಸಾಹಿತ್ಯ ಭಂಡಾರ, ಬಳೇಪೇಟೆ, ಬೆಂಗಳೂರು.
2. ವಿಶ್ವ ಸಾಹಿತಿ ಭೈರಪ್ಪ, ಅನುವಾದಕರ ಅನುಭವಗಳು, (ಸಂ) ಡಾ. ಎಂ.ಎಸ್. ವಿಜಯಾ ಹರನ್, ಸಾಹಿತ್ಯ ಭಂಡಾರ, ಬಳೇಪೇಟೆ, ಬೆಂಗಳೂರು.
3. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, (ಸಂ) ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ, ಅಭಿನವ ಪ್ರಕಾಶನ, ಬೆಂಗಳೂರು.
4. ಆಧುನಿಕ ಕನ್ನಡ ಸಾಹಿತ್ಯ ಹಾಗೂ ಜನಪ್ರಿಯತೆಯ ಪ್ರಶ್ನೆ, ಡಾ. ಎಂ.ಎಸ್. ದುರ್ಗಾಪ್ರವೀಣ, ಮಧು ಪಬ್ಲಿಕೇಷನ್ಸ್ ಅಂಡ್ ಎಂಟರ್‌ಪ್ರೈಸಸ್, ರಾಮನಗರ.
5. ಸಿಗ್ಮಂಡ್ ಫ್ರಾಯ್ಡ್, ಪ್ರೊ.ಸ್.ಕೆ. ಹೊಳೆಯಣ್ಣವರ, ಚೈತ್ರ ಪ್ರಕಾಶನ, ಗಾಂಧಿನಗರ, ಬೆಂಗಳೂರು.
6. ಯೂಂಗನ ಮನೋವೈಜ್ಞಾನಿಕ ಸಿದ್ಧಾಂತಗಳು, ಬೆಂಗಳೂರು ವಿಶ್ವವಿದ್ಯಾಲಯ.
7. ಸಾಹಿತ್ಯ ಮತ್ತು ಮನೋವಿಜ್ಞಾನ, ಡಾ.ಬಿ. ಕೃಷ್ಣಮೂರ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ.
8. ಯೂಂಗನ ಮನೋವೈಜ್ಞಾನಿಕ ಸಿದ್ಧಾಂತಗಳು, ಎಂ. ಬಸವಣ್ಣ, ಪ್ರಸಾರಾಂಗ, ಬೆಂಗಳೂರು ವಿ.ವಿ.
9. ಸಾಹಿತ್ಯ ಮತ್ತು ಮನಃಶಾಸ್ತ್ರ, ಕಾವ್ಯಾನಂದ (ಡಾ. ಸಿದ್ಧಯ್ಯ ಪುರಾಣಿಕ ಅಭಿನಂದನ ಗ್ರಂಥ), (ಸಂ) ಸಾ.ಶಿ. ಮರುಳಯ್ಯ. ಡಾ. ಸಿದ್ಧಯ್ಯ ಪುರಾಣಿಕ ಅಭಿನಂದನ ಸಮಿತಿ, ಬೆಂಗಳೂರು.

10. ಸೈಕಲಾಜಿಕಲ್ ಕಾಂಪ್ಲೆಕ್ಸ್‌ಗಳು, ಎಂ. ಬಸವಣ್ಣ.

11. ಮಹಿಳೆಯರ ಮನೋವ್ಯಾಕುಲತೆ, ಡಾ. ಸಿ.ಆರ್. ಚಂದ್ರಶೇಖರ್, ಸಪ್ನ ಬುಕ್ ಹೌಸ, ಬೆಂಗಳೂರು

12. ಆತಂಕ ಮತ್ತು ಭಯಕ್ಕೆ ಸಂಬಂಧಿಸಿದ ಕಾಯಿಲೆಗಳು, ಡಾ. ಕೆ.ಎಸ್. ಪವಿತ್ರ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಬೆಂಗಳೂರು.

ಕನ್ನಡ ಸಾಹಿತ್ಯದಲ್ಲಿ ಮನಃಶಾಸ್ತ್ರ

ಕುಸುಮ ಬಿ.ಎಂ.
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ, ಸಕಾರಿ ಕಲಾ ಕಾಲೇಜು, ಬೆಂಗಳೂರು

ವ್ಯಕ್ತಿಯ ವರ್ತನೆ ಮತ್ತು ಚಿಂತನೆಗಳ ಮೇಲೆ ಸಮಾಜದ ಸೂಕ್ಷ್ಮಪ್ರಭಾವ ಮತ್ತು ಪರಿಣಾಮಗಳನ್ನು ಗುರುತಿಸಬಹುದು. ಮನುಷ್ಯ ಹುಟ್ಟಿನಿಂದ ಸಂಘಜೀವಿ. ಆತ ಒಂಟಿಯಾಗಿರಲಾರ. ಆದ್ದರಿಂದ ಅವನು ತನ್ನ ಸುತ್ತಲಿನ ಪರಿಸರದ ಇತರರೊಡನೆ ಸೇರಿಕೊಂಡು ಒಂದು ಸಮೂಹದ ಜೀವಿಯಾಗುತ್ತಾನೆ. ಪ್ರತಿ ಸಮೂಹವೂ ಕೆಲವು ರೀತಿ–ನೀತಿಗಳನ್ನು, ಕಟ್ಟುಪಾಡುಗಳನ್ನು ಮಾಡಿಕೊಂಡಿರುತ್ತದೆ. ಅದನ್ನು ಸಮೂಹದ ಎಲ್ಲರೂ ಶ್ರದ್ಧೆಯಿಂದ ಪಾಲಿಸುತ್ತಾರೆ. ಈ ರೀತಿ ಸಮೂಹಗಳು ತಮ್ಮ ಸಾಂಸ್ಕೃತಿಕ ಭಿನ್ನತೆಯಿಂದ ವಿಶಿಷ್ಟತೆಯನ್ನು ಪಡೆದು ತಮ್ಮದೇ ಆದ ಸಮಾಜಗಳನ್ನು ನಿರ್ಮಿಸಿಕೊಂಡಿರುತ್ತವೆ.

ಇದನ್ನು ಮನೋವಿಜ್ಞಾನದ ಪರಿಭಾಷೆಯಲ್ಲಿ ಸಮಷ್ಟಿ ಸುಪ್ತಪ್ರಜ್ಞೆ ಎಂದು ಗುರುತಿಸುತ್ತಾರೆ. ಇದರ ಪ್ರವರ್ತಕ ಕಾರ್ಲ್ ಜಿ. ಯೂಂಗ್ ಪ್ರಕಾರ ವ್ಯಕ್ತಿಯ ಮನಸ್ಸು ಮೂರು ಸ್ತರಗಳಲ್ಲಿ ಕಾರ್ಯನಿರ್ವಹಿಸುತ್ತದೆ. ಅವುಗಳೆಂದರೆ ಇಗೊ, ವ್ಯಕ್ತಿ ಸುಪ್ತಾವಸ್ಥೆ, ಸಮಷ್ಟಿ ಸುಪ್ತಾವಸ್ಥೆ. ವ್ಯಕ್ತಿ ತನ್ನ ಕ್ರಿಯೆಗಳಲ್ಲಿ ಒಂದು ಇಡೀ ಸಮುದಾಯದ ಅಥವಾ ಸಂಸ್ಕೃತಿಗೆ ಸಮಾನವಾಗಿರುವ ಆದಿಮ ನೆನಪುಗಳ ಮೊತ್ತಕ್ಕೆ ಪ್ರಾಧಾನ್ಯತೆ ನೀಡಿ ವ್ಯವಹರಿಸುತ್ತಾನೆ ಎಂಬುದು ಯೂಂಗ್‌ನ ಸಿದ್ಧಾಂತದ ತಿರುಳು. ಇವುಗಳನ್ನು ಚಿರಂತನ ಪ್ರತೀಕಗಳು ಅಥವಾ ಆರ್ಷ ಪ್ರತೀಕಗಳು (ಆರ್ಕಿಟೈಪ್) ಎಂದು ಕರೆದಿದ್ದಾರೆ. ಯೂಂಗ್‌ನ ಪ್ರತಿಪಾದನೆಗಳು ಆಳ ಮನಃಶಾಸ್ತ್ರವೆಂದು ಪ್ರಚಲಿತಗೊಂಡವು.

ಒಂದು ನಿರ್ದಿಷ್ಟ ಸಮಾಜಕ್ಕೆ ಅದರದೆ ಆದ ಸಾಮಾಜಿಕ ನಡಾವಳಿಗಳ ಸಾಂವಿಧಾನಿಕ ರೂಪವಿದೆ. ಅದರ ಚಿರಸಂಸ್ಥೆಗಳಾದ ಧರ್ಮ, ಜಾತಿ, ಕುಟುಂಬ ಮುಂತಾದವು ಸಾಮಾಜಿಕ ಅಗತ್ಯಕ್ಕೆ ಅನುಸಾರವಾಗಿ ಬೇರೆ–ಬೇರೆ ರೂಪಗಳನ್ನು ಪಡೆಯುತ್ತವೆ. ಸಮಾಜವು ಒಂದೆಡೆಗೆ, ಒಂದು ಘಟನೆಗೆ, ಒಂದೇ ಒಂದು ಚಾರಿತ್ರಿಕ ಪ್ರಕ್ರಿಯೆಗೆ ಬದಲಾಗುವುದಿಲ್ಲ. ಅದಕ್ಕೆ ಅದರದೇ ಆದ ನಿಯಮ, ಸಂಹಿತೆಗಳಿವೆ.

'ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ'[1] ಎಂಬ ಪಂಪನ ಮಾತಿನಿಂದ ಮೊದಲುಗೊಂಡು 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ'[2] ಎಂಬ ಕರೆಯು ನಮಗೆ ವ್ಯಕ್ತಿಯಾಗಿ ಸಮುದಾಯದಿಂದ ಎದುರಾಗುವ ಅನೇಕ ಅಡ್ಡಿ ಆತಂಕಗಳನ್ನು ವಿವರಿಸುತ್ತವೆ. ಈ ಆತಂಕಗಳು ಧರ್ಮ, ಜಾತಿ, ಲಿಂಗ ಮುಂತಾದ ವಿಷಯಗಳ ಮೂಲಕ ಎದುರಾಗುತ್ತವೆ. ವ್ಯಕ್ತಿ ಮತ್ತು ಸಂಸ್ಕೃತಿಗಳ ನಡುವಿನ ವರ್ತನೆಯ ತಾಕಲಾಟವನ್ನು ಸಾಹಿತ್ಯದಲ್ಲಿ ಚಿತ್ರಿಸುವ ಸಾಹಿತಿ, ಯಾತನೆಗಳ ನಡುವೆಯೂ ಬದುಕಿನ ಭರವಸೆಯನ್ನು ನೀಡುತ್ತಾನೆ. ಹಾಗಾಗಿ ಸಾಹಿತಿಯೇ ಮೊದಲ ಮನೋವಿಜ್ಞಾನಿ. ಇದರ ಅರಿವಿನಿಂದಲೇ ಪ್ಲೇಟೋ ತನ್ನ ಆದರ್ಶ ರಾಜ್ಯದಿಂದ ಸಾಹಿತಿಯನ್ನು ಹೊರಗಿಡಬೇಕೆನ್ನುತ್ತಾನೆ.

ಮನುಷ್ಯ ಹುಟ್ಟಿದ ಕೂಡಲೆ ಯಾವುದಾದರೊಂದು ಧರ್ಮದ, ಜಾತಿಯ ಕೂಸಾಗಿ ಬಿಟ್ಟಿರುತ್ತಾನೆ. ಅವನು ಎಷ್ಟೇ ಪ್ರಯತ್ನಿಸಿದರೂ ಇದರಿಂದ ತಪ್ಪಿಸಿಕೊಳ್ಳಲಾರ. ಅವನು ತನ್ನ ದಿನನಿತ್ಯದ ಜೀವನವನ್ನು ಸಾಗಿಸಲು ಹಾಗೂ ದೈಹಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಆರ್ಥಿಕ, ವೈವಾಹಿಕ, ಕೌಟುಂಬಿಕ, ರಾಜಕೀಯ ಹಾಗೂ ಸಾಮಾಜಿಕ ಇತ್ಯಾದಿ ವ್ಯವಸ್ಥೆಗಳನ್ನು ರೂಪಿಸಿಕೊಂಡಂತೆಯೇ ಮಾನಸಿಕ ಸ್ವಾಸ್ಥ್ಯ ಹಾಗೂ ನೆಮ್ಮದಿಯನ್ನು ಪಡೆಯಲು ಧಾರ್ಮಿಕ ವ್ಯವಸ್ಥೆಯೊಂದನ್ನು ರೂಢಿಸಿಕೊಂಡಂತಿದೆ. ಆದರೆ ಈ ಧರ್ಮ ಒಂದು ಸಮಾಜವನ್ನೇ ತನ್ನ ಮುಷ್ಟಿಯಲ್ಲಿ ಬಂಧಿಸಿಬಿಟ್ಟಿದೆ.

ಹಿಂದೂಧರ್ಮವು ಭಾರತೀಯ ಸಮಾಜವನ್ನು ನಿಯಂತ್ರಿಸುವ ಶಕ್ತಿಯಾಗಿದೆ. ಸಮಾಜದಲ್ಲಿ ಕಂಡುಬರುವ ಜನರು ತಮ್ಮ ಜೀವನದ ಪ್ರತಿ ಹಂತದಲ್ಲೂ ಈ ಧರ್ಮವನ್ನು ಅನುಸರಿಸುತ್ತಾರೆ. ಸಮಾಜದ ಒಂದು ಮುಖ್ಯ ಸಂಸ್ಥೆಯಾದ ವಿವಾಹದ ಉದ್ದೇಶಗಳಲ್ಲಿ 'ಧರ್ಮಕ್ಕೆ' ಮೊದಲ ಆದ್ಯತೆಯಿದೆ. ಜೀವನ ನಿರ್ವಹಣೆಯು ಕೂಡ ಧರ್ಮ ಮಾರ್ಗದಲ್ಲಿರಬೇಕು. ಈ ರೀತಿ ಜೀವನದ ಪ್ರತಿ ಹಂತದಲ್ಲೂ ಧರ್ಮ ಕಂಡುಬರುತ್ತದೆ. ಸಮಾಜದಲ್ಲಿ ಕಂಡು ಬರುವ ವರ್ಣಾಶ್ರಮ ವ್ಯವಸ್ಥೆ ಕೂಡ ಈ ಧರ್ಮದ ಕೂಸಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೇವರುಗಳ ಜೊತೆಗೆ ದೆವ್ವಗಳಿಗೂ ಪೂಜೆ ಸಲ್ಲುತ್ತದೆ ಮತ್ತು ಜಾತ್ರೆಗಳು ನಡೆಯುತ್ತವೆ. ಅಲ್ಲಿನ ಜನರು ದೇವರು, ಧರ್ಮಗಳಿಗೆ ತೋರುವ ಶ್ರದ್ಧೆ, ಭಯ, ಗೌರವವನ್ನು ದೆವ್ವಗಳಿಗೂ ತೋರುತ್ತಾರೆ. ದೇವರು ಮತ್ತು ದೆವ್ವಗಳ ಬಗೆಗಿನ ನಮ್ಮ ಶ್ರದ್ಧೆ, ಭಕ್ತಿಗಳೆಲ್ಲವೂ ಭೀತಿಯಿಂದ ಉಂಟಾದವು ಎಂದು ಕಾರಂತರು ತಮ್ಮ 'ಬಾಳ್ವೆಯೇ ಬೆಳಕು' ಕೃತಿಯಲ್ಲಿ ಅಭಿಪ್ರಾಯಪಡುತ್ತಾರೆ.

"ಮನುಷ್ಯನ ಮನಸ್ಸು ಮೊದಲು ದೇವರ ಕಡೆಗೆ ತಿರುಗಲು ಜೀವನದಲ್ಲಿ ಘಟಿಸಿದ ಅನೇಕಾನೇಕ ತೊಡಕುಗಳೇ ಕಾರಣ. ಇವುಗಳಿಂದ ಅವನ ಮನಸ್ಸು ಬೆದರಿ ನಮ್ರವಾದಂತೆ, ಜೀವನದ ಸೊಗಸುಗಳಿಂದ ಆಗಲಿಲ್ಲ. ಸಾವನ್ನು ಕುರಿತು ಬೆದರಿ ಉಂಟಾದ ನಂಬುಗೆಗಳಷ್ಟೇ ಪ್ರಮಾಣದಲ್ಲಿ, ಹುಟ್ಟು ಅವನನ್ನು ಬೆದರಿಸಲಿಲ್ಲ. ಇಂದುರೂಢಿಯಲ್ಲಿ ಪೂಜಿತರಾಗಿರುವ ದೇವ, ದೈವ, ದೆವ್ವಗಳ ಆರಾಧನೆಗಳು ದೇವರ ಭೀತಿಯ ಪ್ರಭಾವವನ್ನು ಸಾರುತ್ತಿವೆ. ಪ್ರೀತಿಯ ಪ್ರಭಾವ ಬಲು ಸ್ವಲ್ಪವೇ ಈ ಇತಿಹಾಸದಲ್ಲಿ ಎದ್ದು ನಿಲ್ಲುತ್ತದೆ"[3]. 'ಚೋಮನದುಡಿ' ಕಾದಂಬರಿಯ ಚೋಮ ಪಂಜರ್ಲಿ ಭೂತದಗುಡಿಯಲ್ಲಿ ನಡೆದುಕೊಳ್ಳುವ ರೀತಿ ಭೂತಾರಾಧನೆಯ ಶ್ರದ್ಧೆಯನ್ನು ಸಾಕ್ಷೀಕರಿಸುತ್ತದೆ. ಹಾಗಾಗಿ ಒಂದು ಸಮಾಜ ತನ್ನ ಯಾವ ಕಾರ್ಯವನ್ನೂ ಧರ್ಮ ಬಿಟ್ಟು ಮಾಡಲಾರದು.

'ದಯೆಯೇ ಇಲ್ಲದ ಧರ್ಮ ಯಾವುದಯ್ಯ'[4] ಎಂಬ ಪ್ರಶ್ನೆ ಎದುರಿರುವಾಗಲೇ, ಜೀವದಯೆ ಪರಮಧರ್ಮವೆನಿಸಿರುವ ಜೈನಧರ್ಮದಲ್ಲಿಯೂ ಭಾವಹಿಂಸೆಯಾಗಿ ಹಿಟ್ಟಿನ ಹುಂಜದ ಬಲಿಯನ್ನು ನೀಡುವ ಪ್ರಸಂಗವನ್ನು ಜನ್ನನ ಯಶೋಧರ ಚರಿತೆ ಚಿತ್ರಿಸುತ್ತದೆ. ಕೇಡಿನ ನಿವಾರಣೆಯ ಬಗೆಗಿನ ಈ ಧಾರ್ಮಿಕ ಮೂಢನಂಬಿಕೆಯಲ್ಲಿ ಸಮಷ್ಟಿ ಸುಪ್ತಪ್ರಜ್ಞೆಯ ಪ್ರಭಾವ ತೀವ್ರವಾಗಿ ಕಂಡುಬರುತ್ತದೆ. ಆದುದರಿಂದ ಕನ್ನಡ ಸಾಹಿತ್ಯವು ಧರ್ಮದ ಅನುಸರಣೆಯಲ್ಲಿ ಅವ್ಯಕ್ತವಾಗಿರುವ ಭಯದ ಅನಂತತೆಯನ್ನು ಚಿತ್ರಿಸುತ್ತದೆ. ಈ ಭಯವು ಪೀಳಿಗೆಯಿಂದ ಪೀಳಿಗೆಗೆ ಸುಪ್ತಪ್ರಜ್ಞೆಯಲ್ಲಿ ಸಾಗಿಬಂದಿದೆ. ವ್ಯಕ್ತಿಯ ವರ್ತನೆಗಳ ತಾಕಲಾಟದಲ್ಲಿ ಸಮಷ್ಟಿ ಸುಪ್ತಪ್ರಜ್ಞೆಯು ಜಾಗೃತವಾಗಿರುವುದು ಹಲವು ಸಂದರ್ಭಗಳಲ್ಲಿ ಮನಗಾಣಬಹುದು.

ಯಶೋಧರ ಚರಿತೆಯ ಯಶೋಧರನ ಜೀವನದ ದುರಂತಗಳಲ್ಲಿ ಸಮಷ್ಟಿ ಸುಪ್ತಪ್ರಜ್ಞೆಯ ಹಲವಾರು ಕಾರಣಗಳು ಜಾಗೃತವಾಗಿವೆ. ಅಮೃತಮತಿಯ ಪ್ರಣಯವನ್ನು ವಿದ್ರೋಹವೆಂದುಕೊಳ್ಳುವಲ್ಲಿ ಅವನಿಗೆ ಸಾಂಪ್ರದಾಯಿಕವಾದ ಪುರುಷಪ್ರಧಾನ ಸಮಾಜದ ಚಿಂತನೆಗಳ ಪರಿಣಾಮವನ್ನು ಗುರುತಿಸಬಹುದು. ಹಾಗೆಯೇ ತಾಯಿಯ ಮಾತಿಗೆ ಮನಸ್ಸಿಲ್ಲದ ಮನಸ್ಸಿನಲ್ಲಿ ಒಪ್ಪಿ ಹಿಟ್ಟಿನ ಹುಂಜವನ್ನು ಬಲಿಕೊಡಲು 'ಮಾತೃದೇವೋಭವ' ಎಂಬ ಧಾರ್ಮಿಕತೆಯೇ ಕಾರಣವಾಗಿದೆ.

ಎನೆ ತಾಯ ಮೋಹದಿಂದಂ
ಜನಪನೊಡಂಬಟ್ಟು ಮನದೊಳಿಂತೆಂದಂ ಭಾ
ವನೆಯಿಂದಮಪ್ಪುದಾಸ್ರವ
ಮೆನಗಿನ್ನೆಂತಪ್ಪ ಪಾಪಮಿದಿರ್ವಂದಪುದೋ[5]

ಅಮೃತಮತಿ ಮತ್ತು ಬದಗನ ಗುಪ್ತಪ್ರೇಮದ ಅರಿವಿನಿಂದ ಬಾಧಿತನಾಗಿ ಕಾಂತಿಗುಂದಿದ ಯಶೋಧರ, ಇದರ ಅರಿವಿಲ್ಲದೆ ಕಳವಳಗೊಳ್ಳುವ ಚಂದ್ರಮತಿ ಇವರ ನಡುವಿನ ಮಾತುಕತೆಯು ವ್ಯಕ್ತಿಯಲ್ಲಿ ಭಯ ಅಥವಾ ಕೇಡಿನ ವಿಷಯವಾಗಿ ಇರುವ ಸಮಷ್ಟಿ ಸುಪ್ತಪ್ರಜ್ಞೆಯ ಪರಿಣಾಮವನ್ನು ಚಿತ್ರಿಸುತ್ತದೆ.

ಪಿತೃಪ್ರಧಾನ ಸಮಾಜವು ಹೆಣ್ಣಿನ ಲೈಂಗಿಕತೆಯನ್ನು ನಿಯಂತ್ರಣದಲ್ಲಿಡುವ ವಿಚಾರವೂ ಕೂಡ ಸಮಷ್ಟಿ ಸುಪ್ತಪ್ರಜ್ಞೆಯ ಭಾಗವಾಗಿಯೇ ಮುಂದುವರೆದಿದೆ. ಹಾಗಾಗಿಯೇ ಹೆಣ್ಣು ತನ್ನ ಲೈಂಗಿಕ ಆಯ್ಕೆ ಅಥವಾ ಲೈಂಗಿಕ ಆಸಕ್ತಿಯನ್ನು ತೋರ್ಪಡಿಸಿದಾಗ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಕೆರಳುವುದು. ಉತ್ತಮ ವಿಚಾರಗಳನ್ನು ಹೊಂದಿದ್ದರೂ ಯಶೋಧರ ತನ್ನ ಪತ್ನಿಯ ಗುಪ್ತ ಪ್ರೇಮಕ್ಕೆ ಎಲ್ಲರಂತೆಯೇ ಪ್ರತಿಕ್ರಿಯಿಸುತ್ತಾನೆ. ಪತಿಗೆ ತಿಳಿಯದಂತೆ ಪ್ರೇಮಿಯ ಬಳಿ ತೆರಳುವ ಅಮೃತಮತಿಯನ್ನು ಯಶೋಧರ ಹಿಂಬಾಲಿಸುತ್ತಾನೆ. ಇದನ್ನು "ಬೆನ್ನೊಳೆ ಪೋದಂದೋಷದ ಬೆನ್ನೊಳೆ ಸಂಧಿಸುವದಂಡದಂತರಸಂ"[6] ಎಂದು ಕವಿ ಚಿತ್ರಿಸಿರುವ ಬಗೆ ವಿಶಿಷ್ಟವಾಗಿದೆ. ಗಂಡಿನ ಸಂದರ್ಭದಲ್ಲಿಯಾದರೆ ಅದು ಒಪ್ಪಿತವಾಗುವ ಹಿಂದಿನ ಕಾರಣವೂ ಈ ವ್ಯವಸ್ಥೆಯ ಅಸ್ತಿತ್ವದ ಮುದುವರಿಕೆಯೇ ಆಗಿದೆ. ಲೈಂಗಿಕ ಬಯಕೆಯ ಈಡೇರಿಕೆಯೂ ಕೂಡ ಧರ್ಮದ ನೆಲೆಯಲ್ಲಿರಬೇಕು ಎಂಬುದು ಪ್ರತಿಯೊಂದು ಸಮಾಜದ ಆಶಯ. ಆದರೆ ಅದು ಪುರುಷಧರ್ಮ. ಹಾಗಾಗಿ ಅದು ಸ್ತ್ರೀಯರಲ್ಲಿ ಮಾತ್ರ ಧರ್ಮ ತಪ್ಪಿ ನಡೆದರೆ ನರಕ ಪ್ರಾಪ್ತವಾಗುವ ಭಯವನ್ನು ಉತ್ಪಾದಿಸುತ್ತದೆ.

ಅಮೃತಮತಿಯಷ್ಟವಂಕಂ
ಗೆ ಮರುಳ್ಗೊಂಡತ್ತೆ ಗಂಡರಂ ವಿಷದಿಂ ಕೊಂ
ದು ಮುದಿರ್ದು ಕುಷ್ಠಿ ಕೊಳೆ ಪಂ
ಚಮ ನರಕದೊಳಟ್ಟಿಳರಸ ಧೂಮಪ್ರಭೆಯೊಳ್[7]

ಹಾಗೆಯೇ ಒಂದು ಕಾಲದಲ್ಲಿ ಕರ್ನಾಟಕದ ವಿಶೇಷ ಧಾರ್ಮಿಕ ಆಚರಣೆಯಾಗಿ ಕಂಡುಬರುವ ಮಹಾಸತಿ ಆಚರಣೆಯ ಹಿನ್ನೆಲೆಯಲ್ಲಿಯೂ ಇದನ್ನು ಗುರುತಿಸಬಹುದು. ಫಲವಂತಿಕೆಯ ದೇವತೆಯಾಗಿ ಆಚರಣೆಯ ನಂತರ ಪೂಜಿಸಲ್ಪಡುವ ಈ ಸ್ತ್ರೀಯರನ್ನು ಆಹುತಿಗೆ ಸಿದ್ಧಪಡಿಸುವುದು ಧರ್ಮವೇ. ಮರಣಿಸಿದ ಪತಿಯ ಜೊತೆಗೆ ಚಿತೆಯೇರುವ ಮಹಿಳೆ ಆದರ್ಶಳಾದದ್ದು ಧರ್ಮ ಕಲ್ಪಿಸಿದ ಕಟ್ಟುಕತೆ. ವಾಸ್ತವದಲ್ಲಿ ಹೆಣ್ಣನ್ನು ಲೈಂಗಿಕವಾಗಿ ನಿಯಂತ್ರಿಸಿ ಅದನ್ನು ಗಂಡಿನ ಅಧೀನಗೊಳಿಸುವ ಪದ್ಧತಿ ಇದಾಗಿದೆ. ಸ್ತ್ರೀಯರು ಇದನ್ನು ಆಯ್ಕೆ ಮಾಡಿಕೊಳ್ಳಲು ಹಲವಾರು ಕಾರಣಗಳಿವೆ. ಆದರೆ ಅವಳು ಇದಕ್ಕೆ ಒಪ್ಪದ ಸಂದರ್ಭಗಳಲ್ಲಿ ಬಲವಂತವಾಗಿ ಆಚರಣೆಗೆ ಒಳಗಾಗುತ್ತಿದ್ದಳು.

ಸಮಾಜದ ನಿಯಂತ್ರಕ ಶಕ್ತಿಗಳಲ್ಲಿ ಮುಖ್ಯವಾಗಿರುವ ಜಾತಿಯು ಧರ್ಮದ ನೆಲೆಯಲ್ಲಿಯೇ ವರ್ತಿಸುತ್ತದೆ. ಜನರ ನಡುವೆ ಮಾನಸಿಕ ಗೋಡೆಗಳನ್ನು ನಿರ್ಮಿಸಿರುವ ಜಾತಿಯು ವ್ಯಕ್ತಿಗಳ ಬೆಳವಣಿಗೆಯಲ್ಲಿ ಅನೇಕ ಅಡ್ಡಿ–ಆಪತ್ತುಗಳನ್ನು ಉಂಟುಮಾಡುತ್ತದೆ. 'ಚೋಮನದುಡಿ' ಕಾದಂಬರಿಯ ಅಸ್ಪೃಶ್ಯನಾದ ಚೋಮ ತನ್ನ ಜಾತಿಗೆ ನಿಷೇಧಿತವಾದ ಭೂಮಿಯ ಒಡೆಯನಾಗುವ ಕನಸನ್ನು ಕಂಡು, ಅದರ ಸಲುವಾಗಿ ಬೇಕಾದ ಸಿದ್ಧತೆ (ಒಂದು ಜೊತೆ ಎತ್ತುಗಳನ್ನು ಸಾಕಿರುವುದು ಮೊದಲಾದ) ಗಳನ್ನು ಮಾಡಿಕೊಂಡಿದ್ದಾನೆ. ಆದರೆ ಅವನು ತನ್ನ ಈ ಆಸೆಯನ್ನು ಧಣಿ ಸಂಕಪ್ಪಯ್ಯನಲ್ಲಿ ಹೇಳಿಕೊಂಡಾಗ, ಆತ ತನ್ನ ತಾಯಿ ಒಪ್ಪಲಿಲ್ಲವೆಂದು ನಿರಾಕರಿಸುತ್ತಾನೆ. ದುಡಿಯನ್ನು ಬಾರಿಸುವ ಮೂಲಕ ತನ್ನ ನೋವನ್ನು ತಾಳಿಕೊಳ್ಳುವ ಚೋಮ. ತಾನು ಸಾಕಿದ ಎತ್ತುಗಳನ್ನು ಧಣಿ ಕ್ರಯಕ್ಕೆ

ಕೇಳಿದಾಗ ನಿರಾಕರಿಸುತ್ತಾನೆ. ಜೊತೆಗೆ ವ್ಯವಸ್ಥೆಯ ಬಗೆಗೆ ಕ್ರುದ್ಧಗೊಂಡು ಅವುಗಳ ಕಾಲುಗಳನ್ನು ಕತ್ತರಿಸಿ ಕಾಡಿಗೆ ಅಟ್ಟುತ್ತಾನೆ. ಆ ಬಗೆಗೆ ಮಗಳು ಬೆಳ್ಳಿ ವಿಚಾರಿಸಲಾಗಿ "ಮಾಡುವುದೇನು? ನನಗೆ ಸಿಗದ ತುತ್ತು ಇನ್ನೊಬ್ಬರಿಗೆ ಸಿಗದಂತೆ ಮಾಡಿದೆ"[8] ಎನ್ನುತ್ತಾನೆ.

ಅವನ ಮಗ ಗುರುವನು ಮತಾಂತರಗೊಂಡು ಭೂಒಡೆಯನಾದಾಗ "ಗದ್ದೆ ಸಾಗುವಳಿಯೇ? ಗುರುವನೆ? ಚುತಿಗೆಟ್ಟರೂ ಸ್ವರ್ಗ ಸಿಕ್ಕಿತಲ್ಲ!"[9] ಎನ್ನುವ ಚೋಮನಲ್ಲಿ ಜಾತಿ ಕೆಡುವ ಭಯ, ಆತಂಕಗಳಿವೆ. ಹೀಗೆ ಚೋಮ ತನ್ನ ಆಸೆ ಪೂರೈಸಿಕೊಳ್ಳುವ ಸಲುವಾಗಿ ತನ್ನ ಜಾತಿ, ಧರ್ಮವನ್ನು ತೊರೆಯಲು ಸಿದ್ಧನಿಲ್ಲ. ಅವನಂತೆಯೇ ಕೀಳು ಜಾತಿಯ ಜನರು ಮತಾಂತರಗೊಂಡು ಉತ್ತಮ ಜೀವನ ನಡೆಸುತ್ತಿದ್ದರು. ಚೋಮ ಸ್ವಾಭಿಮಾನಿ, ಅವನ ಸಮಾಜ ಎಷ್ಟು ನಿರ್ದಯವಾಗಿ ಅವನನ್ನು ದಮನಮಾಡುತ್ತಿದ್ದರೂ ಆ ವ್ಯವಸ್ಥೆಯನ್ನು ತ್ಯಜಿಸಲು ಸಿದ್ಧನಿಲ್ಲ. ಅವನಿಗೆ ಆಧುನಿಕ ಮೌಲ್ಯಗಳು ತಾನು ಒಪ್ಪಿದ ಸಮಾಜದಲ್ಲಿಯೇ ಬೇಕು. ಅವನ ಆಸೆ, ನಿರ್ಧಾರಗಳು ಅವನ ವ್ಯಕ್ತಿತ್ವದ ದ್ವಂದ್ವಗಳನ್ನು ತಿಳಿಸುತ್ತವೆ. ಈ ದ್ವಂದ್ವಕ್ಕೆ ಕಾರಣ ಜಾತಿಯ ಪರಿಶುದ್ಧತೆಯ ಬಗೆಗಿನ ಅವನ ಕಾಳಜಿ ಮತ್ತು ಧರ್ಮದ ಬಗೆಗಿನ ಅವನ ಭಯವಾಗಿಕಂಡರೂ ಮತಾಂತರ ಅವನ ಸ್ವಾಭಿಮಾನಕ್ಕೆ ಬೀಳುವ ಪೆಟ್ಟಾದುದರಿಂದ ಆತ ಅದನ್ನು ತಿರಸ್ಕರಿಸುತ್ತಾನೆ. ಹಾಗೆಯೇ ಅವನ ಈ ಎಲ್ಲ ನಿರ್ಧಾರಗಳ ಹಿಂದೆ ಸಮಷ್ಟಿ ಸುಪ್ತಪ್ರಜ್ಞೆಯ ಪಾತ್ರವನ್ನು ಗುರುತಿಸಬಹುದು. ಜನರ ಜೀವನದಲ್ಲಿ ಸಮಷ್ಟಿ ಸುಪ್ತಪ್ರಜ್ಞೆಯ ಗುರುತರ ಪರಿಣಾಮಗಳು ಬಹುವಾಗಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ.

ಕೊನೆಟಿಪ್ಪಣಿಗಳು

1. ಪಂಪಭಾರತಂ– ಎನ್. ಅನಂತರಂಗಾಚಾರ್, ಪು.ಸಂ.–221
2. ಆತ್ಮಶ್ರೀಗಾಗಿ ನಿರೋಕುಶ ಮತಿಗಳಾಗಿ– ಕುವೆಂಪು, ಪು.ಸಂ.–1
3. ಬಾಳ್ವೆಯೇ ಬೆಳಕು– ಡಾ. ಕೆ. ಶಿವರಾಮ ಕಾರಂತ, ಪು.ಸಂ.–24
4. ಬಸವಣ್ಣನವರ ವಚನಗಳು– ಸಂ. ಡಾ. ಎಲ್. ಬಸವರಾಜು, ಪು.ಸಂ.–77
5. ಜನ್ನ ಸಂಪುಟ– ಸಂ. ಸಿ.ಪಿ. ಕೃಷ್ಣಕುಮಾರ್, ಪು.ಸಂ.–28
6. ಪೂರ್ವೋಕ್ತ, ಪು.ಸಂ.–20
7. ಪೂರ್ವೋಕ್ತ, ಪು.ಸಂ.–45
8. ಚೋಮನ ದುಡಿ– ಡಾ. ಶಿವರಾಮ ಕಾರಂತ, ಪು.ಸಂ.–66
9. ಚೋಮನ ದುಡಿ– ಡಾ. ಶಿವರಾಮ ಕಾರಂತ, ಪು.ಸಂ.–71

ಪರಾಮರ್ಶನ ಗ್ರಂಥಗಳು

1. ಜನ್ನ ಸಂಪುಟ– ಸಂ. ಸಿ.ಪಿ. ಕೃಷ್ಣಕುಮಾರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2017.
2. ಪಂಪ ಭಾರತಂ– ಎನ್. ಅನಂತ ರಂಗಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 2007.
3. ಚೋಮನ ದುಡಿ– ಡಾ. ಶಿವರಾಮ ಕಾರಂತ, ಸಪ್ನ ಬುಕ್ ಹೌಸ್, ಬೆಂಗಳೂರು, 2008.
4. ಬಾಳ್ವೆಯೇ ಬೆಳಕು– ಡಾ. ಕೆ. ಶಿವರಾಮ ಕಾರಂತ, ಎಸ್.ಬಿ.ಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, 2022.
5. ಕುವೆಂಪು– https://share.google/LPdah9WwiWXf53n11
6. ಬಸವಣ್ಣನವರ ವಚನಗಳು– ಸಂ. ಡಾ. ಎಲ್. ಬಸವರಾಜು, ಗೀತಾ ಬುಕ್ ಹೌಸ್, ಮೈಸೂರು, 2000.

ದೇವನೂರರ ಕಥನದಲ್ಲಿ ಹೆಣ್ಣು ಪಾತ್ರಗಳ ವರ್ತನೆಗಳು

ಡಾ. ಶ್ವೇತ ಜೆ ವಡೇರಹಳ್ಳಿ
ಉಪನ್ಯಾಸಕರು
ಮೌಂಟ್ ಕಾರ್ಮೆಲ್ ಕಾಲೇಜು, ಸ್ವಾಯತ್ತ.

ದೇವನೂರರ ಕಥನದಲ್ಲಿ ಶೋಷಕ ಮತ್ತು ಶೋಷಿತ ವರ್ಗ, ಬಡತನ, ಅಸಹಾಯಕತೆ, ಗಂಡು–ಹೆಣ್ಣು ಸಂಬಂಧ, ದಾಂಪತ್ಯದಲ್ಲಿನ ಆಂತರಿಕ ಸಂಘರ್ಷಗಳು, ಹೆಚ್ಚು ಅಭಿವ್ಯಕ್ತಗೊಂಡಿವೆ. ಅದರ ಜೊತೆಗೆ ಅಸ್ತಿತ್ವವನ್ನು ಕಟ್ಟಿಕೊಳ್ಳಲು ಛಲಬಿಡದೆ ಹೋರಾಡುವ ಜೀವಂತಿಕೆಯನ್ನು ಇವರ ಪಾತ್ರಗಳ ವರ್ತನೆಯಲ್ಲಿ ಕಾಣಬಹುದು. 'ಕುಸುಮಬಾಲೆ' ದ್ಯಾವನೂರು ಹಾಗೂ ಒಡಲಾಳ' ಈ ಕಥನಗಳಲ್ಲಿ ಏಕಾಂಗಿತನ, ಅನಾಥ ಪ್ರಜ್ಞೆ, ಅಸ್ತಿತ್ವದ ಹುಡುಕಾಟಗಳು ಪುರುಶ ಪಾತ್ರಗಳಲ್ಲಿ ಪ್ರಧಾನವಾಗಿ ಕಂಡುಬಂದರೆ; ಇಲ್ಲಿನ ಹೆಣ್ಣು ಪಾತ್ರಗಳು ಶೋಶಣೆಗೆ ಒಳಗಾದಾಗ ಪ್ರತಿರೋಧವನ್ನು ಒಡ್ಡುತ್ತಲೇ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲು ನಿರಂತರವಾಗಿ ಶ್ರಮಿಸುತ್ತವೆ. ಸಾಕವ್ವ, ಅಕ್ಕಮಹಾದೇವಮ್ಮ, ಈರಿ, ಕೆಂಪಿ, ತೂರಮ್ಮ, ಲಕ್ಶ್ಮಿ ಮೊದಲಾದ ಶ್ರಮಿಕ ಪಾತ್ರಗಳು ಇವರ ಕಥನಗಳಲ್ಲಿ ಚಿತ್ರಿತ ಆಗಿವೆ. ಈ ಪಾತ್ರಗಳ ವರ್ತನೆಗಳನ್ನು ಕೌಟುಂಬಿಕ ಜವಾಬ್ದಾರಿ, ಲೈಂಗಿಕತೆ, ಗಂಡು–ಹೆಣ್ಣಿನ ಸಂಬಂಧಗಳು, ತಾಯ್ತನ ಇವುಗಳ ನೆಲೆಯಲ್ಲಿ ಚರ್ಚೆಗೆ ಒಳಪಡಿಸಬಹುದು.

'ಮಾರಿಕೊಂಡವರು' ಕತೆಯಲ್ಲಿ ಲಕ್ಶ್ಮಿಗೆ ಬೀರನ ಕುಡಿತ, ಅವನ ಅತಿಯಾದ ತಿನ್ನುವಿಕೆ ಮತ್ತು ಲೈಂಗಿಕ ಆಕ್ರಮಣದಂತಹ ವರ್ತನೆಗಳು ಅಸಹ್ಯ ಹುಟ್ಟಿಸುತ್ತವೆ. ಗೌಡನ ಮಗ ಕಿಟ್ಟಪ್ಪನೊಂದಿಗೆ ಆಕೆಗೆ ಲೈಂಗಿಕ ಸಂಬಂಧ ಏರ್ಪಡುತ್ತದೆ; ಇದರ ಅರಿವಿದ್ದ ಬೀರ ನಿಧಾನವಾಗಿ ಅವಳ ಸಾಂಗತ್ಯದಿಂದ ದೂರ ಉಳಿಯಲು ಯತ್ನಿಸುತ್ತಾನೆ. ಕುಡಿದ ಮತ್ತಿನಲ್ಲಿ, ಅರೆಪ್ರಜ್ಞಾವಸ್ತೆಯಲ್ಲಿ ಇದ್ದಾಗ ಹೆಂಡತಿಯ ದಾಂಪತ್ಯದಾಚೆಗಿನ ಲೈಂಗಿಕ ಸಂಬಂಧವನ್ನು ಬೀರ ತನಗು ಅದು ಗೊತ್ತಿದೆ ಎಂಬಂತೆ ಮಾತಾಡಿದಾಗ ಲಕ್ಶ್ಮಿ ತೀವ್ರವಾಗಿ ತಳಮಳಿಸುತ್ತಾಳೆ. ಆ ತೀವ್ರ ತಳಮಳ, ಆತಂಕ ವ್ಯಕ್ತವಾಗುವುದು ತನ್ನ ಗಂಡನಿಗೆ ವಿಶಯ ತಿಳಿದಿದೆ, ಅವನಿಂದ ಮತ್ತೇನು ಅನಾಹುತ ಕಾದಿದೆಯೋ ಎಂಬ ವರ್ತನೆಯಾಗಿ ಮಾತ್ರ. ಲಕ್ಶ್ಮಿ ಮತ್ತು ಕಿಟ್ಟಪ್ಪನ ಮೊದಲ ಭೇಟಿಯಲ್ಲಿ ಕಿಟ್ಟಪ್ಪ ತನ್ನನ್ನೆ ನೋಡುತ್ತಿರಬಹುದೇ ಎಂಬ ಕುತೂಹಲದ ಭಾವಕ್ಕೆ ಕತೆಯಲ್ಲಿ ಅವಕಾಶ ಇದೆ. ಅವನು ಹೋದ ನಂತರವೂ ಆಕೆ ಹಾಗೆಯೇ ಭಾವಿಸಿಕೊಂಡಿರುವಂತೆ ಕಥನವು ತಿಳಿಸುತ್ತದೆ. ಆದರೆ ಎರಡು ಗಂಡು ವ್ಯಕ್ತಿತ್ವಗಳಿಂದ ಮಾನಸಿಕ ಹಾಗೂ ದೈಹಿಕ ಶೋಶಣೆಗೆ ಒಳಗಾಗುವ ಲಕ್ಶ್ಮಿಯ ಆಂತರ್ಯ ಕತೆಯಲ್ಲಿ ಸ್ಪಶ್ಟವಾಗಿ ತೆರೆದುಕೊಳ್ಳುವುದಿಲ್ಲ. ಈ ಕತೆಯಲ್ಲಿ ಗಂಡ ಹೆಂಡತಿ ಇಬ್ಬರೂ ತಮ್ಮ ಅಸ್ತಿತ್ವವನ್ನೇ ಮೇಲ್ವರ್ಗದವರಿಗೆ ಮಾರಿಕೊಂಡಂತೆ ಚಿತ್ರಿತಗೊಂಡಿದ್ದಾರೆ. ಅದಕ್ಕೆ ಬಹು ಮುಖ್ಯ ಕಾರಣ ಅವರ ಬಡತನದಿಂದ ಉಂಟಾಗಿರುವ ಅಸಹಾಯಕತೆ.

ಗ್ರಸ್ತರು ಕತೆಯಲ್ಲಿ ಶೋಶಣೆಗೆ ಒಳಗಾಗಿದ್ದರೂ ತಾವು ಶೋಶಿತರಲ್ಲ ಎಂಬ ಭಾವನೆ ನಾಯಕನ ತಾಯಿಯಲ್ಲಿದ್ದು; ತನ್ನ ಮಗನನ್ನು ಅದೇ ವ್ಯವಸ್ಥೆಗೆ ಒಳಪಡಿಸಲು ಆಕೆ ಶ್ರಮಿಸುತ್ತಾಳೆ. ಅವಳ ಪ್ರತಿಭಟನೆ ಇರುವುದು ತಮ್ಮನ್ನು ಶೋಶಿಸುವ ಗೌಡನ

ವಿರುದ್ಧವಲ್ಲ, ವ್ಯವಸ್ಥೆಯನ್ನು ಪ್ರತಿಭಟಿಸುವ ತನ್ನ ಮಗನ ವಿರುದ್ಧ. ಧರ್ಮ ಕರ್ಮ, ಮಠ ಮಾನ್ಯಗಳೆಲ್ಲ ಸೋಗು ಎಂಬ ಮಗನ ವೈಚಾರಿಕ ಮನೋಭಾವವನ್ನು ನಿಶ್ಚೂರವಾಗಿ ಕಾಣುವ ಆಕೆಗೆ ಊರಿನ ಗೌಡ ದೇವರವಂತಹವನು. 'ಈಗ್ಲೆ ಹೋಗಿ ತಪ್ಪಾಯ್ತು ಅಂತ ಕೇಳ್ಕೊ. ದೇವ್ರಂಥವರತ್ರ ನಿಂದು ನಿಷ್ಠೂರ. ಅಷ್ಟಕ್ಕು ನಾ ಮಾಡ್ದ ಕರ್ಮ. ಈಗ್ಲೇ ಹೋಗು.' (ದ್ಯಾ.ಒ. ಪು:13) ಇಲ್ಲಿ ನಾಯಕನ ತಾಯಿಗೆ ಕೆಲಸ ಬಿಟ್ಟು ಬಂದ ಮಗನಲ್ಲಿ ತಪ್ಪು ಕಾಣುತ್ತಿದೆಯೇ ವಿನಃ ಗೌಡನಲ್ಲಿ ಅಲ್ಲ. ಗೌಡನನ್ನು ಎದುರು ಹಾಕಿಕೊಂಡರೆ ತಮಗೆ ಅಸ್ತಿತ್ವವೆ ಇಲ್ಲ, ಬದುಕು ಕಳೆದುಕೊಳ್ಳುತ್ತೇವೆ ಎಂಬ ತೀವ್ರವಾದ ಆತಂಕ ಆಕೆಯ ವರ್ತನೆಯಲ್ಲಿ ಕಾಣುತ್ತದೆ.

ಈಗಾಗಲೇ ಹಿಂದಿನ ವ್ಯವಸ್ಥೆಯಲ್ಲಿ ರೂಪಪಡೆದ, ತನ್ನ ವ್ಯಕ್ತಿತ್ವವನ್ನೆ ನಾಶ ಮಾಡಿಕೊಳ್ಳುವ ಸ್ಥಿತಿ ಆಕೆಯಲ್ಲಿದೆ. ಆಕೆ ತೋರುವ ಹಠದ ಹಿಂದೆ ತನ್ನ ಅಸ್ತಿತ್ವದೊಂದಿಗೆ ಬೆರೆತಿರುವ ನಂಬಿಕೆಗಳು ಸಡಿಲಗೊಳ್ಳುವ ಆತಂಕವೂ ಇದೆ. ಮಗನು ಧರ್ಮ, ಕರ್ಮ, ಗೌಡ ಈ ವ್ಯವಸ್ಥೆಯಿಂದ ದೂರ ಸರಿಯಲು ಯತ್ನಿಸಿದಷ್ಟು ಅವನ ತಾಯಿ ಮತ್ತೆ ಅದೇ ವ್ಯವಸ್ಥೆಯೊಂದಿಗೆ ತನ್ನ ಮಗನನ್ನು ಬಂಧಿಸಲು ನೋಡುತ್ತಾಳೆ. ಬದಲಾವಣೆಗೆ ಹಿರಿಯ ಪೀಳಿಗೆ ಒಗ್ಗದೆ ಇರುವ ಮತ್ತು ಕಿರಿಯ ಪೀಳಿಗೆ ಬದಲಾವಣೆಗೆ ತುಡಿಯುವ ಸ್ಥಿತಿ ಇಲ್ಲಿ ವ್ಯಕ್ತವಾಗಿದೆ.

ಇಲ್ಲಿ ತಾಯಿ ಕೇವಲ ವ್ಯಕ್ತಿತ್ವದ ಪ್ರತೀಕವಲ್ಲ, ಬದಲಿಗೆ ಅವಳು ಸಂಪ್ರದಾಯದ ಪ್ರತೀಕವೂ ಹೌದು. 'ಗೆದ್ದಲು ತಿನ್ನುತ್ತ ನಿಂತ ಹಟ್ಟಿಯ ಥರ ಅವ್ವ ತೋರಿದಳು' (ದ್ಯಾ.ಒ. ಪು:9) ಇಲ್ಲಿ ಜಡ್ಡು ಎನ್ನುವುದು ದೇಹಕ್ಕಲ್ಲ; ಬುದ್ದಿ ಮತ್ತು ಆಲೋಚನೆಗೆ ಹಿಡಿದಿರುವಂತಹದ್ದು. ಲಕ್ವ ಹೊಡೆದು ಹಾಸಿಗೆ ಹಿಡಿದಿದ್ದ ತಾಯಿ ಊರ ತುಂಬ ಓಡಾಡುವಂತೆ ನಾಯಕ ಕಲ್ಪಿಸಿಕೊಳ್ಳುವಲ್ಲಿ ಜಡತ್ವಕ್ಕೆ ಚಲನೆ ಬಂದ ಸಂಕೇತವಿದೆ. ಇಲ್ಲಿ ಅನಾರೋಗ್ಯದ ಸ್ಥಿತಿಯಲ್ಲಿದ್ದರೂ ಮನೆಯ ಸಂಪೂರ್ಣ ಜವಾಬ್ದಾರಿ ಹೊತ್ತು; ಸೋರುವ ಮನೆಯನ್ನು ದುರಸ್ತಿ ಪಡಿಸದಿರುವ ಮಗನನ್ನು ಆಕೆ ಪ್ರಶ್ನಿಸುತ್ತಾಳೆ. ಆ ಮೂಲಕ ಆಕೆಯ ವರ್ತನೆಯಲ್ಲಿ ಅಧಿಕಾರ ಮತ್ತು ಜವಾಬ್ದಾರಿಯ ಪ್ರಜ್ಞೆ ಪ್ರಟಕವಾಗಿದೆ. ದಲಿತ ಕುಟುಂಬಗಳಲ್ಲಿ ಮನೆಯನ್ನು ಮುನ್ನಡೆಸುವ ಜವಾಬ್ದಾರಿ ಬಹುಪಾಲು ಹೆಣ್ಣುಮಕ್ಕಳದ್ದೇ ಆಗಿರುತ್ತದೆ ಎಂಬುದಕ್ಕೆ ಈ ತಾಯಿ ಪಾತ್ರದ ವರ್ತನೆ ಒಂದು ನಿದರ್ಶನವಾಗಿದೆ.

ದೇವನೂರರ ಕತೆಯಲ್ಲಿ ಪ್ರೇಮ ಒಂದು ಇಮೋಶನ್ – ಭಾವುಕತೆ ಆಗಿ ಕಂಡುಬರುತ್ತದೆ. ಗ್ರಸ್ತರು ಕತೆಯ ನಾಯಕ ತನ್ನ ಏಕಾಕಿತನ, ದ್ವಂದ್ವ, ಹತಾಶೆಗಳನ್ನು ಶಮನ ಮಾಡಿಕೊಳ್ಳಲು ಅಂತರಂಗದಲ್ಲಿ ಪ್ರೇಮಿಯ ಸಾಂಗತ್ಯವನ್ನು ಬಯಸುತ್ತಾನೆ. 'ನನಗೆ ದುಃಖವಾದಾಗಲೆಲ್ಲ ನೀನು ಬೇಕು ಎನಿಸುತ್ತೆ ಎಂದು ಹೇಳುವುದು ಹುಚ್ಚಾಗಿ ತೋರಿತು.' ಹೆಣ್ಣಿನ ಆಂತರ್ಯದ ಸಾಂಗತ್ಯ ಗಂಡಿನ ಮಾನಸಿಕ ಯಾತನೆಗೆ ಮದ್ದಿನಂತೆ ಕೆಲಸ ಮಾಡುತ್ತದೆ. ಇಲ್ಲಿ ಅವನಿಗೆ ತನ್ನ ಸ್ವಭಾವ ಕುರಿತು ಎಚ್ಚರವೂ ಇದೆ. ಹಾಗೂ ಜಾತಿಯ ಕಾರಣಕ್ಕೆ ಪ್ರೀತಿಸಿದ ಹುಡುಗಿ ಮದುವೆಯನ್ನು ನಿರಾಕರಿಸಿದಾಗ ಪ್ರಶ್ನಿಸದೆ ಒಪ್ಪುವ ತ್ಯಾಗ ಗುಣವೂ ಇದೆ. ಅಂತರಂಗದಲ್ಲಿ ಆಕೆ ಅವ್ವ, ಅಕ್ಕ, ತಂಗಿ, ಮಗು, ಗೆಳತಿ, ಹೆಂಡತಿ ಎಲ್ಲಾ ಎಂಬ ಭಾವನೆ ಬಂದರೂ ಆಕೆ ಏನೆಂದುಕೊಳ್ಳಬಹುದು ಎನ್ನುವ ಆತ್ಮವಿಶ್ಲೇಶಣೆಯೂ ಇಲ್ಲಿ ಕಂಡುಬರುತ್ತದೆ. ತನ್ನ ಅಂತರಂಗ ಕನಲಿದಾಗ ಹೆಣ್ಣಿನ ಯಾವುದೇ ರೂಪದ ಸಾಂಗತ್ಯ ಚಿಕತ್ಸಕ ಶಕ್ತಿಯಾಗಿ ಕೆಲಸ ಮಾಡುತ್ತದೆ ಎಂಬ ತತ್ವ ಇಲ್ಲಿ ವ್ಯಕ್ತವಾಗಿದೆ. ಒಂದು ದಹನದ ಕತೆಯ ನಾಯಕಿ ದಲಿತ ಯುವಕನಿಗೆ ಗರ್ಭಿಣಿಯಾಗಿದ್ದು, ಸಮಾಜ ಮತ್ತು ಮನೆಯವರ ಒತ್ತಡಕ್ಕೆ ಮಣಿದು ತನ್ನದೇ ಜಾತಿಯಲ್ಲಿ ಒಬ್ಬನನ್ನು ವರಿಸುತ್ತಾಳೆ. ಮದುವೆಯ ದಿನ ತನ್ನ ಪ್ರೇಮಿ ಬಂದು ಆಕೆಯನ್ನು ತನ್ನೊಟ್ಟಿಗೆ ಕರೆದಾಗ ಆಕೆ ಕುಟುಂಬ, ಸಮಾಜ, ಜಾತಿ ಎಲ್ಲವನ್ನು ಬದಿಗೊತ್ತಿ ತನ್ನ ಬದುಕಿನ ದಾರಿಯನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ. ಪ್ರೇಮ ಮತ್ತು ಮದುವೆಯ ವಿಚಾರದಲ್ಲಿ ಸಮಾಜಕ್ಕೆ ಹೆದರಿ ಹಿಂದೆ ಸರಿಯುವ ಹೆಣ್ಣಿನ ಚಿತ್ರಣವನ್ನು ಕಟ್ಟಿಕೊಡುತ್ತಲೇ, ಅದನ್ನು ಮೆಟ್ಟಿನಿಂತು ಬದುಕು ಹಸನಾಗಿಸಿಕೊಂಡ ಹೆಣ್ಣಿನ ಚಿತ್ರಣವನ್ನು ದೇವನೂರರ ಕತೆಗಳಲ್ಲಿ ಕಾಣಬಹುದು.

ಹೊಸ ತಲೆಮಾರು ಪ್ರಶ್ನಿಸುವುದು ಅಪರಾಧ ಎನ್ನುವ ಭಾವನೆ ಹಳೆ ತಲೆಮಾರಿನಲ್ಲಿ ಇರುವುದು; ದಲಿತರ ಬಡತನ, ಅಸಹಾಯಕತೆಯೆ ಮೇಲ್ವರ್ಗದವರ ಅಸ್ತ್ರ ಎನ್ನುವಂತೆ ಈ ಗ್ರಸ್ತರು ಮತ್ತು ಮಾರಿಕೊಂಡವರು ಕತೆಯಲ್ಲಿ ಹೇಳಲಾಗಿದೆ. ಕಥಾ ನಾಯಕ ಅಕ್ಕರ ಕಲಿತವನು, ಮಠ, ಧರ್ಮ, ಸ್ವಾಮೀಜಿ ಇದೆಲ್ಲವೂ ಸೋಗು ಎನ್ನುವ ಅಭಿಪ್ರಾಯ ಹೊತ್ತವನು. ಅವನ ಈ ಪ್ರಶ್ನಿಸುವ ಮನೋಭಾವ ಮತ್ತು ಅಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯತೆಯಿಂದ ಅವನು ಬಿಡಿಸಿಕೊಂಡು ಬಂದ ಸ್ಥಿತಿಯನ್ನು ತಪ್ಪು ಎಂದು ಭಾವಿಸುವ ಮನಸ್ಥಿತಿಗಳು ಇಲ್ಲಿ ಇರುವುದೆ ಮೇಲ್ವರ್ಗದವರಿಗೆ ವರ.

ಗ್ರಸ್ತರು ಕತೆಯ ತಾಯಿ ಪಾತ್ರ ವ್ಯವಸ್ಥೆಯನ್ನು ಒಪ್ಪಿಕೊಂಡಂತೆ ಚಿತ್ರಣಗೊಂಡಿದ್ದರೆ, ಸಾಕವ್ವ ಇರುವ ವ್ಯವಸ್ಥೆಗೆ ಪ್ರತಿರೋಧ ಒಡ್ಡುವ ಛಲಗಾತಿ. ಕಥನದುದ್ದಕ್ಕೂ ಮನೆಯ ಹಿರಿತನ, ಒಡೆತನ ಎರಡನ್ನು ಸಾಕವ್ವ ಭದ್ರವಾಗಿ ಕಾಪಿಟ್ಟುಕೊಂಡವಳು. ಒಡಲಾಳದಲ್ಲಿ ಕಳೆದು ಹೋದ ಹುಂಜವನ್ನು ಹುಡುಕುವ ಮೂಲಕ ಸಾಕವ್ವನ ಕಥನ ಬಿಚ್ಚಿಕೊಳ್ಳುತ್ತದೆ. ಮನೆ ಮಂದಿಯನ್ನು ಒಂದು ಹಂತಕ್ಕೆ ತಂದ ಸಾಕವ್ವ ತನ್ನ ಹುಂಜ, ಕೋಳಿಗಳನ್ನು ಮಕ್ಕಳಷ್ಟೆ ಪ್ರೀತಿಯಿಂದ ಕಾಣುವವಳು. ದೇವರಿಗೆ ಬಿಟ್ಟ ಹುಂಜ ಎಲ್ಲಿ ಹೋಗುತ್ತದೆ; ಬಂದೆ ಬರುತ್ತದೆ. ಇಲ್ಲದಿದ್ದರೆ ಆ ದೇವರನ್ನು ಸುಮ್ಮನೆ ಬಿಟ್ಟೇನೆಯೇ ಎಂದು ದೇವರನ್ನು ಪ್ರಶ್ನಿಸುವ, ಸವಾಲು ಹಾಕುವ ಗಟ್ಟಿಗಿತ್ತಿ ಆಕೆ. ಹಾಗೆಯೇ ಪೊಲೀಸಿನವರು ಮನೆ ಜಪ್ತಿ ಮುಗಿಸಿ ಹೊರಟಾಗ ತನ್ನ ಹುಂಜ ಹುಡುಕಿಕೊಡುವಂತೆ ಮತ್ತೊಂದು ಹುಂಜವನ್ನು ಅವಳು ನೀಡುವಲ್ಲಿ ಅವಳಲ್ಲಿರುವ ಮುಗ್ಧತನವೂ ವ್ಯಕ್ತವಾಗುತ್ತದೆ. ಇದೂ ಕೂಡ ಶೋಶಣೆಯೆ.

ಕೋಳಿ ಹುಡುಕಿ ಹೊರಟ ಸಾಕವ್ವ ಹೆದರಿಕೊಂಡಿದ್ದ ತನ್ನ ಮೊಮ್ಮಗನಿಗೆ ಧೈರ್ಯ ಹೇಳುವ ಸಂದರ್ಭದಲ್ಲಿ ಅವಳ ಬದುಕಿನ ಬವಣೆಯೆ ಅನಾವರಣ ಆಗುತ್ತದೆ. 'ನಾನು ನರಲೋಕದಲ್ಲಿ ಕಂಡಂತಹ ಕಷ್ಟಕ್ಕೆ ಅವನು ಕೊಡುವ ಶಿಕ್ಷೆ ಎಂತದ್ದೂ ಅಲ್ಲ.' (ದ್ಯಾ.ಒ. ಪು: 74) ಭೂಲೋಕದಲ್ಲಿ ಆಕೆ ಪಟ್ಟಪಾಡಿಗೆ ಯಮ ನೀಡುವ ಶಿಕ್ಷೆ ಏನೇನೂ ಅಲ್ಲ ಎಂಬುದಾಗಿ ಮೊಮ್ಮಗ ಶಿವುಗೆ ಆಕೆ ತಿಳಿಹೇಳುತ್ತಾಳೆ. ಇಲ್ಲಿ ಕಶ್ಟಗಳನ್ನು ತಾಳಿಕೊಳ್ಳುವ ಮತ್ತು ನೀಗಿಕೊಳ್ಳುವ ಎರಡೂ ಪ್ರಶ್ನೆಗಳು ಅವರ ವರ್ತನೆಗಳನ್ನು ರೂಪಿಸುತ್ತವೆ.

ಯಮ ಸಾಕವ್ವನ ಧೈರ್ಯ ಮೆಚ್ಚಿ ವರ ಕೊಡುವುದಾದರೆ ಆಕೆ ಕೇಳುವುದು 'ನನ್ನ ಮೊಮ್ಮೂಸು ನರಲೋಕದಲ್ಲಿ ರಾಜ್‌ಭಾರ ಮಾಡುವಂಥ ವರ ಕೊಡು' (ದ್ಯಾ.ಒ. ಪು: 75) ಎಂದು. ತಮ್ಮ ಸ್ಥಿತಿಯನ್ನು ಮೀರುವ ಯತ್ನ, ಹಾಗೆ ಮುಂದಿನ ಪೀಳಿಗೆಗೆ ತಮ್ಮ ಬವಣೆ ಬೇಡ ಎನ್ನುವ ಆಶಯ ಆಕೆಯಲ್ಲಿದ್ದು; ತನ್ನ ಮೊಮ್ಮಗನಲ್ಲಿ ಆತ್ಮವಿಶ್ವಾಸ ತುಂಬುವ ನಡೆ ಅವಳ ಈ ವರ್ತನೆಯಲ್ಲಿ ಕಂಡುಬರುತ್ತದೆ. ಈ ಎಲ್ಲದರ ನಡುವೆ ಸಾಕವ್ವನ ಆ ಮೂರ್ತರೂಪವು ಮಾಯವಾಗಿ ಶಿವುವಿನ ಕಲ್ಪನೆಯಲ್ಲಿ ಪುಟ್ಟಗೌರಿ ಚಿಕ್ಕಿಯೆ ದೇವಕನ್ನಿಕೆ ಆಗಿ ಮೂಡುತ್ತಾಳೆ.

ಕಳುವಾದ ಹುಂಜದ ಬಗೆಗೆ ಇಡಿ ಮನೆಯಲ್ಲಿ ಸಾಕವ್ವನಿಗೆ ಮಾತ್ರ ಚಡಪಡಿಕೆ. ಹುಂಜದ ಬಗೆಗೆ ತನ್ನ ಮಕ್ಕಳು, ಸೊಸೆಯಂದಿರಲ್ಲಿ ದುಃಖ ಇಲ್ಲದ್ದನ್ನು ಕಂಡು ಅವಳು ಸಿಡಿಮಿಡಿಗೊಳ್ಳುತ್ತಾಳೆ. ಉಳಿದ ಕೋಳಿಗಳಲ್ಲಿ ಜೊತೆಗಾರನನ್ನು ಕಳೆದುಕೊಂಡ ಕಳವಳ ಇಲ್ಲದ್ದನ್ನು ನೋಡಿ ಆಕೆಗೆ ಅವುಗಳನ್ನು ಎತ್ತಿ ಕುಕ್ಕಬೇಕು ಎಂದನಿಸುತ್ತದೆ. ಊರಾಚೆಯ ತಿಪ್ಪೆಗಳಲ್ಲಿ, ತನ್ನ ಸವತಿ ಮನೆಯ ತಿಪ್ಪೆಯಲ್ಲಿ ಹುಂಜದ ಪುಕ್ಕಗಳು ಸಿಗಬಹುದೇನೊ ಎಂದು ಕೆದಕಾಡುವ ಅವಳ ಮನಸ್ಥಿತಿ, ಮೊಮ್ಮೊಗ ಶಿವುವನ್ನು ಕರೆದುಕೊಂಡು ಲೋಟ ಹಿಡಿದು ಮಸಾಲೆ ಗಮದಿಂದ ತನ್ನ ಹುಂಜನದೆ ಸಾರಿರಬೇಕು ಎಂದು ಆಕೆ ಪತ್ತೆ ಹಚ್ಚಲು ನಡೆಸುವ ಆ ಇಡೀ ಪ್ರಕ್ರಿಯೆಯಲ್ಲಿ ಜಾತ್ರೆಯಲ್ಲಿ ತನ್ನ ಕಳೆದುಹೋದ ಮಗುವನ್ನು ಹುಡುಕುವ ತಾಯಿಯ ವರ್ತನೆ ಇದೆ. ಆ ಹುಂಜ ಜೀವಮಾತ್ರ ಆಗಿರದೆ, ಅವಳ ಬದುಕಿನ ಭಾಗವೂ ಆಗಿರುತ್ತದೆ.

ಮಗ ತಾನು ಹಕ್ಕುದಾರ ಎಂದು ಆಸ್ತಿ ಕೇಳಿದಾಗ 'ಕೇಳವುನ್ನ ನೀ ಯಾರ?, ಅಕ್ಕಾರನಾ ನೀನು? ಹುಟ್ಟಿದ್ದು ಹೆಣ್ಣೆಂಗ್ಸಾದರೂ ಗಂಡ್ಸ ಮೀರ್ಸಿ ಕಚ್ಚಕಟ್ಟಂಡು ಗೇದು ಸಂಪಾದ್ಸಿವ್ನಿ ಕನೊ ಭೂಪತಿ. ಆಸ್ತಿ ನನ್ನ ಸ್ವಾರ್ಜಿತ...' (ದ್ಯಾ.ಒ. ಪು: 64) ಸಾಕವ್ವನ ಈ

ಜೋರುದನಿ ಮಗನ ದನಿಯನ್ನೆ ಅಡಗಿಸುತ್ತದೆ. ಕಾನೂನಿನ ಅರಿವು ಆಕೆಗೆ ಇದೆ. ತನ್ನೆಲ್ಲ ಆಸ್ತಿಯನ್ನು ಮೊಮ್ಮಗ ಶಿವಗೆ ಕೊಡಬೇಕು ಎಂದು ಆಕೆಯೆ ನಿರ್ಧರಿಸುತ್ತಾಳೆ. 'ಅಲ್ಲೋ ಮನತಾನಸ್ತ ನನ್ ಮಗನೆ... ನಿನ್ನ ಪಾಲ್ಗೆ ಹಂಚಾಕ್ಸದೆ ಹುಲ್ಲಾಕ್ಸಿದ್ದೀಯಲ್ಲೊ... ಹೊಟ್ಟಗ ತಣ್ಣೀರ್ ಬಟ್ಟೆ ಕಟ್ಕಂಡು ತೊಟ್ಟಿ ಹಟ್ಟಿ ಕಟ್ಸಿದ್ನೆಲ್ಲೊ... ನೋಡ್ದವರು ಮೂಗ್ಗೆ ಬೆರಳಿಟ್ಟು...' (ದ್ಯಾ.ಒ. ಪು: 65) ಹುಂಜ ಕಳೆದುಕೊಂಡು ದಿಕ್ಕೆಟ್ಟಿದ್ದರೂ ಸಾಕವ್ವನ ಈ ಮಾತುಗಳಲ್ಲಿ ಕುಟುಂಬ ಮತ್ತು ಮನೆ ಬಗೆಗೆ ಆಕೆಗಿದ್ದ ಜವಾಬ್ದಾರಿ ಕಾಣುತ್ತದೆ. ತಾನು ಕಶ್ಟಪಟ್ಟು ದುಡಿದು ಸಂಪಾದಿಸಿ, ಒಂದು ಹಂತಕ್ಕೆ ತಂದು ನಿಲ್ಲಿಸಿದ ಮನೆಯನ್ನು ಕಾಪಾಡಿಕೊಳ್ಳಲಾಗದೆ, ಮೊದಲಿನ ರೂಪವನ್ನೆ ಕೆಡಿಸಿಟ್ಟ ಮಕ್ಕಳ ಬಗೆಗೆ, ಹಟ್ಟಿ ಬಗೆಗೆ ಆಕೆಗೆ ಬೇಸರ ಇದೆ. ಇಲ್ಲಿ ಸಾಕವ್ವನ ವರ್ತನೆ ನಿಜಕ್ಕು ಆಕೆಯ ಹೆಸರಿಗೆ ಅನ್ವರ್ಥವಾದ ವರ್ತನೆ. ಇಡೀ ಕುಟುಂಬವನ್ನು ಸಲಹುವ ವರ್ತನೆ.

ಸಾಕವ್ವನ ಆಸ್ತಿ ಅವಳ ಸ್ವಯಾರ್ಜಿತವೇ ಆದರೂ, ತನ್ನ ಗಂಡ ಮಕ್ಕಳಿಗು ಅದು ಸೇರಿದ್ದು ಎಂಬ ನಿಲುವಿನವಳು ಚೆಲುವಮ್ಮ. ಮಾತು ಮಾತಿಗು ನನ್ನಾಸ್ತಿ, ನನ್ ಹಟ್ಟಿ ಎಂಬ ಸಾಕವ್ವನ ವ್ಯಕ್ತಿತ್ವವನ್ನು ಚೆಲುವಮ್ಮ ಕೆಣಕುತ್ತಾಳೆ. ತನ್ನದೇ ಆಸ್ತಿಯಲ್ಲಿ ನೀನು ಇರೋದು ಎಂದು ಹೇಳುತ್ತಾ ಸಾಕವ್ವ ಸೊಸೆಯನ್ನು ಕೇರ್ ಮಾಡುವುದಿಲ್ಲ. ಆಸ್ತಿ ವಿಚಾರವಾಗಿ ಜಟಾಪಟಿ ನಡೆಸಿದ ಅತ್ತೆ ಸೊಸೆ ಇಬ್ಬರ ಮಾತುಗಳಲ್ಲಿ ತಮ್‌ತಮ್ಮ ಅಸ್ತಿತ್ವದ ಪ್ರಶ್ನೆ ಪ್ರಬಲವಾಗಿ ಕಂಡುಬರುತ್ತದೆ.

ಸಾಕವ್ವನ ಮನೆಯಲ್ಲಿ ಆಸ್ತಿ ಸಲುವಾಗಿ ಉಂಟಾಗುವ ಕೌಟುಂಬಿಕ ಕಲಹದಿಂದ ನೊಂದ ಗೌರಮ್ಮ ತಾನು ಆಸ್ತಿಗಾಗಿ ತವರಿಗೆ ಬಂದಿಲ್ಲ ಎಂದು ಸಣ್ಣಯ್ಯನಿಗೆ ಸಕಶ್ಟ ಪಡಿಸುತ್ತಾಳೆ. ಅವ್ವ, ಅಣ್ಣ–ಅತ್ತಿಗೆಯರ ಗಲಾಟೆಯಿಂದ ಬೇಸತ್ತ ಪುಟ್ಟಗೌರಿ ಆ ಮನೆ ಬಿಟ್ಟು ಹೋದರೆ ಸಾಕು ಎಂಬ ಮನಸ್ಥಿತಿಗೆ ತಲುಪುತ್ತಾಳೆ. ಹೊಟ್ಟೆಗಿಲ್ಲದೇ, ಕೆಲಸವಿಲ್ಲದೇ ಕಂಗಾಲಾದ ಇವರುಗಳು ಶಾಂತಿ, ನೆಮ್ಮದಿಗಳನ್ನು ಹುಡುಕುವುದು ಇಲ್ಲಿ ಕಂಡುಬರುತ್ತದೆ.

ಅದೇ ಮನೆಯಲ್ಲಿದ್ದ ಕಾಳಣ್ಣನ ಹೆಂಡತಿ ಎಲ್ಲರೊಂದಿಗೆ ಹೊಂದಿಕೊಂಡು, ಅತ್ತೆಯನ್ನು ಪ್ರೀತಿಯಿಂದ ಕಾಣುವವಳು. ಸ್ವಲ್ಪ ಅನುಕೂಲಸ್ತೆಯಾದ ಚೆಲುವಮ್ಮ ತನ್ನ ಮನೆಯ ಯಾವ ವಸ್ತುವನ್ನು ಇತರರಿಗೆ ಕೊಡದವಳು. ಗೌರಮ್ಮ ದೀಪಕ್ಕೆ ಎಣ್ಣೆ ಕೇಳಿದಾಗ ಕೊಡಲ್ಲ ಎಂದು ಆಕೆ ಹೇಳುವುದಿಲ್ಲ. ಬದಲಿಗೆ, ಶಿವುವನ್ನೆ ತನ್ನ ಕೋಣೆಗೆ ಬಂದು ಓದಲು ಹೇಳುತ್ತಾಳೆ. ಕಾಳಣ್ಣನ ಹೆಂಡತಿ ರಾಗಿ ಹಿಟ್ಟು ಕೇಳಿದಾಗ ಮಾತಿನಲ್ಲಿ ತಾನು ಸತ್ಯವಂತೆ ಎಂದು ಬಿಂಬಿಸುವ ಹಾಗೆ ಇದ್ದಿದ್ದರೆ ಕೊಡದೆ ಇರ್ತಿದ್ನೆ ಎಂದು ಆಣೆ ಪ್ರಮಾಣವನ್ನೆಲ್ಲ ಮಾಡುತ್ತಾಳೆ. ಕೂಲಿ ಕೆಲಸವಿಲ್ಲದೆ ಕೂತ ಗಂಡ, ತಾನು ಹೊರಗೆ ಹೋಗಿ ದುಡಿಯದವಳು. ಕೊಟ್ಟು ನಿಷ್ಕೂರ ಆಗುವುದಕ್ಕಿಂತ ಇರುವ ಸಂಬಂಧವನ್ನು ತೀರ ಕೆಡಿಸಿಕೊಳ್ಳದೆ ನಾಜೂಕಿನಿಂದ ವರ್ತಿಸುವುದು ಆಕೆಯ ಹೆಜ್ಜೆಹೆಜ್ಜೆಯಲ್ಲು ಇದೆ. ಅಲ್ಲದೇ ಒಂದೇ ಮನೆಯಲ್ಲಿರುವ ಈ ಐದು ಮಹಿಳಾ ಪಾತ್ರಗಳು ಒಬ್ಬೊಬ್ಬರೂ ಭಿನ್ನವಾಗಿಯೇ ಇಲ್ಲಿ ಚಿತ್ರಣಗೊಂಡಿದ್ದಾರೆ. ಅಂದರೆ ಆರ್ಥಿಕವಾಗಿ ಎಲ್ಲರೂ ಒಂದೆ ನೆಲೆಯಲ್ಲಿ ಇದ್ದರೂ ಮಾನಸಿಕವಾಗಿ ಹೆಣ್ಣುಗಳು ಒಬ್ಬೊಬ್ಬರೂ ಇಲ್ಲಿ ಅವರ ಆಲೋಚನಾ ನೆಲೆಗಳಲ್ಲಿ ಭಿನ್ನವಾಗಿ ಕಾಣುತ್ತಾರೆ.

ಕೂಲಿ ಕೆಲಸ ಸಿಗದಿದ್ದಾಗ ಗೋಡೆ ಮೇಲೆ ನವಿಲಿನ ಚಿತ್ರ ಬಿಡಿಸಿ ತನ್ನೊಳಗಿನ ಕಲೆಗಾರಿಕೆಗೆ ಪುಟ್ಟಗೌರಿ ಬಣ್ಣ ತುಂಬುತ್ತಾಳೆ. ಬಡತನ, ಅಸಹಾಯಕತೆಯ ನಡುವೆಯೆ ಸೃಜನಶೀಲ ಕಲೆಗಾರಿಕೆಯೊಂದು ಜೀವಂತಿಕೆ ಪಡೆಯುವ ಸಂದರ್ಭ ಇದು. ನಿರಂತರವಾಗಿ ತನ್ನ ಬದುಕಿನೊಂದಿಗೆ ಗುದ್ದಾಡುವ ಸಾಕವ್ವ ಮೊಮ್ಮಗ ಶಿವು ಲೆಕ್ಕ ಮಾಡುವುದನ್ನು ನೋಡಿ ತನ್ನ ಹಳೆ ಬಡ್ಡಿಸಾಲ ಲೆಕ್ಕ ಹಾಕಿಸಲು ಮುಂದಾಗುತ್ತಾಳೆ. ಕಡಲೆಕಾಯಿ ತಿನ್ನುವಾಗ ಕಾಳಣ್ಣ ಮತ್ತು ಸಣ್ಣಯ್ಯನು ನಮ್ಮವ್ವ ಗೌಡನ ಮನೆಯಂತಹ ಮನೆಯನ್ನು ಕಟ್ಟಿದ್ದರೆ ಇನ್ನೇನು ಮಾಡುತ್ತಿದ್ದಳೋ ಎಂದು ಗೇಲಿ ಮಾಡಿದಾಗಲೂ ತನ್ನ ಅಧಿಕಾರ ವಾಣಿಯಿಂದಲೂ, ಹಾಗೆ ತನ್ನ ಕೈಯಲ್ಲಿ ಆದದ್ದು ತಾನು ಮಾಡಿದ್ದೇನೆ ಮುಂದೆ ನೀವುಗಳು ಜವಾಬ್ದಾರಿ ಹೊತ್ತು ಮಾಡಿ ಎಂಬಂತೆಯೂ; 'ನೀವಿದೀರಲಪ ಮೂರುಜನ ಹುಲಿಯಂಗ, ಕಟ್ಟಿಸಿ' ಎನ್ನುತ್ತಾಳೆ. ಗೌಡನ ಕೊಟ್ಟಿಗೆಯಲ್ಲಿ ಒಂದು ಎಮ್ಮೆ ಸತ್ತರೆ ಇಡೀ ಕೇರಿಗೆ

ಒಂದು ಹೊತ್ತಿನ ಊಟ ಆದರೂ ಆಗುತ್ತಿತ್ತು ಎಂದು ಎಲ್ಲರ ಹಸಿವಿನ ಬಗ್ಗೆ ಮಾತನಾಡುತ್ತಾಳೆ. ಸಾಕವ್ವನ ಅಚಲವಾದ ತಾಯ್ತನ, ಸವಾಲುಗಳಿಗೆ ಆಕೆ ಎದುರುಗೊಳ್ಳುವ ರೀತಿಯಲ್ಲಿ ಆಕೆಯ ಪಾತ್ರದ ಅಂತಃಸತ್ವ, ದೃಢತೆ ಎದ್ದು ಕಾಣುತ್ತದೆ.

ತಾಯ್ತನ ಎನ್ನುವುದು ದೇವನೂರು ಕಥನದ ಅಂತಃಶಕ್ತಿ. ಲೈಂಗಿಕತೆ ಮತ್ತು ತಾಯ್ತನ ಎರಡು ಇವರ ಕಥನಗಳಲ್ಲಿ ಒಂದಕ್ಕೊಂದು ಬೆಸೆದುಕೊಂಡಿವೆ. 'ಕುಸುಮಬಾಲೆ'ಯಲ್ಲಿ ಅಕ್ಕಮಹಾದೇವಮ್ಮ, ಕುಸುಮ, ಕೆಂಪಿ, ಈರಿ, ತೂರಮ್ಮ ಇವರೆಲ್ಲರ ಅಸ್ತಿತ್ವಕ್ಕೆ, ಬದುಕಿನ ಹೋರಾಟಕ್ಕೆ ಬಲ ಬರುವುದು ಅವರ ತಾಯ್ತನದಿಂದ. ಅಕ್ಕಮಹಾದೇವಮ್ಮ ಗಂಡ ಸತ್ತ ಹನ್ನೆರಡನೆ ತಿಂಗಳಿಗೆ ಮಗ ಯಾಡನಿಗೆ ಜನ್ಮ ನೀಡುತ್ತಾಳೆ. ಆರು ವರ್ಷದ ನಂತರ ಆ ಚಿಕ್ಕಮಗುವನ್ನು ಕರೆದುಕೊಂಡು ಗಂಡನ ಮನೆಗೆ ಪಾಲಿಗೆ ಬಂದವಳು ಭದ್ರವಾಗಿ ನೆಲೆವೂರುತ್ತಾಳೆ. ಅದಕ್ಕೆ ಆಕೆಗೆ ನೆರವಾಗಿದ್ದು ಅವಳಲಿದ್ದ ಛಲ ಹಾಗೂ ಅವಳ ತಾಯ್ತನ. ಅವಳ ತಾಯ್ತನವನ್ನು ಪ್ರಶ್ನಿಸಿದ ಭಾವನಿಗೆ ಎಲ್ಲಿ ಬೇಕಾದರೂ ಆಣೆ, ಪ್ರಮಾಣ ಮಾಡುತ್ತೇನೆ. ತಾನು ಸತ್ಯವಂತೆ ಎಂದು ಸಾಧಿಸುತ್ತಾ ಅಲ್ಲೆ ನೆಲೆ ನಿಲ್ಲುತ್ತಾಳೆ.

ದಾಂಪತ್ಯದಾಚೆಗಿನ ಲೈಂಗಿಕ ಸಂಬಂಧವನ್ನು ಹೊಂದಿದ್ದ ಕೆಂಪಿಯ ನಡೆಯನ್ನು ತಾಯಿ ತೂರಮ್ಮ ವಿರೋಧಿಸುತ್ತಾಳೆ. 'ನಾ ಸತ್ತಾಗ ಸೊರ್ಗಕ್ಕ ಸೇರ್ಕಳ್ಳಿ ನಂ ಅವ್ವ ಅಂತ ಹಿಂಡಕೂಳಾಕಾಕ ಒಂದು ಗಂಡ್ಗೂಸು ಆಗೋದು ಬ್ಯಾಡ. ಬೇಕಾರ ನಂಗ ಬೆನ್ನುಜ್ಜಿ ಕೊಡಾಕ ಅಂತ ಒಂದು ಹೆಣ್ಣುಗೂಸು ಅಂತಾರು ಆಗದು ಬ್ಯಾಡವವ್ವ.' (ಕು.ಪು: 18) ಆಕೆಗೆ ತಾನು ಅವ್ವ ಎಂದು ಕರೆಸಿಕೊಳ್ಳಲು ಒಂದು ಮಗು ಬೇಕಿದೆ. ಯಾವುದನ್ನು ಅನೈತಿಕ, ಅಪರಾಧ ಎಂದು ಭಾವಿಸಲಾಗುತ್ತದೊ ಅದನ್ನೆ ಇಲ್ಲಿ ನೈತಿಕ ಎಂದು ಸ್ಥಾಪಿಸುವ ವರ್ತನೆ ಕೆಂಪಿಯ ಮೂಲಕ ವ್ಯಕ್ತಗೊಂಡಿದೆ. ತಾನು ಮಾಡಿದ್ದು ಸರಿ ಎಂಬ ಮನೋಭಾವ ಇಲ್ಲಿ ಬಲವಾಗಿ ಕಂಡುಬರುತ್ತದೆ. ದಾಂಪತ್ಯನಿಷ್ಠೆ ಮೀರಿದ ಕೆಂಪಿಯನ್ನು ಪ್ರಶ್ನಿಸಿದ ತೂರಮ್ಮ, ಮಗಳಲ್ಲಿರುವ ತಾಯ್ತನದ ಅಪೇಕ್ಷೆಗೆ ಕಟ್ಟುಬಿದ್ದು ಅವಳ ನಿಲುವನ್ನು ಒಪ್ಪಿಕೊಳ್ಳುವ ಸ್ಥಿತಿಗೆ ತಲುಪುತ್ತಾಳೆ. ಅಸಮರ್ಥನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟು ಘೋರ ಅನ್ಯಾಯ ಆಯ್ತು ಎಂದು ತನ್ನನ್ನೇ ಆಕೆ ಹಳಿದುಕೊಳ್ಳುತ್ತಾಳೆ. ಕೆಂಪಿಯ

'ನನ್ ಕಂದನ್ಗ ಹುಟ್ಟೋ ಕೂಸ ಮುರೀತಾ ಇರೋ ಅದು ಈ ಸಲ ಯಾನಾರೂ ಬಂದುದೇ ಉಂಟಾದ್ರೇ ಈ ನನ್ ಹಳ ಚಡಾವು ತಕ್ಕಂಡೂ ಅದರಲ್ಲೆ ಅದ್ನೀಗ ಇಸ್ಕೂ ಪಾಲು ಮಾಡಿ ತಿಂತೀನಿ.. ತಿಂತೀನೀ' (ಕು.ಪು" 19) ತನ್ನ ಮಗಳ ತಾಯ್ತನದ ಕುರುಹಾಗಿರುವ ಮಗುವಿನ ಅಕಾಲಿಕ ಮರಣವನ್ನು ತಪ್ಪಿಸಲು ವಿಧಿಯೊಂದಿಗೆ ಪೈಪೋಟಿಗೆ ಇಳಿದ ತೂರಮ್ಮ ತನ್ನ ಎರಡು ಕೂಸುಗಳಿಗೆ ಉಸಿರಾಗಿ ನಿಲ್ಲುತ್ತಾಳೆ.

ಕೆಂಪಿಗೆ ಹುಟ್ಟೊ ಮಗುವಿಗೆ ತನ್ನ ಜೀವಕೊಟ್ಟಾದರೂ ಅದಕ್ಕೆ ಆಯಸ್ಸು ನೀಡಬೇಕೆಂಬ ಹಠ ತೂರಮ್ಮನದು. ನಾಗಬೆತ್ತ ಮತ್ತು ಮರುಜೇವಳಿ ಕಡ್ಡಿಯಿಂದ ಮಗುವಿಗೆ ಮೂರು ಸಲ ನೀವಳಿಸುತ್ತಾಳೆ. ಮರುಜೇವಳಿ ಮತ್ತು ನಾಗಬೆತ್ತ ಆಕೆಯ ಪಾಲಿಗೆ ರಕ್ಷಣಾ ಕವಚ. ವಿಧಿಯಮ್ಮ ಮಗುಹುಟ್ಟಿದ ರಾತ್ರಿಗೆ ಅದರ ಹಣೆಬರಹ ಬರೆದ ಮೇಲೆ ಅವಳ ಮಗಳು ?ಬೆಗಡಿ ಬೇತೂರಿಯಾದ ವಿಧಿದೇವಿ' ಎಂಬುವಳು ಮಗುವಿನ ಹಣೆಬರೆಹವನ್ನು ತಿದ್ದಿ ಹೆಚ್ಚುಕಮ್ಮಿ ಮಾಡಿಬಿಟ್ಟಾಳು ಎಂದು ಕಾವಲಿಗೆ ಕೂರುತ್ತಾಳೆ. ತನ್ನ ಮಗಳೂ ಕೆಂಪಿಯಂತೆ, ವಿಧಿದೇವಿ ಮಿಸ್ಟಿಕ್‌ಗಾತಿ. ಆಕೆ ಮಿಸ್ಟೇಕ್ ಮಾಡಿದರೆ ಅದಕ್ಕು ತೂರಮ್ಮನ ಹತ್ತಿರ ಮದ್ದಿದೆ. ತಾನು ಕಾವಲಿಗೆ ಇರುವಾಗ ಯಾವ ಗಾಳಿ–ಗೌರಂಜ ಒಳಗೆ ಬರಲು ಸಾಧ್ಯ! ಎಂಬ ಮಾತುಗಳಲ್ಲಿ ತನ್ನ ಯುಕ್ತಿ ಸಾಮರ್ಥ್ಯದ ಬಗ್ಗೆ ಆಕೆಗಿರುವ ನಂಬಿಕೆ ಪ್ರಕಟವಾಗಿದೆ. ತೂರಮ್ಮನದು ವಿಧಿಯನ್ನು ಗೆಲ್ಲುವ ತಾಯ್ತನದ ಹಠವಾದರೆ, ಸಾಕವ್ವನದು ಬದುಕಿನ ಹಠ.

ತೂರಮ್ಮನ ಓರೆಗಿತ್ತಿ ಮಗಳು ಈರಿ, ಮನುಷ್ಯರೂಪ ಹೊತ್ತು ನಿಂತಿದ್ದ ತನ್ನ ಮಗುವಿಗೆ ಹಾರೈಕೆ ಮಾಡಲು ಹೆಣಗಾಡುವುದು ತನ್ನದೇ ಅಸ್ಥಿತ್ವಕ್ಕಾಗಿ. ಈರಿಯ ಕೆದರಿದ ಕೂದಲು, ಕೋಲಿಗೆ ಬಟ್ಟೆ ಸುತ್ತಿಟ್ಟಂತೆ ಕಾಣುವ ಅವಳ ಕೃಶ ದೇಹ ಎಲ್ಲವು ದಟ್ಟವಾದ ಬಡತನವನ್ನು ಹೊದ್ದುಕೊಂಡಂತೆ ಕಾಣಿಸುತ್ತಿರುತ್ತದೆ. ಇಲ್ಲಿನ ಕೆಂಪಿ, ಈರಿ, ತೂರಮ್ಮ, ಅಕ್ಕಮಹಾದೇವಮ್ಮರು ಆರ್ಥಿಕವಾಗಿ ದುರ್ಬಲರಂತೆ ಕಂಡರೂ, ತಮ್ಮ ತಾಯ್ತನದ ಮೂಲಕ ತಮ್ಮ ಸ್ಥಾನಮಾನವನ್ನು ಭದ್ರಪಡಿಸಿಕೊಳ್ಳಲು ಮುಂದಾಗುತ್ತಾರೆ.

ವಿವಾಹೇತರ ಲೈಂಗಿಕ ಸಂಬಂಧಗಳು ಸಾಮಾನ್ಯವಾಗಿ ಗುಪ್ತವಾಗಿ ನಡೆಯುತ್ತವೆ. ಎಶ್ಟೊ ಸಂದರ್ಭದಲ್ಲಿ ಅವು ಗುಪ್ತವಾಗಿರದೆ ಇತರರಿಗೆ ಸುದ್ದಿ ತಿಳಿದಿರುತ್ತದೆ. ಆದರೂ ಅದಕ್ಕೆ ಒಳಗಾಗುವಂತಹವರು ಇದು ಯಾರಿಗು ಗೊತ್ತಿಲ್ಲ ಎಂದೇ ಭಾವಿಸಿರುತ್ತಾರೆ. ಅಕ್ಕಮಹಾದೇವಮ್ಮನು ಇಲ್ಲಿ ಆ ರೀತಿ ಭಾವಿಸಿದವಳು. ಗಂಡ ಸತ್ತ ಹನ್ನೆರಡನೆ ತಿಂಗಳಿಗೆ ಮಗುವನ್ನು ಹಡೆದಿರುವ ಪ್ರಸಂಗಗಳು ಈ ಭೂಮಿ ಮೇಲೆ ನಡೆದಿದ್ದಾವೆಯೇ? ಎಂದು ಬಸಪ್ಪಸೋಮಿ ಪ್ರಶ್ನಿಸಿದಾಗ 'ನನ್ನೊಳ್ಗ ಸತ್ಯ ಅನ್ನೋದು ಇಲ್ಲದಿದ್ರ ನನ್ ಸತ್ತಿರೋ ಗಂಡ ಬಂದು ಈಗ್ ನನ್ನ ಮುರ್ಕಳ್ಳಿ ಬೇಕಾರ. ಎಲ್‌ಬೇಕಾರ ಬೆಂಕಿಕೆಂಡ್ವ ಅಂಗೈಲಿ ಇಟ್ಕಂಡು ಆಣಬಾಸ ಮಾಡ್ತೀನಿ. ಅಯ್ಯೋ ಸಿವ್ನೆ ನಿನ್ ಹಿಂಡ್ತಿ ಮುಂಡ್ಯಾಗ, ನೋಡ್ತಾ ನೀನು ಸುಮ್ನಿಯ ಇದ್ದೀಯಲ್ಲಪ್ಪಾ..' (ಕು.ಪು: 13–14) ಸತ್ತ ಗಂಡ ಮತ್ತು ದೇವರನ್ನೆ ದೂಶಿಸುತ್ತ ತನ್ನ ನಿಯಮ ಬದ್ಧತೆ, ಲೈಂಗಿಕ ಪತಿನಿಶ್ಠೆಯನ್ನು ಪಾಲಿಸುತ್ತಿದ್ದೇನೆ ಎಂದು ಹೇಳಲು ಒದ್ದಾಡುತ್ತಾಳೆ. ಹೀಗೆ ಹೇಳುವ ಮೂಲಕ ಆಕೆ ತನ್ನ ಅಪರಾಧಿ ಪ್ರಜ್ಞೆಯನ್ನು ಮೀರುವ ಕೆಲಸವನ್ನೂ ಮಾಡುತ್ತಾಳೆ. ಅಕ್ಕಮಹಾದೇವಮ್ಮನ ಈ ರೀತಿಯ ವರ್ತನೆ ಕಾದಂಬರಿಯಲ್ಲಿ ಬೇರೆಬೇರೆ ಸಂದರ್ಭದಲ್ಲಿ ಮತ್ತೆ ಮತ್ತೆ ಪುನರಾವರ್ತನೆಗೊಳ್ಳುತ್ತದೆ.

ಸಮಾಜ ವಿರೋಧಿ, ಕುಟುಂಬ ವಿರೋಧಿ ಮತ್ತು ದಾಂಪತ್ಯ ವಿರೋಧಿ ಕೆಲಸಗಳನ್ನು ಮಾಡಿದಾಗ ತಾನು ಅದನ್ನು ಮಾಡಿಲ್ಲ ಎಂದು ತಮಗೆ ತಾವು ಹೇಳಿಕೊಳ್ಳುವ ಮನುಶ್ಯ ಸ್ವಭಾವ ಇಲ್ಲಿ ಅಕ್ಕಮಹಾದೇವಮ್ಮ ಮತ್ತು ಕೆಂಪಿ ಪಾತ್ರಗಳ ಮೂಲಕ ವ್ಯಕ್ತವಾಗುತ್ತಿದೆ. ಇದು ಮನುಶ್ಯನಲ್ಲಿ ಇರುವಂತಹ ಬೇಸಿಕ್ ಇನ್ಸ್‌ಟಿಂಕ್ಟ್ – ಮೂಲ ವರ್ತನೆ. ತಪ್ಪು ಮಾಡಿರುವ ಅಕ್ಕಮಹಾದೇವಮ್ಮ ಮಾತ್ರ ತಾನು ತಪ್ಪೇ ಮಾಡಿಲ್ಲ ಎಂದು ನಿರಾಕರಿಸುವುದು ಒಂದು ನೆಲೆಯಾದರೆ, ತಾನು ಮಾಡಿದ್ದು ಸರಿ ಎಂದು ಸಮರ್ಥಿಸುವುದು ಒಂದು ನೆಲೆ. ಇದೆರಡು ಪ್ರತಿಕ್ರಿಯೆಗಳು ತಮ್ಮ ವರ್ತನೆಯನ್ನು ಸಮರ್ಥಿಸಿಕೊಳ್ಳುವ ಮತ್ತು ನಿರಾಕರಿಸುವ ಎರಡೂ ಬಗೆಯ ವರ್ತನೆಗಳಾಗಿವೆ. ಪುರುಶಪರ ಲೈಂಗಿಕ ಮೌಲ್ಯಗಳು ಇಲ್ಲಿನ ಹೆಂಗಸರ ವರ್ತನೆಗಳಲ್ಲಿ ಗಾಳಿಗೆ ತೂರಲ್ಪಟ್ಟರೂ ಅದೆ ಹಳೆ ಮೌಲ್ಯಗಳ ಅಡಿಯಲ್ಲೆ ಅವರು ತಮ್ಮ ಅಸ್ತಿತ್ವ ಕಂಡುಕೊಳ್ಳಲು ಹೆಣಗುವುದು ಇಲ್ಲಿನ ವ್ಯಂಗ್ಯವಾಗಿದೆ.

ಸಮಾಜದಲ್ಲಿ ಕೆಲವು ಲೈಂಗಿಕವಾದ ನಿಯಮಗಳಿರುತ್ತವೆ. ಆ ನಿಯಮಗಳನ್ನು ಮೀರಿದರೆ, ಹೆಸರು ಕೆಡುವುದು, ಸಮಾಜದಲ್ಲಿ ದೂಶಣೆಗೆ ಒಳಗಾಗುವುದು ಇನ್ನೂ ಮುಂದುವರೆದಂತೆ ಕೊಲೆಯಾಗುವುದು ಎಲ್ಲ ನಡೆಯುತ್ತದೆ. ಜಾತಿ ಸಂಬಂಧಗಳು ಎಶ್ಟು ಗಟ್ಟಿಯಾಗಿರುತ್ತವೆ ಎಂದರೆ ಅದನ್ನು ಮೀರಲು ಸಮಾಜ ಅವಕಾಶ ನೀಡುವುದಿಲ್ಲ. ಚೆನ್ನನ ಕೊಲೆ ಇಲ್ಲಿ 'ಮರ್ಯಾದೆಗೇಡು ಹತ್ಯೆ'. ಲೈಂಗಿಕ ಸಂಬಂಧಗಳು ವಿವಾಹೇತರವಾಗಿಯೂ ಏರ್ಪಡಬಾರದು, ಅಂತರ್ಜಾತಿಯವಾಗಿಯು ಏರ್ಪಡಬಾರದು. ಶಾಸ್ತ್ರಿಗಳ ಮಗಳು ಸಾವಿತ್ರಿ ದಲಿತನಿಂದ ಮಗು ಪಡೆದು ಅವನೊಂದಿಗೆ ಸಿಟಿಯಲ್ಲಿ ಬದುಕುತ್ತಿರುವ ವಿಚಾರವನ್ನು ಚೆನ್ನನಿಂದ ಖಾತ್ರಿ ಪಡಿಸಿಕೊಂಡ ಮಧ್ವಾಚಾರ್ಯರಿಗೆ ಕಿವಿಯಲ್ಲಿ ಕೇಳಿಸಿಕೊಳ್ಳುವುದಕ್ಕು ಅಸಹ್ಯ. ಯಥಾಸ್ಥಿತಿಯಲ್ಲಿ ಸಮಾಜ ಇರಬೇಕು ಎನ್ನುವ ಒತ್ತಡ ಇಲ್ಲಿನ ಪಾತ್ರಗಳ ಮೂಲಕ ಅಭಿವ್ಯಕ್ತಗೊಂಡಿದೆ.

ಕುಸುಮ ಚೆನ್ನರ ಪ್ರೇಮಕ್ಕೆ ಕಾದಂಬರಿಯಲ್ಲಿ ಸ್ಪೇಸ್ – ಅವಕಾಶ ಇಲ್ಲ. ಚೆನ್ನನ ಕೊಲೆ ಅವಳನ್ನು ದೈಹಿಕ ಮತ್ತು ಮಾನಸಿಕವಾಗಿ ಇನ್ನಿಲ್ಲದಂತೆ ಕುಗ್ಗಿಸುತ್ತದೆ. ಕುಸುಮಾಳ ಮಾನಸಿಕ ವೇದನೆ ಇಲ್ಲಿ ವ್ಯಕ್ತವಾಗುವುದು ಅವಳ ಮೌನದಲ್ಲಿ. ಅದರ ಆಚೆಗೆ ಅವಳ ಯಾವುದೇ ಭಾವನೆಗಳು ಆಂತರಿಕ ಸಂಘರ್ಷಗಳಾಗಿ ವ್ಯಕ್ತಗೊಂಡಿವೆ. ಅವಳ ಮೌನವು ಕೂಡ ಇಲ್ಲಿ ಪ್ರತಿಭಟನೆಯ ಸಂಕೇತ.

ಕುಸುಮಬಾಲೆ ಕತೆಯನ್ನು ಹೇಳುವ ಜ್ಯೋತಮ್ಮರು, ಕುಸುಮಿಯ ಗಂಡ ಚೆನ್ನನ ಬಣ್ಣವನ್ನು ಹೋಲುತ್ತಿದ್ದ ಮಗುವನ್ನು ನೋಡಿ ಬೇಸರದಿಂದ ಹೊರಟು ಹೋದ ಸಂದರ್ಭವನ್ನು ಮಾತನಾಡುತ್ತಾ ಯಾಕೀಗೆ ಮಾಡಿದ ಎಂದು ಬೇಸರ ವ್ಯಕ್ತಪಡಿಸುತ್ತಾರೆ. ಜೋತಮ್ಮರ ಮಾತುಗಳಲ್ಲಿ ಕುಸುಮ ಚೆನ್ನರ ಸಂಬಂಧ ಕುರಿತು ಎಲ್ಲಿಯು ಅಪಸ್ವರ ಬರುವುದಿಲ್ಲ. ಹೆಣ್ಣಿನ ಲೋಕಕ್ಕೆ ಅವಳದೆ ಆದ ಒಂದು ಸ್ಪೇಸ್ – ಅವಕಾಶ ಬೇಕಿದೆ. ಅಂತಹ ಅವಕಾಶವನ್ನು ದೊರಕಿಸಿಕೊಡುವಲ್ಲಿ ಜ್ಯೋತಮ್ಮಗಳೂ ಸಹಕರಿಸುತ್ತವೆ.

ಪ್ರತಿ ಮನೆಯ ಜ್ಯೋತಿಯೂ ಪ್ರತಿ ಮನೆಯ ಹೆಣ್ಣೆ. ಅವುಗಳ ವರ್ತನೆ ಸಮಾಜದ ಮೌಲ್ಯಗಳನ್ನು ಆಚರಿಸುವಂತೆ ನಟಿಸುವ ಕಡೆಗು ಮತ್ತು ಅಣಕಿಸುವ ಕಡೆಗೂ ಎರಡೂ ಕಡೆ ತುಡಿಯುವುದನ್ನು ನಾವು ಕಥನದಲ್ಲಿ ಕಾಣಬಹುದು. ಕುಸುಮಬಾಲೆಯಲ್ಲಿ ಬರುವ ಜೀವವಿಲ್ಲದ ಮಂಚ ಜೀವಾಂತು ಮಾತಾಡುವುದು ಹೆಣ್ಣಾಗಿಯೆ. ಅದು ತನ್ನ ದುಃಖವನ್ನು ಸೋಮಪ್ಪನ ಜೀವಾತ್ಮಕ್ಕೆ ಹೇಳಿಕೊಳ್ಳುವುದು ಹೆಣ್ಣಾಗಿಯೇ. ದೇವನೂರರ ಒಟ್ಟು ಕಥನದಲ್ಲಿ ಮಹಿಳಾ ಪಾತ್ರಗಳೆ ಪ್ರಧಾನ. ಅವುಗಳ ವರ್ತನೆ ಬಹುಮುಖಿ ಮತ್ತು ಪುರುಶ ಯಾಜಮಾನ್ಯದ ಪ್ರತಿರೋಧಿ ವರ್ತನೆಗಳು.

ಆಕರಗಳು

1. ದ್ಯಾವನೂರು ಹಾಗೂ ಒಡಲಾಳ–ದೇವನೂರ ಮಹಾದೇವ, 2011, ಪುಸ್ತಕ ಪ್ರಕಾಶನ, ಮೈಸೂರು.

2. ಕುಸುಮಬಾಲೆ–ದೇವನೂರ ಮಹಾದೇವ, 2012, ಪುಸ್ತಕ ಪ್ರಕಾಶನ, ಮೈಸೂರು.

ಸಂಕ್ಶೇಪ ಸೂಚಿ

- ದ್ಯಾ.ಒ.ಪು: ದ್ಯಾವನೂರು ಹಾಗೂ ಒಡಲಾಳ, ಪುಟ
- ಕು.ಪು: ಕುಸುಮಬಾಲೆ, ಪುಟ

ಪಾರಿಭಾಶಿಕ ಪದಸೂಚಿ

- ಏಕಾಂಗಿತನ, ಲೈಂಗಿಕತೆ, ಅಸ್ತಿತ್ವ, ಇಮೋಶನ್ – ಭಾವುಕತೆ, ಲೈಂಗಿಕನಿಶ್ಠೆ, ಪುರುಶಪರ ಲೈಂಗಿಕ ಮೌಲ್ಯ, ಮರ್ಯಾದೆಗೇಡು ಹತ್ಯೆ, ತಾಯ್ತನ, ಅನಾಥಪ್ರಜ್ಞೆ, ವಿವಾಹೇತರ ಸಂಬಂಧ, ಪುರುಶ ಯಾಜಮಾನ್ಯ, ಪ್ರತಿರೋಧಿ ವರ್ತನೆ, ಸ್ಪೇಸ್ – ಅವಕಾಶ, ಮರುಜೇವಳಿ.

ತೇಜಸ್ವಿ ಸಾಹಿತ್ಯದಲ್ಲಿ ವ್ಯಕ್ತಿ ವಿಶಿಷ್ಟತೆಯ ಲಕ್ಷಣಗಳು

ಡಾ. ಕುಸುಮಾಂಜಲಿ ಎಲ್.ಸಿ. ಜಗದೀಶ್

ಸಹಾಯಕ ಪ್ರಾಧ್ಯಾಪಕರು

ಎನ್.ಐ.ಇ. ಪ್ರಥಮ ದರ್ಜೆ ಕಾಲೇಜು, ಮೈಸೂರು.

ಆಧುನಿಕತಾವಾದಕ್ಕೆ ಒಬ್ಬ ಮನುಷ್ಯ ಮುಖ್ಯನಾಗಿರುವುದರಿಂದ ಒಟ್ಟಾರೆಯಾದ ಒಂದು ಜನ ಸಮೂಹವನ್ನು; ಸಮಾಜವನ್ನು ಅದು ನಿರಾಕರಿಸುತ್ತದೆ. ಅದು ಪ್ರತಿಪಾದಿಸುವ ವಿಶ್ವಾತ್ಮಕತೆಯು ಕೂಡಾ ಚರಿತ್ರೆಯ ಆಚೆಗೆ ಇರುತ್ತದೆ. ಚರಿತ್ರೆಯಿಲ್ಲ; ಕಾಲವಿಲ್ಲ. ಆದರೆ ಅಸ್ತಿತ್ವದ ಒಂದು ವರ್ತುಲವಿದೆಯೆಂದು ಅದು ಪ್ರತಿಪಾದಿಸುತ್ತದೆ. ಇಲ್ಲಿ ಮತ್ತೆ ಇದಕ್ಕೆ ಸಂಬಂಧ ಪಟ್ಟ ಮತ್ತೊಂದು ವಿಚಾರವನ್ನು ಹೇಳಬೇಕು ಮೂಲತಃ ಮನುಷ್ಯನು ಏನಾಗಿದ್ದಾನೆ–ಏನಾಗಿದ್ದ ಎನ್ನುವುದು ಸಮಾಜವಾದಕ್ಕೆ ಮುಖ್ಯ. ಆದರೆ ಮನುಷ್ಯನ ಸ್ವಂತದ ಚಟುವಟಿಕೆಯೆನ್ನುವುದನ್ನು ಸಾಮಾಜಿಕ ಪರಿಭಾಷೆಯಾಗಿಯೂ ನೋಡಬಹುದು. ಆಧುನಿಕ ಸಮಾಜದಲ್ಲಿ ವ್ಯಕ್ತಿಯು ತನ್ನ "ಸೆಲ್ಫ್" ಅನ್ನುವುದನ್ನು ಕಳೆದುಕೊಳ್ಳುತ್ತಾನೆ. ಇದು ಏಲಿಯನೇಶನಿಗೆ ಕಾರಣವಾಗುತ್ತದೆ. "ಅನ್ ಏಲೀಯನೇಟೆಡ್" ಮನುಷ್ಯನೇ ಸಮಾಜವಾದದ ಗುರಿ. ಪರಕೀಯತೆ ಎನ್ನುವುದು ವಿಶಿಷ್ಟವಾದ ಸಂಗತಿಯೂ ಹೌದು. ಅಂದರೆ ಯಾವಾಗ ನಾವು ಪರಕೀಯತೆಯನ್ನು ಅನುಭವಿಸುತ್ತೇವೆ ಮತ್ತು ಯಾವಾಗ ಅದರಿಂದ ಪರಕೀಯತೆಯನ್ನು ಅನುಭವಿಸುತ್ತೇವೆ. ಪರಕೀಯತೆಯು ವ್ಯಕ್ತಿಯನ್ನು ಸಮಾಜದಿಂದ ಬೇರೆ ಮಾಡುತ್ತದೆ. ಹಾಗೆ ನೋಡುವುದಿದ್ದರೆ ಪರಕೀಯತೆಯು ಭಿನ್ನವಾದ ಸ್ವರೂಪದಲ್ಲಿಯೂ ಇರುತ್ತದೆ. "ದೈಹಿಕ ಪರಕೀಯತೆಯು ಒಂದು ರೀತಿಯದು." "ಬೌದ್ಧಿಕ ಪರಕೀಯತೆಯು ಮತ್ತೊಂದು ರೀತಿಯದು. ಈ ಎರಡೂ ಪರಿಕಲ್ಪನೆಗಳು ಭಿನ್ನವಾಗಿರುತ್ತದೆ. ಏಲಿಯನೇಶನ್ ನಿಸರ್ಗದಿಂದ ಭಿನ್ನವಾಗಿರುತ್ತದೆ. ಪರಕೀಯತೆಯು ಮೂಲತಃ ಭಿನ್ನವಾದ ಚಟುವಟಿಕೆಯೂ ಹೌದು. ಪರಕೀಯತೆ ಮತ್ತು ಅದರ ಪರಿಣಾಮಗಳು ಆಗಾಗ ಭಿನ್ನವಾಗುತ್ತವೆ. ಮತ್ತು ಅದನ್ನು ಅನುಭವಿಸುವ ವ್ಯಕ್ತಿ ಮತ್ತು ಅವನ ಚಹರೆಗಳು ಭಿನ್ನವಾಗುತ್ತಾ ಹೋಗುತ್ತದೆ. ಮನೆಯಲ್ಲಿ ಪರಕೀಯತೆಯನ್ನು ಅನುಭವಿಸುವವನು ಪ್ರತ್ಯೇಕತೆಯನ್ನು ಬಯಸುತ್ತಾನೆ. ಅವನನ್ನು ನಾವು ಬೇರೆಯಿಡುವುದೂ ನಿಜ. ಅವನಿಂದ ಮನೆಯ ನಿರ್ಣಾಯಕ ಕೆಲಸವು ಜರುಗುವುದೂ ಇಲ್ಲ. ಅವನು ಅನುಭವಿಸುವ ಭೂತಕಾಲವು ಬೇರೆಯಾಗಿದೆ. ಅವನ ಕೆಲಸವನ್ನು ನಾವು ಬೇರೆ ಮಾದರಿಯಲ್ಲಿ ನೋಡಬೇಕಾಗುತ್ತದೆ. ಆದರೆ ಅವನ ಅಸ್ತಿತ್ವ ಮತ್ತು ಅದರ ಪರಿಣಾಮವು ಒಂದು ಬಗೆಯದೂ ಆಗಿದೆ. ಹಾಗೆ ನೋಡುವುದಿದ್ದರೆ ದೈಹಿಕ ಅಸ್ತಿತ್ವವು ನಮ್ಮ ಕೆಲಸ ಕಾರ್ಯಗಳನ್ನು ಅವಲಂಬಿಸಿದೆ. ಸ್ವಂತದ ಪ್ರಜ್ಞೆ ಮತ್ತು ಸ್ವಂತದ ಚಟುವಟಿಕೆ ಎರಡೂ ವಿಶಿಷ್ಟವಾಗುವುದು ಅವುಗಳ ಸಂದರ್ಭದಲ್ಲಿ ಮಾತ್ರ. ಅಂದರೆ ನಾವು ಯಾವ ಸಂದರ್ಭದಲ್ಲಿ ಹೇಗೆ ಇರುತ್ತೇವೆ ಮತ್ತು ಅದರ ಪರಿಣಾಮಗಳು ಯಾವ ಬಗೆಯವು ಎನ್ನವುದನ್ನು ಅವಲಂಬಿಸಿಕೊಂಡು ಇವುಗಳು ಬದಲಾಗುತ್ತವೆ. ಆಧುನಿಕ ಕೈಗಾರಿಕೆಗಳು ಸ್ವಂತಿಕೆ ಅನ್ನುವುದನ್ನು ಮುಂದೆ ತರುತ್ತವೆ. ಆದರೆ ಧಾರ್ಮಿಕ ಪರಕೀಯತೆಯ ಕಲ್ಪನೆಯು ಭಿನ್ನವಾಗಿರುತ್ತದೆ.

ವ್ಯಕ್ತಿ ತನಗೆ ತಾನೇ ಅಸ್ತಿತ್ವ ಹುಡುಕಿಕೊಳ್ಳುವ ಪ್ರಕ್ರಿಯೆಯಿಂದ ವ್ಯಕ್ತಿಯ ವಿಶಿಷ್ಟತೆಯ ಪರಿಕಲ್ಪನೆಯು ಹುಟ್ಟಿಕೊಳ್ಳುವುದರಿಂದ ಅದಕ್ಕೆ ಸಾಮಾಜಿಕವಾದ ಅರ್ಥವಂತಿಕೆಯು ಇಲ್ಲ ಎನ್ನುವುದು ನಿಜವಾದರೂ ತೇಜಸ್ವಿಯವರ ಹುಡುಕಾಟವು ಭಿನ್ನವಾಗಿದೆ.

ರೂಸೋ ಒಂದು ಸಂದರ್ಭದಲ್ಲಿ ವ್ಯಕ್ತಿಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸುತ್ತಾನೆ. ಒಂದು: ಸಹಜ ಮತ್ತು ನಿಸರ್ಗಕ್ಕೆ ಹತ್ತಿರವಾದ ಮನುಷ್ಯರು. ಇವರಿಗೆ ಅಸ್ತಿತ್ವದ ಸಮಸ್ಯೆಯು ಬರುವುದಿಲ್ಲ. ಇನ್ನೊಂದು: ಸಾಮಾಜಿಕ ಮನುಷ್ಯರು. ಧಾರ್ಮಿಕ ಚಟುವಟಿಕೆಯಿಂದ: 'ಪ್ರತ್ಯೇಕತೆ'ಯ ಪರಿಕಲ್ಪನೆಯು ಹುಟ್ಟುವುದಿಲ್ಲ. ವ್ಯಕ್ತಿ ವಿಶಿಷ್ಟತೆಯೆನ್ನುವುದು ಸಾಮಾಜಿಕತೆಯ ಉಪ ಉತ್ಪನ್ನವೂ ಆಗಿದೆ. ಅದು ಸ್ವತಂತ್ರ ಮತ್ತು ಪ್ರತ್ಯೇಕ ವ್ಯಕ್ತಿಯ ಬೌದ್ಧಿಕ ಪ್ರಕ್ರಿಯೆಯನ್ನು ಸೂಚಿಸುತ್ತದೆ.

ವ್ಯಕ್ತಿಯ ವಿಶಿಷ್ಟತೆಯ ಪ್ರಶ್ನೆಯು ಬಂದಾಗ ಅದನ್ನು ಒಂದು 'ಸುಸಂಘಟಿತ' ಸಂಗತಿಯೆಂಬಂತೆ ನೋಡಲು ಬರುವುದಿಲ್ಲ. ಮತ್ತು ವ್ಯಕ್ತಿಯನ್ನು ಒಂದೇ ಗುಣದಿಂದ ವಿವರಿಸುವಂತಿಲ್ಲ. ಮಧ್ಯಕಾಲೀನ ಯುಗದಿಂದ ವ್ಯಕ್ತಿವಿಶಿಷ್ಟತೆ ಎನ್ನುವುದಕ್ಕೆ ವಿಶೇಷ ಅರ್ಥ ಬಂತು. ಈ ಕಾಲದಲ್ಲಿ ಯುರೋಪಿಯನ್ ದೇಶಗಳಲ್ಲಿ ಸಾಮಾಜಿಕ ಪರಿವರ್ತನೆಯು ಕಾಣಿಸಿಕೊಂಡಿತು. ಊಳಿಗಮಾನ್ಯ ಪದ್ಧತಿಯು ಈ ಸಂದರ್ಭದಲ್ಲಿ ಸ್ವಲ್ಪ ಮಟ್ಟಿಗೆ ಛಿದ್ರೀಕರಣಕ್ಕೆ ಗುರಿಯಾಯಿತು. ತಂತ್ರಜ್ಞಾನದ ಬೆಳವಣಿಗೆ; ವಿಜ್ಞಾನದ ಮುಂದುವರಿಕೆ, ಸಾಂಪ್ರದಾಯಿಕ ಚಿಂತನಾ ಕ್ರಮದ ಹಿನ್ನಡೆ; ವಿಭಕ್ತ ಕುಟುಂಬಗಳ ದೆಸೆಯಿಂದ ವ್ಯಕ್ತಿಯ 'ಸ್ವತಂತ್ರ ಅಸ್ತಿತ್ವ' ಎನ್ನುವುದಕ್ಕೆ ಹೊಸ ರೀತಿಯ ಒತ್ತು ಕಾಣಿಸಿಕೊಂಡಿತು. ಹೀಗಾಗಿ ನವ್ಯದ ಎಲ್ಲಾ ಚಿಂತನೆಗಳು 'ಸ್ವ–ಅನನ್ಯತೆ', 'ಸ್ವ–ಅಭಿವ್ಯಕ್ತಿ'ಯನ್ನು ಎತ್ತಿಹಿಡಿಯಿತು. ಇದು ಬಂಡವಾಳವಾದಿ ಆರ್ಥಿಕ ಚಿಂತನೆಗಳ ಫಲ. ಇದರಿಂದ ನವೋದಯ ಮತ್ತು ನವ್ಯ ಎರಡರಲ್ಲಿ 'ವ್ಯಕ್ತಿ'ಗೆ ವಿಶೇಷ ರೀತಿಯ ಪ್ರಾಶಸ್ತ್ಯವು ಬಂತು. ವ್ಯಕ್ತಿ ವಿಶಿಷ್ಟತೆಯ ಲಕ್ಷಣಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

ವ್ಯಕ್ತಿ ವಿಶಿಷ್ಟತೆಯ ಲಕ್ಷಣಗಳು

1 ವ್ಯಕ್ತಿ ಪ್ರಜ್ಞೆಯನ್ನು ಕುರಿತು ಹೆಚ್ಚು ಚರ್ಚೆಯನ್ನು ಮಾಡಿದವರು ಸಾರ್ತ್ರೆ ಮತ್ತು ಎರಿಕ್ ಫ್ರಾಂ. ವ್ಯಕ್ತಿಗೆ ಅವನದೇ ಆದ ವಿಶಿಷ್ಟತೆಯು ಇದೆಯೆಂದು ಅವರು ವಾದಿಸಿದ್ದಾರೆ. ವ್ಯಕ್ತಿಯ ಅನನ್ಯತೆಯನ್ನು ವಿವರಿಸುವಾಗ ಅವರು ಮಾರ್ಕ್ಸ್‌ವಾದವನ್ನು ಗಮನಕ್ಕೆ ತಂದುಕೊಂಡಿದ್ದಾನೆಂಬುದಿಲ್ಲಿ ಗಮನಾರ್ಹ.

2 ಆಧುನಿಕತೆಯಲ್ಲಿ ವ್ಯಕ್ತಿಯು ಭಾಗವಹಿಸುವುದು ಬೇರೆ ಕ್ರಮದಲ್ಲಿ ಭಿನ್ನವಾಗಿರುತ್ತದೆ. ಆದರೆ ಸಾಮೂಹಿಕ ಉತ್ಪಾದನೆಯಲ್ಲಿ ಏಲಿಯನೇಶನಿನ ಪ್ರಶ್ನೆಯು ಬರುವುದಿಲ್ಲ. ಚರಿತ್ರೆ ಮತ್ತು ಅದರ ಪರಿಣಾಮಗಳು ಒಂದೇ ರೀತಿಯವು ಅಲ್ಲ. ಅದನ್ನು ಸೀಮಿತಗೊಳಿಸಲು ಬರುವುದಿಲ್ಲ.

3 ಪುನರುಜ್ಜೀವನ ಅನಂತರ ವ್ಯಕ್ತಿಯ ಕಲ್ಪನೆಯು ಬದಲಾಯಿತು. ಹೊಸ ರೀತಿಯ ವ್ಯಾಖ್ಯೆಗಳು ಬಂದವು.

4 ವಿಜ್ಞಾನ ಮತ್ತು ತಂತ್ರಜ್ಞಾನಗಳು ಬಂದಿರುವುದಕ್ಕೂ ವ್ಯಕ್ತಿ ಕಲ್ಪನೆಗೂ ಸಂಬಂಧವಿದೆ. 13ನೇ ಶತಮಾನದ ಕ್ರಿಶ್ಚಿಯಾನಿಟಿಯ ಪರಿಕಲ್ಪನೆಗೂ ವ್ಯಕ್ತಿತ್ವದ ಪರಿಕಲ್ಪನೆಗೂ ಸಂಬಂಧವಿದೆ.

5 18ನೆಯ ಶತಮಾನದ ಎನ್ಲೈಟೆನ ಯುಗ. 19ನೆಯ ಶತಮಾನದ ಸಮಾಜವಾದದ ಸ್ವರೂಪವೇ ಭಿನ್ನ. ಹಾಗೆಯೇ ಇವುಗಳಲ್ಲಿ ಮೋರಲ್ ಮತ್ತು ಸ್ಪಿರಿಚುಯಲ್ ಜೀವನದ ಕ್ರಮಗಳೇ ಭಿನ್ನ.

6 ಪುನರುಜ್ಜೀವನದ ಸೆಕ್ಯುಲರಿಸಂ, ಆಧುನಿಕ ಯುಗದ ತಾತ್ವಿಕತೆ, ಪ್ರಭುತ್ವದ ಪರಿಕಲ್ಪನೆಗಳು–ವ್ಯಕ್ತಿಯನ್ನು ವ್ಯಾಖ್ಯಾನಿಸುವ ಕ್ರಮಗಳು ಬೇರೆಯಾಗಿವೆ. (ಕೇಶವ ಶರ್ಮ. ಕೆ 2015 ಮಾರ್ಕ್ಸ್‌ವಾದಿ ಮೀಮಾಂಸೆ ಪುಟ. 323) ಗೀತಾಂಜಲಿ ಪ್ರಕಾಶನ ಶಿವಮೊಗ್ಗ) ತೇಜಸ್ವಿಯವರ ಕರ್ವಾಲೋ ಕಾದಂಬರಿಯಲ್ಲಿ ಇದಕ್ಕೆ ಒಂದು ನಿದರ್ಶನವು ಇದೆ. ಕರ್ವಾಲೋ ಮತ್ತು ಮಂದಣ್ಣ ಪಾತ್ರಗಳಲ್ಲಿ ಇದು ಅತ್ಯಂತ ವಿಶಿಷ್ಟವಾಗಿ ರೂಪಿತವಾಗಿದ ಕರ್ವಾಲೋ ಕಾದಂಬರಿಯ ಪ್ರಾರಂಭದಲ್ಲಿ ಬರುವ ಚಿತ್ರವು ಹೇಗೆ ಇದೆ ಎಂದು ನೋಡಿದರೆ ನಮಗೆ ಈ ಅಂಶವು ತಿಳಿಯುತ್ತದೆ. ನಾನು ಮೂಡಿಗೆರೆಯ ಜೇನು ಸೊಸೈಟಿಯ ಬಾಗಿಲುಗಳನ್ನು ತಳ್ಳಿ ಒಳಗೆ ಪ್ರವೇಶಿಸುವಾಗ ಮಲೆನಾಡಿನಲ್ಲಿ ಮಳೆಯು ಆರಂಭವಾಗಿ ಕೆಲವು ತಿಂಗಳು ಕಳೆದಿದ್ದವು ಎನ್ನುವುದನ್ನು ಅದು ಸೂಚಿಸುತ್ತದೆ. ಇಲ್ಲಿ ಬರುವ ನಾನು ಎನ್ನುವುದು ಒಬ್ಬ ವ್ಯಕ್ತಿಯ ಅನನ್ಯತೆಯನ್ನು ಹೇಳುತ್ತದೆ.

7 ಆಧುನಿಕತೆಯು ಯಾಂತ್ರಿಕತೆ; ಹಣ; ವ್ಯಾಪಾರ ಉದ್ದಿಮೆ; ಸಾಮಾಜಿಕವಾಗಿ ಬಿರುಕು; ಸೈನ್ಯದ ನಡುವೆ ಸಂಘರ್ಷಗಳ ನಡುವೆ ಹುಟ್ಟಿಕೊಳ್ಳುತ್ತದೆ. ಇದರಿಂದ ಮಾನವೀಯ ಸಂಬಂಧ ಮತ್ತು ಸಂವೇದನೆಗಳಲ್ಲಿ ಬದಲಾವಣೆ ಕಾಣಿಸಿಕೊಳ್ಳುತ್ತದೆ.

8 ಇಪ್ಪತ್ತನೆಯ ಶತಮಾನದಲ್ಲಿ ಮಾನವೀಯ ಸಂಬಂಧಗಳಲ್ಲಿ ಅನೇಕ ಬದಲಾವಣೆಗಳು ಕಾಣಿಸಿಕೊಂಡವು. ತೇಜಸ್ವಿಯವರು ಇದನ್ನು ಬೇರೆ ಬೇರೆ ಕಾದಂಬರಿಗಳಲ್ಲಿ ಹೇಳಿದ್ದಾರೆ. ಅವರ ಕಾದಂಬರಿಗಳಲ್ಲಿ ವ್ಯಕ್ತಿ ವಿಶಿಷ್ಟತೆ ಎನ್ನುವುದು ಅತ್ಯಂತ ಪ್ರಮುಖವಾದ ಕಲ್ಪನೆಯು ಆಗಿದೆ.

9 ಮಾನವೀಯ ಭಾವನೆಗಳಲ್ಲಿ ಉಂಟಾದ ಪಲ್ಲಟವು ಕೂಡಾ ಇದರ ಪರಿಣಾಮಗಳೇ. ಆಧುನಿಕತೆಯು ಅಸಹಾಯಕತೆಯನ್ನು ಸೂಚಿಸುತ್ತದೆ. ವೈಯಕ್ತಿಕ ದುಃಖವನ್ನು ಪ್ರತಿಪಾದಿಸುತ್ತದೆ. ಅಂತರ್ಮುಖತೆಯನ್ನು ಹೇಳುತ್ತದೆ. ಆಂತರಿಕ ಘರ್ಷಣೆಯನ್ನು ಸಂಕೇತಿಸುತ್ತದೆ.

10 ಜೀವನವೆನ್ನುವುದು ವ್ಯಕ್ತಿಯೊಬ್ಬನ ವಿಧಿ ಬರಹ ಹಾಗೂ ಅದು ಅವನತಿಯ ಸೂಚಕವೆಂದು ತಿಳಿಸುತ್ತದೆ. ಹೀಗಾಗಿ ಆಧುನಿಕತಾವಾದಕ್ಕೆ ಸೈದ್ಧಾಂತಿಕ ತಳಹದಿಯು ಇಲ್ಲವೆಂದು ಅರ್ಥವಲ್ಲ. ಅದರ ಸೈದ್ಧಾಂತಿಕ ತಳಹದಿಯು ವ್ಯಕ್ತಿವಾದದಲ್ಲಿ ಕೇಂದ್ರೀಕೃತವಾಗಿದೆ. ಮಾನವತೆಯ ವ್ಯಾಖ್ಯೆಯನ್ನು ಕೂಡಾ ಅದು ವ್ಯಕ್ತಿವಾದದ ಹಿನ್ನೆಲೆಯಲ್ಲಿ ವಿವರಿಸುತ್ತದೆ.

11 ಆಧುನಿಕತಾವಾದಕ್ಕೆ ಒಬ್ಬ ಮನುಷ್ಯ ಮುಖ್ಯನಾಗಿರುವುದರಿಂದ ಒಟ್ಟಾರೆಯಾದ ಒಂದು ಜನ ಸಮೂಹವನ್ನು; ಸಮಾಜವನ್ನು ಅದು ನಿರಾಕರಿಸುತ್ತದೆ. ಅದು ಪ್ರತಿಪಾದಿಸುವ ವಿಶ್ಲಾತ್ಮಕತೆಯು ಕೂಡಾ ಚರಿತ್ರೆಯ ಆಚೆಗೆ ಇರುತ್ತದೆ. ಚರಿತ್ರೆಯಿಲ್ಲ; ಕಾಲವಿಲ್ಲ. ಆದರೆ ಅಸ್ತಿತ್ವದ ಒಂದು ವರ್ತುಲವಿದೆಯೆಂದು ಅದು ಪ್ರತಿಪಾದಿಸುತ್ತದೆ. ಇಲ್ಲಿ ಮತ್ತೆ ಇದಕ್ಕೆ ಸಂಬಂಧ ಪಟ್ಟ ಮತ್ತೊಂದು ವಿಚಾರವನ್ನು ಹೇಳಬೇಕು ಮೂಲತಃ ಮನುಷ್ಯನು ಏನಾಗಿದ್ದಾನೆ–ಏನಾಗಿದ್ದ ಎನ್ನುವುದು ಸಮಾಜವಾದಕ್ಕೆ ಮುಖ್ಯ. ಆದರೆ ಮನುಷ್ಯನ ಸ್ವಂತದ ಚಟುವಟಿಕೆಯೆನ್ನುವುದನ್ನು ಸಾಮಾಜಿಕ ಪರಿಭಾಷೆಯಾಗಿಯೂ ನೋಡಬಹುದು.

ಪರಕೀಯತೆ ಮತ್ತು ವ್ಯಕ್ತಿ ವಿಶಿಷ್ಟತೆಯ ಸಿದ್ಧಾಂತ

1. ಆಧುನಿಕ ಸಮಾಜದಲ್ಲಿ ವ್ಯಕ್ತಿಯು ತನ್ನ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಾನೆ. ಇದು ಏಲಿಯನೇಶನಿಗೆ ಕಾರಣವಾಗುತ್ತದೆ. **"ಅನ್ ಏಲೀಯನೇಟೆಡ್"** ಮನುಷ್ಯನೇ ಸಮಾಜವಾದದ ಗುರಿ. ಪರಕೀಯತೆ ಎನ್ನುವುದು ವಿಶಿಷ್ಟವಾದ ಸಂಗತಿಯೂ ಹೌದು. ಅಂದರೆ ಯಾವಾಗ ನಾವು ಪರಕೀಯತೆಯನ್ನು ಅನುಭವಿಸುತ್ತೇವೆ ಮತ್ತು ಯಾವಾಗ ಅದರಿಂದ ಪರಕೀಯತೆಯನ್ನು ಅನುಭವಿಸುತ್ತೇವೆ. ಪರಕೀಯತೆಯು ವ್ಯಕ್ತಿಯನ್ನು ಸಮಾಜದಿಂದ ಬೇರೆ ಮಾಡುತ್ತದೆ. ಹಾಗೆ ನೋಡುವುದಿದ್ದರೆ ಪರಕೀಯತೆಯು ಭಿನ್ನವಾದ ಸ್ವರೂಪದಲ್ಲಿಯೂ ಇರುತ್ತದೆ.

2. **"ದೈಹಿಕ ಪರಕೀಯತೆಯು ಒಂದು ರೀತಿಯದು." "ಬೌದ್ಧಿಕ ಪರಕೀಯತೆಯು ಮತ್ತೊಂದು ರೀತಿಯದು.** ಈ ಎರಡೂ ಪರಿಕಲ್ಪನೆಗಳು ಭಿನ್ನವಾಗಿರುತ್ತದೆ. ಪರಕೀಯತೆ ಕರ್ವಾಲೋ ಅವರ ವ್ಯಕ್ತಿತ್ವ ಈ ದೃಷ್ಟಿಯಿಂದ ಅತ್ಯಂತ ಮುಖ್ಯವಾಗಿದೆ.

3. ವ್ಯಕ್ತಿತವು ನಿಸರ್ಗದಿಂದ ಭಿನ್ನವಾಗಿರುತ್ತದೆ. ಪರಕೀಯತೆಯು ಮೂಲತಃ ಭಿನ್ನವಾದ ಚಟುವಟಿಕೆಯೂ ಹೌದು. ಪರಕೀಯತೆ ಮತ್ತು ಅದರ ಪರಿಣಾಮಗಳು ಆಗಾಗ ಭಿನ್ನವಾಗುತ್ತವೆ. ಮತ್ತು ಅದನ್ನು ಅನುಭವಿಸುವ ವ್ಯಕ್ತಿ ಮತ್ತು ಅವನ ಚಹರೆಗಳು ಭಿನ್ನವಾಗುತ್ತಾ ಹೋಗುತ್ತದೆ. ಮನೆಯಲ್ಲಿ ಪರಕೀಯತೆಯನ್ನು ಅನುಭವಿಸುವವನು ಪ್ರತ್ಯೇಕತೆಯನ್ನು ಬಯಸುತ್ತಾನೆ. ಅವನನ್ನು ನಾವು ಬೇರೆಯಿಡುವುದೂ ನಿಜ. ಅವನಿಂದ ಮನೆಯ ನಿರ್ಣಾಯಕ ಕೆಲಸವು ಜರುಗುವುದೂ ಇಲ್ಲ. ಅವನು ಅನುಭವಿಸುವ ಭೂತಕಾಲವು ಬೇರೆಯಾಗಿದೆ.

4. ಕರ್ವಾಲೋ ಮತ್ತು ಅವನ ಕೆಲಸವನ್ನು ನಾವು ಬೇರೆ ಮಾದರಿಯಲ್ಲಿ ನೋಡಬೇಕಾಗುತ್ತದೆ. ಆದರೆ ಅವನ ಅಸ್ತಿತ್ವ ಮತ್ತು ಅದರ ಪರಿಣಾಮವು ಒಂದು ಬಗೆಯದೂ ಆಗಿದೆ. ಹಾಗೆ ನೋಡುವುದಿದ್ದರೆ ದೈಹಿಕ ಅಸ್ತಿತ್ವವು ನಮ್ಮ ಕೆಲಸ ಕಾರ್ಯಗಳನ್ನು ಅವಲಂಬಿಸಿದೆ.

5. ಕರ್ವಾಲೋ ಕಾದಂಬರಿಯಲ್ಲಿ ಬರುವ ಸ್ವಂತದ ಪ್ರಜ್ಞೆ ಮತ್ತು ಸ್ವಂತದ ಚಟುವಟಿಕೆ ಎರಡೂ ವಿಶಿಷ್ಟವಾಗುವುದು ಅವುಗಳ ಸಂದರ್ಭದಲ್ಲಿ ಮಾತ್ರ. ಅಂದರೆ ನಾವು ಯಾವ ಸಂದರ್ಭದಲ್ಲಿ ಹೇಗೆ ಇರುತ್ತೇವೆ ಮತ್ತು ಅದರ ಪರಿಣಾಮಗಳು ಯಾವ ಬಗೆಯವು ಎನ್ನವುದನ್ನು ಅವಲಂಬಿಸಿಕೊಂಡು ಇವುಗಳು ಬದಲಾಗುತ್ತವೆ. ಮಾಡರ್ನ ಇಂಡಸ್ಟ್ರಿಗಳು ಸೆಲ್ಫ್ ಅನ್ನುವುದನ್ನು ಮುಂದೆ ತರುತ್ತವೆ. ಆದರೆ ಧಾರ್ಮಿಕ ಪರಕೀಯತೆಯ ಕಲ್ಪನೆಯು ಭಿನ್ನವಾಗಿರುತ್ತದೆ. (ಕೇಶವ ಶರ್ಮ. ಕೆ) (ಪೂರ್ವೋಕ್ತ)

6. ಅವೈಯಕ್ತಿಕತೆಯನ್ನು ಸಾಧಿಸುವುದೆಂದರೆ ಅಥವಾ ವಸ್ತುನಿಷ್ಠತೆಯನ್ನು ಸಾಧಿಸುವುದೆಂದರೆ ಆಧುನಿಕತಾವಾದದ ಪ್ರಕಾರ ಚರಿತ್ರೆಯ ಆಚೆಗೆ ನಿಲ್ಲುವುದು, ವ್ಯಕ್ತಿಯ ಅಸ್ತಿತ್ವವನ್ನು ಚರಿತ್ರೆಯ ಆಚೆಗಿನದು ಎಂಬುದನ್ನು ಒಪ್ಪುವುದಿಲ್ಲ. ಇದನ್ನು ಚಿದಂಬರ ರಹಸ್ಯದಲ್ಲಿ ತೇಜಸ್ವಿಯವರು ಹೇಳುತ್ತಾರೆ. ಅದೇ ಮಾದರಿಯ ಪ್ರಶ್ನೆಯು ಅವರ ಕಾಮ, ಮತ್ತು ರೂಪ, ಸೌಂದರ್ಯ ಲೇಖನದಲ್ಲಿಯೂ ಕಾಣಬಹುದು. ಕಾಮವನ್ನು ನಾವು ಸಹಜವಾಗಿ ಗಮನಿಸಬೇಕು ಎನ್ನುವುದು ಅವರ ನಿಲವು. ನವೋದಯ ಕಾಲದ ಅನಂತರದ ಸಾಂಸ್ಕೃತಿಕ ಸನ್ನಿವೇಶ ತೇಜಸ್ವಿ ಹೊಸ ಹೊಸ ಸಾಧ್ಯತೆಯನ್ನು ರೂಪಿಸಿಕೊಟ್ಟಿತು. ಅದು ಆಧುನಿಕ ಅನುಭವದ ಸಾಂಸ್ಕೃತಿಕ ಕಥನದ ನಿರೂಪಣೆಯ ಅವಕಾಶ. ಅವರ ಕಾದಂಬರಿ ರೂಪದ ಹಿಂದಿರುವ ಸಾಂಸ್ಕೃತಿಕ ಕಥನದ ಒತ್ತಡವನ್ನು ಸರಳಗೊಳಿಸಿ ಹೇಳುವುದು ಕಷ್ಟ.

7. "ವ್ಯಕ್ತಿಯು ಮೂಲತಃ ಸಮಾಜ ಒಂದು ಭಾಗವಾಗಿದ್ದಾನೆ ಎಂಬುದನ್ನು ನಾವು ಮರೆಯಬಾರದು. ಯಾವುದು ಭೂತಕಾಲವಾಗಿದೆಯೋ ಅದೂ ನಮ್ಮ ಅಸ್ತಿತ್ವದ ಒಂದು ಭಾಗವಾಗಿದೆ. ಆದರೆ ಅದನ್ನು ಅರ್ಥಮಾಡಿಕೊಳ್ಳಬಹುದಾದ ಮಾರ್ಗಗಳು ಬೇರೆ ಬೇರೆಯಾಗಿರುತ್ತದೆ. ಹಾಗೆ ನೋಡುವುದಿದ್ದರೆ ಯಾವುದು ಕಳೆದು ಹೋಗಿದೆಯೋ ಅದನ್ನು ನಾವು ಹುಡುಕುವುದು ಕೂಡಾ ವ್ಯಕ್ತಿತ್ವದ ಭಾಗವಾಗಿರುತ್ತದೆ. ಆದರೆ ಅದನ್ನು ಹುಡುಕುವುದು ಅಥವಾ ನೋಡುವುದು ನಮ್ಮ ತಾತ್ವಿಕ ಕಾಳಜಿಗೆ ಅನುಸಾರವಾಗಿ ಬೇರೆಯಾಗಿರುತ್ತದೆ.

8. ಕಳೆದು ಹೋದದ್ದು ಕೇವಲ ಭೂತಕಾಲವಲ್ಲ. ಅದು ನಮ್ಮ ವ್ಯಕ್ತಿತ್ವವನ್ನು ವ್ಯಾಪಿಸುತ್ತದೆ. ಹಾಗೂ ಅದನ್ನು ನೋಡುವಾಗ ನಾವು ಕೇವಲ ನಡೆದು ಹೋಗಿದೆ ಮತ್ತು ಅದಕ್ಕೂ ನಮ್ಮ ಈಗಿನ ವರ್ತಮಾನಕ್ಕೂ ಯಾವುದೇ ಸಂಬಂಧವಿಲ್ಲವೆಂದು ಭಾವಿಸಬಾರದು. ಆದರೆ ವ್ಯಕ್ತಿಯ ಸಾಮಾಜಿಕ ಅಸ್ತಿತ್ವಕ್ಕೂ, ಸ್ವಂತದ ಅಸ್ತಿತ್ವಕ್ಕೂ ಭಿನ್ನತೆಯಿದೆ. ದೇವರಲ್ಲಿ ನಂಬಿಕೆಯಿದ್ದವನು ಅದನ್ನು ಅನುಮಾನವಿಲ್ಲದೆಯೇ ಸ್ವೀಕರಿಸುತ್ತಾನೆ. ನಾವು ಯಾವುದನ್ನು ಸತ್ಯವೆಂದು ಕರೆಯುತ್ತೇವೆಯೋ ಅದು ಥಿಯರಿಗೆ ಸಂಬಂಧಪಟ್ಟಿಲ್ಲವೆಂದು ನಾವು ಗಮನಿಸಬೇಕು. ನಾವು ಲೋಕಲಿಯಾಗಿರುತ್ತೇವೆ ಆದರೆ ನಮ್ಮ ಚಿಂತನೆಗಳು ಮಾತ್ರ ವಿಶ್ವಾತ್ಮಕವಾಗಿರುತ್ತದೆ. ನೀತಿ ಮತ್ತು ಕಲೆಯೆರಡನ್ನೂ ನಾವು ಕಟ್ಟಿದ್ದೇವೆ ಎಂಬುದಿಲ್ಲಿ ಗಮನಾರ್ಹ ಇವು ಜವಾಬ್ದಾರಿ ರಹಿತವಲ್ಲ. ಇವುಗಳು ಸನ್ನಿವೇಶದ ಒತ್ತಡದಲ್ಲಿ ಸಿಕ್ಕಿವೆ ಎನ್ನುವುದು ಗಮನಾರ್ಹ. ಇದನ್ನು ಅವರ ವ್ಯಕ್ತಿ ವಿಶಿಷ್ಟವಾದ ಸಿದ್ಧಾಂತದಲ್ಲಿಯ ಒಂದು ಲೇಖನವು ಚರ್ಚೆ ಮಾಡುತ್ತದೆ. (ತೇಜಸ್ವಿ, 2008. ಅಲಕ್ಷ್ಯ ಮತ್ತು ಸಂಸ್ಕೃತಿ ಸ್ಥಿತಿ, ಪುಟ. 4)

9. ವ್ಯಕ್ತಿ ಮತ್ತು ಅವನ ಇಗೋವನ್ನು ನಾವು ನೋಡುವುದೆಂದರೆ ಅದರ ಮಿತಿಯನ್ನೂ ನಾವು ಅರ್ಥ ಮಾಡಿಕೊಳ್ಳುವುದು. ಇದರ ಮೂಲಭೂತವಾದ ತಳಹದಿಯೆಂದರೆ ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನಿರುವಂತೆ ಇಲ್ಲ. ಒಬ್ಬ ಎತ್ತರವಿರುತ್ತಾನೆ. ಮತ್ತೊಬ್ಬ ಉದ್ದವಿರುತ್ತಾನೆ. ಮತ್ತೊಬ್ಬನಿಗೆ ಬೊಜ್ಜು ಇನ್ನೊಬ್ಬನ ಮುಖ ಗುಂಡಗೆ, ಒಬ್ಬ ಮೆತ್ತಗೆ ಮಾತಾಡುತ್ತಾನೆ ಇನ್ನೊಬ್ಬ ಸದಾ ಸಿಡುಕುತ್ತಿರುತ್ತಾನೆ. ಈ ಪ್ರಶ್ನೆಯು ನಮ್ಮ ಸಮಾಜದಲ್ಲಿದೆ. ಒಬ್ಬ ವ್ಯಕ್ತಿ ಅಳುವುದಕ್ಕೂ ಮತ್ತೊಬ್ಬ ಸದಾ ಸಿಡುಕುತ್ತಿರುವುದಕ್ಕೂ ನಾವು ಅವರ ಸ್ವಭಾವವೇ ಕಾರಣವೆಂದು ಹೇಳುತ್ತೇವೆ. ಆದರೆ ಇದು ಮಾತ್ರವೇ ಕಾರಣವಲ್ಲ. ಇದಕ್ಕೆ ಅನೇಕ ಹಿನ್ನೆಲೆಯಿರುತ್ತದೆ.

ಅಳುವುದು ಮತ್ತು ಸಿಡುಕುವುದು ಎರಡೂ ಪ್ರತಿಕ್ರಿಯೆಗಳೇ ಆಗಿರುತ್ತದೆ. ಇದಕ್ಕೆ ಮೊದಲ ಕಾರಣ ಸಿಡುಕುವುದು ಅಸಹನೆಯಿಂದ, ಅಳುವುದು ಭಾವನೆಯನ್ನು ಹಿಡಿತದಲ್ಲಿ ಇರಿಸದೇ ಹೋದಾಗ, ಮನುಷ್ಯರನ್ನು ಸಾಮಾಜಿಕ ಒತ್ತಡಗಳೇ ನಿಯಂತ್ರಿಸುತ್ತವೆ. ಯಾವಾಗ ಸಮಾಜ ಬದಲಾಗುತ್ತದೆಯೋ ಆಗ ವ್ಯಕ್ತಿಯೂ ಬದಲಾಗುತ್ತಾನೆ. ಆದುದರಿಂದ ಮನುಷ್ಯನನ್ನು ಗುರುತಿಸುವಾಗ ಅವನ ಹಿಂದಿರುವ ಸಾಮಾಜಿಕ ಒತ್ತಡವನ್ನು ನಾವು ಗುರುತಿಸಬೇಕಾಗುತ್ತದೆ.

10. ಸಮಾಜವು ನಮಗೆ ಬೇರೆ ಬೇರೆ ಒತ್ತಡವನ್ನು ಹೇರುತ್ತದೆ. ಅವುಗಳಿಗೆ ಕಾರ್ಯ ಕಾರಣ ಸಂಬಂಧವಿರುತ್ತದೆ. ದುಃಖವನ್ನು ಹಿಡಿತದಲ್ಲಿ ಇರಿಸಿಕೊಳ್ಳಲಾಗದ ವ್ಯಕ್ತಿಯು ಅಳುವುದು ಆವನ ಭಾವನೆಯ ಕಾರಣದಿಂದ. ಒತ್ತಡಗಳೇ ನಮ್ಮನ್ನು ನಿಯಂತ್ರಿಸುತ್ತದೆಯೆಂದು ಹೇಳಿದರೂ ಅದಕ್ಕೂ ನಾವು ವಾಸಿಸುತ್ತಿರುವ ಸಮಾಜಕ್ಕೂ ಒಂದು ಕೊಂಡಿಯಿರುತ್ತದೆ.

11. ನಮ್ಮ ಆಲೋಚನೆಯು ಕೇವಲ ನಮ್ಮದು ಮಾತ್ರವೇ ಅಲ್ಲ. ನಮ್ಮ ಎಲ್ಲಾ ಪ್ರತಿಕ್ರಿಯೆಗಳು ನಮ್ಮ ಆಲೋಚನೆಗಳ ಪ್ರತೀಕಗಳೇ ಆಗಿವೆ. ನಮ್ಮ ಆಲೋಚನೆಯು ಶೂನ್ಯದ ಉತ್ಪನ್ನವಲ್ಲ. ನಾವು ನಮ್ಮ ವಿಶಿಷ್ಟತೆಯನ್ನು ಸಾಧಿಸುವುದು ನಮ್ಮದು ಎನ್ನಬಹುದಾದ ಗುಣಗಳಿಂದ ಮತ್ತು ನಮ್ಮ ಪರಿಸರದಿಂದ. ಅಷ್ಟೇ ಅಲ್ಲ ಕೆಲವೊಮ್ಮೆ ನಮ್ಮದೇ ವಂಶವಾಹಿಗಳಿಂದ ನಮ್ಮ ಪರಿಸರವು ಮಾತ್ರ ಪ್ರಬಲವಾಗಿರುತ್ತದೆ. ಆದ್ದರಿಂದ ತೇಜಸ್ವಿಯವರ ಬರಹ ಮತ್ತು ಅದರ ಹಿಂದೆ ಇರುವ ತತ್ವಗಳು ಬೇರೆಯಾಗಿವೆ, ಅದರ ಜೊತೆಗೆ ಅವು ಭಿನ್ನವಾದ ಒಂದು ನಿಲುವನ್ನು ತಳೆಯುತ್ತವೆ. ಕಥೆ ಎನ್ನುವುದನ್ನು ಬೇರೆ ಬೇರೆ ರೀತಿಯಲ್ಲಿ ಹೇಳಬಹುದು. ಅದು ಹಾಡಿನ ರೂಪದಲ್ಲಿ ಇರಬಹುದು, ಗದ್ಯದ ರೂಪದಲ್ಲಿಯೂ ಇರಬಹುದು. ಕೆಲವೊಂದು ಸಂದರ್ಭದಲ್ಲಿ ಕಥೆಯು ಕಾದಂಬರಿಯ ರೂಪವನ್ನು ತಳೆಯಬಹುದು. ಆದರೆ ಇವುಗಳನ್ನು ನಿರೂಪಿಸುವ ಕ್ರಮಗಳೂ ಕೂಡ ಬೇರೆ ಬೇರೆ ರೀತಿಯಲ್ಲಿ ಇರಬಹುದು. ಕೆಲವೊಮ್ಮೆ ಕಥೆಗಳನ್ನು ನಿರೂಪಿಸುವ ಕ್ರಮವೇ ಬೇರೆ. ಕಥೆಯು ಕಾಲ್ಪನಿಕವಾಗಿಯೂ ಇರಬಹುದು ಸತ್ಯವೂ ಆಗಿರಬಹುದು. ಕಥೆಯಲ್ಲಿ ಹೇಳುವ ಕ್ರಮವು ಕೇಳುಗನನ್ನು ಆಕರ್ಷಿಸುವಂತಿರಬೇಕು. ಕಥೆಯಲ್ಲಿ ಶಬ್ದಚಿತ್ರ ಪ್ರಧಾನವೇ ಮುಖ್ಯ.

ಕುಟುಂಬದ ಹೊರಗೆ ಬಂದರೆ ವ್ಯಕ್ತಿಯು ಪ್ರಜಾಪ್ರಭುತ್ವದಲ್ಲಿ ಕೇವಲ ಪ್ರಜೆ ಮಾತ್ರ. ಈ ಹಿಂದೆ ಆಗಿ ಹೋಗಿರುವ ಪ್ರಜೆಗೂ ನಮಗೂ ವ್ಯತ್ಯಾಸವಿದೆ. ಅಂದರೆ ವ್ಯಕ್ತಿಯು ಬದಲಾಗುತ್ತಾ ಹೋಗುತ್ತಾನೆ. ವ್ಯಕ್ತಿಯ ಬದಲಾವಣೆಗೆ ನಿಜವಾದ ಕಾರಣವಿದೆ. ಸುಮ್ಮನೇ ಯಾವುದೂ ಬದಲಾಗುವುದಿಲ್ಲ. ಬದಲಾಗಲು ಕಾರಣಗಳು ಅನೇಕವಿರುತ್ತದೆ. ಇಲ್ಲಿ ಗಮನಿಸಬೇಕಾದ ಹಲವು ಅಂಶಗಳಿವೆ–ಚರಿತ್ರೆಯು ಬದಲಾಗುತ್ತಾ ಹೋದಂತೆ ವ್ಯಕ್ತಿಯ ಚಹರೆಗಳು ಬದಲಾಗುತ್ತಾ ಹೋಗುತ್ತವೆ. ದುಡಿಮೆಯ ಅಗತ್ಯಕ್ಕೆ ತಕ್ಕಂತೆಯೂ ವ್ಯಕ್ತಿಯ ಚಹರೆಗಳು ಬದಲಾಗುತ್ತವೆ. ಜಯಂತಿ ಮತ್ತು ರಫಿಯರ ಮಾತುಕತೆಗಳು ಇದನ್ನು ಹೇಳುತ್ತವೆ.

ಇದನ್ನು ನಾವು ಮಾಯಾಲೋಕ ಕೃತಿಯಲ್ಲಿ ಬರುವ ಚಿತ್ರಗಳ ಮೂಲಕವೂ ಕಾಣಬಹುದು.

1. ನಾಯಕನು ಇಲ್ಲಿ ನಿರೂಪಕನೂ ಆಗಿದ್ದಾನೆ. ಆದ್ದರಿಂದ ಅವನ ಅಸ್ತಿತ್ವ ಉಳಿದ ಪಾತ್ರಗಳ ಥರ ಇಲ್ಲ.
2. ಹಕ್ಕಿ ಪಿಕ್ಕೆಯವರು ಹುಂಡುಕೋಳಿಯನ್ನು ಹಿಡಿಯುವವರು ಆದ್ದರಿಂದ ಅವರ ಅಸ್ತಿತ್ವವು ಬೇರೆಯಾಗುತ್ತದೆ.
3. ಗಾರ್ಡ್ ನಾಗರಾಜ ಅರಣ್ಯ ಇಲಾಖೆಯವನು.
4. ಅಣ್ಣಪ್ಪಣ್ಣ – ಕಾನೂನಿಗೆ ಬೆಲೆಕೊಟ್ಟು ಬದಕುವ ಮನುಷ್ಯನಲ್ಲ.
5. ಬಂಡಾರಿ ಬಾಬು– ಕ್ಷೌರಿಕ.
6. ಜಲೀಲ – ತರಕಾರಿ ಅಂಗಡಿಯವನು.
7. ಗಂಗಮ್ಮ – ಗಂಡನ ಕುಡಿತವನ್ನು ಸಹಿಸದವಳು

ಇದೇ ರೀತಿಯಲ್ಲಿ ಬೇರೆ ಬೇರೆ ಪಾತ್ರಗಳು ಬರುತ್ತವೆ.

'ಸಾಲಗಳಿಂದ ಗ್ರಾಮಗಳು ಶಾಶ್ವತವಾಗಿ ಸರ್ಕಾರಿ ಯಂತ್ರದ ಮತ್ತು ಪೇಟೆಯ ಜೀತದಾಳುಗಳಾಗಿ ಪರಿವರ್ತನೆಯಾಗುತ್ತವೆ.' ಎಂದು ತೇಜಸ್ವಿಯವರು ಹೇಳುತ್ತಾರೆ (ತೇಜಸ್ವಿ – ಹೊಸ ವಿಚಾರಗಳು ಪುಟ 99). ವ್ಯಕ್ತಿಯು ಸ್ವಂತಿಕೆಯ ಅಭಿವ್ಯಕ್ತಿ ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು ಸೂಚಿಸುತ್ತವೆ. ಇದನ್ನು ತೇಜಸ್ವಿಯವರು ಸಾಹಿತ್ಯ, ಸಂಸ್ಕೃತಿ ಮತ್ತು ರಾಜಕಾರಣ ಮತ್ತು ಪೂರ್ವ ಸಿದ್ಧತೆಯು ಇಲ್ಲದ ಯೋಜನೆಗಳು ಲೇಖನಗಳಲ್ಲಿ ವಿವರಿಸುತ್ತಾರೆ. (ಅದೇ 83)

ತೇಜಸ್ವಿಯವರು ಮೂಡಿಗೆರೆಯಲ್ಲಿ ತೋಟ ಮಾಡಿ ತಮ್ಮ ಪಾಡಿಗೆ ತಾವು ಇದ್ದರು. ಅವರಿಬ್ಬರೂ ಶೈಕ್ಷಣಿಕ ವಲಯದವರು ಅಲ್ಲ. ನೋಡುವುದಿದ್ದರೆ ನಾವು ಸಾಹಿತ್ಯದ ಚರ್ಚೆಯನ್ನು ಒಂದು ಪ್ರತ್ಯೇಕವಾದ ವೈಚಾರಿಕ ಮಾದರಿಯೆಂಬಂತೆ ಮಾಡುತ್ತಾ ಬಂದಿದ್ದೇವೆ. ಅವರಿಬ್ಬರ ನಡುವೆ ಇರುವ ಸಾಮ್ಯತೆಯನ್ನು ಯಾರು ಬೇಕಾದರೂ ಗುರುತಿಸುವುದು ಸಾಧ್ಯ. ಇದನ್ನು ತೇಜಸ್ವಿಯವರು 'ನಿಗೂಢ ಮನುಷ್ಯರು' ಕಾದಂಬರಿಯಲ್ಲಿ ಲೇವಡಿ ಮಾಡುತ್ತಾರೆ.

"ನನ್ನ ಜೀವನದಲ್ಲಿ ನಾನು ಬದಲಾವಣೆಗೆ ಹಂಬಲಿಸಿದಂತೆ, ಪುನರ್ಜನ್ಮಕ್ಕಾಗಿ ಹಂಬಲಿಸಿದಂತೆ ಬಹುಶಃ ಇನ್ನಾರು ಹಂಬಲಿಸಲಾರರು. ಏಕೆನ್ನುವೆಯಾ ನಾನು ಲೆಕ್ಚರರ್ ಆದಾಗ ವಿದ್ಯಾರ್ಥಿ ಜೀವನಕ್ಕೂ ಮಾಸ್ತರ ಜೀವನಕ್ಕೂ ಯಾವ ಬದಲಾವಣೆಯನ್ನು ಕಾಣಲಿಲ್ಲ. ಮಿತ್ರರೂ ಶತ್ರುಗಳು ಯಾರೊಬ್ಬರೂ ಬದಲಾಗಲಿಲ್ಲ. ಬೋರ್ಡಿಗೆ ಮುಖ ಹಾಕಿ ಕೂರುತ್ತಿದ್ದವನು ಈಗ ಬೆನ್ನು ಹಾಕಿ ಕೂರತೊಡಗಿದೆ. ಅಷ್ಟೆ. ಸಾಹಿತ್ಯವನ್ನು ಕಿವಿಯಲ್ಲಿ ಕೇಳುತ್ತಿದವನು ಅನಂತರ ಬಾಯಲ್ಲಿ ಕಾರತೊಡಗಿದೆ. ನಾನು ಬರೆಯುತ್ತಿದ್ದ ಕಾಲಕ್ಕೆ ಬರೆಯುತ್ತಿದ್ದವರೆಲ್ಲಾ ಅಧ್ಯಾಪಕರು. ಅವರು ಅದನ್ನೇ ಕೇಳಿ ಅದನ್ನೇ ಪಾಠ ಮಾಡಿ ಅವುಗಳಿಂದಲೇ ಏನೇನನ್ನೋ ಸೃಷ್ಟಿಸುತ್ತಿದ್ದರು. ಹಾಗಾಗಿ ತನ್ನ ಕಾಲದ ಸಾಹಿತ್ಯವೆಲ್ಲಾ ಸಾಹಿತ್ಯೋಪಜೀವಿಗಳ ಸಾಹಿತ್ಯ." ಆದ್ದರಿಂದ ತೇಜಸ್ವಿಯವರ ಬರಹಗಳು ಮುಖ್ಯವಾಗಿದೆ. (ನೋಡಿ ನಿಗೂಢ ಮನುಷ್ಯರು)

ತೇಜಸ್ವಿಯವರ ಸ್ವರೂಪ, ನಿಗೂಢ ಮನುಷ್ಯರು, ಕರ್ವಾಲೋ – ಈ ಮೂರೂ ಕಾದಂಬರಿಗಳಲ್ಲಿಯೂ ಲೇಖಕನಿಗೆ ಮಹತ್ವದ ಪಾತ್ರವಿರುವುದು ಸೂಚಕವಾಗಿದೆ. ಯಾಕೆಂದರೆ, ಸೃಜನಶೀಲತೆಯ ಸಮಸ್ಯೆಗಳ ಬಗ್ಗೆ ತೇಜಸ್ವಿಯವರಷ್ಟು ಆಳವಾಗಿ ಅವರ ಸಮಕಾಲೀನರಲ್ಲಿ ಯಾರೂ ಚಿಂತನೆ ನಡೆಸಿಲ್ಲ. ಗಮನಿಸತಕ್ಕ ಇನ್ನೊಂದು ಮಹತ್ವದ ಅಂಶವೆಂದರೆ ಉಗ್ರಗಿರಿಯಂಥ ಅರ್ಥಪೂರ್ಣ ಪ್ರತೀಕಗಳನ್ನು ಉಪಯೋಗಿಸಿಯೂ ತೇಜಸ್ವಿಯವರು ಸಾಂಕೇತಿಕ ಸಂಪ್ರದಾಯದ ಬಗ್ಗೆ ಅತೃಪ್ತಿಯನ್ನು ಸೂಚಿಸಿರುವುದು. ಈ ಅತೃಪ್ತಿ ಇನ್ನೂ ಹೆಚ್ಚು ತೀವ್ರವಾಗಿ ಅಬಚೂರಿನ ಪೋಸ್ಟ್ ಆಫೀಸಿಗೆ ಅವರು ಬರೆದ ಮುನ್ನುಡಿ – 'ಹೊಸ ದಿಗಂತದ ಕಡೆ'ಯಲ್ಲಿ ಕಾಣಿಸಿಕೊಂಡಿದೆ. "ಸಾಹಿತ್ಯದಲ್ಲಿ ನಾವು ಯಾಂತ್ರಿಕ ಸಾಂಕೇತಿಕತೆಯೊಂದನ್ನು ಸಂಪ್ರದಾಯ ಮಾಡಿಕೊಂಡು ಸಹೃದಯ ಸ್ತೋಮವನ್ನು ಸೀಮಿತಗೊಳಿಸಿಕೊಳ್ಳುವುದೇ ಸಾಹಿತ್ಯ ರಚನೆಯ ಉದ್ದೇಶಗಳಲ್ಲಿ ಒಂದನ್ನಾಗಿ ಮಾಡಿಕೊಂಡರೆ ಅದು ರೋಗಗ್ರಸ್ತ ನಾಕರಿಕತೆಯ ಪರಾಕಾಷ್ಟೆ ಎಂದಷ್ಟೆ ಹೇಳಬಹುದು." ಸಮಗ್ರ ಬದಲಾವಣೆಯಿಂದ ಮಾತ್ರ ಹೊಸ ಸಾಹಿತ್ಯ ಬರಬಲ್ಲುದು ಎಂದು ಇಲ್ಲಿ ಅವರು ಹೇಳಿರುವುದು ಗಮನಾರ್ಹವಾಗಿದೆ. (ಕನ್ನಡ ಕಥನಸಾಹಿತ್ಯ:ಕಾದಂಬರಿ. ಜಿ.ಎಸ್. ಆಮೂರ. ಪುಟ. 328)

ತೇಜಸ್ವಿ ಕಾದಂಬರಿಗಳಲ್ಲಿ ಬರುವ ಸಾಮಾಜಿಕರಲ್ಲಿಯೂ ಎರಡು ವಿಧ: ಮೌಲ್ಯರಹಿತ ಮನುಷ್ಯರು ಮತ್ತು ಮೌಲ್ಯಸಹಿತ ಮನುಷ್ಯರು, ಮೌಲ್ಯರಹಿತ ಮನುಷ್ಯರು ದಿನಂದಿನದ ವಾಸ್ತವದಲ್ಲಿ ಬದುಕುತ್ತಾರೆ. ಅವರಿಗೆ ಬದುಕುವುದು ಕಷ್ಟವಾದರೂ ಅವರಿಗೆ ಬೇರೆ ಆಸಕ್ತಿಗಳಲ್ಲ, ಆದರ್ಶಗಳಿಲ್ಲ. ಅಸ್ತಿತ್ವವಾದಿಗಳಂತೆ ಹೇಳುವುದಿದ್ದರೆ ಈ ಮಾದರಿಯ ಮನುಷ್ಯರು ಸ್ವ ಅನನ್ಯತೆಯ ಅರ್ಥವನ್ನು ಕಂಡುಕೊಂಡವರಲ್ಲ. ಇನ್ನೊಂದು ಬಗೆಯವರು ಮೌಲ್ಯಸಹಿತ ಮನುಷ್ಯರು. ಸ್ವ ಅನನ್ಯತೆಯ ಅರ್ಥವನ್ನು ಕಂಡುಕೊಂಡವರು. ಹಳ್ಳಿಯಾಗಲಿ; ನಗರವಾಗಲಿ – ಇವರ ಜೀವನ ಕ್ರಮವು ಸಾಮುದಾಯಿಕವಲ್ಲ. ಮೌಲ್ಯಸಹಿತ ಮನುಷ್ಯರ ಜೀವನ ಕ್ರಮದ ಅಭಿವ್ಯಕ್ತಿಯು ಅವರ ಕೆಲಸ ಕಾರ್ಯಗಳಲ್ಲಿ ವ್ಯಕ್ತವಾಗುತ್ತದೆ ಎಂಬುದು ಗಮನಾರ್ಹ. ಈ ದೃಷ್ಟಿಯಿಂದ 'ಚಿದಂಬರ ರಹಸ್ಯ' ಕಾದಂಬರಿಯನ್ನು ನೆನಪಿಸಿಕೊಳ್ಳಬಹುದು. ಈ ಕಾದಂಬರಿಗಳು ವಾಸ್ತವವಾದಿ ಕಾದಂಬರಿಗಳಾಗಿವೆ.

ತೇಜಸ್ವಿಯವರಿಗೆ ಹಳ್ಳಿಯಾಗಲಿ; ಅದರಲ್ಲಿನ ಆರ್ಥಿಕ ರೂಪವಾಗಲೀ. ಒಂದು ಹುಸಿಯಾದ ಆದರ್ಶವಲ್ಲ. ಅದರ ಸಂಕಟಗಳು ಅವರ ಬರಹಗಳಲ್ಲಿ ಹಾಸುಹೊಕ್ಕಾಗಿವೆ. ಅವರ ಕಾದಂಬರಿಗಳಲ್ಲಿ ಸಾಮಾನ್ಯ ಮನುಷ್ಯರ ದುಗುಡ ದುಮ್ಮಾನಗಳು ಮುಖ್ಯ ಕೇಂದ್ರಗಳಾದವು. ತೇಜಸ್ವಿ ಯಾವುದು ಮುಖ್ಯವಾಗಿದೆಯೋ ಅದು ಅವರ ಸಮಕಾಲೀನ ಲೇಖಕರಿಗೆ ಮುಖ್ಯವಾಗಲಿಲ್ಲ. ಅವರ ಕಾದಂಬರಿಗಳಲ್ಲಿ ಅತ್ಯಂತ ಸುಖವಾದ: ಕನಸುಗಾರಿಕೆಯಲ್ಲಿ ಲೋಲುಪವಾದ ಜೀವಿಗಳು ಇಲ್ಲ. ಅದರ ಬದಲು ಅವರಲ್ಲಿ ಸಿಗುವುದು ಕಷ್ಟ ಜೀವಿಗಳು. ಜೀವನಕ್ಕಾಗಿ ಹೋರಾಡುವ ಮನುಷ್ಯರು. ಅದೇ ರೀತಿಯಲ್ಲಿ ತೇಜಸ್ವಿಯವರ ಮಾಯಾಲೋಕ ಕೂಡಾ ಅದೇ ರೀತಿಯಲ್ಲಿ ಇದೆ.

ತೇಜಸ್ವಿಯವರಿಗೆ ವಿಜ್ಞಾನದ ಬಗ್ಗೆ ಅವರಿಗೆ ಅಪರಿಮಿತವಾದ ಕುತೂಹಲವಿತ್ತು. ಅವರ ಕಾದಂಬರಿಗಳು ಇಂಥ ಪರಿಸರದಿಂದ ಹುಟ್ಟಿಕೊಂಡವು. ಹಾಗಾಗಿ ಅವರ ಮೊದಲ ಎರಡು ಕಾದಂಬರಿಗಳ ಹೊರತಾಗಿ ಉಳಿದವು ರಮ್ಯ ಕಥನದ ಅಥವಾ ಐತಿಹಾಸಿಕ ಕಥನದ ರೀತಿಯದಾಗಿರುವುದು ಸಾಧ್ಯವಿರಲಿಲ್ಲ. ತೇಜಸ್ವಿಯವರ ಜನಸಾಮಾನ್ಯರಿಗೆ ಪ್ರಿಯವಾಗಲು ಇದು ಕಾರಣವಾಗಿರಬಹುದು. ತೇಜಸ್ವಿಯವರ ಕರ್ವಾಲೋ ಕಾದಂಬರಿಯಲ್ಲಿ ಬರುವ ವಿವರವು ಹೀಗಿದೆ–

"ಪ್ಯಾರ ಕೊಬ್ಬರಿಎಣ್ಣೆ ಎಂದು ಅನುಮಾನಿಸಿದ್ದು ಸಾಧಾರವಾಗಿಯೇ ಇತ್ತು. ಒಳಗೆ ಏನೋ ಗಟ್ಟಿಯಾದ ಕೊಬ್ಬರಿ ಎಣ್ಣೆಯಂತೆ ಬೆಳ್ಳಗೆ ಕಾಣುತ್ತಿತ್ತು. ನಾನು ಚಿಂತೆಯಿಂದ ಯೋಚನೆ ಮಾಡುತ್ತಿರಬೇಕಾದರೆ ಪ್ಯಾರ "ನೋಡಿದ್ರಾ ನನ್ನೇ ಬಯ್ತಿದ್ರಲ್ಲಾ!" ಎಂದ. ಕಡ್ಡಿಯೊಂದನ್ನು ತೂತಿನ ಒಳಗೆ ಹಾಕಿ ತಿರುಗಿಸಿ ಎತ್ತಿದೆ. ಕೊಂಚ ಒದ್ದೆಯಾದ ಗಟ್ಟಿ ಸಕ್ಕರೆಯಂಥ ಪದಾರ್ಥ ಕಡ್ಡಿಗೆ ಮೆತ್ತಿಕೊಂಡು ಹೊರಬಂತು. ರುಚಿ ನೀಡಿದರೆ ಜೇನುತುಪ್ಪದ ಸವಿಯೇ! ಸಕ್ಕರೆಯನ್ನೇನಾದರೂ ಮಿಶ್ರಮಾಡಿ ಇದರೊಳಕ್ಕೆ ತುಂಬಿದರೋ ಎಂದು ಗುಮಾನಿ ಬಂತು. ಸುತ್ತ ನಿಂತಿದ್ದವರೆಲ್ಲರಿಗೂ ಕೊಂಚ ಕೊಟ್ಟೆ. ಎಲ್ಲಾ ಒಮ್ಮತದಿಂದ ಜೇನುತುಪ್ಪದ ಸವಿಯೇ ಎಂದು ಒಪ್ಪಿದರು. ಆದರೂ ಚಿನ್ನದ ಬಣ್ಣದ ಸ್ನಿಗ್ಧ ದ್ರವಪದಾರ್ಥವನ್ನು ನಿರೀಕ್ಷಿಸುತ್ತಿದ್ದ ನನಗೆ ಕೊಂಚ ಅಸಮಾಧಾನವಾಯ್ತು. ಗುತ್ತಿ ಕಡೆಯ ಅತ್ಯುತ್ತಮ ಜೇನೆಂದು ಇದನ್ನು ನನಗೆ ಕೊಟ್ಟನಲ್ಲಾ ಮಂದಣ್ಣ! ನಾಳೆ ಚಿಲ್ಲರೆ ಕೂಡ ಹೋದಾಗ ಸರಿಯಾಗಿ ದಬಾಯಿಸಬೇಕೆಂದು ಆಲೋಚಿಸಿದೆ." (ಕರ್ವಾಲೋ ಪುಟ. 10)

ಪೂರ್ಣಚಂದ್ರ ತೇಜಸ್ವಿಯವರ ಕಾದಂಬರಿ 'ಚಿದಂಬರರಹಸ್ಯ'ದಲ್ಲಿ ಅಂತರಧರ್ಮೀಯ ಪ್ರೇಮಿಗಳು ಒಟ್ಟಾಗುವುದನ್ನು ಹೊಸ ಸಮಾಜದ ಅಂದರೆ ಜಾತ್ಯಾತೀತ, ಧರ್ಮಾತೀತ ಸಮಾಜರಚನೆಯ ಆಶಯದ ಹಿನ್ನೆಲೆಯಲ್ಲಿ ಚಿತ್ರಿಸಿರುವುದನ್ನು ಗಮನಿಸಬೇಕು. ಕೆಸರೂರಿನ ಜಡಗಟ್ಟಿದ ಹಿಂದೂ ಮತ್ತು ಇಸ್ಲಾಂ ಧರ್ಮಗಳ ಮೂಲಭೂತವಾದಿಗಳು ಪರಸ್ಪರ ಸಹಜ ಪ್ರೇಮಿಗಳಾಗಿದ್ದ ರಫಿ ಮತ್ತು ಜಯಂತಿಯರನ್ನು ಬಲಿ ತೆಗೆದುಕೊಳ್ಳುವುದಕ್ಕೆ ಸಂಚುಹೂಡಿದ್ದರೂ, ಅದರಿಂದ ಪಾರಾಗುತ್ತಾರೆ. ಪ್ರಕೃತಿ ಮತ್ತು ಸಂಸ್ಕೃತಿ ನಾಶದಂಥ ಪಾಪ ಕಾರ್ಯಗಳಿಂದ ಇಡೀ ಕೆಸರೂರೇ ಲಂಟಾನದ ಹೊಗೆಯಿಂದ ಉಸಿರುಗಟ್ಟಿ ನಾಶವಾದರೂ, ಸಹಜ ಪ್ರೇಮಿಗಳಾದ, ಮಾನವೀಯತೆಯ ಪ್ರತಿ ರೂಪಗಳಾದ ರಫಿ ಮತ್ತು ಜಯಂತಿಯರು ಬದುಕುಳಿಯುತ್ತಾರೆ. ಬಾಳಸಂಗಾತಿಗಳಾಗುತ್ತಾರೆ. ಈ ರೀತಿಯ ಪ್ರಗತಿಪರ ಧೋರಣೆಯ ಆಶಯವನ್ನು ಹೆಣ್ಣು–ಗಂಡುತನ ಅಂತರಧರ್ಮೀಯ ಸಂಬಂಧದಲ್ಲಿ ಅರ್ಥಪೂರ್ಣವಾಗಿ ತೇಜಸ್ವಿ ಸೂಚಿಸುತ್ತಾರೆ. ಈ ಮೂಲಕ ಮೇಲು ಜಾತಿಯ ಹಾಗೂ ಧರ್ಮಗಳ ಸಾಂಪ್ರದಾಯಿಕ ಚಿಂತನೆಗಳನ್ನು ಒಡೆಯುವ ಪ್ರಕ್ರಿಯೆಯನ್ನು ಇಲ್ಲಿ ಕಾಣಬಹುದಾಗಿದೆ. ಮನುಷ್ಯ ಮತ್ತು ಅವನ ಅಸ್ತಿತ್ವವು ಹೇಗೆ ಭಾರತದಲ್ಲಿ ಜಾತಿಯಿಂದ ಪ್ರೇರಿತವಾಗಿದೆ ಎಂದು ತೇಜಸ್ವಿಯವರು ಇಲ್ಲಿ ಹೇಳಿದ್ದಾರೆ. ಅಂತರ್ ಜಾತಿಯ ವಿವಾಹವು ವ್ಯಕ್ತಿಯನ್ನು ಮತ್ತು ಅವನ ವಿಶಿಷ್ಟತೆಯನ್ನು ಬದಲಿಸುತ್ತದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಂತರ್ಜಾತೀಯ ವಿವಾಹವನ್ನು ಆದರ್ಶೀಕೃತ ಮೌಲ್ಯದಂತೆ ಗ್ರಹಿಸಲಾಗಿದೆ. ಅಂತರ್ಜಾತೀಯ ವಿವಾಹವು ಆಧುನಿಕ ಕನ್ನಡದ ಪ್ರಾತಿನಿಧಿಕ ಪ್ರತಿಕ್ರಿಯೆಯ ಪ್ರಕಾರ ಸಾಂಪ್ರದಾಯಿಕ ಸಮಾಜವನ್ನು ಪ್ರಶ್ನಿಸುವಂಥದ್ದು. ಆಧುನಿಕತೆಯಿಂದ ಪರಿವರ್ತನೆಗೊಳ್ಳುತ್ತಿರುವ ಸಮಾಜದಲ್ಲಿ ಆಧುನಿಕ ಕನ್ನಡ ಸಾಹಿತ್ಯ ಹುಟ್ಟಿಕೊಂಡಿದೆ. ಸಾಂಪ್ರದಾಯಿಕ ಮೀರಿದ ಸಾಮಾಜಿಕ

ಸನ್ನಿವೇಶವನ್ನು ಇಲ್ಲಿ ಕಾಣುತ್ತೇವೆ. ಸಮಾಜಕ್ಕೂ ಮತ್ತು ಆಧುನಿಕತೆಗೂ ಒಂದು ನಿರ್ದಿಷ್ಟ ರೂಪದ ಸಂಘರ್ಷವಿದೆ. ಅಧಿಕಾರದ ವ್ಯಾಖ್ಯಾನದಲ್ಲಿ ಈ ಸಂಘರ್ಷದ ನಿಲುವು ವ್ಯಕ್ತವಾಗುತ್ತದೆ. ಆಸ್ತಿ, ಕುಟುಂಬ, ಜಾತಿ ಪಾವಿತ್ರ್ಯ ಮುಂತಾದವುಗಳಲ್ಲಿ ನಿರ್ಣಾಯಕವಾದ ಸಂಬಂಧವಿದೆ. ಇವುಗಳ ನಡುವೆ ಕಂಡುಬರುವ ತಲ್ಲಣವನ್ನು ಆಧುನಿಕ ಕನ್ನಡದ ಕೆಲವೇ ಬರಹಗಾರರು ವಿವರಿಸುವ ಪ್ರಯತ್ನ ಮಾಡಿದ್ದಾರೆ.

ನವ್ಯದ ಉತ್ತುಂಗದ ದಿನಗಳಲ್ಲಿ (1966) ರಚನೆಗೊಂಡ 'ಸ್ವರೂಪ' ತೇಜಸ್ವಿಯವರ ಸಹಜ ಶೈಲಿಗಿಂತ ಸಾಕಷ್ಟು ಭಿನ್ನವಾದ ಕಿರು ಕಾದಂಬರಿ, ಕಥಾನಾಯಕ ಶ್ರೀನಿವಾಸನ ನೆನಪುಗಳ ಮೂಲಕ ಆತನ ಸಂಕೀರ್ಣ ಬದುಕಿನ ವಿವರಗಳು ದಾಖಲಾಗುತ್ತಾ ಹೋಗುವ ಕ್ರಿಯೆಯಲ್ಲಿ ಕಾದಂಬರಿ ಸಂರಚನೆಗೊಂಡಿದೆ. ತೀರಾ ಅಮುಖ್ಯವೆನ್ನುವ ರೀತಿಯಲ್ಲಿ ಶ್ರೀನಿವಾಸನ ಬದುಕಿನಲ್ಲಿ ಆಗಿ ಹೋದ ಪ್ರಣಯ ವೃತ್ತಾಂತವೊಂದು ಗಮನ ಸೆಳೆಯುತ್ತದೆ. ಗೆಳೆಯ ಹೇಮಂತನಿಗೆ ಶ್ರೀನಿವಾಸ ತನ್ನ ಗತಕಾಲದ ನೆನಪಿನ ಬುತ್ತಿಯನ್ನು ಬಿಚ್ಚುವ ವೇಳೆ ಆ ಘಟನೆಯನ್ನು ನೆನಪಿಸುತ್ತಾನೆ. ಈತ ಅನ್ಯ ಜಾತಿ ಹುಡುಗಿಯೊಬ್ಬಳನ್ನು ಪ್ರೀತಿಸಿ ಆಕೆಯನ್ನು ಮದುವೆಯಾಗಬೇಕೆಂದು ಮೂರು ವರ್ಷ ಕಾಯುತ್ತಾನೆ. ಆದರೆ ತನ್ನ ತಂದೆ ತಾಯಿಯರಿಗೆ ಹೆದರಿ ಅವಳನ್ನು ಕೊನೆಗೂ ಮದುವೆ ಆಗುವುದಿಲ್ಲ. ಇದು ಸ್ವರೂಪ ಕಾದಂಬರಿಯ ಪ್ರಮುಖ ಆಶಯವೂ ಹೌದು. ಸ್ವರೂಪ ಕಾದಂಬರಿಯು ಅಂತಿಮವಾಗಿ ಎತ್ತಿಕೊಳ್ಳುವುದು ಅಸ್ತಿತ್ವದ ಪ್ರಶ್ನೆಯನ್ನು ಇದು ಕಾದಂಬರಿಯಲ್ಲಿ ಶ್ರೀನಿವಾಸನ ಮುಖಾಂತರವೇ ವ್ಯಕ್ತವಾಗುತ್ತದೆ.

ಒಂದೊಮ್ಮೆ ಆ ಅನ್ಯಜಾತಿಯ (ಆಕೆಯ ಜಾತಿಯ ಉಲ್ಲೇಖವಿಲ್ಲ) ಹುಡುಗಿಯನ್ನು ಮದುವೆಯಾದರೆ ಎಲ್ಲಿ ಅಪ್ಪ, ಅಮ್ಮ ನಿನ್ನ ಪಾಡು ನಿನಗೆ ಎಂದರೆ ನಾಳೆಯಿಂದ ಅನ್ನಕ್ಕೆ ದುಡ್ಡೆಲ್ಲಿ ಎಂಬ ಹೆದರಿಕೆ. ಬದುಕಿನ ಅಸ್ತಿತ್ವದ ಪ್ರಶ್ನೆ ಶ್ರೀನಿವಾಸನನ್ನು ಕಾಡುತ್ತದೆ. ಹೀಗೆ ಆತ ಭ್ರಮನಿರಸನಗೊಂಡಂತೆ ಆ ಹುಡುಗಿ ಬೇರೊಬ್ಬನನ್ನು ವಿವಾಹವಾಗಿ ತನ್ನ ಬದುಕಿನ ದಾರಿ ನೋಡಿಕೊಳ್ಳುತ್ತಾಳೆ. ತನ್ನನ್ನು ಸುತ್ತುವರೆದಿರುವ ಜಾತೀಯ ವರ್ತುಲವನ್ನು ಮೀರಲಾರದ ಹೆದರಿಕೆ ಇಲ್ಲಿ ಶ್ರೀನಿವಾಸನನ್ನು ಆವರಿಸಿದೆ. ಅಸ್ತಿತ್ವದ ಹುಡುಕಾಟ, ಏಕಾಕಿತನ, ಕೆಲವೊಮ್ಮೆ ಸ್ವಯಂ ಕಲ್ಪಿಸಿಕೊಳ್ಳುವ ಅಮೂರ್ತ ಬದುಕು, ಆರ್ಥಿಕ ಅಭದ್ರತೆಯ ಪ್ರಶ್ನೆಗಳು ಶ್ರೀನಿವಾಸನನ್ನು ತಟ್ಟನೆ ಕಾಡುವುದರಿಂದ ತಾನು ಪ್ರೀತಿಸುವ ಹುಡುಗಿಯನ್ನು ಜಾತೀಯ ಕಾರಣಗಳಿಗಾಗಿ ತೊರೆಯುವ ಪಲಾಯನವಾದಿಯಾಗಿ ಆತ ಚಿತ್ರಿತಗೊಂಡಿದ್ದಾನೆ. ಲಂಕೇಶರ ಬಿರುಕು ಕಾದಂಬರಿಯು ಒಂದು ಅರ್ಥದಲ್ಲಿ ಪಲಾಯನ ವಾದವನ್ನು ಸೂಚಿಸಿದರೆ ತೇಜಸ್ವಿಯವರ 'ಸ್ವರೂಪ' ಕಾದಂಬರಿಯು ಜೀವನದ ಆಂತರಿಕವಾದ ತಲ್ಲಣಗಳನ್ನು ಸೂಚಿಸುತ್ತದೆ. ಇದು ತೇಜಸ್ವಿಯವರ ಬರಹದ ಮೊದಲ ಹಂತವೂ ಹೌದು ಎಂಬುದಿಲ್ಲಿ ಗಮನಾರ್ಹ.

ತೇಜಸ್ವಿಯವರ ಕರ್ವಾಲೋ ಕಾದಂಬರಿಯ ಉದ್ದೇಶ. ಈ ಕುರಿತು ಟಿ.ಪಿ. ಅಶೋಕರು ಹೀಗೆ ಹೇಳುತ್ತಾರೆ.

'ಕರ್ವಾಲೋ' ಬದುಕಿನ ವಿಸ್ಮಯವನ್ನು ಕುರಿತ ಕಾದಂಬರಿಯಾಗಿದೆ. ಮನುಷ್ಯ–ಪ್ರಕೃತಿ, ಮನುಷ್ಯ–ಸಮಾಜ, ಮನುಷ್ಯ–ಮನುಷ್ಯರ ಸಂಬಂಧಗಳ ಸಂಕೀರ್ಣತೆಯಲ್ಲಿ, ಅವುಗಳನ್ನು ಕೇವಲ ಬೌದ್ಧಿಕವಾಗಿ ಅರ್ಥೈಸಿಕೊಳ್ಳಲಾಗದ ಅನಿವಾರ್ಯತೆಯಲ್ಲಿ, ಬುದ್ಧಿಯನ್ನು ಮೀರಿದ ನಿಗೂಢತೆಯಲ್ಲಿ ಬದುಕು ನಮ್ಮೆಲ್ಲ ವಿಶ್ಲೇಷಣೆಗಳನ್ನೂ ಮೀರಿ ನಿಲ್ಲುತ್ತದೆ. ವಿಶ್ಲೇಷಿಸುತ್ತಾ ಹೋದಂತೆ ಹೆಚ್ಚು ಹೆಚ್ಚು ಜಟಿಲವಾಗುತ್ತ ಹೋಗುತ್ತದೆ. ಬದುಕಿನ ವಿಸ್ಮಯಕ್ಕೂ ಬದುಕನ್ನು ಕುರಿತು ನಮ್ಮ ಅವಜ್ಞೆಗೂ ಇರುವ ವ್ಯತ್ಯಾಸ ಎಷ್ಟು ಸೂಕ್ಷ್ಮವಾದದ್ದೆಂದರೆ ಒಂದನ್ನು ಇನ್ನೊಂದನ್ನಾಗಿ ಪರಿಭಾವಿಸುವ ತಪ್ಪನ್ನು ನಾವು ಮಾಡುತ್ತಲೇ ಇರುತ್ತೇವೆ. ಬದುಕಿನ ನಿಗೂಢತೆ ನಮ್ಮಲ್ಲಿ ಇತ್ಯಾತ್ಮಕವಾದ ಕುತೂಹಲವನ್ನಾಗಲೀ, ನೇತ್ಯಾತ್ಮಕ ಸಿನಿಕತನವನ್ನಾಗಲೀ ಬೆಳಸಬಹುದು. ಹಾಗಾಗಿ ಬದುಕನ್ನು ವೈಚಾರಿಕವಾಗಿ ವಿಶ್ಲೇಷಿಸುವ ಪ್ರಕ್ತಿಯೆಯಲ್ಲೇ ತನ್ನ ವಿಶ್ಲೇಷಣೆಗಳ ತೆಕ್ಕೆಗೆ ದಕ್ಕದೆ ಉಳಿದುಬಿಡುವ ಅಂಶಗಳ ಬಗ್ಗೆಯೂ ಕುತೂಹಲವನ್ನು ಕಾಯ್ದುಕೊಳ್ಳುವ ಕಲಾವಿದ ಮಾತ್ರ ಬದುಕಿನ ಸಮಗ್ರತೆಯ ಬಗ್ಗೆ ಯಾವತ್ತೂ ಎಚ್ಚರವನ್ನು ಕಾಯ್ದುಕೊಳ್ಳಲು ಸಾಧ್ಯ. ಅಲ್ಲದೆ ಬದುಕು ಗತಿಶೀಲವಾದದ್ದರಿಂದ ಎಲ್ಲ ಬದಲಾವಣೆಗಳಿಗೂ ಅರ್ಥಪೂರ್ಣವಾಗಿ ಸ್ಪಂದಿಸುತ್ತಲೇ ಬದುಕಿನ ಮೂಲಭೂತ ಅಂಶಗಳ ಬಗ್ಗೆ ಅವನು ಚಿಂತನಶೀಲನಾಗಿರುಬೇಕಾಗಿರುತ್ತದೆ. (ನೋಡಿ: ತೇಜಸ್ವಿ ಕಥನ, ಪುಟ. 70)

ಜುಗಾರಿಕ್ರಾಸ್‌ನಲ್ಲಿ ಒಂದು ವ್ಯಂಗ್ಯದ ಧಾಟಿಯನ್ನು ಇಲ್ಲಿ ಉಲ್ಲೇಖಿಸಬಹುದು.

"ಸರ್ವ ಚರಾಚರ ವಸ್ತುವಿನಲ್ಲಿಯೂ ಇರುವ ಸರ್ವಾಂತರ್ಯಾಮಿಯಾದ, ಸರ್ವಗುಣ ಸಂಪನ್ನ, ಸರ್ವಶಕ್ತ ಆ ಬಾಸ್‌ಗೆ ಗೊತ್ತಾದರೆ!

ಇವರೆಲ್ಲರ ಮಾತಿನ ಅಂತಿಮ ವ್ಯಕ್ತಿ ಅಥವಾ ಶಕ್ತಿ ಅಥವಾ ಅಮೂರ್ತ ಮೂರ್ತಿ ಯಾರಿರಬಹುದು? ಯಾರಾದರೂ ಆಗಿರಲಿ! ಎಲ್ಲರ ಎಲ್ಲ ದೇವರೂ ಒಂದೇ ಅಲ್ಲವೆ? ಸಾವರೋ ಬ್ರಾಹ್ಮಣರೋ ಲಿಂಗಾಯ್ತರೋ ಒಕ್ಕಲಿಗರೋ ಕಳ್ಳರೋ ಖದೀಮರೋ ಎಲ್ಲರ ಬಾಸ್ ಕೊನೆಗೆ ಒಬ್ಬನೇ. ಎಲ್ಲ ಧರ್ಮಗಳೂ ಸೇರುವುದು ಕೊನೆಯ ಒಂದೇ ಬಾಸ್ ಹತ್ತಿರ. ಯಾರು ಕೊಲೆ ಖೂನಿ ದಾನ ಧರ್ಮ ಇತ್ಯಾದಿ ಯಾವ ಕಾರ್ಯಕ್ಕೂ ಯಾರಿಗೂ ಸಮಜಾಯಿಷಿ ಕೊಡಬೇಕಾಗಿಲ್ಲವೋ ಅವನೇ ಆ ಬಾಸ್! ಅವನ ಪ್ರೀತ್ಯರ್ಥ ಕೆಲವರು ಉರುಳು ಸೇವೆ, ಕೆಲವರು ಕೊರಳು ಸೇವೆ, ಕೆಲವರು ರಕ್ತಬಲಿ, ಕೆಲವರು ನರಬಲಿ ಹೀಗೇ ನೂರೆಂಟು ತರದ ನೈವೇದ್ಯ ನೀಡಬಹುದು. ಎಲ್ಲಾ ಅವರವರ ನಂಬಿಕೆ ನಿಷ್ಠೆ, ಅಷ್ಟೆ! ನಂಬಿಕೆ ಬಾಸ್‌ಗಿಂತ ಮುಖ್ಯ. ಏಕೆಂದರೆ ನಂಬಿಕೆ ಬಾಸ್‌ನ ಸೃಷ್ಟಿಸುತ್ತದೆ, ರೂಪಿಸುತ್ತದೆ'. (ತೇಜಸ್ವಿಕಥನ, ಪುಟ. 97)

ಒಮ್ಮೆ ಪರಿಸರ: ಮತ್ತೊಮ್ಮೆ ವಿಜ್ಞಾನ; ಇನ್ನೊಮ್ಮೆ ಕಾದಂಬರಿ – ಹೀಗೆ ತೇಜಸ್ವಿ ಬರೆಯುತ್ತಾ ಹೋದರು. ಅವರ ವೈಜ್ಞಾನಿಕ ವಿಚಾರಧಾರೆಗೂ, 'ಮಾಯೋಲೋಕ'–1 ಕಾದಂಬರಿಯಲ್ಲಿ ಬರುವ ಮಾರುಕಟ್ಟೆಗೂ ಯಾವುದೇ ಸಂಬಂಧವಿಲ್ಲ. ತೇಜಸ್ವಿ ಕೆಲವೆಡೆ ವಿಜ್ಞಾನವನ್ನು ತರುವುದಿಲ್ಲ ಮತ್ತು ವಿಜ್ಞಾನದ ಬರಹಗಳಲ್ಲಿ ಕಥನವನ್ನು ತರುವುದಿಲ್ಲ. ತೇಜಸ್ವಿ ಬರಹಗಳ ಹಿಂದಿರುವ ವಿಸ್ಮಯವು ಕೂಡಾ ಇದೆ. ಕೆಲವು ಕಾದಂಬರಿಗಳಲ್ಲಿ ಸ್ವಾತಂತ್ರ್ಯದ ಅನಂತರದ ಸಾಮಾಜಿಕ ಸಂಗತಿಗಳ ನಿರೂಪಣೆಗಳು ಇಬ್ಬರಿಗೂ ಮುಖ್ಯವಾಗಿವೆ. ವಸಾಹತೋತ್ತರ ಸಂದರ್ಭದ ಪ್ರಕ್ರಿಯೆಗಳು ಅವರ ಬರಹಗಳಲ್ಲಿ ಎದ್ದು ಕಾಣುತ್ತದೆ. ಯಾವ ಸಂಪರ್ಕವೂ ಇಲ್ಲದ ಸಾಮಾಜಿಕ ಸ್ಥಿತಿಯಿಂದ ಪ್ರಾರಂಭಿಸಿ, ಜಗತ್ತಿನ ಕೇಂದ್ರದ ಜೊತೆಗೆ ಅನುಸಂಧಾನ ಮಾಡುವ ಹಾಗೂ ಬಿಡುಗಡೆ ಹೊಂದುವವರೆಗೆ ಬೇರೆ ಬೇರೆ ಕಾದಂಬರಿಗಳನ್ನು ತೇಜಸ್ವಿ ಬರೆದಿದ್ದಾರೆ. ಉದಾಹರಣೆಗೆ ಮಾಯಾಲೋಕ ಕಾದಂಬರಿಯಲ್ಲಿ ಜಗತ್ತು ಇಲ್ಲ. ಸ್ವಾತಂತ್ರ್ಯದ ಅನಂತರದ ಭಾರತದಲ್ಲಿ ಸಂವಿಧಾನವು ಬಂದಾಗ ಅದರ ಎದುರು ಕೂಡಾ ಇದ್ದ ಪ್ರಶ್ನೆಗಳು ಇದುವೆ; ಅದು ಜಮೀನುದಾರಿ ಪದ್ಧತಿಯ ವಿನಾಶ ಹಾಗೂ ಆಸ್ತಿಯ ಹಕ್ಕು. ತೇಜಸ್ವಿಯವರು ಮಂಡಿಸುವ ಚಿಕ್ಕಮಗಳೂರು ಪ್ರಾದೇಶಿಕ ವಿವರ ಜಿಲ್ಲೆಯ ಒಳನಾಡಿಗೆ ಸಂಬಂಧಿಸಿದ್ದು. ಪ್ರಾದೇಶಿಕವಾಗಿಯೂ ಯಜಮಾನಿಕೆಯ ರೂಪಗಳು ಬೇರೆ. ಹಾಗೆಯೇ ಊಳಿಗದ ರೂಪಗಳು ಬೇರೆ. ಭೂಮಿಯೆನ್ನುವುದು ಸಂಪತ್ತಿನ ದ್ಯೋತಕವಾಗಿದೆ. ಚಾರಿತ್ರಿಕವಾಗಿ ವಸಾಹತುಶಾಹಿ ಕಾಲಘಟ್ಟದಲ್ಲಿ ಭೂ ಯಜಮಾನಿಕೆಯ ಚಹರೆಗಳು; ಅದರ ಕಾನೂನುಗಳು ಬದಲಾದವು. ತೇಜಸ್ವಿಯವರ ಕಾದಂಬರಿಗಳಲ್ಲಿ ಕಾಡಿನೊಂದಿಗಿನ ಮುಖಾಮುಖಿ ಗಮನಾರ್ಹ. ಅವರ ಕಾಡು ಮತ್ತು ಕೌರ್ಯ ಕಾದಂಬರಿಯಲ್ಲಿ ಈ ವಿವರವು ಮಂಡಿತವಾಗಿದೆ.

ಸ್ವಾತಂತ್ರ್ಯದ ಅನಂತರದ ಸಾಮಾಜಿಕ ಸ್ಥಿತ್ಯಂತರದ ಕುರಿತು ತನ್ನ ವಿಚಾರಗಳನ್ನು ಅವರ ಕಾದಂಬರಿಗಳು ಮಂಡಿಸುತ್ತದೆ. ಈ ಮಾತುಗಳನ್ನು ಹೇಳಲು ಕಾರಣವಿಷ್ಟೆ; ಅವರ ಕಾದಂಬರಿಗಳಲ್ಲಿ ಆಂತರಿಕ ತರ್ಕದ ವೈವಿಧ್ಯತೆಯಿದೆ. ವಿವಿಧ ಆಶಯಗಳಿವೆ; ಆಕೃತಿಗಳಿವೆ. ತೇಜಸ್ವಿಯವರ ಚಿದಂಬರ ರಹಸ್ಯದಲ್ಲಿ ಒಂದು ಜೀವನವನ್ನು ಅವರು ವಿವರಿಸಿದ್ದಾರೆ. ಕರ್ವಾಲೋ ಕಾದಂಬರಿಯಲ್ಲಿ ಅವರು ಮತ್ತೊಂದು ಬಗೆಯ ಜೀವನವನ್ನು ಮಂಡಿಸುತ್ತಾರೆ.

ತೇಜಸ್ವಿ ಕಾದಂಬರಿಗಳ ಜಗತ್ತು ಸಾಮಾನ್ಯರದ್ದು. ತೇಜಸ್ವಿ ಪೌರಾಣಿಕ ಹಾಗೂ ಸಂಸ್ಕೃತದ ಪರಂಪರೆಯಲ್ಲಿ ಬಂದಿರುವ ಸಂಗತಿಗಳನ್ನು ಕಾದಂಬರಿಗೊಳಿಸಿಲ್ಲ. ಸಾಮಾನ್ಯ ಮನುಷ್ಯರ ಸಾಮಾನ್ಯ ವಿವರಗಳನ್ನು ಅವರು ಕಾದಂಬರಿಯಲ್ಲಿ ಹೇಳಿರುವುದುರಿಂದಲೇ ಅವರ ಕಾದಂಬರಿಯಲ್ಲಿ ಬರುವ ಮನುಷ್ಯರಿಗೆ ಅತಿಮಾನುಷ ಗುಣವಿಲ್ಲ. ಈ ದೃಷ್ಟಿಯಿಂದ ತೇಜಸ್ವಿ ದೇವುಡು, ಗಳಗನಾಥರ ಹತ್ತಿರವಿಲ್ಲ. ವಸಾಹತುಶಾಹಿ ಜಗತ್ತು ನಮ್ಮ ಸಾಮಾನ್ಯರ ಜೀವನಕ್ರಮಕ್ಕೆ ವಿಶೇಷ ಅರ್ಥವನ್ನು

ಕಲ್ಪಿಸಿತು. ಇಬ್ಬರೂ ಜನಸಾಮಾನ್ಯರ ಕುರಿತೇ ಬರೆಯುತ್ತಲೇ ಜೀವನ ಕ್ರಮದ ಪಲ್ಲಟಗಳನ್ನು ಸೂಚಿಸುತ್ತಾರೆ. ತೇಜಸ್ವಿ ಕಾದಂಬರಿಗಳು ಸಾಮಾನ್ಯ ಮನುಷ್ಯರ ಜೀವನ ಕ್ರಮದ ಬಗ್ಗೆ ಒಂದು ನಿರ್ದಿಪ್ತ ದೃಷ್ಟಿಕೋನ ಇಟ್ಟುಕೊಂಡಿದೆ. ಸಾಮಾನ್ಯರ ಜೀವನವೆಂದು ಯಾವುದನ್ನು ಗುರುತಿಸುತ್ತೇವೋ ಅದಕ್ಕೆ ಸಾಂಪ್ರದಾಯಿಕ ಚರಿತ್ರೆಯಲ್ಲಿ ಜಾಗವಿಲ್ಲ. ತೇಜಸ್ವಿ ಕಾದಂಬರಿಗಳು ಒಂದು ಸಾಮಾಜಿಕ ಪಠ್ಯವಾಗಿ ಮುಖ್ಯವಾಗುವುದು ಕೂಡಾ ಇದೇ ಕಾರಣಕ್ಕೆ. ಗಮನಾರ್ಹ ಸಂಗತಿಯೆಂದರೆ ಅವರ ಕಾದಂಬರಿಯಲ್ಲಿ ಬರುವ ಸಾಮಾನ್ಯ ಮನುಷ್ಯರಿಗೆ ಲೋಕ ಜ್ಞಾನವು ತುಂಬಾ ಚೆನ್ನಾಗಿದೆ. ಇದನ್ನು ಹೀಗೆಯೂ ಹೇಳಬಹುದು ಅವರ ಕಾದಂಬರಿಯಲ್ಲಿ ಬರುವ ಸಾಮಾನ್ಯರ ಚಿತ್ರಣವು ಒಂದು ಬಗೆಯಲ್ಲಿದ್ದರೆ ಓದಿದವರ ಚಿತ್ರಣವು ಮತ್ತೊಂದು ಬಗೆಯಲ್ಲಿದೆ.

ಅವರ ಕಾದಂಬರಿಗಳು ಎರಡು ದಾರಿಗಳನ್ನು ಒಳಗೊಂಡಿವೆ: ಒಂದು ನಿಜವಾದ ಜೀವನ ಕ್ರಮದ ಸತ್ಯಗಳೇನು ಎಂಬುದರ ಹುಡುಕಾಟ. ಎರಡನೆಯದಾಗಿ ಕಾದಂಬರಿಗಳಲ್ಲಿ ಬರುವ ಸಾಮಾಜಿಕ ಪ್ರದೇಶಗಳ ವ್ಯಾಖ್ಯಾನ ಹಾಗೂ ಅದರ ಹಿಂದಿರುವ ಬೇರೆ ಬೇರೆ ಒತ್ತಡಗಳು. ತೇಜಸ್ವಿ ಕಾದಂಬರಿಗಳಲ್ಲಿ ಬರುವ ಸಾಮಾಜಿಕ ಪ್ರದೇಶಗಳು ಮತ್ತು ಅವುಗಳ ನಡೆನುಡಿಗಳು ಒಂದೇ ಬಗೆಯವು ಅಲ್ಲ. ತೇಜಸ್ವಿ ಕಾದಂಬರಿಗಳಲ್ಲಿ ಕೆಲವು ಪ್ರದೇಶಗಳು ಪ್ರಮುಖವಾಗಿ ಎದ್ದುಕಾಣುತ್ತವೆ: ಒಂದು ಮೂಡಿಗೆರೆ ಸೀಮೆಯ ಸುತ್ತುಮುತ್ತಲಿನ ಪ್ರದೇಶ. ಇನ್ನೊಂದು ಮಲೆನಾಡಿನ ಕಾಡು ಸುತ್ತಮುತ್ತಲಿನ ಪ್ರದೇಶ. ಹಾಗೂ ಮೂರನೆಯದಾಗಿ ಈ ಯಾವುದಕ್ಕೆ ಸಂಬಂಧವಿಲ್ಲದ ವೈಜ್ಞಾನಿಕ ಜಗತ್ತು ವಾಸ್ತವವಾಗಿ ಮೂಡಿಗೆರೆ ಸೀಮೆಯಲ್ಲಿ ಬೇರೆ ಬೇರೆ ಜಾತಿಯವರು ಇದ್ದಾರೆ. ತೇಜಸ್ವಿ ಕಾದಂಬರಿಗಳಲ್ಲಿ ಬರುವ ಹಿಂದುಳಿದ ಜಾತಿಗಳ ಕೂಲಿ ಕಾರ್ಮಿಕ ವರ್ಗಕ್ಕೆ ಸೇರಿದವರು. ತೇಜಸ್ವಿ ಕಾದಂಬರಿಗಳಲ್ಲಿ ಬರುವ ಮೂಡುಗೆರೆ ಸೀಮೆಯ ಕತೆಗಳಿಗೆ ಕೇಂದ್ರವಿರುವುದು. ಬೇರೆ ಬೇರೆ ಜಾತಿಗಳಲ್ಲಿ ತೇಜಸ್ವಿ ಕಾದಂಬರಿಗಳಲ್ಲಿ ಬರುವ ಸಾಮಾಜಿಕ ಪ್ರದೇಶಗಳಲ್ಲಿ ಕಾಡನ್ನು ಮಣಿಸುವ; ನಿಸರ್ಗದೊಂದಿಗೆ ಸೆಣಸಾಡುವ ಸಂಗತಿಗಳಿವೆ. ಮನುಷ್ಯ ಮತ್ತು ನಿಸರ್ಗದ ಸಂಬಂಧವು ತುಂಬಾ ಸಂಕೀರ್ಣವಾಗಿದೆ. ಕಾದಂಬರಿಯ ರಚನಾಕ್ರಮಕ್ಕೂ ಅದರ ವಸ್ತುವಿಗೂ ಇರುವ ಸಂಬಂಧವು ಗಮನಾರ್ಹವಾಗಿದೆ.

ಇದಕ್ಕಿಂತ ಕುತೂಹಲವೆಂದರೆ ಕಾದಂಬರಿಗಳ ಬಗ್ಗೆ ಬಂದ ತೇಜಸ್ವಿಯವರದು ಸೃಜನಶೀಲ ಪ್ರತಿಕ್ರಿಯೆ. ಕಾದಂಬರಿಗೆ ಸೃಜನಾತ್ಮಕ ಪ್ರತಿಕ್ರಿಯೆಯನ್ನು ನೀಡಿದ ತೇಜಸ್ವಿಯವರು ಕಾದಂಬರಿಯ ಮೂಲಕವಾಗಿ ಅದಕ್ಕೊಂದು ರೂಪವನ್ನು ನೀಡಿದ್ದಾರೆ. ತೇಜಸ್ವಿಯವರು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ: ಕಾರಂತರ ಜೀವನ ದರ್ಶನ ತನ್ನ ಮೇಲೆ ಪ್ರಭಾವ ಬೀರಿದೆಯೆಂದು. ಕಾರಂತರಂತೆ ತೇಜಸ್ವಿಯವರು ಕೂಡಾ ಜೀವನವನ್ನು ವಿಶಿಷ್ಟವಾಗಿ ರೂಪಿಸಿಕೊಂಡಿರುವುದು ಗಮನಾರ್ಹ.

ಪರಾಮರ್ಶನ ಗ್ರಂಥಗಳು

1. ಕೇಶವ ಶರ್ಮ. ಕೆ 2015 ಮಾರ್ಕ್ಸ್‌ವಾದಿ ಮೀಮಾಂಸೆ ಪುಟ. 323 (ಗೀತಾಂಜಲಿ ಪ್ರಕಾಶನ ಶಿವಮೊಗ್ಗ).

2. ಕನ್ನಡ ಕಥನ ಸಾಹಿತ್ಯ: ಕಾದಂಬರಿ. ಜಿ.ಎಸ್. ಆಮೂರ. ಪುಟ. 328.

3. ತೇಜಸ್ವಿ, ಹೊಸ ವಿಚಾರಗಳು.

4. ತೇಜಸ್ವಿ, 2008 ಅಲಕ್ಷ್ಯ ಮತ್ತು ಸಂಸ್ಕೃತಿ ಸ್ಥಿತಿ.

5. ಟಿ.ಪಿ. ಅಶೋಕ, ತೇಜಸ್ವಿ ಕಥನ.

ಯಶೋಧರ ಚರಿತೆಯಲ್ಲಿ ಮನೋವಿಜ್ಞಾನ

ಅರುಣ ಎಸ್.

ಸಹಾಯಕ ಪ್ರಾಧ್ಯಾಪಕರು

ಎಂ.ಇ.ಎಸ್. ಐ.ಓ.ಎಂ, ಬೆಂಗಳೂರು

ವ್ಯಕ್ತಿಯೊಬ್ಬನ ಕಲಾತ್ಮಕ ಅಭಿವ್ಯಕ್ತಿಯೇ ಸಾಹಿತ್ಯ. ಮನೋವಿಜ್ಞಾನ ಮತ್ತು ಸಾಹಿತ್ಯ ಒಟ್ಟಾರೆಯಾಗಿ ಮಾನವನ ಭಾವನೆಗಳು, ಆಲೋಚನೆಗಳು ಮತ್ತು ನಡವಳಿಕೆಗಳನ್ನು ಅಧ್ಯಯನ ಮಾಡುತ್ತವೆ. ಮನೋವಿಜ್ಞಾನವು ಸಾಹಿತ್ಯದಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಇದು ಬರಹಗಾರ ಮತ್ತು ಓದುಗರ ನಡುವೆ ಬಲವಾದ ಸಂಪರ್ಕವನ್ನು ಉಂಟು ಮಾಡುತ್ತದೆ. ಸಾಹಿತ್ಯದ ರಚನೆಗಳು ಸಂಕೀರ್ಣವಾದ ಸೃಜನಾತ್ಮಕವಾದ ಪ್ರಕ್ರಿಯೆಯಾಗಿರುತ್ತವೆ. ಸಾಹಿತ್ಯ ಮತ್ತು ಮನೋವಿಜ್ಞಾನ ಇವೆರಡೂ ಪರಸ್ಪರ ಸಂಬಂಧವಿರುವ ಶಿಸ್ತುಗಳಾಗಿವೆ.

ಸಾಹಿತ್ಯವು ಮಾನವನ ಭೌತಿಕ, ಮಾನಸಿಕ, ಆಧ್ಯಾತ್ಮಿಕ ಬದುಕಿನ ಇನ್ನಾವುದೇ ಆಯಾಮಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಬರಹಗಾರ ತನ್ನ ಆಂತರಿಕ ಅನುಭವಗಳನ್ನು, ನೋವು–ನಲಿವುಗಳನ್ನು ತನ್ನ ಸಹಜೀವಿಯೊಂದಿಗೆ ಹಂಚಿಕೊಳ್ಳುವ ಒಂದು ಕಲಾ ಪ್ರಕಾರವೇ ಸಾಹಿತ್ಯ. ಹಾಗಾಗಿ ಸಾಹಿತ್ಯ ಒಂದು ಮಾನಸಿಕ ವ್ಯಾಪಾರವೆಂಬುದಂತೂ ನಿಜ. ಈ ಮಾನಸಿಕ ವ್ಯಾಪಾರದಿಂದ ಸಾಹಿತ್ಯಕ್ಕೂ ಮತ್ತು ಮನಃಶಾಸ್ತ್ರಕ್ಕೂ ನಿಕಟವಾದ ಸಂಬಂಧವಿದೆ.

ಮನಃಶಾಸ್ತ್ರವು ಮನುಷ್ಯನ ನಡವಳಿಕೆ, ವರ್ತನೆ, ಅನುಭವ ಮುಂತಾದವುಗಳನ್ನು ಅಧ್ಯಯನ ಮಾಡುತ್ತದೆ. ಸಾಹಿತ್ಯ ಒಂದರ್ಥದಲ್ಲಿ ಮನುಷ್ಯನ ವರ್ತನೆಗಳ ನಿರೂಪಣೆಯಾಗಿರುತ್ತದೆ. ಆದ್ದರಿಂದ ಸಾಹಿತ್ಯದ ವೈಜ್ಞಾನಿಕ ಅಧ್ಯಯನವು ಮನೋವಿಜ್ಞಾನದ ವ್ಯಾಪ್ತಿಗೆ ಒಳಪಟ್ಟಿದೆ. ಮನೋವಿಜ್ಞಾನವು ಇಂಗ್ಲೀಷಿನ 'ಸೈಕಾಲಜಿ' ಎಂಬ ಅರ್ಥವಿದ್ದು, ಈ ಪದವು ಗ್ರೀಕ್ ಭಾಷೆಯ 'ಸೈಕಿ' ಮತ್ತು 'ಲಾಗಾಸ್' ಎಂಬ ಎರಡು ಮೂಲ ಪದಗಳಿಂದ ವ್ಯುತ್ಪನ್ನವಾಗಿದೆ. 'ಸೈಕಿ' ಎಂದರೆ 'ಆತ್ಮ' , 'ಲಾಗಾಸ್' ಎಂದರೆ 'ವಿಜ್ಞಾನ'. ಪೂರ್ವಕಾಲದಲ್ಲಿ ಗ್ರೀಕ್ ದೇಶದಲ್ಲಿ ಆತ್ಮವನ್ನು ಕುರಿತು ನಡೆಸುತ್ತಿದ್ದ ವಿಚಾರಣೆಗೆ 'ಸೈಕಾಲಜಿ–ಆತ್ಮವಿಜ್ಞಾನ' ಎಂದು ಹೆಸರಿದ್ದಿತು.

ಮನೋವಿಜ್ಞಾನವನ್ನು ಮೊದಲು 'ಆತ್ಮದ ಕುರಿತ ಜ್ಞಾನ' ಎಂದು ಹೇಳಲಾಗಿತ್ತು. ನಂತರ ಮನಸ್ಸಿನ ಅಧ್ಯಾಯವೆಂದು ಪರಿಗಣಿಸಿ, ಅದೂ ಸಹ ಆತ್ಮವಿಚಾರದ ಹಾದಿಯನ್ನೇ ತುಳಿಯಿತು. ನಂತರ ಪ್ರಸಿದ್ಧ ಮನೋವಿಜ್ಞಾನಿಯಾದ ವುಂಡ್ಟ್ (wundt) ಮನೋವಿಜ್ಞಾನವನ್ನು ಪ್ರಜ್ಞೆಯ ಅಧ್ಯಾಯವೆಂದು ಪರಿಭಾಷಿಸಿದ. ಅವನ ಪ್ರಕಾರ ಈ ಪ್ರಜ್ಞೆಯು ವ್ಯಕ್ತಿಯ ಎಲ್ಲಾ ಪ್ರಜ್ಞಾಪೂರ್ಣ ಮಾನಸಿಕ ಪ್ರಕ್ರಿಯೆಗಳನ್ನು ಒಳಗೊಳ್ಳುತ್ತದೆ. 'ವುಡ್‌ವರ್ತ್' ಎಂಬ ಮನೋವಿಜ್ಞಾನಿಯು ಮನೋವಿಜ್ಞಾನದ ಸ್ವರೂಪದ ಬಗ್ಗೆ ಹೀಗೆ ಹೇಳಿದ್ದಾನೆ. "ಮೊದಲು ಮನೋವಿಜ್ಞಾನವು ತನ್ನ ಆತ್ಮವನ್ನು ಕಳೆದುಕೊಂಡಿತು. ಅನಂತರ ತನ್ನ ಮನಸ್ಸನ್ನು ಕಳೆದುಕೊಂಡಿತು. ನಂತರ ಅದು ತನ್ನ ಪ್ರಜ್ಞೆಯನ್ನು ಕಳೆದುಕೊಂಡಿತು. ಆದರೆ ಅದು ಇನ್ನೂ ಒಂದು ಬಗೆಯ ವರ್ತನೆಯನ್ನು ಉಳಿಸಿಕೊಂಡಿದೆ".

ಮನೋವಿಜ್ಞಾನದ ಪಿತಾಮಹರಾದ ಸಿಗ್ಮಂಡ್‌ಫ್ರಾಯ್ಡ್ 'ಸೈಕೋ ಅನಾಲಿಸಿಸ್' (ಮನೋವಿಶ್ಲೇಷಣಾ)ಸಿದ್ಧಾಂತವನ್ನು ಪ್ರತಿಪಾದಿಸಿದರು. ಇವರ 'ಸೈಕೋ ಅನಾಲಿಸಿಸ್' (ಮನೋವಿಶ್ಲೇಷಣಾ) ಸಿದ್ಧಾಂತ ಇಪ್ಪತ್ತನೆಯ ಶತಮಾನದ ಅತ್ಯಂತ ಕ್ರಾಂತಿಕಾರಿ ಶೋಧವೆನಿಸಿದ್ದು,ಇದು ಮನುಷ್ಯನ ವ್ಯಕ್ತಿತ್ವವನ್ನು ಮನಸ್ಸನ್ನು ಅರ್ಥಮಾಡಿಕೊಳ್ಳುವ ಕ್ರಮವಾಗಿದ್ದು 'ಸುಪ್ತ ಮನಸ್ಸಿನ ಆಳವನ್ನು ಬಗೆದು ನೋಡುವ ವೈಜ್ಞಾನಿಕ ವಿಧಾನ'ವಾಗಿದೆ.

ಸಿಗ್ಮಂಡ್ ಫ್ರಾಯ್ಡ್ ಸಾಹಿತ್ಯವನ್ನು ಕುರಿತು ವಿಶಿಷ್ಟ ರೀತಿಯಲ್ಲಿ ಆಲೋಚಿಸಿದ ಮನೋವಿಜ್ಞಾನಿಗಳಲ್ಲಿ ಮೊದಲಿಗರಿದ್ದಾರೆ. ಅವರು ಸಾಹಿತ್ಯವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲು ಎರಡು ಪ್ರಮುಖ ಕಾರಣಗಳಿವೆ. ಮೊದಲನೆಯದು ಅವನೊಬ್ಬ 'ಸಾಹಿತ್ಯಪ್ರೇಮಿ'. ಎರಡನೆಯದು ಸಾಹಿತಿಗಳನ್ನು 'ಅನಧಿಕೃತ ಮನೋವಿಜ್ಞಾನಿಗಳು' ಎಂದು ಭಾವಿಸಿರುವುದು. ಜನ್ನನ 'ಯಶೋಧರಚರಿತೆ' ಕೃತಿಯಲ್ಲಿ ಅಮೃತಮತಿಯ ಪಾತ್ರವನ್ನು ಮನೋವಿಜ್ಞಾನದ ನೆಲೆಯಲ್ಲಿ ತೆಗೆದುಕೊಳ್ಳಲಾಗಿದೆ. ಉಜ್ಜಯಿನಿಯ ಯಶೌಘರಾಜನಿಗೆ ತನ್ನ ಮಡದಿ ಚಂದ್ರಮತಿಯಲ್ಲಿ ಹುಟ್ಟಿದವನೇ ಯಶೋಧರ. ಅವನ ಮನಃಪ್ರಿಯೆ ಅಮೃತಮತಿ. ಯಶೌಘನು ವೃದ್ಧಾಪ್ಯಕ್ಕಡಿಯಿಟ್ಟಾಗ ಮಗನಿಗೆ ಪಟ್ಟಕಟ್ಟಿ ತಪಸ್ಸಿಗೆ ಹೋಗುತ್ತಾನೆ. ಯಶೋಧರ ಅಮೃತಮತಿ ಪರಸ್ಪರಾನುಬದ್ಧರಾಗಿ ಕಾಲ ಕಳೆಯುತ್ತಾರೆ. ಹೀಗಿರಬೇಕಾದರೆ ಆಕೆಯು ಮಾವುತನ ಜೊತೆ ಅನೈತಿಕ ಸಂಬಂಧದಲ್ಲಿ ಸಿಲುಕುತ್ತಾಳೆ. ಸೌಂದರ್ಯದ ಅಧಿದೇವತೆಯಿಂತಿದ್ದ ಅಮೃತಮತಿಗೆ ಆ ವಿಕಟಾಂಗನ ಒಡನಾಟವೇ ಹಿತವೆನಿಸಿತು. ಅಮೃತಮತಿಯ ಪಾತ್ರವನ್ನು ಸಿಗ್ಮಂಡ್ ಫ್ರಾಯ್ಡ್ ಅವರ ಮನೋವಿಶ್ಲೇಷಣಾ ಸಿದ್ಧಾಂತದ ಪ್ರಕಾರನೋಡುವುದಾದರೆ, ಮನಸ್ಸಿನ ಸಿದ್ಧಾಂತವು ಮಾನವನ ಮನಸ್ಸನ್ನು ವಿವರವಾಗಿ ತಿಳಿಯಪಡಿಸುತ್ತದೆ. ಮಾನವನ ಮನಸ್ಸು ವಿಶಾಲವಾಗಿದ್ದು ಕಲ್ಪನೆ ಎನ್ನುವುದು ಮನಸ್ಸಿಗೆ ಸಂಬಂಧಪಟ್ಟದ್ದಾಗಿದೆ. ಕಲ್ಪನೆ ಎನ್ನುವುದು ಅಪರಿಮಿತವಾದ ಒಂದು ಸರಣಿಯೂ ಹೌದು. ಮನಸ್ಸು ನಮ್ಮ ದೇಹದಲ್ಲಿ ಅತ್ಯಂತ ಮುಖ್ಯ. ಯಾವುದನ್ನೂ ನಾವು ಮನಸ್ಸು ಎಂದು ಹೇಳುತ್ತೇವೆಯೋ ಅದರಲ್ಲಿ ನಮ್ಮ ಚಿಂತನೆಯೂ ಅಡಗಿದೆ. ನಮ್ಮ ಮನಸ್ಸಿನ ಸಾರವು ನಮ್ಮ ಆಲೋಚನೆಯನ್ನು ಹೇಳುತ್ತದೆ. ಮನಸ್ಸಿನ ಸ್ಥಿತಿಯು ನಮ್ಮ ದೇಹದ ಚಲನೆಗೆ ಕಾರಣ ಆಗುವುದಲ್ಲದೆ ಇಂದ್ರಿಯಗಳು ಕಾರಣವಾಗುತ್ತವೆ. ಇಂದ್ರಿಯಗಳಲ್ಲಿ ಬಾಹ್ಯ ಇಂದ್ರಿಯಗಳು ಮತ್ತು ಆಂತರಿಕ ಇಂದ್ರಿಯಗಳೆಂದು ಎರಡು ವ್ಯತ್ಯಾಸಗಳಿವೆ. ಬಾಹ್ಯ ಇಂದ್ರಿಯಗಳು ಹೊರ ಪ್ರಪಂಚಕ್ಕೆ ಸಂಬಂಧಪಟ್ಟಿದ್ದಾದರೆ, ಆಂತರಿಕ ಇಂದ್ರಿಯವು ಹಸಿವಿಗೆ ಸಂಬಂಧಪಟ್ಟಿದೆ. ನಿರ್ಜೀವ ವಸ್ತುಗಳಿಗೆ ಮನಸ್ಸು ಎನ್ನುವುದು ಇರುವುದಿಲ್ಲ. ಐಹಿಕ ಜೀವಿಗಳಲ್ಲಿ ಮನುಷ್ಯನಿಗೆ ಮಾತ್ರವೇ ಮನಸ್ಸು ಇದೆ ಎಂದು ಫ್ರಾಯ್ಡ್ ಹೇಳಿದ್ದಾರೆ.

'ಯಶೋಧರ ಚರಿತೆ'ಯಲ್ಲಿ ಕವಿ ಜನ್ನನು ಗಂಡ ಹೆಂಡಿರ ಲೈಂಗಿಕ ಸಂಪರ್ಕ ಪರಿಯನ್ನು ಕುರಿತು ವಿವರಿಸಿದ್ದಾನೆ. ಕಾಮವು ಮನುಷ್ಯನ ಮನಸ್ಸಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಗಂಡ ಹೆಂಡತಿಯಿಂದ ಲೈಂಗಿಕ ಸುಖ ಪಡೆಯುವುದು ಸಹಜ ಹಾಗೂ ನೈಸರ್ಗಿಕವಾದುದಾಗಿದೆ. ಯಶೋಧರ ಮತ್ತು ಅಮೃತಮತಿಯರದು ಕೂಡಾ ಸಮವಾದ ದಾಂಪತ್ಯ ಜೀವನವೆನ್ನುವುದು ಕವಿಯ ನಿಲುವು.

ಫ್ರಾಯ್ಡ್ ಲೈಂಗಿಕ ವಿಷಯದ ಬಗ್ಗೆ ಪ್ರಸ್ತಾಪಿಸಿರುವಂತೆ ಮನುಷ್ಯನ ಸಂವೇದನೆಯು ಪ್ರಾಣಿಗಳ ಸಂವೇದನೆಗಳಿಗಿಂತ ಬೇರೆಯಾಗುತ್ತದೆ. ಬಯಕೆಯನ್ನು ಮನುಷ್ಯನು ವ್ಯಕ್ತಮಾಡಿಕೊಳ್ಳುವ ಕ್ರಮವು ಬೇರೆಯಾಗುತ್ತದೆ. ಲೈಂಗಿಕ ಸುಖ ಎನ್ನುವುದು ಗಂಡು ಹೆಣ್ಣಿಗೆ ಸಂಬಂಧಿಸಿದಾಗಿದ್ದು, ಈ ಲೈಂಗಿಕ ಸಂಬಂಧದ ಆಧಾರದ ಮೇಲೆ ಜೀವನ ಮತ್ತು ಅದರ ಸಂಬಂಧಗಳನ್ನು ತಿಳಿಯಬಹುದಾಗಿದೆ. ಲೈಂಗಿಕ ಸಂಬಂಧವು ದೇಹ ಮತ್ತು ಮನಸ್ಸಿನ ಸುಖದ ಪರಿಕಲ್ಪನೆಯಾಗಿದೆ. ದೇಹ ಎನ್ನುವುದು ಆಕರ್ಷಣೆಯ ಕೇಂದ್ರವೂ ಹೌದು. ಗಂಡಿನ ದೇಹ ಹೆಣ್ಣಿಗೆ ಆಕರ್ಷಣೆಯನ್ನು ಉಂಟುಮಾಡುತ್ತದೆ. ಹಾಗೆಯೇ ಹೆಣ್ಣಿನ ದೇಹ ಗಂಡಿಗೆ ಆಕರ್ಷಣೆಯನ್ನು ಉಂಟು ಮಾಡುತ್ತದೆ. ಗಂಡು ಮತ್ತು ಹೆಣ್ಣಿನ ನಡುವಣ ಸಂಬಂಧವನ್ನು ಸಹಜ ಮತ್ತು ಜೈವಿಕ ಅಗತ್ಯ ಎಂದು ನೋಡುವುದಾದರೆ ಅದರ ನಿಯಂತ್ರಣ ವ್ಯಕ್ತಿಯ ಮಾನಸಿಕ ಒತ್ತಡಕ್ಕೂ ಕಾರಣವಾಗುತ್ತದೆ. ಹಾಗಾಗಿ ಲೈಂಗಿಕಸುಖ

ಎನ್ನುವುದು ಭಾವನೆಗಳು ಮತ್ತು ಅದರ ಪರಿಣಾಮಗಳನ್ನು ಸೂಚಿಸುತ್ತದೆ. ಅದರ ಸ್ವರೂಪ ದೇಹವಾಗಿದೆ. ಅಮೃತಮತಿ ಮತ್ತು ಯಶೋಧರನ ಆಕರ್ಷಣೆಯ ಜೊತೆಗೆ ಇಬ್ಬರೂ ಗಂಡ ಹೆಂಡತಿಯ ಸಂಬಂಧವನ್ನು ಹೊಂದಿದ್ದರು.

ತನುಸೋಂಕಾಲಿಂಗನ ಚುಂ
ಬನಮುಂ ಗಳರವದ ಸವಿ ರತ ಪ್ರೌಢಿಯಿನಾ
ತನುವಂ ಮರೆಯಿಸೆಯರಿಯದೆ
ಮನೋಜನಾಡಿಸುವ ಜಂತ್ರದಂತಿರೆ ನೆರೆದರ್

ಲೈಂಗಿಕ ಸುಖದಲ್ಲಿ ಉದ್ದೀಪನ ಎನ್ನುವುದು ದೇಹಕ್ಕೆ ಸಂಬಂಧಿಸಿದೆ. ಇದೂ ಸಂವೇದನೆಯನ್ನು ಉಂಟು ಮಾಡುತ್ತದೆ, ಆದರೆ ಅಮೃತಮತಿಗೆ ಸುಶ್ರಾವ್ಯವಾದ ಹಾಡು ಕೇಳಿದಾಗ ಅದನ್ನು ಆಲಿಸಿದ ಅವಳಿಗೆ ಮೈಯಲ್ಲಿ ಹೊಸದಾದ ಉತ್ಸಾಹ ಬರುತ್ತದೆ. ಒಂದು ರಾತ್ರಿ ಯಶೋಧರ ಹಾಗೂ ಅಮೃತಮತಿ ಮಲಗಿದ್ದಾಗ ಗಜಶಾಲೆಯ ಮಾವುತನ ಹಾಡಿನ ಇಂಚರಕ್ಕೆ ತನ್ನ ಮನಸ್ಸನ್ನು 'ಪಸಾಯದಾನಂಗೊಟ್ಟಳ್'. ಅವನನ್ನು ನೋಡುವ ಕೂಡುವ ಚಿಂತೆ ಅವಳಿಗೆ ಆಯಿತು. ತನ್ನ ಸಖಿಯನ್ನು ಆತನ ಬಳಿಗೆ ಕಳುಹಿಸುತ್ತಾಳೆ. ಅವಳು ಅಷ್ಟಾವಂಕನನ್ನು ಕಂಡು ಹೇಸಿ ವ್ಯಂಗ್ಯವಾಗಿ ನುಡಿಯುತ್ತಾಳೆ. ಅಮೃತಮತಿಯು ಕಾಮದ ಕೋಟಲೆಯಿಂದ 'ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್' ಎಂದು ಮಾವುತನ ಸ್ನೇಹ ಬಯಸಿ ಯಶೋಧರನಿಂದ ದೂರವಾಗುತ್ತಾಳೆ. ಅಮೃತಮತಿಯ ಲೈಂಗಿಕ ಸಂಬಂಧ ಕುರಿತು ಮನೋವಿಜ್ಞಾನಿಯಾದ ಫ್ರಾಯ್ಡ್ ಹೇಳುವಂತೆ ಅಮೃತಮತಿಗೆ ಲೈಂಗಿಕ ಸುಖವೇ ಪ್ರಧಾನ. ಅವಳು ಮೊದಲು ಒಲಿದಿರುವುದು ಹಾಡಿಗೆ. ಎರಡನೆಯ ಹಂತದಲ್ಲಿ ಅವಳು ಒಲಿಯುವುದು ಮತ್ತು ಹಂಬಲಿಸುವುದು ದೇಹ ಸುಖವನ್ನು. ಇಂಥ ಸಂದರ್ಭದಲ್ಲಿ ಒತ್ತಡಗಳೂ ಮತ್ತು ಆತಂಕಗಳೂ ಇರುತ್ತದೆ.

ಸುರತಸುಖಪಾರವಶ್ಯಂ
ತರೆ ನಿದ್ರಾಭರಮನಿರ್ವರುಂ ಶಿಥಿಲತನೂ
ಪರಿರಂಭಣದಚ್ಚಳಿಯದೆ
ಪರಿವೇಷ್ಟಿತ ಬಾಹುವಳಯದೊಳ್ ಕಣ್ದಯರ್

ಮನಸು ಮತ್ತು ಅದರ ಆಲೋಚನೆಗಳ ಬಗ್ಗೆ ಮನೋವಿಜ್ಞಾನಿಗಳಾದ ಕಾಂಟ್, ಫ್ರಾಯ್ಡ್ ಮತ್ತು ಅಗಸ್ಟಿನ್ ಲೈಂಗಿಕತೆ ಮತ್ತು ಅದರ ಪ್ರಚೋದನೆಯನ್ನು ಕುರಿತು ಹೇಳುತ್ತಾರೆ. ಲೈಂಗಿಕವಾದ ಆಸೆಗಳು ಹೇಗೆ ನಮಗೆ ಬೇರೆ ಬೇರೆ ಪ್ರಭಾವಗಳನ್ನು ಬೀರುತ್ತವೆ ಎಂದು ಹೇಳುವುದಲ್ಲದೆ, ಅದು ದೇಹ ಮತ್ತು ಮನಸ್ಸುಗಳ ಪ್ರಶ್ನೆಯಾಗಿದೆ. ಲೈಂಗಿಕವಾದ ಆಸಕ್ತಿ ಎನ್ನುವುದು ನಮಗೆ ಏಕೆ ಮುಖ್ಯವಾಗುತ್ತದೆ? ಯಾವುದು ನಿಜವಾದ ಸಂತೋಷ ಎಂದು ಫ್ರಾಯ್ಡ್ ವಿವರಿಸುತ್ತಾನೆ. ಲೈಂಗಿಕ ಸುಖ ಎನ್ನುವುದು ಕೂಡಾ ಒಂದು ವಿಶಿಷ್ಟವಾದ ಸುಖ. ಆದ್ದರಿಂದ ಫ್ರಾಯ್ಡ್ 'ಸುಖವನ್ನು ಒಂದು ತತ್ವ' ಎಂದು ಹೇಳುತ್ತಾನೆ. ಅದು ಮನೋಸ್ಥಿತಿಗೆ ಸಂಬಂಧಪಟ್ಟದ್ದು ಎನ್ನುವುದು ಅವನ ನಿಲುವು.

ಮನೋವಿಜ್ಞಾನಿಗಳು ಮನುಷ್ಯರನ್ನು ಪ್ರಾಣಿಗಳಿಗಿಂತ ಭಿನ್ನವಾಗಿ ಪರಿಗಣಿಸಿ ಎರಡು ಸಂವೇದನೆಗಳನ್ನು ಹದಗೊಳಿಸಿ, ಹೊಂದಿಸಿ, ವರ್ತನೆಗಳಿಗೆ ಅಣಿಗೊಳಿಸುವ ಅಂಗವೊಂದು ಮೈಯೊಳಗೆ ಇರಲೇಬೇಕೆಂಬ ತೀರ್ಮಾನಕ್ಕೆ ಬಂದರು. ಆ ಅಂಗಕ್ಕೆ 'ಮನಸ್ಸು' ಎಂಬ ಹೆಸರನ್ನು ಇಟ್ಟರು. ಫ್ರಾಯ್ಡ್ ಅವರ ಪ್ರಕಾರವ್ಯಕ್ತಿಯ ಮನೋಸ್ಥಿತಿಯಲ್ಲಿ ನಡೆಯುವ ಮೈಯೊಳಗಿನ ಸಂವೇದನೆಗಳಿಗೆ ಮೈ ಹೊರಗಿನ ಪ್ರಚೋದನೆಗಳೇ ಕಾರಣ. ಅಮೃತಮತಿಯು ಮಾವುತನಿಗೆ ಮನಸೋತಿದ್ದು ಆಕೆಯ ಮೈಯೊಳಗಿನ ಸಂವೇದನೆಯಿಂದ. ವಾಸ್ತವಿಕ ಪ್ರಪಂಚದ ನಡುವೆ ನಿಂತ ಅಮೃತಮತಿಯು ದೈಹಿಕ ಸಂವೇದನೆಗಳನ್ನು ಪಡೆದು ವರ್ತನೆಗಳನ್ನು ಹೊರ ಹೊಮ್ಮಿಸಿದಳು.

ಮನೋವಿಜ್ಞಾನಿಗಳ ಪ್ರಕಾರ ಪ್ರಾಣಿಗಳು ಮನುಷ್ಯರಂತೆ ಜೀವಿಗಳಾಗಿರಬಹುದು. ಆದರೆ ಮನುಷ್ಯರು ವ್ಯಕ್ತಿ ವಿಶೇಷಗಳು ಎಂಬುದನ್ನು ಪರಿಗಣಿಸಿದ್ದಾರೆ. (ಸಿಮೊನೆವೇಲ್ 1951 ವೆಯಿಟಿಂಗ್ ಫಾರ್ ಗಾಡ್ – ಹೇಫರ್ ಅಂಡ್ ರೊ, ಪಬ್ಲಿಷರ್) ಹಸಿವು ಎನ್ನುವುದು ದೇಹಕ್ಕೆ ಸಂಬಂಧಪಟ್ಟದ್ದು. ಆದರೆ ಮನಸ್ಸು ಮತ್ತು ಅದರ ಮನೋಸ್ಥಿತಿಯು ಬೇರೆ ರೀತಿ ಇರುತ್ತದೆ. ಅದನ್ನು ನಾವು ಭಿನ್ನವಾಗಿ ನೋಡಬೇಕಾಗುತ್ತದೆ ಎನ್ನುವುದು ಅವಳ ನಿಲುವು.

ಮನಸ್ಸು ಮನುಷ್ಯರ ಎಲ್ಲ ಚಟುವಟಿಕೆಗಳನ್ನು ನಡೆಸುವ ಮಹೋನ್ನತ ಕಾರ್ಯಕಾರಿಯಾಗುತ್ತದೆ. ಹಾಗಾದರೆ

ಮನಸ್ಸು ಮತ್ತು ಆತ್ಮ ಇರುವುದು ಎಲ್ಲಿ. ಮನಸ್ಸು ಮತ್ತು ದೇಹ ಒಂದೇ ಅಥವಾ ಎರಡು ಬೇರೆ ಬೇರೆಯೇ ಎಂಬುದು ಮನೋವಿಜ್ಞಾನಿಗಳ ಚರ್ಚೆಗೆ ಒಳಪಟ್ಟಿತ್ತು. ಅದಕ್ಕೆ ಉತ್ತರವಾಗಿ ಮನಸ್ಸು ಮತ್ತು ದೇಹ ಬೇರೆ ಬೇರೆ. ಆದರೆ ಅವು ಒಡನಾಡಿಗಳು. ಒಂದರ ಮೇಲೆ ಇನ್ನೊಂದು ಪ್ರಭಾವ ಬೀರಿ ಪರಿಣಾಮವನ್ನು ಉಂಟು ಮಾಡುತ್ತವೆ. ಮನಸ್ಸು ವ್ಯಕ್ತಿಯ ವರ್ತನೆಗೆ ಕಾರಣ. ಆದ್ದರಿಂದ ಮನೋವಿಜ್ಞಾನವನ್ನು 'ಮನಸ್ಸಿನ ಆಧ್ಯಯನ' ಎಂದು ಒಪ್ಪಿಕೊಳ್ಳುತ್ತಾರೆ. ಮನಸ್ಸು ಇಂದ್ರಿಯಾನುಭವಕ್ಕೆ ಮೀರಿದ್ದು. ಮನಸ್ಸು ಕಾಣುವಂಥ ವಸ್ತುವಲ್ಲ. ಅದೊಂದು ಪರಿಣಾಮ. ಆದ್ದರಿಂದ ಅದು ಎಲ್ಲಿದೆ ಎಂದು ಕೇಳುವುದರಲ್ಲಿ ಹುರುಳಿಲ್ಲ ಎಂದು ವಾದಿಸುತ್ತಾರೆ.

ಮಾಳಿಗೆಯೊಳಗಣ ಸೊಡಗುರ್ಡಿ
ಡಾಳಂಬಡದಂತೆ ರಂಗರಕ್ತಿಯೊಳಮರ್ದುಂ
ಪಾಳಿಕೆವಡೆದು ಬಚಾವಣೆ
ಮಾಳಸಿರಿಯೆಂಬ ರಾಗಮಂ ಚಾಳಿಸಿದಂ

ಅಮೃತಮತಿಯು ಮಾವುತನನ್ನು ನೋಡದೇ ಮನಸ್ಸು ಕೊಟ್ಟಿದ್ದಳು. ಹಾಗೂ ಆಕೆಗೆ ಮನಸ್ಸಾಗಿದ್ದು ಮಾವುತನ ಮೇಲೆ ಕಾಮದ ಲೆಕ್ಕದಲ್ಲಿ. ಆಕೆಯು ತಾನು ಯಶೋಧರನ ಮಡದಿ ಎಂಬುದನ್ನು ಮರೆತು ಅಷ್ಟಾವಂಕನಿಗೆ ಮರುಳಾದಳು. ಅಮೃತಮತಿಗೆ ಮಾವುತನ ಮೇಲಿನ ವ್ಯಾಮೋಹ ದೇಹ ಮತ್ತು ಮನಸ್ಸಿಗೆ ಸಂಬಂಧಪಟ್ಟದ್ದು. ಅಮೃತಮತಿ ಹಾಗೂ ಮಾವುತರ ಸಂಬಂಧದ ಬಗ್ಗೆ ಹೇಳುವುದಾದರೆ ಆಕೆಯದು ಕಾಮವಿಕಾರ. ನೈತಿಕವಾಗಿ ಅದು ಸರಿಯಾದದ್ದು ಅಲ್ಲ, ಆದರೆ ಮನೋವಿಜ್ಞಾನದ ಪ್ರಕಾರ ಹೇಳುವುದಾದರೆ ಅದು ಮನಸ್ಸನ್ನು ಕೇಂದ್ರಿಕರಿಸಿದ ವಿಜ್ಞಾನವೂ ಹೌದು. ಮಾವುತನ ಹಾಡು ಅಮೃತಮತಿಯಲ್ಲಿ ಭಾವನೆಗಳ ತರಂಗವನ್ನು ಎಬ್ಬಿಸುತ್ತದೆ. ಆದ್ದರಿಂದ ಮನಸ್ಸನ್ನು ಅರ್ಥಮಾಡಿಕೊಳ್ಳಲು ಮನೋವೈಜ್ಞಾನಿಕವಾದ ಪರಿಕರವು ಬೇಕಾಗುತ್ತದೆ. ಕೆಲವೊಮ್ಮೆ ಕೆಲವು ರಾಗಗಳು ಭಾವನೆಗಳನ್ನು ಉದ್ದೀಪನ ಮಾಡುತ್ತವೆ. ಕೆಲವು ರಾಗಗಳು ಶೃಂಗಾರ ಪ್ರಚೋದನೆಯನ್ನು ಮಾಡುತ್ತವೆ. ಅಮೃತಮತಿಯು ಸಹ ಮಾವುತನ ರಾಗಕ್ಕೆ ಉದ್ದೀಪನಗೊಳ್ಳುತ್ತಾಳೆ. ಇಂಥ ಸಂದರ್ಭದಲ್ಲಿ ವ್ಯಕ್ತಿಯು ತನ್ನ ಪರಿಸರವನ್ನು ಬೇರೆ ರೀತಿಯಲ್ಲಿ ನೋಡಲು ಪ್ರಾರಂಭಿಸುತ್ತಾನೆ. ನೈತಿಕ ಪರಂಪರೆಗಳು ವ್ಯಕ್ತಿಯ ಮನಸ್ಸಿನ ಮೇಲೆ ಪ್ರಭಾವವನ್ನು ಬೀರುವುದಿಲ್ಲ.

ಸಮಾಜದ ದೃಷ್ಟಿಯಲ್ಲಿ ದಾಂಪತ್ಯ ಎನ್ನುವುದು ಗಂಡ ಮತ್ತು ಹೆಂಡತಿಯರ ನಡುವೆ ನಡೆಯುವ ಒಂದು ಒಪ್ಪಂದವೂ ಹೌದು. ಹೆಣ್ಣು ಮತ್ತು ಗಂಡು ಒಂದು ನಿಯಮಕ್ಕೆ ಮತ್ತು ಒಂದು ನೀತಿಗೆ ಬದ್ಧರಾಗಿರುತ್ತಾರೆ. ಅದು ಕಾಮದ ಸಂಬಂಧವನ್ನು ಕೂಡಾ ಹೊಂದಿದೆ. ಯಾರೂ ಅದನ್ನು ಮೀರುತ್ತಾರೆಯೋ, ಗಂಡು ಇನ್ನೊಬ್ಬ ಹೆಣ್ಣನ್ನು ಕೂಡಿದರೆ, ಹೆಣ್ಣು ಇನ್ನೊಬ್ಬ ಗಂಡನ್ನು ಕೂಡಿದರೆ ಅದು ಅನೈತಿಕತೆ ಎನಿಸಿಕೊಳ್ಳುತ್ತದೆ. ಮನುಷ್ಯನು ತನ್ನ ಲೈಂಗಿಕ ಕಾಮನೆಗಳನ್ನು ಬೇರೆ ಬೇರೆ ರೀತಿಯಲ್ಲಿ ಈಡೇರಿಸಿಕೊಳ್ಳಬಲ್ಲ. ಅದರಲ್ಲಿ ಅವನು ತನ್ನ ಸಂಗಾತಿಯನ್ನು ಉದ್ದೀಪನ ಗೊಳಿಸಿ, ಲೈಂಗಿಕ ಕಾಮನೆಗಳನ್ನು ಪೂರೈಸುವಾಗ ಸಂಗಾತಿಯು ಹೇಗೆ ಪ್ರತಿಸ್ಪಂದನೆ ಮಾಡುತ್ತಾರೆ ಎನ್ನವುದು ಮುಖ್ಯವಾಗುತ್ತದೆ. ಗಂಡು ಮತ್ತು ಹೆಣ್ಣು ಸಂಯೋಗಕ್ಕೆ ಬಯಕೆ ಮತ್ತು ಅದರ ಪೂರೈಕೆಯನ್ನು ಒಂದು ಮಾನದಂಡವಾಗಿ ಮಾತ್ರವೇ ನೋಡುತ್ತಾರೆ. ಇಲ್ಲಿ ಅಮೃತಮತಿ ಮತ್ತು ಯಶೋಧರ

ದಾಂಪತ್ಯದ ದೃಷ್ಟಿಯಿಂದ ಮಾವುತನು ಅನ್ಯನಾಗುತ್ತಾನೆ. ಫ್ರಾಯ್ಡ್ ದಾಂಪತ್ಯವು ಒಂದು ಪವಿತ್ರವಾದ ಬಂಧನ ಹಾಗೂ ವಿವಾಹ ಅದರ ಆಚರಣೆಗಳನ್ನು ಗ್ರಹಿಸಿದ್ದಾನೆ. ಆದರೂ ಮಾನಸಿಕ ಸಂಗತಿಗಳು ಇದರಲ್ಲಿ ಗಣನೆಗೆ ಬರುತ್ತದೆ ಎಂದು ಅಮೃತಮತಿ ಹಾಗೂ ಮಾವುತನ ದೈಹಿಕ ಸಂಬಂಧದ ಬಗ್ಗೆ ಪ್ರಸ್ತಾಪಿಸುತ್ತಾ ಕೆಲವು ಅಂಶಗಳು ಜೈವಿಕ ಅಂಶಗಳಾದರೆ ಕೆಲವು ಸಂವೇದನೆಗೆ ಒಳಪಡುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾನೆ.

ಅಮೃತಮತಿಗೆ ಮಾವುತನ ಜೊತೆ ಪಡೆದುಕೊಳ್ಳುವ ಲೈಂಗಿಕ ಸುಖವು ಮನ್ಮಥನ ಲೀಲೆಯಂತೆ ಅನಿಸುತ್ತದೆ. ಆಕೆಯ ನಡತೆಯು ಸಮಾಜದ ದೃಷ್ಟಿಯಲ್ಲಿ ತಪ್ಪಾದರೂ ಅವಳ ನಡತೆ ಅವಳಿಗೆ ಸರಿಯಾಗಿದೆ. ಮಾವುತನನ್ನು ಇಷ್ಟಪಟ್ಟಿದ್ದು, ಕಾಮದ ಅಗತ್ಯ ಇವೆಲ್ಲವೂ ಇಂದ್ರಿಯದ ಬಯಕೆಯಾಗಿರುತ್ತದೆ. ಇದು ಮನಸ್ಸಿಗೆ ಸಂಬಂಧಿಸಿದ ಪ್ರಕ್ರಿಯೆಯಾಗಿರುತ್ತದೆ. ನಮ್ಮ ಬಯಕೆಗಳು, ಆಸೆಗಳು, ಕನಸುಗಳು, ನಿಯಮಗಳು, ಸಂಬಂಧಗಳು ನಮ್ಮನ್ನು ಹೇಗೆ ನಿಯಂತ್ರಿಸುತ್ತದೆ ಎನ್ನುವುದನ್ನು ಮನೋವಿಜ್ಞಾನವು ಮಾಪನ ಮಾಡುತ್ತದೆ. ಯಾವ ಸಂದರ್ಭದಲ್ಲಿ ಇದು ಉನ್ಮಾದದಿಂದ ಮನೋವಿಕಲತೆಯ ಕಡೆಗೆ ಹೋಗುತ್ತದೆಯೋ ಆಗ ಅದರ ಅರ್ಥವು ಬೇರೆಯಾಗುತ್ತದೆ. ಪರಿಸರವೂ ಬೇರೆ ಬೇರೆ ರೀತಿ ರೂಪಿಸುತ್ತದೆ.

ಯಶೋಧರ ಹಾಗೂ ಅಮೃತಮತಿಯ ಸಂಬಂಧದಲ್ಲಿ ಯಶೋಧರನು ಅಮೃತಮತಿಯಿಂದ ಆಕರ್ಷಿತನಾಗಿದ್ದನು ಏಕೆ? ಕಾಮದ ಪ್ರಭಾವದಿಂದ ಎಂಬುದು ಸ್ಪಷ್ಟ. ಆದರೆ ಅಮೃತಮತಿ ಆತನನ್ನು ಒಲಿದಿದ್ದಳೇ? ಯಶೋಧರನು ಅಮೃತಮತಿಯಲ್ಲಿ ಆಸಕ್ತನಾಗಿದ್ದನೇ ಹೊರತು, ಅಮೃತಮತಿ ಅವನಲ್ಲಿ ಅನುರಕ್ತೆಯಾಗಿರಲಿಲ್ಲ. ಆಕೆ ಮಾವುತನಲ್ಲಿ ಅನುರಕ್ತೆಯಾದಾಗ ಬರಿಯ ಕಾಮತೃಪ್ತಿಯ ಕಡೆಗೆ ಒಲವಿದ್ದಿತೆ ಹೊರತು ರೂಪ–ಗುಣಗಳ ಕಡೆಗೆ ಇರಲಿಲ್ಲ. ಮನೋವಿಜ್ಞಾನಿಗಳ ಪ್ರಕಾರ ಮೈಯೊಳಗೆ ಇರುವ ಅಂಗಗಳ ತಿಳುವಳಿಕೆ ಇಲ್ಲದ ಕಾಲದಲ್ಲಿ ಮನಸ್ಸಿನ ಪರಿಕಲ್ಪನೆ ಹುಟ್ಟಿದ್ದು. ಮನಸ್ಸೆಂಬ ಘಟಕವೊಂದು ಮೈಯೊಳಗೆ ಇಲ್ಲ ಎಂದು ಅಂದುಕೊಳ್ಳುವ ಸಂದರ್ಭದಲ್ಲಿ ದೇಹದೊಳಗೆ ಕಾಣದ ಮನಸ್ಸು ಇದೆ. ಎಂಬುದು ಗೊತ್ತಾಗುತ್ತದೆ.

ಪ್ರಾಣಿಗಳಿಂದ ವಿಂಗಡಿಸಿ ಮನುಷ್ಯರನ್ನು ಅಟ್ಟಕ್ಕೇರಿಸಿದ ಮನಸ್ಸನ್ನು ಹೇಗೆ ತೊಡೆದು ಹಾಕಲು ಸಾಧ್ಯ? ಹಾಗಾಗಿ ಮನಸ್ಸು ಸಾಹಿತ್ಯದ, ಎಲ್ಲ ಬಗೆಯ ಸೃಜನಶೀಲತೆಯ ತಾಯಿ. ಒಟ್ಟಿನಲ್ಲಿ ಮನುಷ್ಯರ ಅಹಂಗೆ ಕಾರಣವಾಗಿ ಮನಸ್ಸು ಮನುಷ್ಯರ ಸೊಕ್ಕು ಸವಾರಿ ಮಾಡುವ ಕತ್ತೆಯಾಗಿದೆ ಎಂದು ಮನೋವಿಜ್ಞಾನಿಗಳು ಹೇಳಿದ್ದಾರೆ.

ವ್ಯಕ್ತಿಯಲ್ಲಿ ಭಾವ ಮತ್ತು ಅನಿಸಿಕೆಗಳು ಆತನ ವರ್ತನೆಗೆ ಕಾರಣಗಳು ಎಂದು ಮನೋವಿಜ್ಞಾನ ಪ್ರತಿಪಾದಿಸಿಕೊಂಡು ಬಂದಿದೆ. ಅವು ವರ್ತನೆಯ ಭಾಗವಾದ ದೈಹಿಕ ಅವಸ್ಥೆಗಳು. ಭಾವಗಳು ದೇಹದ ಸ್ಥಿತಿಗಳಾದರೆ

ಯೋಚಿಸುವುದು ಮೈಯೊಳಗಿನ ಕೆಲಸ. ಅಮೃತಮತಿಯದು ಪೂರ್ತಿ ಕಾಣಿಸಿಕೊಳ್ಳದ ಒಳವರ್ತನೆ. ಮೈಯೊಳಗಿನ ವರ್ತನೆ ಅತಿ ಸೂಕ್ಷ್ಮವಾದದ್ದರಿಂದ ಸುಲಭಕ್ಕೆ ಕಾಣಿಸದು. ಕೆಲವನ್ನು ಗುಟ್ಟಾಗಿ ಮಾಡುವುದು. ತಾವು ಮಾಡುವ ಕೆಲಸ ಒಳವರ್ತನೆಯಲ್ಲಾದರೆ ಬೇರೆಯವರು ಶಿಕ್ಷಿಸುವ ಹಾಗಿಲ್ಲ ಎಂದುಕೊಳ್ಳುವುದು. ವರ್ತನೆಯ ದೊಡ್ಡ ಚಹರೆಯೂ ಬದಲಾವಣೆಯೇ ಆಗಿದೆ. ವರ್ತನ ವಿಜ್ಞಾನದಲ್ಲಿ ವ್ಯಕ್ತಿಗಳು ಪ್ರಚೋದನೆಯ ವರ್ತನೆಗಳನ್ನು ಹೊರಹೊಮ್ಮಿಸುವ ಒಂದು ಕ್ಷೇತ್ರವಾಗಿದೆ. ಒಟ್ಟಿನಲ್ಲಿ ಮನಸ್ಸೇ ವರ್ತನೆಗೆ ಮೂಲ ಕಾರಣ ಎಂದು ಮನೋವಿಜ್ಞಾನಿಗಳು ನಂಬುತ್ತಾರೆ. ಸುಪ್ತಚೇತನದೊಳಗೆ ಹುದುಗಿದ, ಸಮಾಜಕ್ಕೆ ಒಪ್ಪಿಗೆಯಾಗದ ಪ್ರೇರಣೆಗಳು(ಆಸೆ–ಆಕಾಂಕ್ಷೆಗಳು) ಅಂತಹ ಪ್ರೇರಣೆಗಳು ಜಾಗ್ರತಾವಸ್ಥೆಗೆ ಬಂದರೆ ಸಮಾಜ ನಿಷೇಧಿಸುವುದರಿಂದ ಅವುಗಳು ಉನ್ನತಿಸಿಕೊಳ್ಳುತ್ತವೆ. ಫ್ರಾಯ್ಡ್ ಪ್ರಕಾರ ಗಂಡಸರ ಆಶಾವಿಲಾಸಗಳು ಮಹಾಕಾಂಕ್ಷೆ ಮತ್ತು ಪ್ರಣಯಕಾಮ. ಹೆಂಗಸರ ಆಶಾವಿಲಾಸಗಳೆಲ್ಲ ಪ್ರಣಯಕಾಮುಕ. ಅಮೃತಮತಿಯ ಆಶಾವಿಲಾಸಗಳೆಲ್ಲ ಪ್ರಣಯ ಕಾಮುಕವಾಗಿತ್ತು. ಪ್ರತಿಯೊಂದು ಆಶಾವಿಲಾಸವೂ ಒಂದು ನಿಷಿದ್ಧ ಆಸೆಯ ಗುಪ್ತ ಪೂರೈಕೆಯಾಗಿರುತ್ತದೆ.

ದೇಹ ಮತ್ತು ಅದರ ಬಯಕೆಗಳು ಕೂಡಾ ವ್ಯಕ್ತಿಯನ್ನು ನಿರೂಪಿಸುವಾಗ ಅಮೃತಮತಿಯನ್ನು ಸ್ಪಷ್ಟ ಉದಾಹರಣೆಯಾಗಿಸಬಹುದು. ಮಾವುತನಿಗೂ ಅದು ಅಗತ್ಯವಾಯಿತು. ಹೆಣ್ಣು ಎಷ್ಟೇ ಸಾಮರ್ಥ್ಯ ಗಳಿಸಿದರೂ ಪ್ರಕೃತಿ ಸಹಜವಾದ ಭಿನ್ನ ಲಕ್ಷಣಗಳು ಪುರುಷನ ಮುಂದೆ ಅವಳನ್ನು ಸೋಲುವಂತೆ ಮಾಡುತ್ತದೆ. ಬಯಕೆಯನ್ನು ತೃಪ್ತಿ ಪಡಿಸಿಕೊಳ್ಳಲು ಕ್ರಿಯೆಯನ್ನು ಹೆಚ್ಚು ಬಳಸಿಕೊಂಡಾಗ ಅದರ ಅಗತ್ಯಗಳು ಮನುಷ್ಯನನ್ನು ರೂಪಿಸಿದವು. ಮನೋಸ್ಥಿತಿಯ ಅಗತ್ಯ ಮತ್ತು ದೇಹದ ಅಗತ್ಯಗಳೇ ವ್ಯಕ್ತಿ ವ್ಯಕ್ತಿಗಳ ನಡುವಣ ಸಂಬಂಧಕ್ಕೆ ಕಾರಣವೂ ಆಯಿತು.

ಈ ನಿಟ್ಟಿನಲ್ಲಿ ಅಮೃತಮತಿ ಕಾಮುಕ ಸ್ತ್ರೀ ಆಗಿದ್ದು, ಮಾವುತನ ಇಂಪಾದ ಹಾಡೇ ಅವಳಿಗೆ ಆಕರ್ಷಣೆಯಾಯಿತು. ಅವಳು ಕಾಮದ ಕೈಗೊಂಬೆಯಾದಳು. ಅದನ್ನೇ ಮೆಚ್ಚಿದವಳು. ಅವಳ ವರ್ತನೆ ಸರ್ವಥಾ ನಿಂದನೀಯ; ಸರ್ವಾತ್ಮನಾ ಖಂಡನೀಯ! ಎಂದು ಕವಿ ಹೇಳಿದ್ದಾನೆ. ಫ್ರಾಯ್ಡ್ ತಾವೇ ಮಂಡಿಸಿದ ಮನೋವಿಶ್ಲೇಷಣಾ ಸಿದ್ಧಾಂತವು ಬದುಕಿನ ಬಗ್ಗೆ ತಾವು ಕಂಡು ಹಿಡಿಯಬಹುದಾದ ಸತ್ಯಗಳನ್ನು ಸಾಹಿತ್ಯ ಈಗಾಗಲೇ ಹೆಚ್ಚು ಪರಿಣಾಮಕಾರಿಯಾಗಿಸಿದೆ ಎಂದು ಹೇಳಿದ್ದಾರೆ. ಸಿಗ್ಮಂಡ್‌ಫ್ರಾಯ್ಡ್‌ಗೆ ಸಾಹಿತ್ಯದ ಬಗ್ಗೆ ಅಸಾಧಾರಣ ಗೌರವವಿತ್ತು. ಅದರಲ್ಲೂ ಪ್ರಬುದ್ಧ ಸಾಹಿತ್ಯ ಕಲಾವಿದರು ತಮ್ಮ ಅರಿವಿನೊಳಗಿನ ಕೈಗೆಟುಕದ ಕಾಮಾಸಕ್ತಿಗಳನ್ನು ಕವಿತೆ, ಕತೆ, ಕಾದಂಬರಿಯಾಗಿಸಿದ್ದಾರೆ ಎಂಬುದು ಆತನ ನಿಲುವು. ಇದಕ್ಕೆ ಜನ್ನನ 'ಯಶೋಧರ ಚರಿತೆ' ಕಾವ್ಯದ ಅಮೃತಮತಿ ಪಾತ್ರವೇ ಉದಾಹರಣೆಯಾಗಿದೆ. ಮಾನಸಿಕವಾದಕ್ಕೆ ಸಂಬಂಧಪಟ್ಟ ಕಾವ್ಯ, ಕತೆ, ಕಾದಂಬರಿಗಳು ಲೇಖಕರ ಪ್ರಜ್ಞೆಯೊಳಗಿನ ಜೀವನಾನುಭವಗಳಿಂದ ಸೃಷ್ಟಿಯಾದದ್ದು. ಕಷ್ಟ–ಸುಖಗಳು, ಭಾವನೆಗಳು, ಭಾವನಾಘಾತಗಳು, ಕಾಮೋದ್ರೇಕಗಳು, ಮಾನವೀಯ ದುರಂತಗಳು, ಮಾನಸಿಕ ಸಾಹಿತ್ಯದ ಸಾಮಾಗ್ರಿ ಇವುಗಳನ್ನು ಅರಗಿಸಿಕೊಂಡ ಸಾಹಿತಿಗಳು ಸಾಮಾನ್ಯ ಅನುಭವಗಳನ್ನು ಕಾವ್ಯಾನುಭವಕ್ಕೆ ಪರಿವರ್ತಿಸಿಕೊಂಡು ಅದಕ್ಕೊಂದು ಅಭಿವ್ಯಕ್ತಿ ಕೊಡುತ್ತಾರೆ. ಎಂದು ಮನೋವಿಜ್ಞಾನಿಯಾದ ಫ್ರಾಯ್ಡ್ ಅವರ ಅಭಿಪ್ರಾಯವಾಗಿದೆ.

ಪರಾಮರ್ಶನ ಗ್ರಂಥಗಳು

- ಜನ್ನಕವಿಯ ಯಶೋಧರ ಚರಿತೆ ಗದ್ಯಾನುವಾದ: ತೆಕ್ಕುಂಜ ಗೋಪಾಲಕೃಷ್ಣಭಟ್ಟ, ಕನ್ನಡ ಸಾಹಿತ್ಯ ಪರಿಷತ್ತು 2013
- ಸಾಹಿತ್ಯ ಮತ್ತು ಮನೋವಿಜ್ಞಾನ: ಸಿ.ಪಿ. ಕೃಷ್ಣಕುಮಾರ್, ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ ಮೈಸೂರು 1972
- ಮನಸ್ಸು ಹಲವು ಚಿಂತನೆಗಳು: ಡಾ. ಸಿ.ಆರ್. ಚಂದ್ರಶೇಖರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2000
- ಯಶೋಧರ ಚರಿತ್ರೆ (ಸಂಘರ್ಷದ ನೆಲೆಗಳು): ಕೇಶವ ಶರ್ಮ .ಕೆ, ದೇಸಿ ಪುಸ್ತಕ 2022
- ಸಾಹಿತ್ಯದ ವೈಜ್ಞಾನಿಕ ಮೀಮಾಂಸೆ: ಗಿರಿ, ಮನೋಹರ ಗ್ರಂಥಮಾಲಾ, ಧಾರವಾಡ 2016

ಬಸವಣ್ಣನ ವಚನಗಳು ಮತ್ತು ಮನಸ್ಸು: ಮನೋವೈಜ್ಞಾನಿಕತೆ

ಪ್ರಕಾಶ ಎಸ್.
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು – 570006.

ಮನುಷ್ಯನ ಅಂತರಂಗ ಮತ್ತು ಬಹಿರಂಗದ ಕ್ರಿಯೆಗಳನ್ನು ನಿಯಂತ್ರಿಸುವುದು ವ್ಯಕ್ತಿಯ ಮನಸ್ಸು. ವ್ಯಕ್ತಿಯ ಪ್ರತಿಯೊಂದು ಕ್ರಿಯೆ, ಆತನ ಆಲೋಚನೆ, ಆತನ ನಡೆ–ನುಡಿ ಇತ್ಯಾದಿಗಳೆಲ್ಲವನ್ನು ವ್ಯಕ್ತಿಯ ಮನಸ್ಸು ಕೇಂದ್ರೀಕರಿಸುತ್ತದೆ. ವ್ಯಕ್ತಿಯ ಬದುಕಿನ ದೈನಂದಿನ ಚಲನವೆಲ್ಲ ಮನೋಕೇಂದ್ರಿತವಾದುದು. ಆತನ ನೋವು–ನಲಿವು, ಕೋಪ–ತಾಪ, ಒಳಿತು–ಕೆಡಕು ಇತ್ಯಾದಿಗಳೆಲ್ಲ ಜನ್ಮತಾಳುವುದು ಮನುಷ್ಯನ ಮನೋಭೂಮಿಕೆಯಲ್ಲಿಯೇ. ಮನುಷ್ಯ ಬದುಕನ್ನು ರೂಪಿಸುವ ಪ್ರಮುಖ ಸಾಧನ ಮನಸ್ಸು. ಅಂತೆಯೇ ವ್ಯಕ್ತಿಯ ಸಂಕಲ್ಪ ಮತ್ತು ವಿಕಲ್ಪಗಳು ಹುಟ್ಟುವ ಸ್ಥಾನ ಮನಸ್ಸೇ ಆಗಿದೆ. ಬಸವಣ್ಣನವರು ತಮ್ಮ ವಚನಗಳಲ್ಲಿ ಮನುಷ್ಯನ ಮನಸ್ಸಿನ ಸ್ವರೂಪವನ್ನು ವಿವಿಧ ಸಂದರ್ಭಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಶಿವಭಕ್ತರ ಮಾನಸಿಕ ಸ್ಥಿತಿ ಹೇಗಿರಬೇಕೆಂಬುದನ್ನು ತಮ್ಮ ಹಲವು ವಚನಗಳಲ್ಲಿ ತಿಳಿಸಿಕೊಟ್ಟಿದ್ದಾರೆ.

ವ್ಯಕ್ತಿಯ ಬದುಕಿನ ಸಾಧನ ಮಾರ್ಗಕ್ಕೆ ಚಿತ್ತ ಚಂಚಲತೆ ಕೆಲವೊಮ್ಮೆ ಅಡ್ಡಿಯನ್ನುಂಟು ಮಾಡುತ್ತದೆ. ಮನಸ್ಸಿನ ಚಂಚಲತೆಯನ್ನು ಕೊನೆಗಾಣಿಸಿ ಭಕ್ತಿಯ ಮಾರ್ಗದಲ್ಲಿ ಮುನ್ನಡೆಯುವಂತೆ ಕೂಡಲಸಂಗಮದೇವನನ್ನು ಬೇಡಿಕೊಳ್ಳುವ ಪರಿ ಬಸವಣ್ಣನ ವಚನದಲ್ಲಿ ಅಭಿವ್ಯಕ್ತಗೊಂಡಿದೆ. ಈ ಕುರಿತು ನಿದರ್ಶನಕ್ಕೆ ಬಸವಣ್ಣನ ವಚನವನ್ನು ಗಮನಿಸಬಹುದು.

"ಕೊಂಬೆಯ ಮೇಲಣ ಮರ್ಕಟನಂತೆ
ಲಂಘಿಸುವುದೆನ್ನ ಮನವು
ನಿಂದಲ್ಲಿ ನಿಲಲೀಯದೆನ್ನ ಮನವು
ಹೊಂದಿದಲ್ಲಿ ಹೊಂದಲೀಯದೆನ್ನ ಮನವು
ಕೂಡಲಸಂಗಮದೇವಾ
ನಿಮ್ಮ ಚರಣ ಕಮಲದಲ್ಲಿ ಭ್ರಮರನಾಗಿರಿಸು ನಿಮ್ಮ ಧರ್ಮ."[1]

ಮನಸ್ಸಿನ ಚಂಚಲತೆ ವ್ಯಕ್ತಿಯ ಆಂತರಂಗಿಕ ಮತ್ತು ಬಹಿರಂಗಿಕವಾದ ಜೀವನಕ್ಕೆ ಅತ್ಯಂತ ಮಾರಕವಾದುದಾಗಿದೆ. ಆದ್ದರಿಂದ ಬಸವಣ್ಣನವರು ಮನಸ್ಸನ್ನು ಕೊಂಬೆಯ ಮೇಲಿನ ಮರ್ಕಟನಿಗೆ ಹೋಲಿಸಿದ್ದಾರೆ. ಕೊಂಬೆಯ ಮೇಲಿನ ಮರ್ಕಟ ಹೇಗೆ ಒಂದು ಕಡೆ ನಿಲಲಾರದೆ ಒಂದು ಕೊಂಬೆಯಿಂದ ಮತ್ತೊಂದು ಕೊಂಬೆಗೆ ಹಾರುತ್ತ ನಿಂತಲ್ಲಿ ನಿಲಲಾರದೆ, ಕುಳಿತ ಕೊಂಬೆಯಲ್ಲಿ ಕುಳಿತುಕೊಳ್ಳಲಾರದೆ ಚಂಚಲವಾಗಿ ವರ್ತಿಸುವುದೋ, ಅಂತೆಯೇ ವ್ಯಕ್ತಿ ಮನೋವ್ಯಾಕುಲತೆಯಿಂದಾಗಿ ದೈಹಿಕ ಮತ್ತು ಮಾನಸಿಕ ತೊಳಲಾಟಕ್ಕೆ ಗುರಿಯಾಗಬೇಕಾಗುತ್ತದೆ. ಈ ಮನೋವ್ಯಾಕುಲತೆಗಳನ್ನು ಕೊನೆಗೊಳಿಸಿ ಭಕ್ತಿಯ ಮಾರ್ಗದಲ್ಲಿ

ಮುನ್ನಡೆಯುವಂತೆ ಭಗವಂತನನ್ನು ಬೇಡಿಕೊಳ್ಳುವ ಪರಿ ಬಸವಣ್ಣನ ಮತ್ತೊಂದು ವಚನದಲ್ಲಿ ಅಭಿವ್ಯಕ್ತಗೊಂಡಿದೆ. ಈ ಕುರಿತು ನಿದರ್ಶನಕ್ಕೆ ಬಸವಣ್ಣನ ವಚನವನ್ನು ಗಮನಿಸಬಹುದು.

"ಅಂದಣವನೇರಿದ ಸೊಣಗನಂತೆ
ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು
ಸುಡು, ಸುಡು; ಮನವಿದು ವಿಷಯಕ್ಕೆ ಹರಿವುದು,
ಮೃಡ, ನಿಮ್ಮನನುದಿನ ನೆನೆಯಲೀಯದು.
ಎನ್ನೊಡೆಯನೇ ಕೂಡಲ ಸಂಗಮದೇವ,
ನಿಮ್ಮ ಚರಣವ ನೆನೆವಂತೆ ಕರುಣಿಸು,
ಸೆರಗೊಡ್ಡಿ ಬೇಡುವೆ ನಿಮ್ಮ ಧರ್ಮ."[2]

ಈ ವಚನದಲ್ಲಿಯೂ ಮನಸ್ಸಿನ ಚಂಚಲತೆಯ ಕುರಿತ ಚಿಂತನೆ ಪ್ರಮುಖವಾಗಿ ಅಭಿವ್ಯಕ್ತಗೊಂಡಿದೆ. ಭಕ್ತಿಯ ಮಾರ್ಗಕ್ಕೆ ಅಡ್ಡಿಯಾಗುವ ಮನಸ್ಸನ್ನು ಬಸವಣ್ಣನವರು ಸಿಂಹಾಸನವೇರಿದ ನಾಯಿಗೆ ಹೋಲಿಸಿರುವ ಬಗೆ ಈ ವಚನದಲ್ಲಿ ಕಂಡುಬರುತ್ತದೆ. ಹೇಗೆ ನಾಯಿಯನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದರೂ ಸಹ ಅದು ತನ್ನ ಮುನ್ನಿನ ಸ್ವಭಾವಗಳನ್ನು ಬಿಡದೆ, ಅತ್ತಿತ್ತ ತನ್ನ ಮನಸ್ಸನ್ನು ಅರಿಸುವುದೋ ಹಾಗೆಯೇ ಭಕ್ತಿಯ ಮಾರ್ಗಕ್ಕೆ ಮನಸ್ಸು ಕೆಲವೊಮ್ಮೆ ಅಡ್ಡಿಯನ್ನುಂಟು ಮಾಡುತ್ತದೆ. ಆದ್ದರಿಂದ ಭಗವಂತನನ್ನು, ಆತನ ಚರಣವನ್ನು ಅನುದಿನವೂ ನೆನೆಯುವಂತೆ ಕರುಣಿಸೆಂದು ಕೂಡಲ ಸಂಗಮದೇವನಲ್ಲಿ ಸೆರಗೊಡ್ಡಿ ಬೇಡಿಕೊಳ್ಳುವ ಪರಿ ಬಸವಣ್ಣನಲ್ಲಿ ಪ್ರಮುಖವಾಗಿ ಅಭಿವ್ಯಕ್ತಗೊಂಡಿದೆ.

"ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ,
ವಿಚಾರಿಸಿದಡೇನೂ ಹುರುಳಿಲ್ಲವಯ್ಯಾ,
ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಹುಮಾಡಿ
ನೀವಿರಿಸಿದಿರಿ ಕೂಡಲ ಸಂಗಮದೇವ"[3]

ಬಸವಣ್ಣ ತನ್ನ ಮನಸ್ಸಿನ ಸ್ಥಿತಿಯನ್ನು ವಿವರಿಸುತ್ತಾನೆ. ಅತ್ತಿಯ ಹಣ್ಣು ನೋಡಲು ಹೊರಗೆ ಬಹಳ ಸುಂದರ, ಆದರೆ ಒಳಗೆ ಬರಿಯ ಹುಳುಗಳು ತುಂಬಿರುತ್ತವೆ. ಈ ಡಾಂಭಿಕ ಪ್ರಪಂಚದಲ್ಲಿ ಬಸವಣ್ಣ ತನ್ನನ್ನೂ ಮತ್ತು ತನ್ನ ಮಾನಸಿಕ ಸ್ಥಿತಿಯನ್ನು ಹತ್ತಿಯ ಹಣ್ಣಿಗೆ ಹೋಲಿಸಿಕೊಂಡು ಟೀಕಿಸಿಕೊಳ್ಳುತ್ತಾನೆ.

ಮನಸ್ಸಿನ ಪರಚಿಂತೆಯನ್ನು ನಿರಾಕರಿಸಬೇಕೆಂಬ ನಿಲುವು ಬಸವಣ್ಣನಲ್ಲಿ ಅಭಿವ್ಯಕ್ತಗೊಂಡಿದೆ. ಮನಸ್ಸು ಎಂದಿಗೂ ಒಂದಲ್ಲ ಒಂದು ರೀತಿಯಲ್ಲಿ ಪರಚಿಂತೆಯಲ್ಲಿ ಮುಳುಗಿ ಪರರ ಸುಖ ದುಃಖಗಳನ್ನು ಯೋಚಿಸಿ ಪರಚಿಂತೆಯಲ್ಲಿಯೇ ಅಲೆದಾಡುತ್ತದೆ. ಹೀಗೆ ಮನಸ್ಸು ಪರಚಿಂತೆಯಲ್ಲಿ ತೊಳಲಾಡುವುದನ್ನು ನಿರಾಕರಿಸುವ ಬಗೆ ಬಸವಣ್ಣನಲ್ಲಿ ಅಭಿವ್ಯಕ್ತಗೊಂಡಿದೆ. ಈ ಕುರಿತು ನಿದರ್ಶನಕ್ಕೆ ಬಸವಣ್ಣನ ವಚನವನ್ನು ಗಮನಿಸಬಹುದು.

"ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ;
ನೆರೆಮನೆಯ ದುಃಖಕ್ಕೆ ಅಳುವರ ಮೆಚ್ಚ
ನಮ್ಮ ಕೂಡಲ ಸಂಗಮದೇವ."[4]

ಇನ್ನೊಬ್ಬರನ್ನು ತಿದ್ದುವುದಕ್ಕೆ ಹೋಗದೆ ಮೊದಲು ತಮ್ಮನ್ನು ತಾವು ತಿದ್ದಿಕೊಳ್ಳಬೇಕೆಂಬ ಬಸವಣ್ಣನ ಚಿಂತನೆ ಮಹತ್ವವಾದುದು. ತಮ್ಮ ತಮ್ಮ ತನುವನ್ನು ಮತ್ತು ಮನಸ್ಸನ್ನು ತಾವೇ ತಿದ್ದಿಕೊಳ್ಳಬೇಕಂಬ ಚಿಂತನೆಯ ಜೊತೆಗೆ ಮನಸ್ಸಿನ ಕೋಪವನ್ನು ನಿಗ್ರಹಿಸಬಕೆಂಬ ಚಿಂತನೆ ಬಸವಣ್ಣನ ವಚನಗಳಲ್ಲಿ ಕಂಡುಬರುತ್ತದೆ.ಮನಸ್ಸಿನ ಕೋಪವನ್ನು ತಣಿಸಿಕೊಂಡು ಶಾಂತವಾಗಿರಬೇಕು ಮತ್ತು ಮನಸ್ಸಿನ ಶಾಂತಿ ಮುಖ್ಯವೆಂಬ ಚಿಂತನೆ ಬಸವಣ್ಣನಲ್ಲಿ ಅಭಿವ್ಯಕ್ತಗೊಂಡಿದೆ. ಈ ಕುರಿತು ನಿದರ್ಶನಕ್ಕೆ ಬಸವಣ್ಣನ ವಚನವನ್ನು ಗಮನಿಸಬಹುದು.

"ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ?
ತನಗಾದ ಆಗೇನು? ಅವರಿಗಾದ ಚೇಗೇನು?
ತನುವಿನ ಕೋಪ ತನ್ನ ಹಿರಿಯತನದ ಕೇಡು.
ಮನದ ಕೋಪ ತನ್ನ ಅರಿವಿನ ಕೇಡು.
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು ಕೂಡಲಸಂಗಮದೇವ"[5]

ಮನಸ್ಸಿನ ಕೋಪವನ್ನು ಕೊನೆಗೊಳಿಸಬೇಕೆಂಬ ಚಿಂತನೆ ಬಸವಣ್ಣನ ಈ ವಚನದಲ್ಲಿ ಕಂಡುಬರುತ್ತದೆ. ತನುವಿನ ಕೋಪ ತನ್ನ ಹಿರಿತನದ ಕೇಡೆಂದು ಪರಿಭಾವಿಸುವ ಬಸವಣ್ಣ, ಮನಸ್ಸಿನ ಕೋಪವನ್ನು ಅರಿವಿನ ಕೇಡೆಂದು, ಮನಸ್ಸಿನ ಕೋಪ ವ್ಯಕ್ತಿಯ ಅಜ್ಞಾನದ ಕೇಡೆಂದು ತಿಳಿಸುತ್ತಾ ಈ ಮನದ ಕೋಪವನ್ನು ತಣಿಸದಿದ್ದರೆ ವ್ಯಕ್ತಿಯ ವ್ಯಕ್ತಿತ್ವವೇ ನಾಶವಾಗುತ್ತದೆಂದು ತಿಳಿಸಿದ್ದಾರೆ. ಹೇಗೆ ಮನೆಗೆ ಹೊತ್ತಿಕೊಂಡ ಬೆಂಕಿ ಮನೆಯನ್ನೇ ಸುಡುತ್ತದೆ ಹೊರತಾಗಿ ನೆರೆ ಮನೆಯನ್ನು ಸುಡುವುದಿಲ್ಲ ಅಂತೆಯೇ ಪರರ ಮೇಲೆ ಮುನಿದು ಅವರನ್ನು ನಮ್ಮ ಮನಸ್ಸಿನಲ್ಲಿ ಕೋಪಿಸುವುದರಿಂದ ನಮ್ಮ ಮಾನಸಿಕ ನೆಮ್ಮದಿಯೇ ಹಾಳಾಗುತ್ತದೆ ಹೊರತಾಗಿ ಪರರಿಗೆ ಏನು ಹಾಗುವುದಿಲ್ಲ. ಮನಸ್ಸಿನ ಕೋಪ ನಮ್ಮ ವ್ಯಕ್ತಿತ್ವವನ್ನೇ ದಹಿಸುತ್ತದೆ ಆದ್ದರಿಂದ ಮನದ ಕೋಪವನ್ನು ಬಸವಣ್ಣನವರು ಅರಿವಿನ ಕೇಡೆಂದು ತಿಳಿಸಿದ್ದಾರೆ. ಹೀಗೆ ಮನಸ್ಸಿನ ಕೋಪವನ್ನು ತಣಿಸಬೇಕೆಂಬ ಚಿಂತನೆ ಮಹತ್ವವಾದುದಾಗಿದೆ.

ಮನಸ್ಸಿನ ಭಾವಶುದ್ಧತೆಯ ಕುರಿತ ಚಿಂತನೆ ಬಸವಣ್ಣನ ವಚನಗಳಲ್ಲಿ ಕಂಡುಬರುತ್ತದೆ. ಮನುಷ್ಯನ ದೈಹಿಕ ಶುದ್ಧಿಯಂತೆ ಆತನ ಮಾನಸಿಕ ಶುದ್ಧಿಯೂ ಸಹ ಅತ್ಯಂತ ಮುಖ್ಯವಾದುದಾಗಿದೆ. ಮನಸ್ಸಿನ ಶುದ್ಧಿಯ ಕುರಿತ ಚಿಂತನೆಗಳು ಬಸವಣ್ಣನಲ್ಲಿ ಅಭಿವ್ಯಕ್ತಗೊಂಡಿದೆ. ಈ ಕುರಿತು ನಿದರ್ಶನಕ್ಕೆ ಬಸವಣ್ಣನ ವಚನವನ್ನು ಗಮನಿಸಬಹುದು.

"ಕೆಲಕ್ಕೆ ಶುದ್ಧನಾದೆನಲ್ಲದೆ
ಎನ್ನ ಮನಕ್ಕೆ ಶುದ್ಧನಾಗೆನೇಕಯ್ಯ!
ಕೈ ಮುಟ್ಟಿ ಪೂಜಿಸುವಡೆ ಎನ್ನ ಕೈ ಶುದ್ಧವಲ್ಲಯ್ಯ
ಮನ ಮುಟ್ಟಿ ಪೂಜಿಸುವಡೆನ್ನ ಮನ ಶುದ್ಧವಲ್ಲಯ್ಯ
ಭಾವ ಶುದ್ಧವಾದರೆ
ಕೂಡಲಸಂಗಯ್ಯನಿತ್ತ ಬಾ ಎಂದೆತ್ತಿಕೊಳ್ಳಯ್ಯ?!"[6]

ಮನಸ್ಸಿನ ಶುದ್ಧತೆ ದೈಹಿಕ ಶುದ್ಧಿಗಿಂತಲೂ ಮಹತ್ವವಾದುದು. ಕೆಲಕ್ಕೆ ಶುದ್ಧನಾಗಿ, ತನ್ನ ಮನಕ್ಕೆ ಶುದ್ಧನಾಗದ ಪರಿಯನ್ನು ಬಸವಣ್ಣ ಈ ವಚನದಲ್ಲಿ ಅಭಿವ್ಯಕ್ತಿಸಿದ್ದಾರೆ. ಮನಮುಟ್ಟಿ ಪೂಜಿಸಲಾಗದ ಬಗೆ ಬಸವಣ್ಣನ ವಚನದಲ್ಲಿ ಪ್ರಮುಖವಾಗಿ ಅಭಿವ್ಯಕ್ತಗೊಂಡಿದೆ. ಮನಸ್ಸಿನ ಚಂಚಲತೆಗಳು ಕೊನೆಗೊಳ್ಳಬೇಕಾದರೆ ಮೊದಲು ಮನಸ್ಸಿನ ಭಾವನೆಗಳು ಶುದ್ಧಿಯಾಗಬೇಕು. ಹೀಗೆ ಮನಸ್ಸಿನ ಭಾವನೆಗಳು ಶುದ್ಧಿಯಾದರೆ ಕೂಡಲಸಂಗಮದೇವನೆ ಭಕ್ತಿಯ ಲೋಕಕ್ಕೆ ಬಾ ಎಂದು ತನ್ನನ್ನು ಕರೆದುಕೊಳ್ಳುತ್ತಾನೆಂಬ

ಬಸವಣ್ಣನ ಈ ನಿಲುವು ಮನಸ್ಸಿನ ಭಾವಶುದ್ಧತೆಯ ಮಹತ್ವವನ್ನು ಸಾರುತ್ತದೆ. ಬಸವಣ್ಣನ ಒಟ್ಟು ವಚನಗಳ ಆಶಯಗಳು ತನ್ನನ್ನು ತಾನು ತಿಳಿಯುವ ಬಗೆಯನ್ನು ಒಳಗೊಂಡಿವೆ. ಬಸವಣ್ಣನ ವಚನಗಳಲ್ಲಿ ಮನಸ್ಸಿನ ಮನೋವೈಜ್ಞಾನಿಕ ವಿಶ್ಲೇಷಣೆಯ ವಿವಿಧ ಆಯಾಮಗಳು ಪ್ರಮುಖವಾಗಿ ಕಂಡುಬರುತ್ತವೆ.

ಕೊನೆ ಟಿಪ್ಪಣಿಗಳು

1 ಬಸವಣ್ಣನವರ ವಚನಗಳು (ಸಂ) ಡಾ. ಎಲ್. ಬಸವರಾಜು, ಸಪ್ನ ಬುಕ್ ಹೌಸ್, ಬೆಂಗಳೂರು, ಹತ್ತೊಂಭತ್ತನೇ ಮುದ್ರಣ–ಆಗಸ್ಟ್ 2023. ವ.ಸಂ–20, ಪು.ಸಂ–54–55.

2 ಅದೇ, ವ.ಸಂ–21, ಪು.ಸಂ–55.

3 ಅದೇ. ವ.ಸಂ–17, ಪು.ಸಂ–54.

4 ಅದೇ, ವ.ಸಂ–80, ಪು.ಸಂ–69.

5 ಅದೇ, ವ.ಸಂ–172, ಪು.ಸಂ.92–93.

6 ಅದೇ. ವ.ಸಂ–189, ಪು.ಸಂ–97.

ಆಕರ ಗ್ರಂಥಗಳು

1 ಬಸವಣ್ಣನವರ ವಚನಗಳು, (ಸಂ) ಡಾ. ಎಲ್. ಬಸವರಾಜು, ಸಪ್ನ ಬುಕ್ ಹೌಸ್, ಬೆಂಗಳೂರು, ಹತ್ತೊಂಭತ್ತನೇ ಮುದ್ರಣ–ಆಗಸ್ಟ್ 2023.

ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ಸುಬ್ರಾಯ ಚೊಕ್ಕಾಡಿ ಅವರ 'ಸಂತೆಮನೆ' ಕಾದಂಬರಿಯ ವಿಶ್ಲೇಷಣೆ

ಸುರೇಶ್‌ಕುಮಾರ್ ಬಿ. ಸಿ.
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು, 57000

ಸುಬ್ರಾಯ ಚೊಕ್ಕಾಡಿ ಅವರು ನವ್ಯ ಕಾಲಘಟ್ಟದ ಪ್ರಮುಖ ಲೇಖಕರಲ್ಲಿ ಒಬ್ಬರಾಗಿದ್ದು. ಇವರು ಚಿಕ್ಕಂದಿನಲ್ಲಿಯೇ ಸಾಹಿತ್ಯಕ ಮತ್ತು ಸಾಂಸ್ಕೃತಿಕ ವಾತಾವರಣದಲ್ಲಿ ಬೆಳೆದವರು ತಂದೆ ಅಜ್ಜನಗದ್ದೆ ಗಣಪಯ್ಯ ಅವರು ಮೂಲತಃ ಭಾಗವತರಾಗಿದ್ದರಿಂದ ಮನೆಯ ಕೌಟುಂಬಿಕ ವಾತಾವರಣ ಅವರಿಗೆ ಓದಿನಲ್ಲಿ ಆಸಕ್ತಿಯನ್ನು ಉಂಟು ಮಾಡಿತು. ಅಧ್ಯಾಪಕರಾಗಿ ವೃತ್ತಿಯನ್ನು ಆರಂಭಿಸಿದ ಚೊಕ್ಕಾಡಿ ಅವರು 38 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಅಧ್ಯಾಪನದ ಜೊತೆಗೆ ಸಾಹಿತ್ಯದ ರಚನೆಯಲ್ಲಿಯು ತೊಡಗಿಸಿಕೊಂಡಿರುವ ಚೊಕ್ಕಾಡಿ ಅವರು ಕವನ, ಕಥೆ, ಕಾದಂಬರಿ, ಆತ್ಮಕಥೆ, ವಿಮರ್ಶೆ, ಸಂಪಾದನೆ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಇವರ ಕಥೆ, ಕವನ, ವಿಮರ್ಶಾ ಲೇಖನಗಳು ಸಾಕ್ಷಿ, ರುಜುವಾತು, ಸಂಕ್ರಮಣ, ಯುಗಪುರುಷ, ಮುಂತಾದ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇವರ ಸಾಹಿತ್ಯದ ಸಾಧನೆಯನ್ನು ಗುರುತಿಸಿ ಸರ್ಕಾರ ಹಾಗೂ ಸಂಘ ಸಂಸ್ಥೆಗಳು ಹಲವಾರು ಪ್ರಶಸ್ತಿಯನ್ನು ಕೊಟ್ಟು ಗೌರವಿಸಿವೆ.

ಸುಬ್ರಾಯ ಚೊಕ್ಕಾಡಿ ಅವರ ಆಸಕ್ತಿ ಕ್ಷೇತ್ರ ಕಾವ್ಯವಾಗಿದ್ದರೂ 'ಸಂತೆಮನೆ' ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಈ ಕಾದಂಬರಿಯ ನಾಯಕನಾದ ಮನೋಹರ ಉಪನ್ಯಾಸಕನಾಗಿದ್ದು. ವಿದ್ಯಾರ್ಥಿ ಮೆಚ್ಚಿನ ಶಿಕ್ಷಕರಾಗಿದ್ದರು. ಚಿಕ್ಕಂದಿನಲ್ಲಿಯೇ ತಂದೆ ತಾಯಿಯನ್ನು ಕಳೆದುಕೊಂಡು ಮಾವನ ಆಶ್ರಯದಲ್ಲಿಯೇ ಬೆಳೆಯುತ್ತಾನೆ. ಚಿಕ್ಕಂದಿನಿಂದಲೂ ಒಂಟಿತನವನ್ನು ಅನುಭವಿಸುತ್ತಿದ್ದ ಮನೋಹರನಿಗೆ ಬದುಕಿಗೆ ಆಸರೆಯಾಗಲಿ ಎಂದು ಸಾವಿತ್ರಿ ಎಂಬ ಹುಡುಗಿಯನ್ನು ತಂದು ಮದುವೆ ಮಾಡುತ್ತಾನೆ. ಪ್ರಾರಂಭದಲ್ಲಿ ಯಾವುದೇ ಸಮಸ್ಯೆಗಳಿಲ್ಲದೆ ಸಂಸಾರವನ್ನು ನಿಭಾಯಿಸಿಕೊಂಡು ಹೋಗುತ್ತಿದ್ದ ಮನೋಹರ ದಿನಗಳು ಕಳೆದಂತೆ ಮಾನಸಿಕವಾಗಿ ಕುಗ್ಗಿ ಹೋಗುತ್ತಾನೆ. ವೈಯಕ್ತಿಕ ಬದುಕು ಅಷ್ಟೇನೂ ಮಹತ್ವವನ್ನು ಪಡೆದಿರುವುದಿಲ್ಲ.

ಸಂತೆಮನೆ ಕಾದಂಬರಿಯ ನಾಯಕ ಮನೋಹರನು ವಿದ್ಯಾರ್ಥಿಗಳ ಮೆಚ್ಚಿನ ಶಿಕ್ಷಕನಾಗಿದ್ದರೂ ಆತನು ವೈಯಕ್ತಿಕ ಬದುಕು ಅಷ್ಟೇನು ಮಹತ್ವವನ್ನು ಪಡೆದಿರಲಿಲ್ಲ. ಮನೋಹರನು ಸಾವಿತ್ರಿಯನ್ನು ಮದುವೆಯಾದ ಪ್ರಾರಂಭದ ದಿನಗಳಿಗಿಂತ ನಂತರದ ದಿನಗಳು ಅವರಿಗೇನೂ ಸಂತೋಷವನ್ನುಂಟು ಮಾಡಿರಲಿಲ್ಲ. ಸಾವಿತ್ರಿಯ ತನ್ನ ಸಂಸಾರಿಕ ಸುಖಕ್ಕಿಂತ ವೈಯಕ್ತಿವಾದ ಬದುಕಿನ ಕಡೆಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತಿದ್ದಳು. ಆದ್ದರಿಂದ ಅವರ ಬದುಕಿನಲ್ಲಿ ಸಂತೋಷ ಕೂಡಿರಲು ಸಾಧ್ಯವಾಗಲೇ ಇಲ್ಲ. ಮನೋಹರ ಮತ್ತು ಸಾವಿತ್ರಿ ಇಬ್ಬರ ಮನಸ್ಥಿತಿಯು ಒಂದೇ ರೀತಿಯಾಗಿದ್ದರೂ ಅವರ ಆಲೋಚನ ಕ್ರಮಗಳು ಮಾತ್ರ ವಿರುದ್ಧವಾಗಿದ್ದವು. ಮನೋಹರನಿಗೆ ತನ್ನ ಭಾವನೆಗೆ ಸ್ಪಂದಿಸುವ ಮತ್ತೊಂದು ಮನಸ್ಸಿನ ಕಡೆಗೆ ತುಡಿತವಿದ್ದರೆ ಕಟ್ಟಿಕೊಂಡ ಹೆಂಡತಿಯ ಭಾವನೆಗಳಿಗೆ ಸ್ಪಂದಿಸುವುದಿಲ್ಲ ಎಂಬ ಮಾನಸಿಕ ಖಿನ್ನತೆಯು ಆಕೆಯನ್ನು ಅಕ್ರೋಶಕ್ಕೆ ಗುರಿ ಮಾಡುತ್ತದೆ.

ಮಾನಸಿಕ ದೃಢತೆಯನ್ನು ತೆಗೆದುಕೊಳ್ಳಲು ವಿಫಲತೆ ಹೊಂದಿದಾಗ ಆಕೆಯಲ್ಲಿ ಹಲವಾರು ಋಣಾತ್ಮಕ ಆಲೋಚನಾ ಕ್ರಮಗಳು ಒಂದೊಂದಾಗಿ ಸೇರಿಕೊಂಡು ಬದುಕಿನ ಕ್ರಮವೇ ಹಳಿತಪ್ಪುತ್ತದೆ. ಸಾಮಾಜಿಕ ವ್ಯವಸ್ಥೆಯೊಳಗೆ ಇದನ್ನೆಲ್ಲ ಧೈರ್ಯವಾಗಿ ಎದುರಿಸುವಲ್ಲಿ ಹೇಗೆ ವಿಫಲತೆ ಹೊಂದುತ್ತಾಳೆ ಎಂಬುದನ್ನು ಕಾದಂಬರಿಯೂ ಅಭಿವ್ಯಕ್ತಿಸುತ್ತದೆ. ಇಬ್ಬರಲ್ಲೂ ಕೋಪ, ಆಕ್ರೋಶ, ಅಸಮಾಧಾನಗಳಿವೆ ಅದೆಲ್ಲವನ್ನು ನಿಗ್ರಹಿಸಿಕೊಳ್ಳುವ ಮನಃಸ್ಥಿತಿ ಇಲ್ಲದೆ ಇದ್ದಾಗ ಬದುಕು ದುರಂತವನ್ನು ಕಾಣುತ್ತದೆ. ಸಾವಿತ್ರಿ ಮತ್ತು ಮನೋಹರನ ವಿಷಯದಲ್ಲಿಯೂ ಅದೇ ಆಗಿದೆ. ಸಾವಿತ್ರಿ ತನ್ನ ಕೌಟುಂಬಿಕ ಬಿಕ್ಕಟ್ಟಿನೊಳಗೆ ಎದುರಾಗುವ ಅನ್ಯಾಯದ ವಿರುದ್ಧ ಧ್ವನಿ ಎತ್ತುತ್ತಾಳೆ.

ಮನೋಹರನು ಸಾವಿತ್ರಿಯ ಸಂಸಾರಿಕ ಬದುಕಿನಲ್ಲಿ ಯಾವತ್ತೂ ನೆಮ್ಮದಿಯನ್ನು ಕಾಣಲಿಲ್ಲ. ಸಾವಿತ್ರಿಯ ಜೀವನ ಶೈಲಿಯು ಮನೋಹರ ಆರ್ಥಿಕ ಸ್ಥಿತಿಗತಿಗೆ ಹೊಂದಿಕೊಳ್ಳದೆ ಇದ್ದಾಗ ಸಂಸಾರಿಕ ಬದುಕಿನಲ್ಲಿ ಹಲವಾರು ಏರುಪೇರುಗಳು ಉಂಟಾಗುತ್ತವೆ. ಅದು ಇಬ್ಬರೂ ವಿಚ್ಛೇದನವನ್ನು ಪಡೆದುಕೊಳ್ಳುವ ಹಂತವನ್ನು ತಲುಪುತ್ತದೆ. ಸಂಸಾರಿಕ ಬದುಕಿನಲ್ಲಿ ಸುಖವನ್ನು ಕಾಣದ ಮನೋಹರನು ಅದನ್ನು ಪಾರ್ವತಿಯ ಮುಖಾಂತರ ಪಡೆದುಕೊಂಡು ತನ್ನ ಅಸ್ಥಿತ್ವವನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಚಿಕ್ಕಂದಿನಿಂದಲೂ ತಂದೆ ತಾಯಿಯ ಪ್ರೀತಿಯಿಂದ ವಂಚಿತಳಾದ ಪಾರ್ವತಿಗೆ ಮನೋಹರ ಸಾಂಗತ್ಯ ಅತ್ಯಂತ ಸಂತೋಷವನ್ನುಂಟು ಮಾಡುತ್ತದೆ. ಪಾರ್ವತಿ ಕೆಳಜಾತಿಯಾವಳಾಗಿದ್ದರೂ ಮನೋಹರನಿಗೆ ಅದ್ಯಾವುದೂ ಮುಖ್ಯವಾಗುವುದಿಲ್ಲ. ಅದೆಲ್ಲಕ್ಕಿಂತ ಮನುಷ್ಯತ್ವದಿಂದ ಕೂಡಿದ ಆಕೆಯ ಪ್ರೀತಿಯ ಅಪ್ಪುಗೆ ಮಾತ್ರ ಮುಖ್ಯ ಎನ್ನುವ ಮನೋಹರನ ಮನುಷ್ಯತ್ವದ ಸಂಬಂಧವನ್ನು ಇಲ್ಲಿ ಕಾಣಬಹುದಾಗಿದೆ. ಮನೋಹರ ಪಾರ್ವತಿಯನ್ನು ಮನಸಾರೆ ಪ್ರೀತಿಸುತ್ತಾನೆ. ಅವರಿಬ್ಬರ ನಡುವೆ ಇದ್ದದ್ದು ನಿಶ್ಕಲ್ಮಷ ಪ್ರೀತಿ ಅಷ್ಟೇ. ಅದರಾಚೆಗೆ ಯಾವುದೇ ದೈಹಿಕ ಸಂಬಂಧವನ್ನು ಹೊಂದಿಲ್ಲದ ಮನೋಹರನನ್ನು ಅಪರಾಧಿಯ ಸ್ಥಾನದಲ್ಲಿ ನಿಲ್ಲುವಂತೆ ಮಾಡುವ ಸಾಮಾಜಿಕ ವ್ಯವಸ್ಥೆ ವಿರುದ್ಧ ಸಾತ್ವಿಕ ಆಕ್ರೋಶವನ್ನು ವ್ಯಕ್ತಪಡಿಸುತ್ತಾನೆ. ಈ ಘಟನೆಯ ಕುರಿತು ಸದ್ಯದ ಪರಿಸ್ಥಿತಿಯಲ್ಲಿ ಆತನು ಯಾವುದೇ ರೀತಿಯ ಪ್ರತಿಕ್ರಿಯೆಯನ್ನು ನೀಡದೆ ಮಾನಸಿಕವಾಗಿ ತುಂಬಾ ವಿಚಲಿತನಾದಂತೆ ತೋರುತ್ತಾನೆ. ಕುಳಿತಲ್ಲಿಯೇ ಮುಷ್ಟಿ ಬಿಗಿ ಹಿಡಿಯುವುದರ ಮೂಲಕ ತನ್ನ ಮನಸ್ಸಿನಲ್ಲಿ ಉಂಟಾಗುವ ಆಕ್ರೋಶವನ್ನು ವ್ಯಕ್ತಪಡಿಸುತ್ತಾನೆ. ಯಾವುದೇ ವ್ಯಕ್ತಿ ತನ್ನದಲ್ಲದ ವಿಚಾರವನ್ನು ಕುರಿತಾದ ಊಹಾಪೋಹಗಳಿಗೆ ತೀವ್ರ ಪ್ರತಿಕ್ರಿಯೆ ನೀಡುವುದನ್ನು ನೋಡಿದಾಗ ಅದು ಆತನ ಮಾನಸಿಕ ಕ್ಷೋಭೆಯನ್ನು ತಲ್ಲಣಗೊಳಿಸುತ್ತದೆ.

ಶಾಲಾ ಕಮಿಟಿ ಮತ್ತು ಊರಿನ ಪ್ರಮುಖರು ಮನೋಹರನ ವಿರುದ್ಧ ನಡೆಸುವ ಹುನ್ನಾರಗಳು ಆತನನ್ನು ಸಂದಿಗ್ಧತೆಗೆ ದೂಡುತ್ತದೆ. ಪಾರ್ವತಿ ಗರ್ಭಿಣಿಯಾಗಿರುವ ವಿಚಾರ ಇಡೀ ಊರನ್ನೇ ವ್ಯಾಪಿಸುತ್ತದೆ. ಆಕೆಯ ಈ ಸ್ಥಿತಿಗೆ ಮನೋಹರನೇ ಕಾರಣ ಎಂಬುದಾಗಿ ಕೆಲವರು ಬಿಂಬಿಸುತ್ತಾರೆ. ಇಂತಹ ಸಂದಿಗ್ಧತೆಗೆ ಒಳಗಾದ ಮನೋಹರನು ಮಾನಸಿಕವಾಗಿ ಕುಗ್ಗಿ ಹೋಗುತ್ತಾನೆ. ಇಂತಹ ವಿಷಮ ಸ್ಥಿತಿಯಲ್ಲಿ ತನ್ನ ನಡುವೆ ಪಿತೂರಿ ನಡೆಯುತ್ತದೆ ಎಂಬುದನ್ನು ಮನಗಂಡಂತಹ ಮನೋಹರನು ಶಾಲಾ ಕಮಿಟಿಯ ಮುಂದೆ "ನನಗೊಂದಿಷ್ಟು ಟೈಮ್ ಕೊಡಿ ಸಾರ್"[1] ಎಂದು ಕೇಳುತ್ತಾನೆ. ಪಾರ್ವತಿಯನ್ನು ಪ್ರೀತಿಸಿದ್ದೇನೆ ಎಂಬ ಕಾರಣಕ್ಕೆ ಆತನನ್ನು ಅಪರಾಧಿ ಪ್ರಜ್ಞೆ ಕಾಡುತ್ತದೆ. ಮನೋಹರನ ಪ್ರಜ್ಞಾವಂತ ವ್ಯಕ್ತಿಯಾಗಿದ್ದೂ ಈ ರೀತಿಯ ಕೃತ್ಯವನ್ನು ಎಸಗಿರುವುದಿಲ್ಲ ಎಂಬುದರ ಅರಿವಿನಲ್ಲಿಯೂ ಒಂದು ಸಾಮಾಜಿಕ ವ್ಯವಸ್ಥೆಯೊಳಗಿನ ಪ್ರಭಾವಿ ವರ್ಗಗಳು ಮನೋಹರನ ವಿರುದ್ಧ ಸಂಚನ್ನು ರೂಪಿಸುತ್ತಾರೆ. ಇದರಿಂದ ಆತನು ಮಾನಸಿಕ ವ್ಯಾಕುಲತೆಗೆ ಒಳಗಾಗುತ್ತಾನೆ. ಕೀಳು ಮಟ್ಟದ ಅಲೋಚನೆಯನ್ನು ಹೊಂದಿರುವ ಜನರು ಮತ್ತು ಶಾಲಾ ಆಡಳಿತ ವ್ಯವಸ್ಥೆಯ ವಿರುದ್ಧ ಸಿಟ್ಟು, ಆಕ್ರೋಶವಿದೆ. ಈ ವಿಚಾರದಿಂದ ತನ್ನ ಸ್ವಾಭಿಮಾನಕ್ಕೆ ದಕ್ಕೆ ಉಂಟಾಗುತ್ತದೆ ಎಂಬ ಕಾರಣಕ್ಕೆ ರಾಜೀನಾಮೆ ಯಂತಹ ನಿರ್ಧಾರಕ್ಕೆ ಬರುತ್ತಾನೆ. ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವ ಮೊದಲು ಅದಕ್ಕೆ ತನ್ನ ಆತ್ಮಸಾಕ್ಷಿ ಒಪ್ಪಿದೆ ಎಂಬುದಕ್ಕೆ ಮನೋಹರನೇ ಸಾಕ್ಷಿ. ವೈಚಾರಿಕತೆಯಿಂದ ಕೂಡಿದ ಮನೋಹರ ಯಾವುದೇ ವಿಚಾರಗಳಿಗೆ ತಕ್ಷಣ ಪ್ರತಿಕ್ರಿಯೆ ನೀಡದೆ ಶಾಂತಚಿತ್ತದಿಂದ ನಡೆದುಕೊಳ್ಳುವುದು ಮನೋಹರನ ಮಾನಸಿಕ ಸ್ಥಿತಿಯನ್ನು

ತಿಳಿಸುತ್ತದೆ. ಮನೋಹರನು ಸಹೋದ್ಯೋಗಿಗಳ ಮತ್ತು ಶಾಲೆಯ ಆಡಳಿತ ವ್ಯವಸ್ಥೆ ಪಿತೂರಿಯಿಂದ ತನ್ನ ಉದ್ಯೋಗವನ್ನು ಕಳೆದುಕೊಳ್ಳುತ್ತಾನೆ. ಮನೋಹರನನ್ನು ಇಂತಹ ಸಂಕಷ್ಟದಿಂದ ಪಾರು ಮಾಡುವ ಸಲುವಾಗಿ ಹಲವು ಪ್ರಯತ್ನಗಳು ನಡೆಯುತ್ತವೆ. ಪ್ರಮಾಣಿಕವಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಮನೋಹರನಿಗೆ ಈ ರೀತಿಯ ಸಂದರ್ಭಗಳು ಅತ್ಯಂತ ನೋವನ್ನುಂಟು ಮಾಡುವಂತಿತ್ತು. ಕಾಲೇಜಿನ ಅಟೆಂಡರ್ ಆದ ಮತ್ತಾಡಿಯು ಕೆಳಜಾತಿಯವನೆಂಬ ಕಾರಣಕ್ಕೆ ಆತನನ್ನು ತಿರಸ್ಕಾರದಿಂದ ಕಾಣುತ್ತಿದ್ದರು ಆದರೆ ಮನೋಹರ ಬ್ರಾಹ್ಮಣ ಜಾತಿಯವನಾದರೂ ಆತನಿಗೆ ತೋರುವ ಪ್ರೀತಿ, ವಿಶ್ವಾಸ, ನಂಬಿಕೆಗಳು ಆತನ ಮಾನವೀಯ ಸಂಬಂಧವನ್ನು ಪ್ರತಿಬಿಂಬಿಸುವಂತಿದೆ. ತನ್ನ ಸಾಂಸಾರಿಕ ಬದುಕಿನಲ್ಲಿ ಉಂಟಾದ ಒಡಕಿನಿಂದ ಮಾನಸಿಕವಾಗಿ ಖಿನ್ನತೆಗೆ ಒಳಗಾಗುತ್ತಾನೆ. ಮನೋಹರನ ಕಲ್ಪನೆಯ ಬದುಕು ಮತ್ತು ವಾಸ್ತವ ಬದುಕಿನ ನಡುವೆ ಎಂದೂ ಸಾಮ್ಯತೆ ಕಾಣಲಿಲ್ಲ. ಪಾರ್ವತಿ ಮತ್ತು ಮನೋಹರರ ನಡುವಿನ ಪ್ರೀತಿಯ ವಿಚಾರವೂ ಎಲ್ಲ ಕಡೆ ಹಬ್ಬಿದರೂ ಮನೋಹರ ಮಾತ್ರ ವಿಚಲಿತಗೊಳ್ಳದೆ ತನ್ನ ಸ್ನೇಹಿತರ ಜೊತೆ ಪಾರ್ವತಿ ಮತ್ತು ತನ್ನ ನಡುವಿನ ಪ್ರೀತಿಯ ವಿಚಾರವನ್ನು ತಿಳಿಸುತ್ತಾನೆ. ಮನೋಹರ ದೈಹಿಕ ಸುಖಕ್ಕಿಂತ ಮಾನಸಿಕ ನೆಮ್ಮದಿ ಮುಖ್ಯ ಎಂಬ ನೆಲೆಯಲ್ಲಿ ಯೋಚಿಸುವ ಆತನಿಗೆ ಪಾರ್ವತಿಯ ಸಾಮೀಪ್ಯ ಬೆಚ್ಚಗಿನ ವಾತಾವರಣವನ್ನು ಸೃಷ್ಟಿಸುವಂತಿತ್ತು.

ಚೆನ್ನಪ್ಪಗೌಡ ಗಣಪತಿ ಭಟ್ಟರ ಮನೆಗೆ ಹೋಗಿ ಮನೋಹರನ ವಿಚಾರವನ್ನೆಲ್ಲ ತಿಳಿಸಿದನು. ಗಣಪತಿ ಭಟ್ಟನು ತಿಮ್ಮಪ್ಪಯ್ಯನಿಗೆ ತಿಳಿಸುತ್ತಾನೆ. ಎಲ್ಲವನ್ನೂ ಗಂಭೀರವಾಗಿ ಕೇಳುತ್ತ ಕುಳಿತ ತಿಮ್ಮಪ್ಪಯ್ಯನ ಮುಖದಲ್ಲಿ ಆತಂಕ, ಚಿಂತೆ ಗಾಢವಾಗಿ ಕಾಡುತ್ತದೆ. ತಿಮ್ಮಪ್ಪನ ಮನಸ್ಸಿನಲ್ಲಿ ಉಂಟಾಗುವ ದುಗುಡ ಆತನ ಆತ್ಮ ಬಲವನ್ನು ಕುಗ್ಗುವಂತೆ ಮಾಡುತ್ತದೆ. ಒಂದು ಕಡೆ ಮನೋಹರನನ್ನು ತಪ್ಪಿತಸ್ಥನ ಸ್ಥಾನದಲ್ಲಿ ನಿಲ್ಲುವಂತೆ ಮಾಡಲು ಸಂಚು ನಡೆದರೆ. ಮತ್ತೊಂದು ಕಡೆ ಮನೋಹರನ ಪರವಾಗಿ ಆತನು ನಿರಪರಾಧಿ ಎಂದು ಆತನನ್ನು ಬಚಾವು ಮಾಡಲು ಹಲವು ತಂತ್ರಗಾರಿಕೆಗಳು ನಡೆಯುತ್ತವೆ. ಮನೋಹರ ಮತ್ತು ಪಾರ್ವತಿಯ ನಡುವಿನ ಸಂಬಂಧದ ಸ್ಪಷ್ಟತೆ ಇಲ್ಲದೆ ಇದ್ದರೂ ಕೂಡ ಜನರ ಮನಸ್ಸಿನಲ್ಲಿ ಉಂಟಾಗುವ ಆತಂಕದ ಮಾತುಗಳು ಮನೋಹರನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲುವಂತೆ ಮಾಡುತ್ತದೆ. ಮನೋಹರ ಉತ್ತಮ ಶಿಕ್ಷಕನಾಗಿ ಹೆಚ್ಚು ಮೆಚ್ಚುಗೆ ಪಡೆದಿದ್ದರೂ ಆತನ ನಡವಳಿಕೆಗಳು ಎಲ್ಲರಲ್ಲಿಯೂ ಸಂಶಯವನ್ನುಂಟು ಮಾಡುವಂತಿದೆ. ಸಾವಿತ್ರಿಯು ತಾನು ಪಡೆದುಕೊಳ್ಳಬೇಕಾದದ್ದು ಸಾಧ್ಯವಾಗದೇ ಇದ್ದಾಗ ಆಕೆಯ ಮನಸ್ಸಿನಲ್ಲಿ ಉಂಟಾಗುವ ಮಾನಸಿಕ ತೊಳಲಾಟಗಳು ಕಾದಂಬರಿಯ ಉದ್ದಕ್ಕೂ ಅಭಿವ್ಯಕ್ತಗೊಂಡಿವೆ. ಯಾವುದೇ ವ್ಯಕ್ತಿಗೆ ಒಂದು ಹಂತದವರೆಗೆ ಮಾತ್ರ ಪ್ರೀತಿ ಕಾಮ ಎಂಬ ಭಾವನೆಗಳು ಅಭಿವ್ಯಕ್ತ ಪಡಿಸುತ್ತಾನೆ. ಹಂತವನ್ನು ದಾಟಿದ ಮೇಲೆ ಆತನಿಗೆ ಬೇಕಾದದ್ದು ಕೇವಲ ಮಾನಸಿಕ ನೆಮ್ಮದಿ ಅಷ್ಟೇ, ಅದು ಮನೋಹರನ ವಿಚಾರದಲ್ಲಿಯೂ ಸ್ಪಷ್ಟವಾಗಿ ಗೋಚರಿಸುತ್ತದೆ.

ಸ್ವಿಟ್ಜರ್‌ಲೆಂಡಿನ ಖ್ಯಾತ ಮನೋವಿಜ್ಞಾನಿ ಕಾರ್ಲ್ ಯೂಂಗ್ ಹೇಳುವಂತೆ "ಅಹಂ ವ್ಯಕ್ತಿಯ ಹೊರಗಣ ಪ್ರಪಂಚದೊಡನೆ ಹೊಂದಿರುವ ಸಂಬಂಧವನ್ನು ಮಾತ್ರ ಪ್ರತಿಬಿಂಬಿಸುತ್ತದೆ"[2] ವ್ಯಕ್ತಿ ಸಮುದಾಯದೊಂದಿಗೆ ನಿರಂತರ ಸಂಪರ್ಕವನ್ನು ಹೊಂದಿರುವುದರಿಂದ ಆತನ ನಡವಳಿಕೆಗಳು ಆ ಮೂಲಕವೇ ರೂಪುಗೊಳ್ಳುತ್ತವೆ. ಸಾವಿತ್ರಿಯೂ ತನ್ನ ಅಹಂ ಮತ್ತು ಹಠಮಾರಿತನದಿಂದಲೇ ತನ್ನ ಬದುಕಿನ ದುರಂತವನ್ನು ಕಾಣುತ್ತಾಳೆ. ಮನೋಹರನ ಶುಷ್ಕ ಬದುಕಿಗೆ ಪಾರ್ವತಿಯ ಆಗಮನ ಆತನಿಗೆ ನೆಮ್ಮದಿಯ ವಾತಾವರಣವನ್ನು ಉಂಟು ಮಾಡುತ್ತದೆ. ತಂದೆ ತಾಯಿ ಯಾರು ಇಲ್ಲದ ಅನಾಥ ಮನೋಹರನಿಗೆ ತನ್ನ ಭಾವನೆಯನ್ನು ಹಂಚಿಕೊಳ್ಳಲು ಒಬ್ಬ ಸಂಗಾತಿ ಬೇಕು ಅನಿಸುತ್ತದೆ ಯಾಂತ್ರಿಕ ಬದುಕಿನ ಆಚೆಗೆ ಭಾವನೆಯನ್ನು ಮೈತುಂಬಿಕೊಂಡಿರುವ ಜೀವಂತ ಬದುಕು ಬೇಕು ಎಂಬ ಆಶಯ ಹೊಂದಿದ್ದ ಮನೋಹರನಿಗೆ ಪಾರ್ವತಿಯ ಸಾಂಗತ್ಯದ ಸುಖ ನೆಮ್ಮದಿಯ ತಾಣವನ್ನು ಕಲ್ಪಿಸಿ ಕೊಟ್ಟಿತು.

ಸಾವಿತ್ರಿ ಮತ್ತು ಮನೋಹರನ ನಡುವಿನ ಕಿತ್ತಾಟದ ಬದುಕಿಗೆ ಒಂದು ಅರ್ಥ ಕಲ್ಪಿಸಿಕೊಟ್ಟವಳು ಪಾರ್ವತಿ. ಮನೋಹರನಿಗೆ ಪ್ರೀತಿ ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದಳು, ಕಡುಬಡತನದಲ್ಲಿ ಬೆಳೆದ ಪಾರ್ವತಿಗೆ ತಂದೆ ತಾಯಿಯ ಪ್ರೀತಿ ಅಕ್ಕರೆಯಿಂದ

ವಂಚಿತಳಾಗಿ ಒಂಟಿತನವನ್ನು ಅನುಭವಿಸುತ್ತಿದ್ದಳು. ಇಂತಹ ವಿಷಮ ಸ್ಥಿತಿಯಲ್ಲಿಯೂ ಜಾತಿ ಪ್ರಾಯ ಮೊದಲಾದ ಆತಂಕಗಳು ಅಡ್ಡಿ ಬರಲಿಲ್ಲ. ಮನೋಹರ ಸಾವಿತ್ರಿ ನಡುವಿನ ಸಂಸಾರಿಕ ಸಂಬಂಧ ಕೇವಲ ಯಾಂತ್ರಿಕವಾದಂತೆ ಇದ್ದು ಮನೋಹರನಾಗಲಿ ಸಾವಿತ್ರಿಯಾಗಲಿ ಭಾವನಾತ್ಮಕ ಸಂಬಂಧವನ್ನು ಹೊಂದಿದವರಲ್ಲ. ಹೆಣ್ಣಿನ ಭಾವನೆಗಳಿಗೆ ಮನೋಹರನು ಸ್ಪಂದಿಸಲಿಲ್ಲ, ಹಾಗೆಯೇ ಮನೋಹರನಿಗೆ ಪ್ರೀತಿ ಪ್ರೇಮ ಸಾಂಗತ್ಯದ ಸ್ಪಂದನೆಯು ಸಾವಿತ್ರಿಯಿಂದಲೂ ಇಲ್ಲದೆ ಇರುವುದರಿಂದ ಇಬ್ಬರು ಮಾನಸಿಕವಾಗಿ ಕುಗ್ಗಿ ಹೋಗಿದ್ದರು. ಅಂತಹ ಸಂದರ್ಭದಲ್ಲಿ ಮನೋಹರನ ಹತ್ತಿರವಾದವಳೇ ಪಾರ್ವತಿ ಮನೋಹರ ಪಾರ್ವತಿಯೊಂದಿಗಿನ ಸಂತೋಷದ ಕ್ಷಣಗಳಿಗೆ ಹೆಚ್ಚು ಭಾವುಕನಾಗುತ್ತಾನೆ. ಸ್ವರ ಕಂಪಿಸುತ್ತ ಕಣ್ಣುಗಳಲ್ಲಿ ಹನಿ ಒಡೆಯುತ್ತವೆ. ತಂದೆ ತಾಯಿ ಇಲ್ಲದ ಮನೋಹರನಿಗೆ ಸಾವಿತ್ರಿ ಹೆಂಡತಿಯಾಗಿ ಬಂದ ನಂತರ ಖುಷಿಯಿಂದ ಜೀವನ ಸಾಗಿಸಬೇಕಾದ ಮನೋಹರನಿಗೆ ಆಕೆಯ ಸಾಂಗತ್ಯವು ಕ್ಷಣ ಕಾಲವಾದ್ದರಿಂದ ಮತ್ತೆ ಒಂಟಿತನ ಆತನನ್ನು ಕಾಡುತ್ತದೆ. ಸಾವಿತ್ರಿ ಯಾವತ್ತೂ ಮನೋಹರನ ಅಂತರಂಗದ ಭಾವನೆಗಳಿಗೆ ಸ್ಪಂದಿಸಿದವಳಲ್ಲ, ಆಕೆಗೆ ಹಣ ಅಂತಸ್ತು ಎಂಬ ಲೌಕಿಕ ಸುಖದ ಹಿಂದೆ ಬಿದ್ದವಳು. ಸಾವಿತ್ರಿ ಶ್ರೀಮಂತರ ಮನೆಯಿಂದ ಬಂದವಳಾದ್ದರಿಂದ ಸಂಕಷ್ಟದ ದಿನಗಳನ್ನು ಕಂಡವಳೇ ಅಲ್ಲ. ಸಾವಿತ್ರಿ ಏಕಾಂಗಿಯಾಗಿ ಇಂತಹ ಸಂಕಷ್ಟಗಳಿಗೆ ಹೊಂದಿಕೊಳ್ಳಲಾಗದೆ ಮಾನಸಿಕ ಉದ್ವೇಗಗಳಿಗೆ ಒಳಗಾಗಿ ಕೋಪ, ಆಕ್ರೋಶ, ಅಸಹನೆಗಳನ್ನು ವ್ಯಕ್ತಪಡಿಸುತ್ತಾಳೆ. ಕೊನೆಗೆ ಈತನನ್ನು ಬಿಟ್ಟು ತವರು ಮನೆಯನ್ನು ಸೇರಿಕೊಳ್ಳುತ್ತಾನೆ. ತಂದೆ, ತಾಯಿ ಹೆಂಡತಿ ಮಕ್ಕಳಿಂದ ದೂರವಾದ ಮನೋಹರನು ಕೊನೆಗೆ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ಪಾರ್ವತಿಯಿಂದಲೂ ದೂರವಾಗುತ್ತಾನೆ. ಮನೋಹರ ಮೇಲ್ಜಾತಿಯವನು ಎಂಬ ಕಾರಣಕ್ಕೆ ಕೆಳಜಾತಿ ಹೆಣ್ಣು ಮಕ್ಕಳನ್ನು ತಮ್ಮ ಇಷ್ಟ ಬಂದ ಹಾಗೆ ಬಳಸಿಕೊಳ್ಳುತ್ತಿದ್ದಾನೆ ಎಂದು ಮನೋಹರನ ವಿರುದ್ಧವಾಗಿ ದೂರು ಕೊಡುವಂತೆ ಪಾರ್ವತಿಗೆ ತಿಳಿಸುತ್ತಾರೆ. ಪಾರ್ವತಿಯ ಈ ನಡೆಯು ಮನೋಹರನನ್ನು ಮಾನಸಿಕವಾಗಿ ಘಾಸಿಯಾಗುವಂತೆ ಮಾಡುತ್ತದೆ. ಕೊನೆಗೆ ಮನೋಹರ ಎಲ್ಲರನ್ನೂ ಕಳೆದುಕೊಂಡು ಏಕಾಂಗಿಯಾಗುತ್ತಾನೆ. ಮನೋಹರ ಅಜ್ಞಾತವಾಗಿರುವುದರಿಂದ ತನ್ನ ದುರಂತದ ಕ್ಷಣಗಳಿಂದ ಆತ್ಮಹತ್ಯೆಮಾಡಿಕೊಂಡಿರಬಹುದೆಂದು ಊಹಿಸುತ್ತಾರೆ. ಆದರೆ ಮನೋಹರ ಯಾವುದೋ ಹೊಟೇಲ್‌ನಲ್ಲಿ ಕ್ಯಾಶಿಯರ್ ಆಗಿ ಕೆಲಸ ಮಾಡುತ್ತಿರುವ ಮನೋಹರನನ್ನು ವಿಚಾರಿಸಿದ ಮಾಣೀಗೆ ತೀವ್ರವಾದ ಪ್ರತಿಕ್ರಿಯೆಯನ್ನು ನೀಡುತ್ತಾನೆ. "ಅವ್ರು ಸತ್ತದ್ದಕ್ಕೆ ಕೊಂದ ನೀವೇ ಸಾಕ್ಷಿ"[3] ಎಂದು ತನ್ನ ಆಕ್ರೋಶವನ್ನು ವ್ಯಕ್ತ ಪಡಿಸುತ್ತಾನೆ.

ಒಟ್ಟಾರೆಯಾಗಿ ಪ್ರತಿಯೊಬ್ಬ ಮನುಷ್ಯನು ಪ್ರೀತಿ, ಉದ್ಯೋಗ ಮತ್ತು ಸಮಾಜ ಎಂಬ ಸವಾಲುಗಳನ್ನು ಎದುರಿಸಬೇಕಾದ ಸಂದರ್ಭ ನಿರ್ಮಾಣವಾಗುತ್ತದೆ. ಮನುಷ್ಯ ನಾಗರೀಕನಾದಂತೆ ತನ್ನ ಸಣ್ಣತನದಿಂದ ಸಮಾಜಿಕ ಸ್ವಾಸ್ಥ್ಯ ಹಾಳಾಗುತ್ತದೆ. ಮನುಷ್ಯನ ಮೇಲೆ ಸುತ್ತಮುತ್ತಲಿನ ಪರಿಸರ ಮತ್ತು ಸಮಾಜ ಪ್ರಭಾವ ಬೀರುವುದರಿಂದ ಆತನಲ್ಲಿ ಪ್ರೀತಿ, ಪ್ರೇಮ, ಕಾಮ, ಕೋಪ, ಅಸೂಯೆ, ದ್ವೇಷ, ಆಕ್ರೋಶ ಮುಂತಾದ ಧನಾತ್ಮಕ ಮತ್ತು ಋಣಾತ್ಮಕ ಪರಿಣಾಮಗಳು ಉಂಟಾಗುತ್ತವೆ. ಇದರಿಂದ ಸಾಮಾನ್ಯವಾಗಿ ಮಾನಸಿಕ ಉದ್ವೇಗಳಿಗೆ ಒಳಗಾಗುತ್ತಾನೆ. ಕೆಲವರು ಅದನ್ನು ಸೂಕ್ತ ಸಂದರ್ಭದಲ್ಲಿ ಹೊರ ಹಾಕಿದರೆ ಮತ್ತೆ ಕೆಲವರು ಅಂತರ್ಮುಖಿಗಳಾಗುತ್ತಾರೆ. ತಮ್ಮ ಮನಸ್ಸಿನ ಭಾವನೆಗಳು ಕೆಲವು ಮಿತಿಗಳನ್ನು ಒಳಗೊಂಡಿರುತ್ತವೆ ಅಂತಹ ಕೆಲವು ಋಣಾತ್ಮಕ ಭಾವನೆಗಳು ಮಾನಸಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮವನ್ನು ಉಂಟು ಮಾಡುತ್ತವೆ. ಕಾದಂಬರಿಯಲ್ಲಿ ಬರುವ ಪಾರ್ವತಿ, ಮನೋಹರ ಮತ್ತು ಸಾವಿತ್ರಿಯು ಚಿತ್ತ ಚಾಂಚಲ್ಯದಿಂದ ದುರಂತವನ್ನು ಕಾಣುತ್ತಾರೆ.

ಕೊನೆ ಟಿಪ್ಪಣಿ

1.ಸುಬ್ರಾಯ ಚೊಕ್ಕಾಡಿ, ಸಂತೆಮನೆ, ಸಾಧನ ಪ್ರಕಾಶನ ಬೆಂಗಳೂರು ಮುದ್ರಣದ ವರ್ಷ2018 ಪು ಸಂ–57

2.ಕಾರ್ಲ್ ಯೂಂಗ್, ಎಂ. ಬಸವಣ್ಣ (ಪ್ರ ಸಂ) ಜಿ ರಾಜಶೇಖರ ಅಭಿನವ ಪ್ರಕಾಶನ, ಬೆಂಗಳೂರು, ಪರಿಷ್ಕೃತ ಮೊದಲ ಮುದ್ರಣ 2011 ಪು ಸಂ–16

3.ಸುಬ್ರಾಯ ಚೊಕ್ಕಾಡಿ, ಸಂತೆಮನೆ, ಪು ಸಂ–217

ಆಕರ ಗ್ರಂಥ:

1 ಸಂತೆಮನೆ –ಸುಬ್ರಾಯ ಚೊಕ್ಕಾಡಿ, ಸುಬ್ರಾಯ ಚೊಕ್ಕಾಡಿ, ಸಾಧನ ಪಬ್ಲಿಕೇಷನ್, ಬೆಂಗಳೂರು.

ಪರಾಮರ್ಶನ ಗ್ರಂಥಗಳು

1 ಕಾರ್ಲ್ ಯೂಂಗ್, ಎಂ. ಬಸವಣ್ಣ (ಪ್ರ ಸಂ) ಜಿ ರಾಜಶೇಖರ, ಅಭಿನವ ಪ್ರಕಾಶನ, ಬೆಂಗಳೂರು.

2 ಈಡಿಪಸ್ ಕಾಂಪ್ಲೆಕ್ಸ್, ಎಂ ಬಸವಣ್ಣ, ಅಭಿನವ ಪ್ರಕಾಶನ, ಬೆಂಗಳೂರು.

3 ಮುಕ್ತಹಂಸ, ಅರವಿಂದ ಚೊಕ್ಕಾಡಿ(ಸಂ), ಕನ್ನಡ ಸಂಘ ಕಾಂತಾವರ (ರಿ) ಉಡುಪಿ.

ಮಹಾಕಾವ್ಯ, ಕಥೆ, ನಾಟಕಗಳಲ್ಲಿ ಮನೋವೈಜ್ಞಾನಿಕತೆ

ನಂಜಪ್ಪ ಡಿ. ಎಸ್. ಮತ್ತು ಡಾ.ಕೆ.ರಾಮಕೃಷ್ಣಯ್ಯ
ಸಂಶೋಧಾನಾರ್ಥಿ ಮತ್ತು ಮಾರ್ಗದರ್ಶಕರು.
ಕುಣಿಗಲ್ ತಾಲ್ಲೂಕ್, ತುಮಕೂರು ಜಿಲ್ಲೆ

ಗುಡಿ ಚರ್ಚು ಮಸಿಜೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈ ತನ್ನಿ
ವಿಜ್ಞಾನ ದೀವಿಗೆಯ ಹಿಡಿಯಬನ್ನಿ

ಇದು ರಾಷ್ಟ್ರಕವಿ ಕುವೆಂಪು ರವರ ಕಾವ್ಯದ ಸಾಲುಗಳು. ಈ ಸಾಲುಗಳಲ್ಲಿ ವೈಜ್ಞಾನಿಕತೆ ಅಡಗಿದೆ. ಜಾತಿ–ಮತ–ಪಂಥ ಅಂತ ಪ್ರತಿನಿತ್ಯ ಕಿತ್ತಾಡುವ ನಮಗೆ ಗುಡಿ ಚರ್ಚು, ಮಸೀದಿ, ಬಸದಿ ಮುಖ್ಯವಲ್ಲ, ಸಮಾಜದ ಬಡತನವನ್ನು ಹೋಗಲಾಡಿಸಲು, ಮೌಢ್ಯತೆಯನ್ನು ಹೋಗಲಾಡಿಸಲು ವಿಜ್ಞಾನ ಎಂಬ ಜ್ಯೋತಿಯನ್ನು ಹೊತ್ತಿಸೋಣ ಬನ್ನಿ ಎಂದು ಕರೆ ನೀಡಿರುವುದನ್ನು ಈ ಕಾವ್ಯದ ಸಾಲುಗಳಲ್ಲಿ ಕಾಣಬಹುದು.

ನಾವು ಇವತ್ತು ಶಿಕ್ಷಿತರಾಗಿದ್ದೇವೆ, ಸಾಕಷ್ಟು ಸಂಪದ್ಭರಿತವಾಗಿ ಬೆಳೆದಿದ್ದೇವೆ. ಅದರೊಂದಿಗೆ ಅಸ್ಪರ್ಶ್ಯತೆ, ಅಸಮಾನತೆ, ಮೇಲು–ಕೀಳು, ಕುಲ–ಗೋತ್ರ ಅಂತ ಬಡಿದಾಡುತ್ತಿದ್ದೇವೆ. ಇಷ್ಟೆಲ್ಲ ಶಿಕ್ಷಣ ಪಡೆದು ಮತ್ತೆ ನಾವು ಮೇಲೆ, ನೀವು ಕೆಳಗೆ ಅಂತ ಬಡ್ಕೋಳ್ಳೊದಿದ್ರೆ ಶಿಕ್ಷಣದ ಸಾರ್ಥಕತೆ ಎಲ್ಲಿದೆ? ಅಲ್ವಾ? ಜ್ಞಾನ, ವಿಜ್ಞಾನ, ತಂತ್ರಜ್ಞಾನ, ಇವತ್ತಿನ ಕೃತಕ ಬುದ್ಧಮತ್ತೆ ಕಾಲಘಟ್ಟಕ್ಕೆ ತಲುಪಿದರೂ, ಮೌಢ್ಯತೆಯನ್ನು ಪೂಜಿಸುತ್ತಿದ್ದೇವೆ. ಮೂಢನಂಬಿಕೆಗಳನ್ನು ನಂಬುತ್ತಿದ್ದೇವೆ ಅಂದರೆ ನಮ್ಮ ಬೆಳವಣಿಗೆ ಶೂನ್ಯ.

ಇದನ್ನೇ ಹಿಂದೆ ಕನಕದಾಸರು ಕುಲ–ಕುಲಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆ ಏನಾದರೂ ಬಲ್ಲಿರಾ? ಎಂದು. ಬಸವಣ್ಣನವರು ಅದೇ ಹೇಳಿದ್ದು, ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಮಜುಲುಗಳಲ್ಲಿ ಅವುಗಳನ್ನು ಹೇಳುತ್ತಾ ಬಂದರೂ, ಅದನ್ನು ನಾವು ಅದನ್ನು ಅಧ್ಯಯನ ಮಾಡಿದ್ದರೂ, ಅವುಗಳ ಅರಿವಿದ್ದರೂ, ಅದನ್ನೇ ಅಪ್ಪ ಹಾಕಿದ ಆಲದ ಮರ ಎಂದು ಚಾಚುತಪ್ಪದೇ ಪಾಲಿಸುತ್ತಿದ್ದೇವೆ ಅಂದರೆ ಹೇಗೆ? ಕೃತಕ ಬುದ್ಧಿಮತ್ತೆ ಕಾಲದಲ್ಲಿ ಸೃಷ್ಟಿಯಾಗಿರುವ ರೋಬೋಗಳು ಸಹ ನಾವು ಈ ಜಾತಿ, ನೀವು ಆ ಜಾತಿ ಅಂತ ಜಾತಿ ಜಾತಿಯ ರೋಬೋಗಳು ಸೃಷ್ಟಿಯಾಗಿ ಅವುಗಳಿಗೂ ಜಾತಿ ಪ್ರಮಾಣ ಪತ್ರ ವಿತರಿಸುವ ಕಾಲ ದೂರವೇನಿಲ್ಲ.

ಏಕಿಷ್ಟು ಪೀಠಿಕೆ ಹಾಕ್ತಿದ್ದೇನೆ ಅಂದರೆ ಜ್ಞಾನ, ವಿಜ್ಞಾನ, ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಬೆಳೆದಂತೆ ಮನೋವಿಜ್ಞಾನ ಬೆಳೆಯಲೇಬೇಕು. ವಿಜ್ಞಾನ, ತಂತ್ರಜ್ಞಾನ ಮಷೀನ್ ಆದರೆ, ಮನೋವಿಜ್ಞಾನ **"ಮನಸ್ಸು"**, ವಿಜ್ಞಾನ ದೇಹವಾದರೆ, ಮನೋವಿಜ್ಞಾನ

ಮನಸ್ಸು. ಸರಿ–ತಪ್ಪುಗಳನ್ನು ನಿರ್ಧರಿಸುವ, ನಿಯಂತ್ರಿಸುವ, ಮನಸ್ಸನ್ನು ಹತೋಟಿಯಲ್ಲಿಡುವ ಶಕ್ತಿ ಮಷೀನ್ ಗಳಿಗಿರುವುದಿಲ್ಲ, ಮನಸ್ಸಿಗಿರುತ್ತದೆ. ಹಾಗಾಗಿ ಸಾಹಿತ್ಯ ಪ್ರಕಾರಗಳಲ್ಲಿ ಸಹ ಮನೋವೈಜ್ಞಾನಿಕತೆಯನ್ನು ಕಾಣಬಹುದು.

ಮಹಾಕಾವ್ಯಗಳಲ್ಲಿ, ಕಾವ್ಯಗಳಲ್ಲಿ, ಕಥೆಗಳಲ್ಲಿ, ಕಾದಂಬರಿಗಳಲ್ಲಿ, ನಾಟಕಗಳಲ್ಲಿ ಇನ್ನಿತರೆ ಸಾಹಿತ್ಯ ಪ್ರಕಾರಗಳಲ್ಲಿ ಮನೋವೈಜ್ಞಾನಿಕತೆಯನ್ನು ನೋಡುತ್ತೇವೆ. ಅದು ಅಗೋಚರ ಆಗಿರಬಹುದು, ಸೂಕ್ಷ್ಮವಾಗಿ ವಿಶ್ಲೇಷಿಸಿ, ವಿಮರ್ಶಿಸಿದಾಗ ಮಾತ್ರ ಮನೋವೈಜ್ಞಾನಿಕತೆ ಅರಿವಾಗುತ್ತದೆ. ಅದಕ್ಕೆ ಹೇಳೋದು ಮನೋವೈಜ್ಞಾನಿಕತೆ ಕಾಣುವುದಿಲ್ಲ, ಅರಿವಾಗುತ್ತದೆ. ಆಂತರಿಕ ಜ್ಞಾನ, ಜ್ಞಾನೋದಯ, ಇಂದ್ರಿಯಾನುಭವವೇ ಮನೋವೈಜ್ಞಾನಿಕತೆ.

ಸಾಹಿತ್ಯ ಪ್ರಕಾರಗಳಲ್ಲಿ ಮನೋವೈಜ್ಞಾನಿಕತೆಯನ್ನು ಕೇವಲ ಶಿಷ್ಟ ಸಾಹಿತ್ಯಗಳಲ್ಲಿ ಮಾತ್ರವಲ್ಲ, ಜನಪರ ಸಾಹಿತ್ಯಗಳಲ್ಲಿಯೂ ಕಾಣಬಹುದು. ಅದಕ್ಕೆ ಈ ಲೇಖನದ ವ್ಯಾಪ್ತಿಯನ್ನು ಜನಪದ ಮಹಾಕಾವ್ಯ, ಜನಪದ ಕಾವ್ಯ, ಜನಪದ ಕಥೆ, ಜನಪದ ನಾಟಕಗಳನ್ನು ಉಲ್ಲೇಖ ಮಾಡಿ ಮನೋವೈಜ್ಞಾನಿಕತೆಯನ್ನು ಸಂಶೋಧಿಸುವ ಪ್ರಯತ್ನ ಮಾಡುತ್ತೇನೆ.

ಒಬ್ಬ ತಾಯಿ ತನ್ನ ಮಗನಿಗೆ ಜನಪದ ಸಾಹಿತ್ಯದಲ್ಲಿ ಮನೋವಿಜ್ಞಾನವನ್ನು ಯಾವ ರೀತಿ ಭೋದಿಸುತ್ತಾಳೆ ಅನ್ನುವುದನ್ನು ಜನಪದರು, ಜನಪದ ತಾಯಂದಿರು ಕಟ್ಟಿಕೊಳ್ಳುವ ನಿದರ್ಶನ ಕೆಳಗಿನ ಜನಪದ ತ್ರಿಪದಿಗಳಲ್ಲಿ ಕಾಣಬಹುದು.

ಒಳ್ಳೆವ್ರ ಗೆಳೆತನ ಕಲ್ಲು ಸಕ್ಕರೆಯಂಗ
ಕುಲಾರ ಗೆಳೆತನ ಮಾಡಿದರ । ನನ ಕಂದ
ಸಲ್ಲಾದ ಮಾತು ಬುರುತಾವ

ಮೇಲಿನ ಜನಪದ ಕಾವ್ಯ (ತ್ರಿಪದಿ ಸಾಹಿತ್ಯ)ದಲ್ಲಿ ಒಬ್ಬ ತಾಯಿ ತನ್ನ ಕಂದನಿಗೆ ನೀತಿ ಭೋದನೆ, ಮಾರ್ಗದರ್ಶನ ಮಾಡುವ ಸಾಲುಗಳನ್ನು ಮತ್ತು ಸೊಲ್ಲುಗಳನ್ನು ಕಾಣಬಹುದು. ಒಳ್ಳೆವರ ಗೆಳೆತನ ಕಲ್ಲುಸಕ್ಕರೆಯಂತೆ, ಸಿಹಿ ಇದ್ದ ಹಾಗೆ, ಕೆಟ್ಟವರು ಅಂದರೆ ಕುಲ್ಲಾರ ಗೆಳೆತನ ಮಾಡಿದರೆ ನಿನಗೆ ಮತ್ತು ನಿನ್ನನ್ನು ಹಡೆದ ತಂದೆ–ತಾಯಿಗೆ, ಕುಟುಂಬಕ್ಕೆ, ಹಿರಿಯರಿಗೆ ಸಲ್ಲಾದ ಮಾತು ಬರುತ್ತಾವೆ ಎಂದು ಒಳ್ಳೆವರ ಗೆಳೆತನ ಮಾಡು ಎಂದು ಶಿಕ್ಷಣ ಅರಿಯದ, ಅನಕ್ಷರಸ್ಥ ಜನಪದ ತಾಯಿ ತನ್ನ ಕಂದನಿಗೆ ಪಾಠ ಹೇಳಿಕೊಡುತ್ತಾಳೆ. ಅದೂ ಹಾಡಿನ ಮೂಲಕ ಅಂದರೆ ಇದು ನಿಜವಾದ ಮನೋವೈಜ್ಞಾನಿಕತೆ ಅಲ್ಲವೇ?

ಇದನ್ನೇ ಸರ್ವಜ್ಞ
"ಸಜ್ಜನರ ಸಹವಾಸ, ಹೆಜ್ಜೇನು ಸವಿದಂತೆ,
ದುರ್ಜನರ ಸಹವಾಸ ಬಚ್ಚಲ ರೊಚ್ಚಿನಂತೆ ಸರ್ವಜ್ಞ"

ಎಂದು ಜನಪದ ಕವಿ ಸರ್ವಜ್ಞ ಹೇಳಿರುವುದು. ಸಜ್ಜನರು ಅಂದರೆ ಒಳ್ಳೆಯ ಜರ ಸಹವಾಸ ಹೆಜ್ಜೇನು ತುಪ್ಪದಂತೆ, ಹೆಜ್ಜೇನು ಅಂದರೆ ಜೇನುಗಳಲ್ಲಿ ಚಿಟ್ ಜೇನು, ಕಾಡು ಜೇನು, ನಾಯಿ ಜೇನು, ನಾಡು ಜೇನು ಅಂತ ಅನೇಕ ಪ್ರಭೇದಗಳಿವೆ. ಅದರಲ್ಲಿ ಹೆಜ್ಜೇನು ತುಪ್ಪ ಅಂದರೆ ಬಹಳ ಸಿಹಿ, ಹಾಗೆ ಒಳ್ಳೆವರ ಸಹವಾಸ ಜೇನು ತುಪ್ಪ ಇದ್ದಂತೆ, ದುರ್ಜನರು ಅಂದರೆ ಕೆಟ್ಟವರ ಸಹವಾಸ, ಬಚ್ಚಲ ರೊಚ್ಚಿನಂತೆ ಎಮದು ಹೇಳಿದ್ದಾರೆ.

ಅದೇ ಜನಪದ ತಾಯಿ
ಆಡಿ ಬಾ ಎನಕಂದ ಅಂಗಾಲ ತೊಳುದೇನು
ತೆಂಗಿನ ಕಾಯ ತಿಳಿನೀರಾ । ತಕ್ಕೊಂಡು
ಸಿಂಗಾರ ಪಾದ ತೊಳುದೇನಾ

ಜನಪದ ತಾಯಿ ತನ್ನ ಮಗನಿಗೆ 'ಆಡಿಕೊಂಡು ಬಾ, ಅಂಗಾಲ ತೊಳೆಯುತ್ತೇನೆ, ಎಳನೀರಿನಲ್ಲಿ ನಿನ್ನ ಶೃಂಗಾರವಾದ ಪಾದವನ್ನು ತೊಳೆಯುತ್ತೇನೆ' ಎನ್ನುವ ಪದ.

ಓಡಿ ಬಾ ಎನಕಂದ, ಮಾಡಿರುವೆ ನಿನಗಿಂದು
ಗಾಡಿ ತುಪ್ಪಾದ ಕಜ್ಜಾಯ । ತಿನಕೊಂಡು
ಆಡೋಗು ತಿರುಗಿ ಬಯಲೊಳಗೆ

ಈ ಮೇಲಿನ ಜನಪದ ತ್ರಪದಿಗಳನ್ನು ಗಮನಿಸಿದಾಗ, ಜನಪದ ತಾಯಿ ತನ್ನ ಮಗನಿಗೆ ಒಂದು ಗಾಡಿ ತುಪ್ಪದ ಕಜ್ಜಾಯ ಮಾಡಿರುವೆ, ತಿಂದು ಮತ್ತೆ ಆಟ ಆಡುವುದು ಇವತ್ತಿನ ಶಿಕ್ಷಣದಲ್ಲಿ ದೈಹಿಕ ಶಿಕ್ಷಣಕ್ಕೆ ಒತ್ತು ನೀಡಲು ಅಂದಿನಿಂದಲೇ ಶಿಕ್ಷಣವೇ ಇಲ್ಲದ ಕಾಲಘಟ್ಟದಲ್ಲಿ ತಾಯಿ ಮಗನಿಗೆ ಹೇಳುವ ತ್ರಿಪದಿ. ವಿಜ್ಞಾನ, ಮನೋವಿಜ್ಞಾನದ ಅರಿವಿಲ್ಲದ ತಾಯಿ ತನಗೆ ಕಾಣದಂತೆ ಮಗನಿಗೆ ಪಾಠ–ಪ್ರವಚನವನ್ನು ತನ್ನ ಅನುಭವದ, ತನ್ನ ಹಾಡಿನ ಮೂಲಕ ಹೇಳಿಕೊಡುತ್ತಾಳೆ. ಅಂದರೆ ಇದೇ ನಿಜವಾದ ಮನೋವೈಜ್ಞಾನಿಕತೆ. ತಾಯಿ ತನ್ನ ಮಗನಿಗೆ ಒಂದು ರೀತಿಯ ಧೈರ್ಯ, ಸ್ಥೈರ್ಯ, ಸ್ಫೂರ್ತಿ ಮತ್ತು ಪ್ರೇರಣೆ. ಅದಕ್ಕೆ ಹೇಳುವುದು ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು.

ಕೊಟ್ಟು ಕುದಿಯಲು ಬೇಡ । ಇಟ್ಟು ಹಂಗಿಸಬೇಡ
ಎಷ್ಟುಂಡರೆಂದು ಅನಬೇಡ । ನನಕಂದ
ಮುಟ್ಯಾವೋ ಶಿವನ ಸದರೀಗೆ

ಜನಪದ ತಾಯಿ ಮಗನಿಗೆ, ಅಹಂಕಾರ ಪಡಬೇಡ, ದಾನ ಮಾಡು ಆದರೆ ಮಾಡಿದೆ ಅಂತ ಎಲ್ಲೂ ಹೇಳಬೇಡ, ಮಾಡಿ ಹಂಗಿಸಬೇಡ, ತಿಂದು–ತೇಗಿದ್ರು ಅಂತ ಹಿಯ್ಯಾಳಿಸಬೇಡ, ನಾವು ಮಾಡಿದ ದಾನ ಶಿವನ ಸನ್ನಿಧಿಗೆ ತಲುಪುತ್ತೆ ಅಂತ ನೀತಿ ಪಾಠವನ್ನು ಹೇಳಿ ಮಗನಿಗೆ ನೈತಿಕ ಅಂಶಗಳನ್ನು, ಭೌದ್ಧಿಕ ಅಂಶಗಳನ್ನು ತುಂಬುತ್ತಾಳೆ ಎಂದರೆ ಇದೇ ನಿಜವಾದ ಮನೋವೈಜ್ಞಾನಿಕತೆ.

ಆಚಾರಕ್ಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು । ನನಕಂದ
ಜ್ಯೋತಿಯೇ ಆಗು ಜಗಕ್ಕೆಲ್ಲಾ

ಈ ಮೇಲಿನ ಜನಪದ ಕಾವ್ಯದ ತ್ರಿಪದಿಯಲ್ಲಿ ತಾಯಿ ತನ್ನ ಮಗನಿಗೆ ಆಚಾರ, ವಿಚಾರ, ಸಂಸ್ಕಾರದ ಬಗ್ಗೆ ಹೇಳಿಕೊಂಡು ಮತ್ತು ನೀತಿಯನ್ನು ಭೋದಿಸುವ ಮಾತನ್ನು ವಿನಯತೆ, ವಿನಮ್ರತೆ ಕಲಿಸುವ ಮತ್ತು ಬದುಕಿನಲ್ಲಿ ಜ್ಯೋತಿಯಾಗಿ ನಾನಾ ಜನರಿಗೆ, ಅಂಧಕಾರಲ್ಲಿರುವವರಿಗೆ ಬೆಳಕನ್ನು ತರುವ, ಜಗತ್ತಿಗೆ ಜ್ಯೋತಿಯಾಗುವ, ಧೈರ್ಯ, ಆತ್ಮಸ್ಥೈರ್ಯವನ್ನು ತುಂಬುವ ಸಾಲುಗಳು. ಈ ಸಾಲುಗಳನ್ನು ಗಮನಿಸಿದರೆ, ಆಚಾರ–ವಿಚಾರ, ನೀತಿ, ಮಾತು ಎಲ್ಲವನ್ನೂ ನೆನಪಿಸಿಕೊಂಡಂತೆ ಬಸವಣ್ಣನವರು ನೆನಪಾಗುತ್ತಾರೆ. ಆ ಬಸವಣ್ಣನವರು ಹೇಗೆ ಜಗತ್ತಿಗೆ ಜಗಜ್ಯೋತಿ ಬಸವೇಶ್ವರರು ಎಂದರೆ ಬಸವಣ್ಣನ ತಾಯಿಯ ಭೋದನೆ ಈ ಜನಪದ ಸಾಹಿತ್ಯದ ತಿರುಳನ್ನು ಹೊಂದಿರಬಹುದು ಅಲ್ಲವೇ?

ಮಹಾಕಾವ್ಯ ಎಂದರೆ ಶಿಷ್ಟ ಮಹಾಕಾವ್ಯಗಳಲ್ಲದೇ ಜನಪದ ಮಹಾಕಾವ್ಯಗಳನ್ನು ಆಯ್ಕೆ ಮಾಡಿಕೊಂಡಾಗ, ಮಂಟೇಸ್ವಾಮಿ ಮಹಾಕಾವ್ಯದಲ್ಲಿ ಮಂಟೇಸ್ವಾಮಿಯವರು ಬಸವಣ್ಣನವರಿಗೆ ಮೌಢ್ಯತೆಯ ಶರಣರ ಅಜ್ಞಾನಗಳನ್ನು ನಾಶಮಾಡಿ, ವೈಚಾರಿಕ ಮತ್ತು ವೈಜ್ಞಾನಿಕ ಶರಣರನ್ನು ಪರಿವರ್ತಿಸಿ ಶಿಶುಮಕ್ಕಳನ್ನಾಗಿ ಮಾಡಿಕೊಳ್ಳುವ ದೃಶ್ಯ, ಬಸವಣ್ಣನವರ ಪುತ್ರ ರಾಚಪ್ಪನಿಗೆ ಮತ್ತು ದೊಡ್ಡಮ್ಮಳಿಗೆ ಮಂಟೇಸ್ವಾಮಿಯವರು ಹೇಳುವ ಜೀವನ ಪಾಠಗಳು, ಧೈರ್ಯ ಇತ್ಯಾದಿಗಳು ನಿಜವಾದ ಮನೋವೈಜ್ಞಾನಿಕತೆ.

ಮಂಟೆಸ್ವಾಮಿ ಮಹಾಕಾವ್ಯದ ಮುಟ್ಟನಹಳ್ಳಿ ತೋಪಿನ ದೊಡ್ಡಮ್ಮ ತಾಯಿ ಸಾಲುಗಳಲ್ಲಿ, ದೊಡ್ಡಮ್ಮ ತನಗೆ ಒಲ್ಲದ ಗಂಡನನ್ನು ಆಕೆಯ ಚಿಕ್ಕಮ್ಮ ಲಗ್ನ ಮಾಡಿಸಲು ಹೊರಟಾಗ, ಆಕೆ ಆತ್ಮಹತ್ಯೆ ಮಾಡಿಕೊಳ್ಳಲು ಬಾವಿ ಬಳಿ ಬಂದಾಗ, ಮಂಟೇಸ್ವಾಮಿಯವರು ಹೇಳುವ ಸಾಲುಗಳು..

ನೆಲವು ಸತ್ತಿತು ತಾಯಿ ನೀನು ಸತ್ತಾಗ,
ಜಲವು ಸತ್ತಿತು ತಾಯಿ ನೀನು ಸತ್ತಾಗ,
ವಾಯು ಸತ್ತಿತು ತಾಯಿ ನೀನು ಸತ್ತಾಗ,
ಗಗನ ಸತ್ತಿತು ತಾಯಿ ನೀನು ಸತ್ತಾಗ,
ಸತ್ತ ಬಾವಿಗೆ ಬೀಳಬೇಡ

ಸತ್ತ ಸಾವನು ಸಾಯಬೇಡ
ಮಂಟೇದ ಸ್ವಾಮಿ ಬನ್ನಿ, ಪವಾಡ ಗೆದ್ದಯ್ಯ ನೀವೆ ಬನ್ನಿ...

ಈ ಮೇಲಿನ ಮಂಟೇಸ್ವಾಮಿ ಮಹಾಕಾವ್ಯದ ಸಾಲುಗಳು ನಿಜವಾದ ಮನೋವೈಜ್ಞಾನಿಕತೆ ಸಾರುವ ಸಾಲುಗಳು. ಇವತ್ತಿನ ದಿನಗಳಲ್ಲಿ ಶಾಲಾ–ಕಾಲೇಜು ಮಕ್ಕಳು ಫಲಿತಾಂಶಕ್ಕೆ, ಅವಮಾನಕ್ಕೆ ಕುಟುಂಬದ ಜಂಜಾಟಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುವ ಮನಸ್ಥಿತಿಯವರಿಗೆ ಮಾರ್ಗದರ್ಶನ (ಕೌನ್ಸಲಿಂಗ್), ಆತ್ಮಾವಲೋಕನ ನೀಡುವ ಮನೋವಿಜ್ಞಾನ ಚಿಕಿತ್ಸಾಲಯಗಳು (ಕ್ಲಿನಿಕ್‌ಗಳು) ಸ್ಥಾಪನೆ ಆಗಿವೆ. ಅಂದರೆ ಹಿಂದೆ ಸುಮಾರು 12ನೇ ಶತಮಾನದ ಜನರ ಕಥೆ, ಕಾವ್ಯ, ಮಹಾಕಾವ್ಯಗಳಲ್ಲಿ ಅನಕ್ಷರಸ್ಥ ಹೆಣ್ಣುಮಗುವೊಂದು ಒಲ್ಲದ ಮನಸ್ಥಿತಿಯಲ್ಲಿ ಲಗ್ನಕ್ಕೆ ತಲೆಕೊಡಲು ಬಾರದೆ ಬಾವಿಗೆ ಬೀಳುವ ಸಂಧರ್ಭದಲ್ಲಿ ಕಾಲಜ್ಞಾನಿ ಮಂಟೇಸ್ವಾಮಿ ನೀತಿ ಹೇಳಿಕೊಟ್ಟು ಸಾವನ್ನು ತಪ್ಪಿಸಿದ ಘಟನೆ ಅಂದಿನ ಮನೋವೈಜ್ಞಾನವೇ ಸರಿ. ಅದಕ್ಕೆ ಮಂಟೇಸ್ವಾಮಿಯನ್ನು ಕಾಲಜ್ಞಾನಿಗಳು ಎನ್ನುವರು. ಮಂಟೇಸ್ವಾಮಿಯವರು ಬಾವಿಗೆ ಬೀಳುವ ದೊಡ್ಡಮ್ಮ ತಾಯಿಯನ್ನು ತಡೆದು **"ಯಾಕಮ್ಮ ಬಾವಿಗೆ ಬೀಳುತ್ತಿಯಾ, ನೀನಾಗಲೇ ಸತ್ತಿದ್ದೀಯ, ಸತ್ತು ಮತ್ತೆ ಯಾಕೆ ಸಾಯ್ತಿಯ? ನಿನ್ನ ಚಿಕ್ಕಮ್ಮ ಕೊಟ್ಟ ನೋವಿನಾಗೆ, ನಿನ್ನಮ್ಮ ಇಲ್ಲದ ಬದುಕಿನಾಗೆ ನೀನಾಗಲೇ ಸತ್ತಿದ್ದೀಯ"** ಎಂದಾಗ, ದೊಡ್ಡಮ್ಮ **"ಹಾಗಾದ್ರೆ ಈ ನೀರು, ಬಾವಿ, ನೆಲ, ಎಲ್ಲಾ?"** ಎಂದಾಗ, **"ಇದು ಸತ್ತ ನೆಲ, ಸತ್ತ ಜಲ, ಸತ್ತ ಆಕಾಶ, ಸತ್ತ ಗಾಳಿ"** ಎಂದು ಸತ್ತ ಸಮಾಜದಲ್ಲಿ ಬದುಕುಳಿಯಲೇಬೇಕು. ಇದ್ದು ಬದುಕಿ ಬಾಳಬೇಕು, ಸಾಧನೆ ಮಾಡಬೇಕು. ನಿನಗೆ ನೀನು ಇಷ್ಟ ಪಡುವ ಚಂದ್ರನಂಗೆ ಹೊಳೆಯುವ, ಸೂರ್ಯನಂಗೆ ಸುರಿಯುವ ಹುಡುಗನೊಂದಿಗೆ ಲಗ್ನ ಮಾಡಿಸುತ್ತೇನೆ. ಎಂದು ಸಾಯಬೇಕಿದ್ದ ದೊಡ್ಡಮ್ಮಳನ್ನು ಬದುಕಿಸಿ ಲಗ್ನ ಮಾಡಿಸಿ, ಬಾಳ್ವೆ ಮಾಡುವ ಧೈರ್ಯ ತುಂಬಿದ ಮಂಟೇಸ್ವಾಮಿಯವರ ಪವಾಡ ಮನೋವಿಜ್ಞಾನವೇ ಸರಿ.

ಇನ್ನೂ ಅನೇಕ ಜನಪದ ಕಥೆಗಳಲ್ಲಿ ನಾವು ನೈತಿಕ ಅಂಶಗಳನ್ನು ನೋಡುತ್ತೇವೆ. ಗೊ.ರು.ಚ ರವರ ಸಾಕ್ಷಿಕಲ್ಲು ನಾಟಕದಲ್ಲಿ, ಸಾಕ್ಷಿ ಹೇಳುವ ಕಲ್ಲಿನ ಕಥೆ, ಚಂದ್ರು ಕಾಳೇನಹಳ್ಳಿ ರವರ ಕಲಿವೀರ ಜುಂಜಪ್ಪ ನಾಟಕದಲ್ಲಿ, ನಿಸರ್ಗಪ್ರಿಯರ ಜುಂಜುಪ್ಪ ನಾಟಕದಲ್ಲಿ, ಜನಪದ ರಾಮಾಯಣ ಮತ್ತು ಜನಪದ ಮಹಾಭಾರತದ ಭೀಷ್ಮ ಓತಿಕ್ಯಾತರ ಪ್ರಸಂಗದಲ್ಲಿ, ಕುಬೇರ ಭೀಮನ ಕೂಲಿ ಪ್ರಸಂಗದಲ್ಲಿ, ಅರ್ಜುನಜೋಗಿಯ ಕಾವ್ಯಗಳಲ್ಲಿ ನಾವು ಮನೋವೈಜ್ಞಾನಿಕತೆಯನ್ನು ಕಾಣಬಹುದು.

ಪರಾಮರ್ಶನ ಗ್ರಂಥಗಳು

1. ಮಲೆ ಮಾದೇಶ್ವರ ಕಥಾ ಮಂಜರಿ, ಪ್ರೊ. ಪಿ.ಕೆ. ರಾಜಶೇಖರ, ಹೊನ್ನಾರು ಪ್ರಕಾಶನ, 2017.
2. ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿ ಸಂಸ್ಕೃತಿ, ಡಾ. ಎಸ್.ಎಂ. ಮುತ್ತಯ್ಯ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, 2008.

3. ಧರೆಗೆ ದೊಡ್ಡೋರು ಮಂಟೇಸ್ವಾಮಿ, ಪ್ರೊ. ಪಿ.ಕೆ. ರಾಜಶೇಖರ, ಹೊನ್ನಾರು ಪ್ರಕಾಶನ,2017.

4. ಕರ್ನಾಟಕ ಜನಪದ ಮಹಾಕಾವ್ಯಮೀಮಾಂಸೆ ಮತ್ತು ತಾತ್ವಿಕತೆ, ಪ್ರೊ. ಹಿ.ಚಿ. ಬೋರಲಿಂಗಯ್ಯ, 2018, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

5. ಭಾರತೀಯ ಕಾವ್ಯ ಮೀಮಾಂಸೆ, ತೀ.ನಂ. ಶ್ರೀಕಂಠಯ್ಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1973.

6. ಕಾವ್ಯಾರ್ಥ ಚಿಂತನ, ಡಾ. ಜಿ.ಎಸ್. ಶಿವರುದ್ರಪ್ಪ, 1988, ಶಾರದ ಪ್ರಕಾಶನ, ಬೆಂಗಳೂರು.

7. ನಾಗರಾಜ್ ಡಿ. ಆರ್., ಮಂಟೇಸ್ವಾಮಿ ಕಾವ್ಯ, ಆಧ್ಯಾತ್ಮಿಕ ದಂಗೆಯ ಕೃತಿ, ಸಂಸ್ಕೃತಿ ಕಥನ, (ಸಂ)ಅಗ್ರಹಾರ ಕೃಷ್ಣಮೂರ್ತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು,1997.

8. ಮಂಟೇಸ್ವಾಮಿ ಪರಂಪರೆ, ವೆಂಕಟೇಶ ಇಂದ್ವಾಡಿ, ಕನ್ನಡ ವಿಶ್ವವಿದ್ಯಾಲಯ.

9. ಜನಪದ ರಾಮಾಯಣದ ಕಥೆಗಳು, ಡಾ. ಪಿ.ಕೆ. ರಾಜಶೇಖರ, ಹೊನ್ನಾರು ಪ್ರಕಾಶನ, 2021.

10. ಜನಪದ ಮಹಾಭಾರತದ ವಿಭಿನ್ನ ಮುಖಗಳು; ಡಾ. ಎಂ. ಬೈರೇಗೌಡ, 2021.

11. ಮಂಟೇಸ್ವಾಮಿ ಕಾವ್ಯ, ಅಕ್ಷರ ಲೋಕದ ಅನುಸಂಧಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, 2022.

12. ಮಲೆ ಮಾದೇಶ್ವರ ಕಾವ್ಯ, ಡಾ. ಕೆ. ಕೇಶವನ್ ಪ್ರಸಾದ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, 1997.

13. ಮಂಟೇಸ್ವಾಮಿ ಕಾವ್ಯ, ಪ್ರೊ. ಹಿ.ಚಿ. ಬೋರಲಿಂಗಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, 1997.

14. ಡಾ. ಚಂದ್ರ ಕಾಳೇನಹಳ್ಳಿ ರವರ ಆರು ನಾಟಕಗಳು, ಡಾ. ಚಂದ್ರು ಕಾಳೇನಹಳ್ಳಿ, ಸಿರಿವರ ಪ್ರಕಾಶನ, 2017.

15. ಗೊಂಡರ ರಾಮಾಯಣ, ಪ್ರೊ. ಹಿ.ಚಿ. ಬೋರಲಿಂಗಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, 2009.

16. ಗಣೆಪದಗಳು, ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, 2014.

17. ದೇವಗುಡ್ಡರ ಕಾವ್ಯ, ಡಾ. ಪಿ.ಕೆ. ರಾಜಶೇಖರ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, 2014.

18. ಮಲೆಯ ಮಾದಯ್ಯನ ಸಾಂಸ್ಕೃತಿಕ ಚರಿತ್ರೆ, ಮಹಾದೇವ ಶಂಕನಪುರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, 2011.

ಟಿ. ಎಸ್. ಗೊರವರ ಅವರ 'ಮಲ್ಲಿಗೆ ಹೂವಿನ ಸಖ' ಮತ್ತು 'ಚವರಿ' ನಾಟಕಗಳಲ್ಲಿ ಮನೋವೈಜ್ಞಾನಿಕನೆಲೆಗಳು

ನಾಗೇಶ್ ಎನ್.
ಸಂಶೋಧನಾರ್ಥಿ
ಕನ್ನಡ ಅಧ್ಯಯನ ಕೇಂದ್ರ, ಬೆವಿವಿ, ಜ್ಞಾನಭಾರತಿ, ಬೆಂಗಳೂರು–560 056

ಇಪ್ಪತ್ತೊಂದನೆಯ ಶತಮಾನದ ಹೊಸ ತಲೆಮಾರಿನ ಕನ್ನಡ ಸಾಹಿತ್ಯದಲ್ಲಿ ಟಿ.ಎಸ್. ಗೊರವರ ಅವರು ಗ್ರಾಮ–ನಗರಗಳ ನಡುವಿನ ಬದುಕು, ಬಡತನ, ದೇಹ–ಶ್ರಮ–ಸೌಂದರ್ಯ, ಕನಸು–ಕಳವಳಗಳನ್ನು ಹೃದಯಸ್ಪರ್ಶಿಯಾಗಿ ಹಿಡಿದಿಡುವ ನಾಟಕಕಾರರಾಗಿ ಹೊರಹೊಮ್ಮಿದ್ದಾರೆ. 'ಮಲ್ಲಿಗೆ ಹೂವಿನ ಸಖ' ಮತ್ತು 'ಚವರಿ' ನಾಟಕಗಳು, ಮೇಲ್ಮೈಯಲ್ಲಿ ಸರಳ ವಸ್ತುವನ್ನು ಹೊಂದಿದ್ದರೂ, ಒಳಗೆ ವ್ಯಕ್ತಿಯ ಅಭದ್ರತೆ, ಬಾಲ್ಯದ ಅನುಭವ, ದೇಹ–ಶ್ರಮ–ಸೌಂದರ್ಯ, ವರ್ಗಸಂಘರ್ಷ ಹಾಗೂ ಬಡತನದ ಒತ್ತಡ ಇವುಗಳಿಂದ ಆವೃತ್ತವಾದ ಗಾಢ ಮನೋವೈಜ್ಞಾನಿಕ ನೆಲೆಯನ್ನು ಹೊಂದಿವೆ. ಈ ಪ್ರಬಂಧದಲ್ಲಿ ಈ ಎರಡು ಕೃತಿಗಳಲ್ಲಿನ ಪಾತ್ರಗಳ ಅಂತರಂಗ, ಅವರ ಕನಸು–ಕಾಮ–ಭಯ–ಅಪಮಾನ–ತಾಯಿತನ–ಪ್ರೇಮ ಇತ್ಯಾದಿಗಳು ಹೇಗೆ ಅಭಿವ್ಯಕ್ತಿಯಾಗುತ್ತವೆ ಎಂಬುದನ್ನು ಮನೋವಿಶ್ಲೇಷಣೆ ಮಾಡಲಾಗಿದೆ.

"ಮನಸ್ಸು ಎಂದರೆ, ಫ್ರಾಯ್ಡ್ ಮತ್ತು ಯೂಂಗ್ ಇಬ್ಬರಿಗೂ ಚೈತನ್ಯ(ಪ್ರಜ್ಞೆ) ಮತ್ತು ಸುಪ್ತಚೇತನಗಳನ್ನು ಒಳಗೊಂಡ ಒಂದು ಕಲ್ಪಿತ ಘಟಕ" (ಗಿರಿ, 'ಸಾಹಿತ್ಯದ ವೈಜ್ಞಾನಿಕ ಮೀಮಾಂಸೆ', ಪುಟ–351) ವಾಗಿದೆ. ಇಂತಹ ಮನಸ್ಸಿನಾಳದಲ್ಲಿನ ಮನೋವ್ಯಾಪಾರವನ್ನು ನಾಟಕವು ಆವರಿಸಿಕೊಂಡಿದೆ. ಇಲ್ಲಿ ಮನೋವೈಜ್ಞಾನಿಕ ದೃಷ್ಟಿಯಿಂದ ಪಾತ್ರಗಳನ್ನು ಓದುವಾಗ ಮೂರು ಪ್ರಮುಖ ಅಂಶಗಳನ್ನು ಗುರುತಿಸಬಹುದು:

1. **ಬಾಲ್ಯಾನುಭವಮತ್ತು ಸುಪ್ತಚೇತನ:** ಬಾಲ್ಯದಲ್ಲಿನ ಮಲ್ಲಿಗೆ ಹೂವಿನ ಘಮಲಿನ ಅನುಭವಗಳು ದಾಂಪತ್ಯ ಜೀವನದಲ್ಲಿ ಆಸಕ್ತಿ, ಹೆತ್ತವರಭಯ, ವಿಚಿತ್ರ ವರ್ತನೆಗಳ ರೂಪದಲ್ಲಿ ಹೊರಗೆ ಬರುತ್ತವೆ.
2. **ದೇಹ–ಶ್ರಮ–ಸೌಂದರ್ಯ:** ವ್ಯಕ್ತಿ ತನ್ನ ಚೆಲುವು, ಕೂದಲು, ದೇಹದ ಸ್ವರೂಪದ ಮೇಲೆ ವ್ಯಾಮೋಹ ಕಟ್ಟಿಕೊಂಡಿದ್ದರೆ, ದೇಹದ ಬದಲಾವಣೆಗಳು ಗಂಭೀರ ಮಾನಸಿಕ ಒತ್ತಡಕ್ಕೆ ಕಾರಣವಾಗುತ್ತವೆ.
3. **ಬಡತನ ಮತ್ತು ವರ್ಗ ಸಂಘರ್ಷ:** ದೀರ್ಘಕಾಲದ ಬಡತನ, ಶೋಷಣೆ, ಸಾಮಾಜಿಕ ತಾತ್ಸಾರ ಇವು ಸಾಮುದಾಯಿಕ ಆಘಾತ ಹಾಗೂ ಆತ್ಮನಿಂದನೆಯನ್ನು ಸೃಷ್ಟಿಸುತ್ತವೆ. ಈ ಮೂರು ಅಂಶಗಳ ತಾತ್ವಿಕ ಹಿನ್ನೆಲೆಯಲ್ಲಿ ಯಮನೂರಪ್ಪ, ದುಗ್ಗಿ, ಸಾಹುಕಾರ್ತಿ ಎನ್ನುವ ಪಾತ್ರಗಳು ವಿಶ್ಲೇಷಣೆಗೆ ಒಳಪಟ್ಟಿವೆ.

'ಮಲ್ಲಿಗೆ ಹೂವಿನ ಸಖ' ನಾಟಕದಲ್ಲಿನ ಮನೋವೈಜ್ಞಾನಿಕ ನೆಲೆಗಳನ್ನು ಗಮನಿಸುವುದಾರೆ, ನಾಟಕದ ಕೇಂದ್ರಪಾತ್ರವಾಗಿ ಯಮನೂರಪ್ಪ ಮತ್ತು ಮಲ್ಲಿಗೆ ಹೂವಿನ ಸಖ್ಯ ಕಾಣುತ್ತೇವೆ. ಯಮನೂರಪ್ಪನು ತನ್ನ ಬಾಲ್ಯದಲ್ಲಿ ಮಲ್ಲಿಗೆಯ ಹೂ ಕೈಗೆ ಸಿಕ್ಕ

ತಕ್ಷಣಕ್ಕೆ ಅಳುವುದನ್ನು ನಿಲ್ಲಿಸುವನು, ಹೂ ಕೆಳಗೆ ಬಿದ್ದೊಡನೆ ಮತ್ತೆ ಅಳು ಆರಂಭಿಸುತ್ತಾನೆ. ಮತ್ತೆ ಹೂ ಕೊಟ್ಟಾಗ ಸಂತೋಷದಿಂದ ಆಡುವುದು – ಇವೆಲ್ಲ ಕೂಸಿನ ಸುಪ್ತಚೇತನದಲ್ಲಿ ಮಲ್ಲಿಗೆ ಹೂವಿನ ಆಕರ್ಷಣೆ, ತಾಯಿಯಮಡಿಲು, ಆರಾಮ ಎಂಬ ಭಾವಪರ ಸಮೀಕರಣವನ್ನು ಕಟ್ಟಿಕೊಡುತ್ತದೆ. ಯಮನೂರಪ್ಪ 'ಕೂಸಿದ್ದಾಗ ಅದೇನನ್ನು ಕನಸು ಕಾಣುತ್ತಿದ್ದನೋ?' ಆ ಮಲ್ಲಿಗೆ ಹೂ ಹಿಡಿದುಕೊಂಡು ನಿದ್ದೆಗೆ ಜಾರಿದಾಗ ಅವನ ತುಟಿಯಲ್ಲಿ ಮಂದಸ್ಮಿತ ಅರಳುತ್ತಿತ್ತು. ಈ ಅಂಶ ನಾಟಕದಲ್ಲಿ ಗೌಣವಾಗಿದೆ. ಪಾರಮ್ಮ ದಿನವೂ ಹಿತ್ತಲಿನ ಮಲ್ಲಿಗೆ ಗಿಡದಿಂದ ಹೂ ತೆಗೆದು ಮಗನ ಮುಂಗೈಗೆ ಕಟ್ಟುವ ವಾಡಿಕೆ ಮೂಲಕ ಮತ್ತಷ್ಟು ಗಾಢಗೊಳಿಸುತ್ತಾಳೆ. ಮಲ್ಲಿಗೆ ಇಲ್ಲದ ದಿನ ಯಮನೂರಪ್ಪನ ಅಳು ತಾರಕಕ್ಕೇರುವ ಅನುಭವದ ನಿರಂತರತೆ, ಹೂವಿನ ಘಮವಿಲ್ಲದ ಬದುಕನ್ನು ಅವನ ಮನಸ್ಸು ಅಸುರಕ್ಷಿತವಾಗಿ ಅನುಭವಿಸುವಂತೆ ಮಾಡಿದಂತಿದೆ. ಅವನು ಅಳುಮರೆತ. ಆದರೆ, ದೊಡ್ಡವಾನಾದರೂ ಮಲ್ಲಿಗೆ ಹೂವನ್ನು ಮರೆಯಲಿಲ್ಲ.

ಬ್ಯಾಚುಲರ್ ನಗರ ಜೀವನ, ಏಕಾಂತ ಮತ್ತು ಕಲ್ಪಿತ ಪ್ರೇಯಸಿ ಇವು ಯಮನೂರಪ್ಪನ ಯೌವನದ ದಿನಗಳಾಗಿದ್ದವು. ಇವನು ಹುಬ್ಬಳ್ಳಿ ದಿನಚರಿಯಲ್ಲಿ ಕೋರಿಯರ್ ಕೆಲಸ, ಬೈಕ್ ರೈಡು, ಚಹಾ ಅಂಗಡಿ, ಎಗ್–ರೈಸ್, ಬಾಡಿಗೆ ರೂಮ್ – ಇವೆಲ್ಲ ಆರ್ಥಿಕವಾಗಿ ದುಡಿಮೆಯ ಭಾಗವಾದರೆ, ಒಂಟಿತನವೇ ಜೀವನದ ಕೊರತೆ ಚಿತ್ರವಾಗಿದೆ. ಕೆಲಸ ಮುಗಿಸಿ ರಾತ್ರಿ ಮನೆಗೆ ಬಂದಾಗ ಜಳಕ ಮಾಡಿಕೊಂಡು, ತಲೆಗೆ ಎಣ್ಣೆ, ಪೌಡರ್, ಇಸ್ತ್ರೀ ಉಡಿಗೆ, ಮಂಚದ ಮೇಲೆ ಮಲ್ಲಿಗೆ ಹಾಸಿ ಮದುಮಗನಂತೆ ಟಿಪ್–ಟಾಪ್ ಆಗಿ ತಯಾರಾಗುವುದು ಅವನ ಮನಸ್ಸಿನ 'ಸ್ವಯಂ ನಿರ್ಮಿತ ರೊಮ್ಯಾಂಟಿಕ್ ಥೆರಪಿ'ಯಾಗಿತ್ತು. ಮಲ್ಲಿಗೆಯ ಘಮವನ್ನು ಮೂಸಿ ಕಣ್ಣುಮುಚ್ಚುತ್ತಾನೆ. ಚಂದಿರನ ಮಗಳಂತೆ ಕಾಣುವ ಚೆಲುವೆ ಎಂಬ ಕನಸಿನ ಪ್ರೇಯಸಿ ಬರುತ್ತಾಳೆ. ಇಲ್ಲಿ ಬಾಲ್ಯದ ಮಲ್ಲಿಗೆ–ಸಖ್ಯತೆ, ಯೌವನದ ಪ್ರೇಮ–ಶರೀರದ ಆಸೆ, ಕನಸಿನ ಪ್ರೇಯಸಿ – ಇವು ಒಂದೇ ಮಲ್ಲಿಗೆಯ ಘಮದಲ್ಲಿ ಗಟ್ಟಿಯಾಗಿ ಗೋಚರಿಸುತ್ತವೆ. ಚೆಲುವೆಯೊಂದಿಗೆ ಸಂಭಾಷಣೆ, ತುಟಿಮುತ್ತು, ಭಾವಗೀತೆ – ಎಲ್ಲವೂ ಸ್ಪಷ್ಟವಾಗಿ 'ಕಲ್ಪಿತ ಪ್ರೇಮ ಅನುಭವ'ವಾಗಿದ್ದರೂ, ಯಮನೂರಪ್ಪನಿಗೆ 'ಮನಃಶಾಂತಿ, ನೋವು ಕರಗುವನಶೆ'ಯಾಗಿ ಕೆಲಸಮಾಡುತ್ತದೆ. ಹೀಗಾಗಿ ಮಲ್ಲಿಗೆ ಅವನ ಸುಪ್ತಚೇತನದಲ್ಲಿ ರಮ್ಯತೆಯ ವಸ್ತು ಮಾತ್ರವಲ್ಲ, 'ಪ್ರೀತಿ, ಶೃಂಗಾರ, ಆತ್ಮಸಮ್ಮತಿ'ಗಳ ಒಟ್ಟುಗೂಡಿದ ಸಂಕೇತವಾಗುತ್ತದೆ. ಸಾಮಾನ್ಯವಾಗಿ ಮಲ್ಲಿಗೆ ಹೂವಿನ ಪರಿಮಳ ಮಾನಸಿಕ ಒತ್ತಡ ಕಡಿಮೆಮಾಡಿ, ನಕಾರಾತ್ಮಕ ಭಾವನೆಗಳನ್ನು ಕಡಿಮೆಮಾಡುವುದರಲ್ಲಿ ಸಹಕಾರಿ ಎಂದು ಕೆಲವು ಅಧ್ಯಯನಗಳು ತಿಳಿಸುತ್ತವೆ.

ತನ್ನೂರಾದ ನವಲಗುಂದದಲ್ಲಿ ವಯಸ್ಸಾದ ಅಪ್ಪ–ಅವ್ವ, ಅವರ ಕಾಯಿಲೆ, ಮನೆ ಕೆಲಸದ ತೊಂದರೆಗಳನ್ನು ನೋಡಿ; ಮದುವೆಗೆ ಒಪ್ಪಿಕೊಳ್ಳುವ ಯಮನೂರಪ್ಪನ ಮನಸ್ಸಿನಲ್ಲಿ 'ಕುಟುಂಬದ ಕರ್ತವ್ಯ' ಎಂಬ ಸಮಾಜದ ನಿರೀಕ್ಷೆಯನ್ನು ಸಮರ್ಥಿಸುವ ಮನಃಸ್ಥಿತಿ ಬರುತ್ತದೆ. ಆದರೆ, ಹೆಣ್ಣು ನೋಡಲು ಹೋಗುವ ಕ್ಷಣದಲ್ಲಿ ಮಲ್ಲಿಗೆಯ ಘಮ ತಟ್ಟಿದೊಡನೆ ಅವನು ಬಾಹ್ಯ ಜಗತ್ತನ್ನು ಮರೆಯುತ್ತಾನೆ. ತಿನ್ನಲು ಕೊಟ್ಟ ಅವಲಕ್ಕಿಯನ್ನು, ಅಲ್ಲಿ ನೆರೆದಿದ್ದ ಜನರನ್ನು ಮರೆತು ಕಣ್ಣುಮುಚ್ಚಿ ಮಂದಸ್ಮಿತನಾಗುತ್ತಾನೆ. ಈ ವರ್ತನೆ ಸಹಜ ಲಜ್ಜೆ ಅಲ್ಲ, ಬಾಲ್ಯದಿಂದಲೇ ಮಲ್ಲಿಗೆಯೊಂದಿಗೆ ಕಟ್ಟಿಕೊಂಡಿರುವ ಸುಪ್ತಚೇತನ ಅನುಭವ ಅಸ್ತಿತ್ವ ಹೊರಬರುವ ಗುಣ. ಮೊದಲನೆಯ ಬಾರಿ ಶಾಂತಾಳ ಮಲ್ಲಿಗೆ ಉದುರಿ ಅವನ ಕೈಗೆ ಸಿಕ್ಕಾಗ, ನಂತರ ಮತ್ತೊಂದು ಮನೆಯಲ್ಲೂ ಮಲ್ಲಿಗೆ ಘಮ ತಟ್ಟಿದಂತೆ ಅವನು ಮತ್ತೇ ಕನಸಿನ ಲೋಕಕ್ಕೆ ಜಾರುವಾಗ, ಪ್ರತಿ ಬಾರಿ ಮದುವೆ – ಕುಟುಂಬ–ಸಮಾಜ ಈ ಸಂಸ್ಥೆಗಳು ಒಮ್ಮೆಲೆ ತಲ್ಲಣಗೊಳ್ಳುತ್ತವೆ.

ಊರಿನ ಜನ ರಬಾಯಲ್ಲಿ, 'ಹುಚ್ಚು ಹಿಡಿದವ' ಎಂಬ ಊಹೆಗಳು, ಪಾರಮ್ಮನಿಂದ 'ಮಲ್ಲಿಗೆ ಮುಟ್ಟಬೇಡ' ಎಂಬ ಆಜ್ಞೆ, ಅವನ ಸುಪ್ತಚೇತನ ಅಭ್ಯಾಸವನ್ನು ಒಂದು ರೀತಿಯ 'ವಿಕೃತ/ರೋಗ'ವೆಂದು ಗುರುತಿಸುವ ಸಮಾಜದ ಪ್ರತಿಕ್ರಿಯೆ – ಇವೆಲ್ಲವೂ ಮಾನಸಿಕ ಒತ್ತಡವನ್ನು ಹೆಚ್ಚಿಸುತ್ತವೆ. ಇಲ್ಲಿ ಮನೋವೈಜ್ಞಾನಿಕ ನೆಲೆ ಎಂದರೆ, ಒಂದು ಇಂದ್ರಿಯಾನುಭವ(ವಾಸನೆ) ವ್ಯಕ್ತಿಯ ಜೀವನದಲ್ಲಿ ಆಳವಾದಭಾವ–ಅನುಭವಗಳ, ಗಾಢ ನೆನಪುಗಳ, ಪ್ರೀತಿ–ಕನಸುಗಳ ಕೇಂದ್ರೀಯ ಮನಃಸ್ಥಿತಿಯಾಗಿದೆ.

'ಚವರಿ' ನಾಟಕದಲ್ಲಿನ ಮನೋವೈಜ್ಞಾನಿಕ ನೆಲೆಗಳನ್ನು ಗಮನಿಸುವುದಾದರೆ, ದುಗ್ಗಿ: ತಾಯಿತನ, ಬಡತನಮತ್ತು ಆತ್ಮನಿಂದನೆ ಅವಳ ಮೊದಲ ಮಾತುಗಳಲ್ಲಿ 'ಹೊಟ್ಟೆಗೆ ಊಟ ಸರಿ ಬೀಳದಿದ್ದರಿಂದ ಕರುಳು ಮುದುಡಿ ಮೂಲಿ ಹಿಡಿದಿವೆ', 'ಮಗು ಹಾಲಿಲ್ಲದ ಎದೆಯನ್ನು ಚೀಪುತ್ತಾ ಅಳುತ್ತದೆ' ಎಂಬ ಅಂಶಗಳು ಅವಳೊಳಗಿನ ಅಪರಾಧಭಾವವನ್ನು ತೋರಿಸುತ್ತವೆ. ಅವಳು ತನ್ನ ಬಡತನವನ್ನು "ನಸೀಬು" ಎಂದು ಸಮಾಧಾನಿಸಿಕೊಂಡರೂ, ಮಗು, ಜ್ವರ, ಹಸಿವು, ಸರ್ಕಾರಿ ಆಸ್ಪತ್ರೆಯ ಔಷಧ ಫಲಿಸದಿರುವುದು – ಇವೆಲ್ಲ ಅವಳೊಳಗಿನ ಅಸಹಾಯಕತೆಗೆ ತೀವ್ರತೆಯನ್ನು ಸೇರಿಸುತ್ತವೆ. ದುಗ್ಗಿ ತಾನು ಬದುಕಿರುವುದನ್ನೇ ಸಾಹುಕಾರ್ತಿಯಿಂದ 'ಪಾಪಿ–ಪರದೇಶಿ' ಎಂದು ಕರೆಸಿಕೊಳ್ಳುವಷ್ಟು ಕುಗ್ಗಿದ ಮಾನಸಿಕ ಸ್ಥಿತಿಯನ್ನು ಹೊಂದಿದ್ದಾಳೆ.

ಸಾಹುಕಾರ್ತಿ: ದೇಹ–ಚೆಲುವಿನ ಕಳವಳ ಮತ್ತು ವರ್ಗಸಂಘರ್ಷ–ಅಹಂಕಾರ ಹೊಂದಿದವಳು. ಇವಳು ತನ್ನ ಕೂದಲಿನಬಗ್ಗೆ ದೂರು ಹೇಳುವಾಗ ಶಾಂಪೂ ಬಳಕೆಯಿಂದ ಕೂದಲು ಉದುರುತ್ತಿರುವುದು, ಗಂಡನ ಮೆಚ್ಚುಗೆ ಕಡಿಮೆಯಾಗಿರುವ ಅನುಮಾನ, ಮಹಾರಾಣಿಸ್ಥಾನ ಕಳೆದುಕೊಳ್ಳುವಭಯ – ಇವು ಅವಳ ದೇಹ – ಸ್ವರೂಪದ(body image)ಮೇಲೆ ಅವಲಂಬಿತಸ್ವಯಂ ಮೌಲ್ಯ(self-wort) ಅನ್ನು ತೋರಿಸುತ್ತವೆ. ಅವಳು ದುಗ್ಗಿಗೆ ಅಕ್ಕಿ, ಸೀರೆ, ಹಣ ನೀಡುವುದರಲ್ಲಿ 'ದಾನಿ–ಮಾತೃತ್ವ' ಭಾವದಿಂದ ತೃಪ್ತಿ ಪಡೆಯುತ್ತಾಳೆ.

ದುಗ್ಗಿಯು ಕೂದಲು ಕತ್ತರಿಸಿಕೊಳ್ಳುವ ಕ್ಷಣವನ್ನು ತ್ಯಾಗಮನೋಭಾವನೆ ಎಂದು ಕರೆದರೂ ಅವಳಿಗೆ ಒಂದುಹೊತ್ತಿನ ಅನ್ನದ ಪ್ರಶ್ನೆ ಮುಖ್ಯವಾಗುತ್ತದೆ. ಚವರಿಗೆಬೇಕಾದ ಕೂದಲು ಇಲ್ಲದ ಪರಿಸ್ಥಿತಿಯಲ್ಲಿ ದುಗ್ಗಿ 'ನನ್ನ ಕೂದಲು ಕತ್ತರಿಸಿಕೊಂಡು ಚವರಿ ಮಾಡಲೇಬೇಕು' ಎಂಬ ನಿರ್ಧಾರಕ್ಕೆ ಬರುತ್ತಾಳೆ. ತನ್ನ ಕೂದಲನ್ನು ಕತ್ತರಿಸಿಕೊಳ್ಳುವಾಗ ತನ್ನ ಯೌವ್ವನದ ಕನಸು. ತಾನು ಇಷ್ಟಪಟ್ಟ ಚೆಲುವನಿಂದಾದ ನೋವುವನ್ನು ನೆನಪಿಸಿಕೊಳ್ಳುವಾಗ ಅವಳು 'ನನ್ನಂಥ ಬಡವರಿಗೆ ಇಷ್ಟುದ್ದ ಕೂದಲು ಬೇಕೇನು?' ಎಂದು ಪ್ರಶ್ನಿಸುತ್ತಾಳೆ. ಮಗು ಹಾಲಿಲ್ಲದೆ ಅಳುವುದನ್ನು ನೋಡುವುದಕ್ಕಿಂತ 'ತನ್ನ ತಲೆ ಕೂದಲು ಕತ್ತರಿಸಿಕೊಳ್ಳುವುದು' ಅವಳಿಗೆ ಕಡಿಮೆ ನೋವು ಎಂದು ಕಾಣುತ್ತದೆ. ಕೂದಲು ಕತ್ತರಿಸಿಕೊಳ್ಳುವಾಗ ಅವಳಲ್ಲಿ 'ವರ್ತಮಾನದ ನೋವು ಮತ್ತು ಭವಿಷ್ಯದಲ್ಲಿ ತೀರಬೇಕಾದ ಅನ್ನದ ಋಣ' ಎಂಬ ಎರಡು ಭಯಗಳು ಸೇರಿಕೊಂಡಿವೆ. ಹೀಗಾಗಿ ಚವರಿ ಅವಳಿಗೆ ಕೇವಲ ಕಲೆ ಅಲ್ಲ; ತನ್ನದೇ ಕೂದಲನ್ನು ಸಾಹುಕಾರ್ತಿಗೆ ಅರ್ಪಿಸುವ 'ಪ್ರಾಮಾಣಿಕತೆ'ಯ ಸಂಕೇತ.

ಸಾಹುಕಾರ್ತಿಯು ದುಗ್ಗಿ ತಂದು ಕೊಟ್ಟ ಚವರಿಯನ್ನು ತನ್ನ ತಲೆಗೆ ಇಟ್ಟುಕೊಂಡು ಕನ್ನಡಿಯ ಮುಂದೆ 'ಮಾರಾಣಿ, ಅಪ್ಸರೆ' ಎಂದು ನೋಡಿಕೊಳ್ಳುವಾಗ, ದುಗ್ಗಿ 'ಈ ಚವರಿ ನನ್ನ ಕೂದಲಿಂದ ಮಾಡಿದದ್ದು' ಎಂದೊಡನೆ ಅವಳೊಳಗಿನ ವರ್ಗಭೇದ ಶುದ್ಧ–ಅಶುದ್ಧದ ಕಲ್ಪನೆ ಕ್ಷಣಾರ್ಧದಲ್ಲಿ ಸ್ಫೋಟಗೊಳ್ಳುತ್ತದೆ. 'ಭಿಕ್ಷುಕಿಯ ಕೂದಲನ್ನು ನಾನು ತಲೆಗೆ ಹಾಕಿಕೊಂಡೇನೆ?' ಎಂಬ ಅಸಹ್ಯ, 'ಪೂಜೆ, ಮಡಿ–ಮೈಲಿಗೆ, ಶುದ್ಧ–ಅಶುದ್ಧ' ಮನೋವ್ಯಾಕುಲತೆ – ಇವು ಅವಳಲ್ಲಿ ಹಿಂಸಾತ್ಮಕ ಪ್ರತಿಕ್ರಿಯೆಯನ್ನು ಉಂಟು ಮಾಡುತ್ತವೆ. ಚವರಿಯನ್ನು ರೊಟ್ಟಿಯ ಮೇಲೆ ಬಡಿದು, ತುಪ್ಪ–ರೊಟ್ಟಿಯನ್ನು ಮಣ್ಣುಪಾಲು ಮಾಡುವ ದೃಶ್ಯವು ದುಗ್ಗಿಯ ಕೂದಲಿನ–ತ್ಯಾಗ, ಅನ್ನದ ಋಣ, ಕಲೆಯ ಗೌರವ – ಎಲ್ಲವನ್ನು ಒಂದೇ ಏಟಿಗೆ ಅವಮಾನಕ್ಕೀಡಾಗಿಸುವ ಕ್ಷಣ. ಈ ಕ್ಷಣದಲ್ಲಿ ದುಗ್ಗಿ 'ತನ್ನ ಸೋಂಪಾಗಿ ಬೆಳೆದ ಕೂದಲು, ತಾನೆಮಾಡಿದ ಚವರಿ, ಕೊಟ್ಟ ರೊಟ್ಟಿ'ಗಳನ್ನು ಒಂದೇ ಚಿತ್ರವಾಗಿ ನೋಡಿ ಏನೂ ತೋಚದಾಗುತ್ತಾಳೆ. ಅವಳ ಒಳಜಗತ್ತು ಸಂಪೂರ್ಣ ಕುಸಿದುಹೋಗುತ್ತದೆ.

ಎರಡು ನಾಟಕಗಳ ಮನೋವೈಜ್ಞಾನಿಕ ನೆಲೆಗಳ ಸಮೀಕ್ಷೆ ಹೂಮತ್ತು ಕೂದಲು: ಇಂದ್ರಿಯಾನುಭವ ಮತ್ತು ಅಸ್ತಿತ್ವ. 'ಮಲ್ಲಿಗೆ ಹೂವಿನ ಸಖ'ನಲ್ಲಿ ಮಲ್ಲಿಗೆಯ ಘಮ – ಬಾಲ್ಯ, ತಾಯಿಮಡಿಲು, ಯೌವನದ ಕಾಮ, ಕನಸಿನ ಪ್ರೇಯಸಿ – ಇವೆಲ್ಲವನ್ನೂ ಒಂದಾಗಿಸುವ 'ಸಕಾರಾತ್ಮಕಭಾವ–ಸಂಕೇತ'. 'ಚವರಿ'ಯಲ್ಲಿ ಕೂದಲು – ದುಗ್ಗಿಯ ಯೌವನ, ಆತ್ಮಗೌರವ, ಪ್ರೇಮ–ಕನಸು, ತಾಯಿತನ – ಇವೆಲ್ಲವನ್ನೂ ಹೊತ್ತ ಅವಳ ಅಸಹಾಯಕತೆ. ಇಬ್ಬರ ಕಥೆಯಲ್ಲೂ ಒಂದು ಇಂದ್ರಿಯಾನುಭವ/

ಕಲೆ (ಹೂ/ಕೂದಲು) ವ್ಯಕ್ತಿಯ ಮನಸ್ಸಿನ ಕೇಂದ್ರವಾಗಿಳಿದಿದೆ. ಆದರೆ, ಯಮನೂರಪ್ಪನಿಗೆ ಅದು ಪುನಃ ಪುನಃ ಆನಂದದ ಲೋಕಕ್ಕೆ ಕರೆಸುವ ಮತ್ತು, ದುಗ್ಗಿ ತಾನು ಕಳೆದು ಕೊಂಡದ್ದೇ ಬದುಕಿನ ನೋವಿನ ಸ್ಥಿತಿ. ವ್ಯಕ್ತಿ–ಸಮಾಜ–ಸಂಘರ್ಷದ ನೆಲೆಯಲ್ಲಿ ಯಮನೂರಪ್ಪನ ಮನೋವ್ಯಥೆ ಯಾವುದೆಂದರೆ, ಮಲ್ಲಿಗೆಯ ಘಮ–ಕನಸು–ರೊಮ್ಯಾಂಟಿಕ್ ಅಂತರಂಗ ಒಂದು ಕಡೆಯಾದರೆ, ಮದುವೆಯ ಸಮಾಜ–ಕೌಟುಂಬಿಕ ನಿರೀಕ್ಷೆ ಮತ್ತೊಂದು ಕಡೆ. ಸಮಾಜ ಅವನ ವರ್ತನೆಯನ್ನು 'ಹುಚ್ಚು/ವಿಚಿತ್ರ' ಎಂದು ಗುರುತಿಸುತ್ತದೆ. ದುಗ್ಗಿಯ ಮನೋವ್ಯಥೆ ಎಂದರೆ, ಮಗುವಿನ ಹಸಿವು, ಅನ್ನದ ಋಣ, ತನ್ನ ಕಲೆಯಬೆಲೆ ಒಂದು ಕಡೆಯಾದರೆ, ಸಾಹುಕಾರ್ತಿಯ ವರ್ಗಭೇದ–ಅಹಂಕಾರ, ಶುದ್ಧ–ಅಶುದ್ಧ ಕಲ್ಪನೆ ಮತ್ತೊಂದು ಕಡೆ. ಸಮಾಜ ಅವಳ ತ್ಯಾಗವನ್ನು'ಕೆಲಸ/ಸೇವೆ' ಎಂದಷ್ಟೇ ನೋಡಿ, ಅವಳ ಮಾನಸಿಕ ನೋವನ್ನು ಕಾಣದೆ ಬಿಟ್ಟುಬಿಡುತ್ತದೆ.

'ಮಲ್ಲಿಗೆ ಹೂವಿನ ಸಖ'ನಲ್ಲಿ ತಾಯಿ (ಪಾರಮ್ಮ) ಮಲ್ಲಿಗೆ ಹೂ ಮೂಲಕ ಮಗನಿಗೆ ತೃಪ್ತಿ ನೀಡಿದ್ದರೂ, ಮದುವೆಯ ಸಾಮಾಜಿಕ ಕಾಳಜಿಯಿಂದ ಮಗನ 'ಮಲ್ಲಿಗೆಯ ಸಖತ್ವ'ವನ್ನು ನಿಯಂತ್ರಿಸಲು ಯತ್ನಿಸುತ್ತಾಳೆ. ಇಲ್ಲಿ ಅವಳ ಮನೋದ್ವಂದ್ವ ಇದೆ. 'ಚವರಿ'ಯಲ್ಲಿ ದುಗ್ಗಿಯ ತಾಯಿತನ ತನ್ನದೇ ಕೂದಲು–ಚೆಲುವಿಗೆ ವಿರುದ್ಧವಾಗಿ ಕೆಲಸ ಮಾಡುತ್ತದೆ; ಮಗು–ಹಾಲು–ಅಕ್ಕಿಗಂಟುಗಳಿಗಾಗಿ ತಲೆ ಕೂದಲು ಕತ್ತರಿಸಿಕೊಳ್ಳುವುದು ತಾಯಿತನದ ತೀವ್ರತೆಯನ್ನು, ಹಾಗೆಯೇ ತನ್ನ ಬದುಕಿನ ಆತ್ಮವಿಶ್ವಾಸ ಎಷ್ಟು ಕುಗ್ಗಿದೆ ಎಂಬುದನ್ನೂ ತೋರಿಸುತ್ತದೆ. 'ಮಲ್ಲಿಗೆ ಹೂವಿನ ಸಖ' ಹಾಗೂ 'ಚವರಿ' ನಾಟಕಗಳು ಹೊರಗೆ ಸರಳ ಸಾಮಾಜಿಕ ಕಥೆಗಳಂತೆ ಕಂಡರೂ, ಒಳಗೆ ಮಾನವ ಮನಸ್ಸಿನ ಸೂಚನೆ ಪದರಗಳನ್ನು ಹಿಡಿದಿಟ್ಟಿರುವ ಗಾಢ ಮನೋವೈಜ್ಞಾನಿಕ ಕೃತಿಗಳಾಗಿವೆ. ಮೊದಲನೆಯ ನಾಟಕದಲ್ಲಿ ಮಲ್ಲಿಗೆಯ ಘಮದ ಮೂಲಕ ವ್ಯಕ್ತಿಯ ಸುಪ್ತಚೇತನ, ಪ್ರೀತಿಯ ಆಸೆಮತ್ತು ಸಾಮಾಜಿಕ ನಿರೀಕ್ಷೆಗಳ ಮಧ್ಯೆ ನಡೆಯುವ ಸಂಘರ್ಷವನ್ನು ತೋರಿಸಿದರೆ, ಎರಡನೆಯ ನಾಟಕದಲ್ಲಿ ಕೂದಲಿನ ಚವರಿಯ ಮೂಲಕ ಬಡತನ, ದೇಹ–ಶ್ರಮ–ಚೆಲುವು, ತಾಯಿತನ, ವರ್ಗಭೇದ, ಶುದ್ಧ–ಅಶುದ್ಧತೆಯ ಕಲ್ಪನೆಗಳಿಂದ ಆವೃತವಾದ ಸ್ತ್ರೀ–ಮನಸ್ಸಿನ ದುರಂತವನ್ನು ಅನಾವರಣಗೊಳಿಸುತ್ತದೆ.

ಹೂವಿನ ಸಖನೂ, ಚವರಿಯ ದುಗ್ಗಿಯೂ ತಮ್ಮ ತಮ್ಮ ಮನೋವೈಜ್ಞಾನಿಕ ನೆಲೆಯಲ್ಲಿ ಅಸಮರ್ಪಕ ರೀತಿಯ ಕಾರ್ಯವಿಧಾನ ಬಳಸುತ್ತಾರೆ. ಒಬ್ಬನು ಘಮಲು–ಕನಸಿನಲೋಕಕ್ಕೆ ಓಡಿಹೋಗುತ್ತಾನೆ; ಇನ್ನೊಬ್ಬಳು ಕೂದಲಿನ–ತ್ಯಾಗದ ಮೂಲಕ ಬದುಕನ್ನು ಸಾಗಿಸಲು ಪ್ರಯತ್ನಿಸುತ್ತಾಳೆ. ಈ ಎರಡು ನಾಟಕಗಳನ್ನು ಒಟ್ಟಾಗಿ ಓದಿದಾಗ, ಟಿ.ಎಸ್. ಗೊರವರ ಅವರ ಕೃತಿಗಳಲ್ಲಿ ಬಡತನ–ಗ್ರಾಮ–ನಗರ–ಲಿಂಗದ ಪ್ರಶ್ನೆಗಳಷ್ಟೇ ಅಲ್ಲ, ಮಾನವ ಮನಸ್ಸಿನ ಆಳದ ಗಾಯಗಳು, ಇಂದ್ರಿಯಾನುಭವದ ನೆನಪುಗಳು, ದೇಹ–ಸ್ವರೂಪದ ಕಳವಳಗಳು ಹೇಗೆ ನಾಟಕೀಯ ಸ್ವರೂಪ ಪಡೆದುಕೊಳ್ಳುತ್ತವೆ ಎಂಬುದನ್ನು ಪ್ರಬಲವಾಗಿ ಅರ್ಥಮಾಡಿಕೊಳ್ಳಬಹುದು.

ಪರಾಮರ್ಶನ ಗ್ರಂಥಗಳು

1. ಟಿ. ಎಸ್. ಗೊರವರ, ಮಲ್ಲಿಗೆ ಹೂವಿನ ಸಖ ಮತ್ತು ಚವರಿ, ಸಂಗಾತ ಪುಸ್ತಕ ಪ್ರಕಾಶನ, ಗದಗ ಜೆಲ್ಲೆ, ಮುದ್ರಣ, 2024.

2. ಗಿರಿ, ಸಾಹಿತ್ಯದ ವೈಜ್ಞಾನಿಕ ಮೀಮಾಂಸೆ, ಮನೋಹರ ಗ್ರಂಥಮಾಲ ಪ್ರಕಾಶನ, ಧಾರವಾಡ, ಮುದ್ರಣ, 2016.

ಕಾದಂಬರಿಯಲ್ಲಿ ಮನೋವೈಜ್ಞಾನಿಕತೆ

ಶ್ರೀಮತಿ. ಶಾಂತಾ ಬ್ಯಾಡಗಿ (ಬಸನಗೌಡ್ರ)
ಕನ್ನಡ ಸಹಾಯಕ ಪ್ರಾಧ್ಯಾಪಕರು
ಬಸವೇಶ್ವರ ಇಂಜಿನೀಯರಿಂಗ್ ಕಾಲೇಜು, ಬಾಗಲಕೋಟೆ.

ಎಲ್ಲ ಎಲ್ಲವನರಿದು ಫಲವೇನಯ್ಯ,
ತನ್ನ ತಾನರಿಯಬೇಕಲ್ಲದೆ?
ತನ್ನಲ್ಲಿ ಅರಿವು ಸ್ವಯವಾಗಿರಲು,
ಅನ್ಯರ ಕೇಳಲುಂಟೆ?
ಚೆನ್ನಮಲ್ಲಿಕಾರ್ಜುನ ನೀನರಿವಾಗಿ
ಮುಂದೋರಿದ ಕಾರಣ ನಿಮ್ಮಿಂದ
ನಿಮ್ಮನರಿದೆನಯ್ಯ ಪ್ರಭುವೇ.

ಅಕ್ಕಮಹಾದೇವಿ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮನೋವೈಜ್ಞಾನಿಕ ಕ್ಷೇತ್ರವು ತುಂಬಾ ವಿಶಾಲವಾಗಿ ಬೆಳೆಯುತ್ತಾ ಬಂದಿದೆ. ಕನ್ನಡ ಕಾದಂಬರಿಯಲ್ಲಿ ಮನೋವೈಜ್ಞಾನಿಕ ಕ್ಷೇತ್ರದಲ್ಲಿ ಅತ್ಯಂತ ಮಹತ್ವದ್ದಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಮನೋವೈಜ್ಞಾನಿಕ ಕಾದಂಬರಿಗಳನ್ನು ಗುರುತಿಸುವುದು ತುಂಬಾ ಪ್ರಮುಖವಾಗಿದೆ. ಕನ್ನಡ ಸಾಹಿತ್ಯದಲ್ಲಿ ಮನೋವೈಜ್ಞಾನಿಕ ಕಾದಂಬರಿಗಳನ್ನು ರಚಿಸಿದವರಲ್ಲಿ ಪ್ರಮುಖವಾಗಿ ಸುದರ್ಶನ ದೇಸಾಯಿಯವರ 'ತಿರುವು', 'ವಿಚಿತ್ರ', 'ಅಪರಾಧಿ'. ತ್ರಿವೇಣಿಯವರ 'ಬೆಕ್ಕಿನ ಕಣ್ಣು.' ಗಿರಿಮನೆ ಶ್ಯಾಮರಾವ್ ಅವರ 'ದುಷ್ಕೃತ್ಯ' ಮುಂತಾದ ಕೃತಿಗಳನ್ನು ಗಮನಿಸಬಹುದು. ಈ ಕೃತಿಗಳು ಕನ್ನಡ ಸಾಹಿತ್ಯದಲ್ಲಿ ಮನೋವೈಜ್ಞಾನಿಕತೆಯ ಬಾಗಿಲು ತೆರೆಯಿತು. ಮನುಷ್ಯನ ಒಳಮನಸ್ಸಿನ ಭಾವನೆಗಳ ತುಡಿತಗಳು, ಆಲೋಚನೆಗಳು ಮತ್ತು ಬಾಹ್ಯ ಘಟನೆಗಳ ಪರಿಣಾಮವೆ ಮನೋವೈಜ್ಞಾನಿಕತೆಯಾಗಿದೆ. ವಿದ್ವಾಂಸ ಈ. ಜಿ. ಬೋರಿಂಗ್ ಮನೋವಿಜ್ಞಾನ ಎಂದರೆ 'ಮಾನವ ಸ್ವಭಾವದ ಅಧ್ಯಯನವೇ ಮನೋವಿಜ್ಞಾನ' ಎಂದಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಹಾಗೂ ಕಥೆಗಳಲ್ಲಿ ಮನುಷ್ಯನ ಒಳಮನಸ್ಸಿನ ಭಾವನೆಗಳ ತುಡಿತಗಳು, ಆಲೋಚನೆಗಳು ಮತ್ತು ಮಾನಸಿಕ ಸಂಘರ್ಷಗಳ ಪ್ರಜ್ಞೆಯ ಅರಿವು, ಸ್ಮರಣೆ, ಆಂತರಿಕ ಮತ್ತು ಬಾಹ್ಯ ಘಟನೆಗಳ ಪರಿಣಾಮಗಳ ಕಾದಂಬರಿಯೇ ತ್ರಿವೇಣಿಯವರ 'ಬೆಕ್ಕಿನ ಕಣ್ಣು' ಕಾದಂಬರಿಯಾಗಿದೆ. ಕನ್ನಡ ಸಾಹಿತ್ಯದಲ್ಲಿ ಮನೋವಿಜ್ಞಾನ ಕುರಿತು ಚರ್ಚಿಸುವಾಗ ಅನೇಕ ಅಂಶಗಳು ತೆರೆದುಕೊಳ್ಳುತ್ತವೆ. ಮನುಷ್ಯರ ಮನೋಭಾವನೆಗಳನ್ನು ಮತ್ತು ಅವರ ನಡವಳಿಕೆಗಳ ಸಂಘರ್ಷಗಳನ್ನು 'ಬೆಕ್ಕಿನ ಕಣ್ಣು' ಕಾದಂಬರಿ ತಿಳಿಸುತ್ತದೆ. ರಾಜಮ್ಮ ಮತ್ತು ಜಗನ್ನಾಥನಿಗೆ ಮದುವೆಯಾಗಿ ಐದು ವರ್ಷಗಳ ನಂತರ ಹುಟ್ಟಿದ ಮಗಳು

ಕುಸುಮಾ. ತಂದೆ– ತಾಯಿ ಮತ್ತು ಅಜ್ಜಿಯ ಅಕ್ಕರೆಯ ಗೊಂಬೆ ಕುಸುಮಾ. ಅಜ್ಜಿ ಲಕ್ಷ್ಮಮ್ಮನಿಗೆ ಕುಸುಮಾಳಿಗೆ ಏನಾದರು ತೊಂದರೆಯಾದರೆ ಅಜ್ಜಿಯೇ ಹೆಚ್ಚು ಆಂತಕವನ್ನು ಪಡುತ್ತಿದ್ದಳು. ಮೊಮ್ಮಗಳ ಹುಟ್ಟು ಹಬ್ಬಕ್ಕೆ ಬಂಗಾರದ ಸರ ಮಾಡಿಸಿ ಸಂತೋಷ ಪಟ್ಟಿದ್ದಳು. ಕುಸುಮಾ ಹೇಳಿದ ಮನೆಯವರೆಲ್ಲ ಕೇಳುತ್ತ ಅವಳು ಹೇಳಿದಂತೆ ಎಲ್ಲರೂ ಕೇಳಬೇಕು ಎಂಬ ಮನಃಸ್ಥಿತಿಯನ್ನು ಕುಸುಮಾಳಿಗೆ ರೂಢಿಸುತ್ತಾರೆ.

ಕಾದಂಬರಿಯಲ್ಲಿ ಕುಸುಮಾಳ ಭಾವನೆಗಳು ತುಂಬಾ ಆತಂಕ ಮತ್ತು ಕಳವಳವನ್ನು ಹುಟ್ಟಿಸುತ್ತವೆ. ಶಾಲೆಯಲ್ಲಿ ಸ್ನೇಹಿತರು ಮತ್ತು ಶಿಕ್ಷಕರ ಜೊತೆ ಅವಳ ವರ್ತನೆ ತುಂಬಾ ಅಸಹಜವಾಗಿತ್ತು. ಶಿಕ್ಷಕರು ಬೈದರೆ ಶಾಲೆಗೆ ಹೋಗುವುದಿಲ್ಲ ಎನ್ನುವುದು, ಸಿಟ್ಟು ಮಾಡಿಕೊಳ್ಳುವುದು ಇದನ್ನು ನೋಡಿದರೆ ಬಾಲ್ಯದಲ್ಲಿಯೇ ಅವರಿಗೆ ತಂದೆ–ತಾಯಿ ಅಜ್ಜಿ ತಿಳಿ ಹೇಳಬೇಕಾಗಿತ್ತು. ಆದರೆ ಅಕ್ಕರೆಯಿಂದ ನೋಡಿಕೊಂಡ ಕುಸುಮಾಳ ಭಾವನೆಗೆ ಮುಂದೆ ತುಂಬಾ ಧಕ್ಕೆಯಾಗುತ್ತದೆ. ಕುಸುಮಾಳ ಮನೆಯಲ್ಲಿ ತಾಯಿ ಸತ್ತ ನಂತರ ಬೇರೆ ಸದಸ್ಯರನ್ನು ಬರಮಾಡಿಕೊಳ್ಳಲು ಮನಸ್ಸು ತವಕಿಸುತ್ತದೆ. ಆದರೆ ಕುಸುಮಾಳ ತಾಯಿಯಾಗಬೇಕಾದ ಪದ್ಮಾ ಮಲತಾಯಿಯಾಗುತ್ತಾಳೆ.

ತಮಾಷೆಯಾಗಿ ಪದ್ಮಾಳ ಸ್ನೇಹಿತೆ ಮದುವೆಯ ದಿನ ಪದ್ಮಾಳ ತೊಡೆಯ ಮೇಲೆ ಕುಸುಮಾಳನ್ನು ಕುರಿಸುತ್ತಾಳೆ. ಆದರೆ ಮೊದಲೆ ಎರಡನೇಯ ಸಂಬಂಧವೆಂದು ಮೊದಲೆ ತಾಪದಲ್ಲಿ ಬೇಯುತ್ತಿದ್ದಳು. ಇಂತಹ ಸಂದರ್ಭದಲ್ಲಿ ಸ್ನೇಹಿತೆಯರು ಮಾಡಿದ ತಮಾಷೆಯಿಂದ ತೊಡೆಯ ಮೇಲಿದ್ದ ಕುಸುಮಾಳನ್ನು ತಳ್ಳುತ್ತಾಳೆ. ಪದ್ಮಾ ತಳ್ಳಿದ ರಭಸಕ್ಕೆ ಕುಸುಮಾ ಕೆಳಗೆ ಬಿಳುತ್ತಾಳೆ. ಅಂದಿನಿಂದ ಕುಸುಮಾ ಪದ್ಮಾಳನ್ನು ದ್ವೇಷಿಸುತ್ತಾ ಸಾಗುತ್ತಾಳೆ. ಎಂತಹ ಕಾಕತಾಳೀಯವೆಂದರೆ ಪದ್ಮಾಳ ಕಣ್ಣು ಕುಸುಮಾ ಸಾಕಿದ ಬೆಕ್ಕು (ಪಾಲಿ) ಒಂದೆ ರೀತಿಯಿದ್ದವು.

ಒಂದು ದಿನ ರಾತ್ರಿ ಮನೆಯಲ್ಲಿ ಚಿಕ್ಕಮ್ಮ ಮದುವೆಯಾಗಿ ಬಂದಾಗ, ಗುಡುಗು ಸಿಡಿಲಿನಿಂದ ಕೂಡಿದ ಮಳೆಯ ಆರ್ಭಟ ಹೆಚ್ಚಾಗಿತ್ತು. ಕುಸುಮಾ ಮಲಗಿದ ನಂತರ ತಂದೆ ಜಗನ್ನಾಥ ಹೆಂಡತಿಯ ಕೊಣೆಗೆ ಹೊಗುತ್ತಾನೆ. ಗುಡುಗು ಸಿಡಿಲಿನ ಸಂದರ್ಭದಲ್ಲಿ ಕುಸುಮಾ ತುಂಬಾ ಭಯದಿಂದ ಇರುವಾಗ, ತನ್ನ ಪಕ್ಕದಲ್ಲಿದ್ದ ತಂದೆಗಾಗಿ ನೆಲದ ಮೇಲೆ ಕೈಯಾಡಿಸುತ್ತಾಳೆ. ತಂದೆ ಕಾಣದೆ ಇದ್ದಾಗ ಅಣ್ಣ ಅಣ್ಣ ಎಂದು ಭಯದಿಂದ ಕೂಗಿದಾಗ ಅವಳ ಚಿಕ್ಕಮ್ಮ ಪದ್ಮಾ ಬರುತ್ತಾಳೆ. ಅವಳ ಅಂದಿನ ಸಂದರ್ಭದ ವರ್ತನೆಯನ್ನು ನೋಡಿ ಕುಸುಮಾ ಭಯ ಬಿಳುತ್ತಾಳೆ.

ಇದು ಯಾವುದರ ಅರಿವೆ ಇಲ್ಲದ ಹೆಂಡತಿಯ ಕೋಣೆಯಲ್ಲಿ ಸುಖಿಸುವ ತಂದೆಯ ಮೇಲೆ ಕುಸುಮಾಳಿಗೆ ಕೋಪ ಬರುತ್ತದೆ. ತಂದೆ ಚಿಕ್ಕಮ್ಮಳ ವ್ಯಾಮೋಹದಲ್ಲಿ ಕಳೆದು ಹೋಗುತ್ತಾನೆ. ಮಗಳ ಬಗ್ಗೆ ಯಾವುದೆ ಅರಿವಿಲ್ಲದೆ ವರ್ತಿಸುತ್ತಾನೆ. ಪದ್ಮಾ ಹೇಳಿದಂತೆ ಮಗಳದ್ದೇ ತಪ್ಪು ಎಂದು ಭಾವಿಸುತ್ತಾನೆ. ಅವಳು ಹೇಳಿದ್ದು ನಿಜವೆಂದು ನಂಬಿ ಕುಸುಮಾಳ ಹತಾಶಯಕ್ಕೆ ತಂದೆಯೇ ಕಾರಣರಾಗುತ್ತಾರೆ. ಪಾಲಿಯನ್ನು ನೋಡಿದಾಗ ಚಿಕ್ಕಮ್ಮನನ್ನು ನೋಡಿದ ನೆನಪಾಗುತ್ತದೆ. ಅಂದಿನಿಂದ ಪಾಲಿಯನ್ನು ದ್ವೇಷಿಸುತ್ತಾ, ಹಿಂಸಿಸುತ್ತಾ ಹೊಡೆಯುತ್ತಾ ಹೋಗುತ್ತಾಳೆ. ಚಿಕ್ಕಮ್ಮನ ಮೇಲಿನ ಸಿಟ್ಟನ್ನು ಪಾಲಿಯ ಮೇಲೆ ತೀರಿಸುತ್ತಾಳೆ. ತಂದೆಯ ತಾತ್ಸಾರ, ಚಿಕ್ಕಮ್ಮಳ ಅಸೂಯೆ ಕುಸುಮಾ ಇನ್ನು ಹೆಚ್ಚು ದ್ವೇಷಿಸುವಂತೆ ಮಾಡುತ್ತದೆ. ಪ್ರೀತಿಯಿಂದ ಅವಳನ್ನು ತಿದ್ದುತ್ತಾ ಹೋಗಿದ್ದರೆ, ಕುಸುಮಾ ತನ್ನ ಮನಸ್ಸಿನ ಎಲ್ಲಾ ತುಮುಲಗಳನ್ನು ಹೊರಹಾಕುತ್ತಿದ್ದಳು. ಆದರೆ ಅಂತಹ ವಾತ್ಸಲ್ಯ ತಂದೆ ಮತ್ತು ಚಿಕ್ಕಮ್ಮಾಳಿಂದ ಕುಸುಮಾಳಿಗೆ ಸಿಗಲಿಲ್ಲ.

ಕುಸುಮಾಳ ಜೀವನದಂತೆ ಪ್ರಪಂಚದಲ್ಲಿ ಇಂದು ಅನೇಕ ಜನರ ಮನಸ್ಥಿತಿ ಕುಸುಮಾಳ ಹಾಗೆ ಇರುತ್ತದೆ. ಕುಸುಮಾಳ ಜೀವನ ಚಿಕ್ಕಮ್ಮಾಳ ತಮ್ಮನಿಂದ ಸರಿ ಹೋಗುತ್ತದೆ. ರಾಜಶೇಖರ ಅವಳನ್ನು ಅವಳ ಮನಸ್ಸನ್ನು ಸರಿಯಾಗಿ ಅರ್ಥಮಾಡಿಕೊಂಡು ಮಾನಸಿಕ ಅಸ್ವಸ್ಥೆಯಾಗಿರುವ ಕುಸುಮಾಳನ್ನು ಆಸ್ಪತ್ರೆಗೆ ಸೇರಿಸುತ್ತಾನೆ. ಕುಸುಮಾಳ ಮನಸ್ಥಿತಿಗೆ ತನ್ನ ಅಕ್ಕನೆ ಕಾರಣವೆಂದಾದಾಗ ತುಂಬಾ ಆತಂಕ ಪಡುತ್ತಾ, ಬೇಸರ ವ್ಯಕ್ತಪಡಿಸುತ್ತಾನೆ. ರಾಜಶೇಖರ ಕುಸುಮಾಳ ಜೀವನ ಸರಿ ಪಡಿಸಬೇಕೆಂದು ಬಯಸುತ್ತಾನೆ.

ಕೊನೆಗೆ ತನ್ನ ಅಕ್ಕ ಮತ್ತು ಭಾವನಿಗೆ ತಿಳಿಹೇಳಲು ಯಶಸ್ವಿಯಾಗುತ್ತಾನೆ. ಅಂದಿನಿಂದ ಅವರೂ ಸಹ ಕುಸುಮಾಳನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಅಂದಿನಿಂದ ಕುಸುಮಾಳ ಜೀವನದಲ್ಲಿ ಸಂತೋಷ ತುಂಬುತ್ತದೆ. ಆದರೆ ಇಲ್ಲಿ ತಪ್ಪು ಎರಡು ಕಡೆಯಿಂದ ನಡೆಯುತ್ತದೆ. ತಾನು ಹೇಳಿದಂತೆ ಮನೆಯವರು, ತನ್ನ ಸುತ್ತಲಿನವರು ಕೇಳಬೇಕೆಂಬ ಕುಸುಮಾಳ ಹಟಮಾರಿ ಮನಃಸ್ಥಿತಿಯೂ ತಪ್ಪೇ.

ಪ್ರಮುಖ ಪಾತ್ರಗಳಾದ ಪದ್ಮಾ ಮತ್ತು ಕುಸುಮಾ ತುಂಬಾ ಕೋಪ, ಆವೇಶವನ್ನು ಹೊಂದಿದವರು. ಇವರಲ್ಲಿ ಹೊಂದಾಣಿಕೆ ಮತ್ತು ಕರುಣೆಗೆ ಅವಕಾಶಗಳು ಇಲ್ಲವೆನೋ ಅನ್ನುವಂತಿರಲಿಲ್ಲ. ಕುಸುಮಾ ತಂದೆ, ತಾಯಿ, ಅಜ್ಜಿ, ಪಾಲಿ ಮತ್ತು ನಾಯಿಯ ಮೇಲೆ ತುಂಬಾ ಪ್ರೀತಿಯನ್ನು ಹೊಂದಿದ್ದಳು. ಹಾಗೆ ಪದ್ಮಾ ತಂದೆ, ತಾಯಿ, ತಮ್ಮ ಮತ್ತು ಸ್ನೇಹಿತರೊಂದಿಗೆ ಒಳ್ಳೆಯ ಬಾಂಧವ್ಯ–ಒಡನಾಟವನ್ನು ಹೊಂದಿದ್ದಳು. ಇವರ ಮನಃಸ್ಥಿತಿ ಹೇಗೆಂದರೆ ಅವರು ಹೇಳಿದಂತೆ ಎಲ್ಲರೂ ಕೇಳಬೇಕು. ಎಲ್ಲರ ಗಮನ ತಮ್ಮೆಡೆಗೆ ಇರಬೇಕು ಎಂದು ಬಯಸುತ್ತಾರೆ. ಅವರ ಒಳಮನಸ್ಸಿನ ತುಡಿತವನ್ನು ಬೇರೆ ಅರ್ಥ ಮಾಡಿಕೊಳ್ಳಲು ಕಷ್ಟವಾಗುತ್ತದೆ.

ಮಾನಸಿಕ ಆರೋಗ್ಯಕ್ಕೆ ಅವಶ್ಯಕವಾದ ಪ್ರೇಮ, ರಕ್ಷಣೆ ಮತ್ತು ತನ್ನ ಇಷ್ಟದಂತೆ ನಡೆದುಕೊಳ್ಳುವ ಸ್ವಾತಂತ್ರ್ಯ ಕುಸುಮಾ ಪಾಲಿಗೆ ದೊರಕದೆ ಇದ್ದಾಗ ಅವಳು ಮನೋರೋಗಕ್ಕೆ ಒಳಗಾಗುತ್ತಾಳೆ. ಪದ್ಮ ಮಲಮಗಳಿರುವ ಎರಡನೇಯ ಸಂಬಂಧದ ಮದುವೆಗೆ ಅನಿವಾರ್ಯವಾಗಿ ಒಪ್ಪಿರುತ್ತಾಳೆ. ತನ್ನೆಲ್ಲ ಅಸಮಾಧಾನವನ್ನು ಕುಸುಮಾಳನ್ನು ಹಿಂಸಿಸುತ್ತಾ, 'ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು' ಎನ್ನುವಂತೆ ತಾತ್ಸಾರದಿಂದ ನೋಡುತ್ತಾಳೆ. ಕುಸುಮಾಳನ್ನು ರಾಜಶೇಖರ ಸೈಕೋ ಅನಲಿಸ್ಟ್‌ಗೆಂದು ಆಸ್ಪತ್ರೆಗೆ ಸೇರಿಸುತ್ತಾನೆ. ಮನೋವೈದ್ಯರು ಮಾಡಿದ ಚಿಕಿತ್ಸೆಯಿಂದ ಹಾಗೂ ರಾಜಶೇಖರ ಮತ್ತು ಮನೆಯವರ ಕಾಳಜಿಯಿಂದ ಕುಸುಮಾ ಗುಣವಾಗುತ್ತಾಳೆ.

ಕಾದಂಬರಿಯನ್ನು ಓದುತ್ತಾ ಹೋದ ಹಾಗೆ ಹೊಸ ಪ್ರಪಂಚ ತೆರೆದುಕೊಳ್ಳುವ ಅನುಭವ ಆಗುತ್ತದೆ. ಓದುಗರ ಮನಸ್ಸನ್ನು ಆಳವಾಗಿ ಚರ್ಚಿಸುವಂತೆ ಹಾಗೂ ಆಸಕ್ತಿ ಮೂಡುವಂತೆ ಮಾಡುತ್ತದೆ. ಒಂದೊಂದು ಪಾತ್ರಗಳು ಭಿನ್ನತೆಯಿಂದ ತುಂಬಿವೆ. ಓದುಗರಿಗೆ ಆಸಕ್ತಿ ಮೂಡುತ್ತದೆ. ತ್ರಿವೇಣಿಯವರು ಬಿ.ಎ.ಪದವಿಯಲ್ಲಿ ಮನಃಶಾಸ್ತದಲ್ಲಿ ಚಿನ್ನದ ಪದಕ ಪಡೆದವರು. ಕಾದಂಬರಿಯಲ್ಲಿ ಪುರುಷನ ಪ್ರೀತಿ ಮತ್ತು ಹೆಣ್ಣಿನ ತಾಯ್ತನದ ಆನಂದವನ್ನು ಸ್ತ್ರೀ ದೃಷ್ಟಿಕೋನದ ಆಕಾಂಕ್ಷೆಗಳಲ್ಲಿ ಕಟ್ಟಲಾಗಿದೆ.

ಕಾದಂಬರಿಯಲ್ಲಿ ಪಾತ್ರಗಳ ಸ್ವಭಾವ ನಡೆ– ನುಡಿಯನ್ನು ಮನೋವಿಜ್ಞಾನ ನೆಲೆಯಲ್ಲಿ ಅತ್ಯಂತ ಸೂಕ್ಷ್ಮವಾಗಿ ವಿವರಿಸಿದ್ದಾರೆ. ತ್ರಿವೇಣಿಯವರು ಐವತ್ತರ ದಶಕದಲ್ಲಿ ಮನೋವೈಜ್ಞಾನಿಕ ಕಾದಂಬರಿಗಳನ್ನು ಬರೆದು ಕನ್ನಡ ಸಾಹಿತ್ಯದಲ್ಲಿ ಹೆಮ್ಮೆ ಮತ್ತು ಬೆರಗನ್ನು ಮೂಡಿಸಿದವರು. ಕುಸುಮಾಳಂತಹ ಮಾನಸಿಕ ಆಸ್ಪತ್ರೆಯಲ್ಲಿ ಹಲವು ರೋಗಿಗಳು, ರೋಗದ ಕಾರಣ ಮತ್ತು ಅವರ ನಡವಳಿಕೆ ಸಂಕ್ಷಿಪ್ತವಾಗಿ ಮನಸ್ಸಿನಲ್ಲಿ ತೆರೆದುಕೊಳ್ಳುತ್ತಾ ಹೋಗುತ್ತದೆ. ಕುಸುಮಾಳಂತೆ ಅನೇಕ ಜನರು ನಮ್ಮ ಸುತ್ತಮುತ್ತಲು ಇರುತ್ತಾರೆ. ಅವರನ್ನು ಗುರುತಿಸಿ ಸರಿಯಾದ ಚಿಕಿತ್ಸೆಗೆ ಒಳಪಡಿಸಿದರೆ ಅವರು ಸಹ ಉತ್ತಮ ಜೀವನ ಹಾಗೂ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದು ಲೇಖಕಿಯ ಹಂಬಲವೂ ಕೂಡಾ ಆಗಿದೆ.

ಪರಾಮರ್ಶನ ಗ್ರಂಥಗಳು

1 ಬೆಕ್ಕಿನ ಕಣ್ಣು, ತ್ರಿವೇಣಿ, ತ್ರಿವೇಣಿ ಶಂಕರ್ ಸಾಹಿತ್ಯ ಪ್ರತಿಷ್ಠಾನ(ರಿ) ಮೈಸೂರು–2015.

2 ಶೈಕ್ಷಣಿಕ ಮನೋವಿಜ್ಞಾನ, ಡಾ.ಎನ್.ಬಿ. ಕೊಂಗವಾಡ, ವಿದ್ಯಾನಿಧಿ ಪ್ರಕಾಶನ, ಗದಗ.–2012.

3 ವಚನ ಧರ್ಮಸಾರ–ಎಂ.ಆರ್.ಶ್ರೀನಿವಾಸಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,2023.

ಮನೋವೈಜ್ಞಾನಿಕ ಕಾದಂಬರಿಗಳು ಮತ್ತು ಚಲನಚಿತ್ರ

ಡಾ. ಸುಧಾಕರ್ ಎಚ್.
ಕನ್ನಡ ಸಹಾಯಕ ಪ್ರಾಧ್ಯಾಪಕರು
ಮಹಾರಾಣಿ ಲಕ್ಷ್ಮಿಅಮ್ಮಣ್ಣಿ ಮಹಿಳಾ ಕಾಲೇಜು, ಸ್ವಾಯತ್ತ, ಮಲ್ಲೇಶ್ವರಂ, ಬೆಂಗಳೂರು

ಸಿನಿಮಾ ಮತ್ತು ಮನೋವಿಜ್ಞಾನವು ಒಂದಕ್ಕೊಂದು ನಿಕಟ ಸಂಬಂಧ ಹೊಂದಿವೆ. ಏಕೆಂದರೆ ಚಲನಚಿತ್ರಗಳು ಮನೋವೈಜ್ಞಾನಿಕ ಕಥಾವಸ್ತುಗಳನ್ನು ಬಳಸಿಕೊಂಡು ಪ್ರೇಕ್ಷಕರ ಭಾವನೆಗಳು ಮತ್ತು ಮನಸ್ಸಿನ ಮೇಲೆ ಪ್ರಭಾವ ಬೀರುತ್ತವೆ. ಹಾಗೆಯೇ ಸಿನಿಮಾಟೋಗ್ರಫಿಯಂತಹ ತಾಂತ್ರಿಕ ಅಂಶಗಳು ಪ್ರೇಕ್ಷಕರ ಅನುಭವವನ್ನು ಹೆಚ್ಚಿಸುತ್ತವೆ. ಮನೋವೈಜ್ಞಾನಿಕ ಚಲನಚಿತ್ರಗಳು ಪಾತ್ರಗಳ ಆಂತರಿಕ ಸಂಘರ್ಷ ಮತ್ತು ಭಾವನಾತ್ಮಕ ಬೆಳವಣಿಗೆಯನ್ನು ಕೇಂದ್ರೀಕರಿಸುತ್ತವೆ. ಇವುಗಳನ್ನು ಮನೋರಂಜನೆಗೆ ಮಾತ್ರವಲ್ಲದೆ, ಪ್ರೇರಣೆ ಮತ್ತು ಚಿಕಿತ್ಸೆಗೂ ಬಳಸಬಹುದು.

ಮನುಷ್ಯನ ಮನಸ್ಸಿನಲ್ಲಿ ಎರಡು ಭಾಗವಿದ್ದು ಒಂದು ಜಾಗೃತಗೊಂಡಿದ್ದು, ಮತ್ತೊಂದು ಅಜಾಗೃತವಾಗಿರುತ್ತದೆ. ಅಂದರೆ ಅರಿವಿಲ್ಲದ ಭಾಗ ಎನ್ನಬಹುದು. ನೆರವೇರದ ಆಸೆಗಳು, ಹೊಂದಲಾಗದ ಅನುಭವಗಳು, ನಡೆಯಲಾರದ ಅಭಿಪ್ರಾಯಗಳು ಇವುಗಳೆಲ್ಲವೂ ಅಜಾಗೃತ ಮನಸ್ಸಿನಲ್ಲಿರುತ್ತವೆ. ಇವುಗಳನ್ನು ಜಾಗೃತ ಮನಸ್ಸು ಮರೆತುಬಿಡುತ್ತದೆ. ಇವುಗಳದ್ದು ಒಂದು ಪ್ರತ್ಯೇಕ ಕ್ರಿಯೆಯಾಗಿ ಅದು ಒಂದು ವ್ಯಕ್ತಿತ್ವವಾಗುತ್ತದೆ. "ಪರಿಸ್ಥಿತಿಗಳು ಕ್ಲಿಷ್ಟವಾದಾಗ ಒಬ್ಬ ಮನುಷ್ಯನಲ್ಲಿ ಪುನಃ ಪುನಃ ಕಾಣಿಸಿಕೊಳ್ಳುವ ನಿರ್ದಿಷ್ಟ ವರ್ತನೆಯ ಶೈಲಿಗೆ, ಎಂದರೆ ಕ್ಲಿಷ್ಟ ಪರಿಸ್ಥಿತಿಯನ್ನು ನಿಭಾಯಿಸುವ ಮನುಷ್ಯನ ಕರ್ತವ್ಯ ಶಕ್ತಿಗೆ ಸೈಕಾಲಜಿಯಲ್ಲಿ ವ್ಯಕ್ತಿತ್ವ, ಪರ್ಸನಾಲಿಟಿ"[1] ಎಂದು ಹೆಸರು.

ಈ ಬಗೆಯ ಭಿನ್ನ ಪ್ರಕ್ರಿಯೆಗಳು ಮನೋಲೋಕದಲ್ಲಿ ನಿರಂತರವಾಗಿ ತಾಕಲಾಡುತ್ತಲೇ ಇರುತ್ತವೆ. ಕೆಲವು ಬಾಹ್ಯ ಪ್ರಚೋದನೆಗಳು ಸಮುದ್ರದಾಳದಿಂದ ಉಕ್ಕೇರುವ ಅಗ್ನಿಪರ್ವತದಂತೆ ಬಹುರ್ಮುಖವಾಗಿ ಚಿಮ್ಮಿ ಮಾನಸಿಕ ವಿಕಾರಗಳಿಗೆ ದಾರಿ ಮಾಡುತ್ತವೆ. ಸುಪ್ತ ಮನಸ್ಸಿನ ಬಯಕೆಗಳು ಈಡೇರಿದಾಗ ಉಕ್ಕೇರುವ ಅಲೆಗಳು ಶಾಂತವಾದಂತೆ ಮನಸ್ಸು ಸುಸ್ಥಿತಿಗೆ ಬರುತ್ತದೆ. ಇಂತಹ ಮನೋವ್ಯಾಪಾರಗಳ ಬಗೆಗೆ ಕಾದಂಬರಿಗಾರ್ತಿಯರೂ ತಮ್ಮ ಚಿಂತನೆಗೆ ವಿಷಯವನ್ನು ಹಚ್ಚಿ ಕೃತಿರೂಪದಲ್ಲಿ ಅಭಿವ್ಯಕ್ತಿಸಿರುವುದನ್ನು ಗಮನಿಸಬಹುದು.

ಮನೋರೋಗಕ್ಕೆ ಸಂಬಂಧಿಸಿದ ಕಾಯಿಲೆಯಿಂದ ನರಳುವಂತಹ ಹೆಣ್ಣಿನ ಚಿತ್ರಣವಿರುವ ಕಾದಂಬರಿಗಳು ಮತ್ತು ಅವು ಚಲನಚಿತ್ರವಾದುದ್ದನ್ನು ಆಧಾರವಾಗಿಟ್ಟುಕೊಂಡು ತೌಲನಿಕ ವಿಶ್ಲೇಷಣೆಯನ್ನು ಮಾಡಲಾಗಿದೆ. ಇದರಲ್ಲಿ ಎಂ.ಕೆ. ಇಂದಿರಾರವರ 'ಹೂಬಾಣ', ತ್ರಿವೇಣಿಯವರ 'ಶರಪಂಜರ' ಮತ್ತು ಆರ್ಯಾಂಬ ಪಟ್ಟಾಭಿ ಅವರ 'ಎರಡು ಮುಖ' ಕಾದಂಬರಿಗಳು ಪ್ರಮುಖವಾಗಿವೆ.

ಮುತ್ತು ಒಂದು ಮುತ್ತು

ಶ್ರೀಮತಿ ಎಂ. ಕೆ. ಇಂದಿರಾರವರ 'ಹೂಬಾಣ' ಎಂಬ ಕಾದಂಬರಿಯನ್ನು 1978ರಲ್ಲಿ ನಿರ್ದೇಶಕ ಆರ್.ಎನ್.ಜಯಗೋಪಾಲ್ ಅವರು 'ಮುತ್ತು ಒಂದು ಮುತ್ತು' ಎಂಬ ಚಲನಚಿತ್ರವಾಗಿ ನಿರ್ದೇಶಿಸಿದ್ದಾರೆ. ಇದು ಮನೋವೈಜ್ಞಾನಿಕ ಕಾದಂಬರಿಯಾಗಿದೆ.

ಮುತ್ತು ಎಂಬ ಹೆಣ್ಣುಮಗಳು ಮಾನಸಿಕ ಆಘಾತಕ್ಕೊಳಗಾಗಿ ಮೂಕಿಯಾಗಿ ಮಧುಕರನೆಂಬ ಮನೋರೋಗದ ಡಾಕ್ಟರ್‌ನಿಂದ ಮತ್ತೆ ಗುಣಮುಖಳಾಗುವ ಚಿತ್ರಣ ಇಲ್ಲಿದೆ.

ಮುತ್ತುವಿನ ತಾಯಿಚಿಕ್ಕ ವಯಸ್ಸಿಗೆ ವಿಧವೆಯಾಗಿ, ಒಂದು ಶಾಲೆಯಲ್ಲಿ ಶಿಕ್ಷಕಿಯಾಗಿರುತ್ತಾಳೆ. ಮುತ್ತು ಆರು ವರ್ಷದ ಹುಡುಗಿ ಇರುವಾಗ ಅವಳನ್ನು ಬಿಟ್ಟು ಪರ ಪುರುಷನೊಂದಿಗೆ ಹೊರಟು ಹೋಗುತ್ತಾಳೆ. ಮೊದಲೇ ತಂದೆಯನ್ನು ಕಳೆದುಕೊಂಡ ಮುತ್ತುವಿಗೆ ತಾಯಿಯೂ ದೂರವಾದಾಗ ಮನಸ್ಸಿನ ಮೇಲೆ ತೀವ್ರ ಪರಿಣಾಮ ಬೀರಿ ಅದರಿಂದ ಅವಳು ಮಾತಾಡುವ ಶಕ್ತಿಯನ್ನೇ ಕಳೆದುಕೊಳ್ಳುತ್ತಾಳೆ.

ಮಧುಕರ ಮನೋವೈದ್ಯನಾಗಿದ್ದು, ತಂದೆಯ ಅವ್ಯವಹಾರವನ್ನು ಕಂಡು ಅಲ್ಲಿರಲಾಗದೆ ಮಲೆನಾಡಿನ ಪ್ರಶಾಂತ ವಾತಾವರಣಕ್ಕೆ ವೈದ್ಯನಾಗಿ ಬರುತ್ತಾನೆ. ಮುತ್ತುವಿನ ವಿಚಿತ್ರ ವರ್ತನೆ ಕಂಡು ಅವಳ ರೋಗ ಗುಣಪಡಿಸಲು ಮುಂದಾಗುತ್ತಾನೆ ಮತ್ತು ಅವಳನ್ನೇ ಮದುವೆಯಾಗ ಬಯಸುತ್ತಾನೆ. ಇವನ ತಂದೆಯೊಂದಿಗೆ, ಮುತ್ತುವಿನ ತಾಯಿ ಅನೈತಿಕ ಸಂಬಂಧ ಬೆಳೆಸಿದ್ದು ಮುತ್ತುವಿಗೆ ತಿಳಿಯುತ್ತದೆ. ಕಾರು ಅಪಘಾತದಲ್ಲಿ ಅವರ ದುರ್ಮರಣವನ್ನು ಕಂಡು ಪುನರಾಘಾತವಾಗಿ ಮುತ್ತುವಿಗೆ ಮಾತು ಬರುತ್ತದೆ.

ಡಾ. ಮಧುಕರ ಹಳ್ಳಿಯ ಸೊಗಡಿನ ಮಧ್ಯೆ ಇರಲು ಬಂದಾಗ, ಅವನಿಗೆ ಕಾಲೇಜಿನ ಸಹಪಾಠಿ ಮಾಲತಿ ಆ ಹಳ್ಳಿಯಲ್ಲೇ ಇದ್ದು ಮಧುವನ್ನು ಪ್ರೀತಿಸುತ್ತಾಳೆ. ಮುತ್ತುವನ್ನು ಪ್ರೀತಿಸುವ ಅವನು ಅವಳನ್ನು ನಿರಾಕರಿಸಿದಾಗ, ಮತ್ತೊಬ್ಬ ವ್ಯಕ್ತಿ ಸುಂದರ್ ಎಂಬುವವನ ಸ್ನೇಹ ಬೆಳೆಸಿ ಗರ್ಭಿಣಿಯಾಗುತ್ತಾಳೆ. ತನಗೆ ಗರ್ಭಪಾತ ಮಾಡುವಂತೆ ಮಧುಕರನನ್ನು ಕೇಳುತ್ತಾಳೆ. ಅವನು ಒಪ್ಪದಿದ್ದಾಗ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಅವಳ ಸ್ನೇಹ ಮಧುವಿನೊಂದಿಗೆ ಇದ್ದುದರಿಂದ ಅವಳ ಸ್ಥಿತಿಗೆ ಅವನೇ ಕಾರಣವೆಂಬಂತೆ ಊರಿನವರು ನಿಂದಿಸುತ್ತಾರೆ. ಅನಂತರದಲ್ಲಿ ಸುಂದರ್ ತನ್ನ ತಪ್ಪು ಒಪ್ಪಿಕೊಳ್ಳುತ್ತಾನೆ.

ಈ ಕಥಾ ಹಂದರವನ್ನು ಚಲನಚಿತ್ರದಲ್ಲಿ ತಂದಾಗ ಕಾದಂಬರಿಯಲ್ಲಿನ ಕೆಲವೊಂದು ಸನ್ನಿವೇಶಗಳು ಸಿನಿಮೀಯ ಅಂಶದಿಂದಲೇ ಕೂಡಿದ್ದು ಕಂಡುಬರುತ್ತದೆ. ಇಲ್ಲಿ ಮುತ್ತು ಮತ್ತು ಮಧುಕರನದು ಮುಖ್ಯಪಾತ್ರವಾಗಿದ್ದು ಅವರಿಬ್ಬರು ಒಂದೇ ರೀತಿಯ ಸಮಸ್ಯೆಗೆ ಗುರಿಯಾಗಿರುತ್ತಾರೆ. ಕೊನೆಯವರೆಗೂ ಅವರು ಯಾರ ಮಕ್ಕಳು ಎಂದು ತಿಳಿಯುವುದಿಲ್ಲ. ಮುತ್ತುವಿನ ತಾಯಿ ಸಾಯುವಂತೆ ಮಾಡುವ ಪ್ರಸಂಗ ಕಥೆಯ ಮುಕ್ತಾಯಕ್ಕೆ ಒಂದು ಸಂಬದ್ಧತೆಯನ್ನು ನೀಡಿದೆ. ಮಧುವಿನ ತಾಯಿಯಾಗಿ (ಚಿಕ್ಕಮ್ಮ) ಮುತ್ತುವಿನ ತಾಯಿ ಇರುವುದು, ಮುತ್ತು ಆ ಮನೆಗೆ ಸೊಸೆಯಾಗಿ ಹೋಗುವುದು ಸಮಾಜಕ್ಕೆ ಪೂರಕವೆನಿಸುವುದಿಲ್ಲ.

ಪ್ರಸ್ತುತ ಸನ್ನಿವೇಶದಲ್ಲಿ ಇಂಥ ಜೀವನ ಸಾಧ್ಯವೆ? ಇದು ಕೆಟ್ಟ ಬೆಳವಣಿಗೆ ಅನಿಸುತ್ತದೆ. ಪಾತ್ರ ಸಂಬಂಧಗಳು ಒಂದು ಕ್ರಮದಲ್ಲಿದ್ದರೆ ಅದಕ್ಕೆ ಒಂದು ಮೌಲ್ಯವಿರುತ್ತದೆ. ಅವು ಸಮಾಜಕ್ಕೆ ಪೂರಕವಾಗುವಂತಹ ಪಾತ್ರಗಳಾಗುತ್ತವೆ. ತಾರುಣ್ಯದಲ್ಲಿ ಹಿರಿಯರು ಮಾಡುವ ತಪ್ಪುಗಳು, ಮಕ್ಕಳ ಮನಸ್ಸಿನ ಮೇಲೆ ಬೀರುವ ಪ್ರಭಾವವನ್ನು ಇಲ್ಲಿ ಚಿತ್ರಿಸಿದ್ದಾರೆ. ತಾಯಿ ತಂದೆಯರ ಪ್ರೀತಿ–ವಾತ್ಸಲ್ಯ, ಕರುಣೆ ಎಲ್ಲವೂ ಮಕ್ಕಳಿಗೆ ಬೇಕು. ಅದು ದೊರೆಯದಿದ್ದಾಗ ಆಗುವ ಪರಿಣಾಮ ಮಕ್ಕಳ ಸ್ಥಿತಿ ಹೇಗಿರುತ್ತದೆ. ಮಕ್ಕಳ ಬೆಳವಣಿಗೆಯಲ್ಲಿ ತಾಯಿ–ತಂದೆ ಹೆಚ್ಚಿನ ಪಾತ್ರ ವಹಿಸಬೇಕು ಎಂಬ ಸಂದೇಶ, ಮಾರ್ಗದರ್ಶನವನ್ನು ಇಲ್ಲಿ ನೀಡಿದ್ದಾರೆ.

ಶರಪಂಜರ

1962ರಲ್ಲಿ ಪ್ರಕಟವಾದ ತ್ರಿವೇಣಿ ಅವರ **"ಶರಪಂಜರ"** ಒಂದು ಸಫಲ, ಹೃದಯಸ್ಪರ್ಶಿ ಕೃತಿ. ಗಾಢ ದುರಂತ ಪ್ರಜ್ಞೆಯಿಂದ ಜನಿಸುವ ಅನುಕಂಪವೇ ಇದರ ಸ್ಥಾಯಿಭಾವವಾಗಿದೆ. ಕಾದಂಬರಿಯಲ್ಲಿ ಲೇಖಕಿಯು ಒತ್ತುಕೊಡುವುದು ಒಂದು ವಿಶಿಷ್ಟ್ಯ ಮಾನಸಿಕ ವೈಕಲ್ಪ ಮತ್ತು ಅದರ ಚಿಕಿತ್ಸೆ ಮಾತ್ರವಲ್ಲದೆ, ಮಾನಸಿಕ ಚಿಕಿತ್ಸೆ ಪಡೆದು, ಸ್ವಾಸ್ಥ್ಯವನ್ನು ಮರಳಿ ಪಡೆಯುವ ವ್ಯಕ್ತಿಯ ಬಗ್ಗೆ ಕುಟುಂಬ ಹಾಗೂ ಸಮಾಜಗಳು ಹೇಗೆ ಪ್ರತಿಕ್ರಿಯಿಸುತ್ತವೆ, ಆ ವ್ಯಕ್ತಿ ಮರಳಿ ಸಮಾಜದಲ್ಲಿ ತನ್ನ ಸ್ಥಾನಮಾನಗಳನ್ನು ಪಡೆಯುವುದು ಸಾಧ್ಯವೆ? ಎಂಬುದುರ ಬಗ್ಗೆ ಪ್ರಶ್ನೆ ಎತ್ತುತ್ತದೆ. ಕೇಂದ್ರ ಪಾತ್ರವಾದ ಕಾವೇರಿ ಸಂಪೂರ್ಣ ಗುಣವಾಗಿ

ಚಿಕಿತ್ಸಾಲಯದಿಂದ ಮನೆಗೆ ಬರುವ ಸಂದರ್ಭದಿಂದ ಕಾದಂಬರಿ ಪ್ರಾರಂಭವಾಗುತ್ತದೆ. ತ್ರಿವೇಣಿಯವರ 'ಶರಪಂಜರ' ಕಾದಂಬರಿಯನ್ನು 1971ರಲ್ಲಿ ಪುಟ್ಟಣ್ಣ ಕಣಗಾಲ್ ಅವರು ಚಲನಚಿತ್ರವಾಗಿ ಮಾಡಿದ್ದಾರೆ.

ಕತ್ತಲೆಯ ಜೀವನದಿಂದ ಹೊರಬಂದು ಸಮಾಜದಲ್ಲಿ ಬದುಕಲು ಹವಣಿಸುವ ಹೆಣ್ಣುಮಕ್ಕಳ ಸ್ಥಿತಿ ಹೇಗಿರುತ್ತದೆ? ಅವಳಿಗಾದ ಅನ್ಯಾಯಕ್ಕೆ ಹೊಣೆ ಯಾರು? ಗಂಡಸಿನ ದಬ್ಬಾಳಿಕೆಗೆ ಅಂತ್ಯವಿಲ್ಲ. ಅಂಥವರು ತಾವು ಮಾಡದ ತಪ್ಪಿಗೆ ಸಮಾಜದಿಂದ ಬಹಿಷ್ಕಾರಗೊಂಡವರಂತೆ ಬದುಕಬೇಕಾಗುತ್ತದೆ ಎಂಬ ವಿಚಾರವನ್ನು ಲೇಖಕಿ ಸೊಗಸಾಗಿ ಚಿತ್ರಿಸಿದ್ದಾರೆ.

ಇಲ್ಲಿನ ಮುಖ್ಯ ಪಾತ್ರವಾದ ಕಾವೇರಿ ತನ್ನ ಗೆಳತಿಯ ಮದುವೆಗೆಂದು ಮಡಿಕೇರಿಗೆ ಹೋದಾಗ ಸತೀಶನ ಪರಿಚಯವಾಗುತ್ತದೆ. ಅವನಾಗಿಯೇ ಅವಳನ್ನು ಇಷ್ಟಪಡುತ್ತಾನೆ. ಇಬ್ಬರ ಮನೆಯವರೂ ತಿಳಿದವರೇ ಆದ್ದರಿಂದ ಅವರಿಬ್ಬರ ಮದುವೆ ನಡೆದುಹೋಗುತ್ತದೆ. ಅವರು ದಾಂಪತ್ಯದ ಕ್ಷಣಗಳನ್ನು ಸಂತೋಷದಿಂದ ಅನುಭವಿಸುತ್ತಾರೆ. ಕಾವೇರಿಯದು ಎಲ್ಲ ವಿಷಯದಲ್ಲಿಯೂ ಅವಳಿಷ್ಟದಂತೆ ಇರುವಂತಹ ಸ್ವಭಾವ. ಅವಳ ಅಭಿರುಚಿಗೆ ಗಂಡ ಮತ್ತು ಮನೆಯವರು ತಲೆದೂಗುವವರೇ. ಗಂಡನಿಗೆ ಇಷ್ಟವಾಗುವ ಹಾಗೆ ವೇಷಭೂಷಣ ಮತ್ತು ಅಲಂಕಾರ ಮಾಡಿಕೊಳ್ಳುತ್ತಿದ್ದ ಅವಳು ಎರಡು ಮಕ್ಕಳ ತಾಯಿಯಾಗಿಯೂ ಮತ್ತಷ್ಟು ಶೋಭಿಸುತ್ತಿದ್ದಳು. ಎರಡನೆ ಮಗುವಿನ ಹೆರಿಗೆಯಾದ ನಂತರ ಅವಳಲ್ಲಿ ಹೆಚ್ಚಿನ ನಿಶ್ಯಕ್ತಿ ಉಂಟಾಗುತ್ತದೆ. ಆ ನಿಶ್ಯಕ್ತಿಯೇ ಅವಳನ್ನು ಹಿಸ್ಟೀರಿಯಾ ರೋಗಕ್ಕೆ ತುತ್ತು ಮಾಡುತ್ತದೆ. ಅಲ್ಲಿಗೆ ಅವರ ಸುಖ ಸಂಸಾರ ಕೊನೆಯಾಗುತ್ತದೆ.

'ಎಲ್ಲವನ್ನು ಕಳೆದುಕೊಂಡೆ. ನನ್ನ ಸರ್ವಸ್ವವನ್ನೂ ಕಳೆದುಕೊಂಡೆ' ಎಂದು ಕಾವೇರಿ ನದೀ ತೀರದಲ್ಲಿ ಹೊರಳಾಡುವುದನ್ನು ಕಂಡಾಗ ಅವಳ ಗಂಡ ಅನುಮಾನಿಸುತ್ತಾನೆ. ಅವಳ ರೋಗ ತಿಳಿದು ಆಸ್ಪತ್ರೆಗೆ ಸೇರಿಸುತ್ತಾರೆ. ಆಸ್ಪತ್ರೆಯಿಂದ ಕಾಯಿಲೆ ವಾಸಿಯಾಗಿ ಮನೆಗೆ ಬಂದ ನಂತರ ಗಂಡ, ಮಕ್ಕಳ ಪ್ರೀತಿಗಾಗಿ ಕಾವೇರಿ ಹಂಬಲಿಸುತ್ತಾಳೆ. ಎಲ್ಲರೂ ಅವಳ ಹುಚ್ಚು ವಾಸಿಯಾಗಿಲ್ಲವೆಂಬಂತೆ ವರ್ತಿಸಿದರೂ, ಅವಳು ಸಹಿಸುತ್ತಾಳೆ. ಆದರೆ ಗಂಡ ಕೂಡ ಮತ್ತೊಬ್ಬಳ ಸಹವಾಸ ಮಾಡಿ ತನ್ನನ್ನು ಕಡೆಗಣಿಸಿದ್ದಾನೆಂದು ತಿಳಿದು ಅವಳ ಮನಸ್ಸಿನ ಕನ್ನಡಿ ಒಡೆದು ಮನಸ್ಸು ಮತ್ತೆ ವಿಕಾರಗೊಳ್ಳುತ್ತದೆ. ಕಾವೇರಿ ಶಾಶ್ವತವಾಗಿ ಆಸ್ಪತ್ರೆ ಸೇರುತ್ತಾಳೆ. ಈ ಅಂಶ ಎರಡು ಮಾಧ್ಯಮದಲ್ಲಿಯೂ ಸಮಾನವಾಗಿದೆ.

ಕಾವೇರಿಯನ್ನು ನೋಡಿದ ಮೊದಲ ನೋಟಕ್ಕೆ ಇಷ್ಟಪಟ್ಟು ತಂದೆ–ತಾಯಿಯರ ಅನುಮತಿಯೊಂದಿಗೆ ಮದುವೆಯಾದ ಸತೀಶ ಮದುವೆಗೆ ಮೊದಲೇ ಅವನ ಗೆಳೆಯ ಅವಳ ನಡತೆ ಚೆನ್ನಾಗಿಲ್ಲವೆಂದರೆ, ಅದಕ್ಕೆ 'ಸೌಂದರ್ಯ ಇದ್ದ ಕಡೆ ಅಪವಾದ ಇದ್ದೇ ಇರುತ್ತದೆ, ನನಗೆ ಅವಳ ಮೇಲೆ ನಂಬಿಕೆ ಇದೆ' ಎನ್ನುತ್ತಾನೆ. ಅವಳನ್ನು ಒಂದು ಕ್ಷಣ ಬಿಟ್ಟಿರಲಾರದೆ ಅವಳಿಷ್ಟದಂತೆ ನಡೆದುಕೊಳ್ಳುತ್ತಾನೆ. ಹೆಂಡತಿ ಪ್ರಸವವೇದನೆಯಿಂದ ನರಳುತ್ತಾ ನಾನು ಸತ್ತು ಹೋಗ್ತಿನಿ ಅಂದರೆ 'ನೀನು ಸತ್ತರೆ ನಾನೂ ಸಹಗಮನ ಮಾಡ್ತೀನಿ ಕಾವೇರಿ. ಪ್ರೇಮದ ಇತಿಹಾಸದಲ್ಲಿ ನಾನೊಂದು ಹೊಸ ದಾಖಲೆ ಸ್ಥಾಪಿಸುತ್ತೇನೆ ಎನ್ನುತ್ತಾನೆ. ಆದರೆ ಅವಳು ಮನೋರೋಗಿ ಆದಾಗ ಅವಳನ್ನು ಸಂಪೂರ್ಣ ಮರೆಯುತ್ತಾನೆ. 'ಮೇಲೆ ಬಿದ್ದ ಸೂಳೆ ಮೂರು ಕಾಸಿಗೂ ಬೇಡ' ಎನ್ನುತ್ತಿದ್ದವನು ಅದೇ ಹೆಣ್ಣಿನ ಸಹವಾಸವನ್ನು ಮಾಡಿ ಹೆಂಡತಿಯನ್ನು ಕಡೆಗಣಿಸುತ್ತಾನೆ. ಮಾತ್ರವಲ್ಲ 'ನಿನ್ನ ಸ್ಥಿತಿಯಲ್ಲಿ ನಾನಿದ್ದಿದ್ದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ ಎಂದು ತೋರುತ್ತದೆ' ಎಂದು ನಿರ್ದಯನಾಗಿ ನುಡಿಯುತ್ತಾನೆ. ಸತೀಶನ ಪಾತ್ರದಲ್ಲಿ ಕಾದಂಬರಿ ಮತ್ತು ಚಲನಚಿತ್ರಗಳಲ್ಲಿ ಯಾವುದೇ ಬದಲಾವಣೆ ಇಲ್ಲ.

ಸ್ವಾಭಿಮಾನಿಯಾದ ಕಾವೇರಿಗೆ ಜನರ ಪಶ್ಚಾತ್ತಾಪ, ಸಹಾನೂಭೂತಿ, ಮರುಕ ಇವು ಯಾವುವು ಬೇಕಾಗಿರಲಿಲ್ಲ. ಮಾನಸಿಕ ಆರೋಗ್ಯವನ್ನು ಪಡೆದು ಮತ್ತೆ ಸಮಾಜ ಸೇರಿದ ಅವಳು ಜನರಿಂದ ಮುಂಚಿನ ಸ್ನೇಹ, ವಿಶ್ವಾಸ, ಗೌರವಾದರಗಳನ್ನು ಬಯಸುತ್ತಾಳೆ. ಮನೆಯಲ್ಲಿ ಅವಳಿಗೆ ಹಿಂದಿದ್ದ ಸರ್ವಾಧಿಕಾರ, ಅಂತಸ್ತು, ಪ್ರೀತಿ, ವಿಶ್ವಾಸಗಳನ್ನು ಕೊಡಬೇಕಾದುದು ಮಕ್ಕಳ, ಗಂಡನ, ಸಮೀಪದ ಬಂಧುಗಳ ಸುತ್ತಮುತ್ತಲಿನವರ ಹಾಗೂ ಸಮಾಜದ ಹೊಣೆಯಾಗಿತ್ತು. ಆದರೆ ಜನರ ತಾತ್ಸಾರದ, ಪಿಸುಮಾತಿನ, ಅಪಮಾನದ ಬಾಣಗಳು, ಅವಳ ಮನಸ್ಸಿಗೆ ಆಘಾತವನ್ನುಂಟು ಮಾಡುತ್ತವೆ.

ಸಮಾಜದ ಜನರು ಅವಳನ್ನು ಗೌರವದಿಂದ ಕಂಡಿದ್ದರೆ ಕಾವೇರಿಯೂ ಒಬ್ಬ ಸದೃಹಿಣಿಯಾಗಿ ಬಾಳುತ್ತಿದ್ದಳು. 'ನಿಮ್ಮ ಜೊತೆ ಬಾಳಲು ಒಂದು ಅವಕಾಶ ನನಗೆ ಕೊಡಬೇಕಾಗಿತ್ತು ಎಂದು ಬೇಡಿಕೊಳ್ಳುವ' ಸ್ಥಿತಿಗೆ ಅವಳ ಗಂಡ ತರುತ್ತಾನೆ. ಚಂಚಲ ಬುದ್ಧಿಯ ಗಂಡಿಸಿಗೆ ತಾನು ಬಯಸಿದ್ದು ಹೀಗೆ ಇರಬೇಕು ಎಂಬ ಷರತ್ತು ಮತ್ತು ಗತ್ತು ಇರುತ್ತದೆ. ಅದರಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಆತ ತನ್ನ ಅವರದೊಂದು ಮೂಲಬುದ್ಧಿ ತೋರಿಸುತ್ತಾನೆ. ಕಾವೇರಿಗೆ ಪ್ರೀತಿಕೊಟ್ಟಿದ್ದರೆ ಸುಖ ದಾಂಪತ್ಯವಾಗುತ್ತಿತ್ತು. ಸಮಾಜದ ಇಂಥ ಭಗ್ನ ಕುಟುಂಬಗಳಿಗೆ ಮಾದರಿಯಾಗುತ್ತಿತ್ತು ಎಂಬ ಅಂಶವನ್ನು ಎರಡು ಮಾಧ್ಯಮಗಳೂ ಮಾರ್ಮಿಕವಾಗಿ ನಿರೂಪಿಸಿವೆ.

ಎರಡು ಮುಖ

ಆರ್ಯಾಂಬ ಪಟ್ಟಾಭಿ ಅವರ 'ಎರಡು ಮುಖ' ಕಾದಂಬರಿಯನ್ನು 1969ರಲ್ಲಿ ನಿರ್ದೇಶಕ ಎಂ.ಆರ್. ವಿಠಲ್ ಅವರು ಚಲನಚಿತ್ರವಾಗಿ ಮಾಡಿದ್ದಾರೆ. ಬೊಂಬಾಯಿಯಂಥ ದೊಡ್ಡ ನಗರದಲ್ಲಿ ವಾಸಿಸುತ್ತಿದ್ದ ರಮಾ ಅಲ್ಲಿನ ಥಳಕು ಬಳುಕಿಗೆ ಮಾರು ಹೋಗದೆ, ಕೆಲಸಕ್ಕೆ ಹೋಗುತ್ತಿದ್ದ ಸಾಮಾನ್ಯ ಹುಡುಗಿಯಾಗಿದ್ದಳು. ತನ್ನ ಮೇಲಿರುವ ಕರ್ತವ್ಯಕ್ಕೆ ಮೊದಲ ಪ್ರಾಮುಖ್ಯತೆ ಕೊಡುವ ವ್ಯಕ್ತಿಯಾಗಿದ್ದಳು. ತನ್ನ ಸ್ವಂತ ಜೀವನಕ್ಕಿಂತಲೂ ತನ್ನವರ ರಕ್ಷಣೆಯೇ ತನ್ನ ಗುರಿ ಎಂಬ ಅವಳ ಆದರ್ಶವಾದ ಗುಣ, ನಿಸ್ವಾರ್ಥದ ಸೇವೆ ಅವಳ ಉತ್ತಮ ವ್ಯಕ್ತಿತ್ವಕ್ಕೆ ನಿದರ್ಶನವಾಗುತ್ತದೆ.

ಪ್ರತಿ ತಿಂಗಳು ಸಂಪಾದಿಸುತ್ತಿದ್ದ ಹಣದಲ್ಲಿ ತಾಯಿಗೆ ಔಷಧಿ, ಮನೆ ಸಾಮಾನು, ಮಿಕ್ಕ ಹಣದಲ್ಲಿ ತಮ್ಮನಿಗೋ, ತಂಗಿಗೋ ಹೊಸ ಬಟ್ಟೆಯನ್ನು ಕೊಂಡು ತರುತ್ತಿದ್ದಳೇ ವಿನಾ ತನಗೆಂದು ಏನನ್ನು ಕೊಂಡುಕೊಳ್ಳುತ್ತಿರಲಿಲ್ಲ. ಆಫೀಸಿನಲ್ಲಿ ಸಹ ಅವಳ ಸಹೋದ್ಯೋಗಿಗಳು ಕಾಫಿತಿಂಡಿಗೆ ಹೋದರೆ ಅವಳು ಮಾತ್ರ ಕಾಫಿಯನ್ನು ಕುಡಿಯುತ್ತಿರಲಿಲ್ಲ. ಕಾಫಿ, ಕುಡಿಯುವ ಹಣದಲ್ಲಿ ಮನೆಗೆ ತರಕಾರಿ, ಸಾಮಾನುಗಳನ್ನು ಕೊಂಡು ಹೋಗುವ ಅವಳು ತನಗೆ ಸೀರೆ ತೆಗೆದುಕೊಳ್ಳುವ ಹಣದಲ್ಲಿ ತಂಗಿಗೆ ಲಂಗದ ಬಟ್ಟೆಯನ್ನು ತಂದುಕೊಡುತ್ತಿದ್ದಳು. ಅಕ್ಕ ತಂದು ಕೊಟ್ಟ ಲಂಗದ ಬಟ್ಟೆಯನ್ನು ಎದೆಗವಚಿ ಕುಣಿಯುವ ತಂಗಿಯನ್ನು ನೋಡಿ ಅವಳು ಎರಡು ಪಟ್ಟು ಸಂತೋಷ ಪಡುತ್ತಿದ್ದಳು.

ತನ್ನ ಮನೆಯವರನ್ನು ನಿರ್ಲಕ್ಷಿಸಿ ತಾನೇನಾದರೂ ಮದುವೆಯಾದರೆ ತನ್ನವರು ಉಪವಾಸದಿಂದ ಬೀದಿಗಿಳಿಯುತ್ತಾರೆಂದು ತನ್ನ ಪಾಲಿಗೆ ಮದುವೆ ಎಂಬುದು ಗಗನ ಕುಸುಮವೆಂದು ತಿಳಿಯುತ್ತಾಳೆ. ಹೀಗೆ ಅವಳ ಒಳಮನಸ್ಸು ಹಾಗೂ ಜಾಗೃತ ಮನಸ್ಸಿನ ತೀವ್ರ ದ್ವಂದ್ವದ ತೊಳಲಾಟ ಅವಳಿಗೆ ಸಾಕಾಗುವಂತೆ ಜೀವ ಹಿಂಡುತ್ತದೆ. ಸ್ವಾರ್ಥ ಒಂದು ಕಡೆ, ಕರ್ತವ್ಯ ಒಂದು ಕಡೆ ಅವಳು ಮಾನಸಿಕವಾಗಿ ನಲುಗುವಂತೆ ಮಾಡುತ್ತದೆ. ತಾಯಿಯನ್ನು ಕಂಡಾಗ ಕರ್ತವ್ಯ ದೊಡ್ಡದು ಎಂದುಕೊಳ್ಳುತ್ತಾಳೆ. ಮನೆಯಿಂದ ಹೊರಬಂದು ಜಗತ್ತನ್ನು, ಜನರನ್ನು ನೋಡಿದಾಗ ತಾನೂ ಎಲ್ಲರಂತೆ ಇರಬೇಕೆಂಬ ತೀವ್ರವಾದ ಬಯಕೆಯಲ್ಲಿ ಬೇಯುತ್ತಾಳೆ.

ಅವಳು ತನ್ನ ಮನಸ್ಸಿನ ತೊಳಲಾಟದಲ್ಲಿರುವಾಗಲೇ ಅವಳ ತಾಯಿ ಸಾವನ್ನಪ್ಪುತ್ತಾರೆ. ತಾಯಿಯ ಸಾವಿನಿಂದಾದ ಆಘಾತ ಅವಳ ಮನಸ್ಸನ್ನೇ ಛಿದ್ರಗೊಳಿಸಿ ಅವಳು ಮನೋರೋಗಕ್ಕೆ ತುತ್ತಾಗುವಂತೆ ಮಾಡುತ್ತದೆ. ಸುಪ್ತ ಮನಸ್ಸಿನ ಬಯಕೆ ಗರಿಗೆದರುತ್ತದೆ. ಕರ್ತವ್ಯಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟು ಬಯಕೆಗಳನ್ನು ಅದುಮಿಟ್ಟು ಬದುಕುತ್ತಿದ್ದ ರಮಾ, ಕರ್ತವ್ಯವನ್ನು ಪೂರ್ತಿಯಾಗಿ ಮರೆತು ತನ್ನ ಬಯಕೆಯನ್ನು ಈಡೇರಿಸಿಕೊಳ್ಳುವುದಕ್ಕೆ ಸಿದ್ಧಳಾಗುತ್ತಾಳೆ. ಮನಸ್ಸಿನ ಸ್ಥಿಮಿತವನ್ನು ತಳೆದುಕೊಂಡು ಇಷ್ಟ ಬಂದಂತೆ ವರ್ತಿಸುವ ರಮಾ, ಉಮಾಳಾಗಿ ಬದಲಾಗುತ್ತಾಳೆ. ಸಂಬಳದ ದುಡ್ಡನ್ನೆಲ್ಲಾ ತನ್ನ ಅವಶ್ಯಕತೆಗಳಿಗೆ ಮಾತ್ರವೇ ಉಪಯೋಗಿಸಿಕೊಳ್ಳುತ್ತಾಳೆ,

ಶಶಿಧರನ ಪಾತ್ರವು ಎರಡು ಮಾಧ್ಯಮದಲ್ಲಿಯೂ ಒಂದೇ ರೀತಿಯಾಗಿದೆ. ರಮಾ ಆಫೀಸಿನಲ್ಲಿ ಕೆಲಸ ಮಾಡುವ ಶಶಿಧರ ಅವಳ ಸರಳ ಸ್ವಭಾವಕ್ಕೆ ಮುಗ್ಧತನಕ್ಕೆ ಅಚ್ಚರಿಪಡುತ್ತಾ, ಆಫೀಸಿನಲ್ಲಿ ಅವಳ ಕೆಲಸಕ್ಕೆ ಸಹಾಯ ಮಾಡುತ್ತಾ ಅವಳನ್ನು ಇಷ್ಟಪಡುತ್ತಾನೆ. ತನ್ನ ಹೆತ್ತವರ ಮಾತನ್ನು ಕಡೆಗಣಿಸಿ ರಮಾಳನ್ನು ಮದುವೆಯಾಗುತ್ತಾನೆ. ಅವನ ಸಹಕಾರದಿಂದಲೇ ಅವಳ ರೋಗ ಗುಣಮುಖವಾಗುತ್ತದೆ.

ಬದಲಾದ ಕಾಲಮಾನಕ್ಕೆ ತಕ್ಕಂತೆ ಸಂಪ್ರದಾಯಗಳು, ಕಂದಾಚಾರಣೆಗಳು ಬದಲಾದಂತೆ ಮೌಲ್ಯಗಳಲ್ಲಿಯೂ ಬದಲಾವಣೆಯನ್ನು ಕಾಣುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಕಾದಂಬರಿಯನ್ನು ನೋಡಲಾಗಿ ಬಡವರು ಕೂಡಾ ಎಲ್ಲರಂತೆ ಮನುಷ್ಯರು. ಆದರೆ ಅವರು ಆಸೆಗಳನ್ನು ಪರಿಸ್ಥಿತಿಗೆ ತಕ್ಕಂತೆ ಮನದಲ್ಲೇ ಅದುಮಿಟ್ಟುಕೊಳ್ಳುತ್ತಾರೆ. ಬಡತನ ಮತ್ತು ರಮಾಳ ಅಸಹಾಯಕ ಸ್ಥಿತಿ ಅವಳನ್ನು ಮನೋರೋಗಿಯನ್ನಾಗಿ ಮಾಡುವ 'ಎರಡು ಮುಖ' ಕಾದಂಬರಿ ಮತ್ತು ಸಿನಿಮಾ ಹಲವು ಸಂದೇಶಗಳನ್ನು ನೀಡುತ್ತವೆ. ಶಶಿಧರನಂತಹ ವಿಶಾಲ ಮನಸ್ಸಿನ ಯುವಕರ ಮೂಲಕ ಅನಾಥ, ಅಸಹಾಯಕ, ಬಡತನದಲ್ಲಿರುವವರ ಕುರಿತು ವಿಚಾರಿಸುವಂತೆ, ವಿವಾಹವಾಗುವಂತೆ ಪ್ರೇರೇಪಿಸುತ್ತದೆ. ಶಶಿಧರ ಅವಳಿಂದ ದೂರವಾಗಿದ್ದರೆ ಅವಳ ಸ್ಥಿತಿ ತುಂಬಾ ಹೀನಾಯವಾಗುತ್ತಿತ್ತು. ತಂಗಿ–ತಮ್ಮ ಕೂಡಾ ತುಂಬಾ ಕಷ್ಟಪಡಬೇಕಾದಂತಹ ಪರಿಸ್ಥಿತಿ ಬರುತ್ತಿತ್ತು.

ಮನೋವೈಜ್ಞಾನಿಕತೆಯ ಅಂಶವುಳ್ಳ ಈ ಕಾದಂಬರಿ ಮತ್ತು ಸಿನಿಮಾ ರಮಾಳ ಆಂತರಿಕ ಹಾಗೂ ಬಾಹ್ಯ ಮನಸ್ಸಿನ ಏರಿಳಿತ, ತಲ್ಲಣ, ತಳಮಳ, ನೋವು ಸುಪ್ತಮನಸ್ಸಿನ ದ್ವಂದ್ವದ ತೊಳಲಾಟಗಳನ್ನು ಹಂತಹಂತವಾಗಿ ತೆರೆಯುತ್ತ ಕೊನೆಯಘಟ್ಟದಲ್ಲಿ ಎಲ್ಲವನ್ನೂ ಕ್ರೋಢೀಕರಿಸಿ, ಸುಖಾಂತ್ಯದ ನೆಮ್ಮದಿಯ ಉಸಿರು ಬಿಡುವಂತೆ ಮಾಡುತ್ತದೆ. ಈ ಎಲ್ಲ ಕಾರಣಗಳಿಂದ ಎರಡು ಮುಖ ಕಾದಂಬರಿಯು ಜನಮನದಲ್ಲಿ ಸದಾ ನಿಲ್ಲುತ್ತದೆ. ಚಿತ್ರ ಕೂಡ ಕೆಲವೊಂದು ಬದಲಾವಣೆ ಮಾಡಿದರೂ ಕಾದಂಬರಿ ಹೇಳುವ ಸಂದೇಶವನ್ನೇ ಪ್ರೇಕ್ಷಕರಿಗೆ ಸರಳವಾದ ರೀತಿಯಲ್ಲಿ, ಮನುಷ್ಯನ ಮನಸ್ಸು ಸೂಕ್ಷ್ಮ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಏನೆಲ್ಲ ಆಗುತ್ತದೆಂದು ಹೇಳುತ್ತದೆ.

ಪರಾಮರ್ಶನ ಗ್ರಂಥಗಳು

1. ಡಾ. ಮೀನಾಗುಂಡಿ ಶ್ರೀನಿವಾಸನ್, ಮಾನಸಿಕ ಸಮಸ್ಯೆಗಳಿಗೆ ಮನಸ್ಸು ಇಲ್ಲದ ಮಾರ್ಗ, ನವ ಕರ್ನಾಟಕ ಪ್ರಕಾಶನ, 1995

2. ಇಂದಿರಾ ಎಂ.ಕೆ., ಹೂಬಾಣ, ಪ್ರಕಾಶ ಸಾಹಿತ್ಯ, ಬೆಂಗಳೂರು, 1978

3. ತ್ರಿವೇಣಿ, ಶರಪಂಜರ, ವಿಶ್ವಕನ್ನಡ ಸಾಹಿತ್ಯ ಮಾಲೆ, ಬೆಂಗಳೂರು, 1982

4. ಆರ್ಯಾಂಭ ಪಟ್ಟಾಭಿ, ಎರಡು ಮುಖ, ಬಾಪ್ಕೊ ಪ್ರಕಾಶನ, ಬೆಂಗಳೂರು, 1983

ಮಹಿಳಾ ಸಾಹಿತ್ಯ ಮತ್ತು ಮನೋವೈಜ್ಞಾನಿಕತೆ

ಡಾ. ಪುಷ್ಪಲತಾ ಎಂ.ಎಸ್.
ಸಹಾಯಕ ಪ್ರಾಧ್ಯಾಪಕಿ
ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು, ಸ್ವಾಯತ್ತ, ಮಲ್ಲೇಶ್ವರಂ, ಬೆಂಗಳೂರು–12

ಮಹಿಳೆಯರ ಬದುಕಿನ ಅನುಭವಗಳು, ನೋವು, ನಲಿವು, ಚಿಂತನೆ, ಆಲೋಚನೆಗಳನ್ನು ಸಮಾಜಕ್ಕೆ ತೆರೆದಿಡುವ ಸಾಹಿತ್ಯವೇ ಮಹಿಳಾ ಸಾಹಿತ್ಯವಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೆ, ಅಂದಿನ ಸಮಾಜದಲ್ಲಿ ಸ್ತ್ರೀಯರು ವಿದ್ಯೆಯಿಂದ ವಂಚಿತರಾಗಿದ್ದು, ಪುರುಷ ಪ್ರಧಾನ ಕುಟುಂಬದಲ್ಲಿ ಆಕೆಗೆ ಸ್ವಾತಂತ್ರ ಸಿಗದೇ ಇದ್ದದ್ದು, ಸಾರ್ವಜನಿಕ ಸಮಾಜದಲ್ಲಿ ಹೆಣ್ಣಿನ ಬೆಳವಣಿಗೆಗಳಿಗೆ ವೇದಿಕೆ ಸಿಗದೇ ಇದ್ದದ್ದು, ಬದುಕಿನಲ್ಲಿ ಪುರುಷರಿಗೆ ಅವಲಂಬಿಯಾಗಿದ್ದದ್ದು, ದೈಹಿಕ ಹಾಗೂ ಮಾನಸಿಕ ಶೋಷಣೆಗಳಿಗೆ ಒಳಗಾದದ್ದು ಹೀಗೆ ಅನೇಕ ಕಾರಣಗಳಿಂದ ಹೆಣ್ಣು ಕನ್ನಡ ಸಾಹಿತ್ಯದಲ್ಲಿ ದೀರ್ಘಕಾಲದವರೆಗೂ ತನ್ನ ಅನನ್ಯತೆ, ಅಸ್ಮಿತೆಗಳನ್ನು ಕಂಡುಕೊಳ್ಳಲಾಗಲಿಲ್ಲ.

ಮಹಿಳಾ ಸಾಹಿತ್ಯ ಒಂದು ಪೂರ್ಣ ಸ್ವರೂಪ, ಸ್ಪಷ್ಟ ರೂಪುರೇಷೆಗಳು ಕಂಡುಕೊಂಡದ್ದು 20 ನೇ ಶತಮಾನದ ನಂತರವೇ ಎಂಬುದನ್ನು ಗುರುತಿಸಬಹುದಾಗಿದೆ. ಸಮಾಜದಲ್ಲಿ ಹೆಣ್ಣಿನ ಮೇಲೆ ಆಗುತ್ತಿದ್ದ ಅತ್ಯಾಚಾರ, ಬಲಾತ್ಕಾರ, ಆಸಿಡ್ ದಾಳಿಗಳು, ಕೌಟುಂಬಿಕ ಹಿಂಸೆಗಳು, ವರದಕ್ಷಿಣೆ ಕಿರುಕುಳ, ಮರ್ಯಾದಾ ಹತ್ಯೆಗಳು, ವೇತನದಲ್ಲಿನ ತಾರತಮ್ಯ, ಉದ್ಯೋಗಾವಕಾಶಗಳಲ್ಲಿ ಅನ್ಯಾಯ, ಮನೆಯೊಳಗೆ ಗಂಡ, ಅತ್ತೆ, ಮಾವ, ಸಂಬಂಧಿಕರಿಂದ ದೌರ್ಜನ್ಯ ಹೀಗೆ ಲೈಂಗಿಕ, ದೈಹಿಕ, ಆರ್ಥಿಕ, ಸಾಮಾಜಿಕ ಮತ್ತು ಮಾನಸಿಕ ಯಾತನೆಗಳನ್ನು ಮಹಿಳಾ ಸಾಹಿತಿಗಳು ತಮ್ಮ ಬರವಣಿಗೆಗಳಲ್ಲಿ ಮನೋಜ್ಞವಾಗಿ ಪ್ರತಿಬಿಂಬಿಸಿದ್ದಾರೆ.

ಪಿತೃಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರ ಶೋಷಣೆ, ಲಿಂಗತಾರತಮ್ಯ ಹೆಚ್ಚಾಗಿತ್ತು. ಮಹಿಳೆಯರು ಅನುಭವಿಸುವ ಮಾನಸಿಕ ತೊಂದರೆಗಳಿಗೆ ಆಕೆಯನ್ನೇ ಹೊಣೆಯನ್ನಾಗಿ ಮಾಡಿ ಆಕೆಯನ್ನು ಕುಗ್ಗಿಸುವ ಹುನ್ನಾರಗಳು ಪುರುಷ ಸಮಾಜದಿಂದ ನಡೆದಿದ್ದವು. ಅವುಗಳನ್ನೆಲ್ಲ ಸ್ತ್ರೀಸಂವೇದಿಗಳು ತಮ್ಮ ಕೃತಿಗಳಲ್ಲಿ ಭಿನ್ನ ಭಿನ್ನ ಸನ್ನಿವೇಶಗಳಲ್ಲಿ ಚಿತ್ರಿಸುತ್ತಾ ಬಂದಿದ್ದಾರೆ. ಅವುಗಳು ಅವರ ಸ್ವ ಅನುಭವಗಳು ಕೂಡಾ ಆಗಿದ್ದು ಮತ್ತು ತಾವು ಕಂಡಂತಹ ಹಾಗೂ ಕೇಳಿದಂತಹ ಸಮಾಜದ ಇತರೆ ಮಹಿಳೆಯರ ಜೀವನದ ನೋವುಗಳನ್ನು ಯಾತನಾಮಯ ಬದುಕಿನ ಕ್ಷಣಗಳನ್ನು ತಮ್ಮ ಕಾವ್ಯ, ಕಥೆ, ಕಾದಂಬರಿಗಳು, ವಿಮರ್ಶನಾ ಕೃತಿಗಳಲ್ಲಿ ಕಂಡರಿಸಿದ್ದಾರೆ. ಅವುಗಳೆಲ್ಲ ಇಂದಿಗೂ ಮಹಿಳಾ ಸಾಹಿತ್ಯದಲ್ಲಿ ಮನೋವೈಜ್ಞಾನಿಕ ನೆಲೆಯ ದಂತಕಥೆಗಳಾಗಿವೆ. ಅಂತಹ ಅತ್ಯುತ್ತಮ ಕಥೆಗಳು, ಕಾದಂಬರಿ ಆಧಾರಿತ ಸಿನಿಮಾಗಳು ಮಹಿಳಾ ಪ್ರಧಾನ ಕನ್ನಡ ಚಲನಚಿತ್ರಗಳಾಗಿ ಜನಮಾನಸದಲ್ಲಿ ಅಚ್ಚಳಿಯದಂತೆ ಇಂದಿಗೂ ಉಳಿದಿವೆ.

ಕನ್ನಡ ಸಾಹಿತ್ಯದ ಮುಸ್ಲಿಂ ಮಹಿಳಾ ಸಂವೇದನೆಯ ಲೇಖಕಿಯಾದ ಸಾರಾ ಅಬೂಬಕ್ಕರ್ ಅವರ 'ಉರಿಬಿಸಿಲು' ಕಥೆಯಲ್ಲಿ ಅಮೀನ ಎಂಬ ಹೆಣ್ಣು ತನ್ನ ಪುರುಷ ಸಮಾಜದ ವ್ಯವಸ್ಥೆಗೆ ಬೇಸತ್ತಿರುತ್ತಾಳೆ. ಆಕೆ ಬಹುಪತ್ನಿತ್ವವನ್ನು ವಿರೋಧಿಸುತ್ತಾ,

ಬಹುಪತ್ನಿಯರನ್ನು ಹೊಂದಿರುವ ಗಂಡಸರು ಹೆಂಡತಿ ಮಕ್ಕಳನ್ನು ಸಾಕಲಾರದೆ ಹಿಂಸಿಸುವ ರೀತಿಗೆ ನೊಂದ ಅಮೀನ ಗಂಡಸರಂತೆ ಹೆಂಗಸರೂ ಮನುಷ್ಯರು. ಅವರು ಪ್ರಾಣಿಗಳಲ್ಲ ಎಂಬ ವಿಚಾರವನ್ನು ತನ್ನ ಬರವಣಿಗೆಯ ಮೂಲಕ ವ್ಯಕ್ತಪಡಿಸಬೇಕೆನ್ನುವ ಅಭಿಲಾಷೆಯನ್ನು ಹೊಂದಿರುತ್ತಾಳೆ.

ಬಾನುಮುಷ್ತಾಕ್ ಅವರ 'ಕರಿನಾಗರಗಳು' ಕಥೆಯಲ್ಲಿ ಜುಲೇಖ ಬೇಗಮ್ ಮುಸ್ಲಿಂ ಸಮುದಾಯದಲ್ಲಿ ಹೆಣ್ಣುಮಕ್ಕಳಿಗೆ ಇರುವ ಧರ್ಮದ ಹಕ್ಕು ಮತ್ತು ಕಾನೂನಿನ ಹಕ್ಕುಗಳ ಬಗೆಗೆ ಮಾತನಾಡುತ್ತಾಳೆ, ಹೋರಾಡುತ್ತಾಳೆ. ಈ ಕಥೆಯು ಹಸೀನ ಹೆಸರಿನಲ್ಲಿ ಚಲನಚಿತ್ರವಾಗಿ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿರುವುದು ಗಮನಾರ್ಹವಾಗಿದೆ. ಹಾಗೆಯೇ ಇತ್ತೀಚೆಗೆ ಬುಕರ್ ಪ್ರಶಸ್ತಿಗೆ ಸಮ್ಮಾನಿತವಾದ 'ಎದೆಯ ಹಣತೆ' ಕೃತಿಯಲ್ಲಿ ಬಾನುಮುಷ್ತಾಕ್ ಅವರು ದಕ್ಷಿಣ ಭಾರತದ ಮುಸ್ಲಿಮ್ ಮಹಿಳೆಯರ ಜೀವನ, ನೋವು, ಸಂಕಷ್ಟಗಳು, ಮಾನಸಿಕ ದೈಹಿಕ ಯಾತನಾಮಯ ಜೀವನ, ಹಾಗೂ ಸಾಮಾಜಿಕ ಸವಾಲುಗಳನ್ನು ಬಹಳ ಅದ್ಭುತವಾಗಿ ನಿರೂಪಿಸಿದ್ದಾರೆ. ಇದು ಮುಸ್ಲಿಂ ಮಹಿಳೆಯರ ಬದುಕಿಗೆ ಕೈಗನ್ನಡಿಯಾಗಿದೆ ಎಂದರೆ ಉತ್ಪ್ರೇಕ್ಷೆ ಆಗಲಾರದು.

ಕೆ. ಷರೀಫ ಅವರು ಮುಸ್ಲಿಂ ಸಂವೇದನೆಯ ಬರಹಗಾರ್ತಿಯಾಗಿದ್ದು, 'ಮುಸ್ಲಿಂ ಮಹಿಳೆಯರ ಪಾತ್ರ ಬದಲಾಗುತ್ತಿದೆಯೇ', ಮತ್ತು 'ಮಹಿಳಾ ವಿಮೋಚನೆಯ ಸವಾಲುಗಳು' ಎಂಬ ಬರಹಗಳ ಮೂಲಕ ಹೆಣ್ಣಿನ ಜೀವನದ ಬೆಳವಣಿಗೆಗಳ ಕುರಿತು ಗಂಭೀರವಾದ ವಿಚಾರಗಳತ್ತ, ವಿಶಿಷ್ಟವೂ ಆದ ಸಂಗತಿಗಳತ್ತ ಬೆಳಕು ಚೆಲ್ಲಿದ್ದಾರೆ.

ನೇಮಿಚಂದ್ರರ 'ನೀನಿರುವೆ ನನ್ನೊಡನೆ' ಕಥೆಯಲ್ಲಿ ಚರಿತಾಳ ಗಂಡ ರವಿಗೆ ಕ್ಯಾನ್ಸರ್ ರೋಗ ಬಂದು ನರಳುತ್ತಾ ಸಾವಿನ ದವಡೆಯಲ್ಲಿರುತ್ತಾನೆ. ಅಂತಹ ಸ್ಥಿತಿಯಲ್ಲಿ ಚರಿತಾ ಮಾನಸಿಕವಾಗಿ ಕುಂದದೆ ಗಂಡನಿಗೆ ಮನೋಸ್ಥೈರ್ಯ ಹೇಳುತ್ತಾ ತನ್ನ ಮಗಳು ಪುಟ್ಟಿಗಾಗಿ ಜೀವನದಲ್ಲಿನ ಕೆಟ್ಟ ಪರಿಸ್ಥಿತಿಯಲ್ಲೂ ಮುನ್ನುಗ್ಗುತ್ತಾಳೆ. ಬಿ. ಟಿ. ಲಲಿತಾನಾಯಕ್ ಅವರ 'ಕೊಲೆ' ಕಥೆಯಲ್ಲಿ ಬರುವ ದೇವಿ ರಿಮ್ಯಾಂಡ್ ಹೋಮ್‌ನಲ್ಲಿ ಇರುತ್ತಾಳೆ. ಅವಳು ಮೇಲ್ವರ್ಗದ ಅಧಿಕಾರಿ ವರ್ಗದಿಂದ ಶೋಷಣೆಗೆ ಒಳಗಾಗಿ ಜಾಲಶೆಟ್ಟಿಯಿಂದ ತನ್ನ ತಂದೆಯನ್ನು ಕಳೆದುಕೊಂಡು, ತನ್ನ ಕುಟುಂಬದ ಮೇಲೆ ಆದ ಅನ್ಯಾಯಕ್ಕೆ ನ್ಯಾಯ ಸಿಗದೇ, ಕೊನೆಗೆ ಜಾಲಶೆಟ್ಟಿಯು ಅತ್ಯಾಚಾರ ಮಾಡಲು ಬಂದಾಗ ಬಂಡಾಯ ಮನೋಭಾವನೆಯಿಂದ ಆತನನ್ನು ಕೊಲೆ ಮಾಡಿ ತನ್ನ ಆಕ್ರೋಶವನ್ನು ತೀರಿಸಿಕೊಳ್ಳುತ್ತಾಳೆ.

ಪಿತೃಪ್ರಧಾನ ವ್ಯವಸ್ಥೆಯು ಹೆಣ್ಣಿನ ಕನ್ಯತ್ವ ಮತ್ತು ಪಾತಿವ್ರತ್ಯಕ್ಕೆ ಹೆಚ್ಚಿನ ಪ್ರಾಧ್ಯಾನ್ಯತೆ ನೀಡಿತ್ತು. ಈ ಕಾರಣದಿಂದಾಗಿ ಆಕೆ ಮನೆಯ ನಾಲ್ಕು ಗೋಡೆಯ ಮಧ್ಯೆ ಗೃಹಬಂಧನದಲ್ಲಿ ಇರುವಂತಾಯಿತು. ಹೆಣ್ಣಿನ ತಾಯ್ತನಕ್ಕೆ ಆದ್ಯತೆ ನೀಡುತ್ತಲೇ, ಆಕೆಯನ್ನು ಶೈಕ್ಷಣಿಕ ಹಾಗೂ ಆರ್ಥಿಕ ನೆಲೆಯಿಂದ ದೂರವಿಡಲಾಗಿತ್ತು. ಇದು ಆಕೆಯ ಮಾನಸಿಕ ಒತ್ತಡಕ್ಕೆ ಕಾರಣವಾಯಿತು.

ವೈದೇಹಿಯವರ 'ಅಕ್ಕು' ಕಥೆಯು ಮಾನಸಿಕವಾಗಿ ನೊಂದು ಬೆಂದ ಹೆಣ್ಣಿನ ಕಥೆಯಾಗಿದೆ. ಅಕ್ಕು ಸಾಂಪ್ರದಾಯಿಕ ಉಡುಗೆಯನ್ನು ತೊಟ್ಟರೂ, ಸಂಪ್ರದಾಯವನ್ನು ವಿರೋಧಿಸುವ ನಡೆ–ನುಡಿ ಆಕೆಯಲ್ಲಿ ಇರುತ್ತದೆ. ಗಂಡನ ಪ್ರೀತಿಯಿಂದ ವಂಚಿತಳಾದ ಅಕ್ಕು ಸಮಾಜದ ದೃಷ್ಟಿಯಲ್ಲಿ ಹುಚ್ಚಿ. ತನ್ನನ್ನು ಹಿಂಸಿಸುವ ಪುರುಷ ಪ್ರಧಾನ ವ್ಯವಸ್ಥೆಯ ಒಳಮುಖವನ್ನು ಬಯಲು ಮಾಡುತ್ತಾ ಸಾಂಪ್ರದಾಯಿಕ ವ್ಯವಸ್ಥೆಯ ವಿರುದ್ಧ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾಳೆ.

ಎಚ್.ಎಸ್. ಶ್ರೀಮತಿಯವರು ತಮ್ಮ ಬರಹಗಳಲ್ಲಿ ಹೇಳುವಂತೆ 'ಮಹಿಳೆಗೆ ಸಮಾಜದಲ್ಲಿ, ಕುಟುಂಬದಲ್ಲಿ ಸ್ವತಂತ್ರ ಅಸ್ತಿತ್ವವಿಲ್ಲ ಎನ್ನುವ ಮಾತು ಒಪ್ಪುವಂತಹುದಾಗಿದೆ'. ಇದನ್ನು ಅವರು ತಮ್ಮ 'ಮಹಿಳಾ ಸಾಹಿತ್ಯ ಚರಿತ್ರೆ' ಕೃತಿಯಲ್ಲಿ ಮಹಿಳೆಯ ಮಾನಸಿಕ ತಳಮಳಗಳು, ದೈಹಿಕ ಶೋಷಣೆಗಳು, ಉದ್ಯೋಗದ ಸಂದರ್ಭಗಳಲ್ಲಿ, ಸಾಹಿತ್ಯ ಸೃಷ್ಟಿಸುವ ಸಂದರ್ಭಗಳಲ್ಲಿ, ಸಾಮಾಜಿಕ ವೇದಿಕೆಗಳಲ್ಲಿ ಎದುರಿಸುವ ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. ಮಹಿಳೆಯರ ಮಾನಸಿಕ ಯಾತನಾಮಯ ಜೀವನ, ಮಹಿಳೆಯರ ಮನೋವೈಜ್ಞಾನಿಕ ವಿಚಾರಗಳನ್ನು 'ದ ಸೆಕೆಂಡ್ ಸೆಕ್ಸ್' ಎಂಬ ಕೃತಿಯಲ್ಲಿ ವಿವರವಾಗಿ ತೆರೆದಿಡುತ್ತಾರೆ.

ಹಿಂದೂ ಸಮಾಜದಲ್ಲಿರುವಂತೆ ಇತರ ಎಲ್ಲಾ ಸಮಾಜಗಳಲ್ಲಿಯೂ ಹೆಣ್ಣನ್ನು ಪುರುಷ ಕೇಂದ್ರಿತ ಮನೋಭಾವದ ವ್ಯಕ್ತಿಗಳು ಆಕೆಯೂ ಗಂಡಿನಂತೆ ಸರಿಸಮಾನಳು ಎಂಬುದನ್ನು ನಿರ್ದಾಕ್ಷಿಣ್ಯವಾಗಿ ತಳ್ಳಿಹಾಕಿ, ಗಂಡು ಪ್ರಥಮ ದರ್ಜೆ, ಹೆಣ್ಣು ಯಾವಾಗಲೂ ದ್ವಿತೀಯ ದರ್ಜೆ ಎಂದು ಆಕೆಯ ಮೇಲೆ ದರ್ಪ ತೋರಿಸುತ್ತಾರೆ. ಹೆಣ್ಣು ಕೇವಲ ಭೋಗದ ವಸ್ತುವಾಗಿ, ಗಂಡಿನ ಅಡಿಯಾಳಾಗಿ ಬದುಕುವ ವ್ಯವಸ್ಥೆಯು ಆಕೆಯನ್ನು ಮಾನಸಿಕವಾಗಿ ಕುಗ್ಗಿಸುವ ಪ್ರಯತ್ನಗಳು ನಡೆಯುತ್ತವೆ.

ಜಯದೇವಿ ತಾಯಿ ಲಿಗಾಡೆಯವರ 'ತಾಯಿಯಪದಗಳು' ಎಂಬ ಕೃತಿಯು ಮುಖ್ಯವಾಗಿ ಬದುಕಿನ ನಿಸ್ಸಾರತೆ, ಮೋಹ ನಿರಸನ, ಭಕ್ತಿ, ಅನುಭಾವ, ಆಧ್ಯಾತ್ಮಿಕತೆಯನ್ನೇ ವಸ್ತುವಾಗಿಸಿದೆ.

ಸಾಕಿನ್ನು ಸಂಸಾರ ನೂಕ ಬ್ಯಾಡೊ ಭವದಿ
ಜ್ವಾಕೀಲಿ ಎನ್ನಾರ ಕರೆದೊಯ್ಯೋ! ಲೋಕದಿ
ಬೇಕಿಲ್ಲ ಯಾವ ಫಲ ಪದವಿ

ಹೆಣ್ಣು ಮಕ್ಕಳು ಅಕ್ಷರವಂತರಾಗುವುದೇ ಕಷ್ಟ ಎನ್ನುವಂತಹ ಹಿಂದುಳಿದ ಜನಾಂಗದಲ್ಲಿ ಹುಟ್ಟಿದ ಹಂಪನಾರವರು ದಿಟ್ಟ ಮಹಿಳೆಯಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿದ ಅಪ್ರತಿಮರು. ಅವರ ಕಥೆಗಳಲ್ಲಿ ಹೆಣ್ಣಿನ ವಿವಾಹ, ಅಂತರ್ಜಾತಿ ವಿವಾಹಗಳು, ಜಾತಿ ಉಂಟುಮಾಡುವ ಅನಾಹುತಗಳು, ದಲಿತ ಮಹಿಳೆಯರ ಮಾನಸಿಕ ತೊಳಲಾಟಗಳು ಚರ್ಚಿತವಾಗಿವೆ. ಅವರ ಕಥೆಗಳಲ್ಲಿ ವಿವಾಹ ಎನ್ನುವ ಸಂಸ್ಥೆಯು ಪುರುಷರಿಗೆ ಎಲ್ಲ ಸೇವೆಗಳನ್ನು ನೀಡುವ ವ್ಯವಸ್ಥೀಕೃತ ಆಚಾರ ಎಂಬುದು ಪುನರುಕ್ತಿಗೊಳ್ಳುತ್ತ ಮದುವೆಯನ್ನು ತಿರಸ್ಕರಿಸುವ ದಿಟ್ಟ ಮಹಿಳೆಯರನ್ನು ಬಿಂಬಿಸಿದ್ದಾರೆ. ಹೆಣ್ಣನ್ನು ದೂಷಿಸುವ ಪುರುಷ ಸಮಾಜವನ್ನು ಕುರಿತು ವಿಶ್ಲೇಷಿಸಿದ್ದಾರೆ. ಬಾಲ್ಯವಿವಾಹ, ವರದಕ್ಷಿಣೆ ಕಿರುಕುಳ ಮುಂತಾದ ಅನಿಷ್ಟಪದ್ಧತಿಗಳು ದಲಿತ ಸಮುದಾಯಗಳಲ್ಲೂ ಇದ್ದು, ದಲಿತ ಮಹಿಳೆಯರು ಕೌಟುಂಬಿಕ ದೌರ್ಜನ್ಯ, ಲೈಂಗಿಕ ಶೋಷಣೆ, ಶೈಕ್ಷಣಿಕ ಹಿಂದುಳಿದಿರುವಿಕೆ, ಆರ್ಥಿಕ ಅಸಮಾನತೆ ಮೊದಲಾದ ಸಮಸ್ಯೆಗಳನ್ನು ಅನುಭವಿಸುವ ಚಿತ್ರಣವನ್ನು ದಲಿತ ಮಹಿಳಾ ಕೃತಿಗಳಲ್ಲಿ ಕಾಣಬಹುದಾಗಿದೆ.

ಮಹಿಳೆಯರ ಜೀವಸೆಲೆ ಅಂದರೆ ಅದುವೇ ಜಾನಪದ ಸಾಹಿತ್ಯ, ಮಹಿಳೆಯರ ಬದುಕು, ಬವಣೆಗಳು, ನೋವು, ನಲಿವುಗಳನ್ನು ಪ್ರಪಂಚಕ್ಕೆ ತೆರೆದಿಟ್ಟ ಸಾಹಿತ್ಯವೆಂದರೆ ಅದು ಜಾನಪದ ಮಹಿಳಾ ಸಾಹಿತ್ಯವಾಗಿದೆ. ಬಿ.ಎಸ್. ನಾಗರತ್ನ. ಸಂಧ್ಯಾರೆಡ್ಡಿ, ಗಾಯತ್ರಿ ನಾವಡ, ಸುನಂದಮ್ಮ ಮುಂತಾದ ಜಾನಪದ ಮಹಿಳಾ ಲೇಖಕಿಯರು ಸ್ತ್ರೀವಾದಿ ನೆಲೆಯಲ್ಲಿ ತಮ್ಮ ಅನುಭವಗಳನ್ನು ವ್ಯಕ್ತಪಡಿಸಿದ್ದಾರೆ. ಈ ನಿಟ್ಟಿನಲ್ಲಿ 'ಜನಪದ ಸಾಹಿತ್ಯದ ಮಹಿಳಾ ಜಗತ್ತು" ಅದ್ಭುತ ಕೃತಿಯಾಗಿದೆ.

ಕನ್ನಡ ಮಹಿಳಾ ಸಾಹಿತ್ಯದಲ್ಲಿಯೇ ಮನೋವೈಜ್ಞಾನಿಕ ನೆಲೆಯಲ್ಲಿ ಅತ್ಯದ್ಭುತವಾಗಿ ತಮ್ಮ ಬರಹಗಳ ಮೂಲಕ ಹೆಣ್ಣಿನ ಮನೋಲೋಕವನ್ನು ತೆರೆದಿಟ್ಟ ಬರಹಗಾರ್ತಿ ಎಂದರೆ ತ್ರಿವೇಣಿ. ಅವರು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಬರೆಯಲು ಪ್ರಾರಂಭಿಸಿ, ಮನಃಶಾಸ್ತ್ರೀಯ ಒಳನೋಟವುಳ್ಳ ಹೆಚ್ಚು ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆ ನೀಡಿದ ವಿಚಾರವಂತ ಕಾದಂಬರಿಗಾರ್ತಿ.

ಕನ್ನಡ ಸಾಹಿತ್ಯ ಮತ್ತು ಮನೋವೈಜ್ಞಾನಿಕ ಸಂಬಂಧಗಳ ಬಗೆಗೆ ಚರ್ಚಿಸುವಾಗ ಬರುವ ಮೊದಲ ಹೆಸರು ತ್ರಿವೇಣಿ. ಸ್ವತಃ ಅವರೇ ತಮ್ಮ 'ಬೆಕ್ಕಿನ ಕಣ್ಣು' ಕಾದಂಬರಿಯನ್ನು ಮನೋವೈಜ್ಞಾನಿಕ ಕಾದಂಬರಿ ಎಂದು ಕರೆದುಕೊಂಡಿದ್ದಾರೆ. ಕೃತಿಗೆ ಆ ಕಾಲದ ಖ್ಯಾತ ಮನೋರೋಗ ತಜ್ಞ ಡಾ.ವಾಸುದೇವರಾವ್ ಮುನ್ನುಡಿ ಬರೆದಿದ್ದಾರೆ. ತ್ರಿವೇಣಿಯವರ ಕಾದಂಬರಿಗಳನ್ನು ಮನೋವೈಜ್ಞಾನಿಕದೊಡನೆ ಬೆಸೆಯುವ ಪರಿಪಾಠ ಕನ್ನಡ ಸಾಹಿತ್ಯದಲ್ಲಿ ಬೆಳೆದುಬಂದಿದೆ.

ತ್ರಿವೇಣಿಯವರ 'ಬೆಕ್ಕಿನ ಕಣ್ಣು' ಕಾದಂಬರಿಯು ಮನೋವೈಜ್ಞಾನಿಕತೆಯ ಚಿತ್ರಣವನ್ನು ನೀಡುವ ಸೊಗಸಾದ ಕಾದಂಬರಿಯಾಗಿದೆ. ಇಲ್ಲಿ ಬರುವ ಪ್ರಮುಖ ಪಾತ್ರ ಕುಸುಮಳದು. ಮಲತಾಯಿಯ ಹಿಂಸೆ, ಶೋಷಣೆಗೆ ತುತ್ತಾದ ಕುಸುಮ ಬೆಕ್ಕನ್ನು ದ್ವೇಷಿಸುತ್ತಾಳೆ. ಈಕೆ ಬೆಕ್ಕನ್ನು ಏಕೆ ದ್ವೇಷಿಸುತ್ತಾಳೆ ಎಂಬ ಪ್ರಶ್ನೆ ಆಶ್ಚರ್ಯವಾಗಿ ಕಾಡುತ್ತದೆ. ಬೆಕ್ಕನ್ನು ದ್ವೇಷಿಸುವ ಇವಳ

ವರ್ತನೆ ಕುಟುಂಬದಲ್ಲಿ ಭಿನ್ನವಾಗಿ ಕಾಣಲು ಪ್ರಾರಂಭವಾಗುತ್ತದೆ. ಕಡೆಗೆ ಚಿಕಿತ್ಸೆಗಾಗಿ ವೈದ್ಯರನ್ನು ಕಾಣಬೇಕಾಗುತ್ತದೆ. ಆಸ್ಪತ್ರೆಯಲ್ಲಿ ಬಹಳ ಹೆಂಗಸರು ಇಂತಹದೇ ಭಿನ್ನ ವರ್ತನೆಗಳಲ್ಲಿ ತೊಡಗಿರುವುದು ತಿಳಿಯುತ್ತದೆ. ಅಂತಹ ಹೆಂಗಸರು ಕುಸುಮಳಗೆ ಸಹವಾಸಿಗಳಾಗುತ್ತಾರೆ. ಇಂತಹ ಮನೋವೈಕಲ್ಯಗಳ ಮಾದರಿಗಳನ್ನು ತ್ರಿವೇಣಿಯವರು ಕಲ್ಪಿಸಿಕೊಂದು ಕಾದಂಬರಿಗಳ ಮೂಲಕ ತೆರೆದಿರುವ ಪ್ರಯತ್ನ ಮಾಡಿದ್ದಾರೆ.

ಕುಸುಮಳ ಬೆಕ್ಕಿನ ದ್ವೇಷಕ್ಕೂ, ಅವಳ ಮಲತಾಯಿಗೆ ಇದ್ದ ಬೆಕ್ಕಿನ ಕಣ್ಣಿಗೂ ಸಂಬಂಧವಿದೆ ಎಂಬುವ ಸತ್ಯವು ಆಸ್ಪತ್ರೆಯಲ್ಲಿ ಶೋಧಿತವಾಗುತ್ತದೆ. ಚಿಕಿತ್ಸೆಯ ನೆಲೆಗಳು ಬಂದಾಗ ಶಿಕ್ಷಿಸುತ್ತಿದ್ದ, ಕಾಟಕೊಡುತ್ತಿದ್ದ ಆಕೆಯ ಮಲತಾಯಿಯ ಸಹೋದರ ರಾಜಶೇಖರನು ತೋರುವ ಪ್ರೀತಿಯ ನಡವಳಿಕೆಯೇ ಮುಖ್ಯವಾಗುತ್ತದೆಯೇ ಹೊರತು ವೈದ್ಯರ ಚಿಕಿತ್ಸಕ ವಿಧಾನಗಳಲ್ಲ ಎಂಬುದು ಈ ಕಾದಂಬರಿಯಲ್ಲಿ ವೇದ್ಯವಾಗುತ್ತದೆ.

ತ್ರಿವೇಣಿಯವರ ಮತ್ತೊಂದು ಕಾದಂಬರಿ 'ತಾವರೆಕೊಳ'ವು ಮನುಷ್ಯನ ಮನೋವೈಜ್ಞಾನಿಕ ಲೋಕವನ್ನು ತೆರೆದಿಡುವ ವಿಭಿನ್ನ ಕಾದಂಬರಿಯಾಗಿದೆ. ಇಲ್ಲಿ ರಮೇಶನ ಮೂಲಕ ರತ್ನಳ ಮನೋಲೋಕ ಕದಡಿಹೋಗುವುದನ್ನು ಕಾದಂಬರಿಗಾರ್ತಿಯು ಚಿತ್ರಿಸಿದ್ದಾರೆ. ಮೈಸೂರಿನಲ್ಲಿದ್ದಾಗ ರಮೇಶ ತನ್ನ ಅತ್ತಿಗೆ ಶಾಂತಳೊಂದಿಗೆ ಬಹಳ ವ್ಯಾಮೋಹಕ್ಕೆ ಒಳಗಾಗಿರುತ್ತಾನೆ. ಆಕೆಯು ರಮೇಶನ ಮೇಲೆ ಅಪಾರ ಪ್ರೀತಿ, ವಾತ್ಸಲ್ಯ ಹೊಂದಿರುತ್ತಾಳೆ, ಅದು ಮಿತಿಮೀರಿದ ಸಂಬಂಧವಾಗಿ ಕಾಣುತ್ತದೆ.

ಶಾಂತ ತೀರಿಹೋದಾಗ ರಮೇಶ ಆಕೆಯನ್ನು ಹುಚ್ಚನಂತೆ ಹಚ್ಚಿಕೊಂಡಿರುತ್ತಾನೆ. ಆಕೆಯನ್ನು ಮರೆಯಲಾಗದೇ ತೊಳಲಾಡುತ್ತಾನೆ. ಇಂತಹ ಸ್ತ್ರೀ ಜಗತ್ತಿನೊಂದಿಗೆ ಹಟಮಾರಿತನದ ವ್ಯಾಮೋಹಕ್ಕೆ ಒಳಗಾಗಿದ್ದ ರಮೇಶ ಮುಂಬಯಿಯಲ್ಲಿದ್ದ ಶೇಷಾದ್ರಿ–ರತ್ನರ ಕುಟುಂಬಕ್ಕೆ ಬಂದು ಸೇರುತ್ತಾನೆ. ಆ ಕುಟುಂಬದಲ್ಲಿ ಒಂದು ಮಗುವಿನ ತಾಯಿಯಾಗಿದ್ದ ರತ್ನಳಲ್ಲಿ ಕಳೆದುಕೊಂದಿದ್ದ ಆ ಶಾಂತಳ ಪ್ರೀತಿಯನ್ನು ರತ್ನಳಲ್ಲಿ ಹುಡುಕಲು ಹಾತೊರೆಯುತ್ತಾನೆ. ಕಡೆಗೆ ಅದು ತಪ್ಪು ಎಂದು ವಾಸ್ತವದ ಮನವರಿಕೆಯಾಗಿ ಮುಂಬಯಿ ಬಿಟ್ಟು ಹಿಂದಿರುಗುತ್ತಾನೆ.

ರಮೇಶನ ನಡವಳಿಕೆಗಳು ರತ್ನಳನ್ನು ದುಗುಡಗಳಿಗೆ ತಳ್ಳಿಬಿಡುತ್ತದೆ. ಶೇಷಾದ್ರಿಯೊಂದಿಗೆ ಬದುಕಲಾಗದೇ ನರಳಾಡುತ್ತಾ ವಿಚಿತ್ರ ವರ್ತನೆಯಲ್ಲಿ ತೊಡಗುತ್ತಾಳೆ. ನಿದ್ರೆ ಮಾಡಲಾಗದೇ ನಿದ್ರೆ ಮಾತ್ರೆಯನ್ನು ನುಂಗುವ ಪರಿಸ್ಥಿತಿ ಬಂದೊದಗುತ್ತದೆ. ಈ ಕಾದಂಬರಿಗೆ ತಾವರೆಕೊಳ ಎಂಬ ಹೆಸರು ಇಟ್ಟಿರುವುದೇ ಔಚಿತ್ಯವೆನಿಸುತ್ತದೆ. ರತ್ನಳ ಮನಸ್ಸು ತಾವರೆಕೊಳದಂತೆ ಮನಸ್ಸಿನ ಒಳಬದಿಯಲ್ಲೇ ಇರುವುದನ್ನು ಹಾಗೂ ನೀರಿನ ಲೋಕವು ತಾವರೆಯ ಎಲೆಗಳಿಂದ ಮುಚ್ಚಿಹೋಗಿರುವಂತೆ ರತ್ನಳ ಮನೋಬಯಕೆಯು ಹುದುಗಿರುವುದನ್ನು, ಅದನ್ನು ಕದಡಿದರೂ ಯಾರಿಗೂ ಕಾಣದ ಸ್ಥಿತಿಯನ್ನು ಹೇಳುತ್ತದೆ. ಇಲ್ಲಿ ಕುಟುಂಬದಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿಗಳ, ಸಮಾಜದ ಸಂದರ್ಭದ ಪಲ್ಲಟಗಳ ಜೊತೆಗೂಡಿ ರತ್ನ ನಡೆಯುವ ದಾರಿಯನ್ನು ಹಾಗೆಯೇ ಆಕೆಯು ನಡೆಯುವ ಹಾದಿಯಲ್ಲಿ ಅವಳಿಗೆ ಎದುರಾಗುವ ಮಾನಸಿಕ ಸಂಕ್ಲೇಶಗಳನ್ನು ಈ ಕಾದಂಬರಿಯು ಸೂಕ್ಷ್ಮವಾಗಿ ಮಂಡಿಸುತ್ತದೆ.

ಮಹಿಳಾ ಸಾಹಿತ್ಯದಲ್ಲಿಯೇ ಒಬ್ಬ ಹೆಣ್ಣಿನ ಮನಸ್ಸಿನ ಮನೋವೈಜ್ಞಾನಿಕತೆಯನ್ನು ಮನೋಜ್ಞವಾಗಿ ಚಿತ್ರಿಸಿದ ಮಹತ್ತರ ಕಾದಂಬರಿ ಎಂದರೆ ಅದುವೇ ತ್ರಿವೇಣಿಯವರ 'ಶರಪಂಜರ'. ಈ ಕಾದಂಬರಿಯು ಕನ್ನಡ ಚಲನಚಿತ್ರವಾಗಿ ಬಹಳ ಪ್ರಖ್ಯಾತಿ ಗಳಿಸಿದೆ. ಮಾನಸಿಕ ರೋಗಕ್ಕೆ ಒಳಗಾದ ರೋಗಿಗಳು ಮಾನಸಿಕ ನೋವಿನಿಂದ ಹೊರಬರಲು ಏನೇ ಚಿಕಿತ್ಸೆ, ವೈದ್ಯರ ಸಲಹೆಗಳಿದ್ದರೂ, ಕೊನೆಯದಾಗಿ ಆ ಕಾಯಿಲೆಯಿಂದ ಹೊರಬರಲು ಅವರ ಸುತ್ತಮುತ್ತಲ ಪರಿಸರದ ಸಹಜೀವಿಗಳ ಅನುಕಂಪ, ತಿಳಿವಳಿಕೆಗಳು, ಕರುಣೆ, ಸಹಾನುಭೂತಿ ಬಹಳ ಮುಖ್ಯ ಪಾತ್ರವಹಿಸುತ್ತವೆ ಎಂಬುದನ್ನು ಅವರ ಶರಪಂಜರ ಕಾದಂಬರಿಯಲ್ಲಿ ನಿರೂಪಿಸಿದ್ದಾರೆ.

ಈ ಕಾದಂಬರಿಯಲ್ಲಿ ಮನೋವೈಜ್ಞಾನಿಕ ದೃಷ್ಟಿಕೋನವು ಮತ್ತಷ್ಟು ಗಾಢವಾಗಿ ಚಿತ್ರಿತವಾಗಿದೆ. ಕಾವೇರಿಯು ವಿವಾಹಪೂರ್ವದಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುತ್ತಾಳೆ. ಮದುವೆಯ ನಂತರ ಸುಖಸಂಸಾರದಲ್ಲಿ ಜೀವಿಸುತ್ತಿದ್ದ ಅವಳ ಮನಸ್ಸು ಮೇಲುನೋಟಕ್ಕೆ ಶಾಂತವಾಗಿ ಕಂಡರೂ ಗಂಡನ ಜೊತೆ ಏಕಾಂತದಲ್ಲಿ ಇದ್ದ ಸಂದರ್ಭದಲ್ಲಿ ಅವಳ ಸುಪ್ತ ಮನಸ್ಸು ಹೊರಬರುತ್ತದೆ. ಅವಳನ್ನು ಅಪರಾಧಿ ಮನೋಭಾವನೆಯು ಕಾಡತೊಡಗುತ್ತದೆ. ಅವಳ ವರ್ತನೆಯು ಅತಿರೇಕಕ್ಕೆ ಹೋಗಿ ಮನೋರೋಗಿಯಾಗುತ್ತಾಳೆ.

ಅತಿಯಾಗಿ ಪ್ರೀತಿಸುತ್ತಿದ್ದ ಆಕೆಯ ಗಂಡ ಅನುಮಾನಿಸಿ ದೂರ ಸರಿಯುತ್ತಾನೆ. ಗಂಡ, ಮನೆ, ಮಕ್ಕಳೇ ಸರ್ವಸ್ವವಾಗಿದ್ದ ಕಾವೇರಿಯು ಹುಚ್ಚು ಆಸ್ಪತ್ರೆಗೆ ಸೇರುತ್ತಾಳೆ. ಇಲ್ಲಿ ಕಾದಂಬರಿಯು ದ್ವಿಮುಖ ದಿಕ್ಕಿನಲ್ಲಿ ಹರಿಯುತ್ತದೆ. ಒಂದು ದಿಕ್ಕು ಕಾವೇರಿಯ ಮನೋಲೋಕದ ಶೋಧನೆಯ ಗುರಿಯನ್ನು ಹೊಂದಿದ್ದು, ಅದಕ್ಕೆ ತಕ್ಕ ಮನಃಶಾಸ್ತ್ರೀಯ ಪರಿಕರಗಳನ್ನು ವೈದ್ಯರು ಬಳಸುತ್ತಾರೆ. ಎರಡನೆಯದು, ಕಾವೇರಿಯ ಮರುವಸತಿಯ ಪ್ರಶ್ನೆಯು ತ್ರಿವೇಣಿಯವರನ್ನು ಕಾಡುತ್ತದೆ. ಮನಃಶಾಸ್ತ್ರ ಮತ್ತದರ ಪರಿಕರಗಳು ಪ್ರಯೋಜನಕ್ಕೆ ಬಾರದು ಎಂಬುದು ಮನವರಿಕೆಯಾಗುತ್ತದೆ.

ಕಾವೇರಿಯ ಗುಣಮುಖ ಸ್ಥಿತಿಯನ್ನು ಆಕೆಯ ಕುಟುಂಬ ಮತ್ತು ಸಮಾಜವು ಒಪ್ಪುವುದಿಲ್ಲ, ನಂಬುವುದಿಲ್ಲ. ಆಕೆಯನ್ನು ಅನುಮಾನಿಸಿ ಹೀಯಾಳಿಸಿ ಅವಳ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳದೇ ಅವಳ ಮನಸ್ಸನ್ನು ಮತ್ತಷ್ಟೂ ಹದಗೆಡಿಸುತ್ತದೆ. ಅವಳ ಮನಸ್ಸು ಹಿಂದಿನ ಲಯಗಳಿಗೆ ಸ್ಪಂದಿಸದೇ, ಮಾನಸಿಕ ತೊಳಲಾಟದಿಂದ ಒದ್ದಾಡಿ, ಆಕೆಯನ್ನು ಮತ್ತೆ ಆಸ್ಪತ್ರೆಗೆ ಸೇರುವಂತೆ ಮಾಡುತ್ತದೆ. ಹೀಗೆ ತ್ರಿವೇಣಿಯವರ ಶರಪಂಜರ ಕಾದಂಬರಿಯು ಮನೋವೈಕಲ್ಯದ ಕಾರಣಗಳನ್ನು ಹುಡುಕುವ, ಮಾನಸಿಕ ಖಿನ್ನತೆಗೆ ತುತ್ತಾದವರನ್ನು ಈ ಕುಟುಂಬ ಮತ್ತು ಸಮಾಜವು ಸ್ವೀಕರಿಸದೆ ಮತ್ತಷ್ಟು ಅವರನ್ನು ಸಮಸ್ಯೆಗಳತ್ತ ದೂಡುವ ಚಿತ್ರಣವನ್ನು ಅದ್ಭುತವಾಗಿ ಕಟ್ಟಿಕೊಡುತ್ತದೆ.

ತ್ರಿವೇಣಿಯವರ 'ಶರಪಂಜರ' ಮನೋವೈಜ್ಞಾನಿಕ ದೃಷ್ಟಿಕೋನದ ನೆಲೆಯಲ್ಲಿ ರಚನೆಗೊಂಡಿದ್ದು, ಇಲ್ಲಿಯ ಕಾವೇರಿಯ ಪಾತ್ರವು ಮನೋರೋಗಿಯೊಬ್ಬಳ ದುರಂತ ಕಥೆಯಾಗಿದೆ. ಇದೇ ರೀತಿ ಇವರ ಬಹುಪಾಲು ಕೃತಿಗಳು ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ರಚನೆಯಾಗಿವೆ. ಮಾನಸಿಕ ರೋಗಿಗಳನ್ನು ಕುಟುಂಬ ಮತ್ತು ಸಮಾಜದ ಅಧಿಕೃತವಲಯದಿಂದ ಹೊರಗೆ ಒಯ್ಯುವ ಮನೋವಿಜ್ಞಾನದ ಚಿಕಿತ್ಸಾ ನೆಲೆಯನ್ನು ತ್ರಿವೇಣಿಯವರು ಪಾತ್ರಗಳ ವರ್ತನೆಯ ಅನೂಹ್ಯತೆಯನ್ನು ಭೇದಿಸಲು ಮಾತ್ರ ಬೆಳೆಸಿದರು ಎಂಬುದು ಮುಖ್ಯ ಸಂಗತಿ. ಇವರ ಬರಹಗಳಲ್ಲಿ ಹೆಣ್ಣಿನ ಮನೋವಲಯಗಳನ್ನು ಹಿಡಿದಿಟ್ಟು ತನ್ಮೂಲಕ ಹೆಣ್ಣಿನ ನೋವುಗಳು, ಸಮಸ್ಯೆಗಳನ್ನು ದಾಖಲಿಸಿರುವುದು ಸ್ತ್ರೀವಾದಿ ಚಿಂತನೆಯಿಂದ ಎಂಬುದನ್ನು ಹೇಳುತ್ತದೆ.

ಹೀಗೆ ಮಹಿಳಾ ಸಾಹಿತ್ಯಕ್ಕೂ ಮನೋವೈಜ್ಞಾನಿಕತೆಗೂ ಅವಿನಾಭಾವ ಸಂಬಂಧವಿದೆ ಎಂಬುದು ಮಹಿಳಾ ಸಾಹಿತ್ಯದ ಚರಿತ್ರೆಯನ್ನು ಅವಲೋಕನ ಮಾಡಿದಾಗ ತಿಳಿದುಬರುತ್ತದೆ. ಸ್ತ್ರೀವಾದವನ್ನೂ ಮೀರಿ ಸಾರ್ವತ್ರಿಕವಾಗಿ ನಿಲ್ಲುವಂತಹ ಕೃತಿ ರಚನೆ ಮಾಡುವ ಸಾಮರ್ಥ್ಯ ನಮ್ಮ ಕನ್ನಡ ಲೇಖಕಿಯರಿಗೆ ಇದೆ ಎಂಬುದನ್ನು ತಮ್ಮ ಮನೋವೈಜ್ಞಾನಿಕತೆ ನೆಲೆಗಟ್ಟಿನ ಬರಹಗಳ ಮುಖಾಂತರ ಲೇಖಕಿಯರು ಸಾಬೀತುಪಡಿಸಿದ್ದಾರೆ.

ಪರಾಮರ್ಶನ ಸಾಹಿತ್ಯ

1. ಸ್ತ್ರೀವಾದ: ಅನ್ವಯಿಕತೆ– ಶ್ರೀಮತಿ ಎಚ್.ಎಸ್, 2012, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.
2. ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು–ಪ್ರೀತಿ ಶುಭಚಂದ್ರ, 2002, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಭಾರತೀಯ ಮಹಿಳಾ ವಿಮೋಚನೆಯ ಆಂದೋಲನ– ರಾಹು, 2013, ಲಡಾಯಿ ಪ್ರಕಾಶನ, ಗದಗ.

4. ಆಧುನಿಕ ಮಹಿಳಾ ಅಭಿವ್ಯಕ್ತಿ– ಗೀತಾ ಪ್ರಸಾದ್, 2009, ಧಾತ್ರಿ ಪುಸ್ತಕ, ಬೆಂಗಳೂರು.

5. ಮಹಿಳಾ ಮನೋಧರ್ಮ– ಕೆ.ಎಸ್.ಪವಿತ್ರ, 2014, ವಿಸ್ಮಯ ಪ್ರಕಾಶನ, ಮೈಸೂರು.

6. ಸ್ತ್ರೀವಾದಿ ಮನೋಧರ್ಮ–ಇಂದಿರಾ ಜೈಪ್ರಕಾಶ್, 2009, ಕನ್ನಡ ವಿಶ್ವವಿದ್ಯಾಲಯ, ಹಂಪಿ.

7. ಆಧುನಿಕ ಭಾರತದಲ್ಲಿ ಮಹಿಳೆ–ಎಚ್.ಎಸ್.ಶ್ರೀಮತಿ, 2001, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

8. ಸಾಹಿತ್ಯ ಮಹಿಳೆ ಮತ್ತು ಸಬಲೀಕರಣ– ಮಹೇಶ್ ಚಂದ್ರ ಗುರು, 2013, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

9. ಮಹಿಳಾ ಅಧ್ಯಯನ–ಎಚ್.ಎಸ್.ಶ್ರೀಮತಿ, 2003, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

10. ಮಹಿಳೆ ದುಡಿಮೆ ಮತ್ತು ಬಿಡುವು– 2007, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

11. ಮಹಿಳೆ ಒಂದು ಚಿಂತನೆ– ಹಾಲತಿ ಸೋಮಶೇಖರ್, 2012, ವಿಸ್ಮಯ ಪ್ರಕಾಶನ, ಮೈಸೂರು.

12. ಸ್ತ್ರೀವಾದ– ಎಚ್.ಎಸ್.ಶ್ರೀಮತಿ, 2003, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

13. ಸಿಮೋನ್ ದ ಬೊವಾ ದ ಸೆಕೆಂಡ್ ಸೆಕ್ಸ್–ಎಚ್. ಎಸ್. ಶ್ರೀಮತಿ, 2007, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.

14. ಹದಿಹರೆಯ ಮಾನಸಿಕ ಸಮಸ್ಯೆಗಳು– ಸಿ.ಆರ್.ಚಂದ್ರಶೇಖರ್,

15. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ–2006, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

16. ಹಸೀನಾ ಮತ್ತು ಇತರ ಕಥೆಗಳು–ಬಾನು ಮುಷ್ತಾಕ್, 2013, ಅಭಿರುಚಿ ಪ್ರಕಾಶನ, ಮೈಸೂರು.

ಮನೋವಿಜ್ಞಾನ ಮತ್ತು ಕಲೆ–ಸಾಹಿತ್ಯದ ಅಂತರ್‌ಸಂಬಂಧ: ಕನ್ನಡ ಸಾಹಿತ್ಯದ ಸನ್ನಿವೇಶದಲ್ಲಿ ಒಂದು ಅಧ್ಯಯನ

ಸುಧಾಕರ್ ಆರ್. ಎನ್.

ಸಂಶೋಧಕರು

ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ

ಸಾರಾಲೇಖ

ಮಾನವ ಮನಸ್ಸು ಕಲೆ ಮತ್ತು ಸಾಹಿತ್ಯದ ಮೂಲಾಧಾರವಾಗಿದ್ದು, ಅವುಗಳ ಸೃಜನಾತ್ಮಕ ಅಭಿವ್ಯಕ್ತಿಗೆ ಪ್ರಧಾನ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತದೆ. ಮನೋವಿಜ್ಞಾನವು ಮಾನವನ ಆಂತರಿಕ ಪ್ರೇರಣೆಗಳು, ಭಾವನೆಗಳು, ಸುಪ್ತ (Unconscious) ಮನೋಭಾವಗಳು, ಸಂಘರ್ಷಗಳು ಮತ್ತು ವ್ಯಕ್ತಿತ್ವದ ರೂಪುಗೊಳ್ಳುವಿಕೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುತ್ತದೆ. ಇತ್ತ ಕಲೆ ಮತ್ತು ಸಾಹಿತ್ಯವು ಮಾನವನ ಮನಸ್ಸಿನ ಈ ಆಂತರಿಕ ಅನುಭವಗಳನ್ನು ಸೌಂದರ್ಯಾತ್ಮಕ ಹಾಗೂ ಸಂಕೇತಾತ್ಮಕ ರೂಪಗಳಲ್ಲಿ ವ್ಯಕ್ತಪಡಿಸುತ್ತವೆ. ಆದ್ದರಿಂದ ಮನೋವಿಜ್ಞಾನ ಮತ್ತು ಕಲೆ–ಸಾಹಿತ್ಯದ ನಡುವಿನ ಸಂಬಂಧವು ಪರಸ್ಪರ ಪೂರಕವಾಗಿದ್ದು, ಮಾನವ ಅನುಭವದ ಆಳವಾದ ಅರ್ಥವನ್ನು ಗ್ರಹಿಸಲು ಸಹಕಾರಿಯಾಗಿದೆ. ಈ ಸಂಶೋಧನಾ ಲೇಖನವು ಮನೋವಿಜ್ಞಾನಮತ್ತು ಕಲೆ–ಸಾಹಿತ್ಯದ ಪರಸ್ಪರ ಸಂಬಂಧವನ್ನು ತಾತ್ವಿಕ ನೆಲೆಯಲ್ಲಿ ವಿಶ್ಲೇಷಿಸುವುದರ ಜೊತೆಗೆ, ಕನ್ನಡ ಸಾಹಿತ್ಯದ ಪ್ರಮುಖ ಕೃತಿಗಳನ್ನು ಉದಾಹರಣೆಗಳಾಗಿ ಬಳಸಿಕೊಂಡು ಮನೋವೈಜ್ಞಾನಿಕ ಅಂಶಗಳು ಸಾಹಿತ್ಯದಲ್ಲಿ ಹೇಗೆ ಪ್ರತಿಫಲಿಸುತ್ತವೆ ಎಂಬುದನ್ನು ವಿವರಿಸುತ್ತದೆ. ಪಾತ್ರಗಳ ಆಂತರಿಕ ಸಂಘರ್ಷ, ಸುಪ್ತಾವಸ್ಥೆಯ ಭಾವನಾತ್ಮಕ ಒತ್ತಡಗಳು ಹಾಗೂ ವ್ಯಕ್ತಿತ್ವದ ವಿಕಾಸವನ್ನು ಕನ್ನಡ ಸಾಹಿತ್ಯವು ಹೇಗೆ ಕಲಾತ್ಮಕವಾಗಿ ರೂಪಿಸುತ್ತದೆ ಎಂಬುದನ್ನು ಈ ಅಧ್ಯಯನ ಸ್ಪಷ್ಟಪಡಿಸುತ್ತದೆ. ಇದರಿಂದ ಮನೋವೈಜ್ಞಾನಿಕ ವಿಮರ್ಶೆಯ ಮಹತ್ವ ಹಾಗೂ ಅದರ ಸಾಹಿತ್ಯ ಅಧ್ಯಯನದಲ್ಲಿ ಇರುವ ಅನಿವಾರ್ಯತೆಯನ್ನು ಈ ಲೇಖನ ಒತ್ತಿಹೇಳುತ್ತದೆ.

ಮುಖ್ಯ ಪದಗಳು: ಮನೋವಿಜ್ಞಾನ, ಕಲೆ, ಸಾಹಿತ್ಯ, ಸುಪ್ತಾವಸ್ಥೆ, ಕನ್ನಡ ಕಾದಂಬರಿ, ಮನೋವೈಜ್ಞಾನಿಕ ವಿಮರ್ಶೆ

ಸಾಹಿತ್ಯವು ಕೇವಲ ಸಾಮಾಜಿಕ ವಾಸ್ತವದ ಪ್ರತಿಬಿಂಬವಲ್ಲ, ಅದು ಮಾನವನ ವರ್ತನೆ, ಆಂತರಿಕ ಮನಸ್ಸಿನ ಚಲನೆಗಳು, ಭಾವನಾತ್ಮಕ ಪ್ರತಿಕ್ರಿಯೆಗಳು ಮತ್ತು ಸೂಕ್ಷ್ಮ ಚಿಂತನೆಗಳನ್ನು ಪ್ರತಿಫಲಿಸುವ ಕಲಾತ್ಮಕ ಮಾಧ್ಯಮವಾಗಿದೆ. ಮಾನವ ಜೀವನದ ಬಾಹ್ಯ ಘಟನೆಗಳಷ್ಟೇ ಅಲ್ಲದೆ, ಅವುಗಳಿಗೆ ನೀಡುವ ಮಾನಸಿಕ ಪ್ರತಿಕ್ರಿಯೆಗಳೂ ಸಾಹಿತ್ಯದಲ್ಲಿ ಪ್ರಮುಖ ಸ್ಥಾನ ಪಡೆಯುತ್ತವೆ. ಹೀಗಾಗಿ, ಸಾಹಿತ್ಯವು ವ್ಯಕ್ತಿಯ ಭಾವನೆಗಳು, ಆಸೆಗಳು, ಭಯಗಳು ಮತ್ತು ಆಂತರಿಕ ಸಂಘರ್ಷಗಳನ್ನು ಪಾತ್ರಗಳ ಮೂಲಕ ಜೀವಂತವಾಗಿ ಹಿಡಿದಿಡುವ ಶಕ್ತಿಯನ್ನು ಹೊಂದಿದೆ. ಮನೋವಿಜ್ಞಾನ ಮತ್ತು ಸಾಹಿತ್ಯ ಎರಡೂ ಮಾನವ ಮನಸ್ಸಿನ/ವರ್ತನೆಯ ಅಧ್ಯಯನವನ್ನು ಕೇಂದ್ರವಾಗಿಸಿಕೊಂಡ ಕ್ಷೇತ್ರಗಳಾಗಿವೆ. ಮನೋವಿಜ್ಞಾನವು ಚಿಂತನೆ, ಭಾವನೆ, ಪ್ರೇರಣೆ, ಮತ್ತು ವರ್ತನೆಗಳ ಹಿಂದಿರುವ ಕಾರಣಗಳನ್ನು ವೈಜ್ಞಾನಿಕ ವಿಧಾನಗಳ ಮೂಲಕ ವಿಶ್ಲೇಷಿಸಿದರೆ, ಸಾಹಿತ್ಯವು ಅದೇ ಮನೋವೈಜ್ಞಾನಿಕ ಅನುಭವಗಳನ್ನು

ಕಲ್ಪನೆ, ಸಂಕೇತ, ಮತ್ತು ಕಥನಶೈಲಿಯ ಮೂಲಕ ಸೌಂದರ್ಯಾತ್ಮಕವಾಗಿ ವ್ಯಕ್ತಪಡಿಸುತ್ತದೆ. ವಿಧಾನಗಳು ಭಿನ್ನವಾಗಿದ್ದರೂ, ಈ ಎರಡೂ ಕ್ಷೇತ್ರಗಳ ಅಧ್ಯಯನದ ವಸ್ತು ಒಂದೇ ಆಗಿದೆ. ಅದು ಮಾನವ ಮನಸ್ಸು.

ಇಪ್ಪತ್ತನೇ ಶತಮಾನದಿಂದ, ಸಾಹಿತ್ಯದಲ್ಲಿ ಮನೋವೈಜ್ಞಾನಿಕ ಅಂಶಗಳಿಗೆ ಹೆಚ್ಚಿನ ಮಹತ್ವ ದೊರೆತಿದೆ. ಆಂತರಿಕ ಸಂವಹನ, ಕನಸುಗಳು, ಮತ್ತು ಸುಪ್ತಪ್ರಜ್ಞೆಯ ಮನೋಭಾವಗಳು ಮುಂತಾದ ತಂತ್ರಗಳನ್ನು ಬಳಸಿ ಲೇಖಕರು ಪಾತ್ರಗಳ ಆಂತರಿಕ ಮನಸ್ಥಿತಿಗೆ ಹೆಚ್ಚು ಒತ್ತು ನೀಡಿದ್ದಾರೆ. ಈ ಸಂಬಂಧವು ಪರಸ್ಪರ ಪೂರಕವಾಗಿದ್ದು, ಸಾಹಿತ್ಯವು ಮನೋವಿಜ್ಞಾನಕ್ಕೆ ಜೀವಂತ ಮಾನವ ಅನುಭವಗಳನ್ನು ಒದಗಿಸಿದರೆ, ಮನೋವಿಜ್ಞಾನವು ಸಾಹಿತ್ಯ ಕೃತಿಗಳ ಆಳವಾದ ವಿಶ್ಲೇಷಣೆಗೆ ಬೌದ್ಧಿಕ ಚೌಕಟ್ಟನ್ನು ನೀಡುತ್ತದೆ. ಈ ಹಿನ್ನೆಲೆಯಲ್ಲಿಯೇ, ಮನೋವಿಜ್ಞಾನ ಮತ್ತು ಸಾಹಿತ್ಯದ ಅಂತರ್ ಸಂಬಂಧವನ್ನು ಅಧ್ಯಯನ ಮಾಡುವ ಅಗತ್ಯ ಮತ್ತು ಮಹತ್ವವನ್ನು ಈ ಲೇಖನವು ಒತ್ತಿಹೇಳುತ್ತದೆ.

ಮನೋವಿಜ್ಞಾನ ಮತ್ತು ಕಲೆ: ತಾತ್ವಿಕ ಹಿನ್ನೆಲೆ

ಕಲೆ (ದೃಶ್ಯಕಲೆ, ಸಂಗೀತ, ನೃತ್ಯ ಮುಂತಾದವು) ಮಾನವನ ಭಾವಜಗತ್ತನ್ನು ನೇರವಾಗಿ ಸ್ಪರ್ಶಿಸುವ ಅಪಾರ ಶಕ್ತಿಯನ್ನು ಹೊಂದಿದೆ. ಕಲೆಯ ಅನುಭವವು ಕೇವಲ ಸೌಂದರ್ಯಾತ್ಮಕವಾಗಿರದೆ, ಸಂತೋಷ, ದುಃಖ, ಭಯ, ಕಲ್ಪನೆಯಂತಹ ಸಂಕೀರ್ಣ ಭಾವನಾತ್ಮಕ ಹಾಗೂ ಬೌದ್ಧಿಕ ಪ್ರತಿಕ್ರಿಯೆಗಳನ್ನು ಉಂಟುಮಾಡುತ್ತದೆ. ಈ ಪ್ರತಿಕ್ರಿಯೆಗಳು ವ್ಯಕ್ತಿಯ ಆಂತರಿಕ ಮನೋಸ್ಥಿತಿಗೆ ಆಳವಾಗಿ ಸಂಬಂಧಿಸಿರುವುದರಿಂದ, ಕಲೆ ಮಾನವ ಮನಸ್ಸಿನ ಅಧ್ಯಯನಕ್ಕೆ ಅತ್ಯಂತ ಸೂಕ್ತವಾದ ಕ್ಷೇತ್ರವಾಗುತ್ತದೆ. ಮನೋವಿಜ್ಞಾನವು ಬಣ್ಣ, ಆಕಾರ, ಲಯದಂತಹ ದೃಶ್ಯ ಉದ್ದೀಪನಗಳು (visual stimuli) ಮಾನವನ ಮನೋಭಾವ, ಸ್ಮೃತಿ ಮತ್ತು ಕಲ್ಪನೆಗಳ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ, ಕಲೆ ಮಾನವ ಮನಸ್ಸಿನೊಂದಿಗೆ ನೇರ ಸಂವಾದ ನಡೆಸುತ್ತದೆ ಎಂಬುದನ್ನು ದೃಢಪಡಿಸಿದೆ.

ಫ್ರಾಯ್ಡ್ ಮತ್ತು ಯೂಂಗ್‌ರಂತಹ ಪ್ರಮುಖ ಮನೋವಿಜ್ಞಾನಿಗಳು ಕಲೆಯನ್ನು ಸುಪ್ತಾವಸ್ಥೆ (Unconsciousnes) ಅಭಿವ್ಯಕ್ತಿಯ ರೂಪವೆಂದು ಪರಿಗಣಿಸಿದ್ದಾರೆ. ಫ್ರಾಯ್ಡ್‌ನ ಪ್ರಕಾರ, ಕಲೆ ಎನ್ನುವುದು ವ್ಯಕ್ತಿಯಲ್ಲಿ ಅಡಗಿದ ಆಸೆಗಳು, ದಮನಗೊಂಡ ಭಾವನೆಗಳು ಮತ್ತು ಆಂತರಿಕ ಸಂಘರ್ಷಗಳು ಸಂಕೇತಾತ್ಮಕವಾಗಿ ಹೊರಹೊಮ್ಮುವ ಮಾರ್ಗವಾಗಿದೆ. ಇದನ್ನು ಅವನು ಉತ್ಪತ್ನ (sublimation – ಮಾನಸಿಕ ಪ್ರೇರಣೆಗಳು ಸಮಾಜಕ್ಕೆ ಒಪ್ಪಿತವಾಗುವಂತೆ ವ್ಯಕ್ತವಾಗುವುದು) ಎಂದು ಕರೆದನು. ಯೂಂಗ್, ಕಲೆಯನ್ನು ಕೇವಲ ವೈಯಕ್ತಿಕ ಸುಪ್ತಾವಸ್ಥೆ ಉತ್ಪನ್ನವೆಂದು ಮಾತ್ರವಲ್ಲದೆ, ಸಾಮೂಹಿಕ ಸುಪ್ತಾವಸ್ಥೆ (collective unconscious)ಯ ಅಭಿವ್ಯಕ್ತಿಯೆಂದು ನೋಡಿದನು. ಹೀಗಾಗಿ, ಪೌರಾಣಿಕ ಸಂಕೇತಗಳು ಮತ್ತು ಸಿದ್ಧ ಮಾದರಿಗಳು (archetypes) ಕಲೆಯಲ್ಲಿ ಕಾಣಿಸಿಕೊಳ್ಳುತ್ತವೆ ಎಂದು ಅವರು ವಿವರಿಸಿದರು.

ಈ ತಾತ್ವಿಕ ನೆಲೆಗಳ ಆಧಾರದ ಮೇಲೆ, ಮನೋವೈಜ್ಞಾನಿಕ ಕಲಾವಿಮರ್ಶೆಯು ಕಲೆಯನ್ನು ಮಾನವ ಮನಸ್ಸಿನ ಅಧ್ಯಯನದ ಪ್ರಮುಖ ಸಾಧನವೆಂದು ಪರಿಗಣಿಸುತ್ತದೆ. ಕಲೆಯು ಮಾನವನ ಆಂತರಿಕ ಲೋಕವನ್ನು ಸಂಕೇತಾತ್ಮಕವಾಗಿ ಹೊರತರುವುದರಿಂದ, ಅದನ್ನು ಮನೋವಿಜ್ಞಾನಾತ್ಮಕ ದೃಷ್ಟಿಯಿಂದ ಅಧ್ಯಯನ ಮಾಡುವುದರಿಂದ ವ್ಯಕ್ತಿತ್ವ, ಭಾವನಾತ್ಮಕ ಸಂಘರ್ಷಗಳು ಮತ್ತು ಮಾನವ ಸ್ವಭಾವದ ಸಂಕೀರ್ಣತೆಯನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಮನೋವಿಜ್ಞಾನ ಮತ್ತು ಕಲೆ ಪರಸ್ಪರ ಪೂರಕವಾಗಿದ್ದು, ಒಂದರ ಅಧ್ಯಯನ ಮತ್ತೊಂದನ್ನು ಸಮೃದ್ಧಗೊಳಿಸುತ್ತದೆ.

ಮನೋವಿಜ್ಞಾನ ಮತ್ತು ಸಾಹಿತ್ಯದ ಪರಸ್ಪರ ಸಂಬಂಧ

ಸಾಹಿತ್ಯ ಮತ್ತು ಮನೋವಿಜ್ಞಾನ ಎರಡೂ ಮಾನವ ಸ್ವಭಾವದ ಅಧ್ಯಯನವನ್ನು ತಮ್ಮ ಕೇಂದ್ರವಸ್ತುವಾಗಿಸಿಕೊಂಡಿರುವ ಶಾಖೆಗಳಾಗಿವೆ. ಮಾನವನ ಚಿಂತನೆ, ಭಾವನೆ, ಆಸೆ, ಭಯ, ಪ್ರೇರಣೆ ಮತ್ತು ಸಂಘರ್ಷಗಳು ಎರಡೂ ಕ್ಷೇತ್ರಗಳ ಅಧ್ಯಯನದ

ಮೂಲ ಅಂಶಗಳಾಗಿವೆ. ಸಾಹಿತ್ಯವು ಮಾನವ ಮನಸ್ಸಿನ ಈ ಅಂತರಂಗ ಚಲನೆಗಳನ್ನು ಕಥನ, ಪಾತ್ರ ಚಿತ್ರಣ, ಭಾಷಾ ವೈಶಿಷ್ಟ್ಯ ಮತ್ತು ಕಲಾತ್ಮಕ ವಿನ್ಯಾಸಗಳ ಮೂಲಕ ಅನುಭವಾತ್ಮಕವಾಗಿ ಚಿತ್ರಿಸುತ್ತದೆ. ಇತ್ತ ಮನೋವಿಜ್ಞಾನವು ಅದೇ ಮನೋಭಾವಗಳು ಮತ್ತು ವರ್ತನೆಗಳ ಹಿಂದಿರುವ ಕಾರಣಗಳು, ಪ್ರಕ್ರಿಯೆಗಳು ಮತ್ತು ಪರಿಣಾಮಗಳನ್ನು ವೈಜ್ಞಾನಿಕ ಹಾಗೂ ವಿಶ್ಲೇಷಣಾತ್ಮಕ ವಿಧಾನಗಳ ಮೂಲಕ ವಿವರಿಸುತ್ತದೆ. ಹೀಗಾಗಿ ಸಾಹಿತ್ಯ ಮಾನವ ಮನಸ್ಸಿನ ಅನುಭವಾತ್ಮಕ ಪ್ರತಿನಿಧಿಯಾಗಿದ್ದರೆ, ಮನೋವಿಜ್ಞಾನ ಅದರ ತಾತ್ವಿಕ ಹಾಗೂ ವೈಜ್ಞಾನಿಕ ವಿವರಣೆಯಾಗಿದೆ.

ಸಾಹಿತ್ಯದಲ್ಲಿನ ಪಾತ್ರಗಳು ನಿಜ ಜೀವನದ ಮಾನವ ವರ್ತನೆಗಳಿಗೆ ಸಮೀಪವಾಗಿರುವುದರಿಂದ, ಅವುಗಳ ಆಂತರಿಕ ಚಿಂತನೆಗಳು, ಭಾವನಾತ್ಮಕ ಸಂಘರ್ಷಗಳು ಮತ್ತು ಸುಪ್ತಾವಸ್ಥೆಯ ಮನೋಭಾವಗಳು ಮನೋವೈಜ್ಞಾನಿಕ ಅಧ್ಯಯನಕ್ಕೆ ಸಮೃದ್ಧ ವಸ್ತುವಾಗಿ ಪರಿಣಮಿಸುತ್ತವೆ. ಪಾತ್ರಗಳ ಕ್ರಿಯೆಗಳು ಕೇವಲ ಬಾಹ್ಯ ಘಟನಾವಳಿಗಳ ಫಲವಲ್ಲ; ಅವು ಆಂತರಿಕ ಮನಸ್ಥಿತಿಗಳಿಂದ ರೂಪುಗೊಂಡಿರುತ್ತವೆ. ಈ ಅಂಶವನ್ನು ಮನೋವಿಜ್ಞಾನ ಪಾತ್ರಗಳ ವ್ಯಕ್ತಿತ್ವ ವಿಕಾಸ, ಮಾನಸಿಕ ಸಂಘರ್ಷಗಳು ಮತ್ತು ಅಚೇತನ ಪ್ರೇರಣೆಗಳ ಮೂಲಕ ವಿವರಿಸುತ್ತದೆ. ಈ ಕಾರಣದಿಂದಲೇ ಸಾಹಿತ್ಯವನ್ನು "ಮಾನವ ಮನಸ್ಸಿನ ಪ್ರಯೋಗಾಲಯ"ವೆಂದು ಕರೆಯಲಾಗಿದೆ.

ಆಧುನಿಕ ಸಾಹಿತ್ಯದಲ್ಲಿ ಮನೋವೈಜ್ಞಾನಿಕ ಅಂಶಗಳು ವಿಶೇಷವಾಗಿ ಪ್ರಾಬಲ್ಯ ಪಡೆದಿವೆ. Stream of consciousness ತಂತ್ರವು ಪಾತ್ರಗಳ ನಿರಂತರ ಚಿಂತನೆಗಳ ಹರಿವನ್ನು ನೇರವಾಗಿ ಓದುಗರ ಮುಂದೆ ಅನಾವರಣಗೊಳಿಸುತ್ತದೆ. ಆಂತರಿಕ ಸಂವಹನ (interior monologue)ದ ಮೂಲಕ ಪಾತ್ರಗಳ ಮನಸ್ಸಿನ ಒಳಗಿನ ಸಂಘರ್ಷ, ದ್ವಂದ್ವ ಮತ್ತು ಅಸ್ಥಿರತೆಗಳು ವ್ಯಕ್ತವಾಗುತ್ತವೆ. ಸಂಕೇತಗಳು ಮತ್ತು ಪ್ರತೀಕಗಳು ಅಚೇತನ ಮನಸ್ಸಿನ ಸಂಕೇತಾತ್ಮಕ ಭಾಷೆಯಾಗಿ ಕಾರ್ಯನಿರ್ವಹಿಸುತ್ತವೆ. ಕನಸುಗಳು, ಭ್ರಮೆಗಳು ಮತ್ತು ನೆನಪುಗಳು, ಪಾತ್ರಗಳ ಆಂತರಿಕ ಭಾವನೆಗಳು ಹಾಗೂ ದಮನಗೊಂಡ ಆಸೆಗಳನ್ನು ಪ್ರಕಟಿಸುತ್ತವೆ. ಇವೆಲ್ಲವೂ ಫ್ರಾಯ್ಡಿಯನ್ ಮತ್ತು ಯೂಂಗಿಯನ್ ಮನೋವೈಜ್ಞಾನಿಕ ತತ್ತ್ವಗಳಿಗೆ ನೇರವಾಗಿ ಸಂಬಂಧಿಸಿದ ತಂತ್ರಗಳಾಗಿವೆ.

ಈ ಹಿನ್ನೆಲೆಯಲ್ಲಿ, ಮನೋವಿಜ್ಞಾನ ಮತ್ತು ಸಾಹಿತ್ಯ ಪರಸ್ಪರ ಪೂರಕ ಶಾಖೆಗಳಾಗಿವೆ ಎಂದು ಹೇಳಬಹುದು. ಸಾಹಿತ್ಯವು ಮನೋವಿಜ್ಞಾನಕ್ಕೆ ಜೀವಂತ ಮಾನವ ಅನುಭವಗಳ ಉದಾಹರಣೆಗಳನ್ನು ಒದಗಿಸಿದರೆ, ಮನೋವಿಜ್ಞಾನವು ಸಾಹಿತ್ಯದ ಪಾತ್ರಗಳು, ವಿಷಯಗಳು ಮತ್ತು ಕಥನಶೈಲಿಗಳನ್ನು ಆಳವಾಗಿ ಅರ್ಥಮಾಡಿಕೊಳ್ಳಲು ತಾತ್ವಿಕ ಚೌಕಟ್ಟನ್ನು ನೀಡುತ್ತದೆ. ಈ ಪರಸ್ಪರ ಸಂಬಂಧವು ಸಾಹಿತ್ಯ ವಿಮರ್ಶೆಯನ್ನು ಹೆಚ್ಚು ಸಮಗ್ರ ಹಾಗೂ ಅರ್ಥಪೂರ್ಣವಾಗಿಸುತ್ತದೆ. ಆದ್ದರಿಂದ, ಮನೋವೈಜ್ಞಾನಿಕ ದೃಷ್ಟಿಕೋನದಿಂದ ಸಾಹಿತ್ಯವನ್ನು ಅಧ್ಯಯನ ಮಾಡುವುದು ಆಧುನಿಕ ಸಾಹಿತ್ಯ ಅಧ್ಯಯನದಲ್ಲಿ ಅನಿವಾರ್ಯವಾದ ಕ್ರಮವಾಗಿದೆ.

ಕನ್ನಡ ಸಾಹಿತ್ಯದಲ್ಲಿ ಮನೋವೈಜ್ಞಾನಿಕ ಅಂಶಗಳು

ಕನ್ನಡ ಸಾಹಿತ್ಯವು ತನ್ನ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಮಾನವ ಜೀವನದ ಬಾಹ್ಯ ಸಾಮಾಜಿಕ ವಾಸ್ತವಗಳ ಜೊತೆಗೆ ಆಂತರಿಕ ಮಾನಸಿಕ ಅನುಭವಗಳನ್ನೂ ಸಮಾನವಾಗಿ ಚಿತ್ರಿಸುತ್ತಾ ಬಂದಿದೆ. ಪ್ರಾಚೀನ ವಚನ ಸಾಹಿತ್ಯದಿಂದ ಆರಂಭಿಸಿ ಆಧುನಿಕ ಕಾದಂಬರಿ ಮತ್ತು ಕಥೆಗಳವರೆಗೆ, ಮಾನವನ ಭಾವನೆಗಳು, ಚಿಂತನೆಗಳು, ಆತಂಕಗಳು, ಆಶೆಗಳು ಮತ್ತು ಆಂತರಿಕ ಸಂಘರ್ಷಗಳು ಸಾಹಿತ್ಯದ ಪ್ರಧಾನ ವಿಷಯಗಳಾಗಿ ರೂಪುಗೊಂಡಿವೆ. ಪಾತ್ರಗಳ ಕೃತ್ಯಗಳ ಹಿಂದೆ ಕಾರ್ಯನಿರ್ವಹಿಸುವ ಮನೋಭಾವಗಳು, ಸುಪ್ತಾವಸ್ಥೆಯ ಪ್ರೇರಣೆಗಳು ಮತ್ತು ವ್ಯಕ್ತಿತ್ವದ ವಿಕಾಸವನ್ನು ಕನ್ನಡ ಸಾಹಿತ್ಯ ಸೂಕ್ಷ್ಮವಾಗಿ ಅನಾವರಣಗೊಳಿಸಿದೆ. ಈ ಕಾರಣದಿಂದ ಕನ್ನಡ ಸಾಹಿತ್ಯವನ್ನು ಮಾನವ ಮನಸ್ಸಿನ ಅಧ್ಯಯನಕ್ಕೆ ಸಮೃದ್ಧ ಕ್ಷೇತ್ರವೆಂದು ಪರಿಗಣಿಸಬಹುದು. ವಿಶೇಷವಾಗಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮನೋವೈಜ್ಞಾನಿಕ ದೃಷ್ಟಿಕೋನವು ಹೆಚ್ಚು ಪ್ರಾಬಲ್ಯ ಪಡೆದಿದೆ. ಲೇಖಕರು ಪಾತ್ರಗಳ ಬಾಹ್ಯ ಕ್ರಿಯೆಗಳಿಗಿಂತಲೂ ಅವರ ಆಂತರಿಕ ಲೋಕಕ್ಕೆ ಹೆಚ್ಚಿನ ಒತ್ತು ನೀಡುವ ಮೂಲಕ, ಮನಸ್ಸಿನ ದ್ವಂದ್ವ, ಅಪರಾಧಿ ಭಾವನೆ, ಆತ್ಮಸಂಘರ್ಷ, ಕನಸುಗಳು ಮತ್ತು ಸ್ಮೃತಿ(ನೆನಪು)ಗಳನ್ನು ಕಥನದ ಕೇಂದ್ರವನ್ನಾಗಿಸಿದ್ದಾರೆ. ಇದರಿಂದ ಕನ್ನಡ ಸಾಹಿತ್ಯವು ಕೇವಲ ಕಥನಾತ್ಮಕ ಕಲೆಗಷ್ಟೇ ಸೀಮಿತವಾಗದೆ, ಮಾನವ ಮನಸ್ಸಿನ ಸಂಕೀರ್ಣತೆಯನ್ನು ವಿಶ್ಲೇಷಿಸುವ ಗಂಭೀರ ಅಧ್ಯಯನವಾಗಿಯೂ

ರೂಪುಗೊಂಡಿದೆ. ಈ ಹಿನ್ನೆಲೆಯಲ್ಲಿ, ಕನ್ನಡ ಸಾಹಿತ್ಯದಲ್ಲಿನ ಮನೋವೈಜ್ಞಾನಿಕ ಅಂಶಗಳನ್ನು ಅಧ್ಯಯನ ಮಾಡುವುದರಿಂದ ಮಾನವ ಸ್ವಭಾವ ಮತ್ತು ಸಮಾಜದ ಆಂತರಿಕ ಚಲನೆಗಳನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಕನ್ನಡ ಸಾಹಿತ್ಯದ ಕೆಲವು ಕೃತಿಗಳನ್ನು ಈ ಹಿನ್ನೆಲೆಯಲ್ಲಿ ವಿವರಿಸಿಕೊಳ್ಳುವುದು ಅತ್ಯಗತ್ಯ. ಆದ್ದರಿಂದ ಕನ್ನಡದ ಕೆಲವು ಕೃತಿಗಳನ್ನು ಮನೋವಿಜ್ಞಾನದ ಹಿನ್ನೆಲೆಯಲ್ಲಿ ನೋಡೋಣ.

ಯು.ಆರ್. ಅನಂತಮೂರ್ತಿಯವರರ 'ಸಂಸ್ಕಾರ'

ಯು.ಆರ್. ಅನಂತಮೂರ್ತಿಯ ಸಂಸ್ಕಾರ ಕಾದಂಬರಿ ಕನ್ನಡ ಸಾಹಿತ್ಯದಲ್ಲಿ ಮನೋವೈಜ್ಞಾನಿಕ ಸಂಘರ್ಷವನ್ನು ಅತ್ಯಂತ ಗಂಭೀರವಾಗಿ ನಿರೂಪಿಸಿದ ಕೃತಿಯಾಗಿದೆ. ಈ ಕಾದಂಬರಿಯ ಕೇಂದ್ರ ಪಾತ್ರವಾದ 'ಪ್ರಾಣೇಶಾಚಾರ್ಯ'ರ ಮನಸ್ಸಿನಲ್ಲಿ ನಡೆಯುವ ಆಂತರಿಕ ದ್ವಂದ್ವವೇ ಸಂಪೂರ್ಣ ಕಥಾನಕದ ಚಾಲಕಶಕ್ತಿಯಾಗಿದೆ. ಧರ್ಮನಿಷ್ಠ, ಶಾಸ್ತ್ರಪಾಂಡಿತ್ಯ ಹೊಂದಿದ ಬ್ರಾಹ್ಮಣನಾಗಿ ಗುರುತಿಸಲ್ಪಡುವ ಪ್ರಾಣೇಶಾಚಾರ್ಯನು ತನ್ನ ಬದುಕನ್ನು ಕಠಿಣ ಸಂಯಮ, ನಿಯಮ ಮತ್ತು ನೈತಿಕ ಮೌಲ್ಯಗಳ ಮೇಲೆ ಕಟ್ಟಿಕೊಂಡಿದ್ದಾನೆ. ಆದರೆ ಅವನೊಳಗೆ ಅಡಗಿರುವ ಮಾನವೀಯ ಇಚ್ಛೆಗಳು ಮತ್ತು ಆಸೆಗಳು ಅವನ ಸ್ವಯಂನಿರ್ಮಿತ ಧಾರ್ಮಿಕ ಶಿಸ್ತಿಗೆ ಸವಾಲು ಹಾಕುತ್ತವೆ. ಈ ಸಂಘರ್ಷವೇ ಮನೋವೈಜ್ಞಾನಿಕವಾಗಿ ಅತ್ಯಂತ ಮಹತ್ವದ ಅಂಶವಾಗಿದೆ.

ಫ್ರಾಯ್ಡ್‌ನ Id–Ego–Superego ತತ್ತ್ವದ ಬೆಳಕಿನಲ್ಲಿ ನೋಡಿದರೆ, ಪ್ರಾಣೇಶಾಚಾರ್ಯನ ವ್ಯಕ್ತಿತ್ವದಲ್ಲಿ Superego (ಅಹಂಕಾರ) ಅತ್ಯಂತ ಪ್ರಬಲವಾಗಿದೆ. ಸಮಾಜದ ಧಾರ್ಮಿಕ ನಿಯಮಗಳು, ಶಾಸ್ತ್ರಗಳ ಆದೇಶಗಳು ಮತ್ತು ನೈತಿಕ ಕಟ್ಟಳೆಗಳು ಅವನ ಮನಸ್ಸನ್ನು ಸಂಪೂರ್ಣವಾಗಿ ಆವರಿಸಿವೆ. ಅವನು ತನ್ನ ದೇಹ, ಮನಸ್ಸು ಮತ್ತು ಇಚ್ಛೆಗಳನ್ನೆಲ್ಲ ನಿಯಂತ್ರಣದಲ್ಲಿ ಇಡಲು ಪ್ರಯತ್ನಿಸುತ್ತಾನೆ. ಆದರೆ 'ಚಂದ್ರಿ' ಎಂಬ ಪಾತ್ರದ ಸಾನ್ನಿಧ್ಯದಲ್ಲಿ ಅವನ ಅಪ್ರಜ್ಞಾಪೂರ್ವಕ ಮನಸ್ಸಿನಲ್ಲಿ ದಮನಗೊಂಡಿರುವ ಆಸೆಗಳು (Id) ಮೂಲ ಪ್ರವೃತ್ತಿ/ಕಾಮನೆ ಜಾಗೃತಗೊಳ್ಳುತ್ತವೆ. ಚಂದ್ರಿಯ ದೈಹಿಕ ಸಾಮೀಪ್ಯ, ಮಾನವೀಯತೆ ಮತ್ತು ಸಹಜತೆ ಪ್ರಾಣೇಶಾಚಾರ್ಯನೊಳಗಿನ ದಮನಗೊಂಡ ಇಚ್ಛೆಗಳನ್ನು ಮೇಲಕ್ಕೆ ತರುತ್ತವೆ.

ಈ ಹಂತದಲ್ಲಿ ಪ್ರಾಣೇಶಾಚಾರ್ಯನ (Ego) ಮೂಲ ಪ್ರವೃತ್ತಿ/ಕಾಮನೆ ಕಾರ್ಯಪ್ರವೃತ್ತವಾಗುತ್ತದೆ. Ego ಎನ್ನುವುದು ವಾಸ್ತವ ಮತ್ತು ಇಚ್ಛೆಗಳ ನಡುವೆ ಸಮತೋಲನ ಸಾಧಿಸಲು ಪ್ರಯತ್ನಿಸುವ ಮನಸ್ಸಿನ ಭಾಗ. ಆದರೆ ಪ್ರಾಣೇಶಾಚಾರ್ಯನ Ego ದುರ್ಬಲವಾಗಿರುವುದರಿಂದ, ಅವನು ತನ್ನೊಳಗಿನ ಧರ್ಮ ಮತ್ತು ಇಚ್ಛೆಗಳ ನಡುವಿನ ಸಂಘರ್ಷವನ್ನು ಸಮರ್ಥವಾಗಿ ನಿಭಾಯಿಸಲು ಸಾಧ್ಯವಾಗುವುದಿಲ್ಲ. ಇದರ ಪರಿಣಾಮವಾಗಿ ಅವನಲ್ಲಿ ಅಪರಾಧಭಾವನೆ, ಆತ್ಮಸಂಶಯ ಮತ್ತು ಮಾನಸಿಕ ಅಸ್ಥಿರತೆಗಳು ಉಂಟಾಗುತ್ತವೆ. ಅವನ ನಿರಂತರ ಆತ್ಮಚಿಂತನೆ, ಶಾಸ್ತ್ರಾರ್ಥದ ಮೇಲಿನ ಅವಲಂಬನೆ ಮತ್ತು ತೀರ್ಮಾನ ತೆಗೆದುಕೊಳ್ಳಲಾಗದ ಸ್ಥಿತಿಗಳೆಲ್ಲವೂ ಈ ಮನೋವೈಜ್ಞಾನಿಕ ಅಸಮತೋಲನದ ಸೂಚನೆಗಳಾಗಿವೆ.

ಇತರೆ ಪಾತ್ರಗಳೂ ಈ ಮನೋವೈಜ್ಞಾನಿಕ ಸಂಘರ್ಷವನ್ನು ಮತ್ತಷ್ಟು ಗಾಢಗೊಳಿಸುತ್ತವೆ. 'ನಾರಾಯಣಪ್ಪ' ಎಂಬ ಪಾತ್ರವು ಸಾಮಾಜಿಕ ನಿಯಮಗಳನ್ನು ನಿರ್ಲಕ್ಷಿಸುವ, ಸಹಜ ಇಚ್ಛೆಗಳಿಗೆ ಮಹತ್ವ ನೀಡುವ ವ್ಯಕ್ತಿಯಾಗಿದ್ದು, ಪ್ರಾಣೇಶಾಚಾರ್ಯನ Superego (ಅಹಂಕಾರ) ಗೆ ನೇರ ಸವಾಲು ಹಾಕುವ ಪ್ರತೀಕವಾಗಿದೆ. ನಾರಾಯಣಪ್ಪನ ಸಾವು ಮತ್ತು ಅವನ ಅಂತ್ಯಸಂಸ್ಕಾರದ ಪ್ರಶ್ನೆ ಪ್ರಾಣೇಶಾಚಾರ್ಯನ ಮನಸ್ಸಿನಲ್ಲಿ ಧರ್ಮದ ಅರ್ಥ ಮತ್ತು ಮಾನವೀಯತೆಯ ನಡುವಿನ ದ್ವಂದ್ವವನ್ನು ಉಲ್ಬಣಗೊಳಿಸುತ್ತದೆ. ಇತ್ತ ಚಂದ್ರಿ ಸಹಜ ಮಾನವೀಯತೆಯ ಪ್ರತಿನಿಧಿಯಾಗಿ, ಧರ್ಮದ ಕಠಿಣ ನಿಯಮಗಳಿಗಿಂತ ಜೀವನದ ಸಹಜತೆಗೆ ಆದ್ಯತೆ ನೀಡುವ ಪಾತ್ರವಾಗಿ ಕಾಣಿಸುತ್ತಾಳೆ.

ಸಂಸ್ಕಾರ ಕಾದಂಬರಿಯಲ್ಲಿ ಪ್ರಾಣೇಶಾಚಾರ್ಯನ ಪಾತ್ರದ ಮೂಲಕ ಫ್ರಾಯ್ಡಿಯನ್ ಮನೋವಿಜ್ಞಾನ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. Id(ದಮನಗೊಂಡ ಇಚ್ಛೆಗಳು), Superego (ಧಾರ್ಮಿಕ–ನೈತಿಕನಿಯಮಗಳು) ಮತ್ತು ಅವುಗಳ ನಡುವೆ ಸಿಲುಕಿರುವ ದುರ್ಬಲ

Ego ಈ ಮೂವರುಗಳ ಸಂಘರ್ಷವೇ ಕಾದಂಬರಿಯ ಮೂಲ ಮನೋವೈಜ್ಞಾನಿಕ ಚೌಕಟ್ಟಾಗಿದೆ. ಈ ಸಂಘರ್ಷದ ಮೂಲಕ ಅನಂತಮೂರ್ತಿಯವರು ಮಾನವ ಮನಸ್ಸಿನ ಸಂಕೀರ್ಣತೆಯನ್ನು, ಧರ್ಮ ಮತ್ತು ಮಾನವೀಯತೆಯ ನಡುವಿನ ತೀವ್ರ ದ್ವಂದ್ವವನ್ನು ಅತ್ಯಂತ ಸೂಕ್ಷ್ಮವಾಗಿ ಅನಾವರಣಗೊಳಿಸಿದ್ದಾರೆ. ಇದರಿಂದ ಸಂಸ್ಕಾರ ಕಾದಂಬರಿ ಕನ್ನಡ ಸಾಹಿತ್ಯದಲ್ಲಿ ಮನೋವೈಜ್ಞಾನಿಕ ಅಧ್ಯಯನಕ್ಕೆ ಶ್ರೇಷ್ಠ ಉದಾಹರಣೆಯಾಗಿ ಸ್ಥಾನ ಪಡೆಯುತ್ತದೆ.

ಕಾರಂತರ 'ಮೂಕಜ್ಜಿಯ ಕನಸುಗಳು'

ಶಿವರಾಮ ಕಾರಂತರ 'ಮೂಕಜ್ಜಿಯ ಕನಸುಗಳು' ಕಾದಂಬರಿ ಕನ್ನಡ ಸಾಹಿತ್ಯದಲ್ಲಿ ಕನಸುಗಳನ್ನು ಮನೋವೈಜ್ಞಾನಿಕ ಸಾಧನವಾಗಿ ಬಳಸಿದ ಅತ್ಯಂತ ಮಹತ್ವದ ಕೃತಿಯಾಗಿದೆ. ಈ ಕಾದಂಬರಿಯಲ್ಲಿ 'ಮೂಕಜ್ಜಿ' ಎಂಬ ವೃದ್ಧ ಮಹಿಳೆಯ ಪಾತ್ರದ ಮೂಲಕ ಮಾನವ (Unconsciou) ಸುಪ್ತಾವಸ್ಥೆಯ ಮನಸ್ಸು, ಸ್ಮೃತಿ ಮತ್ತು ಸಾಮಾಜಿಕ ಬದಲಾವಣೆಗಳ ಬಗ್ಗೆ ಇರುವ ಭಯಗಳು ಆಳವಾಗಿ ವ್ಯಕ್ತವಾಗುತ್ತವೆ. ಮೂಕಜ್ಜಿಯ ಕನಸುಗಳು ಕೇವಲ ವೈಯಕ್ತಿಕ ಕಲ್ಪನೆಗಳಲ್ಲ, ಅವು ಅವಳ ಜೀವನಾನುಭವ, ಸಾಮಾಜಿಕ ನೆನಪುಗಳು ಮತ್ತು ಸಂಸ್ಕೃತಿಯ ಸಂಕೇತಾತ್ಮಕ ಪ್ರತಿಬಿಂಬಗಳಾಗಿವೆ. ಈ ದೃಷ್ಟಿಯಿಂದ ಕನಸುಗಳು ಮನಸ್ಸಿನ ಸುಪ್ತಾವಸ್ಥೆ ಪದರದಿಂದ ಹೊರಹೊಮ್ಮುವ ಮನೋವೈಜ್ಞಾನಿಕ ಸಂಕೇತಗಳಾಗಿ ಕಾರ್ಯನಿರ್ವಹಿಸುತ್ತವೆ.

ಮೂಕಜ್ಜಿಯ ಪಾತ್ರವು ಪರಂಪರೆಯ ಪ್ರತಿನಿಧಿಯಾಗಿದ್ದು, ಅವಳ ಮನಸ್ಸಿನಲ್ಲಿ ಸಂಗ್ರಹವಾಗಿರುವ ಸ್ಮೃತಿಗಳು ಅವಳ ಕನಸುಗಳ ಮೂಲಕ ಹೊರಹೊಮ್ಮುತ್ತವೆ. ಅವಳು ಕಂಡುಕೊಳ್ಳುವ ಕನಸುಗಳಲ್ಲಿ ಹಳೆಯ ಸಾಮಾಜಿಕ ವ್ಯವಸ್ಥೆ, ಸಂಪ್ರದಾಯಗಳು, ಕುಟುಂಬ ಸಂಬಂಧಗಳು ಮತ್ತು ಧಾರ್ಮಿಕ ಆಚರಣೆಗಳು ಮತ್ತೆ ಮತ್ತೆ ಮೂಡಿಬರುತ್ತವೆ. ಇವು ಯಾದೃಚ್ಛಿಕ ಕನಸುಗಳಲ್ಲ. ಅವು ಅವಳ ಸುಪ್ತಾವಸ್ಥೆ ಮನಸ್ಸಿನಲ್ಲಿ ಆಳವಾಗಿ ನೆಲೆಸಿರುವ ಅನುಭವಗಳ ಅಭಿವ್ಯಕ್ತಿಗಳಾಗಿವೆ. ಫ್ರಾಯ್ಡಿಯನ್ ದೃಷ್ಟಿಕೋನದಲ್ಲಿ ನೋಡಿದರೆ, ಈ ಕನಸುಗಳು ದಮನಗೊಂಡ ಭಯಗಳು ಮತ್ತು ಆತಂಕಗಳು ಸಂಕೇತಾತ್ಮಕವಾಗಿ ಹೊರಹೊಮ್ಮುವ ರೂಪಗಳಾಗಿವೆ.

ಅದೇ ರೀತಿ, ಕಾದಂಬರಿಯಲ್ಲಿ ಮೂಕಜ್ಜಿಯ ಕನಸುಗಳು ಸಾಮಾಜಿಕ ಬದಲಾವಣೆಗಳ ಭಯವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತವೆ. ಆಧುನಿಕತೆ, ಹೊಸ ಮೌಲ್ಯಗಳು ಮತ್ತು ಸಾಮಾಜಿಕ ಪರಿವರ್ತನೆಗಳು ಅವಳಿಗೆ ಅಸುರಕ್ಷತೆ ಮತ್ತು ಅಸ್ಥಿರತೆಯ ಭಾವವನ್ನು ಉಂಟುಮಾಡುತ್ತವೆ. ಈ ಭಾವನೆಗಳು ಅವಳ ಜಾಗೃತ ಮನಸ್ಸಿನಲ್ಲಿ ಸ್ಪಷ್ಟವಾಗಿ ವ್ಯಕ್ತವಾಗದಿದ್ದರೂ, ಕನಸುಗಳ ಮೂಲಕ ಹೊರಹೊಮ್ಮುತ್ತವೆ. ಹೀಗಾಗಿ ಕನಸುಗಳು ಅವಳ ಸುಪ್ತಾವಸ್ಥೆಯ ಮನಸ್ಸಿನಲ್ಲಿರುವ ಸಾಮಾಜಿಕ ಆತಂಕಗಳ ಭಾಷೆಯಾಗುತ್ತವೆ. ಇದು ಯೂಂಗ್‌ನ ಸಮುದಾಯಿಕ ಸುಪ್ತಾವಸ್ಥೆ (collective unconscious) ತತ್ತ್ವಕ್ಕೂ ಹತ್ತಿರವಾಗಿದ್ದು, ವ್ಯಕ್ತಿಯ ಕನಸುಗಳಲ್ಲಿ ಸಮುದಾಯದ ಸಾಮೂಹಿಕ ಭಯಗಳು ಪ್ರತಿಫಲಿಸುವುದನ್ನು ಸೂಚಿಸುತ್ತದೆ. ಕಾದಂಬರಿಯ ಇತರೆ ಪಾತ್ರಗಳ ಪ್ರತಿಕ್ರಿಯೆಗಳೂ ಮೂಕಜ್ಜಿಯ ಮನೋಭಾವವನ್ನು ಇನ್ನಷ್ಟು ಸ್ಪಷ್ಟಪಡಿಸುತ್ತವೆ. ಯುವ ಪೀಳಿಗೆಯ ಪಾತ್ರಗಳು ಬದಲಾವಣೆಯನ್ನು ಸಹಜವಾಗಿ ಸ್ವೀಕರಿಸುವಾಗ, ಮೂಕಜ್ಜಿ ಅದನ್ನು ಆತಂಕ ಮತ್ತು ಅನುಮಾನಗಳ ದೃಷ್ಟಿಯಿಂದ ನೋಡುತ್ತಾಳೆ. ಈ ತಲೆಮಾರುಗಳ ನಡುವಿನ ಭಿನ್ನ ಮನೋಭಾವಗಳು ಮಾನವ ಮನಸ್ಸಿನ ಹೊಂದಾಣಿಕೆ ಸಮಸ್ಯೆಯನ್ನು (psychological adjustment) ಸೂಚಿಸುತ್ತವೆ. ಮೂಕಜ್ಜಿಯ ಕನಸುಗಳು ಈ ಹೊಂದಾಣಿಕೆಯ ಅಸಾಧ್ಯತೆಯನ್ನು ಸಂಕೇತಾತ್ಮಕವಾಗಿ ವ್ಯಕ್ತಪಡಿಸುತ್ತವೆ.

ಆದ್ದರಿಂದ ಈ ಕಾದಂಬರಿಯಲ್ಲಿ ಕನಸುಗಳು ಕೇವಲ ಕಥನಾತ್ಮಕ ತಂತ್ರವಾಗಿರದೆ, ಮನೋವೈಜ್ಞಾನಿಕ ವಿಶ್ಲೇಷಣೆಯ ಪ್ರಮುಖ ಸಾಧನಗಳಾಗಿವೆ. ಮೂಕಜ್ಜಿಯ ಪಾತ್ರದ ಮೂಲಕ ಕಾರಂತರು ವೈಯಕ್ತಿಕ ಸುಪ್ತಾವಸ್ಥೆ, ಸ್ಮೃತಿ ಮತ್ತು ಸಾಮಾಜಿಕ ಬದಲಾವಣೆಗಳ ಭಯಗಳನ್ನು ಒಟ್ಟಾಗಿ ಚಿತ್ರಿಸಿದ್ದಾರೆ. ಇದರಿಂದ ಈ ಕಾದಂಬರಿ ಮಾನವ ಮನಸ್ಸಿನ ಆಂತರಿಕ ಸಂಘರ್ಷ ಮತ್ತು ಸಮಾಜದ ಪರಿವರ್ತನೆಯ ನಡುವಿನ ಸಂಬಂಧವನ್ನು ಮನೋವೈಜ್ಞಾನಿಕವಾಗಿ ಅರ್ಥಮಾಡಿಕೊಳ್ಳಲು ಅತ್ಯಂತ ಮಹತ್ವದ ಕೃತಿಯಾಗಿ ಹೊರಹೊಮ್ಮುತ್ತದೆ.

ಎಸ್.ಎಲ್. ಭೈರಪ್ಪನವರ 'ವಂಶವೃಕ್ಷ'

ಇದು ಕೇವಲ ವಂಶಪಾರಂಪರ್ಯದ ಸಂಘರ್ಷದ ಕಥೆಯಲ್ಲ, ಇದು ಮನುಷ್ಯನ ಅಹಂಕಾರ, ಲೈಂಗಿಕತೆ, ಒಂಟಿತನ ಮತ್ತು ಅನ್ವೇಷಣೆಗಳ ಆಳವಾದ ಮನೋವೈಜ್ಞಾನಿಕ ಅಧ್ಯಯನ. ಈ ಕಾದಂಬರಿಯನ್ನು ಮನೋವಿಶ್ಲೇಷಣೆಯ ದೃಷ್ಟಿಕೋನದಿಂದ ನೋಡಿದಾಗ ಈ ಕೆಳಗಿನ ಪ್ರಮುಖ ಅಂಶಗಳು ಗೋಚರಿಸುತ್ತವೆ. 'ವಂಶವೃಕ್ಷ' ಕಾದಂಬರಿಯು ಮನುಷ್ಯನ ಅಹಂಕಾರ, ನೈತಿಕತೆ ಮತ್ತು ಅಸ್ತಿತ್ವದ ಹುಡುಕಾಟವನ್ನು ಒಳಗೊಂಡ ಒಂದು ಆಳವಾದ ಮನೋವೈಜ್ಞಾನಿಕ ಅಧ್ಯಯನವಾಗಿದೆ. ಕಾದಂಬರಿಯ ಕೇಂದ್ರ ಪಾತ್ರ ಶ್ರೀನಿವಾಸ ಶ್ರೋತ್ರಿಗಳು, ಬಹಳ ಸಾಂಪ್ರದಾಯವಾದಿಯಾಗಿದ್ದಾರೆ. ಅವರ ಮನಸ್ಸಿನಲ್ಲಿ 'ಸಂಸ್ಕಾರ' ಮತ್ತು ವೈಯಕ್ತಿಕ 'ವ್ಯಕ್ತಿತ್ವ'ದ ನಡುವೆ ನಿರಂತರ ಸಂಘರ್ಷ ನಡೆಯುತ್ತಿರುತ್ತದೆ. ವಂಶದ ಶುದ್ಧತೆಯ ಬಗ್ಗೆ ಅವರಿಗಿರುವ ಹಠವು ಅವರ ಸುಪ್ತ ಮನಸ್ಸಿನಲ್ಲಿರುವ (Subconscious) ಆಳವಾದ ಅಸುರಕ್ಷತೆಯನ್ನು ತೋರಿಸುವುದಲ್ಲದೆ, ಮಗ ಸತ್ತಾಗಲೂ ಅವರು ತೋರುವ ಸ್ಥಿತಪ್ರಜ್ಞತೆಯ ಹಿಂದೆ ಭಾವನೆಗಳ ತೀವ್ರ ದಮನ (Repression) ಎದ್ದು ಕಾಣುತ್ತದೆ. ಅಂತಿಮವಾಗಿ ಅವರಿಗೆ ತಮ್ಮ ಜನ್ಮರಹಸ್ಯದ ಸತ್ಯ ತಿಳಿದಾಗ, ಅಲ್ಲಿಯವರೆಗೆ ಅವರು ಪೂಜಿಸುತ್ತಿದ್ದ 'ವಂಶವೃಕ್ಷ' ಕೇವಲ ಭ್ರಮೆ ಎಂದು ಸಾಬೀತಾಗಿ ಅವರ 'ಅಹಂ' (Ego) ಸಂಪೂರ್ಣವಾಗಿ ಕುಸಿಯುತ್ತದೆ. ಈ ಮಾನಸಿಕ ಆಘಾತವು (Psychological Trauma) ನಂಬಿಕೆ ವ್ಯವಸ್ಥೆ ಕುಸಿದಾಗ ವ್ಯಕ್ತಿತ್ವವು ಹೇಗೆ ವೈರಾಗ್ಯದ ಕಡೆಗೆ ಬದಲಾಗುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಕಾತ್ಯಾಯಿನಿಯ ಪಾತ್ರವು ಮನೋವಿಜ್ಞಾನದ ದೃಷ್ಟಿಯಿಂದ ಅತ್ಯಂತ ಸಂಕೀರ್ಣವಾಗಿದ್ದು, ದಮನಿತ ಆಸೆಗಳು ಮತ್ತು ಸಾಮಾಜಿಕ ನೀತಿಗಳ ನಡುವಿನ ತೊಳಲಾಟವನ್ನು ಪ್ರತಿನಿಧಿಸುತ್ತದೆ. ವಿಧವೆಯಾದ ನಂತರ ಅವಳಲ್ಲಿ ಜಾಗೃತವಾಗುವ ನೈಸರ್ಗಿಕ ಪ್ರೇಮ ಮತ್ತು ರಾಜಾರಾವ್ ಮೇಲಿನ ಆಕರ್ಷಣೆಯನ್ನು ಫ್ರಾಯ್ಡ್‌ನ ಲೈಂಗಿಕ ಸಿದ್ಧಾಂತಗಳ ನೆರಳಿನಲ್ಲಿ ವಿಶ್ಲೇಷಿಸಬಹುದು. ಆದರೆ, ತನ್ನ ಮಗನನ್ನು ಬಿಟ್ಟು ಮರುಮದುವೆಯಾದ ನಂತರ ಅವಳನ್ನು ಕಾಡುವ ತೀವ್ರತರದ ಅಪರಾಧೀ ಪ್ರಜ್ಞೆಯು (Guilt Complex) ಅವಳನ್ನು ಕ್ರಮೇಣ ಖಿನ್ನತೆಗೆ (Depression) ತಳ್ಳಿ, ಅಂತಿಮವಾಗಿ ಅವಳ ವ್ಯಕ್ತಿತ್ವದ ವಿಘಟನೆಗೆ ಕಾರಣವಾಗುತ್ತದೆ. ಈ ಸಂಘರ್ಷವು ಮನುಷ್ಯನ ಸಹಜ ಪ್ರವೃತ್ತಿ ಮತ್ತು ಸಮಾಜ ವಿಧಿಸಿದ ನಿಯಮಗಳ ನಡುವಿನ ಹೋರಾಟಕ್ಕೆ ದರ್ಶಕವಾಗಿದೆ.

ಕಾದಂಬರಿಯು ರಾಜಾರಾವ್ ಮತ್ತು ಸದಾನಂದರ ಪಾತ್ರಗಳ ಮೂಲಕ ಅಸ್ತಿತ್ವದ ಬಿಕ್ಕಟ್ಟನ್ನು (Identity Crisis) ಕೂಡ ಚರ್ಚಿಸುತ್ತದೆ. ರಾಜಾರಾವ್ ತನ್ನ ವಿದ್ವತ್ತಿನ ಮೂಲಕ ತನ್ನನ್ನು ಕಂಡುಕೊಳ್ಳಲು ಪ್ರಯತ್ನಿಸಿದರೂ, ವಂಶದ ಸತ್ಯವು ಅವನ ಅಸ್ತಿತ್ವದ ಬಗ್ಗೆ ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತದೆ. ಜೊತೆಗೆ, ಮಗು ಚೀನಿ (ಪೃಥ್ವಿ) ಬೆಳೆಯುವ ಪರಿಸರ, ತಾಯಿಯ ಅನುಪಸ್ಥಿತಿ ಮತ್ತು ಶ್ರೋತ್ರಿಗಳ ಮನೆಯ ಶಿಸ್ತು ಅವನ ಮನಸ್ಸಿನಲ್ಲಿ ಸೃಷ್ಟಿಸುವ ಭಾವನಾತ್ಮಕ ಅಂತರವು ಮಕ್ಕಳ ಮನೋವಿಜ್ಞಾನದ (Child Psychology) ಅತ್ಯುತ್ತಮ ಚಿತ್ರಣವಾಗಿದೆ. ಹೀಗೆ 'ವಂಶವೃಕ್ಷ'ವು ಕೇವಲ ಒಂದು ಕುಟುಂಬದ ಕಥೆಯಾಗಿ ಉಳಿಯದೆ, ಪ್ರತಿಯೊಬ್ಬ ಮನುಷ್ಯನ ಒಳಗಿರುವ ಸರಿ–ತಪ್ಪುಗಳ ಸಂಘರ್ಷ, ರಕ್ತಸಂಬಂಧದ ವ್ಯಾಮೋಹ ಮತ್ತು ಅಂತಿಮವಾಗಿ 'ನಾನು ಯಾರು?' ಎಂಬ ತಾತ್ವಿಕ–ಮನೋವೈಜ್ಞಾನಿಕ ಪ್ರಶ್ನೆಯನ್ನು ಪ್ರಬಲವಾಗಿ ಬಿಂಬಿಸುತ್ತದೆ.

ತ್ರಿವೇಣಿ ಅವರ 'ಶರಪಂಜರ'

ಕಾದಂಬರಿಯು ಕನ್ನಡ ಸಾಹಿತ್ಯದ ಅತ್ಯಂತ ಮಹತ್ವದ ಮನೋವೈಜ್ಞಾನಿಕ ಕೃತಿಗಳಲ್ಲಿ ಒಂದಾಗಿದ್ದು, ಮಾನವ ಮನಸ್ಸಿನ ಸೂಕ್ಷ್ಮತೆ ಮತ್ತು ಸಾಮಾಜಿಕ ಕ್ರೌರ್ಯದ ನಡುವಿನ ಸಂಘರ್ಷವನ್ನು ಇಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ಈ ಕಾದಂಬರಿಯು ಮುಖ್ಯವಾಗಿ ಮಾನಸಿಕ ಅಸ್ವಸ್ಥತೆಯನ್ನು ಕೇವಲ ವೈದ್ಯಕೀಯ ದೃಷ್ಟಿಕೋನದಿಂದ ನೋಡದೆ, ಅದು ವ್ಯಕ್ತಿಯ ಅಸ್ತಿತ್ವ ಮತ್ತು ಸಂಬಂಧಗಳ ಮೇಲೆ ಬೀರುವ ಪ್ರಭಾವವನ್ನು ವಿಶ್ಲೇಷಿಸುತ್ತದೆ. ಮನೋವಿಜ್ಞಾನದ ವಿದ್ಯಾರ್ಥಿಯಾಗಿದ್ದ ತ್ರಿವೇಣಿಯವರು ಕಾವೇರಿಯ ಪಾತ್ರದ ಮೂಲಕ ಮನಸ್ಸಿನ ಅಂತರಂಗದ ತಲ್ಲಣಗಳನ್ನು ವೈಜ್ಞಾನಿಕವಾಗಿ ಮತ್ತು ಭಾವನಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ.

ಕಾದಂಬರಿಯ ಮೊದಲ ಭಾಗವು ನಾಯಕಿ ಕಾವೇರಿ ಅನುಭವಿಸುವ 'ಪ್ರಸವಪೂರ್ವ ಅಥವಾ ನಂತರದ ಮಾನಸಿಕ ಒತ್ತಡ'ದ (Postpartum Psychosis) ಸುತ್ತ ಸುತ್ತುತ್ತದೆ. ಹೆರಿಗೆಯ ನಂತರ ಅವಳಲ್ಲಿ ಕಾಣಿಸಿಕೊಳ್ಳುವ ಹಳೆಯ ಕಹಿ ನೆನಪುಗಳ ಮರುಕಳಿಸುವಿಕೆ (Flashback) ಮತ್ತು ಅಸಹಜ ವರ್ತನೆಗಳು ಅವಳ ಮಾನಸಿಕ ಸಮತೋಲನವನ್ನು ತಪ್ಪಿಸುತ್ತವೆ. ಇಲ್ಲಿ ಲೇಖಕರು ರೋಗಿಯ ಮನಸ್ಸಿನಲ್ಲಿ ಉಂಟಾಗುವ ಭ್ರಮೆಗಳನ್ನು (Hallucinations) ಚಿತ್ರಿಸುವ ಮೂಲಕ, ಬಾಲ್ಯದ ಘಟನೆಗಳು ಅಥವಾ ಸುಪ್ತ ಮನಸ್ಸಿನಲ್ಲಿ ಅಡಗಿರುವ ಭಯಗಳು ಹೇಗೆ ಮಾನಸಿಕ ಅಸ್ಥಿರತೆಗೆ ಕಾರಣವಾಗುತ್ತವೆ ಎಂಬುದನ್ನು ಮನೋವೈಜ್ಞಾನಿಕವಾಗಿ ವಿವರಿಸಿದ್ದಾರೆ.

ಕಾದಂಬರಿಯ ದ್ವಿತೀಯಾರ್ಧವು ಚಿಕಿತ್ಸೆಯ ನಂತರದ ಸಾಮಾಜಿಕ ಸವಾಲುಗಳನ್ನು ಚರ್ಚಿಸುತ್ತದೆ. ಕಾವೇರಿ ಆಸ್ಪತ್ರೆಯಿಂದ ಗುಣಮುಖಳಾಗಿ ಬಂದರೂ, ಸಮಾಜ ಅವಳನ್ನು ಸ್ವೀಕರಿಸಲು ಸಿದ್ಧವಿರುವುದಿಲ್ಲ. ಮನೋವಿಜ್ಞಾನದ ಪ್ರಕಾರ, ಮಾನಸಿಕ ರೋಗದಿಂದ ಚೇತರಿಸಿಕೊಳ್ಳುತ್ತಿರುವ ವ್ಯಕ್ತಿಗೆ ಪ್ರೀತಿ ಮತ್ತು ಭದ್ರತೆಯ ಅಗತ್ಯವಿರುತ್ತದೆ. ಆದರೆ ಇಲ್ಲಿ ಅವಳಿಗೆ ಸಿಗುವುದು ತಿರಸ್ಕಾರ ಮತ್ತು ಸಂಶಯದ ನೋಟಗಳು. ಈ 'ಸಾಮಾಜಿಕ ಕಳಂಕ' (Social Stigma) ಅವಳಲ್ಲಿ ಪರಕೀಯ ಪ್ರಜ್ಞೆಯನ್ನು (Alienation) ಮೂಡಿಸುತ್ತದೆ, ಇದು ಗುಣಮುಖರಾದ ವ್ಯಕ್ತಿಯನ್ನು ಮತ್ತೆ ಕಾಯಿಲೆಯ ಕಡೆಗೆ ತಳ್ಳುವ ಪ್ರಬಲ ಪ್ರೇರಕವಾಗಿ ಕೆಲಸ ಮಾಡುತ್ತದೆ.

'ಶರಪಂಜರ' ಎಂಬ ಶೀರ್ಷಿಕೆಯೇ ಒಂದು ದೊಡ್ಡ ಮನೋವೈಜ್ಞಾನಿಕ ರೂಪಕವಾಗಿದೆ. ಇದು ಕೇವಲ ಕಬ್ಬಿಣದ ಸಳುಗಳ ಪಂಜರವಲ್ಲ, ಬದಲಾಗಿ ಸಮಾಜವು ತನ್ನ ಪೂರ್ವಾಗ್ರಹಗಳಿಂದ ನಿರ್ಮಿಸಿದ 'ಬಾಣಗಳ ಪಂಜರ'. ಕಾವೇರಿ ದೈಹಿಕವಾಗಿ ಮುಕ್ತಳಾಗಿದ್ದರೂ, ಅವಳ ಪತಿ ಸತೀಶ ಮತ್ತು ಮನೆಯವರ ವರ್ತನೆ ಅವಳ ಸುತ್ತ ಒಂದು ಅದೃಶ್ಯ ಗೋಡೆಯನ್ನು ಸೃಷ್ಟಿಸುತ್ತದೆ. ತಾನು ಇತರರಂತೆ ಸಾಮಾನ್ಯಳಲ್ಲ ಎಂಬ ಕೀಳರಿಮೆ (Inferiority Complex) ಅವಳ ವ್ಯಕ್ತಿತ್ವವನ್ನು ಕುಗ್ಗಿಸುತ್ತದೆ. ಈ ಮಾನಸಿಕ ಬಂಧನವು ಒಬ್ಬ ವ್ಯಕ್ತಿಯ ಆತ್ಮವಿಶ್ವಾಸವನ್ನು ಹೇಗೆ ಸಂಪೂರ್ಣವಾಗಿ ನಾಶಪಡಿಸುತ್ತದೆ ಎಂಬುದನ್ನು ಇಲ್ಲಿ ಕಾಣಬಹುದು.

ಈ ಕಾದಂಬರಿಯು ಸಂಬಂಧಗಳ ವಿಘಟನೆಯನ್ನು ಮನೋವೈಜ್ಞಾನಿಕ ನೆಲೆಯಲ್ಲಿ ವಿಶ್ಲೇಷಿಸುತ್ತದೆ. ಸುಶಿಕ್ಷಿತನಾದ ಸತೀಶನೂ ಕೂಡ ಕಾವೇರಿಯನ್ನು ಒಬ್ಬ ರೋಗಿಯಂತೆ ನೋಡುತ್ತಾನೆಯೇ ಹೊರತು ಸಹಜ ಮನುಷ್ಯಳಂತೆ ಅಲ್ಲ. ಈ ಭಾವನಾತ್ಮಕ ಅಂತರವು ಕಾವೇರಿಯನ್ನು ತೀವ್ರತರದ ಅಭದ್ರತೆಗೆ (Insecurity) ತಳ್ಳುತ್ತದೆ. ಸಮಾಜದ ನಿಷ್ಠುರತೆ ಮತ್ತು ಆತ್ಮೀಯರ ನಿರ್ಲಕ್ಷ್ಯವು ಒಬ್ಬ ವ್ಯಕ್ತಿಯ ಮಾನಸಿಕ ಆರೋಗ್ಯದ ಮೇಲೆ ಬೀರುವ ಭೀಕರ ಪರಿಣಾಮವನ್ನು ಕಾದಂಬರಿಯು ಎತ್ತಿ ತೋರಿಸುತ್ತದೆ. ಇದು ಕೇವಲ ಕಾವೇರಿಯ ಕಥೆಯಲ್ಲ, ಬದಲಾಗಿ ಮಾನಸಿಕ ಆರೋಗ್ಯದ ಬಗ್ಗೆ ನಮ್ಮ ಸಮಾಜಕ್ಕಿರುವ ಅಜ್ಞಾನದ ಕನ್ನಡಿಯಾಗಿದೆ

ಮನೋವೈಜ್ಞಾನಿಕ ವಿಮರ್ಶೆಯ ಮಹತ್ವ

ಮನೋವೈಜ್ಞಾನಿಕ ವಿಮರ್ಶೆ ಸಾಹಿತ್ಯಕ ಕೃತಿಗಳ ಆಳವಾದ ಅರ್ಥವನ್ನು ಅನಾವರಣಗೊಳಿಸುವ ಅತ್ಯಂತ ಪರಿಣಾಮಕಾರಿ ವಿಮರ್ಶಾ ವಿಧಾನವಾಗಿದೆ. ಸಾಹಿತ್ಯದ ಮೇಲ್ಮೈ ಕಥಾನಕದ ಹಿಂದೆ ಕಾರ್ಯನಿರ್ವಹಿಸುವ ಮಾನವ ಮನಸ್ಸಿನ ಸೂಕ್ಷ್ಮ ಚಲನೆಗಳನ್ನು ಗ್ರಹಿಸಲು ಇದು ನೆರವಾಗುತ್ತದೆ. ಪಾತ್ರಗಳ ಬಾಹ್ಯ ಕ್ರಿಯೆಗಳಿಗಿಂತಲೂ ಅವರ ವರ್ತನೆಗೆ ಕಾರಣವಾಗುವ ಅಂತರಂಗ ಪ್ರೇರಣೆಗಳು, ಭಾವನಾತ್ಮಕ ಸಂಘರ್ಷಗಳು, ದಮನಗೊಂಡ ಆಸೆಗಳು ಮತ್ತು ಅಚೇತನ ಮನೋಭಾವಗಳನ್ನು ಮನೋವೈಜ್ಞಾನಿಕ ವಿಮರ್ಶೆ ಸ್ಪಷ್ಟಪಡಿಸುತ್ತದೆ. ಇದರಿಂದ ಪಾತ್ರಗಳು ಕೇವಲ ಕಲ್ಪಿತ ವ್ಯಕ್ತಿಗಳಾಗಿರದೆ, ಜೀವಂತ ಮಾನವ ಅನುಭವಗಳ ಪ್ರತಿನಿಧಿಗಳಾಗುತ್ತವೆ.

ಈ ವಿಮರ್ಶಾ ವಿಧಾನವು ಲೇಖಕರ ಮನೋಭಾವ ಮತ್ತು ಸೃಜನಾತ್ಮಕ ಪ್ರಕ್ರಿಯೆಯನ್ನೂ ವಿಶ್ಲೇಷಿಸಲು ಸಹಕಾರಿಯಾಗುತ್ತದೆ. ಲೇಖಕರ ವೈಯಕ್ತಿಕ ಅನುಭವಗಳು, ಮಾನಸಿಕ ಸಂಘರ್ಷಗಳು ಮತ್ತು ಸಾಮಾಜಿಕ ಪರಿಸರವು ಅವರ ಸಾಹಿತ್ಯಸೃಷ್ಟಿಯ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಮನೋವೈಜ್ಞಾನಿಕ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳಬಹುದು. ಲೇಖಕರ ಸುಪ್ತಚೇತನವು ಮನಸ್ಸಿನಲ್ಲಿ ನೆಲೆಸಿರುವ ಭಾವನೆಗಳು, ಕನಸುಗಳು ಮತ್ತು ಸಂಕೇತಗಳು ಸಾಹಿತ್ಯದಲ್ಲಿ ಹೇಗೆ ರೂಪುಗೊಳ್ಳುತ್ತವೆ ಎಂಬುದನ್ನು ಈ ವಿಮರ್ಶೆ ಅನಾವರಣಗೊಳಿಸುತ್ತದೆ. ಈ ಮೂಲಕ ಸಾಹಿತ್ಯವು ಕೇವಲ ಸಾಮಾಜಿಕ ದಾಖಲೆ ಮಾತ್ರವಲ್ಲ, ಲೇಖಕರ ಮಾನಸಿಕ ಲೋಕದ ಪ್ರತಿಫಲನವಾಗಿಯೂ ಕಾಣುತ್ತದೆ.

ಮನೋವೈಜ್ಞಾನಿಕ ವಿಮರ್ಶೆಯ ಮತ್ತೊಂದು ಮಹತ್ವದ ಆಯಾಮವೆಂದರೆ ಓದುಗರ ಮೇಲಿನ ಸಾಹಿತ್ಯದ ಪರಿಣಾಮವನ್ನು ಅಧ್ಯಯನ ಮಾಡುವುದು. ಓದುಗನು ಸಾಹಿತ್ಯಕೃತಿಯನ್ನು ಓದುವಾಗ ತನ್ನದೇ ಅನುಭವಗಳು, ಭಾವನೆಗಳು ಮತ್ತು ಮನೋಭಾವಗಳೊಂದಿಗೆ ಪಾತ್ರಗಳನ್ನು ಗುರುತಿಸಿಕೊಳ್ಳುತ್ತಾನೆ. ಈ ಗುರುತಿಸಿಕೊಳ್ಳುವಿಕೆ ಓದುಗರ ಮನಸ್ಸಿನಲ್ಲಿ ಕಥಾರ್ಸಿಸ್ (ಭಾವವಿರೇಚನೆ) ಅನ್ನು ಉಂಟುಮಾಡುತ್ತದೆ. ಅಧ್ಯಯನಗಳು ಸಾಹಿತ್ಯವು ಓದುಗರ ಮನಸ್ಸಿನ ಮೇಲೆ ಔಷಧೀಯ (therapeutic) ಪರಿಣಾಮವನ್ನು ಬೀರುತ್ತದೆ ಎಂದು ಸೂಚಿಸುತ್ತವೆ. ವಿಶೇಷವಾಗಿ ದುಃಖ, ಆತಂಕ ಮತ್ತು ಮಾನಸಿಕ ಒತ್ತಡಗಳನ್ನು ಅನುಭವಿಸುತ್ತಿರುವ ಓದುಗರಿಗೆ ಸಾಹಿತ್ಯ ಒಂದು ಮಾನಸಿಕ ಶಮನವನ್ನು ನೀಡುತ್ತದೆ.

ಜೊತೆಗೆ ಮನೋವೈಜ್ಞಾನಿಕ ವಿಮರ್ಶೆಯು ಸಾಹಿತ್ಯವನ್ನು ಮಾನಸಿಕ ಆರೋಗ್ಯದ ದೃಷ್ಟಿಯಿಂದಲೂ ಮೌಲ್ಯಮಾಪನ ಮಾಡಲು ಅವಕಾಶ ನೀಡುತ್ತದೆ. ಮಾನಸಿಕ ರೋಗಗಳು, ಅಸಮತೋಲನಗಳು ಮತ್ತು ವ್ಯಕ್ತಿತ್ವದ ಸಂಕೀರ್ಣತೆಗಳನ್ನು ಸಾಹಿತ್ಯದಲ್ಲಿ ಹೇಗೆ ಚಿತ್ರಿಸಲಾಗಿದೆ ಎಂಬುದನ್ನು ವಿಶ್ಲೇಷಿಸುವುದರಿಂದ ಸಮಾಜದ ಮನೋಭಾವಗಳನ್ನು ಅರ್ಥಮಾಡಿಕೊಳ್ಳಬಹುದು. ಈ ವಿಮರ್ಶೆಯ ಮೂಲಕ ಸಾಹಿತ್ಯವು ಮಾನಸಿಕ ಆರೋಗ್ಯದ ಕುರಿತು ಅರಿವು ಮೂಡಿಸುವ ಸಾಧನವಾಗುತ್ತದೆ. ಆದ್ದರಿಂದ ಮನೋವೈಜ್ಞಾನಿಕ ವಿಮರ್ಶೆ ಸಾಹಿತ್ಯ ಅಧ್ಯಯನದಲ್ಲಿ ಕೇವಲ ಒಂದು ವಿಧಾನವಾಗಿರದೆ, ಮಾನವ ಮನಸ್ಸು ಮತ್ತು ಸಮಾಜವನ್ನು ಆಳವಾಗಿ ಗ್ರಹಿಸುವ ಅಗತ್ಯ ಸಾಧನವಾಗುತ್ತದೆ.

ಉಪಸಂಹಾರ (Conclusion)

ಮಾನವ ಮನಸ್ಸಿನ ಸಂಕೀರ್ಣ ಲೋಕವೇ ಕಲೆ ಮತ್ತು ಸಾಹಿತ್ಯದ ಸೃಜನಾತ್ಮಕ ಅಭಿವ್ಯಕ್ತಿಗೆ ಮೂಲಾಧಾರವಾಗಿದೆ ಎಂಬುದನ್ನು ಈ ಅಧ್ಯಯನವು ದೃಢಪಡಿಸುತ್ತದೆ. ಮನೋವಿಜ್ಞಾನ ಮತ್ತು ಕಲೆ, ಸಾಹಿತ್ಯದ ನಡುವಿನ ಸಂಬಂಧವು ಕೇವಲ ತಾತ್ವಿಕ ನೆಲೆಯದಾಗಿರದೆ, ಪರಸ್ಪರ ಪೂರಕವಾಗಿರುವ ಒಂದು ಅನಿವಾರ್ಯ ಸಂಪರ್ಕವಾಗಿದೆ. ಸಾಹಿತ್ಯವು ಮಾನವನ ಆಂತರಿಕ ಪ್ರೇರಣೆಗಳು, ಅಚೇತನ ಮನೋಭಾವಗಳು ಮತ್ತು ಭಾವನಾತ್ಮಕ ಸಂಘರ್ಷಗಳನ್ನು ಸೌಂದರ್ಯಾತ್ಮಕ ರೂಪದಲ್ಲಿ ಅನಾವರಣಗೊಳಿಸಿದರೆ, ಮನೋವಿಜ್ಞಾನವು ಅವುಗಳಿಗೆ ವೈಜ್ಞಾನಿಕ ಹಾಗೂ ವಿಶ್ಲೇಷಣಾತ್ಮಕ ಚೌಕಟ್ಟನ್ನು ಒದಗಿಸುತ್ತದೆ.

ಕನ್ನಡ ಸಾಹಿತ್ಯದ ಸನ್ನಿವೇಶದಲ್ಲಿ, ಆಧುನಿಕ ಕಾದಂಬರಿಗಳು ಮಾನವ ಮನಸ್ಸಿನ ಆಳವನ್ನು ಗ್ರಹಿಸುವಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿವೆ. ಯು.ಆರ್. ಅನಂತಮೂರ್ತಿಯವರ 'ಸಂಸ್ಕಾರ' ಕೃತಿಯು ಫ್ರಾಯ್ಡ್‌ನ Id–Ego–Superego ತತ್ತ್ವಗಳ ಆಧಾರದಮೇಲೆ ಧರ್ಮಮತ್ತು ಇಚ್ಛೆಯ ನಡುವಿನ ತೀವ್ರ ದ್ವಂದ್ವವನ್ನು ಚಿತ್ರಿಸಿದರೆ, ಶಿವರಾಮ ಕಾರಂತರ 'ಮೂಕಜ್ಜಿಯ ಕನಸುಗಳು' ಕನಸುಗಳನ್ನು ಅಚೇತನ ಮನಸ್ಸು ಮತ್ತು ಸಾಮಾಜಿಕ ಬದಲಾವಣೆಗಳ ಭಯದ ಪ್ರತೀಕಗಳಾಗಿ ಬಳಸುತ್ತದೆ. ಅದೇ ರೀತಿ, ಎಸ್.ಎಲ್. ಭೈರಪ್ಪನವರ 'ವಂಶವೃಕ್ಷ'ದಲ್ಲಿ ಕಂಡುಬರುವ ಅಹಂಕಾರದ ಕುಸಿತ ಮತ್ತು ಅಪರಾಧೀ ಪ್ರಜ್ಞೆಯು, ಹಾಗೂ ತ್ರಿವೇಣಿಯವರ 'ಶರಪಂಜರ'ದಲ್ಲಿ ಚಿತ್ರಿಸಲಾದ ಮಾನಸಿಕ ಅಸ್ವಸ್ಥತೆ ಮತ್ತು ಸಾಮಾಜಿಕ ಕಳಂಕದ ನೋವು ಮಾನವ ಮನಸ್ಸಿನ ಸೂಕ್ಷ್ಮ ಸಂಕೀರ್ಣತೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಬಿಂಬಿಸುತ್ತವೆ.

ಮುಂದುವರೆದು, ಮನೋವೈಜ್ಞಾನಿಕ ವಿಮರ್ಶೆಯು ಸಾಹಿತ್ಯ ಅಧ್ಯಯನದಲ್ಲಿ ಕೇವಲ ಒಂದು ಐಚ್ಛಿಕ ವಿಧಾನವಾಗಿರದೆ, ಒಂದು ಅಗತ್ಯ ಸಾಧನವಾಗಿದೆ. ಇದು ಪಾತ್ರಗಳ ನಡವಳಿಕೆ, ಲೇಖಕರ ಸೃಜನಾತ್ಮಕ ಪ್ರಕ್ರಿಯೆ ಮತ್ತು ಓದುಗರ ಮೇಲಿನ ಸಾಹಿತ್ಯದ ಔಷಧೀಯ (therapeutic) ಪರಿಣಾಮವನ್ನು ಆಳವಾಗಿ ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ಈ ವಿಮರ್ಶಾ ದೃಷ್ಟಿಕೋನವು ಸಾಹಿತ್ಯವನ್ನು ಕೇವಲ ಕಥಾನಕ ಅಥವಾ ಸಾಮಾಜಿಕ ದಾಖಲೆಯಾಗಿ ನೋಡದೆ, ಮಾನವ ಮನಸ್ಸು ಮತ್ತು ಸಮಾಜದ ಆಂತರಿಕ ಚಲನೆಗಳನ್ನು ವಿಶ್ಲೇಷಿಸುವ ಒಂದು ಗಂಭೀರ ಅಧ್ಯಯನ ಸಾಧನವಾಗಿ ಪರಿವರ್ತಿಸುತ್ತದೆ. ಹೀಗಾಗಿ, ಮನೋವಿಜ್ಞಾನ ಮತ್ತು ಕನ್ನಡ ಸಾಹಿತ್ಯದ ಅಂತರ್ ಸಂಬಂಧದ ಅಧ್ಯಯನವು ಮಾನವ ಸ್ವಭಾವದ ಸತ್ಯವನ್ನು ಹೆಚ್ಚು ಸಮಗ್ರವಾಗಿ ಗ್ರಹಿಸಲು ದಾರಿದೀಪವಾಗಿದೆ.

ಪರಾಮರ್ಶನ ಗ್ರಂಥಗಳು

1. ಅನಂತ ಮೂರ್ತಿ ಯು ಆರ್, 2013. ಸಂಸ್ಕಾರ, ಅಕ್ಷರ ಪ್ರಕಾಶನ.
2. ಭೈರಪ್ಪ ಎಸ್ ಎಲ್.2013. ಸಾಹಿತ್ಯ ಭಂಡಾರ ಪ್ರಕಾಶನ.
3. ತ್ರಿವೇಣಿ. 2015. ಶರಪಂಜರ, ಭಾರತೀ ಪ್ರಕಾಶನ.
4. ಡಾ. ಶಿವರಾಮ ಕಾರಂತ. 2025, ಮೂಕಜ್ಜಿಯ ಕನಸುಗಳು, ಸಪ್ನ ಬುಕ್ ಹೌಸ್

Ageing Under Depression: Silenced and Hidden Identity in Sylvia Plath's Works

Sanjana Shashidhar

Mount Carmel College, Autonomous, Bengaluru

Abstract

This paper examines the of impact depression on women's psychological ageing with the help of Sylvia Plath's confessional writing, with specific consideration to the silencing of women, hidden identities they possess and not let to have an emotional expression. Through close readings and employing narrative gerontology, feminist madwoman theory and confessional poetics. I look at Plath's prose structure, her writing under the pseudonym Victoria Lucas, and themes of depression. Societal roles in the 1950s, limited women causing their identities to become more concealed. Emotional truth surfaces in confessional literature. This work shows that depression accelerates psychological ageing, while confessional writing uncovers hidden selves, and offers insight into how literature can aid in healing women's developmental wounds across their lives.

Keywords: Sylvia Plath; literarygerontology; depression; confessional poetry; women's aging; hidden identity.

Introduction

In 1950s America, women were often confined by societal expectations constrained their identities and disconnected them from their authentic selves. Literary gerontology provides a lens to view these experiences, suggesting how literature can complicate the subject of ageing and the structural forces shaping it. Sylvia Plath (1932–1963) battled depression that distorted her sense of self. I contend that Plath's work serves as a text for understanding the relationship between societal pressures, mental health, and identity ageing for women. Plath's works reveal these silenced and hidden selves, offering insights into emotional truth and healing from an interdisciplinary view.

The post-World War II era assigned women to roles as ‘homemakers. Cultural norms contributed to a double standard women faced with. Her 1953 suicide attempt and hospitalization fueled The Bell Jar, published under a pseudonym to evade the scandal of mental illness. Plath’s poetry erupts with rage, with speakers who confront figures. Her writing analyses her representations of ageing, decay, and disease as resistance against societal and medical constraints.

I draw on three frameworks to explain the relationship between literature, ageing, and identity.

First, William Randall's narrative gerontology recasts ageing as storying the lifelong crafting of life narratives. Depression disrupts this narrativization, imposing stories that prematurely stop, concealing potential futures and trapping individuals into fragmented selves, explored in Plath's characters. Plath's writing served as a meaning-making tool to process emotions, resisting this narrative stopping.

Second, Sandra Gilbert and Susan Gubar's The Madwoman in the Attic unveils the feminist madwoman archetype- a woman suppressed by literary tradition and societal norms. In Plath's works, depressed women become these literary madwomen.

Finally, confessional poetics demands autobiographical nakedness, and transforms pain into indictment, piercing silence to reclaim agency functioning as a literary counter-narrative against the premature psychological ageing imposed by society and mental health struggles.

Through close readings of primary texts such as Daddy and Lady Lazarus, this study traces depression's role as an accelerator of concealed psychological ageing and as a catalyst for confessional literary emergence. Secondary sources uplift this approach. Esther Greenwood's in The Bell Jarsymbolizes stalled growth and narrative stopping, representing indecision fueled by depression. This paper shows that Plath's literature reveals healing: by voicing the silence, her confessional writing mends wounds, allowing women's narratives to ripen across life. This study bridges literary gerontology and feminism, offering implications for understanding mental health, narrative identity, and the anxiety of ageing in women.

I unpack Plath's confessional mechanisms, the ageing warp through depression, the societal silencing, and confession's surge as a literary act. Plath's words whisper hope: even under depression's bell jar, hidden identities can bloom, and through literature, their stories can find meaning.

Methodology

This paper employs a qualitative research methodology, interpreting Sylvia Plath's selected works through an interdisciplinary lens. The analysis will be guided by frameworks of literary

gerontology, narrative gerontology, the Madwoman in the Attic archetype, and confessional poetics.

Corpus Selection: The texts for analysis include Sylvia Plath's novel The Bell Jar, and key poems. These works explore themes related to identity, mental health, societal pressures, and the female self, which are crucial for a literary gerontology study.

Close Reading: Each selected work is closely read to identify motifs, metaphors, narrative structures, and character developments that resonate with the arguments. Attention is paid to language, imagery, and symbolism indicative of psychological ageing, narrative stopping, silencing, and resistance, viewed through the frameworks.

Interdisciplinary Synthesis: The findings from the literary analysis aresynthesized with scholarship to build an argument about literature, gender, mental health, and the ageing self. Secondary sources are used to study Plath's work within discussions of these fields.

Thematic Frameworks

This study integrates literary criticism with gerontological concepts to provide a framework for analyzing Sylvia Plath's works.

Literary Gerontology and Narrative Gerontology

Literary gerontology offers an approach to understanding ageing through literary texts. This field examines how literature portrays the processes of ageing, including identity formation, life transitions, and the negotiation of societal roles. William Randall's narrative gerontology retells ageing as a process of storying, the construction and revision of life narratives. In this study, depression disrupts this narrative, imposing narrative stopping, where life stories halt, futures are concealed, and individuals become trapped. Plath's works analysed reveal how her characters experience this stopping, providing examples of psychological ageing.

The Madwoman in the Attic Archetype

Sandra Gilbert and Susan Gubar's The Madwoman in the Attic, reveals a literary archetype:

The madwoman- a suppressed representation often confined and silenced by patriarchal traditions and societal norms. This archetype represents the anger, frustration, and desires of women writers and characters constrained by societal expectations. In Plath's works, depressed women embody aspects of this literary madwoman, their mental health struggles serving as a metaphor for their intellectual and emotional confinement. Their madness becomes a site of

resistance, where hidden identities find their voice. This framework helps to understand forces that pathologies female dissent and how Plath's writing subverts these narratives.

Confessional Poetics

Confessional poetics, demands an autobiographical nakedness. This writing transforms personal experiences into public discourse. Confessional poetics is examined as a mechanism through which Plath's characters challenge the silencing of women and reclaim agency. By converting private pain into stereotypes Plath's confessional style functions as a literary counter-narrative against the premature psychological ageing and narrative stopping imposed by societal and mental health struggles, allowing for the hidden selves and wounds that would show which otherwise remain unaddressed.

Analysis

The analysis section applies the methodology and frameworks to the texts, showing how Plath's works illuminate the concepts of psychological ageing narrative stopping, and the silenced self.

The Bell Jar and the Fig Tree Metaphor:Narrative Stopping in Young Adulthood

This section analyses Esther Greenwood's experiences The Bell Jar, focusing on the fig tree passage as a representation of narrative stopping. It shows how Esther's indecision, paralysis, and depression, worsened by societal pressures, represent a stunting of life's paths and the inability to construct a coherent future narrative. The analysis explores how the novel portrays the double standard of ageing for women, where the conflict between career aspirations and domestic roles results in distress and lost time or unlived futures.

Daddy, Lady Lazarus, and Ariel:Confessional Resistance and the Reclamation of Identity

This section explores poems that showcase Plath's use of confessional poetics to articulate rage, trauma and resilience, resisting narrative stopping and the silencing of women.

In Daddy, the analysis examines the fury as an act of severing oppressive historical, familial, and societal narratives, enabling a re-storying of the self, breaking from predetermined roles.

Lady Lazarus is analyzed for themes of repeated death and rebirth, interpreting the speaker's defiance of psychological aging, societal attempts to control her narrative and an assertion of agency against those who would silence or define her.

Selections from Ariel illustrate how Plath's poetry functions as a space for psychological and narrative liberation, where the female self breaks free from confinement.

The Madwoman in the Attic and the Hidden Self: Challenging Societal Norms

This section connects Plath's characters to Gilbert and Gubar's Madwoman in the Attic archetype. It explores how the madness depicted in Plath's work a response to constraints and the domesticity of the era serves as an expression of a hidden, female identity. Characters are isolated, misunderstood or pathologized by society, yet reveal a resistance to societal definitions of female development and ageing, highlighting the emergence of their true selves.

Limitations

This study, while interdisciplinary, has limitations

Scope and Selectivity: The analysis is limited to a selection of Sylvia Plath's works, chosen for relevance to the study's themes. A broader study could offer insights into her connections with themes of ageing and identity.

Subjectivity of Interpretation: Literary analysis involves interpretation. While grounded in frameworks, the readings here reflect one view of Plath's representations of psychological ageing and identity.

Focus on a Single Author: The study focuses on Sylvia Plath. While her work is illustrative, the findings may not be generalized to the experiences of all women experiencing depression or psychological ageing, particularly across different contexts.

Language and Cultural Context: The study is situated within Western literary and cultural traditions. The applicability of its findings to non-Western contexts may be limited.

Interdisciplinary Challenges: Bridging literary studies and gerontology involves integrating methodologies and terminologies. This approach can be challenging in achieving conceptual congruence between fields.

Conclusion

This paper explored Sylvia Plath's literary work through literary gerontology, arguing that her works illuminate the concepts of psychological aging and narrative stopping in women, within the societal context of 1950s America. Using frameworks such as narrative gerontology, the Madwoman in the Attic archetype and confessional poetics, Plath's characters grapple with identities stalled by depression and expectations.

Plath's The Bell Jar depicts early stages of narrative stopping, where the protagonist's life paths are withered by mental health struggles and pressures. Her confessional poems, reveal

resistance, transforming suffering into a reclamation of agency and selfhood. Through these works,

This study shows that Plath's literary legacy offers insights into the anxiety of aging and the relationship between gender, mental health, and the life course. Her work shows the potential of confessional expression, allowing identities to emerge. By bridging literary and gerontological scholarship, this paper contributes to an understanding of how literature can provide perspectives on the human experience of ageing, foster empathy and challenging narratives about women's lives.

References

- Bonasera, C. (2021). Bodies and self-disclosure in American female confessional poetry. Journal of Gender Studies, 30(4), 512–524.
- McAuliffe, A. P. (2018). To be everything: Sylvia Plath and “the problem that has no name”. Feminist Studies, 44(2), 301–320.
- Panelatti, A. F., Ponterotto, J. G., & Fouché, P. J. P. (2021). Meaning-making narratives within a puzzle of parts: A psychobiographical sketch of Sylvia Plath. Journal of Constructivist Psychology, 34(3), 243–261. Plath, S. (1965). Ariel. Faber and Faber.
- Randall, W. L., & Khurshid, K. N. (2018). Narrative development later in life. In J. Hendricks & D. Dannefer (Eds.), The Palgrave handbook of social gerontology (pp. 551–567). Palgrave Macmillan.
- Stoncikaite, I. (2021). Age, gender and feminism: Addressing the gap from literary and cultural perspectives. Routledge.
- Zeilig, H. (2012). The critical use of narrative and literature in gerontology. International Journal of Ageing and Later Life, 7(2), 7–37.

The Gardener Who Forgot Her Own Name: Reviewing Identity Erosion in Women's Lifelong Caregiving Roles

Chaitanya D Kambanor & Suhani N Gandhi
